ಕೊರವರ ಸಮುದಾಯದ ಮಹಿಳೆ

(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕಿ
ರಾಧಮ್ಮ

ಮಾರ್ಗದರ್ಶಕರು
ಡಾ. ಪಿ.ಚಿ. ರಮೇಶ್
ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ೫೮೩ ೨೭೬
೨೦೦೯

ಕೊರವರ ಸಮುದಾಯದ ಮಹಿಳೆ

(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕಿ

ರಾಧಮ್ಮ

ಮಾರ್ಗದರ್ಶಕರು

ಡಾ. ಸ.ಚಿ. ರಮೇಶ್

ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

ದೃಢೀಕರಣ ಪತ್ರ

ಕೊರವರ ಸಮುದಾಯದ ಮಹಿಳೆ (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕುಮಾರಿ. ರಾಧಮ್ಮ ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 25-4-09
ಸ್ಥಳ : ವಿದ್ಯಾರಣ್ಯ

(ಡಾ. ಸ.ಚಿ. ರಮೇಶ್)
ಮಾರ್ಗದರ್ಶಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪ್ರಮಾಣ ಪತ್ರ

ಕೊರವರ ಸಮುದಾಯದ ಮಹಿಳೆ (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ. ಸ.ಚಿ. ರಮೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Radhamma

ದಿನಾಂಕ : 25.04.09
ಸ್ಥಳ : ವಿದ್ಯಾರಣ್ಯ

(ರಾಧಮ್ಮ)
ಸಂಶೋಧಕಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಕೃತಜ್ಞತೆಗಳು

ಕೊರವರ ಸಮುದಾಯದ ಮಹಿಳೆ (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಸಂಶೋಧನಾ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಲು ನನಗೆ ತುಂಬಾ ಹರ್ಷವೆನಿಸುತ್ತದೆ. ಈ ಸಂದರ್ಭದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನನ್ನ ಅಧ್ಯಯನಕ್ಕೆ ನೆರವಾದವರಿಗೆ ಕೃತಜ್ಞತೆಗಳನ್ನು ಸಲ್ಲಿಸುವುದು ನನ್ನ ಅಧ್ಯ ಕರ್ತವ್ಯ ಹಾಗೂ ಸಂತೋಷದ ಸಂಗತಿ.

ಪ್ರಾರಂಭದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಮಾಡಿ ಕೊಟ್ಟಂತಹ ಹಿಂದಿನ ಕುಲಪತಿಗಳಾದ ಪ್ರೊ. ಬಿ.ಎ. ವಿವೇಕ ರೈ ಅವರಿಗೆ ಈಗಿನ ಕುಲಪತಿಗಳಾದಂತಹ ಪ್ರೊ. ಎ. ಮುರಿಗೆಪ್ಪ ಅವರಿಗೆ ಹಾಗೂ ಕುಲಸಚಿವರಾದ ಡಾ. ಹಿ.ಚಿ. ಬೋರಲಿಂಗಯ್ಯ ಅವರಿಗೆ ಹಾಗೂ ಈಗಿನ ಕುಲಸಚಿವರಾದ ಪ್ರೊ. ಎಸ್.ಎಸ್. ಪೂಜಾರ ಅವರಿಗೆ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಪ್ರೊ. ಡಿ. ಪಾಂಡುರಂಗಬಾಬು ಅವರಿಗೆ ಮೊದಲು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟು, ನನ್ನನ್ನು ಪ್ರೋತ್ಸಾಹಿಸಿ ಅಧ್ಯಯನದ ಎಲ್ಲ ಸಂದರ್ಭಗಳಲ್ಲೂ ಚರ್ಚಿಸಿ, ಓದಿ ತಿದ್ದಿ ತೀಡಿ ಮಾರ್ಗದರ್ಶನ ಮಾಡಿದ ನೆಚ್ಚಿನ ಗುರುಗಳಾದ ಡಾ. ಸ.ಚಿ. ರಮೇಶ್ ಅವರಿಗೂ, ಅಧ್ಯಯನಕ್ಕೆ ಸ್ಫೂರ್ತಿಯನ್ನು ನೀಡಿ ಆತ್ಮವಿಶ್ವಾಸವನ್ನು ತುಂಬಿದ ನಮ್ಮ ಗುರುಗಳಾದ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೆ ಕೃತಜ್ಞತೆಗಳನ್ನು ಹೇಳುತ್ತೇನೆ.

ಆರಂಭದಿಂದಲೂ ಅಧ್ಯಯನದ ಇತಿಮಿತಿಗಳನ್ನು ಚರ್ಚಿಸುತ್ತಾ ಅಧ್ಯಯನದ ವಿಷಯದ ಬಗೆಗೆ ಪ್ರತಿಯೊಂದು ಹಂತದಲ್ಲಿಯೂ ಸಲಹೆ ಸೂಚನೆಗಳನ್ನು ನೀಡಿ ಅಧ್ಯಯನಕ್ಕೆ ಮತ್ತಷ್ಟು ಗಟ್ಟಿತನವನ್ನು ತಂದುಕೊಡುವಲ್ಲಿ ಅನುಕೂಲ ಮಾಡಿದ ಗುರುಗಳಾದ ಡಾ. ಎಚ್.ಕೆ. ನಾಗೇಶ್, ಡಾ. ಮೊಗಳ್ಳಿ ಗಣೇಶ್, ದಿವಂಗತರಾದ ಶ್ರೀ ಹರಿಶ್ಚಂದ್ರ ದಿಗ್ಗಿಂಕರ್, ಶ್ರೀ ಸಿ.ಟಿ. ಗುರುಪ್ರಸಾದ ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಎಲ್ಲ ಸಂದರ್ಭಗಳಲ್ಲಿಯೂ ಅತ್ಯಂತ ಕಾಳಜಿಯಿಂದ ಅಧ್ಯಯನ ಬಗೆಗೆ ಸಲಹೆ ಸೂಚನೆಗಳನ್ನು ನೀಡಿದ ಡಾ. ವಿರೇಶ ಬಡಿಗೇರ್, ಡಾ. ಎ. ವೆಂಕಟೇಶ, ಡಾ. ಎಸ್.ಎಸ್. ಅಂಗಡಿ, ಶ್ರೀ ಎಚ್.ಬಿ. ರವೀಂದ್ರ, ಶ್ರೀ ಗ್ಯಾನಪ್ಪ ಬಡಿಗೇರ ಹಾಗೂ ನನ್ನ ಬರವಣಿಗೆಯ ಕರಡು ತಿದ್ದಿದ ಶ್ರೀ ಸುಜ್ಞಾನಮೂರ್ತಿ ಮತ್ತು ಕನ್ನಡಕ್ಕೆ ಅನುವಾದವನ್ನು ಮಾಡಿಕೊಟ್ಟ ಶ್ರೀ ಸರ್ವೋತ್ತಮ ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬಿಡುವಿಲ್ಲದ ಕೆಲಸಕಾರ್ಯಗಳ ಮಧ್ಯೆಯೂ ನನಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟು ಸಲಹೆ ಸೂಚನೆಗಳನ್ನಿತ್ತ ಮಾಹಿತಿದಾರರಾದ ಸಿರುಗುಪ್ಪ ವೆಂಕಟೇಶ್, ಚಿಕ್ಕಪ್ಪನಾದ ಗಂಗಾಧರ, ಕೊಟ್ಟೂರು ಪರಸಪ್ಪ, ತಮ್ಮನಾದ ರಮೇಶ್, ಶ್ರೀನಿವಾಸ ಮತ್ತು ಮಹಿಳಾ ಸಂಘದವರಿಗೂ ಹಾಗೂ ಬಳ್ಳಾರಿಯ ರೇಣುಕಾ, ಕುರುಗೋಡು ಹುಲಿಗೆಮ್ಮ, ಕೂಡ್ಲಿಗಿ ತಿಪ್ಪೇಸ್ವಾಮಿ ಹಾಗೂ ನನ್ನ ಅಧ್ಯಯನದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪ್ರತ್ಯೇಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಸಮಸ್ತ ಕೊರಮ ಸಮುದಾಯದ ಎಲ್ಲ ಮಾಹಿತಿದಾರರಿಗೆ ತುಂಬಾ ಅಭಾರಿಯಾಗಿರುವೆ.

ಆರಂಭಿಕ ದಿನಗಳಿಂದಲೂ ಸದಾ ನನ್ನ ಶ್ರೇಯೋಭಿವೃದ್ಧಿಯನ್ನೇ ಬಯಸುತ್ತಿದ್ದ ನನ್ನ ತಂದೆ ಸಿದ್ದಪ್ಪ ಅಕಾಲಿಕ ಮರಣದಿಂದ ಮಗಳ ಕನಸು ನನಸಾಗುವುದನ್ನು ಕಾಣದೆ ನಮ್ಮಿಂದ ದೂರವಾದರು ತಾಯಿ ಹೇಮಗಿರಿಯಮ್ಮ, ಚಿಕ್ಕಮ್ಮ ಕೊಲ್ಲರಮ್ಮ, ಮಾವರಾದ ಶ್ರೀ ಎಸ್. ವಿರುಪಾಕ್ಷಪ್ಪ, ಅಕ್ಕಳಾದ ಹುಲಿಗೆಮ್ಮ, ಅಣ್ಣನಾದ ಕೆ. ಗಿರಿರಾಜ, ಅತ್ತಿಗೆ ಸಂಧ್ಯಾ, ತಂಗಿ ರೇಣುಕಾ ಮತ್ತು ಪುಟಾಣಿಗಳಾದ ರೇವತಿ, ಅನಿಲ್, ಗಿರೀಶ್, ಲೋಕೇಶ್ವರಿ ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇನೆ.

ನನ್ನ ಓದಿನಲ್ಲಿ ಸದಾ ಸಲಹೆ ಮತ್ತು ಸಹಕಾರ ಸೂಚನೆಗಳನ್ನು ನೀಡಿದ ಸ್ನೇಹಿತರು ಮತ್ತು ಸಹಪಾಠಿಗಳಾದ ಗೀತಾ ಮಲ್ಲೇಶಪ್ಪ, ಅಕ್ಕಮ್ಮ, ಅನು, ನಾಗರಾಜ, ರಾಧ, ಕೊಟ್ರಮ್ಮ, ಗೀತಾ, ಭಾಗ್ಯಮ್ಮ ಹುಲಗಪ್ಪ, ಮಹೇಶ್, ಮಲ್ಲಿಕಾರ್ಜುನ ಮಾನ್ವಡೆ, ಓಬಯ್ಯ, ಜಬೀರ್, ಗುರುಪ್ರಸಾದ, ರಾಜಶೇಖರ, ರಾಮು, ಅರುಣ್, ಚಂದ್ರಪ್ಪ, ನಾಗಲತಾ, ವಿಪ್ಲವಿ, ಸುಕನ್ಯಾ, ಶ್ರೀದೇವಿ, ರಶ್ಮಿ, ಗುರುರಾಜ ಒಟ್ಟಾರೆ ಈ ಸಮಗ್ರ ಅಧ್ಯಯನ ಹೊರಹೊಮ್ಮಲು ಪ್ರತ್ಯೇಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಹಿತಚಿಂತಕರಿಗೂ ಈ ಸಂದರ್ಭದಲ್ಲಿ ಹೃತ್ಪೂರ್ವಕವಾಗಿ ನೆನೆಯುತ್ತೇನೆ.

ಕನ್ನಡ ವಿಶ್ವವಿದ್ಯಾಲಯದ ಗ್ರಂಥಪಾಲಕರಿಗೂ ಮತ್ತು ಜಾನಪದ ಅಧ್ಯಯನ ವಿಭಾಗದ ಎಲ್ಲ ಸಿಬ್ಬಂದಿ ವರ್ಗದವರೆಲ್ಲರಿಗೂ ಹಾಗೂ ಆತ್ಮಿಯತೆಯಿಂದ ಮಹಾಪ್ರಬಂಧವನ್ನು ಅಂದವಾದ ಅಕ್ಷರ ರೂಪದಲ್ಲಿ ಸಂಯೋಜಿಸಿದ ಅನ್ನಪೂರ್ಣ, ಶ್ರೀಮತಿ ಭಾರತಿ ಹಾಗೂ ಶ್ರೀನಿವಾಸ ಕೆ. ಕಲಾಲ್, ಕಮಲಾಪುರ ಇವರಿಗೆ ನಾನು ಅಭಾರಿಯಾಗಿರುವೆ.

ರಾಧಮ್ಮ

ಪರಿವಿಡಿ

ಅನುಬಂಧಗಳು

ಅಧ್ಯಾಯ - ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

೧.೧ ಪೀಠಿಕೆ

೧.೨ ಅಧ್ಯಯನದ ಉದ್ದೇಶ, ವಿಧಾನ ಮತ್ತು ಮಹತ್ವ

೧.೩ ಅಧ್ಯಯನದ ವ್ಯಾಪ್ತಿ

೧.೪. ಇಲ್ಲಿಯವರೆಗೆ ನಡೆದ ಕೊರವರ ಬಗೆಗಿನ ಅಧ್ಯಯನ ಸಮೀಕ್ಷೆ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

ಪೀಠಿಕೆ

ಪ್ರಪಂಚದಲ್ಲೆ ಭಾರತ ದೇಶವು ವಿಶಿಷ್ಟವಾದ ಸಂಸ್ಕೃತಿ, ಸಂಪ್ರದಾಯ, ಆಚಾರ, ವಿಚಾರ, ವರ್ಣ, ಜನಾಂಗಗಳನ್ನು ಹೊಂದಿದೆ. ಅನಾದಿ ಕಾಲದಿಂದಲೂ ಒಂದಲ್ಲ ಒಂದು ಕಾರಣದಿಂದ ಭಾರತೀಯ ಜನಪದ ಸಮುದಾಯದಲ್ಲಿ ಬದುಕುತ್ತಾ ಬಂದಿರುವ ಕೊರವರು ಕರ್ನಾಟಕದಲ್ಲಿ ದೊರಕುತ್ತಾರೆ. ಕೊರವರು ಭಾರತ ದೇಶದ ವಿವಿಧ ಮೂಲೆಗಳಲ್ಲಿ ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತಾರೆ. ಇವರು ಕಾಡು ಮೇಡು ದಾಟಿ ಜೀವನ ನಡೆಸುತ್ತಾ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಜನಾಂಗದಿಂದ ಕೂಡಿದ ಇವರು ಒಂದು ಕುಟುಂಬದಂತೆ ನೋಡುವವರ ಕಣ್ಣಿಗೆ ಕಂಡುಬಂದರೂ ಸಹ ಅದರ ಒಳಗೆ ಗಮನಿಸಿದಾಗ ಹಲವಾರು ರೀತಿಯ ಅಂತಸ್ತು, ಅಧಿಕಾರ, ವರ್ಗ, ಏಣಿ ಶ್ರೇಣಿಯಿಂದ ಕೂಡಿದ ಸಮಾಜ ವ್ಯವಸ್ಥೆ ಇರುವುದು ಕಂಡುಬರುತ್ತದೆ. ಭಾರತೀಯ ಸಮಾಜದಲ್ಲಿ ಪ್ರಮುಖವಾಗಿ ಪುರುಷಪ್ರಧಾನ ಪದ್ಧತಿ ಆಚರಣೆಯಲ್ಲಿದೆ. ಮಾನವರ ಇತಿಹಾಸದ ಮೂಲ ಕೇಂದ್ರಬಿಂದು ಮಹಿಳೆಯಾದರೂ ಸಹ ಅದೇ ಪುರಾತನ ಸ್ಥಾನದಲ್ಲಿಯೇ ಇದ್ದಾಳೆ.

ಮಹಿಳೆ ಮಕ್ಕಳನ್ನು ಹೆರುವ, ಪಾಲನೆ ಪೋಷಣೆ ಮಾಡುವ ಸ್ವಾಭಾವಿಕ ಕರ್ತವ್ಯದ ಜೊತೆಗೆ ತನ್ನ ವಿವೇಚನಾಶಕ್ತಿ ಮತ್ತು ಚಾತುರ್ಯವನ್ನು ಪುರುಷನ ಕಾರ್ಯ ಸಾಧನೆಗೆ ಧಾರೆಯೆರೆದಿದ್ದಾಳೆ. ಆದರೆ ಅವಳನ್ನು ಕಾಣುವ ದೃಷ್ಟಿಕೋನ ಮಾತ್ರ ಕಾಲದಿಂದ ಕಾಲಕ್ಕೆ ಬದಲಾಗಿದೆ. ವಿವಿಧ ಕಾರ್ಯಗಳಲ್ಲಿ ಮಹಿಳೆಗೆ ಪೂಜ್ಯಸ್ಥಾನವನ್ನು ನೀಡಿದ್ದಾರೆ. ಇನ್ನು ಕೇಂದ್ರಕಾರ್ಯಗಳಲ್ಲಿ ಹೀನಾಯವಾಗಿ ನೋಡುತ್ತಿದ್ದಾರೆ. ಆದರೆ ಅದೇ ಧರ್ಮಗಳು ಮಹಿಳೆಗೆ ಅನೇಕ ರೀತಿಯಲ್ಲಿ ನಿರ್ಬಂಧಗಳನ್ನು

ವಿಧಿಸಿರುವುದು, ಅವಳ ಬೌದ್ಧಿಕ ವಿಕಾಸಕ್ಕೆ ಕೊಡಲಿ ಪೆಟ್ಟು ಹಾಕಿದಂತೆ ಆಗಿದೆ. ಇಂತಹ ಸಮಾಜದ ನಡುವೆ ಭಾರತವು ಹಲವಾರು ಆದಿವಾಸಿ, ಬುಡಕಟ್ಟು ಸಮುದಾಯಗಳನ್ನು ಹೊಂದಿರುವ ದೇಶವಾಗಿದೆ. ಇದರಲ್ಲಿ ಒಂದೊಂದು ಬುಡಕಟ್ಟು ಸಮುದಾಯದ ಸಂಪ್ರದಾಯ, ಆಚರಣೆಗಳ, ನಂಬಿಕೆ, ಉಟೋಪಚಾರ, ರೂಢಿನಿಯಮ, ಉಡುಗೆ ತೊಡುಗೆ ಮೊದಲಾದ ಅಂಶಗಳೊಂದಿಗೆ ಸಮುದಾಯದ ಜೀವನಾವರ್ತನ ವಿಧಾನಗಳು ಮತ್ತು ವಾರ್ಷಿಕಾವರ್ತನ ವಿಧಾನಗಳು ಇನ್ನೊಂದು ಸಮುದಾಯಕ್ಕೆ ವಿಭಿನ್ನವಾಗಿರುತ್ತದೆ. ಇಂದಿನ ಜಾಗತೀಕರಣದ ಸಂದರ್ಭದಲ್ಲಿಯೂ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಅಲೆಮಾರಿ ಬುಡಕಟ್ಟು ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳು ಜೀವನ ನಿರ್ವಹಿಸುತ್ತಿದೆ. ಇಂತಹ ಸಮುದಾಯದಲ್ಲಿ ಸ್ತ್ರೀಯರದೇ ಮೇಲುಗೈ ಇದ್ದರೂ ಸಹ ಕೆಲವೊಂದು ಸಂದರ್ಭದಲ್ಲಿ ಮಹಿಳೆಯರನ್ನು ಅಸ್ಪೃಶ್ಯತೆಯಿಂದ ಕಾಣಲಾಗುತ್ತದೆ. ತಮ್ಮದೇ ಆದ ಆಚಾರ ವಿಚಾರಗಳಿಂದ, ನಡೆ ನುಡಿಗಳಿಂದ, ತಮ್ಮತನವನ್ನು ಕಾಯ್ದುಕೊಂಡು ಸಾಗಿ ಬಂದಿದ್ದಾರೆ. ಬಡತನ, ಮೌಢ್ಯ, ಕಂದಾಚಾರ, ಅನಕ್ಷರತೆಗಳಿಂದ ಬಳಲುತ್ತಿರುವ ಈ ಸಮುದಾಯ ಹಿಂದುಳಿದ ಸಮುದಾಯವಾಗಿಯೇ ಉಳಿದು ನಿರೀಕ್ಷಿತ ಪ್ರಗತಿ ಕಂಡುಕೊಳ್ಳುವಲ್ಲಿ ವಿಫಲವಾಗಿದೆ.

ಹಿಂದೆ ಬೆಟ್ಟ ಗುಡ್ಡಗಳಲ್ಲಿ ಉಳಿದು ಕಾಡಿನಲ್ಲಿ ದೊರೆಯುವ ಔಷಧಿಗಳನ್ನು ತರುತ್ತಾ ಜೊತೆಗೆ ಬೆತ್ತ ಬಿದಿರಿನ ಮೂಲಕ ಬುಟ್ಟಿಗಳನ್ನು ಮಾಡುತ್ತಾ ಅಂತ್ರ ಕಟ್ಟುವ, ಹಚ್ಚೆ ಹಾಕುವ ಕೆಲಸಗಳನ್ನು ಈ ಸಮುದಾಯದವರು ಮೈಗೂಡಿಸಿಕೊಂಡು ಬಂದಿತು ತಿಳಿದುಬರುತ್ತದೆ. ಧರ್ಮನಿಷ್ಠೆಯ ಹಿಂದೂ ಜನ ಇವರ ವೃತ್ತಿಗಳನ್ನು ಪೋಷಿಸುತ್ತಾ ಬಂದರು. ಇವರು ಮಾಡಿದ ಬುಟ್ಟಿಗಳು ಜನಪದರ ಅಗತ್ಯದ ವಸ್ತುಗಳಾದವು.

೧.೨ ಅಧ್ಯಯನದ ಉದ್ದೇಶ, ವಿಧಾನ ಮತ್ತು ಮಹತ್ವ

ಜಗತ್ತಿನಾದ್ಯಂತ ಮಹಿಳೆ ಎರಡು ರೀತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾಳೆ. ಒಂದು ಜೈವಿಕ ಸಂತಾನೋತ್ಪತ್ತಿ, ಇನ್ನೊಂದು ಉತ್ಪಾದನಾ ಕೆಲಸಗಳಲ್ಲಿ ತೊಡಗಿದ್ದಾಳೆ. ಕುಟುಂಬದ ಸದಸ್ಯರನ್ನು ಪೋಷಿಸಿ ಪ್ರೋತ್ಸಾಹಿಸುತ್ತಾಳೆ. ಕಾಡುಗಳಲ್ಲಿ ಹೋಗಿ ಸೌದೆ, ಹಣ್ಣುಗಳನ್ನು ಸಂಗ್ರಹಣೆ ಮಾಡುತ್ತಾಳೆ. ವ್ಯಾಪಾರ ವ್ಯವಹಾರಗಳಲ್ಲಿ, ಗೃಹ ಕೆಲಸಗಳಲ್ಲಿ ಪಾಲ್ಗೊಳ್ಳುತ್ತಾಳೆ. ಆದರೆ ಹೊಸ ಆರ್ಥಿಕ ನೀತಿ, ತಂತ್ರಜ್ಞಾನ ಈ ಮಹಿಳೆಯ ದುಡಿಮೆ ಮೇಲೆ ಅಪಾರವಾದ ತೊಂದರೆಗಳನ್ನು ತಂದೊಡ್ಡಿದೆ ಎಂದು ಹೇಳಬೇಕಾಗುತ್ತದೆ. ಇದರಿಂದಾಗಿ ಮಹಿಳೆಯ ಆರ್ಥಿಕ ಸಂಪತ್ತು, ಕೆಲಸ, ಆದಾಯ ಕಡಿಮೆಯಾಗಿ ಕೆಲಸದ ಭಾರ ಅಧಿಕವಾಗಿದೆ. ಇವರಿಗೆ ಶಿಕ್ಷಣದ ಅರಿವು ಇಲ್ಲದಿರುವುದರಿಂದ ಜಾಗತೀಕರಣದಲ್ಲಿ ಬದುಕುವುದು ಶೋಚನೀಯ ಸಂಗತಿಯಾಗಿದೆ. ಏಕೆಂದರೆ ಬುಟ್ಟಿ, ಕಸಬಾರಿಗೆ ಪಾತ್ರೆ ವ್ಯಾಪಾರ, ಬೇರೆ ಬೇರೆ ಕೆಲಸಗಳಲ್ಲಿ ಕೈಗಾರಿಕರಣದ ಪ್ರಭಾವ ಬಿದ್ದಿದ್ದರಿಂದ ಇವರ ಆರ್ಥಿಕ ಜೀವನ ಮಟ್ಟವು ಕಡಿಮೆಯಾಗುತ್ತಿದೆ.

ಭಾರತದ ಅನೇಕ ಬುಡಕಟ್ಟು ಸಮುದಾಯದಲ್ಲಿ ಒಂದಾದ ಕೊರವ ಸಮುದಾಯ ತಮ್ಮ

ಬದುಕಿನ ವೈವಿಧ್ಯತೆಯಿಂದಾಗಿ ಅತೀ ಪ್ರಾಚೀನ ಕಾಲದಿಂದಲೂ ಜನ ಮನಸ್ಸು ಸೆಳೆಯುತ್ತಾ ತಮ್ಮದೇ ಆದ ಕಟ್ಟುಪಾಡುಗಳೊಂದಿಗೆ ಬದುಕುತ್ತಾ ಬಂದಿದ್ದಾರೆ. ಇವರ ಮೂಲ ಸ್ವರೂಪ ಅಥವಾ ಜಾನಪದ ಅಂಶಗಳು ಕಾಲಾಂತರದ ಸಾಮಾಜಿಕ ಬದಲಾವಣೆಗಳಿಂದಾಗಿ ದಿನದಿಂದ ದಿನಕ್ಕೆ ಮರೆಯಾಗುತ್ತಿರುವುದು ವಿಪರ್ಯಾಸವಾಗಿದೆ. ಆದ್ದರಿಂದ ಪ್ರತಿಯೊಂದು ಬುಡಕಟ್ಟಿನ ಮಾನವಶಾಸ್ತ್ರ ಮತ್ತು ಸಂಸ್ಕೃತಿಯ, ಮಹಿಳೆಯರ ಅಧ್ಯಯನಗಳು ಇಂದು ಅಗತ್ಯವಾಗಿ ಬೇಕಾಗುತ್ತದೆ. ಈ ದೃಷ್ಟಿಯಿಂದ ಸಮುದಾಯದ ಮಹಿಳೆಯರ ಜೀವನ ಕ್ರಮದ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಅವಲೋಕಿಸಿ ಬದುಕಿನ ಬಗ್ಗೆ ಅಭ್ಯಸಿಸಲಾಗಿದೆ. ಕಾರಣ ಇಂದು ಹೊಸ ಸಮಾಜದ ನಿರ್ಮಾಣದ ಕಾರ್ಯದಲ್ಲಿ ನಾವೆಲ್ಲ ತೊಡಗಿರುವುದರಿಂದ ಅದಕ್ಕೆ ಬೇಕಾದ ಮೌಲ್ಯಗಳನ್ನು ಇಂದಿನ ಈ ಸಮುದಾಯದ ಅಧ್ಯಯನದಿಂದ ರೂಢಿಸಿಕೊಳ್ಳಬೇಕಾಗಿದೆ.

ಅನಾದಿ ಕಾಲದಿಂದಲೂ ಮಹಿಳೆಯು ತಮ್ಮ ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಬರುವುದನ್ನು ಕಾಣುತ್ತೇವೆ. ಕೃಷಿಯಿಂದ ಹಿಡಿದು ಇಂದಿನ ಆಧುನಿಕತೆಯ ಸವಾಲುಗಳವರೆಗೆ ಮಹಿಳೆಯು ಹೋರಾಟ ಮಾಡುತ್ತಲೆ ಬಂದಿದ್ದಾಳೆ. ಆಹಾರ ಸಂಗ್ರಹಣೆ, ಸೌದೆ, ತರಕಾರಿ ಸಂಗ್ರಹಿಸುವುದು, ನೈತಿಕ ಶಿಕ್ಷಣ ಕೊಡುವುದು. ಒಳಿತು ಕೆಡಕುಗಳ ಬಗ್ಗೆ ತಿಳಿಹೇಳುವುದು, ಮೊದಲಾದ ಕೆಲಸಗಳಲ್ಲಿ ಮಹಿಳೆ ತೊಡಗಿದ್ದಾಳೆ. ಆದರೆ ಈ ಸಮುದಾಯದ ಮಹಿಳೆಯು ತಿಳುವಳಿಕೆಯು ಆದಿಮ ಪರಿಸ್ಥಿತಿಯಲ್ಲಿರುವುದು ಕಂಡುಬರುತ್ತದೆ. ದುಡಿಯುವುದು, ಸಂಸಾರದ ಜವಾಬ್ದಾರಿಯನ್ನು ನೋಡಿಕೊಳ್ಳುವುದು ಮಾತ್ರ ಅವ'ರ ಕರ್ತವ್ಯ ಎಂದು ತಿಳಿದಿದ್ದಾಳೆ. ಅದಕ್ಕೆ ಮುಂದುವರೆದ ಸಮಾಜದಲ್ಲಿ ನಾವು ಮುಂದುವರೆಯಬೇಕು ಎಂಬ ಮನೋಭಾವನೆಯು ಅವರ ಮನದಲ್ಲಿ ಬೆಳಕು ಉಂಟುಮಾಡಲು ಪ್ರಯತ್ನಿಸುತ್ತಿದೆ. ಮಹಿಳೆಯರು ಮುಂದುವರೆಯಲು ಎಷ್ಟು ವರ್ಷ ಬೇಕಾಗುತ್ತದೆ ಎನ್ನುವುದು ತಿಳಿಯದು. ಪುರುಷರಲ್ಲಿ ಮಹಿಳೆಯರ ಬಗ್ಗೆ ಚಿಂತನೆ ಮಾಡಿ ಅವರನ್ನು ಮುಂದೆ ತರಲು ಪ್ರಯತ್ನಿಸಬೇಕಾಗಿದೆ. ಆವಾಗ ಮಹಿಳೆಯರು ಮುಂದೆ ಬರಲು ಸಾಧ್ಯ ಎಂಬ ಅಭಿಪ್ರಾಯ.

"ಸಮಾಜ ಒಬ್ಬ ಜೀವಿಯಾಗಿ, ಮಾನವ ಪರಂಪರಾನುಗತವಾಗಿ ರೂಢಿಸಿಕೊಂಡು ಬಂದಿರುವ ವರ್ಗಾಯಿಸಲ್ಪಡುವ ಹಂಚಿಕೊಳ್ಳುವ, ಗೌರವಿಸುವ, ಆಲೋಚನೆಗಳ, ಮೌಲ್ಯಗಳ ನಿರ್ಮಾಣ ಮಾಡುವ ವಸ್ತುಗಳ ಮೊತ್ತವನ್ನು ಸಂಸ್ಕೃತಿ ಎಂದು ಕರೆಯಬಹುದು."[1] "ಯಾವುದೇ ಬುಡಕಟ್ಟಿನ ಜನಾಂಗೀಯ ಅಧ್ಯಯನ ಮಾಡುವಾಗ ಅವರ ವಾಸಸ್ಥಳ, ಅವರಲ್ಲಿರುವ ಮೌಖಿಕ ಪರಂಪರೆ, ಸಂಪ್ರದಾಯ, ಆಚಾರ ವಿಚಾರ, ರೀತಿ, ರೀವಾಜುಗಳು, ನಂಬಿಕೆ, ಧರ್ಮ, ಕಲೆ ಹುಟ್ಟಿನಿಂದ ಸಾವಿನವರೆಗೆ ಬರುವ ಎಲ್ಲ ಬಗೆಯ ಜೀವನಾವರ್ತನದ ಆಚರಣೆಗಳು, ಅವುಗಳಲ್ಲಿ ಅವರು ಇಟ್ಟಿರುವ ನಂಬಿಕೆ, ಕೌಟುಂಬಿಕ ವ್ಯವಸ್ಥೆ ಸಾಮಾಜಿಕ ಜೀವನ, ನಾಗರಿಕತೆಯ ಪ್ರಭಾವದಿಂದ ಆಗಿರುವ ಬದಲಾವಣೆ, ವೃತ್ತಿ, ಆಹಾರಪದ್ಧತಿ, ಇತ್ಯಾದಿಯಾಗಿ ಎಲ್ಲ ಮಗ್ಗುಲುಗಳನ್ನು ಗಮನಿಸ ಬೇಕಾಗುತ್ತದೆ. ಇಂತಹ ಅಧ್ಯಯನವು ಬುಡಕಟ್ಟು ಸಮುದಾಯದ ಆಳವಾದ ಅಧ್ಯಯನವಾದ್ದರಿಂದ ಇದನ್ನು ಜಾನಪದ ಅಧ್ಯಯನ ಎನ್ನುವುದು ಸೂಕ್ತವೆನಿಸುತ್ತದೆ. ಯಾವುದೇ ಒಂದು ಜನಾಂಗದ

ಸಂಸ್ಕೃತಿಯು ನಿಂತ ನೀರಲ್ಲ. ಅದು ಸದಾ ಹರಿಯುತ್ತಿರುವ ಜೀವಜಲ. ನಿತ್ಯ ಪರಿವರ್ತನ ಶೀಲವಾದುದು. ಅನ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗದೆ ಪ್ರತ್ಯೇಕತೆಯನ್ನು ಕಾಯ್ದುಕೊಂಡಿರುವ ಬುಡಕಟ್ಟಿನ ಸುಸಂಸ್ಕೃತಿಗಳಲ್ಲಿಯೂ ಕಾಲಾಂತರಗಳಲ್ಲಿ ಎಷ್ಟೋ ಬದಲಾವಣೆಗಳಾಗುತ್ತಿರುವುದನ್ನು ಕಾಣುತ್ತೇವೆ".[೩]

"ಜಾನಪದ ಸಾಹಿತ್ಯವು ಜನಸಮುದಾಯದ ಸಮಷ್ಟಿ ಸೃಷ್ಟಿ. ಸಾಮಾಜಿಕ ಜೀವನದ ಸಂಕೇತ. ರಾಷ್ಟ್ರೀಯ ಸಂಸ್ಕೃತಿಯ ತಾಯಿಬೇರು. ಜನಪದರ ಆಲೋಚನೆ, ಭಾಷೆ ಸರಳವಾದದ್ದು. ಮಾತಿನಶಕ್ತಿ, ಅಭಿವ್ಯಕ್ತಿ, ಸಹಜತೆ ಸ್ಪಷ್ಟವಾದದ್ದು. ಈ ಕಾಲದಲ್ಲಿಯೂ ಜನಪದರು ಜ್ಞಾನಾರ್ಜನೆ, ಜೀವನದ ಧ್ಯೇಯ ದೈವರನ್ನು ಕುರಿತ ತಮ್ಮ ಭಾವನೆ ಪೂಜೆ ಮೊದಲಾದವುಗಳಗೆಲ್ಲಾ ಹೇಗೋ ಒಂದು ಜೀವನ ಧರ್ಮಶಾಸ್ತ್ರವಾಗಿ ಮಾಡಿಕೊಂಡಿದ್ದಾರೆ. ಮಾನವ ಜೀವನದಲ್ಲಿ ಸ್ತ್ರೀಯು ಒಂದು ಕೇಂದ್ರ ಬಿಂದು. ಅವಳಿಂದಲೇ ಸಂಸಾರ, ಸಂತಾನ, ಸಮೃದ್ಧಿ, ನಲಿವು, ಒಲವು, ನೋವು ಎಲ್ಲ ಮಗಳಾಗಿ, ತಾಯಿಯಾಗಿ, ಅತ್ತೆಯಾಗಿ, ಸೊಸೆಯಾಗಿ, ಸ್ನೇಹಿತಳಾಗಿ ಎಲ್ಲಾ ಹಂತಗಳಲ್ಲಿಯೂ ಹೊಣೆಯನ್ನರಿತು ತನ್ನ ಕರ್ತವ್ಯವನ್ನು ನಿಭಾಯಿಸಬೇಕಾಗುತ್ತದೆ. ಬಂಧುತ್ವ ವಿವಿಧ ಸಂಬಂಧದಿಂದ ಕೂಡಿದೆ. ಪ್ರೀತಿ ಅಥವಾ ಮಮತೆಯ ಬೇರು ಜೀವನದ ವೃಕ್ಷಕ್ಕೆ ಆಧಾರವಾಗಿ ನಿಂತಿದೆ. ಮಾನವ ಜೀವನವೇ ಒಂದು ಸರಪಳಿ, ಈ ಸರಪಳಿಯನ್ನು ಬೆಳೆಸುವುದು ಮಹಿಳೆಯ ಕರ್ತವ್ಯವಾಗಿದೆ."[೩] ಏಕೆಂದರೆ ಯಾವುದೇ ಕಷ್ಟ ನಷ್ಟಗಳಿಗೂ ನೆರೆಹೊರೆಯವರು ಬೇಕಾಗುತ್ತಾರೆ. ಪ್ರೀತಿ ವಾತ್ಸಲ್ಯದಿಂದ ಮಾತನಾಡು ತ್ತಿದ್ದರೆ ಸಂಬಂಧಗಳು ಬೆಳೆಯುತ್ತವೆ. ಇಲ್ಲವಾದರೆ ಯಾರಿಗೂ ಬೇಕಾಗದ ಹಾಗೆ ತಮಗೆ ತಾವೇ ಎಂಬ ರೀತಿಯಲ್ಲಿ ಬದುಕುವ ಪರಿಸ್ಥಿತಿಯು ಉದ್ಭವಿಸಬಹುದಾಗಿದೆ. ಇಂದಿನ ಸಂಬಂಧಗಳು ಆಟಕ್ಕುಂಟು ಲೆಕ್ಕಕಿಲ್ಲದ ರೀತಿ ಮಾಡುತ್ತಿರುವುದು ಒಂದು ವಿಪರ್ಯಾಸವಾಗಿದೆ.

ಕೊರವರ ಜನಾಂಗೀಯ ಅಧ್ಯಯನ ಮಾಡುವಾಗ ಅಥವಾ ಜನಾಂಗವೆಂದು ಗುರುತಿಸುವಾಗ ಇವರ ಲಕ್ಷಣವನ್ನು ಮೇಲುನೋಟದಲ್ಲೆ ಕಾಣಬಹುದಾಗಿದೆ. ಮಾನವ ಜನಾಂಗದ ಚರಿತ್ರೆ ತುಂಬಾ ದೀರ್ಘವಾದುದಾಗಿದೆ. "ಆದಿವಾಸಿಯಾಗಿದ್ದ ಮಾನವ ಕಾಲ ಜಾರಿದಂತೆ ನಾಗರಿಕತೆಯನ್ನು ಮೈಗೂಡಿಸಿಕೊಂಡು ಇಂದಿನ ಸ್ಥಿತಿಗೆ ಬಂದಿದ್ದರೂ, ಕೊರವರು ಇನ್ನೂ ತಮ್ಮ ಮೂಲ ಸಂಸ್ಕೃತಿಯ ಅಂಗವಾಗಿಯೇ ಉಳಿದಿರುವುದನ್ನು ಕಂಡಾಗ ಇವರ ಬದುಕಿನಲ್ಲಿ ಏನೋ ವಿಶೇಷತೆ ಇರುವುದು ಕಂಡುಬರುತ್ತದೆ. ಒಳಹೊಕ್ಕಾಗ ಅಲ್ಲಿ ಮತ್ತಷ್ಟು ಗಾಢವಾದ ಸಂಕೀರ್ಣ ವ್ಯವಸ್ಥೆಯಿರುವುದು ಗೋಚರವಾಗುತ್ತದೆ. ಇಲ್ಲಿ ಸಂಸ್ಕೃತಿಯು ಮೂರು ಹಂತಗಳಲ್ಲಿ (ಆದಿವಾಸಿ - Primitive, ಗ್ರಾಮೀಣ - Rural, ನಗರ - Urban) ಜನಾಂಗದಲ್ಲಿ ಎಂದಿಗೂ ಸಂಸ್ಕೃತಿ ಬಹುಮುಖ್ಯವಾದ ಪಾತ್ರ ವಹಿಸುತ್ತದೆ. ಸಮಾಜದ ಒಬ್ಬ ಜೀವಿಯಾಗಿ ಮಾನವ ಪರಂಪರಾನುಗತ ರೂಢಿಸಿಕೊಂಡು ಬಂದಿರುವ, ವರ್ಗಾಯಿಸಲ್ಪಡುವ, ಹಂಚಿಕೊಳ್ಳುವ, ಗೌರವಿಸುವ, ಅಲೋಚನೆಗಳ, ಮೌಲ್ಯಗಳ ಮತ್ತು ನಿರ್ಮಾಣ ಮಾಡುವ ವಸ್ತುಗಳ ಮೊತ್ತವನ್ನು ಸಂಸ್ಕೃತಿ ಎಂದು ಕರೆಯಬಹುದು".[೮]

ಅನೇಕ ಶತಮಾನಗಳಿಂದಲೂ ಬೆಟ್ಟಗುಡ್ಡ ಪ್ರದೇಶಗಳಲ್ಲಿ, ಮರಳುಗಾಡುಗಳಲ್ಲಿ ವಾಸವಾಗಿರುವ ಸಾಮಾಜಿಕ ವರ್ಗಗಳು ತಮ್ಮ ಸಂಸ್ಕೃತಿಯನ್ನು ಪ್ರತ್ಯೇಕವಾಗಿಯೇ ಉಳಿಸಿಕೊಂಡು ಬಂದಿರುವ ವರ್ಗಗಳಲ್ಲಿ ರಕ್ತ ಸಂಬಂಧ ಬಹುಮುಖ್ಯವಾದ ಅಂಶ. ಇವರ ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆ ರಕ್ತ ಸಂಬಂಧದ ಮೇಲೆ ಅವಲಂಬಿತವಾಗಿರುತ್ತದೆ. ಇಂತಹ ಜನವರ್ಗಗಳು ಬಿಗಿಯಾದ ನಿಯಮ ಗಳನ್ನು ಹೊಂದಿದ್ದು, ಹೊರಗಿನ ಯಾರನ್ನೂ ಅನುಮಾನದಿಂದಲೆ ನೋಡುವ ಪರಿಪಾಟವಿರುತ್ತದೆ. ಭಿನ್ನವಾದ ಸಂಸ್ಕೃತಿಯಿಂದ ಕೂಡಿದ್ದು ನಾಗರಿಕತೆ ಎಂಬಂತೆ ಗೋಚರವಾಗುತ್ತದೆ. ಈ ಜನ ತಮ್ಮದೇ ಆದ ಪ್ರತ್ಯೇಕ ಭಾಷೆ, ಆಚಾರ, ವಿಚಾರ, ವ್ಯವಹಾರ, ಸಾಹಿತ್ಯ ಮೊದಲಾದವುಗಳನ್ನು ಹೊಂದಿರುತ್ತದೆ.

ಜನಾಂಗೀಯ ಅಧ್ಯಯನ ಮಾಡುವಾಗ ಅವರ ವಾಸಸ್ಥಳ, ಅವರಲ್ಲಿರುವ ಮೌಖಿಕ ಪರಂಪರೆ, ಸಂಪ್ರದಾಯ, ಆಚಾರ, ವಿಚಾರ, ರೀತಿ ರಿವಾಜುಗಳು, ನಂಬಿಕೆ, ಧರ್ಮ, ಕಲೆ, ಹುಟ್ಟಿನಿಂದ ಸಾವಿನವರೆಗೆ ಬರುವ ಎಲ್ಲ ಬಗೆಯ ಜೀವನಾವರ್ತನದ ಆಚರಣೆಗಳು ಅವುಗಳಲ್ಲಿ ಅವರು ಇಟ್ಟಿರುವ ನಂಬಿಕೆ, ಕೌಟುಂಬಿಕ ವ್ಯವಸ್ಥೆ, ಸಾಮಾಜಿಕ ಜೀವನ, ನಾಗರಿಕತೆಯ ಪ್ರಭಾವದಿಂದ ಆಗಿರುವ ಬದಲಾವಣೆ, ವ್ಯಕ್ತಿ ಆಹಾರ ಪದ್ಧತಿ, ಮೊದಲಾದವುಗಳನ್ನು ಗಮನಿಸಬೇಕಾಗುತ್ತದೆ. ಯಾವುದೇ ಒಂದು ಜನಾಂಗದ ಸಂಸ್ಕೃತಿಯು ನಿಂತ ನೀರಲ್ಲ. ಅದು ಸದಾಹರಿಯುತ್ತಿರುವ ಜೀವಜಲ. ನಿತ್ಯ ಪರಿವರ್ತನಾಶೀಲವಾದುದು. ಅನ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗದೆ ಪ್ರತ್ಯೇಕತೆಯನ್ನು ಕಾಯುಕೊಂಡಿರುವ ಸಂಸ್ಕೃತಿಗಳಲ್ಲಿಯೂ ಕೂಡ ಕಾಲಾಂತರದಲ್ಲಿ ಎಷ್ಟೋ ಬದಲಾವಣೆಗಳಾಗು ತ್ತಿರುವುದನ್ನು ಕಾಣುತ್ತೇವೆ. ಇದು ಅನಿವಾರ್ಯವೂ ಹೌದು.

"ಜನಾಂಗಿಕ ಅಧ್ಯಯನಗಳು ಕೇವಲ ಮಾನವಶಾಸ್ತ್ರಜ್ಞರಿಗೆ ಮಾತ್ರ ಮೀಸಲು ಅನ್ನುವಂತಹ ಪರಿಸ್ಥಿತಿಯ ಕಾಲವೊಂದಿತ್ತು. ಆದರೆ ಇತ್ತೀಚಿನ ಹೊಸ ಅಲೋಚನಾ ಕ್ರಮ ಹೊಸ ಹೊಸ ಶಿಸ್ತುಗಳಿಂದಾಗಿ ಈ ಮನೋಭಾವನೆ ಬದಲಾಗುತ್ತದೆ. ವ್ಯವಸ್ಥೆ ಸಮಾಜ ಸಮುದಾಯ ಹೀಗೆ ಯಾವುದೇ ಒಂದರ ಬಗ್ಗೆ ತಲಸ್ಪರ್ಶವಾಗಿ ಸಂಶೋಧನೆ ನಡೆಸಬೇಕಾದಲ್ಲಿ ಅಂತರ್ ಶಿಸ್ತೀಯ ಅಧ್ಯಯನದ ಮನೋಭಾವನೆ ಇಂದು ಸಂಶೋಧಕರಲ್ಲಿ ಅವಶ್ಯವೇನೋ, ಪ್ರಾಯಶಃ ಇದು ಭಾರತದ ವಿಭಿನ್ನ ಸಮುದಾಯ, ಬುಡಕಟ್ಟುಗಳು ವಿಭಿನ್ನ ಸಂಸ್ಕೃತಿಗಳ ಅಭ್ಯಾಸಕ್ಕೆ ಅಂತರ್‌ಶಿಸ್ತೀಯ ಅಧ್ಯಯನವೇ ಸರಿಯೇನೋ ಅನಿಸುತ್ತದೆ ಎಂದು ಡಾ. ಆರ್.ಬಿ. ಕುಮಾರ್ ಅವರು ತಿಳಿಸುತ್ತಾರೆ."[೫] ಇಂದಿನ ಜಾಗತೀಕರಣ ಪ್ರಕ್ರಿಯೆಯಲ್ಲಿ ಎಷ್ಟೋ ಬುಡಕಟ್ಟು ಸಮುದಾಯಗಳು ಕಳೆದು ಹೋಗುತ್ತವೆಯೇನೋ ಎನ್ನುವ ಭ್ರಮೆಯ ಮಧ್ಯದಲ್ಲಿಯೇ ಅಂತಹ ಪ್ರಕ್ರಿಯೆಗಳನ್ನು ಎದುರಿಸಿ ನಿಂತು ತಮ್ಮ ಮೂಲ ಬೇರುಗಳನ್ನು ಕಾಯ್ದುಕೊಳ್ಳಲು ಇಂತಹ ಸಮುದಾಯಗಳಲ್ಲಿ ನಿರಂತರವಾದ ಹೋರಾಟ ನಡೆಯುತ್ತಲೇ ಇರುತ್ತವೆ.

ಜನಾಂಗ ಅಧ್ಯಯನ ಮೊದಲು ಭಾಷೆಯ ಅಧ್ಯಯನದೊಂದಿಗೆ ಬೆಳೆದು ಬಂದವು. ''ಜನಪದ

ಹಾಡುಗಳು, ರೂಢಿ ಸಂಪ್ರದಾಯಗಳು ಜನಾಂಗ ಅಧ್ಯಯನದ ಜೀವಾಳ. ಲಿಖಿತ ದಾಖಲೆಗಳನ್ನು ಸೇರದ ಎಷ್ಟೋ ಜನಾಂಗದ ಇತಿಹಾಸ ಮೌಖಿಕ ಪರಂಪರೆಯಲ್ಲಿ ಉಳಿದಿರುತ್ತದೆ. ಜನಾಂಗವೊಂದು ಉಳಿಸಿಕೊಂಡ ಪರಂಪರೆಯನ್ನು ದಾಖಲಿಸುವುದು, ಅನಂತರ ಅದರ ವಿಶ್ಲೇಷಣೆ, ಚರ್ಚೆ ಸಿದ್ಧಾಂತಗಳ ಬೆಳವಣಿಗೆಗೆ ಅವಕಾಶವನ್ನು ಮಾಡಿಕೊಡಬಹುದು. ಹಾಗೆಯೇ ಸಾಮಾಜಿಕ ಕಟ್ಟುಪಾಡುಗಳು ನೋಡಲೇಬೇಕಾದ ಕುತೂಹಲಕಾರಿ ವಿಚಾರಗಳು ಆಗಿರುತ್ತದೆ. ಜಗತ್ತಿನ ಬಹುತೇಕ ಸಮಾಜಗಳು, ವೈವಾಹಿಕ ಸಂಬಂಧಗಳ ಸುತ್ತಾ ಹೆಚ್ಚು ಕಟ್ಟು ಪಾಡುಗಳನ್ನು ಹಾಕಿಕೊಳ್ಳುತ್ತದೆ. ಅದು ಆ ಸಮಾಜದ ಪ್ರಬಲ ಅಂಶವೂ ಆಗಿರಬಹುದು ಅಥವಾ ದೌರ್ಬಲ್ಯವು ಆಗರಬಹುದು. ಬೇರೊಂದು ಸಾಮಾಜಿಕ ನೆಲೆಯಲ್ಲಿ ನಿಂತು ತೀರ್ಪು ನೀಡುವುದರಲ್ಲಿ ಅರ್ಥವಿಲ್ಲವೆಂದೇ ಹೇಳಬೇಕಾಗುತ್ತದೆ ಎಂದು ತಿಳಿಸುತ್ತದೆ".[೩]

ಬಹಳ ಹಿಂದಿನಿಂದಲೂ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯೇ ಮುಂದುವರಿದುಕೊಂಡು ಬಂದಿದೆ. ಸಾಮಾನ್ಯವಾಗಿ ಮನೆಯ ಹಿರಿಯನೇ ಯಜಮಾನನಾಗಿರುತ್ತಾನೆ. ಆತನ ಆದೇಶದಂತೆ ಎಲ್ಲರೂ ನಡೆದುಕೊಳ್ಳಬೇಕಾಗುತ್ತದೆ. ಹೆಣ್ಣು ಮಕ್ಕಳಂತೂ ಗಂಡ ಮತ್ತು ಹಿರಿಯರಿಗೆ ವಿಧೇಯರಾಗಿ ನಡೆದುಕೊಳ್ಳಲೇಬೇಕಾಗಿದೆ. ಮದುವೆ, ಆಸ್ತಿ ವಿಷಯದಲ್ಲಿ ಪುರುಷನದೇ ಅಧಿಕಾರ. 'ಕೈಲಿಲ್ಲದವನು ಕಳ್ಳ, ಹೊಟ್ಟೆಗಿಲ್ಲದವ ಬಡವ' ಎಂಬ ಗಾದೆಯಂತೆ ಬಡತನ ಮತ್ತು ಮೌಢ್ಯವೂ ಇವರ ಹೀನ ಸ್ಥಿತಿಗೆ ಕಾರಣವಾಯಿತು. ಕಾಲ ಕಳೆದಂತೆ ಇವರು ಊರ ಹೊರಗಿನ ತಮ್ಮ ತಾತ್ಕಾಲಿಕ ಬಿಡಾರಗಳನ್ನು ಊರಿನಲ್ಲಿಯೇ ಕಂಡುಕೊಳ್ಳುವಂತಾಯಿತು. ಕೆಲವರು ನೆಲೆನಿಂತು ಊರಿಗೆ ಹೊಂದಿಕೊಂಡಂತೆ ಹಟ್ಟಿಗಳನ್ನು ಕಟ್ಟಿಕೊಂಡರು, ಕೆಲವರು ಸ್ವತಂತ್ರವಾದ ಹಟ್ಟಿಗಳನ್ನು ನಿರ್ಮಿಸಿಕೊಂಡು ಗುಂಪುಗುಂಪಾಗಿ ವಾಸಿಸತೊಡಗಿದರು. ಏನೇ ಆದರೂ ಇವರು ತಮ್ಮ ಆಚಾರ, ವಿಚಾರ, ನಂಬಿಕೆ, ನಡವಳಿಕೆ, ಅತಿ ಕೊಳಕಾದ ಉಡುಪು, ಕಿತ್ತಾಟ ಮಾಡುತ್ತಿದ್ದ ಉದ್ಯೋಗ ಮುಂತಾದವುಗಳಿಂದ ಸಮಾಜದ ಕೆಳಸ್ತರದಲ್ಲಿಯೇ ಇದ್ದರು. ಯಾವಾಗ ಆಧುನಿಕತೆ ಪ್ರಭಾವ ಇವರಲ್ಲಿ ಬೆಳೆಯಿತೋ ವಿದ್ಯಾಭ್ಯಾಸ ಮಾಡಲು ಬಂದರು. ಆದರೆ ಹೆಣ್ಣು ಮಕ್ಕಳನ್ನು ಓದಲು ಕಳಿಸಲಾಗಲಿಲ್ಲ. ಅತಿಯೆಂದರೆ ೧೦ ನೇ ತರಗತಿ ಓದಿದರೆ ಸಾಕು ಎಂದು ಮನೆಯಲ್ಲಿಯೇ ಇರಿಸುತ್ತಿದ್ದರು. ೩೦-೪೦ ವರ್ಷಗಳ ಹಿಂದೆ ಮಹಿಳೆಯರು ಓದಿದ್ದೆ ಕಾಣುವುದಿಲ್ಲ. ನಂತರ ಓದಿದವರು ಬೆರಳೆಣಿಕೆಯಷ್ಟು ಕಂಡುಬರುತ್ತಿದ್ದಾರೆ.

ಜಾಗತೀಕರಣದ ಯುಗದಲ್ಲಿಯೂ ಶಿಕ್ಷಣದ ಕೊರತೆ ಕಾಣುವುದು ವಿಪರ್ಯಾಸವೇ ಸರಿ ಎಂದು ಹೇಳಬೇಕಾಗಿದೆ. 'ಕೊರಮ ಕೂಡಿ ಕೆಟ್ಟ, ದೊಂಬ ಅಗಲಿ ಕೆಟ್ಟ' ಎಂಬ ಗಾದೆಯು ಜೀವನದ ವ್ಯವಸ್ಥೆಯನ್ನು ಸ್ಪಷ್ಟಪಡಿಸುತ್ತದೆ. ಒಗ್ಗಟ್ಟಿನಲ್ಲಿ ಬಲವಿದೆ ಎಂದು ತಿಳಿದವರಲ್ಲ, ಆದ್ದರಿಂದಲೇ ಅವರ ಏಳ್ಗೆ ಸಾಧ್ಯವಾಗಲಿಲ್ಲ. ಕೆಲವರು ವಿದ್ಯಾವಂತರು ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಸಂಘ-ಸಂಸ್ಥೆಗಳನ್ನು ಕಟ್ಟಿಕೊಂಡಿರುವುದು ತಿಳಿಯುತ್ತದೆ. ಆದರೆ ಅವರು ಪಟ್ಟಣ ಪ್ರದೇಶದಲ್ಲಿ ವಾಸವಾಗಿ ತಮ್ಮ ಹಳ್ಳಿಯ ಬಾಂಧವರ ಬಗೆಗೆ ಯೋಚನೆ ಮಾಡುವುದಿಲ್ಲ. ಮತ್ತಲ್ಲಿಯ ಒಳಗುಂಪುಗಳ ಭೇದವೂ ಇದಕ್ಕೆ ಕಾರಣವಾಗುತ್ತದೆ.

ಇತ್ತೀಚಿನ ಕೆಲದಿನಗಳಂತೆ ಆಧುನಿಕ ಜೀವನದ ಸಂಪರ್ಕಹೊಂದಿ ತಮ್ಮ ಜೀವನ ವ್ಯವಸ್ಥೆ, ದುಡಿಮೆಯ ವಿಧಾನಗಳು, ನಂಬಿಕೆ ನ್ಯಾಯ ನಿರ್ಣಯ, ಶುಚಿಯಾದ ಹಾಗೂ ಸಂಘಟಿತ ಜೀವನದ ಕಡೆ ಒಲಿಯುತ್ತಿರುವುದು ಶುಭ ತರುವ ಯೋಜನೆಗಳಾಗಿದೆ. ಹೈದರಾಬಾದ್ ಕರ್ನಾಟಕದ ಎಲ್ಲಾ ಕೊರವರು ತಮ್ಮ ಬೇಡಿಕೆ ಆಸೆ–ಆಕಾಂಕ್ಷೇಗಳನ್ನು ಸರಕಾರಕ್ಕೆ ಒಪ್ಪಿಸಲು, ಇದೇ ಜನಾಂಗದ ಮುಖಂಡರು, ಸಂಘ ಸಂಸ್ಥೆಯ ನಾಯಕರು, ವಿದ್ಯಾರ್ಥಿಗಳು ಕೊರವ ಜನರು ಸೇರಿ ಉತ್ತಮ ಕಾರ್ಯವನ್ನು ಮಾಡುತ್ತಿದ್ದರೆ. ಕೊರವರ ಅಭಿವೃದ್ಧಿಗೆ ಸಕಾರಣದಿಂದ ಅನುಧಾನ ಬರಬೇಕೆಂದು ಕೇಳಿಕೊಳ್ಳುವುದು ಒಂದು ಒಳ್ಳೆಯ ಯೋಜನೆ ಎಂದು ನನ್ನ ಅಭಿಪ್ರಾಯ.

ನನ್ನ ಕ್ಷೇತ್ರಕಾರ್ಯದ ಅನುಭವದ ಹಿನ್ನೆಲೆ ಮತ್ತು ವಕ್ತೃಗಳು ನೀಡಿದ ಮಾಹಿತಿಯ ಮೂಲಕ ವರ್ತಮಾನದಲ್ಲಿ ಮಹಿಳೆಯರು ಹೇಗಿದ್ದಾರೆ ಎಂಬುದನ್ನು ತಿಳಿದುಕೊಳ್ಳಲಾಗಿದೆ. ಹಲವಾರು ಪ್ರದೇಶ ಗಳನ್ನು ಸುತ್ತಿ ೮೦-೯೦ ವರ್ಷಗಳ ಹಿಂದೆ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಅರೆ ಅಲೆಮಾರಿಗಳಾಗಿ ನೆಲೆ ನಿಂತಿರುವ ಕೊರವರ ಸ್ಥಿತಿಯು ಶೋಚನೀಯವಾಗಿದೆ. ತಮ್ಮ ಜೀವನೋಪಾಯಕ್ಕಾಗಿ ಪರಂಪರೆಯಿಂದ ನಂಬಿಕೊಂಡು ಬಂದ ಭಿಕ್ಷೆ ಮತ್ತು ಬೇಟೆಗೆ ವರ್ತಮಾನದಲ್ಲಿ ಕಾನೂನುಗಳ ತೊಡಕಿನಿಂದ ಜೀವನದ ದಾರಿಗಳು ಮುಚ್ಚಿದಂತಾಗಿ, ಅನಿವಾರ್ಯವಾಗಿ ಕೊರವರು ಹೊಸ ಕಸಬುಗಳನ್ನು ಆಶ್ರಯಿಸಬೇಕಾಗಿ ಬಂದಿತು. ಅಕ್ಷರಜ್ಞಾನವಿಲ್ಲದ ಇದರ ಜೀವನ ನಿರ್ವಹಣೆಗಾಗಿ ಬೇಕಾದ ಜ್ಞಾನಕ್ಕೇನು ಕೊರತೆಯಿಲ್ಲ. ವಾಲಗ ಊದಿ, ಬುಟ್ಟಿವ್ಯಾಪಾರ ಮಾಡಿ, ಅಂಗಡಿಗಳಲ್ಲಿ ಕೆಲಸ ಮಾಡಿಯಾದರೂ ಬದುಕುತ್ತಾರೆ. ಅಲೆಮಾರಿ ಬದುಕಿನ ಸಂದರ್ಭದಲ್ಲಿ ಆಹಾರಕ್ಕಾಗಿ ಕಾಡು ಮೇಡುಗಳಲ್ಲಿ ಬೇಟೆಯನ್ನು ಅವಲಂಬಿಸಿದ್ದ ಇವರಿಗೆ ಕಾಡು ನಾಡಾಗಿ ಪರಿವರ್ತನೆಯಾಗುತ್ತಿರುವ ಇಂದಿನ ಸಂದರ್ಭದಲ್ಲಿ ನಾಡಿನೊಂದಿಗೆ ಅನಿವಾರ್ಯವಾಗಿ ಸಂಪರ್ಕ ಬೆಳೆಸಿಕೊಳ್ಳಬೇಕಾಗುತ್ತದೆ. ಇಂದಿಗೂ ತಮ್ಮ ಕಸುಬಿಗೆ ಬೇಕಾದ ಸಾಮಗ್ರಿಗಳನ್ನು ತರಲು ಬೇರೆ ಬೇರೆ ರಾಜ್ಯಗಳಿಗೆ ಹೋಗಿ ಅಲೆಮಾರಿಗಳಾಗಿ ವಾಸಿಸಿ ಅವುಗಳನ್ನು ತೆಗೆದುಕೊಂಡು ಬರಬೇಕಾಗುತ್ತದೆ. ವರ್ತಮಾನದಲ್ಲಿ ನಗರ ಪ್ರದೇಶ ಮತ್ತು ಅದರ ಅಕ್ಕಪಕ್ಕದ ಹಳ್ಳಿಗಳಲ್ಲಿ ವಾಸಿಸುತ್ತಿದ್ದು ಜೀವನ ನಿರ್ವಹಣೆಗಾಗಿ ಹತ್ತಾರು ಕೆಲಸಗಳನ್ನು ಮಾಡಬೇಕಾಗಿದೆ.

ಮಾನವ ಸಮಾಜದಲ್ಲಿ ನಿತ್ಯ ಪರಿವರ್ತನಶೀಲವಾಗುತ್ತಿದ್ದಾನೆ. ಚೇತನಶೀಲವಾದುದು ಯಾವತ್ತೂ ಇಂತಹ ಬದಲಾವಣೆಗಳಿಗೆ ಒಳಗಾಗುತ್ತಿರುತ್ತದೆ. ಇದು ಈ ಸಮುದಾಯಗಳ ಜೀವಂತಿಕೆ ಲಕ್ಷಣವು ಕೂಡ ಆಗಿದೆ. ಹೀಗಾಗಿ ಮಾನವ ಸಮುದಾಯದಲ್ಲಿ ಆದಿ ಸ್ಥಿತಿಯಿಂದ ಇವತ್ತಿನ ಕಂಪ್ಯೂಟರ್ ಯುಗದವರೆಗೆ ಹಲವಾರು ಬದಲಾವಣೆಗಳಿಗೆ ಒಳಗಾಗುತ್ತಿವೆ. ಅದರಲ್ಲಿ ಇವರನ್ನೂ ಸಹ ಕಾಣಬಹುದು. “ಭಾರತದ ಸಮಾಜದ ಜೀವನ ಚಿತ್ರ ಸದ್ಯಕ್ಕೆ ಈ ದೇಶದ ಎಲ್ಲಾ ವಿಚಾರಗಳೂ, ವ್ಯವಸ್ಥೆಗಳೂ, ಅರೆಬೆಂದ ಕಾಳಿನಂತೆ ನುಂಗಲೂ ಆಗದೆ, ಉಗಿಯಲೂ ಆಗದ ಸ್ಥಿತಿ. ಬೆಂಕಿಯ ಕಂಡುಹಿಡಿಯುವಿಕೆ ಮನುಷ್ಯ ಕುಲದ ಇತಿಹಾಸದಲ್ಲಿ ಒಂದು ಹೊಸ ಯುಗಕ್ಕೆ ನಾಂದಿಯಾದಂತೆಯೇ ವಿದ್ಯುತ್ ಉತ್ಪಾದನೆ ವಿಜ್ಞಾನ ಯುಗದ ಇನ್ನೊಂದು ಪ್ರಮುಖ ಘಟ್ಟ. ಈ ಬೆಂಕಿ ಮತ್ತು ವಿದ್ಯುತ್ ನಡುವಿನ

ಎರಡು ಸ್ಥಿತಿಗಳನ್ನು ಉಳಿಸಿಕೊಂಡಿರುವ ಭಾರತದ ಜನಜೀವನವನ್ನು ಸೂಕ್ಷ್ಮವಾಗಿ ಗಮನಿಸಿದರೆ ನಮ್ಮ ಗಿರಿಜನರು ಇನ್ನೂ ಬೆಂಕಿಯ ಸ್ಥಿತಿಯಲ್ಲೂ ಮುಂದುವರಿದವರು ವಿದ್ಯುತ್ ಸ್ಥಿತಿಯಲ್ಲೂ ಇದ್ದಾರೆ ಎಂದು ಸಾಂಕೇತಿಕವಾಗಿ ಹೇಳಬಹುದು".[೭]

೧.೩ ಅಧ್ಯಯನದ ವ್ಯಾಪ್ತಿ

ಕೊರವ ಸಮುದಾಯದ ಮಹಿಳೆ ಎಂಬ ಈ ಪ್ರಬಂಧಕ್ಕೆ ಪ್ರಾಥಮಿಕ ಆಕರವಾಗಿ, ಅವಶ್ಯಕತೆಗಾಗಿ ನನ್ನ ಅಧ್ಯಯನದ ವ್ಯಾಪ್ತಿಯನ್ನು ಕರ್ನಾಟಕದ ಬಳ್ಳಾರಿ ಜಿಲ್ಲೆಗೆ ಸೀಮಿತ ಮಾಡಿಕೊಂಡಿದ್ದೇನೆ. ಇಲ್ಲಿನ ಕೊರವ ಮಹಿಳೆಯರ ಕುರಿತು ಇದುವರೆಗೂ ಯಾವುದೇ ಅಧ್ಯಯನಗಳು ನಡೆದಿಲ್ಲ. ಆದ್ದರಿಂದ ಮಹಿಳೆಯ ಬಗೆಗೆ ಹಲವು ದೃಷ್ಟಿಗಳಿಂದ ಇಂತಹ ಒಂದು ಅಧ್ಯಯನವು ಅನಿವಾರ್ಯ ವಾಗುತ್ತದೆ. ನನಗೆ ದೊರೆತ ಕ್ಷೇತ್ರಕಾರ್ಯದ ಮಾಹಿತಿಯಿಂದ ಭಾಷಿಕ, ಸಾಹಿತ್ಯಿಕ, ಶೈಕ್ಷಣಿಕ ಇತ್ಯಾದಿಯಾಗಿ ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಇಲ್ಲಿನ ಅಧ್ಯಯನವು ಮಹಿಳೆಯ ಆರ್ಥಿಕ, ಸಾಮಾಜಿಕ ಸ್ಥಿತಿಗತಿಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಮೊದಲನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವವನ್ನು ತಿಳಿಸಲಾಗಿದೆ. ಜಗತ್ತಿನಾದ್ಯಂತ ಮಹಿಳೆ ಎರಡು ಕಡೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾಳೆ ಒಂದು ಜೈವಿಕ ಸಂತಾನೋತ್ಪತ್ತಿ ಇನ್ನೊಂದು ಉತ್ಪಾದನಾ ಕೆಲಸಗಳಲ್ಲಿ ತೊಡಗಿದ್ದಾಳೆ. ಕುಟುಂಬದ ಸದಸ್ಯರನ್ನು ಪೋಷಿಸಿ ಪ್ರೋತ್ಸಾಹಿಸುತ್ತಾಳೆ. ಕಾಡುಗಳಲ್ಲಿ ಹೋಗಿ ಮಹಿಳೆಯು ಸೌದೆ, ಹಣ್ಣುಗಳನ್ನು ಸಂಗ್ರಹಣೆ ಮಾಡುತ್ತಾಳೆ, ವ್ಯಾಪಾರ, ವ್ಯವಹಾರಗಳಲ್ಲಿ, ಗೃಹ ಕೆಲಸಗಳಲ್ಲಿ ಪಾಲ್ಗೊಳ್ಳುತ್ತಾಳೆ. ಆದರೆ ಹೊಸ ಆರ್ಥಿಕ ನೀತಿ, ತಂತ್ರಜ್ಞಾನ ಈ ಮಹಿಳೆಯ ದುಡಿಮೆ ಮೇಲೆ ಅಪಾರವಾದ ತೊಂದರೆಗಳನ್ನು ತಂದೊಡ್ಡಿದೆ ಎಂದು ಹೇಳಬಹುದು. ಇದರಿಂದಾಗಿ ಮಹಿಳೆಯ ಆರ್ಥಿಕ ಸಂಪತ್ತು, ಕೆಲಸದ ಆದಾಯ ಕಡಿಮೆಯಾಗಿ ಕೆಲಸದ ಭಾರ ಅಧಿಕವಾಗಿದೆ. ಇವರಿಗೆ ಶಿಕ್ಷಣದ ಅರಿವು ಇಲ್ಲದಿರುವುದರಿಂದ ಜಾಗತೀಕರಣದಲ್ಲಿ ಬದುಕುವುದು ಶೋಚನೀಯ ಸಂಗತಿ. ಏಕೆಂದರೆ ಬುಟ್ಟಿ ಕಸಬಾರಿಗೆ, ಪಾತ್ರೆ ವ್ಯಾಪಾರ, ಬೇರೆ ಬೇರೆ ಕೆಲಸಗಳಲ್ಲಿ ಕೈಗಾರೀಕರಣದ ಪ್ರಭಾವ ಬಂದಿದ್ದರಿಂದ ಆದಾಯವು ಕಡಿಮೆಯಾಗಿ ಜೀವನಮಟ್ಟವು ಕಡಿಮೆಯಾಗುತ್ತಿದೆ.

ಭಾರತದ ಅನೇಕ ಬುಡಕಟ್ಟು ಸಮುದಾಯದಲ್ಲಿ ಒಂದಾದ ಕೊರವ ಸಮುದಾಯ ತಮ್ಮ ಬದುಕಿನ ವೈವಿಧ್ಯತೆಯಿಂದಾಗಿ ಅತಿ ಪ್ರಾಚೀನ ಕಾಲದಿಂದಲೂ ಜನಮನ ಸೆಳೆಯುತ್ತಾ ತಮ್ಮದೇ ಆದ ಕಟ್ಟುಪಾಡುಗಳೊಂದಿಗೆ ಬದುಕುತ್ತಾ ಬಂದಿದ್ದಾರೆ. ಇವರ ಮೂಲ ಸ್ವರೂಪ ಅಥವಾ ಜಾನಪದೀಯ ಅಂಶಗಳು ಕಾಲಾಂತರದ ಸಾಮಾಜಿಕ ಬದಲಾವಣೆಗಳಿಂದಾಗಿ ದಿನದಿಂದ ದಿನಕ್ಕೆ ಮರೆಯಾಗುತ್ತಾ ಹೋಗುತ್ತಿದೆ. ಆದ್ದರಿಂದ ಪ್ರತಿಯೊಂದು ಬುಡಕಟ್ಟಿನ ಮಾನವ ಸೃಷ್ಟಿ ಮತ್ತು ಸಂಸ್ಕೃತಿಯ, ಮಹಿಳೆಯ ಅಧ್ಯಯನಗಳು ಇಂದು ಅಗತ್ಯವಾಗಿ ಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಸಮುದಾಯದ ಮಹಿಳೆಯ ಜೀವನ ಕ್ರಮದ ಹಿನ್ನೆಲೆಯನ್ನು ಸೂಕ್ಷ್ಮವಾಗಿ ಅವಲೋಕಿಸಿ ಅವರ

ಬದುಕಿನ ಬಗ್ಗೆ ಅಭ್ಯಸಿಸಲಾಗಿದೆ. ಕಾರಣ ಇಂದು ಹೊಸ ಸಮಾಜವೊಂದನ್ನು ನಿರ್ಮಿಸುವ ಕಾರ್ಯದಲ್ಲಿ ನಾವೆಲ್ಲ ತೊಡಗಿರುವುದರಿಂದ ಅದಕ್ಕೆ ಬೇಕಾದ ಮೌಲ್ಯಗಳನ್ನು ಇಂದಿನ ಆ ಸಮಾಜ ಅಧ್ಯಯನದಿಂದ ರೂಢಿಸಿಕೊಳ್ಳಬೇಕಾಗಿದೆ.

ಈ ಹಿಂದೆ ನಡೆದ ಅಧ್ಯಯನದ ಪ್ರಕಾರ ಇದುವರೆಗೆ ಈ ಸಮುದಾಯದ ಮೇಲೆ ಬೆರಳೆಣಿಕೆಯ ಅಧ್ಯಯನಗಳು ಮಾತ್ರ ನಡೆದಿದೆ. ಅಧ್ಯಯನದ ದೃಷ್ಟಿಕೋನ ವಿಭಿನ್ನ ರೀತಿಯಾಗಿದೆ. ಅಂದರೆ ಪುರುಷ ಪ್ರಾಧಾನ್ಯತೆಗೆ ಬೆಲೆ ಕೊಟ್ಟು ಆ ಬಗ್ಗೆ ಪ್ರತಿಯೊಂದು ಹಂತದಲ್ಲಿ ಸಂಶೋಧನೆ ನಡೆಯುವ ಹಿನ್ನೆಲೆಯಿದೆ. ಆದರೆ ಈ ಸಮುದಾಯದ ಮಹಿಳೆಯ ಸ್ಥಿತಿಗತಿಗಳ ಬಗೆಗೆ, ಜೊತೆಗೆ ಇವರ ಸ್ಥಾನಮಾನ ಹಾಗೂ ಅವರ ಆಧುನಿಕ ಸವಾಲುಗಳನ್ನು ವಿಶ್ಲೇಷಿಸಿ ಅಧ್ಯಯನ ಮಾಡುವುದು ಈ ಅಧ್ಯಯನದ ಸಂದರ್ಭದಲ್ಲಿ ಸಂಶೋಧನಾ ವಿಧಾನಗಳಾದ ಪ್ರಶ್ನಾವಳಿ ಕೇಳುವುದರ ಮೂಲಕ ಅವಲೋಕನ ದತ್ತಾಂಶಗಳ ಸಂಗ್ರಹಣೆ, ಸಂದರ್ಶನ ಇನ್ನು ಇತರೆ ಆಕರಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಮಹಿಳೆಯರನ್ನು ನೋಡಲಾಗಿದೆ. ಈ ಸಮುದಾಯದ ಮಹಿಳೆಯರು ಶೈಕ್ಷಣಿಕವಾಗಿ ಯಾವ ರೀತಿಯಲ್ಲಿದ್ದಾರೆ ಮತ್ತು ಮಾನವ ಸಮಾಜದ ಮಾನವ ನಿರ್ಮಾಣದ ಕಾರ್ಯದಲ್ಲಿ ಮಹಿಳೆಯರ ಪಾತ್ರ ಹೇಗಿದೆ ಎಂಬುದು ಮುಖ್ಯವಾದದ್ದು.

ಎರಡನೇ ಅಧ್ಯಾಯದಲ್ಲಿ ಮುಖ್ಯವಾಗಿ ಕೊರವರ ಸ್ಥೂಲ ವಿವರಣೆ ನೀಡಲಾಗಿದೆ. ಯಾವ ಯಾವ ವಿದ್ವಾಂಸರು ಇವರ ಬಗೆಗಿನ ಮಾಹಿತಿಯನ್ನು ನೀಡಿದ್ದಾರೆ, ಅವುಗಳ ಅಧ್ಯಯನ ನಡೆದು ಬಂದ ಬಗೆ, ಜೊತೆಗೆ ಪೌರಾಣಿಕವಾಗಿ ದೊರೆಯುವ ಕಥೆಗಳನ್ನು, ಐತಿಹ್ಯಗಳನ್ನು ಇಲ್ಲಿ ನೋಡಬಹುದು ಈ ಸಮುದಾಯದವರು ಇತರ ಜನಾಂಗಗಳ ಜೊತೆಗೆ ಬೇರೆಯದೇ ತಮ್ಮ ಪ್ರತ್ಯೇಕತೆಯನ್ನು ಕಾಪಾಡಿಕೊಂಡಿದ್ದಾರೆ. ಇವರು ಅನುಸರಿಸಿದ ಜೀವನ ವಿಧಾನ, ಆಡುತ್ತಿರುವ ಭಾಷೆ ಮತ್ತು ಆಚರಣೆಗಳು ಜಾನಪದ ಸಂಸ್ಕೃತಿಗೆ ಕೊಟ್ಟ ಕೊಡುಗೆ ಆಗಿದೆ. “ಸಾಮಾನ್ಯವಾಗಿ ಜನಪದ ಸಂಸ್ಕೃತಿ ಎನ್ನುವುದು ಇಂಥ ಎಲ್ಲ ಬುಡಕಟ್ಟು ಸಮುದಾಯದ ಉಪಸಂಸ್ಕೃತಿಗಳ ಮೊತ್ತವಾಗಿದೆ. ಈ ನಿಟ್ಟಿನಿಂದ ನೋಡಿದಾಗ ‘ಜನಪದ ಸಂಸ್ಕೃತಿ’ ಬೇರೆಯಲ್ಲ ಜನಪದ ಬೇರೆಯಲ್ಲ. ಏಕೆಂದರೆ ಜಾನಪದ ಎಂಬುದು ಜನಪದದ ಸಮಗ್ರ ನಾಗರಿಕತೆಯನ್ನು ಅದರ ಕಲೆಗಳನ್ನು ಅಂತ ಅದರ ಉಡುಗೆ, ತೊಡುಗೆ ಆಚರಣೆಗಳನ್ನು, ಮೂಢನಂಬಿಕೆಗಳನ್ನು ಮತ್ತು ಉಪಕರಣಗಳನ್ನು ಒಳಗೊಂಡಿದೆ”[೮] ಎಂಬ ಅಂಶವನ್ನು ತಿಳಿಸುತ್ತದೆ. ಈಗಿನ ಸಂದರ್ಭದಲ್ಲಿ ಕರ್ನಾಟಕ ಬುಡಕಟ್ಟುಗಳ ಲಕ್ಷಣಗಳ ಅರ್ಥಗಳನ್ನು ಒಳಗೊಂಡು ಅವರಂತೆ ಜೀವನ ಕ್ರಮವನ್ನು ಅನುಸರಿಸುತ್ತಿರುವ ಹಾಗೂ ಜನಸಂಖ್ಯೆಯ ದೃಷ್ಟಿಯಿಂದ ಕೊರವ ಸಮುದಾಯದವರು ಪ್ರಮುಖರಾಗುತ್ತಾರೆ. ಈ ಸಮುದಾಯದವರು ತಮ್ಮ ಪೂರ್ವಜರ, ಆಚಾರ-ವಿಚಾರ, ಸಂಪ್ರದಾಯ, ನಂಬಿಕೆ ರೂಢಿಗಳಿಂದ ಸ್ವಲ್ಪ ಬದಲಾವಣೆಯನ್ನು ಕಾಣುತ್ತೇವೆ. ಎಲ್ಲವೂ ಬದಲಾವಣೆಯಾಗಿಲ್ಲ. ಮಹಿಳೆಯರು ಪುರುಷನಂತೆ ಕೆಲಸ ಕಾರ್ಯಗಳಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ.

ಮಾನವ ಸಂಸ್ಕೃತಿಯ ಇತಿಹಾಸದಲ್ಲಿ ಹೆಣ್ಣಿಗೆ ಒಂದು ವಿಶಿಷ್ಟ ಸ್ಥಾನಮಾನವಿದೆ. ಮಾನವಶಾಸ್ತ್ರಜ್ಞರು ಕಂಡುಕೊಂಡಂತೆ ಆದಿಮಾನವ ಸಮಾಜದ ಕುಟುಂಬ ಪರಿಕಲ್ಪನೆ ತಾಯಿ ಮತ್ತು ಮಕ್ಕಳದು. ಮಗುವನ್ನು ಹಡೆದ ತಾಯಿಯೊಂದಿಗೆ ಗುರುತಿಸಲಾಗುತ್ತಿತ್ತೆ ಹೊರತು ಪ್ರೇರಕನಾದ ತಂದೆಯೊಂದಿಗಲ್ಲ. ಮಗುವಿನ ಮೇಲಿನ ಹಕ್ಕು ಹತ್ತು ತಿಂಗಳ ಹೆತ್ತು ಹೊತ್ತು ಹಾಲುಣಿಸುವ ತಾಯಿಯದಾಗಿತ್ತು ಹೀಗಾಗಿ ಕುಟುಂಬದಲ್ಲಿನ ತಾಯಿ ಅತ್ಯಂತ ಪ್ರಮುಖ ಹಾಗೂ ಗೌರವದ ಸ್ಥಾನ ಪಡೆದಿದ್ದಾಳೆ. ಮಗು ತನ್ನ ಬಾಲ್ಯಾವಸ್ಥೆಯನ್ನು ಬಹುತೇಕವಾಗಿ ತಾಯಿಯ ಜೊತೆಯಲ್ಲಿ ಕಳೆಯುತ್ತದೆ. ಮಗುವು ತಾಯಿಯಿಂದ ಪಡೆಯುವ ವ್ಯಕ್ತಿತ್ವದ ಸ್ವರೂಪವನ್ನು 'ನೂಲಿನಂತೆ ಸೀರೆ, ತಾಯಿಯಂತೆ ಮಕ್ಕಳು' ಎನ್ನುವ ಗಾದೆ ವಿವರಿಸುತ್ತದೆ. ಮಹಿಳೆಯು ಹಿಂದಿನಿಂದ ಬಂದಂತಹ ಸಂಪ್ರದಾಯ, ಆಚರಣೆಗಳನ್ನು ಕ್ರಮವಾಗಿ ಪಾಲಿಸಬೇಕಾಗುತ್ತದೆ. ಸಂಸ್ಕೃತಿ, ಧರ್ಮವನ್ನು ಪಾಲಿಸಬೇಕಾಗುತ್ತದೆ.

ಮೂರನೇ ಅಧ್ಯಾಯದಲ್ಲಿ ಕೊರವ ಸಮುದಾಯದ ಆಚರಣೆಗಳು ರೂಢಿ ಸಂಪ್ರದಾಯಗಳ ಬೆಡಗುಗಳು ಮುಖ್ಯವಾಗುತ್ತವೆ. ಸಮುದಾಯದಲ್ಲಿ ಬಾಲ್ಯವಿವಾಹಗಳೇ ಅಧಿಕ ಎಂದು ಹೇಳ ಬಯಸುತ್ತೇನೆ. ಇಲ್ಲಿಂದಲೇ ಅವಳಿಗೆ ಆಚಾರ, ವಿಚಾರಗಳ, ಬಗೆಗೆ ತಿಳುವಳಿಕೆ ಮೂಡುತ್ತಾ ಹೋಗುತ್ತದೆ. ಮಹಿಳೆಯರು ಇಂತಹ ಆಚರಣೆ ಸಂಪ್ರದಾಯಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಮಹಿಳೆಯು ಯಾವ ಯಾವ ಸಂದರ್ಭದಲ್ಲಿ ಯಾವ ರೀತಿ ಇರಬೇಕು ಎಂಬುದನ್ನು ತಿಳಿಸಲಾಗುವುದು. ಹಬ್ಬ ಹರಿದಿನಗಳು, ನಿಷೇಧಗಳು, ನಂಬಿಕೆಗಳ ಬಗ್ಗೆ ತಿಳಿಸಲಾಗಿದೆ. ಉಟೋಪಚಾರ, ವಿವಾಹ, ಶವಸಂಸ್ಕಾರ ಮೊದಲಾದ ಜೀವನಾವರ್ತನ ಮತ್ತು ವಾರ್ಷಿಕಾವರ್ತನದ ಬಗೆಗೆ ತಿಳಿಸಲಾಗಿದೆ. ಪ್ರತಿಯೊಂದು ಜಾತಿಗಳಲ್ಲಿಯೂ ಧರ್ಮ, ಪ್ರದೇಶ, ಭಾಷೆ ಮತ್ತು ಸಂಪ್ರದಾಯಗಳನ್ನು ಕಾಣಬಹು ದಾಗಿದೆ.

ಬಾಲ್ಯದಿಂದ ಯೌವನಕ್ಕೆ, ಮದುವೆ ಪೂರ್ವದಿಂದ ಮದುವೆಯ ಅನಂತರಕ್ಕೆ, ಜೀವದಿಂದ ಸಾವಿಗೆ ಹೀಗೆ ಇದು ಪ್ರದೇಶದಿಂದ ಪ್ರದೇಶಕ್ಕೆ ಜನಾಂಗದಿಂದ ಜನಾಂಗಕ್ಕೆ ವ್ಯತ್ಯಾಸವಾಗುತ್ತಾ ಇರುತ್ತದೆ. ಹೆಂಗಸರಲ್ಲಿ ಈ ಸ್ಥಿತ್ಯಂತರಗಳು ಹೆಚ್ಚು. ಬಾಲ್ಯ, ಮೈನೆರೆಯುವಿಕೆ, ಮದುವೆ, ಸೀಮಂತ, ಸಾವು ಹೀಗೆ ಅದು ಅಗತ್ಯವಾದ ಹಾದಿಗಳನ್ನು ನಿರ್ಮಿಸಿಕೊಂಡಿದೆ. ಈ ಜೀವನಾವರ್ತನಗಳಲ್ಲಿ ಮಾನವನು ಬದಲಾಗುವ ಸ್ಥಿತಿಯನ್ನು ಕಾನೂನು ಬದ್ಧಗೊಳಿಸಿಕೊಳ್ಳಲು ತನ್ನ ಸಹ ಮಾನವರ ಜೊತೆ ಸೇರಿಕೊಂಡು ಬಗೆ ಬಗೆಯ ಆಚರಣೆಗಳನ್ನು ರೂಢಿಸಿಕೊಂಡಿದ್ದಾನೆ. ಒಂದು ಜನಾಂಗದ ಮಾನಸಿಕ ಸ್ಥಿರತೆಯನ್ನು ಇವು ಕಾಪಾಡಿಕೊಂಡು ಬರುತ್ತವೆ. ಹಸಿವಿನ ಪೂರೈಕೆ ಮತ್ತು ವಂಶದ ಬೆಳವಣಿಗೆ ಎರಡು ಆವರ್ತನೆಗಳು ಪರಸ್ಪರ ಪ್ರಭಾವಕ್ಕೆ ಒಳಗಾಗಿ ಒಂದು ಕುಟುಂಬದ ಜೀವನಕ್ರಮವನ್ನು ರೂಪಿಸುತ್ತದೆ. ಆ ಜೀವನಕ್ರಮ ಆಯಾ ಕುಟುಂಬದ ಶಿಷ್ಟವನ್ನು ನಿರ್ಧರಿಸುತ್ತದೆ. ಅದು ಅಡುಗೆ, ವಸತಿ, ಉಡುಪು, ಸಂಬಂಧ ನಿರ್ಧಾರ, ಭಾಷೆ, ನಿಷೇಧಗಳು, ನಂಬಿಕೆ, ಗಾದೆ, ಒಗಟು, ಹಾಡು, ಯಾರು ಯಾರಲ್ಲಿ ಹೇಗೆ ವ್ಯವಹರಿಸಿದರೆ ಚೆನ್ನ ಎಂಬಿತ್ಯಾದಿಗಳನ್ನು ವಿವೇಚಿಸುತ್ತದೆ (ಕರಾವಳಿ ಜಾನಪದ, ೧೯೯೦, ಡಾ ಪುರುಷೋತ್ತಮ ಬಿಳಿಮಲೆ).

ನಿರ್ದಿಷ್ಟ ದೈವವೊಂದರ ದೇಗುಲವನ್ನು ಕೇಂದ್ರ ಮಾಡಿಕೊಂಡು ಜಾತ್ರೆ ನಡೆಯುತ್ತದೆ. ಕೆಲವು ಕಡೆ ದೇಗುಲವೂ ಇರುವುದಿಲ್ಲ. ಕಟ್ಟೆ, ಹುತ್ತ, ಮರ, ಗೋರಿ, ಕಾಡುಕಲ್ಲುಗಳು ದೈವ ಕೇಂದ್ರವಾಗಿರುತ್ತವೆ. ಒಂದರಿಂದ ಹಲವಾರು ದಿನಗಳವರೆಗೆ ಜಾತ್ರೆಯ ವ್ಯಾಪ್ತಿಯಿರುತ್ತದೆ. ದೊಡ್ಡ ಸಂಖ್ಯೆಯಲ್ಲಿ ಜನಸಮೂಹ ಒಂದೆಡೆ ಸೇರುವುದರಿಂದ ನಾನಾ ರೀತಿಯ ಸಾಂಸ್ಕೃತಿಕ ವಿದ್ಯಮಾನಗಳು ನಡೆಯುವುದಕ್ಕೆ ಅವಕಾಶವಾಗುತ್ತದೆ. ದೈವಕ್ಕೆ ಸಂಬಂಧಪಟ್ಟ ನಿರ್ದಿಷ್ಟ ವಿಧಿಯಾಚರಣೆಗಳು ಸಂಪ್ರದಾಯಕ್ಕೆ ಅನುಗುಣವಾಗಿ ಪ್ರತಿ ಜಾತ್ರೆಯಲ್ಲಿ ಪುನರಾವೃತ್ತಿಯಾಗುತ್ತವೆಂಬುದು ನಿಜ. ಈ ವಿಧಿಕ್ರಿಯೆಗಳಲ್ಲಿ ಬದಲಾವಣೆ ಕಡಿಮೆ. ಆದರೆ ಇತರ ಸಾಂಸ್ಕೃತಿಕ ಮತ್ತುವ್ಯಾವಹಾರಿಕ ಚಟುವಟಿಕೆಗಳಲ್ಲಿ ಪರಿವರ್ತನೆಗಳು ತೀವ್ರವಾಗಿರುತ್ತವೆ. ಇಷ್ಟಾಗಿಯೂ ಹಳೆಯ ಲಕ್ಷಣಗಳು ಹೊಸದರ ಜತೆ ಬೆರೆತುಕೊಂಡೇ ಇರುತ್ತವೆ. ಹಾಗಾಗಿ ಜಾತ್ರೆಗಳು ಜನಸಮುದಾಯಗಳ ಹಿಂದಿನ ಜೀವನ ಲಕ್ಷಣಗಳನ್ನು ಅರಿಯಲು ದಾರಿ ಮಾಡಿಕೊಡುತ್ತವೆಂದು ಭಾವಿಸಲಾಗಿದೆ. ಸಾಮಾನ್ಯವಾಗಿ ಸಂಪ್ರದಾಯಶೀಲತೆಯ ಲಕ್ಷಣವೇ ಆ ಪರಿವರ್ತನೆಯಾದ್ದರಿಂದ, ಸೂಕ್ಷ್ಮವಾಗಿಯಾದರೂ ಸಂಪ್ರದಾಯಗಳಲ್ಲಿ ಬದಲಾವಣೆಗಳು ಕಾಲು ಹಾಕುತ್ತಿವೆ.

ನಾಲ್ಕನೇ ಅಧ್ಯಯನದಲ್ಲಿ ಕೊರವ ಸಮುದಾಯದ ಆರ್ಥಿಕ ವ್ಯವಸ್ಥೆ ಬಗೆಗೆ ತಿಳಿಸಲಾಗಿದೆ. ಸಮುದಾಯದ ಉತ್ಪಾದನೆ ವ್ಯವಸ್ಥೆ ಯಾವ ರೀತಿಯಲ್ಲಿದೆ. ಮಹಿಳೆಯರ ಆರ್ಥಿಕ ಚಟುವಟಿಕೆಗಳು, ಮಹಿಳೆಯರ ಆರ್ಥಿಕ ಒಡೆತನದಲ್ಲಿ ಪುರುಷ ಪಾತ್ರ ಇವೆಲ್ಲವನ್ನು ನೋಡಲಾಗಿದೆ. ಮಹಿಳೆಯರು ಎಷ್ಟೇ ದುಡಿದರೂ ಸಹ ಹಣ ಗಂಡನ ಕೈಗೆ ಹೋಗಬೇಕಾಗುತ್ತದೆ. ಆದರೆ ಜೀವನದ ಬದುಕಿಗೆ ಯಾವ ರೀತಿ ನಿರ್ವಹಣೆ ಮಾಡಬೇಕು. ಎಂಬುದು ಚಿಂತೆಯ ವಿಚಾರವಾಗಿದೆ. ಪಾತ್ರೆ ವ್ಯಾಪಾರ, ಹಣ್ಣು ವ್ಯಾಪಾರ, ಸೂಚಿ ಪಿನ್, ಕೂದಲು ವ್ಯಾಪಾರ, ಬಟ್ಟೆ ವ್ಯಾಪಾರ, ಸ್ವಸಹಾಯ ಗುಂಪಿನಲ್ಲಿ ತೊಡಗುವುದು ಮೊದಲಾದ ಕೆಲಸಗಳು ಕಂಡುಬರುತ್ತವೆ. ವರ್ಷ ಪೂರ್ತಿ ಒಂದಲ್ಲ ಒಂದು ಕೆಲಸದಲ್ಲಿ ತೊಡಗಿರುತ್ತಾಳೆ. ಸಂಸಾರವನ್ನು ನಡೆಸುವ ದೃಷ್ಟಿಯಿಂದ ಮಹಿಳೆಯು ಸದಾ ದುಡಿಯುತ್ತಿರುವುದು ಕಂಡುಬರುತ್ತದೆ. ಇಂದಿನ ದಿನಗಳಲ್ಲಿ ಗಂಡ ಹೆಂಡಿರೂ ದುಡಿದರೂ ಸಾಕಾಗುವುದಿಲ್ಲ. ಅದರಲ್ಲಿ ಅರ್ಧ ಭಾಗವನ್ನು ತನ್ನ ಖರ್ಚುಗಳಿಗೆ ಬಳಸಿಕೊಳ್ಳುತ್ತಾನೆ. ವಾಲಗ ಊದುವುದು, ವ್ಯಾಪಾರ ಮಾಡುವುದು, ಗುಜರಿ ವ್ಯಾಪಾರದಿಂದ ಬಂದ ಹಣದಿಂದ ಕುಡಿತ, ಜೂಜಾಟಗಳಿಗೆ ಬಲಿಯಾಗುತ್ತಾನೆ. ಈ ಸಮುದಾಯದಲ್ಲಿ ಎಷ್ಟೇ ವಿದ್ಯಾವಂತರಾದರೂ ಕೆಲವರು ತಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಕೆಲವು ವಿದ್ಯಾವಂತರು ಕುಟುಂಬದ ಜವಾಬ್ದಾರಿಗಳನ್ನು ಸ್ವಲ್ಪಮಟ್ಟಿಗೆ ಸುಧಾರಿಸಲು ಪ್ರಯತ್ನಿಸಿದ್ದಾರೆ.

ಈ ಸಮುದಾಯವು ಇತ್ತ ಸಂಪೂರ್ಣ ನಾಗರಿಕತೆಯ ತುದಿಯಲ್ಲಿರದೆ. ಗ್ರಾಮೀಣ ಸಂಸ್ಕೃತಿಯನ್ನು ಹೊಂದಿದ್ದು. ಪರಂಪರಾನುಗತವಾಗಿ ಬಂದ ಆಚರಣೆ, ನಂಬಿಕೆ, ಸಂಪ್ರದಾಯ, ಕಲೆಗಳನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಎಷ್ಟೇ ಪ್ರಭಾವ ಬೀರಿದರೂ ಸಹ ಆಚರಣೆಗಳು ನಿಂತಿಲ್ಲ, ನಡೆಯುತ್ತಿವೆ. ಗ್ರಾಮೀಣ ಬದುಕಾಗಲಿ, ಬುಡಕಟ್ಟು ಸಮುದಾವಾಗಲಿ, ನಾಗರಿಕ

ಸಂಸ್ಕೃತಿಯಾಗಲಿ, ವಾಸ್ತವ ಜಗತ್ತಿನಲ್ಲಿ ತಮ್ಮದೇ ಆದ ಸಂಸ್ಕೃತಿಯಲ್ಲಿ ಜಾನಪದವನ್ನು ಸಂಪೂರ್ಣವಾಗಿ ಜೀವಂತವಾಗಿರಿಸಿಕೊಂಡಿವೆ ಎಂದು ಹೇಳಲಿಕ್ಕಾಗುವುದಿಲ್ಲ. ಹೆಣ್ಣಿನ ಗತ ಶೋಧನೆ ಮಾಡಿದರೆ ಹೆಣ್ಣು ಯಾವಾಗ ಹಿಂದಿನ ಕಾಲದಿಂದಲೂ ಇಂದಿನವರೆಗೂ ಪುರುಷನ ಅಧೀನತೆಯಲ್ಲಿಯೇ ಇರುವುದು ಕಂಡುಬರುತ್ತದೆ. ಅಂದರೆ ಹೆಣ್ಣನ್ನು ಶಿಕ್ಷಣ ಕ್ಷೇತ್ರದಿಂದ ಹೊರಗಿಟ್ಟಿರುವುದು ಅವಳನ್ನು ಪುರುಷಾಧೀನವಾಗಿಸುವ ಕಾರ್ಯತಂತ್ರವೇ ಆಗಿತ್ತು.

ಐದನೇ ಅಧ್ಯಾಯದಲ್ಲಿ ಕೊರವ ಸಮುದಾಯದವರು ಆಧುನಿಕತೆಗೆ ಯಾವ ರೀತಿ ಹೊಂದಿಕೊಂಡಿದ್ದಾರೆ. ಮಹಿಳೆಯರ ವರ್ತಮಾನದ ಸವಾಲುಗಳು, ಬದಲಾವಣೆಯ ತವಕದಲ್ಲಿ ಮಹಿಳೆ ಎಂಬುದರ ಬಗೆಗೆ ಚರ್ಚಿಸಲಾಗಿತ್ತು ಕೊರವ ಸಮುದಾಯ ಆಧುನಿಕತೆ ಮತ್ತು ಗ್ರಾಮೀಣ ಎರಡರ ಮಧ್ಯ ಹೋರಾಟ ನಡೆಸುತ್ತಿದೆ. ಏಕೆಂದರೆ ಇವರಲ್ಲಿ ವಿದ್ಯಾವಂತರಾದವರು ಬಹಳ ಕಡಿಮೆ ಜನ ಇರುವುದರಿಂದ ತಮ್ಮ ಕಸುಬುಗಳಲ್ಲಿ ಇದರ ಪ್ರಭಾವವು ಅಧಿಕವಾಗಿ ಶೋಚನೀಯ ಬದುಕು ಸೃಷ್ಟಿಸಿದೆ. ಬೇರೆ ಬೇರೆ ಕೆಲಸಗಳ ಕಡೆಗೆ ವಾಲುವಂತಾಗಿದೆ. ಹಿಂದೆ ಕಸುಬುಗಳು ತಮ್ಮ ಜೀವನಾದಾರ ವಸ್ತುಗಳಾಗಿದ್ದವು. ಆದರೆ ಇಂದು ಇವುಗಳ ಬೇಡಿಕೆಯು ಕಡಿಮೆಯಾಗುತ್ತಿದೆ. ಏರುತ್ತಿರುವ ಬೆಲೆ, ತಂತ್ರಜ್ಞಾನದ ತಿಳುವಳಿಕೆ, ತಡೆಯಲಾಗದ ಬಡತನ, ಆರೋಗ್ಯದ ಕೊರತೆ ಮೊದಲಾದ ಸಮಸ್ಯೆಗಳು ಈ ಸಮುದಾಯದಲ್ಲಿ ಎದ್ದುಕಾಣುತ್ತವೆ. ತಮ್ಮದೇ ಆದ ಬದುಕಿನಲ್ಲಿ ಇಂದಿಗೂ ನಡೆಯುತ್ತಿರುವುದು ಈ ಸಮುದಾಯದವರಿಗೆ ಒಂದು ಸಂದಿಗ್ಧ ಪರಿಸ್ಥಿತಿಯಾಗಿದೆ ಎಂದು ಹೇಳಬಹುದು. ಬಾಲ್ಯವಿವಾಹ, ಸಂಸಾರದ ಭಾರ, ಶಿಕ್ಷಣದ ಭಾರಿ ಮೊತ್ತ ಇವರನ್ನು ಚಿಂತಿಗೀಡು ಮಾಡಿದೆ.

ವಸಾಹತುಶಾಹಿ ತಂದ ಕೆಲವು ಬದಲಾವಣೆಗಳು ನಮ್ಮನ್ನು ತಲ್ಲಣಗೊಳಿಸಿದರೆ ಮತ್ತೆ ಕೆಲವು ನಮ್ಮ ಅನಿಷ್ಟಗಳಿಂದ ಬಿಡುಗಡೆ ಪಡೆಯಲು ದಾರಿಯಾದವು ಎಂದು ಹೇಳಬೇಕಾಗುತ್ತದೆ. ಇದರಲ್ಲಿ ಮಹಿಳಾ ಸಮಸ್ಯೆಗಳು ಮುಖ್ಯವಾದವು. ಬಾಲ್ಯ ವಿವಾಹ ಬಹುಪತ್ನಿತ್ವ, ದೇವದಾಸಿಯರು, ಮುತ್ತು ಕಟ್ಟಿಸುವುದು, ಮಹಿಳೆಯ ಬದುಕಿನಲ್ಲಿ ಮುತ್ತಿಕೊಂಡ ಅನಿಷ್ಟಗಳನ್ನು ಹೊಡೆದೋಡಿಸಲು ಸ್ತ್ರೀ ಶಿಕ್ಷಣವನ್ನು ಪ್ರಧಾನವಾಗಿ ಕಂಡುಕೊಳ್ಳಲಾಗಿದೆ. ದೇಶೀಯ ಶಿಕ್ಷಣ ಕ್ರಮ ಅಳಿದು ಇಂಗ್ಲಿಷ್ ಶಿಕ್ಷಣ ಪದ್ಧತಿ ಕಾಲಿಟ್ಟಿದ್ದು ಮಹಿಳೆಯರ ಪಾಲಿಗೆ ಬಹುದೊಡ್ಡ ಕ್ರಾಂತಿಯಾಯಿತು. ಈ ಸಮುದಾಯದ ಮಹಿಳೆಯರಿಗೆ ಇದೊಂದು ಸವಾಲಾಗಿ ನಿಂತಿತ್ತು. ಒಂದು ಹೆಣ್ಣು ಶಿಕ್ಷಣವನ್ನು ಪಡೆಯುವಂತಾಗಲು, ಇನ್ನೊಂದು ಹೆಣ್ಣಿನ ಕುರಿತ ಚಿಂತನೆಯಲ್ಲಿ ಸ್ವಲ್ಪ ಬದಲಾವಣೆಯನ್ನು ಕಾಣಬಹುದು. ಇದು ಮಹಿಳಾ ಬದುಕಿಗೆ ಹೊಸ ದಿಕ್ಕನ್ನು ತೆರೆಯಿತು ಎಂದು ಹೇಳಬೇಕಾಗುತ್ತದೆ.

ಸಮುದಾಯದ ಮಹಿಳೆಯರ ಸ್ಥಾನಮಾನ, ಸೌಲಭ್ಯ, ವೈಚಾರಿಕತೆ ಹಾಗೂ ಬೌದ್ಧಿಕತೆಯ ಮೇಲೆ ಹಿಡಿತ ಸಾದಿಸಿದ ಪುರುಷಪ್ರಧಾನ ವ್ಯವಸ್ಥೆ ಸಡಿಲಗೊಳ್ಳದಿದ್ದರೆ ಸ್ತ್ರೀಯರ ಅಭಿವೃದ್ಧಿಯನು ಕುಂಠಿತಗೊಳ್ಳುತ್ತದೆ. ಈ ಕಾರಣದಿಂದ ಇಂದಿನ ಜಾಗತಿಕ ಸಂದರ್ಭದಲ್ಲಿ ಈ ಸಮುದಾಯದ

ಮಹಿಳೆಯರ ಅಧ್ಯಯನವು ಅತಿ ಅವಶ್ಯಕವಾಗುತ್ತದೆ. ಆದರೆ ಸ್ವತಂತ್ರ ಭಾರತದ ಸಂವಿಧಾನವು ಮೂಲಭೂತ ಸೌಕರ್ಯಗಳು, ಸಂರಕ್ಷಣೆ, ಇತರೆ ಅಂಶಗಳನ್ನು ಜಾರಿಗೆ ತಂದರೂ ಇವರಿಗೆ ತಲುಪದೆ ಕೇವಲ ಮೇಲ್ಜಾತಿಯ ಮಹಿಳೆಯರ ಪಾಲಿಗಿದೆ ಎಂದು ಹೇಳಬಹುದು. ಆದ್ದರಿಂದ ಇವರ ಸ್ಥಿತಿಗತಿ ಅಷ್ಟೊಂದು ಹೇಳಿಕೊಳ್ಳುವಂತಿಲ್ಲ. ಬಳ್ಳಾರಿ ಜಿಲ್ಲೆಯ ಕೊರವ ಸಮುದಾಯವು ಅತಿ ಹಿಂದುಳಿದ ವರ್ಗಗಳಲ್ಲಿ ಒಂದು ಎಂದು ಹೇಳಬೇಕಾಗುತ್ತದೆ. ಇದಕ್ಕೆ ಪ್ರಮುಖ ಕಾರಣ ಶಿಕ್ಷಣದ ಕೊರತೆ, ತಿಳುವಳಿಕೆಯ ಕೊರತೆ, ಮುಂದೆ ಬರುವ ಹಂಬಲ ಇಲ್ಲದಿರುವುದು. ಪ್ರಾಚೀನ ಕಾಲದಿಂದಲೂ ವೃತ್ತಿ ಧರ್ಮದ ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ. ಇವರಿಗೆ ಸರ್ಕಾರದ ಎಲ್ಲ ಸವಲತ್ತುಗಳಿದ್ದರೂ ಅದರಿಂದ ವಂಚಿತರಾಗಿದ್ದಾರೆ. ಇದಕ್ಕೆ ಪ್ರಮುಖ ಕಾರಣವೇ ಶಿಕ್ಷಣ. ಇವರು ಆಧುನಿಕತೆಗೆ ಹೊಂದಿಕೊಂಡು ಹೋಗುವುದಕ್ಕೆ ಕಷ್ಟವಾಗುತ್ತಿದೆ ಎಂದು ಹೇಳಬಹುದು.

ಕರ್ನಾಟಕದ ಕೊರವ ಸಮುದಾಯದ ಮಹಿಳೆಯ ಬಗೆಗೆ ಕುರಿತು ಇದುವರೆಗೆ ಈ ಭಾಗದಲ್ಲಿ ಯಾವುದೇ ಅಧ್ಯಯನ ನಡೆದಿಲ್ಲ. ಆದ್ದರಿಂದ ಈ ಅಧ್ಯಯನ ಪ್ರಸ್ತುತ ಜಾಗತಿಕ ಸಂದರ್ಭದಲ್ಲಿ ತುಂಬಾ ಅವಶ್ಯಕವಾಗಿದೆ. ಇಲ್ಲಿಯವರೆಗೆ ಕೊರವ ಸಮುದಾಯದ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಂಶೋಧನೆಗಳು ಮುಂದುವರೆದರೂ ಪ್ರಾದೇಶಿಕವಾಗಿ ಭಿನ್ನತೆಯ ವಿಚಾರ ಕಂಡುಬರುತ್ತವೆ. ಪುರಾತನ ಕಾಲದಿಂದಲೂ ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲಿಯೂ ಎಲೆ ಮರೆಯ ಕಾಯಿಯಂತೆ ದುಡಿಯುತ್ತಾ ಬಂದಿದ್ದಾರೆ. ಇಂದು ಸರ್ಕಾರದಲ್ಲಿ ಸಮುದಾಯದ ಸ್ತ್ರೀಯರ ಸ್ಥಾನಮಾನವನ್ನು ಹೋಲಿಕೆ ನೀಡಿದರೆ ಮೇಲ್ವರ್ಗದ ಸ್ತ್ರೀಯರೆ ಉತ್ತಮ ಸ್ಥಾನದಲ್ಲಿದ್ದಾರೆ ಎಂದು ಹೇಳಬಹುದು. ಆದರೆ ಈ ತರಹದ ಸಮುದಾಯ ಇವತ್ತಿಗೂ ಹಿಂದುಳಿದಿದೆ ಎಂದು ಹೇಳಬೇಕಾಗಿದೆ. ಮಹಿಳೆಯರು ಸರ್ಕಾರದಿಂದ ಯಾವ ಯಾವ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಎಂಬುದನ್ನು ಗುರುತಿಸುವುದು. ಪ್ರಸ್ತುತ ಯುಗವು ಜಾಗತೀಕರಣದಿಂದ ಕೂಡಿದ್ದು ಎಲ್ಲ ಕಡೆಯೂ ಇದರ ಪ್ರಭಾವ ಬೀರುತ್ತಿದೆ. ಆದ್ದರಿಂದ ಅನುಕೂಲವೂ ಇದೆ ಮತ್ತು ಅನನುಕೂಲವೂ ಇದೆ. ಅಂತಹದರಲ್ಲಿ ಈ ಪ್ರಭಾವಕ್ಕೆ ಬಲಿಯಾದವರು ಈ ಸಮುದಾಯದ ಮಹಿಳೆಯರು ಶೇ. ೯೫ರಷ್ಟು ಅನಕ್ಷರಸ್ಥರಾಗಿದ್ದಾರೆ ಎಂಬುದು ಸಂದರ್ಶನದಿಂದ ತಿಳಿದು ಬರುತ್ತದೆ. ಅವರಲ್ಲಿರುವ ಕಟ್ಟುಪಾಡುಗಳು, ನಂಬಿಕೆ ನಿಯಮಗಳು ಕಾರಣವಾಗುತ್ತದೆ. ಬಾಲ್ಯದಲ್ಲಿಯೇ ವಿವಾಹ ಮಾಡುವುದರಿಂದ ಹೆಣ್ಣಿಗೆ ಮುಂದೆ ಓದಲು ಅವಕಾಶವಾದರೂ ಎಲ್ಲಿ? ಆದರೆ ಗಂಡಿನ ಮನೆಯವರೂ ಒಪ್ಪಿಕೊಂಡರೆ ಮಾತ್ರ ಶಿಕ್ಷಣಕ್ಕೆ ಅವಕಾಶ. ಇಲ್ಲವಾದರೆ ಅವಳು ಮನೆಯ ನೈತಿಕ ಪಾಠಗಳನ್ನು ಕಲಿಯಬೇಕಾಗುತ್ತದೆ.

ಸಮುದಾಯದ ಬಗ್ಗೆ ಮತ್ತು ಮಹಿಳೆಯ ಜೀವನ ಯಾವ ರೀತಿಯಲ್ಲಿದೆ ಎಂಬುದನ್ನು ರಾಷ್ಟ್ರ, ಸಮಾಜ, ಸಮುದಾಯ ಜ್ಞಾನಶಾಖೆಗಳು ಇಂದು ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಇದರ ಜೊತೆಗೆ ಈ ಸಮುದಾಯದ ಸ್ತ್ರೀಯರು ಬೇರೆ ಸಮುದಾಯದ ಮಹಿಳೆಯರ ಜೊತೆಗೆ ಇರುವಂತಹ ಸಾಮಾಜಿಕ ಸಂಬಂಧಗಳು ಮತ್ತು ಕುಟುಂಬದಲ್ಲಿ ನಡೆಯುವ ಆಚರಣೆ ವಿಧಾನಗಳು, ಸಭೆ ಸಮಾರಂಭಗಳಲ್ಲಿ ಯಾವ ರೀತಿ ಭಾಗವಹಿಸುತ್ತಾಳೆ ಎಂಬುದನ್ನು ಚರ್ಚಿಸಲಾಗಿದೆ.

ಸ್ತ್ರೀ ಶಿಕ್ಷಣ ಮಹಿಳಾ ಸಮಾನತೆಯ ಹೊಸ ಇತಿಹಾಸದ ಕ್ರಿಯಾಶಕ್ತಿಯಾಯಿತು. ಗಾಂಧೀಜಿಯವರು ಸ್ತ್ರೀ ಸಮಾನತೆಗೆ ಸ್ತ್ರೀ ಶಿಕ್ಷಣ ಮೂಲ ಶಕ್ತಿಕೇಂದ್ರ ಎಂದು ಹೇಳಿದರೆ, ಅವರಿಗೆ ಮಹಿಳಾ ಶಕ್ತಿಯನ್ನು ತಮ್ಮ ಹೋರಾಟಕ್ಕೆ ಬಳಸಿಕೊಳ್ಳಲು ಸ್ತ್ರೀ ಶಿಕ್ಷಣ ಬಹಳ ಅಗತ್ಯವಾಗಿತ್ತು ಕೂಡ. ಅಂದಿನ ಕಾಲದಲ್ಲಿ ಸ್ತ್ರೀ ಶಿಕ್ಷಣದ ತುರ್ತು ಹೆಣ್ಣನ್ನು ಒಳ್ಳೆಯ ಗೃಹಿಣಿ ಮತ್ತು ತಾಯಿಯಾಗಿ ರೂಪಿಸುವ ಉದ್ದೇಶದ್ದಾಗಿತ್ತು. ಯಾಕೆಂದರೆ ಕುಟುಂಬ ಹಾಗೂ ಪರಿಸರದಲ್ಲಿ ರಾಷ್ಟ್ರಪ್ರಜ್ಞೆ ಮತ್ತು ರಾಷ್ಟ್ರಪ್ರೇಮವನ್ನು ಮೂಡಿಸುವಲ್ಲಿ ಹೆಣ್ಣಿನ ಪಾತ್ರ ಪ್ರಧಾನವಾದುದ್ದು ಎಂಬ ವಿಶ್ವಾಸ ಗಾಂಧೀಜಿಯವರದಾಗಿತ್ತು. ಎಲ್ಲಾ ಜಾತಿಯ ಸ್ತ್ರೀಯರ ಶಾರೀರಿಕ, ಮಾನಸಿಕ, ಬೌದ್ಧಿಕ ಬೆಳವಣಿಗೆಯಾಗಿ ಅವರು ಇನ್ನೊಬ್ಬರ ಮೇಲೆ ಅವಲಂಬಿತ ಬದುಕನ್ನು ನಡೆಸುವ ಪದ್ಧತಿ ತೊಡೆದು ಮಹಿಳೆಯರು ಸ್ವಾವಲಂಬನೆಗಳಾಗಬೇಕು ಎನ್ನುವುದು ಮಹಿಳೆಗೆ ಆಶಯವಾಗಿತ್ತು. ಇವರ ಈ ಸ್ವಾವಲಂಬನ ಸ್ಥಿತಿಗೆ ಶಿಕ್ಷಣವೇ ಅಡಿಗಲ್ಲು ಎಂಬುದು ತಿಳಿದಿರುವ ವಿಷಯ. ಆದರೆ ಬಡತನದ ಕೊರತೆಯಿಂದ, ಅಜ್ಞಾನದ ಕೊರತೆಯಿಂದ ಮಹಿಳೆಯರಿಗೆ ಶಿಕ್ಷಣ ಕೊಡಿಸುವಲ್ಲಿ ಈ ಸಮುದಾಯ ವಿಫಲವಾಗಿದೆ. ಮುಖ್ಯವಾಗಿ ''ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ'' ಎಂಬ ಮಾತು ಇದೆ. ಇಲ್ಲಿ ಗಂಡೊಬ್ಬ ಕಲಿತರೆ ಆ ವ್ಯಕ್ತಿ ಮಾತ್ರ ವಿದ್ಯಾವಂತನಾಗುತ್ತಾನೆ. ಆದರೆ ಅದೇ ಹೆಣ್ಣೊಬ್ಬಳು ಕಲಿತರೆ ಆ ಕುಟುಂಬದವರೆಲ್ಲ ವಿದ್ಯಾವಂತರಾಗುತ್ತಾರೆ. ಯಾಕೆಂದರೆ ಸಮಾಜ ಅಥವಾ ಕುಟುಂಬದಲ್ಲಿ ಸುಶಿಕ್ಷಿತ ಮಹಿಳೆಯರಿಲ್ಲದಿದ್ದರೆ, ಸುಶಿಕ್ಷಿತ ಸಮುದಾಯ ಹುಟ್ಟಲು ಸಾಧ್ಯವಾಗುವುದಿಲ್ಲ. ಹೆಣ್ಣೊಬ್ಬಳು ಪಡೆದ ವಿದ್ಯಾಭ್ಯಾಸದ ಉಪಯೋಗಗಳನ್ನು ಆ ಇಡೀ ಕುಟುಂಬ ಮತ್ತು ಸಮುದಾಯ ಅನುಭವಿಸುತ್ತದೆ. ಅಲ್ಲದೆ ಮುಂದಿನ ತಲೆಮಾರುಗಳಿಗೆ ಆ ಸೌಲಭ್ಯದ ಪರಿಣಾಮ ಬೀರುತ್ತದೆ ಎಂಬುದು ನನ್ನ ಅಭಿಪ್ರಾಯ. ಎರಡು ಕೈ ಸೇರಿದರೆ ಚಪ್ಪಾಳೆ ಎಂಬ ಮಾತು ಕುಟುಂಬದಲ್ಲಿ ಅಥವಾ ಸಮುದಾಯದಲ್ಲಿ ಹೆಣ್ಣು ಗಂಡು ಕೂಡಿಕೊಂಡು ಕೆಲಸ ಮಾಡುವುದರಿಂದ ಒಂದು ಉತ್ತಮವಾದ ಸಮುದಾಯ ನಿರ್ಮಾಣವಾಗಲು ಸಾಧ್ಯವಾಗುತ್ತದೆ.

ಜೀವನದ ಸತ್ಯಗಳು ಗ್ರಹಿಕೆ, ಕಲಿಕೆ ಇವು ಯಾವುದೇ ಮನಸ್ಸಿನ ಬದುಕಿಗೆ ಬಹಳ ಮುಖ್ಯವಾದುದು ಎಂದು ತಿಳಿದುಕೊಳ್ಳಬೇಕು. ಮಹಿಳೆಯರು ವಿದ್ಯಾವಂತರಾಗುವುದರಿಂದ ಆರೋಗ್ಯ ಸ್ಥಿತಿಗತಿ, ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳೊಂದಿಗೆ ಹಾಸುಹೊಕ್ಕಾಗಿದೆ. ಅನಕ್ಷರತೆ, ಕಡಿಮೆ ಶಿಕ್ಷಣ, ಶೀಘ್ರವಿವಾಹ ಮತ್ತು ಇತರೆ ಸಾಂಸ್ಕೃತಿಕ ಅಂಶಗಳನ್ನು ತಿಳಿದುಕೊಳ್ಳುತ್ತಾರೆ. ಇಲ್ಲವಾದರೆ ಬೇಗ ಮದುವೆ, ಬೇಗ ಮಕ್ಕಳು, ಪೌಷ್ಟಿಕ ಆಹಾರಗಳ ಕೊರತೆ ಬಡತನ ಶಿಕ್ಷಣಗಳ ಬಗ್ಗೆ ತಿಳಿದುಕೊಳ್ಳದಿರುವುದು ಕಂಡುಬರುತ್ತದೆ. ಇದಕ್ಕೆಲ್ಲಾ ಕಾರಣ ಅವರಲ್ಲಿ ಭದ್ರವಾದ ನೆಲೆ ಇಲ್ಲದಿರುವುದು ಮತ್ತು ಸಾಮಾಜಿಕ, ಆರ್ಥಿಕ ಸ್ಥಾನಮಾನ ತೀರಾ ಕೆಳಮಟ್ಟದ್ದಾಗಿರುವುದೇ ಆಗಿದೆ. ಇದನ್ನೆಲ್ಲ ಸುಧಾರಿಸಿಕೊಳ್ಳಲು ಮುಖ್ಯವಾಗಿ ಅವಳಿಗೆ ವಿದ್ಯೆ ಬೇಕೇ ಬೇಕು. ಮಹಿಳೆಯರಿಗೆ ತಿಳುವಳಿಗೆ ಮುಖ್ಯವಾಗಬೇಕು. ಮನುಷ್ಯನಿಗೆ ನಂಬಿಕೆ ಬೇಕು. ಆದರೆ ಅದೇ ಜೀವನದಲ್ಲಿ ಮಹಿಳೆಯರು ಹಲವಾರು ತೊಂದರೆಗಳನ್ನು ಅನುಭವಿಸಿದ್ದರೂ ಅವಳು ಅದನ್ನು ಧೈರ್ಯದಿಂದ ಎದುರಿಸುತ್ತಾಳೆ.

ಕುಡಿದು ಬಂದ ಗಂಡನಿಗೆ ಧೈರ್ಯದಿಂದ ಮೇಲ್‌ಧ್ವನಿಯಲ್ಲಿ ಮಾತನಾಡುವುದು, ಪ್ರತಿ ಉತ್ತರ ನೀಡುವುದು, ಸಮಯ ಬಂದರೆ ನಾಲ್ಕು ಏಟು ಹಾಕಲು ಇವಳು ಹಿಂಜರಿಯುವುದಿಲ್ಲ. ಮೌನದ ಹೋರಾಟ ಮಾಡುತ್ತಿರುತ್ತಾಳೆ.

ಅಜ್ಞಾನದ ಕತ್ತಲಿನಲ್ಲಿ ಮುಳುಗಿರುವ ಹೆಂಗಸರ ಸ್ಥಿತಿ ಪಶುಗಳಿಗೆ ಸಮಾನ. ನಿಜವಾದ ಅರ್ಥದಲ್ಲಿ ಹೆಂಗಸರಿಗೆ ನೋಡಲು ಸಾಧ್ಯವಾದದ್ದು ಅವರ ವಿದ್ಯಾಭ್ಯಾಸ ಮತ್ತು ಜ್ಞಾನವೆಂಬ ಎರಡು ಕಣ್ಣುಗಳನ್ನು ಪಡೆದಾಗ ಮಾತ್ರ ಸಾಧ್ಯವಾಗುವುದು. ಅದರೊಳಗಿನ ಕೆಡುಕು ಭಾವನೆಗಳನ್ನು ಪಾಪವನ್ನು ಕೊಳಕು ಕ್ರಿಮಿಗಳನ್ನು ಗುರುತಿಸಿಕೊಳ್ಳುವರು. ಅವರ ಅಂತರಾತ್ಮದ ಭೀತಿ ಮತ್ತು ಯಾತನೆಗಳು, ಅನುಭವವಾಗಿ ಈ ಬಲೆಗಳನ್ನು ಮನಸ್ಸಿನಿಂದ ಕಿತ್ತೊಗೆಯಲು ಪ್ರಯತ್ನಿಸುತ್ತಾರೆ. ಒಂದು ಕಡೆ ವಿದ್ಯಾಭ್ಯಾಸದ ಅಭಾವ, ಮತ್ತೊಂದೆಡೆ ಅನುಭವದ ಕೊರತೆ, ಆದ್ದರಿಂದ ಅವರು ಸುಶಿಕ್ಷಿತರಾದಲ್ಲಿ ಸಾಂಸಾರಿಕ ಮತ್ತು ಗೃಹ ಜೀವನದ ತೊಡಕುಗಳನ್ನು ಪರಿಹರಿಸಿಕೊಳ್ಳುವರು. ಅಷ್ಟೇ ಅಲ್ಲದೆ ಪರಸ್ಪರ ವಿನಯಶೀಲತೆ ಹಾಗೂ ಮರ್ಯಾದೆಗಳಂದ ಸದ್ಗುಣಗಳನ್ನು ಅಳವಡಿಸಿಕೊಳ್ಳಬಹುದು. ಅನಕ್ಷರಸ್ಥರು ಬುದ್ಧಿ ಇಲ್ಲದವರಲ್ಲ. ಜೀವನದ ಸತ್ಯಗಳು ಗ್ರಹಿಕೆ, ಕಲಿಕೆ ಇವು ಯಾವುದೇ ಮನಸ್ಸಿನ ಬದುಕಿಗೆ ಬಹಳ ಮುಖ್ಯವಾದುದು ಎಂದು ತಿಳಿದುಕೊಳ್ಳುತ್ತಾರೆ.

ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಯಾದ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿದ್ದ ಡಾ.ಯು.ಆರ್. ಅನಂತಮೂರ್ತಿ ಅವರ ಮಾತುಗಳು ''ನಾವು ಅನಕ್ಷರಸ್ಥರು ಎಂದು ಕರೆಯುವ ಜನರ ಮೂಲಕವೇ ಭಾರತೀಯ ಸಂಸ್ಕೃತಿ, ಪರಂಪರೆ, ಭಾಷೆಗಳು ಉಳಿದು ಬೆಳೆದು ಬಂದಿದೆ. ವಿದ್ಯಾವಂತರು ಎನ್ನಿಸಿಕೊಂಡ ಜನ ಉನ್ನತ ಶಿಕ್ಷಣವನ್ನು ಪಡೆಯುತ್ತಾ ಹೋದಂತೆಲ್ಲ ಸಂಸ್ಕೃತಿ ಪರಂಪರೆ ಭಾಷೆಗಳಿಂದ ದೂರಾಗುತ್ತಾರೆ. ಆಧುನಿಕರು ಎನ್ನಿಸಿಕೊಂಡು ಬಹು ಜನ ಸಮಾಜ ವ್ಯವಸ್ಥೆಯಿಂದ ಪ್ರತ್ಯೇಕಗೊಂಡು ಬಿಡುತ್ತಾರೆ ಎಂದು ತಿಳಿಸುತ್ತಾರೆ, ಇವರ ಮಾತು ಸತ್ಯ. ಈ ಸಮುದಾಯದಲ್ಲಿ ಕೆಲವರು ವಿದ್ಯಾವಂತರು ಮಹುಮಟ್ಟಿಗೆ ನಗರ ಪ್ರದೇಶಗಳಿಗೆ ಹೋಗಿ ಅಲ್ಲಿಯೇ ನೆಲೆಸಿರುವುದು ಮತ್ತು ಸಮುದಾಯದ ಜೊತೆಗೆ ಇರದೆ ದೂರವಿರುವುದರಿಂದಲೂ ಅವರ ಭಾಷೆ, ಪದ್ಧತಿಗಳ ಬಗ್ಗೆ ತಿಳಿದುಕೊಳ್ಳುವುದಿಲ್ಲ. ಉದಾಹರಣೆಗೆ ಕುಳುವ ಭಾಷೆಯನ್ನಾಡುವ ಪ್ರದೇಶವನ್ನು ಬಿಟ್ಟು ದೂರವಿರುವುದು. ಇವರು ಆಧುನಿಕತೆಗೆ ಹೊಂದಿಕೊಂಡು ತಮ್ಮ ಸಮುದಾಯದ ಕಡೆಗೆ ತಿರುಗಿನೋಡುವುದಿಲ್ಲ. ಅಗತ್ಯ ಬಿದ್ದಾಗ ಮಾತ್ರ ಬಂದುಹೋಗುತ್ತಾರೆ. ಇತಂಹವರು ಸಮುದಾಯದ ಉದ್ಧಾರಕ್ಕೆ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಮುಂದಾಗಬೇಕಾಗಿದೆ. ಇತ್ತೀಚಿನ ಎರಡು ಮೂರು ವರ್ಷಗಳಿಂದ ಕೊರವ ಸಮುದಾಯದ ಬಗೆಗೆ ನೌಕರಿಯಲ್ಲಿರುವವರು, ವಿದ್ಯಾವಂತರು, ಸಮುದಾಯದಲ್ಲಿರುವ ತಿಳುವಳಿಕೆಗಾರರು ''ಆಯೋಗ ರಚನೆಗೆ'' ಹೋರಾಟ ಮಾಡುತ್ತಿದ್ದಾರೆ. ಉದಾಹರಣೆಗೆ ಹೈದರಾಬಾದ್ ಕರ್ನಾಟಕದಲ್ಲಿರುವ ೫ ಜಿಲ್ಲೆಗಳಲ್ಲಿ ಇವರನ್ನು ಒಂದುಗೂಡಿಸಿ ಸಮುದಾಯದ ಬಗ್ಗೆ ತಿಳುವಳಿಕೆ ಮೂಡಿಸಿ ಬೇಕಾಗಿರುವ ಸೌಲಭ್ಯಗಳನ್ನು ಪಡೆಯಲು ಹೋರಾಡುತ್ತಿದ್ದಾರೆ. ಇಂತಹ ಕಾರ್ಯಕ್ರಮಗಳಲ್ಲಿ ಮಹಿಳೆಯರು ಭಾಗವಹಿಸುವುದು ಅಪರೂಪವಾಗಿದೆ.

ಸ್ವಾಮಿ ವಿವೇಕಾನಂದರು, ಗಾಂಧೀಜಿ, ರಾಜಾರಾಮ್ ಮೋಹನ್ ರಾಯ್, ದಯಾನಂದ ಸರಸ್ವತಿ, ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಡಾ. ಬಿ.ಆರ್ ಅಂಬೇಡ್ಕರ್‌ರಂತಹ ಮಹಾನ್ ವಿಚಾರವಂತರು, ವಿಮರ್ಶಕರು, ಮೇಧಾವಿಗಳು ಮಹಿಳೆಯ ಚಿಂತನೆಯನ್ನು ಅರ್ಥ ಮಾಡಿಕೊಂಡು, ಗಂಡಿನ ಶೋಷಣೆಯಿಂದ ತಪ್ಪಿಸಿಕೊಳ್ಳುವ ಮೊದಲ ಹೆಜ್ಜೆಯಾಗಿ ಮಹಿಳೆಯರು ತಮ್ಮನ್ನು ತಾವು ಶೋಷಿಸಿಕೊಳ್ಳುತ್ತಿರುವುದನ್ನು ನಿಲ್ಲಿಸಬೇಕು. ಅದು ನಿಜ. ಏಕೆಂದರೆ ಒಬ್ಬ ಪತಿ ಸತಿಯನ್ನು ಹೊಡೆಯುವುದು ಮಾಡುತ್ತಿದ್ದರೆ. ಅತ್ತೆಯಾದವಳು ನೋಡಿ ಸುಮ್ಮನಿರದೇ ತಪ್ಪು ಇದ್ದರೆ ದಂಡಿಸಬೇಕು, ಇಲ್ಲವಾದರೆ ಮಗನಿಗೆ ತಿಳುವಳಿಕೆ ಹೇಳಿ ಸೊಸೆಯನ್ನು ರಕ್ಷಿಸಬೇಕು. ಇಲ್ಲವಾದರೆ ನನ್ನ ತಾಯಿಯ ಬೆಂಬಲವಿದೆ ಎಂದು ಪತಿಯು ಇನ್ನೂ ಹಾರಾಡಬಹುದು. ಮನೆ, ಮಕ್ಕಳು, ಗಂಡ ಎಂದು ತಮ್ಮದೇ ಪ್ರಪಂಚ ಹಾಗೂ ಪರಿಸರದಲ್ಲಿ ವಿಹರಿಸಿದರೆ ಸಾಲದು. ಭೂತಭವಿಷ್ಯಗಳ ನಡುವೆ ಸಿಕ್ಕ ಚಿಂದಿಯಾಗುತ್ತಿರುವ ಇವತ್ತಿನ ಮಹಿಳೆಯ ವಿಚಾರವಂತಿಕೆ ಬೆಳೆಸಿಕೊಂಡು ಸಾಮಾಜಿಕ ಸಮಸ್ಯೆಗಳಿಗೆಲ್ಲ ಪರಿಹಾರ ಕಂಡುಕೊಳ್ಳುವ ಧೈರ್ಯ ತೋರಿಸಬೇಕು. ಹೊಸ ಭವಿಷ್ಯವನ್ನು ಸೃಷ್ಟಿಸಿಕೊಳ್ಳಬೇಕು ಎಂದು ತಿಳಿಸುತ್ತಾರೆ.

ಮಹಿಳೆಯರು ಹುಡುಗಿಯರು ಹಣ್ಣಿನ ವ್ಯಾಪಾರದಲ್ಲಿ ಅಧಿಕ ಭಾಗಿಗಳಾಗಿದ್ದರೂ ಅವರ ಆದಾಯವು ಮನೆ ಬಳಕೆಗೆ ಸೇರಿಹೋಗುತ್ತದೆ. ಕಸಬಾರಿಗೆ ಕಟ್ಟುವುದು, ಬುಟ್ಟಿ ಮಾರಾಟದಲ್ಲಿ ಆಧುನಿಕತೆಯ ಪ್ರಭಾವದಿಂದ ಬೆಲೆ ಏರಿಕೆಯಾಗಿದೆಯೇ ಹೊರತು ಬಾರಿಗೆ, ಬುಟ್ಟಿಗಳು ಮಾರಾಟ ಮಾಡುವುದು ಕಷ್ಟವಾಗಿಬಿಟ್ಟಿದೆ. ಬೆಳಗ್ಗೆಯಿಂದ ಸಂಜೆಯವರೆಗೆ ಮಾರಿದರೂ ಸಹ ಅವರಿಗೆ ಸರಿಯಾದ ಹಣ ಬರುವುದಿಲ್ಲ. ಏಕೆಂದರೆ ಆಧುನಿಕತೆಯ ಪ್ರಭಾವದಿಂದ ನಗರ, ಪಟ್ಟಣಗಳಲ್ಲಿ ಪ್ಲಾಸ್ಟಿಕ್ ಕಸಬಾರಿಗೆಯಿಂದ ಇವುಗಳ ಬೆಲೆ ಕಡಿಮೆ. ಉದಾಹರಣೆಗೆ ಇವರ ಕಸಬಾರಿಗೆ, ಜೊತೆಗೆ ೧೨ ರೂಪಾಯಿ ಮಾತ್ರ. ಅದೇ ಇನ್ನೊಂದು ಕಸಬಾರಿಕೆಗೆ ೩೫ ರೂ.ವರೆಗೆ ಇರುವುದು ಕಂಡುಬರುತ್ತದೆ. ಇದರಿಂದ ಮಹಿಳೆಯರ ದುಡಿಮೆಯಲ್ಲಿ ಕುಸಿತ ಕಂಡುಬರುತ್ತದೆ.

ಮಹಿಳೆಯರು ಆರ್ಥಿಕವಾಗಿ ಪ್ರಬಲವಾಗಲು ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿದ್ದಾರೆ. ಇದರಿಂದ ಅಲ್ಪಸ್ವಲ್ಪ ಮಟ್ಟಿಗೆ ಆರ್ಥಿಕವಾಗಿ ಪ್ರಬಲವಾಗಿದ್ದಾರೆ. ಇದರಿಂದ ಅನೇಕ ಬದಲಾವಣೆಗಳನ್ನು ಕಂಡಿದ್ದಾರೆ ಎಂದು ಹೇಳಬೇಕಾಗುತ್ತದೆ. ಶಿಕ್ಷಣದ ಪ್ರಭಾವ, ಉಡುಗೆ, ತೊಡುಗೆ, ಮನೆಯಲ್ಲಿ ನಡೆದುಕೊಳ್ಳುವ ಪರಿಸ್ಥಿತಿಗಳಲ್ಲಿ ಸ್ವಲ್ಪ ಬದಲಾವಣೆಗಳಾಗಿವೆ ಎಂದು ಹೇಳಬಹುದು. ಪ್ರಗತಿ ಗ್ರಾಮೀಣ ಬ್ಯಾಂಕ್‌ಗಳಿಂದ ಲೋನ್ ಪಡೆದು ತಮ್ಮ ಕಷ್ಟಗಳಿಗೆ ಮಹಿಳೆಯರು ಅನುಕೂಲ ಮಾಡಿಕೊಂಡಿದ್ದಾರೆ. ೨೦-೩೦ ಜನ ಸೇರಿ ಸ್ವಲ್ಪ ಸ್ವಲ್ಪ ಹಣ ಸಂಗ್ರಹಿಸಿ ಬ್ಯಾಂಕಿನಲ್ಲಿಟ್ಟು ಅದರಿಂದ ಲೋನ್ ಪಡೆದಿದ್ದಾರೆ. ಇಂತಹ ಬದಲಾವಣೆ ನಗರ ಮತ್ತು ಹಳ್ಳಿಗಳಲ್ಲಿಯೂ ನಡೆದಿದೆ. ಹನಿ ಹನಿ ಸೇರಿದರೆ ಹಳ್ಳ ಎಂಬಂತೆ ಮಹಿಳೆಯ ಸ್ವಲ್ಪ ಹಣವೇ ಜೀವನಕ್ಕೆ ಸ್ವಲ್ಪವಾದರೂ ಆಸರೆಯಾಗುತ್ತದೆ. ಇದರಿಂದ ೭ ದಿನಗಳವರೆಗೆ ಯಾದರೂ ಸುಖವಾಗಿರುತ್ತಾರಲ್ಲಾ ಅಷ್ಟೇ ಸಾಕು. ಮುಂದೆ ಇಡೀ ವರ್ಷವೂ ಸುಖವಾಗಿರುವಂತೆ ಮಾಡಬಹುದು ಎಂದು ಮಹಿಳೆಯರು ಆಲೋಚಿಸಬೇಕಾಗಿದೆ.

೧.೮ ಇದುವರೆಗಿನ ಕೊರವರ ಬಗೆಗೆ ಅಧ್ಯಯನದ ಸಮೀಕ್ಷೆ

ಈಗಿರುವ ಕೊರವ ಸಮುದಾಯದ ಜೀವನ ವಿಧಾನದಿಂದ ಅವರ ಹಿಂದಿನ ಎಲ್ಲಾ ಅಂಶಗಳನ್ನು ಕಂಡುಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಸಮುದಾಯದ ಬಗೆಗೆ ಸಾಹಿತ್ಯಿಕವಾಗಿ, ಐತಿಹಾಸಿಕವಾಗಿ ಮತ್ತು ಇತರೆ ಮೂಲಗಳಿಂದ ಲಭ್ಯವಾಗಿರುವ ಆಧಾರಗಳನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಮಹಿಳೆಯರ ಸ್ಥಿತಿಗತಿಗಳು ಯಾವ ರೀತಿಯಲ್ಲಿದೆ ಎಂಬುದನ್ನು ತಿಳಿಸ ಲಾಗುತ್ತದೆ. ಕೊರವರು ಕರ್ನಾಟಕದ ಮತ್ತು ಭಾರತದಲ್ಲಿ ಮಹಾರಾಷ್ಟ್ರ, ಗುಜರಾತ್, ತಮಿಳುನಾಡು, ಆಂಧ್ರಪ್ರದೇಶ, ಕೇರಳ ಇನ್ನೂ ಕೆಲವೆಡೆ ಕಂಡುಬರುತ್ತಾರೆ. ಕರ್ನಾಟಕದಲ್ಲಿ ಹೆಚ್ಚಾಗಿ ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ಬೆಂಗಳೂರು, ಮೈಸೂರು, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ವಾಸಿಸುತ್ತಿದ್ದಾರೆ. ಕೊರವರು ತಮ್ಮದೇ ಆದ ಪ್ರತ್ಯೇಕತೆಯನ್ನು ಕಾಪಾಡಿಕೊಂಡು ತಮ್ಮದೇ ಆದ ವ್ಯವಸ್ಥೆಯಲ್ಲಿ ಜೀವಿಸುತ್ತಿದ್ದಾರೆ. ಈ ಸಮುದಾಯವನ್ನು ಕುರಿತು ಕೆಲವೊಂದು ಅಧ್ಯಯನ ನಡೆದಿದೆ. ಆದರೆ ಮಹಿಳೆಗೆ ಸಂಬಂಧಿಸಿದಂತೆ ಅಧ್ಯಯನಗಳು ನಡೆದಿಲ್ಲವೆಂದು ಹೇಳಬಹುದು. ಕೆಲವು ಲೇಖನಗಳು, ಪ್ರಬಂಧಗಳು ಮತ್ತು ಕೃತಿಗಳಲ್ಲಿ ಸಾಂಸ್ಕೃತಿಕ ಮತ್ತು ಸಾಮಾಜಿಕ ಬದುಕು ಮೂಡಿ ಬಂದಿದ್ದರೂ ಮಹಿಳೆಯ ಸ್ಥಿತಿಗತಿಗಳ ಮೇಲೆ ಸೂಕ್ಷ್ಮವಾಗಿ ಬೆಳಕು ಚೆಲ್ಲುವ ಅಧ್ಯಯನಗಳು ನಡೆದಿಲ್ಲ ಎಂದು ಹೇಳಬಹುದು.

ಆರಂಭದ ಬುಡಕಟ್ಟುಗಳ ಅಧ್ಯಯನವು ಆಂಗ್ಲರಿಂದ ಆಡಳಿತ ಅನುಕೂಲಕ್ಕಾಗಿ ಆದದ್ದು ನಂತರ ಪಾಶ್ಚಾತ್ಯರು ಮತ್ತು ಸ್ವದೇಶಿಯರು ಅಧ್ಯಯನ ಮಾಡಿದ್ದಾರೆ. ಇ. ಥರ್ಸ್ಟನ್ ಅವರ ''ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸೌತ್ ಇಂಡಿಯಾ''ದಲ್ಲಿ ಕೊರವರ ಬಗ್ಗೆ ಲೇಖನವಿದೆ. ಡಾ. ಚಂದ್ರಶೇಖರ ಕಂಬಾರರು ಸಂಪಾದಿಸಿದ ''ಕನ್ನಡ ಜಾನಪದ ವಿಶ್ವಕೋಶ'' ಸಂಪುಟ-೧ರಲ್ಲಿ ಕೊರವರ ಸೂಕ್ಷ್ಮವಾದ ಬರಹವನ್ನು ಕೊಡಲಾಗಿದೆ. ಕರ್ನಾಟಕ ರಾಜ್ಯ ಗೆಜಟಿಯರ್ ಭಾಗ ಒಂದರಲ್ಲಿ ಕೊರವ ಮತ್ತು ಕೊರವರ ವಿಷಯದ ಬಗ್ಗೆ ವಿವರಿಸಲಾಗಿದೆ. ಕನ್ನಡ ವಿಶ್ವಕೋಶ ಭಾಗ-೫ರಲ್ಲಿ ಕೊರವಂಜಿಯ ಬಗ್ಗೆ ಲೇಖನವಿದೆ. ಜಾನಪದ ಜಗತ್ತು ಎಂಬ ಪತ್ರಿಕೆಯಲ್ಲಿ ಬೆಳಕು ಕಂಡಿರುವ ಶ್ರೀ ಬಿ.ವಿ. ರಾಮಯ್ಯ ಅವರ ಹಚ್ಚೆ ಮತ್ತು ಕೊರವರು ಎಂಬ ಲೇಖನವಿದೆ. ಇ. ಥರ್ಸ್ಟನ್ ಅವರ ''ಕ್ಯಾಸ್ಟ್ ಅಂಡ್ ಟ್ರೈಬ್ ಆಫ್ ಸದರನ್ ಇಂಡಿಯಾ'' ಸಂಪುಟದಲ್ಲಿ ಮೊದಲಿಗೆ ಕೊರವರ ಬಗ್ಗೆ ಕೊರಜ ಎಂದೇ ಹೇಳಿದ್ದಾರೆ. ಕೊರವರ ಸಂಸ್ಕೃತಿ ಎಂಬ ಕೃತಿಯಲ್ಲಿ ಪ್ರಮುಖವಾಗಿ ಈ ಜನಾಂಗದ ಜೀವನ, ಆಚಾರ ವಿಚಾರಗಳನ್ನು ಕುರಿತು ವಿವರಿಸಿದ್ದಾರೆ. ಕರ್ನಾಟಕದ ರಾಜ್ಯಕೋಶ- ೮ರಲ್ಲಿ (ಜನಸಮುದಾಯ ಸಂಪುಟ) ಕೊರವರ ಬಗ್ಗೆ ಮಾಹಿತಿ ನೀಡಿದ್ದಾರೆ Bahadur K.S. 1978, ''Koravas in Caste Tribe and Culture of India''ದಲ್ಲಿ ಮಾಹಿತಿ ಕೊಡಲಾಗಿದೆ.

ಶ್ರೀ ಎಚ್.ವಿ.ನಂಜುಂಡಯ್ಯ ಮತ್ತು ಶ್ರೀ ಎಲ್.ಕೆ. ಅನಂತಕೃಷ್ಣ ಅಯ್ಯರ್ ಅವರುಗಳು ಕೊರವರ ದೀರ್ಘ ಪರಿಚಯ ಮಾಡಿಕೊಟ್ಟಿದ್ದಾರೆ. ಕೊರವರು, ಕೊರಮರು, ಕೊರಚರು ಎಂದು

ಬೇರೆ ಬೇರೆ ಹೆಸರುಗಳಿಂದ ಕರೆಸಿಕೊಳ್ಳುವ ಇವರು ಬೇಟೆಗಾರರು, ಕಣಿ ಹೇಳುವವರು, ಪಶುಪಾಲಕರು, ಸಾಣೆದಾರರು, ಬುಟ್ಟಿ ನೇಯುವವರು ಜೊತೆಗೆ ಕಳ್ಳತನ ಮಾಡುವವರಾಗಿದ್ದರು ಎಂಬ ಅವರ ವಿವಿಧ ವೃತ್ತಿ ಪ್ರವೃತ್ತಿಗಳನ್ನು ದಾಖಲಿಸಿದ್ದಾರೆ. ಜೊತೆಗೆ ಕೊರವರ ಭಾಷೆ, ಮದುವೆ ಮೊದಲಾದ ಕುಲಪದ್ಧತಿಗಳನ್ನು ನಂಬಿಕೆ ನಡವಳಿಕೆಗಳನ್ನು ಪರಿಚಯಿಸುವ ಪ್ರಯತ್ನ ಮಾಡಿದ್ದಾರೆ.

R.E. Enthovan ಅವರು ‘The Tribes and castes of Bombay’, Vol. II. ಕೊರವರ ಬಗ್ಗೆ ತಿಳಿಸಿದ್ದಾರೆ. “೧೯೦೧ರ ಜನಗಣತಿಯ ಪ್ರಕಾರ ಮುಂಬಾಯಿ ಪ್ರಾಂತ್ಯದ ಜನಸಂಖ್ಯೆ ಮತ್ತು ಅವರ ಉದ್ಯೋಗ ವ್ಯವಹಾರ ಜೊತೆಗೆ ಬುಡಕಟ್ಟಿನ ಮೂಲ ಅವರಾಡುವ ಭಾಷೆ, ಕುಲ ಪದ್ಧತಿಗಳ ಪರಿಚಯ ಮಾಡಿಕೊಟ್ಟಿದ್ದಾರೆ ಮತ್ತು ಈ ಜನ ವಾದ್ಯಕಾರರಾಗಿದ್ದ ಬಗ್ಗೆ ಉಲ್ಲೇಖಿಸಿದ್ದಾರೆ”.[೯]

ದಕ್ಷಿಣ ಕರ್ನಾಟಕದ ಕೊರಮರು : ‘‘ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಸಂಶೋಧನಾ ಗ್ರಂಥದಲ್ಲಿ ಡಾ. ಬಿ.ಪಿ. ರಾಮಯ್ಯ ಅವರು ಸಾಹಿತ್ಯಕ ಪುರಾವೆಗಳು, ಜೀವನ ಪದ್ಧತಿ, ನಂಬಿಕೆ ಆಚರಣೆಗಳು, ಕುಲಪದ್ಧತಿ, ಭಾಷಾ ವಿವೇಚನೆಗಳ ಬಗ್ಗೆ ವಿವರವಾದ ಮಾಹಿತಿಯನ್ನು ಒದಗಿಸಿದ್ದಾರೆ. ಮುಂದೆ ಬರುವ ವಿದ್ಯಾವಂತ ಜನಾಂಗಕ್ಕೆ ಪ್ರಮುಖವಾಗಿ ಈ ಗ್ರಂಥ ಆಧಾರವಾಗುತ್ತದೆ’’.[೧೦] ‘‘ಈರಣ್ಣ .ಎನ್ ಕೋಸಗಿಯವರು ಬರೆದ ‘ಕೊರವರು’ ಪುಸ್ತಕ ಕೊರವರ ಬಗ್ಗೆ ಬೆಳಕು ಚಲ್ಲುತ್ತದೆ’’.[೧೧]

ಜನಾಂಗಿಯ ದೃಷ್ಟಿಕೋನದಿಂದ ಅನೇಕ ವಿದ್ವಾಂಸರು ಮುಖ್ಯರಾಗುತ್ತಾರೆ. ಇತ್ತೀಚಿನ ದಿನಗಳಲ್ಲಿ ಇವು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಡಾ. ತೀ.ನಂ. ಶಂಕರನಾರಾಯಣ ಅವರ ಕಾಡುಗೊಲ್ಲರ ನಂಬಿಕೆ ಮತ್ತು ಸಂಪ್ರದಾಯಗಳು, ಡಾ ಅಂಬಳಿಕೆ ಹಿರಿಯಣ್ಣನವರ ಮಲೆನಾಡಿನ ಒಕ್ಕಲಿಗರು ಮತ್ತು ಅವರ ಜಾನಪದ ಡಾ. ಪುರುಷೋತ್ತಮ ಬಿಳಿಮಲೆಯವರ ಸೂಳ್ಯ ಪರಿಸರದ ಗೌಡರು, ವೈ.ಸಿ. ಭಾನುಮತಿಯವರ ಶೈವ ವಕ್ಕಲಿಗರು ಇನ್ನು ಮೊದಲಾದ ಪಿಎಚ್.ಡಿ ನಿಬಂಧಗಳು ಕರ್ನಾಟಕದ ಜನಾಂಗೀಯ ಅಧ್ಯಯನದ ಅಗತ್ಯತೆ ಮತ್ತು ಮಹತ್ವಗಳನ್ನು ಸೂಚಿಸುತ್ತವೆ. ಇದರೊಟ್ಟಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಹೊರತಂದಿರುವ ಉಪಸಂಸ್ಕೃತಿ ಅಧ್ಯಯನ ಮಾಲಿಕೆಯಲ್ಲಿ ಬುಡಕಟ್ಟು ಜನಾಂಗಗಳ ಉಪಸಂಸ್ಕೃತಿಗಳನ್ನು ಕುರಿತ ಕೃತಿಗಳು ಜನಾಂಗದ ಅಧ್ಯಯನಕ್ಕೆ ಆಕರಗಳನ್ನು ಒದಗಿಸಬಲ್ಲವಾಗಿವೆ.

ಕೊರವರ ಮಹಿಳೆಯನ್ನು ಕುರಿತಂತೆ ವಿಸ್ತಾರವಾದ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಕೊರವರು ಕರ್ನಾಟಕದ ಎಲ್ಲೆಡೆಯೂ ವಾಸವಾಗಿದ್ದಾರೆ. ಬಳ್ಳಾರಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ವಾಸಿಸುತ್ತಿದ್ದಾರೆ. ಜನಸಂಖ್ಯೆ ಕೂಡ ಅಷ್ಟೆ ಗಣನೀಯ ಪ್ರಮಾಣದಲ್ಲಿರುವುದರಿಂದ ಆಳವಾದ ಅಧ್ಯಯನಕ್ಕಿಳಿಯದೆ ವಿಸ್ತಾರವಾದ ಅಧ್ಯಯನವನ್ನು ನಡೆಸಲಾಗಿದೆ.

ಭಾರತದ ಎಲ್ಲಾ ಭಾಗಗಳಲ್ಲಿಯೂ ಇರುವಂತೆ ಕರ್ನಾಟಕದಲ್ಲಿಯೂ ಕೂಡ ಹಲವಾರು ಬುಡಕಟ್ಟುಗಳನ್ನು ಗುರುತಿಸಲಾಗಿದೆ. ಡಾ ಲೂಯಿಸ್ ತಮ್ಮ Tribes of Mysore ಎಂಬ ಕೃತಿಯಲ್ಲಿ ೨೨ ಬುಡಕಟ್ಟುಗಳ ಬಗೆಗೆ ವಿವರಗಳನ್ನು ಕೊಡುತ್ತಾರೆ. ಡಾ.ಕೆ. ಕೆಂಪೇಗೌಡರು According to

1971 census report there are nearly 85 Tribal languages and dialects in Karnataka ಎಂದು ಉಲ್ಲೇಖಿಸುತ್ತಾರೆ. (A Brief Survey of Dravidian Tribal Languages of Karnataka P.49, 1994) ಭಾಷೆಗೊಂದೊಂದು ಬುಡಕಟ್ಟು ಎಂದರೂ, ಕರ್ನಾಟಕದಲ್ಲಿ ೮೫ ಬುಡಕಟ್ಟುಗಳನ್ನು ಹೆಸರಿಸಬಹುದು. ಕೊರಜ, ಕೊರಮ, ಕೋಟ, ಕೋಯ, ಮಲೆ ಕುಡಿಯ, ಮಟೇರ, ಸುಡುಗಾಡು ಸಿದ್ಧ, ಕಿಳ್ಳೆಕ್ಯಾತ, ಕಚ್ಚೆಗೌಳಿಗ, ಹಾಲಕ್ಕಿ, ಸಿದ್ಧ, ಕಣಿಯನ, ಬಂಜಾರ, ಹಳೇ ಪೈಕ, ಈಡಿಗ, ಮೇರ, ಮನ್ಯ ಮ್ಯಾಸಬೇಡ, ಮೇದ, ಆದಿಮಾ, ಬಡಗ, ಬೆಲಾರಿ, ಬೆಟ್ಟಕುರುಬ, ಚೆಂಚು, ಜೇನುಕುರುಬ ಕಾಡುಚೆಂಚು, ದೊಂಬ, ಗೊಂಡ, ಇರುಳಿಗ, ಕಾಪಾಲಿ, ಕಾಡುಗೊಲ್ಲ, ಕಾಡು ಕೊರಚ ಮೊದಲಾದ ಬುಡಕಟ್ಟು ಪಂಗಡಗಳು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಇವೆ.

ಕೊರವರಲ್ಲಿ ಬಾಣಂತಿತನದ ಮೈಲಿಗೆ ಅತೀ ತೀವ್ರವಾದದ್ದು ಎಂಬ ನಂಬಿಕೆ ಇದ್ದುದರಿಂದ ಹೆರಿಗೆಯಾಗುವ ಮಹಿಳೆ ಪ್ರತ್ಯೇಕವಾದ ಗುಡಿಸಲೊಂದರಲ್ಲಿ ೨೮ ದಿನಗಳವರೆಗೆ ಅಲ್ಲಿ ಅವಳೊಬ್ಬಳೆ ಇರಬೇಕಾಗಿತ್ತು. ನಂತರ ದೇವಸ್ಥಾನದಲ್ಲಿ ಬ್ರಾಹ್ಮಣರಿಂದ ತೀರ್ಥವನ್ನು ತಂದು ಮೈಲಿಗೆ ತೆಗೆಯುವ ವರೆಗೆ ಅಲ್ಲೆ ಉಳಿಯುತ್ತಿದ್ದಳು. ಹೆರಿಗೆ ಸಮಯದಲ್ಲಿ ಯಾರೊಬ್ಬರೂ ಬಾಣಂತಿಗೆ ಸಹಾಯ ಮಾಡದೆ ಔಷಧಿಗಳನ್ನು ದೂರದಿಂದ ಎಸೆಯುತ್ತಿದ್ದ ಬಗೆಗೆ, ಮಗು ಹುಟ್ಟಿದಾಗ ಬೇಕಾಗುವ ಬಿಸಿ ನೀರನ್ನು ಸ್ವಲ್ಪ ದೂರದಲ್ಲಿ ಇಡುತ್ತಿದ್ದುದೊಂದನ್ನು ಬಿಟ್ಟರೆ ಮತ್ತಾವುದೇ ಉಪಚಾರ ಮಾಡದೇ ಇರುವ ಬಗ್ಗೆ ಮತ್ತು ಹೆರಿಗೆಯಾದ ಗುಡಿಸಲಿನಿಂದ ಹೊರಬಂದ ಮೇಲೆ ಅದಕ್ಕೆ ಬೆಂಕಿ ಇಡುತ್ತಿದ್ದರು, ಹದಿನಾಲ್ಕನೇ ದಿನದಲ್ಲಿ ಗಂಡನಾದವನು ಕ್ಷೌರಿಕರಿಂದ ಕ್ಷೌರ ಮಾಡಿಸಿಕೊಂಡು ಮೈಲಿಗೆ ಕಳೆಯುತ್ತಿದ್ದನು ಎಂಬ ವಿಚಾರವಿದೆ. ಇದರಿಂದ ಇವರಲ್ಲಿರುವ ಮೈಲಿಗೆಯ ಬಗೆಗಿದ್ದ ನಂಬಿಕೆಯ ಅರಿವಾಗುತ್ತದೆ. ಈಗಿನ ದೃಷ್ಟಿಯಿಂದ ಆ ಪದ್ಧತಿಯು ಅಸಮಂಜಸ ಮತ್ತು ಅಮಾನುಷವಾಗಿ ಕಂಡರೂ ಜೀವನ ಕ್ರಮದ ಒಂದು ಸಾಂಸ್ಕೃತಿಕ ಪ್ರಜ್ಞೆಯೆಂಬುದನ್ನು ಇದು ಸೂಚಿಸುತ್ತದೆ.

ಕೋವಾಡ್ ಪದ್ದತಿ ತಿರುವಾಂಕೂರಿನ ''ಪರಿಯನ್'' ಜನರಲ್ಲಿ ರೂಢಿಯಲ್ಲಿದ್ದ ಬಗ್ಗೆ ಕಿವಿ .ಎಸ್ ಮಾಲೀರ್ ದಾಖಲಿಸಿದ್ದಾರೆ. ಪರಿಯನ್ ಹೆಂಗಸು ಹೆರಿಗೆಯಾದ ಮೇಲೆ ಆಕೆಯ ಗಂಡ ಬೇಯಿಸಿದ ಅನ್ನ ಅಥವಾ ಇತರೆ ಆಹಾರವನ್ನು ತ್ಯಜಿಸಿ, ಗೆಡ್ಡೆ ಗೆಣಸು, ಹಣ್ಣುಗಳನ್ನು ತಿನ್ನುತ್ತಾ ಹೆಂಡ ಮತ್ತು ಸಾರಾಯಿಯನ್ನು ಕುಡಿಯುತ್ತಿದ್ದ. ಈ ಪದ್ಧತಿಯು ಕೊರವರಲ್ಲಿ ಇಲ್ಲ. ಆದರೆ ಹೆರಿಗೆಯಾದ ಮೇಲೆ ಅವಳಿಗೆ ಹೆಂಡ ಕುಡಿಸುವುದು ಕಂಡುಬರುತ್ತದೆ.

''ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು ಎಂಬ ಪುಸ್ತಕದಲ್ಲಿ ಹೊರೆ ಹೊರುವವರು ಎಂಬ ಕಸುಬಿನಲ್ಲಿ ಕೊರವರನ್ನು ಕೊರ್ಚ ಎಂದು ಉಲ್ಲೇಖ ಮಾಡಲಾಗಿದೆ. ಕೆಲವು ದಶಕಗಳ ಹಿಂದೆ ಸಹ ಕೊರವರ ಹೆಂಗಸರು ಜೀವನೋಪಾಯಕ್ಕಾಗಿ ಕಟ್ಟಿಗೆ ವ್ಯಾಪಾರ ಮಾಡುತ್ತಿದ್ದರು. ಕ್ರಮೇಣ ಹೊರೆ ಮಾರುವುದು ಕಡಿಮೆಯಾಗುತ್ತಿದ್ದರೆ ತಮ್ಮ ಸಂಸಾರವನ್ನು ನಿಭಾಯಿಸಲು ಈ ಕಸುಬು ಮಾಡುತ್ತಿದ್ದರು ಎಂದು ಕೆಲವು ಮಹಿಳೆಯರು ತಿಳಿಸುತ್ತಾರೆ.''[೧೨] ಕರ್ನಾಟಕದ ಕೈಷಿಯತ್ತುಗಳು

ಎಂಬ ಗ್ರಂಥದಲ್ಲಿ ಇತರೆ ಕೈಷಿಯತ್ತುಗಳ ಭಾಗದಲ್ಲಿ "ಕೊರವರು ವಾಂಡ್ಲೆ ಕೈಷಿಯತ್ತು ಎಂಬ ಮಾಹಿತಿ ನೀಡಲಾಗಿದೆ. ಆ ಕೊರವ ಪ್ರಭೇದಗಳನ್ನು, ಆಚರಣೆಗಳ, ಸಂಪ್ರದಾಯಗಳ ಬಗ್ಗೆ ಸ್ವತಃ ಬರೆದುಕೊಂಡಿದ್ದಾರೆ".[೧೩] ಕರ್ನಾಟಕ ಕೈಷಿಯತ್ತಗಳು ಎಂಬ ಪುಸ್ತಕದಲ್ಲಿ ಮೆಕೆಂಝಿ ಸಂಪುಟ-೧೭೪ರಲ್ಲಿ ಇವರ ಬಗ್ಗೆ ಮಾಹಿತಿ ನೀಡಲಾಗಿದೆ. "ನಮ್ಮ ಕುಲಕ್ಕೆ ಯಾವ ಕುಲದವರೂ ಕೂಡಿದರೂ ಅವರ ತಲೆ ಬೋಳಿಸಿ, ಉಗುರು ತೆಗೆದು, ಗುಡಕಟ್ಟಿ ಸುಟ್ಟು ಆ ಮೇಲೆ ಊಟ ಮಾಡಿ, ಗುರುಕಾಣಿಕೆ ತೆಕ್ಕೊಂಡು ಕುಲದಲ್ಲಿ ಹಾಕಿಕೊಳ್ಳಬೇಕು ಎಂದು ತಿಳಿಸಲಾಗಿದೆ".[೧೪]

ಒಂದು ಜನಪದ ಐತಿಹ್ಯ ಪ್ರಕಾರ ಒಂದು ಕುಲದಲ್ಲಿ ಡೊಂಬರು ಮತ್ತು ಕೊರವರು ಅಣ್ಣ ತಮ್ಮಂದಿರಾಗಿದ್ದರಂತೆ. ಬೆಳೆದು ವಯಸ್ಸಿಗೆ ಬರಲು ಇಬ್ಬರಿಗೂ ಕನ್ಯೆಯನ್ನು ನೋಡುತ್ತಿರುವಾಗ ಕನ್ಯೆಯರ ಅಭಾವ ಇದ್ದ ಕಾರಣ, ತೆರವು ಕೊಟ್ಟು ಮದುವೆಯಾಗಬೇಕಾಯಿತು. ಇಬ್ಬರೂ ಒಂದೇ ಕನ್ಯೆಗಾಗಿ ಹಂಬಲಿಸಿದರು. ಡೊಂಬರವ ಇಪ್ಪತ್ತು ರೂಪಾಯಿ, ತೆರವು ಕೊಡುವುದಾಗಿ ಹೇಳಿದರೆ, ಕೊರವರವ ಇಪ್ಪತ್ತೈದು ರೂಪಾಯಿ ಕೊಡುವುದಾಗಿ ಹೇಳಿದನು. ಹೀಗಾಗಿ ಕನ್ಯೆ ಆಗ ಕೊರವನ ಹೆಂಡತಿಯಾದಳು ಅಂದಿನಿಂದ ಈ ಎರಡು ಗುಂಪುಗಳಲ್ಲಿ ವೈಷಮ್ಯ ಬೆಳೆದು ಬೇರೆ ಬೇರೆಯಾದರೆಂದು ಹೇಳುತ್ತಾರೆ".[೧೫] ಡಾ. ಹಿ.ಶಿ. ರಾಮಚಂದ್ರಗೌಡರು ಬೀದರನಲ್ಲಿ ನಡೆದ ದೇಸಿ ಸಮ್ಮೇಳನದ ೨೦೦೩ರಲ್ಲಿ ತಮ್ಮ ಭಾಷಣದಲ್ಲಿ "ಕರ್ನಾಟಕ ಅಲೆಮಾರಿ ಜನಾಂಗಗಳೆಂದರೆ ಹಲವಾರು. ಅವರಲ್ಲಿ ಕೊರವರು ಸಹ ಒಂದು ಎಂದು ತಿಳಿಸಿದ್ದಾರೆ".[೧೬] ಡಾ. ಎಚ್.ಟಿ. ಪೋತೆಯವರು ವೃತ್ತಿ ಸಂಬಂಧಿ ಲೋಕದೃಷ್ಟಿ ಯಲ್ಲಿ ಕನ್ನಡ ನೆಲದಲ್ಲಿ ವಾಸ ಮಾಡುತ್ತಿರುವ ಬುಡಕಟ್ಟಿನ ವಿಭಿನ್ನ ಅಲೆಮಾರಿಗಳಲ್ಲಿ ಕೊರವರು ಜನಾಂಗವನ್ನು ಹೆಸರಿಸಿದ್ದಾರೆ. "ಇವರು ಒಂದೇ ವಲಯ ಅಥವಾ ಸ್ಥಳದಲ್ಲಿ ನೆಲೆಯೂರಿ ನಿಲ್ಲದೆ ಜೀವನೋಪಾಯಕ್ಕಾಗಿ ಕುಟುಂಬ ಸಮೇತ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅಲೆದಾಡುವುದರಿಂದ ಅಲೆಮಾರಿಗಳೆಂದು ಕರೆಯಲಾಗಿದೆ. ಕೊರವರು ಪಜ, ಕೊರವರು, ಕೊರವಂಜಿಗಳು ಎಂಬ ಪದ ಬಳಕೆಯಾಗಿದೆ".[೧೭] ಡಾ. ಬಸವರಾಜ ಮಲಶೆಟ್ಟಿ ಮತ್ತು ಡಾ.ಪಿ.ಎಸ್. ಹರೀಶ್ ಅವರು "ಹೆಣ್ಣು ಮಕ್ಕಳ ಆಭರಣಗಳು, ಹಚ್ಚೆ ಹಾಕುವುದು ಮತ್ತು ಕಸೂತಿ ಹಾಕುವುದರ ಬಗ್ಗೆ ಮಾಹಿತಿ ನೀಡಿದ್ದಾರೆ".[೧೮] ಎಂ.ಜಿ. ಈಶ್ವರಪ್ಪನವರು ತಿಳಿಸುವಂತೆ "ಅಲೆಮಾರಿಗಳಿಗೆ ನಮ್ಮ ಸಮಾಜದ ಭ್ರಷ್ಟತೆಯಾಗಲಿ, ಮೋಸವಾಗಲಿ, ಸ್ವಾರ್ಥವಾಗಲಿ ಖಂಡಿತ ಗೊತ್ತಿಲ್ಲ. ನಾವು ಕೊರಚರನ್ನು, ಕೊರವರನ್ನು ಇವರು ಕಳ್ಳತನ ಮಾಡುವ ಜಾತಿಯವರು, ಜನಾಂಗದವರು ಅಂತ ಹೇಳಿದರೆ ಅವರು ಆರ್ಥಿಕವಾಗಿ ಸದೃಢರಾಗಿ ಇಲ್ಲದಿರೋದಕೋಸ್ಕರ ಅವರು ಕಳ್ಳತನ ಮಾಡ್ತಾರೆ ಅಷ್ಟೇ ಹೊರತು ಅವರು ಸಮಾಜದಲ್ಲಿ ಭದ್ರತೆಯನ್ನು ಕೊಟ್ಟರೆ ಆರ್ಥಿಕವಾದ ಸದೃಢತೆಯನ್ನು ಕೊಟ್ಟರೆ, ಶಿಕ್ಷಣವನ್ನು ಕೊಟ್ಟರೆ, ಅವರಿಗೆ ಉದ್ಯೋಗವನ್ನು ಕೊಟ್ಟರೆ ಅವರೆಲ್ಲ ಹಾಗೆ ಮಾಡಲಿಕ್ಕೆ ಸಾಧ್ಯವೇ ಇಲ್ಲ ಎಂಬುದು ತಿಳಿಸಿದ್ದಾರೆ. ಇದು ನಿಜ".[೧೯]

ಡಾ. ಡಿ.ಬಿ. ನಾಯಕ ಅವರು "ಅಲೆಮಾರಿಗಳ ಅಧ್ಯಯನ ಸಮೀಕ್ಷೆ ಲೇಖನದಲ್ಲಿ ಕೊರವಂಜಿಯವರು ಎಂಬ ಪದವನ್ನು ಅಲೆಮಾರಿಗಳಲ್ಲಿ ಬಳಸಿದ್ದಾರೆ."[೨೦] ಕೆ ಬಸಪ್ಪನವರು ಬಳ್ಳಾರಿಯ

ಕೌಲ್ ಬಜಾರಿನ ಸಾಂಸ್ಕೃತಿಕ ಅಧ್ಯಯನ ಎಂಬ ತಮ್ಮ ಪ್ರಬಂಧದಲ್ಲಿ "ಕೊರವರ ಬೆಡಗುಗಳ ಬಗ್ಗೆ ಮಾಹಿತಿಯನ್ನು ಮತ್ತು ಕೊರಚರ ಬಗ್ಗೆ ಮಾಹಿತಿಯನ್ನು ನೋಡಲಾಗಿದೆ."[೨೧] ಕೊರವರು ಆಡುವ ಭಾಷೆಯು ಕುಳುವರ ಭಾಷೆ. ಇವರು ಪಶುಪಾಲಕರು, ಬೇಟೆಗಾರರು, ವಾದ್ಯ ನುಡಿಸುವವರು, ವ್ಯವಸಾಯಗಾರರು. ಕೆಲವರು ಕಳ್ಳತನ ಮಾಡುತ್ತಿದ್ದರು ಎಂಬುದು ತಿಳಿದು ಬರುತ್ತದೆ. "ಕರ್ನಾಟಕದಲ್ಲಿ ಕೊರಮ, ಕೊರಮ ಶೆಟ್ಟಿ, ಕೊರಚ, ಕೊರವ, ಭಜಂತ್ರಿ ಎಂದೂ ಆಂಧ್ರಪ್ರದೇಶದಲ್ಲಿ ಎರಕುಲವೆಂಡಲು, ಯರಕುಲವೆಂಡಲು ಕುಳುವರು ಎಂದೂ, ರೆವರೆಂಡ್ ಜೆ. ರೆನ್, ಡಾ.ಓಪರ್ಟ್ ಅವರು ತಿಳಿಸುತ್ತಾರೆ. ಮಹಾರಾಷ್ಟ್ರದಲ್ಲಿ ಕೈಕಾಡಿ, ಕೇರಳದಲ್ಲಿ ಸದನಾರ್, ಗುಜರಾತ್ ಮತ್ತು ರಾಜಸ್ಥಾನಗಳಲ್ಲಿ ಬೀಲ ಮತ್ತು ಬಿಲ್ಲಾರ ಎಂದು ಕರೆಯುವುದರ ಬಗ್ಗೆ ಶ್ರೀ ಎಂ. ಶ್ಯಾಮ ಪ್ರಸಾದ್ ಅವರು ತಿಳಿಸುತ್ತಾರೆ."[೨೨] ಕನ್ನಡ ಜನಪದ ಸಾಹಿತ್ಯದಲ್ಲಿ ಕೊರವಂಜಿ ಬಗ್ಗೆ ತಿಳಿಯುತ್ತದೆ. ಶ್ರೀಕೃಷ್ಣ ಪಾರಿಜಾತ, ಯಕ್ಷಗಾನ ಪ್ರಸಂಗಗಳು, ಜನಪದ ಗೀತೆಗಳಲ್ಲಿ ಕೊರವಂಜಿ ಪ್ರಮುಖ ಸ್ಥಾನ ಪಡೆದಿದ್ದಾಳೆ.

ಕರ್ನಾಟಕದ ಜನವರ್ಗಗಳ ಸಂಬಂಧವಾಗಿ ಇಂಗ್ಲಿಷ್‌ನಲ್ಲಿ ಪ್ರಕಟವಾಗಿರುವ ಗ್ರಂಥದಲ್ಲಿ ಮೈಸೂರಿನ ಬುಡಕಟ್ಟುಗಳು ಮತ್ತು ಜಾತಿಗಳು ಎಂಬ ಗ್ರಂಥವನ್ನು ಪ್ರತ್ಯೇಕವಾಗಿಯೆ ಪ್ರಸ್ತಾಪಿಸಬೇಕು. ನಂಜುಂಡಯ್ಯ ಮತ್ತು ಅನಂತಕೃಷ್ಣ ಅಯ್ಯರ್ ೧೯೨೮-೧೯೩೬. ಈ ಗ್ರಂಥ ಕರ್ನಾಟಕದ ಜಾತಿ ಅಥವಾ ಬುಡಕಟ್ಟುಗಳ ಅಧ್ಯಯನಕ್ಕೆ ಆಧಾರ ಗ್ರಂಥವಾಗಿದೆ. ಕ್ಷೇತ್ರ ಅಧ್ಯಯನದಿಂದ ಸಿದ್ಧಪಡಿಸಿರುವ ಈ ಗ್ರಂಥ ನಾಲ್ಕು ಸಂಪುಟಗಳಲ್ಲಿ ಪ್ರಕಟಗೊಂಡಿದ್ದು. ಕರ್ನಾಟಕದ ಕೆಲವು ಮುಖ್ಯ ಬುಡಕಟ್ಟು ಮತ್ತು ಜಾತಿಗಳ ಬಗೆಗೆ ಅತ್ಯಂತ ಕ್ರಮಬದ್ಧವಾದ ರೀತಿಯಲ್ಲಿ ವಿವರಗಳನ್ನು ಒದಗಿಸುತ್ತದೆ. ''ಹಾಸನ ಜಿಲ್ಲೆಯ ಹಾಸನ ತಾಲ್ಲೂಕಿನ ಚಾಮರಾಜಪುರದ ಕೊರಮರನ್ನು ಕುರಿತು ಸಂಶೋಧನೆ ನಡೆಸಿದ ಎ.ಎಸ್. ಶಿವಲಿಂಗೇಗೌಡ (೧೯೭೩) ಅವರು ತಮ್ಮ ಪ್ರಬಂಧದಲ್ಲಿ ಕೊರವರ ಆರ್ಥಿಕ ವ್ಯವಸ್ಥೆ, ಸಮಾಜ ಜೀವನ, ಕುಟುಂಬ ಮತ್ತು ವಿವಾಹ ಪದ್ಧತಿ, ಧಾರ್ಮಿಕ ಚಟುವಟಿಕೆಗಳ ಬಗೆಗೆ ಮಾಹಿತಿ ಒದಗಿಸಿದ್ದಾರೆ''.[೨೩] ಡಾ. ವೀರಣ್ಣ ರಾಜೂರ ಅವರು ''ಜಾನಪದ ಸಾಹಿತ್ಯ ದರ್ಶನ'' ಭಾಗ-೧೩ರಲ್ಲಿ ಜನಾಂಗಿಕ ಅಧ್ಯಯನದಲ್ಲಿ ''ಕುಂಚಿಕೊರವರು'' ಎಂಬ ಲೇಖನವನ್ನು ಬರೆದಿದ್ದಾರೆ. ದ್ರಾವಿಡ ಬುಡಕಟ್ಟಿಗೆ ಸೇರಿದ ಅಲೆಮಾರಿ ಜನಾಂಗ. ಇದು 'ಕೊರವ' ಜಾತಿಯ ಒಂದು ಪ್ರಭೇದ''.[೨೪] ಕರ್ನಲ್ ಮೆಕೆಂಝಿ (೧೭೫೪-೧೮೨೧) ಅವರು ಜನವಾಸಿ ಪ್ರದೇಶದ ಕೊರವ ಜನಾಂಗದವರಿಗೆ ಸಂಬಂಧಿಸಿದ ಪ್ರಾಚೀನ ತಮ್ಮ ಪ್ರಥಮ ದಾಖಲೆ ಎನಿಸಿದ 'ಕೊರಮರು ವಾಂಗ್ಲೆ ಕೈಫಿಯತ್ತು' ಎಂಬ ಕೃತಿಯಲ್ಲಿ ನಾಲ್ಕು ಪಂಗಡಗಳನ್ನು ಗುರುತಿಸಲಾಗಿದೆ.

ಭಾಸ್ಕರ್ ಬಿ. ಮಲಾಜುರೆ ಅವರು ಕೊರವ ಪ್ರಮುಖವಾದವು ಎರಡು ಕಾವಾಡಿ, ಸಾತ್ವಡಿ, ಮಹಾರಾಷ್ಟ್ರದಲ್ಲಿ ಇವುಗಳನ್ನು ಮನೆ, ಜಾಧವ ಎಂದು ಕರೆಯುತ್ತಾರೆ. ಕಾವಾಡಿಯಲ್ಲಿ ೧೫, ಸಾತ್ವಾಡಿಯಲ್ಲಿ ೨೧ ಒಳ ಪ್ರಭೇದಗಳಿವೆ. ಮೊದಲು ಈ ಪ್ರಭೇದಗಳೆಲ್ಲ ಒಂದೇ ಆಗಿದ್ದು, ಒಂದೇ ರೀತಿಯ ಭಾಷೆ, ಊಟ, ಉಡುಗೆ ವೃತ್ತಿ, ರೀತಿ ನೀತಿಗಳನ್ನು ಅವಲಂಬಿಸಿ ತಮ್ಮದೆ ಆದ ಬೇರೆ

ಬೇರೆ ಕಟ್ಟುಪಾಡುಗಳನ್ನು ನಿರ್ಮಿಸಿಕೊಂಡು ಪ್ರತ್ಯೇಕವಾಗಿ ಬೆಳೆದುಬಂದಿವೆ. ಹಾಗೆ ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬಂದ ಕುಂಚಿಕೊರವರನ್ನು ಗುರುತಿಸಿದೆ.

ಉಪಸಂಹಾರದಲ್ಲಿ ''ಕೊರವರ ಸಮುದಾಯದ ಮಹಿಳೆ'' ಎಂಬ ಮಹಾಪ್ರಬಂಧದಲ್ಲಿ ಕಂಡುಕೊಂಡ ಫಲಿತಗಳನ್ನು ತಿಳಿಸಲಾಗಿದೆ.

೧. ಮಹಿಳೆಯರನ್ನು ನಿರ್ಲಕ್ಷ ಅಥವಾ ಬೇಜವಾಬ್ದಾರಿಯಿಂದ ನೋಡಲಾಗುತ್ತದೆ. ಎಷ್ಟೇ ವಿದ್ಯಾವಂತಳಾದರೂ ಅವಳಿಗೆ ಬೆಲೆ ಇಲ್ಲದಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಪುರುಷಪ್ರಧಾನ ಸಮಾಜವಾಗಿದೆ.

ಪುರುಷರಲ್ಲಿ ಶೇ. ೭೫ರಷ್ಟು ವಿದ್ಯಾಭ್ಯಾಸ ಪಡೆದಿದ್ದರೆ, ಮಹಿಳೆಯರು ಶೇ. ೫೦ರಷ್ಟು ಕಂಡುಬರುತ್ತಾರೆ. ಶಿಕ್ಷಣದಿಂದ ವಂಚಿತಳಾಗಿದ್ದಾಳೆ. ಮಹಿಳೆಗೆ ಆರ್ಥಿಕ ಪ್ರಾಬಲ್ಯವಿದ್ದರೂ ಅದು ಪುರುಷರ ವಶವಾಗುತ್ತದೆ. ಮದುವೆ, ಶಿಕ್ಷಣ ಮೊದಲಾದವು ಆಯ್ಕೆ ಪ್ರಶ್ನೆ ಮಾತ್ರ ಪುರುಷನಿಗಿರುತ್ತದೆ, ಮಹಿಳೆಯರಿಗಲ್ಲ. ಅದೇ ಪುರಾತನವಾದ ನಂಬಿಕೆ ಮತ್ತು ಸಂಪ್ರದಾಯಗಳವೆ. ಬಾಲ್ಯವಿವಾಹ ಪದ್ಧತಿಯು ಜಾರಿಯಲ್ಲಿದೆ. ಕುಲದಿಂದ ಹೊರ ಹಾಕುವ ಮತ್ತು ದಂಡ ವಿಧಿಸುವ ಪದ್ಧತಿಯು ಜಾರಿಯಲ್ಲಿದೆ. ಆಧುನಿಕತೆಗೆ ಹೊಂದಿಕೊಂಡು ಹೋಗುವುದಕ್ಕೆ ಅನೇಕ ವರ್ಷಗಳೇ ಬೇಕಾಗುತ್ತದೆ. ಇಂದಿನ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವಲ್ಲಿ ಮಹಿಳೆಯರಿಗೆ ಆಸಕ್ತಿ ಇದೆ. ಆದರೆ ಬಡತನದ ಕಾರಣದಿಂದ ಮಕ್ಕಳಿಗೆ ವಿದ್ಯಾಭ್ಯಾಸ ಕಲಿಸಲು ಆಗುತ್ತಿಲ್ಲ. ಸ್ವ-ಸಹಾಯ ಸಂಘಗಳನ್ನು ಕಟ್ಟಿಕೊಂಡು ಹಣದ ಸಂರಕ್ಷಣೆ ಮಾಡಲಾಗಿದೆ. ಮಹಿಳೆಯರಿಂದ ಕೆಲವು ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ದೇವಾಲಯದ ಮೂರ್ತಿಗೆ ಅಲಂಕಾರದ ಒಡವೆಗಳನ್ನು ಮಾಡಿಸಿ ಹಾಕುವುದು, ಕೆಲವರು ಮಹಿಳೆಯರಿಗೆ ಸ್ವ-ಸಹಾಯ ಸಂಘದಲ್ಲಿ ಭಾಗವಹಿಸಲು ಅನುವು ಮಾಡಿದೆ. ಸರ್ಕಾರದ ಸಹಾಯ ಸೌಲಭ್ಯಗಳ ಬಗ್ಗೆ ಮಹಿಳೆಯರಿಗೆ ತಿಳುವಳಿಕೆ ಮತ್ತು ಅರಿವು ಇಲ್ಲದಿರುವುದು ಮೊದಲಾದವುಗಳು ಕಂಡುಬರುತ್ತವೆ. ಅನುಬಂಧ-೧ರಲ್ಲಿ ಹಾಡು, ಒಗಟು, ಗಾದೆ, ಕಥೆಗಳವೆ, ಅನುಬಂಧ ೨ರಲ್ಲಿ ವ್ಯಕ್ತಿ ವಿವರ, ಆಧಾರ ಗ್ರಂಥಗಳು, ಛಾಯಾಚಿತ್ರಗಳು, ನಕ್ಷೆಗಳನ್ನು ಕಾಣಬಹುದು.

ಅಡಿ ಟಿಪ್ಪಣಿಗಳು

೧. ಇರುಳಿಗರು ಜಾನಪದ ಅಧ್ಯಯನ, ಡಾ.ಎಂ. ಭೈರೇಗೌಡ, ಪು. ೩

೨. ಇರುಳಿಗರು ಜಾನಪದ ಅಧ್ಯಯನ, ಡಾ.ಎಂ. ಭೈರೇಗೌಡ, ಪು. ೫

೩. ಜಾನಪದ ನೆಲೆಯಲ್ಲಿ ಮಹಿಳೆ, ಶಾರದಾ ಶಾಮಣ್ಣ, ಪು. ೪೪

೪. ಇರುಳಿಗರು ಜಾನಪದ ಅಧ್ಯಯನ, ಡಾ.ಎಂ. ಭೈರೇಗೌಡ, ಪು. ೩

೫. ಮುದ್ದೆ ಕಂಬಾರರು, ಆರ್.ಬಿ. ಕುಮಾರ್, ಪು. ೧

೬. ಕುಂಚಿಟಿಗರ, ಸಾಂಸ್ಕೃತಿಕ ಇತಿಹಾಸ, ಎಂ.ಹೆಚ್. ನಾಗರಾಜ, ಪು. ೭

೭ ಗಿರಿಜನ ಸಂಸ್ಕೃತಿ, ಪ್ರೋ. ಕಾಳೆಗೌಡ ನಾಗವಾರ, ಪು. ೨೬

೮. ಜಾನಪದ ಸಂಸ್ಕೃತಿ, ನಂ. ತಪಸ್ವಿ ಕುಮಾರ, ಪು.

೯. The Tribes and Castes of Bombay, vol II

೧೦. ದಕ್ಷಿಣ ಕರ್ನಾಟಕದ ಕೊರಮರು, ಡಾ. ಬಿ.ಪಿ. ರಾಮಯ್ಯ ಪು. ೨೫

೧೧. ಕೊರವರು, ಈರಣ್ಣ ಎನ್. ಕೋಸಗಿ, ಪು. ೨೪

೧೨. ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ತಿ.ನಂ. ಶಂಕರನಾರಾಯಣ, ಪು. ೧೬

೧೩. ಕರ್ನಾಟಕದ ಕೈಪಿಯತ್ತುಗಳು, (ಸಂ) ಡಾ. ಎಂ.ಎಂ. ಕಲಬುರ್ಗಿ, ಪು. ೫೭೪

೧೪. ಕರ್ನಾಟಕದ ಕೈಪಿಯತ್ತುಗಳು, (ಸಂ) ಡಾ. ಎಂ.ಎಂ. ಕಲಬುರ್ಗಿ, ಪು.XXX III

೧೫. ದಲಿತರ ಬದುಕು ಮತ್ತು ಸಂಸ್ಕೃತಿ ಜಾನಪದೀಯ ಅಧ್ಯಯನ, ಡಾ. ಅರ್ಜುನ ಗೊಳಸಂಗಿ, ಪು.೧೯೭

೧೬. ಅಲೆಮಾರಿಗಳ ಸ್ಥಿತಿಗತಿ, (ಸಂ) ಡಾ. ಸ.ಚಿ. ರಮೇಶ, ಪು. ೧೧

೧೬. ಅಲೆಮಾರಿಗಳ ಸ್ಥಿತಿಗತಿ, (ಸಂ) ಡಾ. ಸ.ಚಿ. ರಮೇಶ, ಪು. ೧೫೯

೧೮. ಅಲೆಮಾರಿಗಳ ಸ್ಥಿತಿಗತಿ, (ಸಂ) ಡಾ. ಸ.ಚಿ. ರಮೇಶ, ಪು. ೧೯೨

೧೯. ಅಲೆಮಾರಿಗಳ ಸ್ಥಿತಿಗತಿ, (ಸಂ) ಡಾ. ಸ.ಚಿ. ರಮೇಶ, ಪು. ೪೭

೨೦. ಅಲೆಮಾರಿಗಳ ಸ್ಥಿತಿಗತಿ, (ಸಂ) ಡಾ. ಸ.ಚಿ. ರಮೇಶ, ಪು. ೫೯

೨೧. ಬಳ್ಳಾರಿಯ ಕೌಲ್ ಬಜಾರಿನ ಸಾಂಸ್ಕೃತಿಕ ಅಧ್ಯಯನ, ಕೆ. ಬಸಪ್ಪ, ಪು. ೫೮

೨೨. ಬಳ್ಳಾರಿಯ ಕೌಲ್ ಬಜಾರಿನ ಸಾಂಸ್ಕೃತಿಕ ಅಧ್ಯಯನ, ಕೆ. ಬಸಪ್ಪ, ಪು. ೧೨೧

೨೩. ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಡಾ. ಅಂಬಳಿಕೆ ಹಿರಿಯಣ್ಣ, ಪು. ೮

೨೪. ಜಾನಪದ ಸಾಹಿತ್ಯ ದರ್ಶನ-೧೭, ಸೋಮಶೇಖರ ಇಮ್ರಾಪುರ, ಪು. ೧೮೮

ಅಧ್ಯಾಯ - ೨

ಕೊರವ ಸಮುದಾಯ ಮತ್ತು ಮಹಿಳೆ

ಅಧ್ಯಾಯ ಎರಡು

ಕೊರವ ಸಮುದಾಯ ಮತ್ತು ಮಹಿಳೆ

ಸಮುದಾಯದ ಸ್ಥೂಲ ಪರಿಚಯ

ವಿವಿಧ ಭಾಷೆಗಳನ್ನು ಮತ್ತು ಸಂಪ್ರದಾಯಗಳನ್ನು ಹೊಂದಿರುವಂತಹ ಭಾರತದ ಪರ್ಯಾಯ ಭಾಗದಲ್ಲಿ ಕೊರವ ಪಂಗಡದ ಸದಸ್ಯರನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಉತ್ತರ ಆರ್ಕಾಟ್ ಜಿಲ್ಲೆಯ ಉತ್ತರ ಭಾಗದಿಂದ ದಕ್ಷಿಣದವರೆಗೆ ಕೊರವ ಸಮುದಾಯದವರನ್ನು ಕೊರಚ ಅಥವಾ ಕೊರ್ಚ ಎಂದು ಕರೆದರೆ ಸ್ವಾಧೀನ ಜಿಲ್ಲೆಗಳಲ್ಲಿ ಇವರನ್ನು ಎರುಕಾಲ ಅಥವಾ ಎರಕಾಲವೆಂದು ಕರೆಯುತ್ತಾರೆ. ಕಲಕತ್ತಾದಲ್ಲಿ ಇವರನ್ನು ಅಳಲೆಕಾಯಿ ಪಂಡಿತನೆಂದು ಮೂದಲಿಸಿ, ಇವರ ಹೆಸರಿನಲ್ಲಿ ಮರಾಠ ಶಬ್ದವನ್ನು ಬಳಸುತ್ತಾರೆ. ಇದು ಅವರು ಸ್ವತಃ ಹೊಂದಿರುವ ಸಾಮಾಜಿಕ ಸ್ತರಕ್ಕಿಂತ ಹೆಚ್ಚಿರುವ ದಕ್ಷಿಣದ ಯಾವುದೋ ಸಮುದಾಯಕ್ಕೆ ಸೇರಿದವರೆಂದು ತಿಳಿಸುತ್ತವೆ. ಕೆಲವು ಕೊರವರು ವೆಲ್ಲಾಳರಿಗೆ ಸಮಾನವಾಗಿದ್ದು, ಇವರು ತಾವೇ ಪಿಳ್ಳೈ ಎಂಬ ಹೆಸರಿನೊಂದಿಗೆ ಅಗಂಬದಿರ ವೆಲ್ಲಾಳರೆಂದು ಕರೆಯುತ್ತಾರೆ. ಇನ್ನು ಕೆಲವರು ತಮ್ಮನ್ನು ಪಳ್ಳಿ, ಕವರ್‍ಯಾ, ಇದ್ಯಾಯಿನ್, ರೆಡ್ಡಿ ಮೊದಲಾಗಿ ಕರೆದುಕೊಳ್ಳುತ್ತಾರೆ. ದೇಶದಲ್ಲಿ ರೈಲು ಸಂಪರ್ಕವು ವಿಕಾಸವಾದಂತೆ ಈ ಸಮುದಾಯದವರು ರೈಲಿನಲ್ಲಿ ವಲಸೆ ಹೋಗಲು ಪ್ರಾರಂಭಿಸುತ್ತಿದ್ದು, ರೈಲಿನಲ್ಲಿ ಕಳ್ಳತನವನ್ನು ಮಾಡಿ ಪರಾರಿಯಾಗುವುದು ಮತ್ತು ಇತರ ಹಿಂಸಾತ್ಮಕ ಕೃತ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ೧೮೯೯ರಲ್ಲಿ ಕೇಂದ್ರ ರೈಲ್ವೆ ಅಧಿಕಾರಿಗಳ ಅಭಿಪ್ರಾಯದಂತೆ- "ಕೇಪಮಾರಿ ಕೊರವರು" ಎಂದು ಕರೆಯಲ್ಪಡುವ ವಿಶಾಲ ಸಮುದಾಯವುಳ್ಳ ಕಳ್ಳರು ಅಧಿಕವಾಗಿ ರೈಲಿನಲ್ಲಿ ಬಹಳ ದೂರ ಪ್ರಯಾಣಿಸುತ್ತಾರೆ. ಅದರಲ್ಲಿ ಕೆಲವು ಸಮುದಾಯದವರು ಕಟಕ್‌ನಲ್ಲಿ ನೆಲೆಯಾಗಿದ್ದು, ಅಲ್ಲಿ ಅವರು

ಮೂಲವ್ಯಾಧಿ ರೋಗಕ್ಕೆ ಔಷಧಿಯನ್ನು ಕೊಡುವ ವೈದ್ಯರಾಗಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಕೆಲವು ಸಮುದಾಯದವರು ಮಿಡ್ನಾಪುರದಲ್ಲಿದ್ದರೆ, ಕೆಲವರು ಕಲ್ಕತ್ತಾಗೆ ವಲಸೆ ಹೋಗುತ್ತಿದ್ದಾರೆ. ಮತ್ತೆ ಕೆಲವರು ಕೆಲವು ವರ್ಷಗಳ ಹಿಂದೆ ಪುರಿಯಲ್ಲಿದ್ದರು. ಇತ್ತೀಚೆಗೆ ಈ ಸಮುದಾಯದ ಒಂದು ಗುಂಪು ತಿನ್ನವೇಲಿಗೆ ವಲಸೆ ಹೋಗಿದ್ದು, ಅಲ್ಲಿ ಸೇರ್ಮದೇವಿ ಎಂಬ ಪ್ರದೇಶದಲ್ಲಿ ವಾಸಿಸುತ್ತಿದ್ದು ತಮ್ಮನ್ನು ತಾವು ಸೇರ್ವೈಕಾರರೆಂದು ಕರೆಯುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಹೀಗಿರುವಾಗ ಒಂದು ದಿನ ತಿನ್ನವೇಲಿಯಲ್ಲಿ, ಒಂದು ಮಿಷನರಿಯವರ ಮನೆಯಲ್ಲಿ ಒಬ್ಬ ಅಡುಗೆಯವನು ತನ್ನ ಕಾರ್ಯವನ್ನು ಮಾಡುತ್ತಿದ್ದಾಗ ಒಬ್ಬ ಆಗಂತುಕನು ಕೋಳಿಯನ್ನು ಮಾರುತ್ತಾ ಆ ಮನೆಗೆ ಬಂದನು. ಅಡುಗೆಯವರು ಒಮ್ಮೆ ಯೋಚಿಸಿ, ಆತನು ಹೇಳುತ್ತಿರುವ ದರಕ್ಕಿಂತ ಅರ್ಧ ದರದಲ್ಲಿ ಕೊಳ್ಳುವೆನೆಂದು ಯೋಚಿಸಿ, ಖರೀದಿ ಮಾಡಿ, ತನ್ನ ಹೆಂಡತಿಯ ಮುಂದೆ ತನಗೂ ಚರ್ಚೆ ಮಾಡಿ ಕಡಿಮೆ ಬೆಲೆಗೆ ವಸ್ತುಗಳನ್ನು ಖರೀದಿಸುವ ಸಾಮರ್ಥ್ಯವಿದೆಯೆಂದು ತೋರಿಸಿದನು. ಆದರೆ ಆತನ ಹೆಂಡತಿ ಆ ಕೋಳಿಯು ಹಿಂದಿನ ದಿನ ತಮ್ಮ ಮನೆಯಿಂದಲೇ ಕಳ್ಳತನ ಮಾಡಿದುದೆಂದು ತಿಳಿದು ತನ್ನ ಮೂರ್ಖತನಕ್ಕೆ ತಲೆ ತಗ್ಗಿಸಿದನು. ಈ ಕೋಳಿಯನ್ನು ಮಾರಿದವನು ಕೊರವ ಸಮುದಾಯದವನು.

೧೯೦೩ರಲ್ಲಿ ಕೊರವರ ಒಂದು ಗುಂಪು ಪೂಜಾರಿಗಳ ಹಾಗೆ ವೇಷ ಹಾಕಿಕೊಂಡಿದ್ದನ್ನು ಪೋಲಿಸರು ಪುರಿಯಲ್ಲಿ ಬಂಧಿಸಿದ್ದರು. ಈ ಗುಂಪಿನಲ್ಲಿ ಒಬ್ಬ ಸದಸ್ಯನಿಗೆ ಕೆಲವು ವರ್ಷಗಳ ಹಿಂದೆ ಉತ್ತರ ಆರ್ಕಾಟ್ ಜಿಲ್ಲೆಯಲ್ಲಿ ನಡೆದ ಡಕಾಯಿತಿಯ ವಿಷಯವಾಗಿ ವಾರಂಟನ್ನು ವಿಧಿಸಲಾಗಿದ್ದು, ಜಾಮೀನನ್ನು ಕೂಡಾ ಪಡೆಯದವನಾಗಿದ್ದನೆಂದು ಪೋಲಿಸರು ವಿಚಾರಣೆಯ ವೇಳೆ ಪತ್ತೆ ಮಾಡಿದ್ದರು. ಈ ಘಟನೆಯ ವರದಿಯು ಈ ರೀತಿಯಾಗಿದೆ- ಕೇಪ್‌ಮಾರಿಗಳೆಂಬುದು ಕೊರವ ಪೂಜಾರಿಗಳ ಒಂದು ಪಂಗಡವಾಗಿದ್ದು, ಇವರು ತಂಜಾವೂರು ಜಿಲ್ಲೆಯ ಸಣ್ಣ ಹಳ್ಳಿಯವರಾಗಿದ್ದು, ಭಾರತ ದೇಶದಾದ್ಯಂತ ಹರಡಿಕೊಂಡಿದ್ದಾರೆ. ಇದರಲ್ಲಿ ಕೆಲವರು ಹಿಂದೆ ಮತ್ತೆ ಕೆಲವರು ಈಗಲೂ ಕಂಟಕ, ಬಲಸೂರು, ಮಿಡ್ನಾಪುರ, ಅಹಮದಾಬಾದ್, ಪಾಟ್ನಾ, ಮುಂಬಯಿ, ಸಿಕಂದರಾಬಾದ್ ಮತ್ತು ಇತರ ಸ್ಥಳಗಳಲ್ಲಿ ನೆಲೆಸಿದ್ದಾರೆ. ಈ ಸಮುದಾಯದವನೊಬ್ಬನು ಮುಂಬಯಿಯಲ್ಲಿ ಉನ್ನತ ಸ್ಥಾನವನ್ನು ಪಡೆದಿದ್ದಾನೆ. ಆದರೆ ಈ ಪಂಗಡದವರ ಪ್ರಧಾನ ಉದ್ಯೋಗವೆಂದರೆ ಮೂಲವ್ಯಾಧಿ ಮತ್ತು ಪಿಸ್ತುಲಾ ರೋಗಗಳಿಗೆ ಔಷಧಿ ಕೊಡುವುದಾಗಿದ್ದೆ ಈ ಸಮುದಾಯದವರು ಒಂದು ಸ್ಥಳದಲ್ಲಿ ನೆಲೆಸಿ ಆ ಪ್ರದೇಶದ ಸುತ್ತಮುತ್ತಲಲ್ಲಿಯೇ ಇರುತ್ತಾರೆ. ಕೇಪ್‌ಮಾರಿ ಪಂಗಡದವರನ್ನು ಮೋಸಗಾರರು ಮತ್ತು ಕೆಟ್ಟ ಲಕ್ಷಣ ಉಳ್ಳವರೆಂದು ಕರೆಯಲಾಗುತ್ತದೆ. ದಕ್ಷಿಣದ ಜಿಲ್ಲೆಗಳಲ್ಲಿ, ಆಸ್ತಿಯ ವಿಚಾರವಾಗಿ ಕಾಸುಕ್ಕಾರ ಬೆಟ್ಟಗಳು ಮತ್ತು ಶಾನಾನರು ಕೊರವರನ್ನು ಬಲವಾಗಿ ನಂಬಿದ್ದಾರೆ.

ಹೆಚ್. ಎ. ಸ್ಟುವರ್ಟ್‌ರ ಅಭಿಪ್ರಾಯದಂತೆ ಕೊರವ ಅಥವಾ ಎರುಕುಳರು ಭಾರತದಾದ್ಯಂತ ಕಂಡುಬರುವ ಅಲೆಮಾರಿ ಪಂಗಡದವರೆಂದು ಹೇಳಿದ್ದಾರೆ. ತೆಲುಗು ದೇಶದಲ್ಲಿ ಇವರನ್ನು ಎರುಕ್ಕಳವಂಡ್ಲು ಅಥವಾ ಕೊರಚವಂಡ್ಲು ಎಂದು ಕರೆಯುತ್ತಾರೆ. ಇವರು ಯಾವಾಗಲೂ ತಮ್ಮನ್ನು ಕುರ್ರು ಎಂದು ಗುರುತಿಸಿಕೊಂಡಿದ್ದಾರೆ. ವಿಲ್ಸನ್ ಮತ್ತು ಇತರರು ಈ ಶಬ್ದದ ಉತ್ಪತ್ತಿಯನ್ನು ವಿವಿಧ

ರೀತಿಯಲ್ಲಿ ತಿಳಿಸಿದ್ದಾರೆ. ಉದಾ: ಏರು ಶಬ್ದವು ಎರ್ರದಿಂದ ಬಂದಿದೆ. ಇದರರ್ಥ ಕೆಂಪು. ತೆಲುಗಿನಲ್ಲಿ ಎರಕಲವಂಡ್ಲು ಅಂದರೆ ಭಾಗ್ಯವನ್ನು ಹೇಳುವವರು ಎಂದರ್ಥ. ಹಾಗಾಗಿ ಇದು ಎರುಕಾಲ ಶಬ್ದದ ಉತ್ಪತ್ತಿಗೆ ಕಾರಣವೆಂದು ಡಾ. ಓಪರ್ಟರು ಅಭಿಪ್ರಾಯಪಡುತ್ತಾರೆ. ಕುರುವಂಡ್ಲು ಎಂಬ ಭಾಗ್ಯವನ್ನು ಹೇಳುವವರ ವೃತ್ತಿ ಮತ್ತು ಹೆಸರು ತೆಲುಗು ಜನರಿಗೆ ಎರುಕುಲವಂಡ್ಲು ಎಂದು ಹೇಳಲು ಪ್ರೇರೇಪಿಸಿತೆಂದು ಇವರು ಹೇಳುತ್ತಾರೆ. ಡಾ. ಓಪರ್ಟ್ ಅವರು ಇನ್ನು ಮುಂದುವರೆಯುತ್ತಾ ಕುರ್ರು ಶಬ್ದವನ್ನು 'ಕು' ಶಬ್ದದಿಂದ ಬಂದಿದೆ. ಇದರರ್ಥ ಬೆಟ್ಟವೆಂದು, ತಮಿಳು ಭಾಷೆಯಲ್ಲಿ ಕುರ್ರು ಅಥವಾ ಕುರ (ಕುರುಮಗಲ್) ಎಂಬುವುದನ್ನು ಗುಡ್ಡದಲ್ಲಿ ವಾಸಿಸುವ ಪಂಗಡಕ್ಕೆ ಹೇಳಲಾಗಿದೆಯೆಂದು ಅಭಿಪ್ರಾಯಪಡುತ್ತಾರೆ. ಈ ಪಂಗಡದವರ ಉದ್ಯೋಗದ ಕುರಿತಾಗಿ ಬಲವಾದ ವಾದವನ್ನು ಹೇಳಲಾಗುತ್ತದೆ. ಏಕೆಂದರೆ ಕಣಿ ಹೇಳುತ್ತಾ ಹೋಗುವಾಗ ಈ ಪಂಗಡ ಮಹಿಳೆಯರು ದಾರಿಯಲ್ಲಿ 'ಎರಕ್ಕೋ ಅಮ್ಮಾ ಎರಕ್ಕೋ' (ಕಣಿ ಅಮ್ಮಾ ಕಣಿ) ಎಂದು ಹೇಳುವುದು ಆಗಿದೆ. ಫ್ರಾನ್ಸಿಸ್ ಅವರು ಈ ರೀತಿಯಾಗಿ ಬರೆಯುತ್ತಾರೆ. "ಕುರುವರು ತಮಿಳುನಾಡಿನಲ್ಲಿ ಅದರಲ್ಲೂ ಕರ್ನೂಲು, ಸೇಲಂ, ಕೊಯಂಬತ್ತೂರು ಮತ್ತು ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿ ಕಂಡುಬರುವ ಅಲೆಮಾರಿ ಜನಾಂಗವಾಗಿದೆ. ಕುರುವರು ಎರುಕಳರಂತೆ ಹೆಚ್ಚಿನ ವಿಷಯಗಳಲ್ಲಿ ಸಮಾನರಾಗಿದ್ದಾರೆ. ಎರಡೂ ಪಂಗಡದವರು ಅಲೆಮಾರಿಗಳೂ, ಬುಟ್ಟಿ ಹೆಣೆಯುವಿಕೆ, ಕಣಿ ಹೇಳುವಿಕೆ ವೃತ್ತಿಯನ್ನು ಅನುಸರಿಸಿ ಅಸ್ಪಷ್ಟ ತಮಿಳನ್ನು ಮಾತನಾಡುತ್ತಾರೆ ಮತ್ತು ಇವರಿಬ್ಬರೂ ಒಂದೇ ಮೂಲದಿಂದ ಬಂದವರಾಗಿದ್ದಾರೆ". ಎರುಕ್ಕಾಳರು ತಮ್ಮ ತಮ್ಮಲ್ಲಿಯೇ ಕುರ್ರು ಅಥವಾ ಕುರ ಎಂದು ಕರೆಯುವುದೂ ಗಮನಾರ್ಹವಾಗಿದೆ. ಆದರೆ ಈ ಎರಡು ಪಂಗಡಗಳೂ ಕಂಡುಬರುವ ಜಿಲ್ಲೆಗಳಲ್ಲಿ ಅವರು ತಮ್ಮ ಹೆಸರನ್ನು ಪರ್ಯಾಯವಾಗಿ ಬಳಸುವುದಿಲ್ಲ. ಈ ಪಂಗಡದವರು ಪರಸ್ಪರ ಮದುವೆಯಾಗುವುದಿಲ್ಲ. ಸಹಭೋಜನವನ್ನು ಮಾಡುವುದಿಲ್ಲ. ಮದುವೆಯ ಸಂದರ್ಭದಲ್ಲಿ ಕುರವರ ಮದುಮಗಳ ಕುತ್ತಿಗೆಗೆ ಅರಿಶಿನದ ನೀರಿನಲ್ಲಿ ಅದ್ದಿದ ನೂಲನ್ನು ಕಟ್ಟಿದರೆ, ಎರುಕ್ಕಳರು ಕರಿಮಣಿಯನ್ನು ಕಟ್ಟುತ್ತಾರೆ. ಎರುಕಾಳರಲ್ಲಿ ಒಂದು ಸಂಪ್ರದಾಯವಿದೆ. ಏನೆಂದರೆ ಯಾರಾದರೂ ತಾಳಿ ಮತ್ತು ಅದರ ನಳಿಕೆಯನ್ನು ತರಲು ಹೋದವನು ಮರಳಿ ಬರದಿದ್ದರೆ ಅದರ ಪರ್ಯಾಯವಾಗಿ ಕರಿಯಮಣಿಯನ್ನು ಮತ್ತು ಸಣ್ಣ ಗಂಟೆಯನ್ನು ಕಟ್ಟುತ್ತಾರೆ. ಕುರುವರು ಶಿವ ಪುತ್ರನಾದ ಸುಬ್ರಹ್ಮಣ್ಯನನ್ನು ಸ್ತುತಿಸಿದರೆ, ಎರುಕ್ಕಾಳರು ವೆಂಕಟೇಶ್ವರನ ರೂಪದಲ್ಲಿರುವ ವಿಷ್ಣುವನ್ನು ಮತ್ತು ಲಕ್ಷ್ಮಿಯನ್ನು ಪೂಜಿಸುತ್ತಾರೆ. ಸುಬ್ರಹ್ಮಣ್ಯನನ್ನು ಕಳ್ಳರ ದೇವರೆಂದು ಪ್ರಾಚೀನ ಸಂಸ್ಕೃತದ ನಾಟಕಗಳು ಉಲ್ಲೇಖಿಸಿರುವುದು ಇದಕ್ಕೆ ಕಾರಣವಿರಬಹುದು. ಕುರುವರು ಸ್ತ್ರೀಯರ ವಿಷಯದಲ್ಲಿ ನಿರ್ದಯಿಯಾಗಿದ್ದಾರೆ. ಅವರು ತಮ್ಮ ಮಡದಿಯರನ್ನು ಯಾವುದೇ ಪಶ್ಚಾತ್ತಾಪವಿಲ್ಲದೆ ಮಾರುತ್ತಾರೆ. ಆದರೆ ಎರುಕ್ಕಾಳರು ಸ್ತ್ರೀಯರ ವಿಷಯವಾಗಿ ಗೌರವವನ್ನು ಹೊಂದಿದ್ದಾರೆ. ಸಂಖ್ಯಾಶಾಸ್ತ್ರವು ಕೊರವರನ್ನು ಮತ್ತು ಎರುಕ್ಕಾಳರನ್ನು ಬೇರೆ ಬೇರೆ ಸಂಖ್ಯೆಯಲ್ಲಿ ತೋರಿಸುತ್ತಿದೆ.

ಮೈಸೂರಿನ ಗಡಿಭಾಗಕ್ಕೆ ತಾಗಿಕೊಂಡಿರುವ ಕೊಯಮತ್ತೂರು ಜಿಲ್ಲೆಯನ್ನು ಬಿಟ್ಟು ಮದ್ರಾಸ್ ಪ್ರಾಂತ್ಯದಲ್ಲಿ ಎಲ್ಲಿಯೂ ಇವರಿಬ್ಬರೂ ಒಟ್ಟಿಗಿರುವುದು ಕಂಡುಬರುವುದಿಲ್ಲ. ಉತ್ತರ ಆರ್ಕಾಟ್

ಜಿಲ್ಲೆಯ ಉತ್ತರ ಭಾಗದಲ್ಲಿ ಮತ್ತು ಕಡಪಾ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಕೊರವರನ್ನು ಕೊರ್ಚರೆಂದು ಕರೆಯುತ್ತಾರೆ. ಕಡಪ ಜಿಲ್ಲೆಯ ಉತ್ತರ ಭಾಗದಲ್ಲಿ ಎರುಕಾಳರು ಕೊರ್ಚ ಪಂಗಡದವರೊಂದಿಗೆ ಕೂಡಿಕೊಂಡು ಬಾಳುರುವುದು ಮೊಟ್ಟ ಮೊದಲ ಬಾರಿಗೆ ದೊರಕಿವೆ. ಜೆ.ಕೈನ್‌ರವರ ಅಭಿಪ್ರಾಯದಂತೆ ಗೋದಾವರಿ ಜಿಲ್ಲೆಯ ಎರುಕಾಳರು ತಮ್ಮಲ್ಲಿಯೇ ಕುಲುವಾರು ಎಂದು ಕರೆದರೆ, ತೆಲುಗು ಜನರು ಇವರನ್ನು ಎರಕವಾರು ಎಂದು ಕರೆಯುತ್ತಾರೆ. ಈ ಶಬ್ದವು ತೆಲುಗಿನ ಎರುಕಾದಿಂದ ಹುಟ್ಟಿದೆ. ಇದರರ್ಥ ಜ್ಞಾನ ಎಂದು ಬೆಲ್‌ಪೋರ್ ಅವರ ಅಭಿಪ್ರಾಯದಂತೆ ಕುಂಚಿ ಕೊರವ ಎಂಬಂತಹ ಕೊರವರ ಇನ್ನೊಂದು ಶಾಖೆಯ ಪಂಗಡದವರನ್ನು ಎರ್ಕಾಲ್ ಕೊರವರ್ ಎಂದು ಕರೆಯುತ್ತಾರೆ. ಇವರು ಎರ್ಕಾಲ್ ಎಂಬ ಭಾಷೆಯನ್ನು ಆಡುತ್ತಾರೆ. ಕೊರವರು ಮತ್ತು ಎರುಕಾಳರು ಪರಸ್ಪರ ಮದುವೆಯಾಗುವುದಿಲ್ಲ ಮತ್ತು ಸಹಭೋಜನ ಮಾಡುವುದಿಲ್ಲ. ಕೊರವ ಜನಾಂಗದ ಹುಡುಗರಲ್ಲಿ ಎರುಕಾಳ ಜನಾಂಗದ ಹುಡುಗಿಯನ್ನು ಮದುವೆಯಾಗುವಂತೆ ಕೇಳಿದರೆ ಅವರು ಹಾರಿಕೆಯ ಉತ್ತರವನ್ನು ನೀಡುತ್ತಾರೆ. ಈ ಪ್ರದೇಶದಲ್ಲಿ ಜನಗಣತಿಯನ್ನು ಮಾಡುತ್ತಿದ್ದಂತಹ ಹೆಚ್ಚಿನ ಪೋಲೀಸ್ ಅಧಿಕಾರಿಗಳಿಗೆ ಈ ತರಹದ ಅನುಭವ ಉಂಟಾಗಿದೆ. ಆದರೆ ಒಬ್ಬ ಅಧಿಕಾರಿಗೆ ಸಿಕ್ಕಂತಹ ಮಾಹಿತಿಯು ಈ ರೀತಿಯಾಗಿದೆ. ೧೮೮೫ರಲ್ಲಿ, ಮಧುರೈ ಪ್ರಾಂತ್ಯದ ಕೊರವ ಜನಾಂಗದವರೂ ಮತ್ತು ಕಡಪ ಜಿಲ್ಲೆಯ ಎರುಕಾಳರೊಂದಿಗೆ, ಅದೇ ರೀತಿಯಾಗಿ ಅನಂತಪುರ ಜಿಲ್ಲೆಯ ಒಂದು ಪಂಗಡ ಹುಡುಗನು, ಮೈಸೂರು ರಾಜ್ಯದ ಕೊರ್ಚ ಹುಡುಗಿಯೊಂದಿಗೆ ಮದುವೆಯಾಗಿದ್ದನು. ಇದರ ನಂತರ ಅವರಿಬ್ಬರ ನಡುವೆ ಸಂಧಾನ ಏರ್ಪಟ್ಟು ಸಹ ಭೋಜನವನ್ನು ಮಾಡಲಾಯಿತು. ಎರುಕಾಳರು ಮದುವೆಯ ಸಂದರ್ಭದಲ್ಲಿ ಮದುಮಗಳ ಕುತ್ತಿಗೆಗೆ ಕರಿಮಣಿಯನ್ನು ಕಟ್ಟುತ್ತಾರೆ. ಕೊರವರು ಕೂಡಾ ಇದೇ ಸಂಪ್ರದಾಯವನ್ನು ಮುಂದುವರಿಸಿದ್ದಾರೆ. ಆದರೆ ಹಿಂದೆ ತಿಳಿಸಿದಂತೆ ಅರಶಿನದ ನೀರಿನಲ್ಲಿ ಅದ್ದಿದ ನೂಲನ್ನು ಕಟ್ಟುವುದು ಕೇವಲ ಒಂದು ಸಂದರ್ಭದಲ್ಲಿ ನಡೆದಿದೆ. ಅದು ಧರ್ಮಪುರಿ ಜಿಲ್ಲೆಯ ಹೊಸೂರಿನಲ್ಲಿ. ಎರುಕಾಳರು ವೈಷ್ಣವರೂ ಮತ್ತು ಶೈವರೂ ಆಗಿದ್ದಾರೆ. ದಕ್ಷಿಣದ ಕೊರವರಿಗಿಂತ ಹೆಚ್ಚಾಗಿ ಸ್ತ್ರೀಯರಲ್ಲಿ ಗೌರವ ಹೊಂದಿದ್ದಾರೆ. ಈ ರೀತಿಯಾಗಿ ವಿದ್ವಾಂಸರು ನೀಡಿದಂತಹ ವಿಚಾರಗಳನ್ನು ಗಮನಿಸಿದಾಗ ಕೊರವರ ಉಗಮವು ಪುರಾಣ ಕಾಲದಲ್ಲಿಯೇ ಆಗಿದೆಯೆಂದು ಹೇಳಬಹುದು. ಈ ಉಗಮಕ್ಕೆ ಸಂಬಂಧಿಸಿದ ವಿಚಾರವು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ವಾಗುತ್ತದೆಯಾದರೂ ಭಾಗವತದಲ್ಲಿ ಹೇಳಿರುವಂತಹ ಕಥೆಗೆ ಹೆಚ್ಚು ಕಡಿಮೆ ಅನುಗುಣವಾಗಿದೆ. ಪುರೋಹಿತರು ಅಥವಾ ಮುನಿಗಳು ಈ ವಿಷಯವಾಗಿ ಸಾಕ್ಷಿಗಳಾಗಿದ್ದಾರೆ. ಅಗ್ನೇಶ್ವಾತುವಿನ ಪುತ್ರನಾದ ವಿಂದುದುವು ಜಗತ್ತನ್ನು ಆಳುತ್ತಿದ್ದನು. ಈತನು ಬಹಳ ವರ್ಷಗಳ ಕಾಲ ತನಗೆ ಉತ್ತರಾಧಿಕಾರಿಯಾಗಿ ಪುತ್ರ ರತ್ನನನ್ನು ಪಡೆಯದೇ ಅದೇ ದುಃಖದಲ್ಲಿ ಮರಣ ಹೊಂದಿದನು. ಆದರೆ ಆತನು ಮುಕ್ತಿಯನ್ನು ಪಡೆಯದೇ ಇದ್ದುದರಿಂದ ಆತನ ಶರೀರವನ್ನು ರಕ್ಷಿಸಲಾಯಿತು. ಏಳು ಗ್ರಹಗಳ ಅಭಿಮಾನಿ ದೇವತೆಗಳು ಒಟ್ಟು ಸೇರಿ ಮುಂದೇನು ಮಾಡುವುದೆಂದು ಪರಸ್ಪರ ಚರ್ಚೆ ನಡೆಸಿದರು. ಕೊನೆಗೆ ಮರಣ ಹೊಂದಿದವನ ಬಲಭಾಗದ ತೊಡೆಯಿಂದ ಒಬ್ಬ ಪುರುಷನನ್ನು ಉತ್ಪತ್ತಿ ಮಾಡಲು

ನಿರ್ಧರಿಸಿದರು. ಅದರಂತೆ ನಿಶುಡು ಎಂಬುವವನಿಗೆ ಜನನವನ್ನು ನೀಡಿದರು. ಆದರೆ ಅವರ ಪ್ರಯತ್ನವು ಫಲಿಸಲಿಲ್ಲ. ಏಕೆಂದರೆ ಆತನು ಶರೀರದಿಂದಲೂ ಮತ್ತು ಮುಖದಿಂದಲೂ ಬಹಳ ಕೆಟ್ಟದಾಗಿ ಕಂಡುಬರುತ್ತಿದ್ದನು. ಹಾಗಾಗಿ ಗ್ರಹಗಳ ಇನ್ನೊಂದು ಸಭೆಯಲ್ಲಿ ಈ ವ್ಯಕ್ತಿಯಲ್ಲಿ ರಾಜ್ಯಭಾರವನ್ನು ವಹಿಸಲು ಸಮರ್ಥನಲ್ಲ ಎಂದು ನಿರ್ಧರಿಸಿದರು. ಹಾಗಾಗಿ ಅವರು ಮರಳಿ ಯತ್ನವನ್ನು ಮಾಡಿ ವಿಂದುದುವಿನ ಬಲ ಭುಜದಿಂದ ಇನ್ನೊಬ್ಬ ಪುರುಷನನ್ನು ಸೃಷ್ಟಿಸಿದರು. ಆ ಪುರುಷನು ಗ್ರಹ ದೇವತೆಗಳ ಅಭೀಷ್ಟದಂತೆ ಆಗಿದ್ದನು. ಹಾಗಾಗಿ ಆತನನ್ನು ರಾಜ್ಯಾಭಿಷಿಕ್ತಗೊಳಿಸಲಾಯಿತು. ದೇವತೆಗಳು ಇವನನ್ನು ಪ್ರೋತು ಚಕ್ರವರ್ತಿ ಎಂದು ಕರೆದರು. ಆದರೆ ಈ ಘಟನೆಯು ಮೊದಲು ಹುಟ್ಟಿದ್ದಂತಹ ನಿಶುಡುವಿಗೆ ಬಹಳ ದುಃಖವನ್ನು ತಂದುಕೊಟ್ಟಿತು. ತನಗೆ ಅಧಿಕಾರ ಸಿಗುವುದಿಲ್ಲ ವೆಂದಾಗಿದ್ದರೆ ನನಗೆ ಜನ್ಮವನ್ನು ಏಕೆ ನೀಡಿದಿರಿ ಎಂದು ದೇವತೆಗಳನ್ನು ಪ್ರಶ್ನಿಸಲು ದೇವತೆಗಳೆಂದರು, ನಿನಗೆ ಈಗ ರಾಜ್ಯಪಟ್ಟವನ್ನು ಕೊಡಲು ಸಾಧ್ಯವಿಲ್ಲ. ಆ ಸ್ಥಳದಲ್ಲಿ ನಿನ್ನ ತಮ್ಮನನ್ನು ಕುಳ್ಳಿರಿಸಿಲಾಗಿದೆ. ಹಾಗಾಗಿ ನೀನು ಇನ್ನು ಮುಂದೆ ಅರಣ್ಯವನ್ನು ಆಳಬಹುದೆಂದು ಹೇಳಿದರು.

ಇದೇ ಅರ್ಹತೆಯಿಂದ ಆತನು ಬೋಯರಿಗೆ, ಚೆಂಚೂಗಳಿಗೆ, ಯಾಣೌದಿಗಳಿಗೆ ಮತ್ತು ಕೊರವರಿಗೆ ಜನ್ಮ ನೀಡಿದನು. ಇವರಲ್ಲಿ ಬೋಯರು ಮಾತ್ರ ನ್ಯಾಯಬದ್ಧ ಪುತ್ರರಾದರೆ, ಉಳಿದವರು ಅನ್ಯಾಯದಿಂದ ಜನಿಸಿದವರು. ನಿಶುಡುವು ಸ್ವರ್ಗಸ್ಥನಾದ ಮೇಲೆ ಸ್ವರ್ಗದಿಂದಲೇ ತನ್ನ ಮಕ್ಕಳು ತಮ್ಮನ್ನು ತಾವು ಎರುಕಾಳರು (ಎರುಕ–ತಿಳಿಯು) ಎಂದು ತಿಳಿಯುತ್ತಿದ್ದಾರೋ ಎಂದು ನೋಡು ತ್ತಿರುವುದರಿಂದ ಈ ರೀತಿಯಾದ ಹೆಸರು ಬಂದಿರಬಹುದೆಂಬ ಪ್ರತೀತಿಯಿದೆ. ಕೊರವರ ಹೆಸರಿಗೆ ಸಂಬಂಧಿಸಿದಂತೆ ಇನ್ನೊಂದು ಕಥೆಯು ಕಂಡುಬರುತ್ತದೆ. ಧರ್ಮರಾಜ ಮತ್ತು ದುರ್ಯೋಧನರ ನಡುವೆ ವೈಮನಸ್ಸು ಇದ್ದಾಗ, ಧರ್ಮರಾಜನು ಮುಂದೆ ಯಾವುದೇ ಕಲಹ ಉಂಟಾಗಬಾರದೆಂದು ವನವಾಸಕ್ಕೆ ಹೊರಟುಹೋಗುತ್ತಾನೆ. ಆದರೆ ಇವನನ್ನೇ ಪ್ರೀತಿಸುತ್ತಿದ್ದಂತಹ ಓರ್ವ ಮಹಿಳೆಯು ಇವನನ್ನೇ ಹುಡುಕುತ್ತಾ, ಅಲೆದಾಡುತ್ತಾ, ಅವನನ್ನು ಕಂಡು ಹುಡುಕಲಾರದೇ ಕಣಿ ಹೇಳುವವಳಾಗಿ ಮಾರ್ಪಾಟಾದಳು. ಈ ರೀತಿಯಾಗಿ ಅಲೆದಾಡುವಾಗ ತನ್ನ ಗಂಡನನ್ನು ಕಾಣುತ್ತಾಳೆ. ಇವರ ಪುತ್ರರನ್ನು ಕೊರವರೆಂದು ಕರೆಯುತ್ತಾರೆ. ಇವರ ವೃತ್ತಿ ಕಣಿ ಹೇಳುವುದು ಎಂಬುದು ತಿಳಿದುಬರುತ್ತದೆ.

(ಕೊರಚ ಅಥವಾ ಕೊರ್ಚ ಎಂಬ ಹೆಸರು ಕೊರವ ಎಂಬ ಹೆಸರಿನ ನಂತರ ಕಂಡುಬರುವ ಹೆಸರಾಗಿದ್ದು, ಇದು ಕೋರಿ, ಕೋರ್ರಿ ನಿಗ್ಗ (ಕಪಟ ದೃಷ್ಟಿ) ಎಂಬ ಶಬ್ದದಿಂದ ಉತ್ಪತ್ತಿಯಾಗಿ ಕೊರ್ಚ ಎಂಬ ಅಸ್ಪಷ್ಟ ಶಬ್ದವಾಗಿ ಮಾರ್ಪಟ್ಟಿದೆ. ಈ ಶಬ್ದವನ್ನು ಬಳಕೆ ಮಾಡಿದಾಗಿನಿಂದ, ಇದೇ ಶಬ್ದವು ಅವರಿಗೆ ಅಂಕಿತವಾಗಿದೆ. ಈ ಹೆಸರಿಗೆ ತಕ್ಕಂತೆ ಅವರು ಪ್ರಾಣಿಗಳನ್ನು, ಪಕ್ಷಿಗಳನ್ನು ಕದಿಯುವುದು, ಇನ್ನೊಬ್ಬರ ವಸ್ತುಗಳನ್ನು ಕದಿಯುವುದು ಮೊದಲಾದ ಕಪಟ ಕೆಲಸಗಳಲ್ಲೇ ನಿರತರಾಗಿದ್ದಾರೆ. ಎಲ್ಲಿಯಾದರೂ ಜಗಳ ಉಂಟಾದರೇ ಆ ಸಂದರ್ಭದಲ್ಲಿ ಒಬ್ಬರನ್ನು ಹೀಯಾಳಿಸಲು ಈ ಶಬ್ದವನ್ನು ಬಳಸಲಾಗುತ್ತದೆ. ತಮಿಳು ದೇಶದಲ್ಲಿ ಕೊರವರಂತೆ ಮೋಸ ಮಾಡುವಿಕೆಯನ್ನು ಕುರುಕೆಂಜು ಮತ್ತು ಅವರ ಕಾರ್ಯವನ್ನು ಕುರುಪಸಾಂಗು ಎಂದು ಕರೆಯುತ್ತಾರೆ. 'ಕುರುವರ

ನ್ಯಾಯವು ಸಂಸಾರದ ನಿರ್ನಾಮದಂತೆ' ಎಂಬ ಗಾದೆಯು ಇವರ ಅಂತ್ಯವಾಗದ ಜಗಳ ಗಂಟುತನವನ್ನು ಪ್ರತಿನಿಧಿಸುತ್ತವೆ. ಕೊರವರು ಮತ್ತು ಎರುಕಾಳರು ಪರಸ್ಪರ ಸಂಪರ್ಕಕ್ಕಾಗಿ ಅಸ್ಪಷ್ಟವಾದ ಭಾಷೆಯನ್ನು ಆಡುತ್ತಾರೆ. ಇದರಲ್ಲಿ ಹೆಚ್ಚಿನ ಶಬ್ದಗಳು ತೆಲುಗು, ತಮಿಳು ಮತ್ತು ಕನ್ನಡ ಭಾಷೆಯಿಂದ ಮಿಶ್ರಿತವಾಗಿದೆ. ಎರುಕಾಳರ ಭಾಷೆಯ ಕುರಿತಾಗಿ ರೆವರೆಂಡ್‌ರಿ. ಜೆ. ಕೈನ್ ಅವರು ಪುಸ್ತಕವನ್ನು ರಚಿಸಿದ್ದಾರೆ. ಎರುಕಾಳರು ಈ ಭಾಷೆಯನ್ನು ಓಡ್ರ ಎಂದು ಕರೆಯುತ್ತಾರೆ. ಇದರರ್ಥ ಕಠಿಣ ಕಳ್ಳರ ಮೋಸ ಅಥವಾ ತಿಳಿಯಲು ಅತ್ಯಂತ ಕಠಿಣವೆಂದರ್ಥ. ಒರಿಯಾ ಅಥವಾ ಓಡು ಭಾಷೆಯು ಒರಿಸ್ಸಾ ರಾಜ್ಯದ ಗಂಜಾಂ ಜಿಲ್ಲೆಯ ಭಾಷೆಯಾಗಿದೆ. ಒರಿಯಾ ಶಬ್ದದ ಅರ್ಥ ಉತ್ತರ ದಿಕ್ಕು ಎಂದು, ಹಾಗಾಗಿ ಎರುಕಾಳರು ತಮ್ಮ ಭಾಷೆಯನ್ನು ಓಡ್ರು ಎಂದು ಕರೆಯುವುದು ತಾವು ಉತ್ತರ ದಿಕ್ಕಿನ ಮೂಲದವರೆಂದು ಗುರುತಿಸಲು ಆಗಿರಬಹುದು. ಹೆಚ್ಚಾಗಿ ಒಂದು ಗ್ರಾಮದಲ್ಲಿ ನೆಲೆನಿಂತ ಪಂಗಡದವರು ಅಲ್ಲಿಯ ಭಾಷೆಯನ್ನೇ ಹೆಚ್ಚಾಗಿ ಮಾತನಾಡುತ್ತಾರೆ. ಈ ಪಂಗಡದವರು ತಮ್ಮಲ್ಲಿಯೇ ಮಾತನಾಡಿಕೊಳ್ಳುವಾಗ ಒಬ್ಬ ಬ್ರಾಹ್ಮಣರನ್ನು ಹೀಯಾಳಿಸುವ ಸಲುವಾಗಿ ಮತ್ತು ಆಶೌಚವನ್ನು ತೊಳೆಯಲು ಈ ಹೆಸರನ್ನಿಟ್ಟಿದ್ದಾರೆ.

ಕೊರವರು ಬಳಸುವ ಆಡು ಮಾತುಗಳನ್ನು F ಫಾವ್‌ಸೆಟ್ ಅವರು ಸ್ವ-ವಿವರವಾಗಿ ತಮ್ಮ ಪುಸ್ತಕದಲ್ಲಿ ನೀಡಿದ್ದಾರೆ. ಪೊಲೀಸ್ ಅಧಿಕಾರಿಯಾಗಿದ್ದ ಇವರ ಪುಸ್ತಕದಿಂದ ಕೆಳಗಿನ ಉದಾಹರಣೆಗಳನ್ನು ನೀಡಬಹುದಾಗಿದೆ.

೧. ದಾಸರಿ – ವೈಷ್ಣವ
೨. ಸುಕ್ಕ – ನಕ್ಷತ್ರ
೩. ಕಂಪ – ಕಳ್ಳಿ ಗಿಡಗಳ ಗೊಂಚಲು
೪. ಆವುಲ – ಆಕಳು
೫. ತೋಕ – ಬಾಲ
೬. ಕಾನಗ – ಕಣಗಿಲೆ
೭. ಬಂಡಿ – ಗಾಡಿ
೮. ಗಜ್ಜಲ – ಸಣ್ಣಗಂಟೆ
೯. ಮೋಗಿಲಿ – ಉಯ್ಯಾಲೆ
೧೦. ರಾಗಲ – ರಾಗಿ ಬೆಳೆ
೧೧. ಪೂಲ – ಹೂವುಗಳು
೧೨. ಕಠಾರಿ – ಚೂರಿ
೧೩. ಅಂಬೋಜನ – ತಾವರೆ
೧೪. ಸಮುದ್ರಾಲ – ಸಮುದ್ರ
೧೫. ವೆಂಕಟಗಿರಿ – ಒಂದು ಪಟ್ಟಣ

ಕೊರವರ ಸಮುದಾಯವು ಒಬ್ಬ ಯಜಮಾನನ್ನು ಅವಲಂಬಿಸಿರುತ್ತದೆ. ಈ ಸಮುದಾಯದಲ್ಲಿ ಆಸ್ತಿಯ ಹಕ್ಕು ಸಮಾನವಾಗಿದೆ. ಕುಟುಂಬದ ಯಜಮಾನನ್ನು ಪೆರು ಮನುಷನ್ ಅಥವಾ ಪೆರಿಯ ಮನಸನ್ (ಹಿರಿಯ ವ್ಯಕ್ತಿ) ಎಂದು ಕರೆಯುತ್ತಾರೆ. ಈತನು ತನ್ನ ವಯಸ್ಸು, ವಿದ್ಯಾರ್ಹತೆ ಮತ್ತು ಕುಟುಂಬದ ಇತರ ವ್ಯಕ್ತಿಗಳ ಮೇಲೆ ಆತನ ಪ್ರಭಾವ ಹೇಗಿದೆಯೆಂಬುದರ ಮೇಲೆ ನಿರ್ಧರಿಸಲ್ಪಡುತ್ತಾನೆ. ಆದರೆ ಈ ಹುದ್ದೆಯಿಂದ ಯಾವುದೇ ಧನಲಾಭವಿರುವುದಿಲ್ಲ. ಆದರೆ ಸಾಮಾಜಿಕ ನಿಯಮಗಳಿಗೆ ಈತನೇ ಪ್ರಧಾನವಾಗಿರುತ್ತಾನೆ.

ಥಾವ್‌ಸೆಟ್ ಅವರು ಜಾತಿ ಸರ್ಕಾರದ ವಿಷಯವಾಗಿ ಹೀಗೆ ಬರೆಯುತ್ತಾರೆ. 'ಕುಲಂ ಅಥವಾ ಜಾತಿ ಸಭೆಯು ಈ ಜಾತಿಯಲ್ಲಿರುವ ಯಾವುದೇ ಜಾತಿಯ ಕಲಹಗಳ ವಿಷಯವಾಗಿ ತೀರ್ಮಾನವನ್ನು, ದಂಡವನ್ನು ವಿಧಿಸುತ್ತದೆ. ಪ್ರತಿಯೊಂದು ಜಾತಿ ಸಭೆಯಲ್ಲಿ ಕಲಹಕ್ಕೆ ಸಂಬಂಧಿಸಿದ ಯಾವುದಾದರೂ ಒಂದು ಪಕ್ಷದವನು ಉಚಿತವಾಗಿ ಹೆಂಡವನ್ನು ಕೊಡಿಸುತ್ತಾನೆ. ಈ ಸಭೆಯ ಆ ಯೋಜನೆಯನ್ನು ಈ ಕಲಹದಲ್ಲಿ ಗಾಸಿಗೊಳಗಾದ ಪಕ್ಷದವನು ಆಯೋಜಿಸಿರುತ್ತಾನೆ. ಎರಡು ಪಕ್ಷದವರು ಕಲಹಕ್ಕೆ ಸರಿಯಾದ ನಿರ್ಣಯವನ್ನು ಕೊಡಬೇಕೆಂದು ಸಭೆಯ ಮುಂದೆ ಕೇಳಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ಇಬ್ಬರೂ ಒಂದೊಂದು ರೂಪಾಯಿಯನ್ನು ಕೊಡಬೇಕಾಗುತ್ತದೆ. ಈ ಸಭೆಯು ಈ ಕಲಹದ ಕುರಿತಾದ ನಿರ್ಣಯಗಳನ್ನು ಒಮ್ಮೆ ನೀಡಬಹುದು ಅಥವಾ ಸಭೆಯನ್ನು ಬರ್ಖಾಸ್ತುಗೊಳಿಸಬಹುದು. ಎರಡನೆಯ ಬಾರಿಗೆ ಸಭೆಯನ್ನು ಯಾವಾಗ ಬೇಕಾದರೂ ಸೇರಬಹುದು. ಮೂರನೆಯ ಬಾರಿಗೆ ಸಭೆಯನ್ನು ಸೇರುವಾಗ ೨ ಪಕ್ಷದವರೂ ಹೆಂಡಕ್ಕಾಗಿ ಮತ್ತೊಮ್ಮೆ ಒಂದು ರೂಪಾಯಿಯನ್ನು ಕೊಡಬೇಕಾಗುತ್ತದೆ. ಒಂದು ವೇಳೆ ಸಭೆಗೆ ಯಾವುದಾದರೂ ಪಕ್ಷದ ಸದಸ್ಯನು ಬರದೇ ಹೋದರೆ ಆವಾಗ ಆತನನ್ನು ಜಾತಿಯಿಂದ ಬಹಿಷ್ಕರಿಸಲಾಗುತ್ತದೆ. ಒಂದು ವೇಳೆ ೩ನೆಯ ಬಾರಿಗೆ ಸಭೆ ಸೇರಿದರೆ ಆ ಸಭೆಯು ಸ್ಫೂರ್ತಿಯಿಂದಿರಲು ಹೆಂಡಕ್ಕಾಗಿ ಮತ್ತೆ ೩, ೫ ರೂಪಾಯಿಯನ್ನು ೨ ಪಕ್ಷದವರು ಕೊಡಬೇಕಾಗುತ್ತದೆ. ಇದು ಅಂತಿಮ ನ್ಯಾಯ ನುಡಿಯಾಗಿದ್ದು, ಇದರಿಂದಲೂ ಯಾವುದೇ ಗೊತ್ತುವಳಿ ಇಲ್ಲದೇ ಹೋದರೆ ಆವಾಗ ದಿವ್ಯ ಪ್ರಮಾಣವನ್ನು ಮಾಡಲಾಗುವುದು. ಎರಡು ಮಡಿಕೆಗಳಲ್ಲಿ ಸಮಾನವಾದ ಅಕ್ಕಿಯನ್ನು ನೀರನ್ನು ಇಡಲಾಗುವುದು. ಅದಕ್ಕನುಗುಣವಾಗಿ ಸಮಾನವಾದ ಉರುವಲನ್ನು ಇಡಲಾಗುವುದು. ನ್ಯಾಯಮೂರ್ತಿಗಳು ಇದರಲ್ಲಿ ಸಮಾನವಾದ ತೂಕ, ಸಂಖ್ಯೆ ಮೊದಲಾದವನ್ನು ಪರೀಕ್ಷಿಸಿದ ನಂತರ ನೀರನ್ನು ಕುದಿಸಲಾಗುವುದು. ಈ ಸಂದರ್ಭದಲ್ಲಿ ಯಾರು ಮೊದಲು ಅನ್ನವನ್ನು ಬೇಯಿಸುತ್ತಾನೋ ಆತನನ್ನು ವಿಜೇತನೆಂದು ತೀರ್ಮಾನಿಸಲಾಗುವುದು. ಸೋತ ಪಕ್ಷದವನು ಈ ಸಭೆಯ ಎಲ್ಲಾ ಖರ್ಚುಗಳನ್ನು ಭರಿಸಬೇಕಾಗುತ್ತದೆ. ಒಂದು ವೇಳೆ ಎರಡೂ ಮಡಿಕೆಗಳ ಅನ್ನವು ಒಂದೇ ಸಮಯದಲ್ಲಿ ಬೆಂದರೆ ಆವಾಗ ಕುದಿಯುತ್ತಿರುವ ಎಣ್ಣೆಯಿಂದ ನಾಣ್ಯವನ್ನು ತೆಗೆಯುವ ದಿವ್ಯವನ್ನು ಮಾಡಲಾಗುತ್ತದೆ.

ಕೊರವರಲ್ಲಿ ಹತ್ತಾರು ಉಪಪಂಗಡಗಳಿವೆ. ಇವರಲ್ಲಿ ಹೆಚ್ಚಿನವರು ತಲೆ ತಲಾಂತರದಿಂದಲೂ ಆಶ್ರಯಿಸಿಕೊಂಡು ಬಂದಂತಹ ಉದ್ಯೋಗವನ್ನೇ ಪ್ರಧಾನವನ್ನಾಗಿರಿಸಿಕೊಂಡು ಹೆಸರನ್ನು ಹೊಂದಿರುತ್ತಾರೆ. ಆದರೆ ಅವರು ತಮ್ಮನ್ನು ಯಾವುದೇ ಹೆಸರಿನಿಂದ ಕರೆಸಿಕೊಂಡರೂ 'ಮ್ಯಾನ್ ವಾರಿಂಗ್' ಅವರ ಅಭಿಪ್ರಾಯದಂತೆ ಇವರೆಲ್ಲರೂ ಮೂರು ವಿಭಾಗಗಳಲ್ಲಿ ವಿಭಕ್ತರಾಗಿದ್ದಾರೆ. ಅವುಗಳೆಂದರೆ–

೧. ಸಕಾಯಿ, ಸಂಪತಿ, ಸಾತುಪಡಿ.

೨. ಕಾವಡಿ ಅಥವಾ ಗುಜ್ಜಲ.

೩. ದೇವರ ಕೊಂಡಾ, ಮೆಂಡ್ರ ಕುಟ್ಟಿ ಅಥವಾ ಮೇನಪಾಡಿ.

ಮೊದಲೆರಡು ವಿಭಾಗದ ಸದಸ್ಯರು ಕೊರವರೇ ಆಗಿದ್ದಾರೆ. ಇವರು ಸಂಪ್ರದಾಯಬದ್ಧವಾಗಿ ಕೊರವರನ್ನು ಅನುಸರಿಸುತ್ತಿದ್ದು, ತಮ್ಮ ಪಂಗಡದವರನ್ನು ಬಿಟ್ಟು ಬೇರೆಯವರನ್ನು ಮದುವೆಯಾಗುತ್ತಿರಲಿಲ್ಲ. ಆದರೆ ೩ನೆಯ ವಿಭಾಗದವರು ಹೊರಗಿನದವರೊಂದಿಗೆ ಮದುವೆಯಾಗುತ್ತಾರೆ. ಮತ್ತು ಆ ಪಂಗಡದವರ ವಂಶದವರಾಗಿದ್ದಾರೆ. ಕೊರವರು ಇತರ ಪಂಗಡಗಳಾದ ಪಕ್ಕೆಯಾನರು, ಯಾಣಾದಿಗಳು, ಮಂಗಲರು ಮತ್ತು ತಕ್ಸಲರಿಗಿಂತ ಉನ್ನತ ಸ್ಥಾನವನ್ನು ಹೊಂದಿದ್ದಾರೆ. ಕೊರವ ಪಂಗಡಕ್ಕೆ ಹೊಸಬರ ಆಗಮನವನ್ನು ನಾಲಗೆಗೆ ಬಿಸಿ ಬಂಗಾರದ ತುಂಡಿನ ಸ್ಪರ್ಶದ ಮೂಲಕ ಮಾಡಲಾಗುತ್ತದೆ. ಮೇಡರರು ಮುಟ್ಟಿದ ಆಹಾರವನ್ನು ಕೊರವರು ಸ್ವೀಕರಿಸುವುದಿಲ್ಲ. ಕೊರವರು ವಿಶಾಲವಾಗಿ ಎರಡು ಕುಟುಂಬಗಳಾಗಿ ವಿಭಕ್ತರಾಗಿದ್ದಾರೆ ಎಂದು ಹೇಳಲಾಗಿದೆ. ಇವರನ್ನು ಪೋತು ಮತ್ತು ಪೆಂಟಿ ಎಂದು ಕರೆಯಲಾಗುತ್ತದೆ. ಇದರರ್ಥ ಗಂಡಸರು ಮತ್ತು ಹೆಂಗಸರು ಎಂದು ಹಿಂದೆ ಹೇಳಿದಂತಹ ೩ ವಿಭಾಗಗಳಲ್ಲಿ ಮೊದಲನೆಯ ವಿಭಾಗವು ಪೋತು ಎಂದು ಕರೆಯಲ್ಪಟ್ಟರೆ, ಎರಡನೆಯ ವಿಭಾಗವು ಪೆಂಟಿ ಎಂದು ಕರೆಯಲ್ಪಡುತ್ತಾರೆ. ೩ನೆಯ ವಿಭಾಗವು ಮಿಶ್ರ ವಿವಾಹದ ಫಲವಾಗಿದ್ದು ಆದರೆ ಈ ವಿಭಾಗದಲ್ಲಿ ಸ್ತ್ರೀಯರು ಉನ್ನತ ಸ್ಥಾನದಲ್ಲಿದ್ದು ಇವರನ್ನೂ ಪೆಂಟಿ ಎಂದೇ ತಿಳಿಯಲಾಗುತ್ತದೆ. ಪೋತು ವಿಭಾಗವು ಪುರುಷನಿಂದ ಉತ್ಪತ್ತಿಯಾಗಿದ್ದು ತಮಗಾಗಿ ಮದುಮಗಳನ್ನು ಹುಡುಕುತ್ತಾ ಹೋಗುತ್ತಾರೆ. ಮತ್ತು ಪೆಂಟಿಗಳು ಸ್ತ್ರೀಯರಿಂದ ಉತ್ಪನ್ನವಾಗಿದ್ದು ಪುರುಷನಿಗಾಗಿ ಹುಡುಕುತ್ತಾ ಹೋಗುತ್ತಾರೆ. ಸ್ತ್ರೀಯು ಮದುವೆ ಆದ ನಂತರ ಪುರುಷನ ಪಂಗಡಕ್ಕೆ ಸೇರುತ್ತಾಳೆ. ಧಾರ್ಮಿಕ ಆಚರಣೆಗಳಲ್ಲಿ ಪ್ರತಿಯೊಂದು ಪಂಗಡದವರಿಗೆ ತಮ್ಮದೇ ಆದ ನಿಯಮಗಳಿರುತ್ತವೆ. ಮೊದಲನೆಯ ವಿಭಾಗದವರು ಧಾರ್ಮಿಕ ಆಚರಣೆಯಲ್ಲಿ ದೇವರನ್ನು ಅಲಂಕಾರಗೊಳಿಸುವುದು. ಉತ್ಸವಕ್ಕೆ ಅನುವುಗೊಳಿಸುವುದು ಅವರ ಕರ್ತವ್ಯವಾದರೆ, ೨ನೆಯ ವಿಭಾಗದವರು ಉತ್ಸವದಲ್ಲಿ ದೇವರನ್ನು ಹಿಡಿದುಕೊಳ್ಳುವುದು, ಮೆರವಣಿಗೆ ಹೋಗುವುದು, ಸುಗಂಧ ದ್ರವ್ಯಗಳನ್ನು ಹೊತ್ತಿಸುವುದಾದರೆ, ೩ನೆಯ ವಿಭಾಗದವರು ರಥವನ್ನು ಎಳೆಯುವುದು, ಹಾಡುವುದು ಮತ್ತು ರಥವು ಚಲಿಸುವ ಸಂದರ್ಭದಲ್ಲಿ ಘೋಷಣೆ ಕೂಗುವುದಾಗಿದೆ.

ಪಾಪಾರಾವ್ ನಾಯ್ಡು ಅವರು ಈ ಪಂಗಡದಲ್ಲಿ ಪ್ರಧಾನವಾಗಿ ನಾಲ್ಕು ವಿಭಾಗಗಳಿವೆಯೆಂದು ಬರೆಯುತ್ತಾರೆ. ಇದು ಅವರ ವಿದ್ಯಾರ್ಹತೆಗನುಗುಣವಾಗಿ, ಸಾತೇಪಾತಿ, ಕಾವಡಿ, ಮಾನಪಾತಿ ಮತ್ತು ಮೆಂಡ್ರುಗುತ್ತಿ ಎಂದು ಕರೆಯಲ್ಪಟ್ಟಿದೆ. ಇವೆಲ್ಲವೂ ಅಸ್ಪಷ್ಟ ತಮಿಳು ಶಬ್ದಗಳಾಗಿವೆ.

೧. ಸಾಥೇಪಾತಿ – ಇದು ಸಾತುಪಾಡಿಯ ಅಸ್ಪಷ್ಟ ರೂಪವಾಗಿದ್ದು, ಇದರರ್ಥ ಹೂವುಗಳಿಂದ, ಆಭರಣಗಳಿಂದ ಹಿಂದು ದೇವರನ್ನು ಅಲಂಕರಿಸುವುದು ಎಂದು.

೨. ಕಾವಡಿ – ಇದರರ್ಥ ದೇವರಿಗೆ ಹರಕೆಯನ್ನು ಅರ್ಪಿಸಲು ವಸ್ತುಗಳನ್ನು ಎರಡು ಬುಟ್ಟಿಗಳಲ್ಲಿಟ್ಟು ಅದಕ್ಕೆ ಒಂದು ಉದ್ದನೆಯ ಕೋಲನ್ನು ಸಿಕ್ಕಿಸಿ ಭುಜದ ಮೇಲೆ ಇಡುವುದೆಂದರ್ಥ.

೩. ಮಾನಪಾತಿ – ಇದು ಮಾನಪಾಡಿ ಶಬ್ದದ ಅಸ್ಪಷ್ಟ ರೂಪವಾಗಿದ್ದು, ಇದರರ್ಥ ದೇವರನ್ನು ಕುರಿತು ಹಾಡುವುದು ಎಂದು.

೪. ಮೆಂಡ್ರಗುತ್ತಿ - ಇದು ಮೆನ್ರ ಕುಟ್ಟಿಯ ಅಸ್ಪಷ್ಟ ರೂಪವಾಗಿದ್ದು, ಇದರರ್ಥ (ಪಾದುಕೆ) ಚಪ್ಪಲಿಗಳನ್ನು ಹೋಲಿದು, ದೇವರಿಗೆ ಅರ್ಪಿಸುವುದು.

ಈ ೪ ವಿಭಾಗಗಳಲ್ಲಿ ಮೊದಲೆರಡು ವಿಭಾಗಗಳು ಇತರೆ ೨ ವಿಭಾಗಗಳಗಿಂತ ಉನ್ನತವಾಗಿದ್ದು, ಕಾವಡಿ ವ್ಯಕ್ತಿಯು ಪೋತುವಾಡು (ಪುರುಷ) ಮತ್ತು ಸಾತೇಪತಿಯು ಪೆಂಟಿ(ಸ್ತ್ರೀ)ಯಂತೆ, ಅಲಂಕೃತ ರಾಗಿರುತ್ತಾರೆ. ಎಫ್.ಎಸ್.ಮುಲಾಲಿಯವರು ಇನ್ನೂ ಹಲವಾರು ವಿಭಾಗಗಳನ್ನು, ಉಪವಿಭಾಗಗಳ ಮಾಹಿತಿಯನ್ನು ಒದಗಿಸಿದ್ದಾರೆ. ತಿರುಚಿನಾಪಳ್ಳಿ ಜಿಲ್ಲೆಗೆ ಸಂಬಂಧಿಸಿದ ಗೆಜೆಟಿಯರ್‌ನಲ್ಲಿ ಈ ರೀತಿಯಾಗಿ ಮಾಹಿತಿ ನೀಡಲಾಗಿದೆ. ಕುರುವರು ವೈವಾಹಿಕವಾಗಿ ಹಲವಾರು ವಿಭಾಗಗಳಾಗಿ ವಿಭಕ್ತರಾಗಿದ್ದಾರೆ. ಇದರಲ್ಲಿ ಇನ ಕುಲವರು ಮತ್ತು ಕಾವಲಕಾರನ್ ಕುಲವರು ಬಹಳ ಹಿಂಸಾತ್ಮಕ ಪ್ರವೃತ್ತಿಯವರಾಗಿದ್ದಾರೆ. ಈ ವಿಭಾಗದಲ್ಲಿ ೨ನೆಯ ವಿಭಾಗದವರನ್ನು ಮರಸ, ಮೊಂಡು ಮತ್ತು ಕಾಡುಕುಟ್ಟಿ ಕುರವರೆಂದು ಕರೆಯುತ್ತಾರೆ. ವೇಷ ಮತ್ತು ಭೂಷಣಗಳಲ್ಲಿ ನಾಮಕ್ಕಲ್ ಕುರುವಾನ್‌ರು ಕರೂರುಗಿಂತ ಉತ್ತಮರಾಗಿದ್ದು, ಇವರು ಅಲಂಕೃತರಾದ ವೆಲ್ಲಾಲಾನರಂತೆ ಕಂಡುಬರುತ್ತಾರೆ. ಇವರು ಹೆಚ್ಚಾಗಿ ಕಿವಿಯೋಲೆಯನ್ನು ಧರಿಸುತ್ತಾರೆ. ಇವರು ಇತರರಿಗಿಂತ ಕಳ್ಳತನದ ವಿಷಯದಲ್ಲಿ ಉತ್ತಮರಾಗಿರುತ್ತಾರೆ.

ಉಪ್ಪು ಎರುಕಾಳು ತಮ್ಮ ವಂಶದ ಕುರಿತಾಗಿ ಕೊಡುವಂತಹ ಉದಾಹರಣೆ ಈ ರೀತಿಯಾಗಿದೆ.

ಹುರ್ರೇ ! ನಮ್ಮ ಕೊರಚ ಜಾತಿಯು ಉತ್ತಮ ಜಾತಿಯಾಗಿದೆ.
ಜಾತಿಗಳಲ್ಲೇ ಅತ್ಯುತ್ತಮವಾದುದು ! ಹುರ್ರೇ !
ದೇವಾಲಯಗಳಲ್ಲಿ ಭೋಜನವು ನಡೆಯುತ್ತಿರುವಾಗ,
ನಾವು ಬೇಡುತ್ತೇವೆ ಮತ್ತು ಆಶ್ಚರ್ಯಕರವಾಗಿ ಕದಿಯುತ್ತೇವೆ.
ಕದಿಯುದಿಲ್ಲವೇ ನಾವು? ನಾವು ಸ್ವಲ್ಪವೂ ನೋಡಿಕೊಳ್ಳುವುದಿಲ್ಲವೇ?
ಕದ್ದ ನಂತರ ನಾವು ಸುಲಭವಾಗಿ ತಪ್ಪಿಸಿಕೊಳ್ಳುವುದಿಲ್ಲವೇ?
(ಕೋರಸ್-ವಾದ್ಯ)

ನಾವು ಮಿನುಗುವ ಆಭರಣಗಳನ್ನು ಕದಿಯುತ್ತೇವೆ
ಮಗುವು ತನ್ನ ತಾಯಿಯ ಮಡಿಲಲ್ಲಿರುವಾಗಲೇ ಅವರ ಕುತ್ತಿಗೆಯಿಂದ
ನಮ್ಮನ್ನು ನಾವೇ ಅಪರಾಧಿಗಳನ್ನುತ್ತೇವೆಯೋ?
ಅವರೆಲ್ಲರನ್ನು ಮೋಸಗೊಳಿಸುವುದಿಲ್ಲವೋ?
ನಾವು ಓಡಿ ಹೋಗುವುದಿಲ್ಲವೋ?
(ಕೋರಸ್-ವಾದ್ಯ)

ಪರಮಾತ್ಮನೆಂಬ ಕಾವಲುಗಾರನು ನಮ್ಮನ್ನು ಹಿಡಿಯುವಾಗ,
ಅವನು ಹುಡುಕಿ ಹುಡುಕಿ ನಮ್ಮ ಜೀವವನ್ನೇ ತೆಗೆದುಕೊಂಡು ಹೋಗುತ್ತಾನೆ.

ನಾವು ವಿಚಾರವಿಲ್ಲದೆಯೇ ಮಾತನಾಡುತ್ತೇವೆಯೋ?

ನಾವು ಅದಕ್ಕೆ ವಿರುದ್ಧವಾಗಿ ಇರುತ್ತೇವೆಯೋ?

ನಾವು ನಮ್ಮ ತಪ್ಪನ್ನು ಏನೆಂದು ಪರೀಕ್ಷಿಸುವುದಿಲ್ಲವೋ?

(ಕೋರಸ್-ವಾದ್ಯ)

ಕೊರವರ ವೃತ್ತಿಯನ್ನು ಗಮನಿಸಿದಾಗ ಕೊರವರು ಮೂಲತಃ ಉಪ್ಪು, ಹುಣಸೆಹುಳಿ, ಬೆಲ್ಲ, ಕರಿಬೇವು ಮೊದಲಾದವುಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಬಂಡಿಗಳ ಮೇಲೆ, ಕತ್ತೆಗಳ ಮೇಲೆ ಸಾಗಿಸುವ ಕಾರ್ಯವನ್ನು ಮಾಡುತ್ತಾರೆ. ಈ ಕರಿಬೇವಿಗೆ (ಮಸಾಲೆಯಲ್ಲಿ ಹಾಕುವ ಎಲೆ) ಅತ್ಯಂತ ಹೆಚ್ಚು ಬೇಡಿಕೆಯಿದ್ದು ಇದನ್ನು ಮಾರುತ್ತಾ ಬರುವವರಿಗೆ ತಮಿಳನಲ್ಲಿ ಕರು ವೈಪಿಲೈ ಎಂತಲೂ ತೆಲುಗಿನಲ್ಲಿ ಕರೇಪಾಕು ಎಂತಲೂ ಕರೆಯುತ್ತಾರೆ. ಇಂತಹ ವಸ್ತುಗಳನ್ನು ಮಾರುಕಟ್ಟೆಗೆ ತರುವ ಸಂದರ್ಭದಲ್ಲಿ ಕಾವಡಿಯಲ್ಲಿಟ್ಟುಕೊಂಡು ತರುತ್ತಾರೆ. ಸಮುದ್ರದಿಂದ ಉಪ್ಪನ್ನು ತರುವಂತಹ ಕೊರವರ ವಿಭಾಗಕ್ಕೆ ಉಪ್ಪು ಕೊರವರೆಂದು ಕರೆಯುತ್ತಾರೆ. (ಕರಾವಳಿಯಿಂದ) ಥೂಬ್ಬ, ದುಬಾಯಿ ಅಥವಾ ದಬಾಯಿ ಕೊರವರೆಂಬುವುದು ಇನ್ನೊಂದು ವಿಶಾಲವಾದ ವಿಭಾಗವಾಗಿದ್ದು, ಇವರು ಎಲ್ಲಿ ಹೆಚ್ಚಾಗಿ ಬಿದಿರು ದೊರಕುತ್ತದೋ ಅಂತಹ ಕಾಡು ಪ್ರದೇಶಗಳಲ್ಲಿ ಹೆಚ್ಚಾಗಿ ಸಂಚರಿಸುತ್ತಾರೆ. ಇವರು ಬಿದಿರಿನಿಂದ ಬುಟ್ಟಿಗಳನ್ನು ಇತರ ಆಸನಗಳನ್ನು, ಆಕರ್ಷಕ ಕಸೂತಿ ಕೆಲಸಗಳನ್ನು ನಿರ್ಮಿಸುತ್ತಾರೆ. ಕರ್ನೂಲ್ ಜಿಲ್ಲೆಯಲ್ಲಿ ಎರುಕಾಳರು ಬಿದಿರನ್ನು ಹುಣ್ಣಿಮೆಯೆಂದು ಮಾತ್ರ ಕಡಿಯುತ್ತಾರೆ. ಕಡಿಯುವ ಮೊದಲು ಇಂತಹ ಬಿದಿರಿನಲ್ಲಿ ನೆಲೆಸಿರುವಂತಹ ಮಲಾಲಮ್ಮನನ್ನು ಪೂಜೆ ಮಾಡುತ್ತಾರೆ. ನಲ್ಲಾಮಲೈ ಕಾಡಿನಲ್ಲಿ ಎರುಕಾಳರು ಬಿದಿರನ್ನು ತುಂಡರಿಸುವುದಿಲ್ಲ. ಮತ್ತು ರಂಧ್ರಗಳನ್ನು ತೆಗೆಯದೇ ಕೇವಲ ಮೇಲಿನ ಸಿಪ್ಪೆಯನ್ನಷ್ಟೇ ಸುಲಿಯುತ್ತಾರೆ. ಈ ಸಿಪ್ಪೆಯನ್ನು ಬಹಳ ಉದ್ದವಾದ ಗುಂಪುಗಳನ್ನಾಗಿ ಸುತ್ತಿ ಕತ್ತೆಯ ಮೇಲೆ ಸಾಗಿಸುತ್ತಾರೆ. ಇಂತಹ ಸಿಪ್ಪೆಯು ಹೆಚ್ಚು ದಹ್ಯವಾದುದರಿಂದ ಹೆಚ್ಚಾಗಿ ಬೆಂಕಿ ತಗಲುವ ಭೀತಿ ಇರುತ್ತದೆ. ಹಾಗಾಗಿ ಎರುಕಾಳರು ಸಂಪೂರ್ಣವಾಗಿ ಬಿದಿರನ್ನು ಖರೀದಿಸಲು ಕಾಡಿನಿಂದ ಹೊರತಂದೆ ಸಿಪ್ಪೆಯನ್ನು ಸುಲಿಯುತ್ತಾರೆ.

ಕುಂಚು ಅಥವಾ ಕುಂಚಿಲ್ ಕೊರವರೆನ್ನುವುದು ಇವರಲ್ಲಿರುವ ಇನ್ನೊಂದು ಪ್ರಮುಖ ವಿಭಾಗ ವಾಗಿದೆ. ಇವರು ಕಾಡಿನಿಂದ ಕಂದ ಮೂಲಗಳನ್ನು ಸಂಗ್ರಹಿಸಿ, ಅದರ ಹುಲ್ಲಿನಿಂದ ಹಿಡಿಸೂಡಿಯನ್ನು ತಯಾರಿಸುತ್ತಾರೆ. ಕೊರವರಿಗೆ ತಮ್ಮ ಉದ್ಯೋಗದಲ್ಲಿ ಮತ್ತು ವ್ಯಾಪಾರದಲ್ಲಿ ಏಕಸ್ವಾಮ್ಯವಿದೆ. ಕಂಚು ಕೊರವರು ಉತ್ತಮ ಬೇಟೆಗಾರರೂ ಆಗಿದ್ದಾರೆ. ಅವರು ಜಿಂಕೆಯನ್ನು, ತಿತ್ತಿರ ಪಕ್ಷಿಯನ್ನು, ಬಾತುಕೋಳಿ, ಅಳಿಲು ಮೊದಲಾದವನ್ನು ಬಹಳ ನಿಪುಣತನದಿಂದ ಹಿಡಿಯುತ್ತಾರೆ. ಇವರು ಜಿಂಕೆಯನ್ನು ಅತಿ ಹತ್ತಿರದಿಂದ ಮತ್ತು ಅತ್ಯಂತ ಸುಲಭವಾಗಿ ಹಿಡಿಯಲು ಹುಲ್ಲಿನಂತೆ ಕಂಡುಬರುವ ವಿಶೇಷ ಉಪಕರಣವನ್ನು ಬಳಸುತ್ತಾರೆ. ಜಿಂಕೆಗೆ ಒಂದು ಗುಂಪು ಮೇವನ್ನು ತಿನ್ನುತ್ತಿರುವಾಗ ಬಲಿತ ಜಿಂಕೆಯನ್ನು ಹಿಡಿಯುವ ಸಲುವಾಗಿ ಕೃತಕವಾಗಿ ಹುಲ್ಲಿನ ದಿಣ್ಣೆಯನ್ನು ನಿರ್ಮಿಸಿ ಅದನ್ನು

ನಿಧಾನವಾಗಿ ಚಲಿಸುತ್ತಾರೆ. ಅದು ಹತ್ತಿರ ಬಂದ ಹಾಗೇ ಬಹಳ ಹತ್ತಿರದಿಂದ ಆಯುಧಗಳನ್ನು ಬಳಸಿ ಕೊಲ್ಲುತ್ತಾರೆ. ಒಂದು ವೇಳೆ ಈ ತಂತ್ರದಿಂದ ಜಿಂಕೆಯನ್ನು ಹಿಡಿಯಲು ಅಸಾಧ್ಯವಾದರೆ ಇನ್ನೊಂದು ಕೃಷಿಯಾಧಾರಿತ ತಂತ್ರದಿಂದ ಬಾತುಕೋಳಿಗಳನ್ನು ಹಿಡಿಯುತ್ತಾರೆ.

ಕೆಲವೊಮ್ಮೆ ಕುಂಚು ಕೊರವರು ಕೋತಿಗಳನ್ನು ಆಡಿಸುತ್ತಾ ಬೇಡಿ ಹಣವನ್ನು ಪಡೆಯುತ್ತಾರೆ. ಹೆಂಗಸರು ಹುಲ್ಲಿನಿಂದ ತಯಾರಿಸಿದ ಆಟಿಕೆಗಳನ್ನು ಮಾರುತ್ತಾರೆ. ಇದರಿಂದಾಗಿಯೇ ಅವರಿಗೆ 'ಪಚ್ಚಾಯಿ ಕುಟ್ಟಿ' ಎಂಬ ಹೆಸರು ಬಂದಿದೆ. ಇವರು ಚರ್ಮದ ಮೇಲೆ ವಿವಿಧ ಸಲಕರಣೆಗಳನ್ನು ಬಳಸಿ ಚಿತ್ರಗಳನ್ನು ಚಿತ್ರಿಸುತ್ತಾರೆ. ವಿವಿಧ ಕಡ್ಡಿಗಳನ್ನು, ಬಿದಿರಿನ ತುಂಡುಗಳನ್ನು ಬಳಸಿ ದೀಪದ ಕರಿ, ದೀಪದ ಎಣ್ಣೆ ಅರಿಶಿನವನ್ನು ಬಳಸಿ ಚಿತ್ರಗಳನ್ನು ರಚಿಸುತ್ತಾರೆ. ಈ ಬಣ್ಣವನ್ನು ಹಚ್ಚುವುದಕ್ಕಾಗಿ ಒಬ್ಬರಿಂದ ಎಂಟಾಣೆಯಿಂದ ಹನ್ನೆರಡಾಣೆಯನ್ನು ಅಥವಾ ಅದರ ವಿನಿಮಯಕ್ಕೆ ದಿನಬಳಕೆಯ ವಸ್ತುಗಳನ್ನು ಕೇಳುತ್ತಾರೆ.

ಪಾಪಾರಾವ್ ನಾಯ್ಡು ಅವರು ಪಚ್ಚಾಯಿಕುಟ್ಟಿಗಳ (ಗಡ್ಡೆ-ಕಣಿ ಹೇಳುವವರು) ವಿಷಯವಾಗಿ ಈ ರೀತಿಯಾಗಿ ಬರೆಯುತ್ತಾರೆ. ಈ ಪಂಗಡದ ಸ್ತ್ರೀಯರು ಒಂದು ಬುಟ್ಟಿಯನ್ನು ಹಿಡಿದುಕೊಂಡು, ಮಚ್ಚೆ ಹಾಕುವ ಮತ್ತು ಕಣಿ ಹೇಳುತ್ತಾ ಗ್ರಾಮವನ್ನು ಪ್ರವೇಶಿಸುತ್ತಾರೆ. ಯಾರಾದರೂ ಒಬ್ಬರ ಮನೆಯಲ್ಲಿ ಮಗು ಕಳೆದು ಹೋಗಿದ್ದರೆ ಅಥವಾ ಮಗು ಅನಾರೋಗ್ಯವಾಗಿದ್ದಾರೆ. ಈ ಮಹಿಳೆಯು ಅಲ್ಲಿ ಎಲ್ಲಾದರೂ ಕಂಡುಬಂದರೆ ಅವರನ್ನು ಕರೆದು, ಮನೆಯಲ್ಲಿ ಕುಳ್ಳಿರಿಸಿ, ಅವರ ಬುಟ್ಟಿಗೆ ಧಾನ್ಯಗಳನ್ನು ತುಂಬಿಸಿ, ಅವರ ಭೂತ ಮತ್ತು ಭವಿಷ್ಯತ್ತಿನ ವಿಷಯದಲ್ಲಿ ಪ್ರಶ್ನೆಯನ್ನು ಕೇಳುತ್ತಾರೆ. ಆವಾಗ, ಕಣಿ ಹೇಳುವುದರಲ್ಲಿ ಮಾತಿನ ಮೂಲಕ ಇನ್ನೊಬ್ಬರನ್ನು ಮೋಡಿಗೊಳಿಸುವುದರಲ್ಲಿ ನಿಸ್ಸೀಮರಾದಂತಹ ಈ ಗುಡ್ಡೆ ಮಹಿಳೆಯರು ಆ ಸ್ತ್ರೀಯರನ್ನು ಮಾತಿನಲ್ಲಿ ಮೋಹಗೊಳಿಸಿ ಅವರಿಗೆ ಉತ್ತಮ ಭವಿಷ್ಯತ್ ಇದೆಯೆಂದು ತಿಳಿಸಿ ಅವರಲ್ಲಿ ಆಸೆಯನ್ನು ಮೂಡಿಸಿ ಅವರು ಸಾಮಾನ್ಯವಾಗಿ ಕೊಡುವ ಧಾನ್ಯಕ್ಕಿಂತ ಎರಡು ಪಟ್ಟು ಧಾನ್ಯವನ್ನು ಕಬಳಿಸುತ್ತಾರೆ.

ವಿಶಾಖ ಪಟ್ಟಣ ಜಿಲ್ಲೆಯ ಶೃಂಗವಾರಪು ಕೋಟ ಗ್ರಾಮದಲ್ಲಿ – ಹಿಂದೆ ಸತಿ ಸಹಗಮನ ಮಾಡಿದಂತಹ ಎರಕಮ್ಮಳನ್ನು ದೇವಿಯೆಂದು ಪೂಜಿಸಲಾಗುತ್ತಿತ್ತು. ಇವಳ ಕುರಿತಾಗಿ ಅನೇಕ ಜಾನಪದ ಗೀತೆಗಳು ಪ್ರಚಲಿತದಲ್ಲಿವೆ. ಇದರಲ್ಲಿ ಅವಳು ದಾಸರಿ ವಂಶದವಳೆಂದು ಹೇಳಲಾಗುತ್ತಿದ್ದು, ಇವಳ ಚರಿತ್ರೆಯನ್ನು ಎರುಕಾಳ ಮಹಿಳೆಯರು ಕೂಡಾ ಹಾಡುತ್ತಾರೆ. ಕಥೆ ಏನು ಹೇಳುತ್ತಿದೆಯೆಂದರೆ ಎರಕಮ್ಮಳು ಪ್ರಾಯಕ್ಕೆ ಬಂದಾಗ ಮದುವೆಯಾದಳು. ಒಂದು ದಿನ ತನ್ನ ಗಂಡನು ಗದ್ದೆಗೆ ಹೋದರೆ ಹುಲಿಯು ಅವನನ್ನು ಹಿಡಿದು ಸಾಯಿಸುತ್ತದೆ ಎಂದು ತಿಳಿದು, ತನ್ನ ಗಂಡನನ್ನು ಗದ್ದೆಗೆ ಹೋಗದಂತೆ ಬಹಳವಾಗಿ ಪ್ರಾರ್ಥಿಸಿದಳು. ಆದರೆ ಆತನು ಅವಳ ಮಾತನ್ನು ಕೇಳದೆ ಗದ್ದೆಗೆ ಹೋದಾಗ ಅವಳು ಎಣಿಸಿದಂತೆ ನಡೆಯಿತು. ಅವಳು ಅದೇ ಸ್ಥಳದಲ್ಲಿ ಸತಿ ಸಹಗಮನ ಮಾಡಿದಳು. ಅವಳ ನೆನಪಿಗಾಗಿ ಕಲ್ಲನ್ನು ನೆಡಲಾಗಿದೆ.

ಕೊರವರು ತಮ್ಮ ಜನ್ಮ ಸ್ಥಳವನ್ನು ತೊರೆದು ಇತರ ಸ್ಥಳಗಳಲ್ಲಿ ವಾಸ್ತವ್ಯ ಹೂಡಿದ್ದಾರೆ ಮತ್ತು ಅಲ್ಲಿಯ ಜನರೊಂದಿಗೆ ಬೆರೆತಿದ್ದಾರೆ. ಅದರಲ್ಲಿ ಕೆಲವರು ಶಾಲೆಗಳಿಗೆ ಸೇರಿ ಅಕ್ಷರವನ್ನು ಕಲಿತರೆ, ಕೆಲವರು ಪೋಲೀಸ್ ವಿಭಾಗದಲ್ಲಿ, ಉಪ್ಪು ಉತ್ಪಾದನೆಗಳ ಘಟಕಗಳಲ್ಲಿ, ಜೈಲಿನಲ್ಲಿ ವಾರ್ಡನ್‌ಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸೇಲಂ ಜಿಲ್ಲೆಯಲ್ಲಿ ಕೊರವೂರು ಎಂಬ ಗ್ರಾಮವಿದ್ದು ಇಲ್ಲಿ ಹೆಚ್ಚಾಗಿ ಕೊರವರೇ ನೆಲೆಸಿದ್ದು, ಇವರು ಮೂಲತಃ ಉಪ್ಪು ಕೊರವರಾಗಿದ್ದು, ಭೂಮಿಯನ್ನು ಉಳುವವರಾಗಿದ್ದು, ಜಮೀನ್ದಾರರಿಗೆ ಆಳುಗಳಾಗಿ ಕೆಲಸ ಮಾಡುತ್ತಿದ್ದಾರೆ. ಅವರು ತಮ್ಮಲ್ಲಿರುವ ಮುತ್ತು ಮತ್ತು ಮಣಿಗಳನ್ನು ಬದಲಾಯಿಸುವುದಕ್ಕಾಗಿ ವರ್ಷಕ್ಕೊಮ್ಮೆ ಮದ್ರಾಸಿಗೆ ಭೇಟಿ ಕೊಡುತ್ತಾರೆ. ಕೆಲವು ಕೊರವರು ಮಧುರೈನಲ್ಲಿ ಕೃತಕ ಬಂಗಾರವನ್ನು ಖರೀದಿಸಿ ತಮ್ಮ ಗ್ರಾಮಗಳಿಗೆ ಬಂದು ನೈಜ ಬಂಗಾರವೆಂದು ಮಾರುತ್ತಾರೆ. ಊರ ಕೊರವರು ನಾಗರಿಕರಾಗಿ ಪರಿವರ್ತಿತರಾದರೂ ಅವರು ಇನ್ನೊಬ್ಬರ ವಸ್ತುಗಳಿಗೆ ಆಸೆ ಪಡುವುದನ್ನು ನಿಲ್ಲಿಸಿಲ್ಲ. ಮತ್ತು ಅವರು ಹೆಚ್ಚಾಗಿ ಕಳ್ಳತನ, ದರೋಡೆ, ಜಾನುವಾರುಗಳ ಕಳ್ಳತನವನ್ನು ಮಾಡುವಂತಹ ಅನಂತಪುರ, ಕಡಪಾ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಶಾಪವಾಗಿ ಪರಿಣಮಿಸಿದ್ದಾರೆ. ಹಿಂದೊಮ್ಮೆ ನಡೆದ ಕುರಿಗಳ ಕಳ್ಳತನದ ವರದಿಯು ಈ ರೀತಿಯಾಗಿದೆ. ಅನಂತಪುರ ಜಿಲ್ಲೆಯಲ್ಲಿರುವ ನಿಂಗನಮಲ್ಲ ಗ್ರಾಮದ ರೈಲ್ವೆ ಸ್ಟೇಷನ್ನಿಂದ ಸ್ವಲ್ಪ ದೂರದಲ್ಲಿ ಒಂದು ಹಳ್ಳಿಯಿದೆ. ಈ ಗ್ರಾಮವು ೨ ರಾಜ್ಯದ ಅರಣ್ಯಾಧಿಕಾರಿಗಳ ಸುಪರ್ದಿಗೆ ಸೇರಿದೆ. ಈ ಗ್ರಾಮದ ಜನರು ತಮ್ಮ ಜಾನುವಾರುಗಳನ್ನು ಮೇಯಿಸಲು ಸಣ್ಣ ಹುಡುಗರ ಬಳಿಯಲ್ಲಿ ಕೊಡುತ್ತಾರೆ. ಹುಡುಗರು ಹೆಚ್ಚಾಗಿ ಅರಣ್ಯ ವೀಕ್ಷಕರ ಗೈರಿನಲ್ಲಿಯೇ ಜಾನುವಾರುಗಳನ್ನು ಮೇಯಿಸುತ್ತಾರೆ. ಆ ಗ್ರಾಮದ ಕೊರವರಿಗೂ ಬೆಂಗಳೂರಿನಲ್ಲಿರುವ ಮಾಂಸ ವ್ಯಾಪಾರಿಯ ನಡುವೆ ಒಂದು ಒಪ್ಪಂದದಂತೆ ದೊಡ್ಡ ಸಂಖ್ಯೆಯ ಕುರಿಗಳನ್ನು ಧರ್ಮಾವರದ ರೈಲ್ವೆ ಸ್ಟೇಷನ್ನಿನ ಬಳಿ ಕೆಳಗಿಳಿಸುವಂತೆ ಅವರ ಪರವಾಗಿ ಇಳಿಸುವುದಾಗಿತ್ತು. ಈ ವ್ಯವಹಾರವೆಲ್ಲವೂ ಹಣಕ್ಕೆ ಸಂಬಂಧಿಸಿದುದಾಗಿದ್ದು, ಅಲ್ಲಿಂದ ಬೇರೆ ಬೇರೆ ಕಡೆ ಕೊಂಡೊಯ್ಯಲು ಲಾರಿಗಳೂ ಸಿದ್ಧವಾಗಿದ್ದವು. ಒಂದು ದಿನ ನೂರಾರು ಕುರಿಗಳನ್ನು ಸಾಗಿಸಲು ಎಲ್ಲಾ ಸಿದ್ಧತೆಗಳು ನಡೆದಿರುವಾಗ, ಅಲ್ಲಿಯೇ ಕುರಿ ಮೇಯಿಸುತ್ತಿದ್ದ ಹುಡುಗರು ಬೆದರಿಸಲು ಅವರನ್ನು ಕಟ್ಟಿ ಹಾಕಿ ನೂರಾರು ಕುರಿಗಳನ್ನು ಕದ್ದು ಬೆಂಗಳೂರಿಗೆ ಸಾಗಿಸಿದರು.

ಹಾವಾಡಿಗರ ರೂಪದಲ್ಲಿರುವ 'ಪಾಮುಲ' ಎಂದು ಕರೆಯಲ್ಪಡುವ ಕೊರವರ ಸಣ್ಣ ಪಂಗಡವಿದೆ. ೧೯೦೦ರ ಜನಗಣತಿಯ ವರದಿಯಲ್ಲಿ ಪುಸಲವಾಡು ಮತ್ತು ಉಟ್ಲವಾಡು ಪಂಗಡದವರನ್ನು ಎರುಕಾಳರ ಉಪವಿಭಾಗವೆಂದು ಕರೆಯಲಾಗಿದೆ. ಇದೇ ವರದಿಯಲ್ಲಿ ಕಾಡು ಕುಟ್ಟುಕಿರಾವರ್ ಮತ್ತು ವಲ್ಲಿ ಅಮ್ಮಾಯಿ ಕುಟ್ಟಂ ಅವರು ಕೊರವರ ಸಹವರ್ತಿಗಳೆಂದೇ ಹೇಳಲಾಗಿದೆ. ವಲ್ಲಿ ಅಮ್ಮಾಯಿಯು ಸುಬ್ರಹ್ಮಣ್ಯ ದೇವರ ಮಡದಿಯಾಗಿದ್ದು ಇವರು ಕೊರವ ಮಹಿಳೆಯೆಂದು ಇವರು ತಿಳಿಯುತ್ತಾರೆ. ತಮಿಳಿನ ಪುರಾತನ ಪುಸ್ತಕಗಳು ಕೊರವರನ್ನು ರಾಜರಿಗೆ, ರಾಣಿಯರಿಗೆ ಮತ್ತು ಕಣಿ ಹೇಳುವವರೆಂದು ತಿಳಿಸಿದೆ. ಬಾಲ್ ಪೋಲರು ವಲಜ ಕೊರವರನ್ನು ಗುರುತಿಸಿದ್ದು, ಇವರು ಸಂಗೀತಗಾರರೆಂದು ಹೇಳಿದ್ದಾರೆ. ಇವರು ವುಯಲೂ ಕೊರವರೊಂದಿಗೆ ಗುರುತಿಸಲ್ಪಡುತ್ತಾರೆ. ಇವರು ಧಾರ್ಮಿಕ

ಕಾರ್ಯಗಳ ಸಂದರ್ಭ ದೇವರ ಮುಂದೆ ಹಾಡುವವರಿದ್ದಾರೆ. ಇದೇ ವಿದ್ವಾಂಸರು ಬಜಂತ್ರಿ, ಸೋನಾಯಿ ಕೊಲವಾರು, ಕೊಲ್ಲ ಮತ್ತು ಸೋರಿ ಕೊರವಾರರ ಬಗ್ಗೆ ಪ್ರಸ್ತಾಪಿಸಿದ್ದು ಇವರು ದಕ್ಷಿಣ ದೇಶದವರೆಂದು ಉಲ್ಲೇಖಿತವಾಗಿದೆ. ಅಬ್ಬೇ ದುಬಾಯಿಸ್‌ರು ಈ ರೀತಿ ಅಭಿಪ್ರಾಯ ಪಡುತ್ತಾರೆ. ಕೊರವರ ಹಿನೆಯ ತಲೆಮಾರಿನವರನ್ನು ಕಲ್ಲಬಂಟ್ರು ಎಂದು ಕರೆಯುತ್ತಾರೆ. ಮೈಸೂರಿನ ಕೊನೆಯ ಅರಸನು ಯುದ್ಧದ ಸಂದರ್ಭದಲ್ಲಿ ಇವರಿಗೆ ನಿರಂತರ ಸೈನ್ಯದ ರೂಪದಲ್ಲಿ ಉದ್ಯೋಗವನ್ನು ಒದಗಿಸಿ ಕೊಟ್ಟಿದ್ದರೆಂದು ತಿಳಿಯಬಹುದು. ಆದರೆ ಇವರಿಗೆ ಯುದ್ಧದಲ್ಲಿ ಯಾವುದೇ ಅಧಿಕಾರವನ್ನು ಕೊಡದೆ ಕೇವಲ ಕುದುರೆಗಳನ್ನು ಅಮೂಲ್ಯ ವಸ್ತುಗಳನ್ನು ಕಾಯುವ ಕೆಲಸವನ್ನು ವಹಿಸಿದ್ದರು.

ಕೂಟು ಅಥವಾ ಕೋತಿ ಕೈಕರಿಯರು ಎಂದು ಕರೆಯಲ್ಪಡುವ ಕೊರವರ ಇನ್ನೊಂದು ಪಂಗಡದ ವಿಷಯವನ್ನು ಪಾಪಾರಾವ್ ನಾಯ್ಡು ಅವರು ಪ್ರಸ್ತಾಪಿಸಿದ್ದಾರೆ. ಇವರು ವೇಶ್ಯಾವಾಟಿಕೆಯ ಮೂಲಕ ಜೀವನ ನಡೆಸುತ್ತಾರೆ. ಇದರ ಸಲುವಾಗಿ ಅವರು ಮಕ್ಕಳನ್ನು ಅಪಹರಿಸಿ ಮಾರುತ್ತಾರೆ. ಮದ್ರಾಸ್ ಪ್ರಾಂತ್ಯದಲ್ಲಿ ಇವರನ್ನು ಉತ್ತಮ ನೃತ್ಯಗಾರರೆಂದು ಕರೆಯುತ್ತಾರೆ. ಶ್ರೀಮಂತರು ಇವರನ್ನು ಇಟ್ಟುಕೊಳ್ಳುತ್ತಾರೆ. ತೆಲುಗಿನಲ್ಲಿ ಇವರನ್ನು ಎರುಕಾಳ ಭೋಗಂವಾರು ಎಂತಲೂ ತಮಿಳಿನಲ್ಲಿ ಕೊರವ ತೇವಿಡಿಯಾ ಎಂತಲೂ ಕರೆಯುತ್ತಾರೆ. ಇವರು ಕೋತಿಯನ್ನಾಡಿಸುತ್ತಾರೆ.

ಕೊರವರು ವಿಷ್ಣುವನ್ನು ಶಿವನನ್ನು ಇಬ್ಬರನ್ನೂ ಪೂಜಿಸುತ್ತಾರೆ. ೧೯೦೧ರ ಜನಗಣತಿಯಂತೆ ಕೊರವರು ಸುಬ್ರಹ್ಮಣ್ಯನನ್ನು ಪೂಜಿಸಿದರೆ, ಎರುಕಾಳರು ವೆಂಕಟೇಶ್ವರನನ್ನು ಪೂಜಿಸುತ್ತಾರೆ. ಇದರೊಂದಿಗೆ ಅವರು ಕೋಲಾಪುರಿಯಮ್ಮ, ಪೆರುಮಾಳ ಸ್ವಾಮಿ ಮತ್ತು ಇತರ ದೇವತೆಗಳನ್ನು ಪೂಜಿಸುತ್ತಾರೆ. ಕೋಲ್ಹಾಪುರಮ್ಮಳು ಕೋಲಾಪುರದ ಅಭಿಮಾನಿ ದೇವತೆಯಾದರೆ, ಪೆರುಮಾಳ ಸ್ವಾಮಿಯು ತಿರುಪತಿಯ ಅಭಿಮಾನಿ ದೇವತೆ. ವರ್ಷಕ್ಕೊಮ್ಮೆ ತಮ್ಮ ಅಭಿಮಾನಿ ದೇವತೆಗೆ ಆದಿತ್ಯವಾರ ಅಥವಾ ಮಂಗಳವಾರದಂದು ಕುರಿ ಬಲಿಯನ್ನು, ವೆಂಕಟೇಶ್ವರ ದೇವರಿಗೆ ಶನಿವಾರದ ದಿನ ತೆಂಗಿನಕಾಯಿಯನ್ನು ಒಡೆಯುತ್ತಾರೆ. ಎಲ್ಲಾ ಹರಕೆಗಳ ವಸ್ತುಗಳನ್ನು ಪೂಜೆ ಮುಗಿದ ನಂತರ ಭಕ್ತರು ಸಮಾನವಾಗಿ ಹಂಚುತ್ತಾರೆ"(Encyclopaedia of India Tribas and Castes Vol.12, S.M. Channa, P. 3472-3482).

ಕೊರವರ ಭಾಷೆ

ಭಾಷೆ ಮಾನವನಿಗೆ ದೊರೆತ ಒಂದು ಅಮೂಲ್ಯವಾದ ಸಾಧನ. ಭಾಷೆ ಇಲ್ಲದಿದ್ದರೆ ಆತ ಪ್ರಾಣಿಗಳಂತೆಯೇ ಬದುಕುತ್ತಿದ್ದ. ಮನುಷ್ಯನ ಉನ್ನತಿಗೆ ಭಾಷೆ ಪ್ರಮುಖವಾಗಬೇಕು. ಜೊತೆಗೆ ಆ ಭಾಷೆಯನ್ನು ಶ್ರೀಮಂತಗೊಳಿಸುವ ಜನಸಮುದಾಯವೂ ಬೇಕು. ಭಾಷೆ ಬೆಳೆದಂತೆ ಅವರ ಸಂಸ್ಕೃತಿಯೂ ಬೆಳೆಯುತ್ತಾ ಹೋಗುತ್ತದೆ. ಮೂಲದ ಒಂದು ಭಾಷೆಯಿಂದ ಅನೇಕ ಉಪಭಾಷೆಗಳು ಬೆಳೆದು ಬರುತ್ತದೆ. ಅವು ಕಾಲಾಂತರದಲ್ಲಿ ಬೇರೆ ಬೇರೆ ಭಾಷೆಯೇನೋ ಎಂಬುವಷ್ಟು ಬದಲಾವಣೆಯನ್ನು ಪಡೆಯುತ್ತದೆ. ಲಿಪಿಯನ್ನು ರೂಢಿಸಿಕೊಂಡಿರುವ ಭಾಷೆಗಳ ಕಾಲಕಾಲದ ಬೆಳವಣಿಕೆಯನ್ನು ಆಯಾ ಭಾಷೆಯ ಸಾಹಿತ್ಯದ ಹಿನ್ನೆಲೆಯಲ್ಲಿ ಅರಿಯಬಹುದು. ಆದರೆ ಲಿಪಿಯೇ ಇಲ್ಲದ ಭಾಷೆಯ

ಬದಲಾವಣೆ ಅಥವಾ ಅದರ ಇತಿಹಾಸವನ್ನು ಅರಿಯುವುದು ಅಷ್ಟು ಸುಲಭವಲ್ಲ. ಈ ದಿಸೆಯಲ್ಲಿ ಕೊರಮ ಭಾಷೆಯನ್ನು ವಿವೇಚಿಸಬೇಕು. ಕೊರಮರಿಗೂ ಒಂದು ಭಾಷೆ ಇದೆ. ಅದು ಅವರಲ್ಲಿ ಸಾವಿರಾರು ವರ್ಷಗಳಿಂದ ಬಳಕೆಯಲ್ಲಿದೆ. ಕೊರಮರು ತಮ್ಮ ಭಾಷೆಯನ್ನು ತಮ್ಮ ತಮ್ಮಲ್ಲಿಯೇ ಮಾತನಾಡಿಕೊಳ್ಳುತ್ತಾರೆ. ಇದಕ್ಕೆ 'ಕುಳುವ ಭಾಷೆ' ಎಂದು ಕರೆಯಲಾಗುತ್ತದೆ. ಅವರು 'ಕುಳುವರು' ಎಂದು ಪರಿಚಯಿಸಿಕೊಳ್ಳುತ್ತಾರೆ. ಈ ಬಗ್ಗೆ ಕಿವಿ.ಜೆ. ಕೆನ್ ಅವರು Among themselves they call eac other Kuluvaru ಎಂದು ಬರೆಯುತ್ತಾರೆ. ಫ್ರಾನ್ಸಿನ್ ಅವರು It is notworthy in this connection that the yearukalas as said to call one another kurru, or kuru' ಎಂಬುದನ್ನು ದಾಖಲಿಸಿದ್ದಾರೆ. ಎಚ್. ಸ್ಟೂವರ್ಟ್ ಅವರು 'But they always speak of themselves as Kuru.....' ಎಂದಿದ್ದಾರೆ.

ತಮಿಳುನಾಡಿನ ಎಲ್ಲ ಕಡೆಯೂ ಕುರುವರು ಗುಡ್ಡಗಾಡು ಜನಾಂಗದವರಾಗಿ ಕಂಡುಬರುತ್ತದೆ. ಇವರು ತಮಿಳು ಮೂಲಕ್ಕೆ ಸೇರಿದ ಬುಡಕಟ್ಟು. ಇವರಾಡುವ ಭಾಷೆಯನ್ನು ಕುಳುವ, ಕುರು, ಕುರ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಕೊರವರಲ್ಲಿ ಕೆಲವರು ತಮ್ಮ ಭಾಷೆಯನ್ನು ಕೊಂಗ ಭಾಷೆ ಎನ್ನುತ್ತಾರೆ. ಈಗ ದೊರೆತಿರುವ ಆಧಾರದ ಮೇಲಿಂದ ಈ ಭಾಷೆಯನ್ನು ವಿವೇಚಿಸಿದರೆ ಇದು ಸ್ವತಂತ್ರ ಭಾಷೆಯಲ್ಲ ಎಂಬುದು ತಿಳಿಯುತ್ತದೆ. ಇದು ಪೂರ್ವದ ತಮಿಳಿನ ಒಂದು ಉಪಭಾಷೆ. ಇದು ತಮಿಳಿನಿಂದ ಪೂರ್ವ ದ್ರಾವಿಡದ ಸಂದರ್ಭದಲ್ಲಿಯೇ ಪ್ರತ್ಯೇಕವಾದಂತೆ ತೋರುತ್ತದೆ. ಕೊರಮರು ಈ ಭಾಷೆಯನ್ನಾಡುವಾಗ ಕೇಳಿ ಬರುವ ಶಬ್ದಗಳು, ಅವು ಉಚ್ಚರಿಸಲ್ಪಡುವ ರೀತಿ ಮತ್ತು ಅವುಗಳ ಅರ್ಥ ಗ್ರಹಿಸಿದರೆ ಈ ಭಾಷೆ ತಮಿಳಿಗೆ ತೀರಾ ಹತ್ತಿರವಾಗುತ್ತದೆ. ಶ್ರೀ ಮಲ್ಲಾಪುರ ಅವರು ಕೊರವಂಜಿಯ ಕಣಿಯ ಬಗೆಗೆ ಬರೆಯುತ್ತಾ "ಹೇಳುವೆ ಕಣಿ, ಕಣಿ ಕೇಳಿರಮ್ಮ" ಎಂದು ಸುಶ್ರಾವ್ಯವಾಗಿ ಹಾಡುತ್ತಾ ವೈಯ್ಯಾರದಿಂದ ಮನೆ ಬಾಗಿಲಿಗೆ ಬರುತ್ತಾರೆ. ಕೊರವಂಜಿಗಳು ಇಂದು ಕಂಡುಬರುವುದು ಅಪರೂಪ.

"ಪಚ್ಚೆಮೇಲೆ ಪವಳ ಮೆಲ್ಯೆ ಎಂಗಳ್ ಮಲ್ಯೆ ಅಮ್ಯೋ
ಪರಮೇಸನ್ ವಾಳುವುದು ಎಂಗಳ್ ಮಲ್ಯೆ ಅಮ್ಮೋ
ಕೊಚ್ಚಿ ಮಲ್ಯೆ ಕೊಡಗು ಮಲ್ಯೆ ಎಂಗಳ್ ಮಲ್ಯೆ ಅಮ್ಮೋ"[೧]

ಕುರುರೇಷನ್ ವಾಳುವುದುಂ ಎಂಗಳ್ ಮಲ್ಯೆ ಅಮ್ಮೋ ಎಂದು ತಿಳಿಸುವ ಈ ಸಾಲುಗಳನ್ನು ಉದಾಹರಿಸಿದ್ದಾರೆ. ಈ ಭಾಷೆ ಕೊರಮರ ಭಾಷೆಗೆ ತೀರ ಸಮೀಪವಾಗಿದೆ. ಕೊರಮರು ಯಾವುದೇ ರಾಜ್ಯದಲ್ಲಿರಲಿ ಮೂಲ ನೆಲೆಯಿಂದ ಅಗಲಿದ ಸಾವಿರಾರು ವರ್ಷಗಳ ನಂತರವೂ ಒಂದೇ ಭಾಷೆಯನ್ನು ಇಂದಿಗೂ ಮಾತನಾಡುತ್ತಾರೆ. ನಾಗರಿಕತೆಯ ಪ್ರಭಾವದಿಂದಾಗಿ ಇಂದು ಕುಳುವ ಭಾಷೆಯನ್ನು ಮಾತನಾಡುವವರ ಸಂಖ್ಯೆ ಕಡಿಮೆಯಾಗುತ್ತಾ ಹೋಗುತ್ತಿದೆ. ಎಲ್ಲರೂ ಒಂದೇ ರೀತಿಯಲ್ಲಿ ಮಾತನಾಡುವುದಿಲ್ಲ. ಆಯಾ ಪ್ರದೇಶದ ಅನುಗುಣವಾಗಿ ಬದಲಾವಣೆಗಳಿರುತ್ತವೆ.

ತಮಿಳಿನ ವ್ಯಂಜನಾಂತ ಶಬ್ದಗಳು ಕುಳುವ ಭಾಷೆಯಲ್ಲಿ ಸ್ವರಾಂತವಾಗುತ್ತವೆ. ತಮಿಳಿನಲ್ಲಿ ಪುಲ್ಲಿಂಗವಾಚಕ ಶಬ್ದ 'ಒರುವನ್' ಒಬ್ಬ ಎಂದು ಬಳಕೆಯಾಗುತ್ತಿತ್ತು. ಸ್ತ್ರೀಯರಲ್ಲಿ 'ಒರುತ್ತಿ' ಒಬ್ಬಳು

ಅಥವಾ ಅವಳು ಎಂಬ ಬಳಕೆಯಲ್ಲಿದೆ. ಪುಲ್ಲಿಂಗ ವಾಚಕ ಕ್ರಿಯಾಪದಗಳಲ್ಲಿ ನಕಾರ, ಸ್ತ್ರೀಲಿಂಗ ವಾಚಕ ಕ್ರಿಯಾಪದಗಳಲ್ಲಿ ಳಕಾರ ಉಪಯೋಗಿಸ್ಪಡುತ್ತಿದ್ದವು. ತಮಿಳಿನ ಒರುವನ್ ಮತ್ತು ಒರುತ್ತಿ ಎಂಬ ಶಬ್ದಗಳು ಕುಳುವ ಭಾಷೆಯಲ್ಲಿ ಒರ್ತು ಮತ್ತು ಒರ್ತಿ ಅಂದರೆ ಒಬ್ಬ ಮತ್ತು ಒಬ್ಬಳು ಎಂದು ಪ್ರಯೋಗವಾಗುತ್ತದೆ.

ಅಂಕಿ-ಅಂಶಗಳು:

ಕನ್ನಡ	ಕುಳುವ	ತಮಿಳು	ತೆಲುಗು
ಒಂದು	ಒಂಡು	ಒಂಣ್ಣ	ಒಕ್ಕಟಿ
ಎರಡು	ರಂಡು	ಇರಂಡು	ರೆಂಡು
ಮೂರು	ಮೂಡು	ಮೂನ್ರು	ಮೂಡು
ನಾಲ್ಕು	ನಾಂಗು	ನಾಲು	ನಾಲಗು
ಐದು	ಅಂಜ	ಐಂದು	ಐದು
ಆರು	ಆರು	ಆರು	ಆರು
ಏಳು	ಓಗ್	ಏಲು	ಏಡು
ಎಂಟು	ಆಟ್ಟು	ಎಟ್ಟು	ಎನಿಮಿದಿ
ಒಂಬತ್ತು	ಒಂಬಿದಿ	ಒಂಬೊದು	ತೊಮಿದಿ
ಹತ್ತು	ಪತ್ತು	ಪತ್ತು	ಪದಿ
ಹನ್ನೊಂದು	ಪನ್ನೊಂದು	ಪದಿನೊಣ್ಣು	ಪದಕೊಂಡು
ಹನ್ನೆರಡು	ಪನ್ನೆರಡು	ಪನಿರೆಂಡು	ಪನ್ನೆಂಡು
ಇಪ್ಪತ್ತು	ಇರ್ದಿ	ಇರುವುದು	ಇರವೈಯ್
ಮೂವತ್ತು	ಮುಪ್ಪಿದಿ	ಮುಪ್ಪದು	ಮೂಪಯ್
ನಲವತ್ತು	ನಾಪದಿ	ನಾಪದು	ನಾಲ್ವಾಯ್
ಐವತ್ತು	ಅಂಜುರಕಾಪತ್ತು	ಅಂಬುದು	ಯಾಬೈ
ಆರವತ್ತು	ಅರ್ರಕಾಪತ್ತು	ಅರುವುದು	ಆರವೈರ್
ಎಪ್ಪತ್ತು	ಓಗ್ರತಾಪತ್ತು	ಎಲುವುದು	ಡೇಬೈ
ಎಂಭತ್ತು	ಅಟ್ರಕಾಪತ್ತು	ಎಂಬುದು	ಎನಬೈ

ತೊಂಬತ್ತು	ಒಂಬಿದ್ರಿಕಾಪತ್ತು	ತೊನೂರು	ತೊಂಬೈ
ನೂರು	ನೂರು	ನೂರು	ಒಂದಲು
ಲಕ್ಷ್ಯ	ಲಕ್ಷ	ಲಚ್ಛೊಂ	ಲಕ್ಷಂ
ಕೋಟಿ	ಕೋಟಿ	ಕೋಡಿ	ಕೋಟಿ

ನಾಲ್ಕು ಭಾಷೆಗಳನ್ನು ತೆಗೆದುಕೊಂಡಾಗ ಕುಳುವ ಭಾಷೆಯಲ್ಲಿ ಮೂರು ಭಾಷೆಗಳು ಮಿಶ್ರಣವಿರುವುದು ಕಂಡುಬರುತ್ತದೆ. ಅನುಬಂಧ ೧ರಲ್ಲಿ ಭಾಷೆಯ ಅರ್ಥಗಳನ್ನು ತಿಳಿಸಲಾಗಿದೆ.

೨.೨ ಮಹಿಳೆಯ ಸ್ಥಾನಮಾನ

ಮಾನವ ಸಂಸ್ಕೃತಿಯ ಇತಿಹಾಸದಲ್ಲಿ ಹೆಣ್ಣಿಗೆ ಒಂದು ವಿಶಿಷ್ಟ ಸ್ಥಾನಮಾನವಿದೆ. ಮಾನವ ಶಾಸ್ತ್ರಜ್ಞರು ಕಂಡುಕೊಂಡಂತೆ ಆದಿಮ ಸಮಾಜದ ಕುಟುಂಬ ಪರಿಕಲ್ಪನೆ ತಾಯಿ ಮತ್ತು ಮಕ್ಕಳದು. ಮಗುವನ್ನು ಹಡೆದ ತಾಯಿಯೊಂದಿಗೆ ಗುರುತಿಸಲಾಗುತ್ತಿತ್ತೇ ಹೊರತು ಪ್ರೇರಕನಾದ ತಂದೆಯೊಂದಿಗಲ್ಲ. ಮಗುವಿನ ಮೇಲಿನ ಹಕ್ಕು ಹತ್ತು ತಿಂಗಳು ಹೆತ್ತು ಹೊತ್ತು ಹಾಲುಣಿಸಿದ ತಾಯಿಯದಾಗಿತ್ತು. ಹೀಗಾಗಿ ಕುಟುಂಬದಲ್ಲಿನ ತಾಯಿ ಅತ್ಯಂತ ಪ್ರಮುಖ ಹಾಗೂ ಗೌರವದ ಸ್ಥಾನ ಪಡೆದಿದ್ದಾಳೆ. ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಆಸ್ತಿ, ವಂಶ, ಹಕ್ಕು, ಮಗುವಿನ ಬಾಂಧವ್ಯ ಅತ್ಯಂತ ಪವಿತ್ರವಾದುದು ಮತ್ತು ಆಪ್ತವಾದುದು. ಮಗುವೊಂದು ಜನ್ಮ ತಳೆಯುವ ಮುನ್ನ ಭ್ರೂಣ ಸ್ಥಿತಿಯಿಂದಲೇ ತಾಯಿಯ ಆಸರೆಯಲ್ಲಿ ಬೆಳೆಯುತ್ತದೆ. ಮುಂದೆ ಕೂಡ ಅದು ತನ್ನ ವ್ಯಕ್ತಿತ್ವವನ್ನು ಬಹುಮಟ್ಟಿಗೆ ತಾಯಿಯಿಂದ ಪಡೆದು ಬೆಳೆಯುತ್ತದೆ. ಏಕೆಂದರೆ ಮಗು ತನ್ನ ಬಾಲ್ಯಾವಸ್ಥೆಯನ್ನು ಬಹುತೇಕ ತಾಯಿಯ ಜೊತೆಯಲ್ಲಿ ಕಳೆಯುತ್ತದೆ. ಮಗುವು ತಾಯಿಯಿಂದ ಪಡೆಯುವ ವ್ಯಕ್ತಿತ್ವದ ಸ್ವರೂಪವನ್ನು 'ನೂಲಿನಂತೆ ಸೀರೆ, ತಾಯಿಯಂತೆ ಮಗಳು ಎನ್ನುವ ಗಾದೆ ವಿವರಿಸುತ್ತದೆ.

ಪಿತೃಪ್ರಧಾನ ಕುಟುಂಬ ವ್ಯವಸ್ಥೆಯು ಸ್ಥಾಪನೆಯಾಗಿ ಕುಟುಂಬದಲ್ಲಿ ಹೆಣ್ಣು ಗಂಡಿಗೆ ತಾರತಮ್ಯ ಮಾಡಲು ಪ್ರಾರಂಭಿಸುತ್ತದೆ. ಕುಟುಂಬದಲ್ಲಿ ತಂದೆಗೆ ಹೆಣ್ಣು ಗಂಡುಗಳಿಬ್ಬರು ಮಕ್ಕಳಾದರೂ ಸಹ ಅವನು ಮಗನಿಗೆ ಮಾತ್ರ ತಾನು ಸಂಪಾದಿಸಿದಂತ ಚರ ಮತ್ತು ಸ್ಥಿರಾಸ್ತಿಗಳು ಹಕ್ಕಿದೆ ಎಂದು ಮತ್ತು ಇವನು ತಮ್ಮ ವಂಶೋದ್ಧಾರಕ ಎಂದು ಗೌರವದಿಂದ ಕಾಣಲಾರಂಭಿಸುತ್ತಾರೆ. ಆದರೆ ಅದೇ ಹೆಣ್ಣು ಮಗುವಿಗೆ ಇವಳು ಪರರ ಮನೆಯ ಸೊತ್ತು ಎಂದು, ಇವಳಿಗೆ ಜವಾಬ್ದಾರಿಯುತವಾದ ಕೆಲಸ ಗಳೇನಿದ್ದರೂ ತನ್ನ ಅಧಿಕಾರವನ್ನು ತನ್ನ ಗಂಡನ ಮನೆಯಲ್ಲಿ ಚಲಾಯಿಸಬೇಕು ಎನ್ನುವ ಅಭಿಪ್ರಾಯವಿದೆ. ಆದ್ದರಿಂದ ಅವಳಿಗೆ ಆಸ್ತಿಯಲ್ಲಾಗಲಿ, ಅಧಿಕಾರದಲ್ಲಾಗಲಿ ಭಾಗವಹಿಸಲು ಅವಕಾಶವನ್ನು ಕೊಡುವುದಿಲ್ಲ. ಆದರೆ ಅವನು ಪುರುಷನಾಗಿರುವುದರಿಂದ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಲಾಗುತ್ತದೆ.

ಸ್ಥಳೀಯ ಮಹಿಳೆಯರು ಹೆಚ್ಚಾಗಿ ದುಡಿಯುತ್ತಿದ್ದರೂ ಸಹ ಅವರು ಸಾಂಪ್ರದಾಯಿಕ ವಿಚಾರ

ಮತ್ತು ಮನೋಭಾವಗಳಿಂದ ಬಂಧಿಸಲ್ಪಟ್ಟಿರುತ್ತಾರೆ. ಮಹಿಳೆಯರನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದು ಮತ್ತು ತೆಗೆದು ಹಾಕುವುದು, ಕೂಲಿ ನಿಗದಿ ಪಡಿಸುವುದು, ಸೌಲಭ್ಯಗಳನ್ನು ಒದಗಿಸುವುದು ಮಾಲೀಕರ ಇಚ್ಛಾನುಸಾರ ನಡೆಯುತ್ತಿರುತ್ತದೆ. ಸಂವಿಧಾನವು ಕೆಲಸದ ಸ್ಥಳದಲ್ಲಿ ಆರೋಗ್ಯಕರ ಹಾಗೂ ಮಾನವೀಯ ವಾತಾವರಣವನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತದೆ. ಆದರೆ ಮಹಿಳೆಯರು ದುಡಿಯುವ ಸ್ಥಳಗಳಲ್ಲಿ ಶಬ್ದ, ಧೂಳು, ಮಾಲಿನ್ಯಗಳಿಂದ ಕೆಲವು ರಾಸಾಯನಿಕ ವಸ್ತುಗಳ ವಿಷ, ಉಸಿರಾಟದ ತೊಂದರೆ ಇರುವಂತಹ ಪರಿಸ್ಥಿತಿಯಿದ್ದರೂ ಅವಳಿಗೆ ಸೂಕ್ತ ರಕ್ಷಣೆ ವ್ಯವಸ್ಥೆಯಿರುವುದಿಲ್ಲ. ಇವರು ಬೇರೆ ಬೇರೆ ಸ್ಥಳ ಪ್ರದೇಶಗಳಲ್ಲಿ ದುಡಿಯುವುದರಿಂದ ಅವರ ಸಂಘಟನೆ ಕಷ್ಟಕರವಾಗುತ್ತಿದೆ.

ಸಮಾಜದ ದೈನಂದಿನ ಆರ್ಥಿಕ ಕ್ರಿಯೆ ಪ್ರಕ್ರಿಯೆಗಳಲ್ಲಿ ಮಹಿಳೆ ತನ್ನ ಸತತ ಶ್ರಮದಿಂದಾಗಿ ಸಮಾಜದ ಆರ್ಥಿಕ ತಳಹದಿಯನ್ನು ಕ್ರಮಬದ್ಧವಾಗಿ ಇರುವಂತೆ ಮಾಡಿದ್ದಾಳೆ. ಆದರೂ ಪುರುಷನಿಗೆ ಮಹಿಳೆಯು ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತಿದ್ದಾಳೆ. ಪ್ರತಿಯೊಂದು ಕ್ಷೇತ್ರದಲ್ಲಿ ಮಹಿಳೆಯರ ಪಾಲುಗಾರಿಕೆ ಕಂಡುಬರುತ್ತದೆ. ಆದರೆ ಅವಳ ಪಾಲುದಾರಿಕೆಯಲ್ಲಿ ಮಹಿಳೆಯರನ್ನು ಗೌಣ ಮಾಡಲಾಗಿದೆ. ವೃತ್ತಿಗಳೊಂದಿಗೆ ಜೀವನ ಕ್ರಮವನ್ನು ಆರಂಭಿಸಿದ ಮಹಿಳೆ, ಅನೇಕ ರೀತಿಯ ಸಮಾಜಗಳ ನಿರ್ಮಾಣಕ್ಕೆ ಕಾರಣಳಾಗಿದ್ದಾಳೆ. ಇಂದಿಗೂ ಕೃಷಿಯಲ್ಲಿ ಮಹಿಳೆಯ ಶ್ರಮ ದುಡಿಮೆ, ಹೊಣೆಗಾರಿಕೆ ಗಂಡಸರಿಗಿಂತ ಪ್ರಧಾನವಾಗಿ, ನಿರಂತರವಾಗಿ ಮುಂದುವರೆದಿದೆ. ಸಾಮಾನ್ಯವಾಗಿ ಮನೆಯಲ್ಲಿ ಪುರುಷರೆಲ್ಲರೂ ಊಟ ಮಾಡಿದ ಮೇಲೆಯೇ ಉಳಿದವರನ್ನು ಊಟ ಮಾಡಿಸಿ, ಮಿಕ್ಕ ಊಟವನ್ನು ಮಹಿಳೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ತಂಗಳು ತಿಂದು ನೀರು ಕುಡಿದು ಮಲಗುತ್ತಾಳೆ. ತನ್ನ ಜವಾಬ್ದಾರಿಯುತ ಕೆಲಸ ಮಾಡಿ, ಗಂಡ ಮಕ್ಕಳು ಉಂಡು ಸಂತೋಷವಾಗಿರಲಿ ಎಂದು ಅನುಕಂಪದ ಹೃದಯ ಸದಾ ಅವರಿಗಾಗಿ ಮಿಡಿಯುತ್ತಿರುತ್ತದೆ. ಸಮಾಜದಲ್ಲಿಯ ನಿಯಮವು ಇದೇ ಆಗಿದೆ ಅಲ್ಲವೇ? ಮೊದಲೇ ಊಟ ಮಾಡಿಬಿಟ್ಟರೆ, ಗಂಡನಿಗೆ ಗೌರವ ನೀಡದೆ ಉಂಡು ಇರುವುದು ನೋಡು ಎಂದು ಬಯ್ಗುಳ ಬೇರೆ.

ಪುರುಷರು ಮಹಿಳೆಯ ಮೇಲೆ ಸಾಧಿಸಿದ್ದ ನಿಯಂತ್ರಣವು ವೈಯಕ್ತಿಕ ನೆಲೆಯಿಂದ ಹಿಡಿದು ಸಾಮಾಜಿಕ ನೆಲೆಯವರೆಗೆ ವ್ಯಾಪಿಸಿದೆ. ಇದಕ್ಕೆ ಪುರುಷರು ಅನುಸರಿಸುತ್ತಿದ್ದ ತಂತ್ರವೆಂದರೆ ಲಿಂಗಾಧಾರಿತ ಶ್ರಮ ವಿಭಜನೆಯ ದುಡಿಮೆಯಾಗಿತ್ತು. ಗಂಡು ಹುಡುಗ ದುಡಿದು ತರುತ್ತಾನೆ. ನೀನೇನು ದುಡಿಯುತ್ತಿಯೇ ಎಂಬ ಬೆದರಿಕೆ ಬೇರೆ. ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಸಾಕಷ್ಟು ಬದಲಾವಣೆಗಳಾದರೂ ದುಡಿಮೆಗಳಿಂದ ಮಹಿಳೆಗೆ ಮುಕ್ತಿ ದೊರೆತಿಲ್ಲ. ಮಹಿಳೆಯಾಗಿ ಜನಿಸಿದ ಸಲುವಾಗಿಯೇ ಅವಳು ಲಿಂಗ ನಿರ್ದಿಷ್ಟ ಕೆಲಸಗಳನ್ನು ಮಾಡಬೇಕಾಗಿ ಬಂದಿದೆ. ತಮ್ಮ ಸಮಾಜದಲ್ಲಿ ಕೂಡ ದುಡಿಮೆಗಾರ ಎಂಬ ಪದವನ್ನು ಬಳಸಿದಷ್ಟು ಸುಲಭವಾಗಿ ದುಡಿಮೆದಾರಳು ಎಂಬ ನುಡಿಯನ್ನು ಎಲ್ಲೂ ಬಳಸುವುದು ಕಂಡುಬರುವುದಿಲ್ಲ. ಅವಳ ಶ್ರಮವು ಕಣ್ಣಿಗೆ ಕಂಡರೂ ಕಾಣದಂತೆ, ಗಣನೆಗೆ ಬಾರದಂತೆ ಅಗೋಚರವಾಗಿದೆ. ದುಡಿಮೆಯೆನ್ನುವುದು ಪುರುಷರಿಗೆ ಸಂಬಂಧಿಸಿದಂತೆ ಸಾಮಾಜಿಕವಾಗಿದ್ದರೆ, ಮಹಿಳೆಗೆ ಸಂಬಂಧಿಸಿದಂತೆ ಜೈವಿಕವಾಗಿದೆ.

ಇದೇ ರೀತಿಯಾಗಿ ಪುರುಷರಿಗೆ ಸಾರ್ವಜನಿಕವಾದರೆ ಮಹಿಳೆಯರಿಗೆ ಖಾಸಗಿಯಾಗಿದೆ. ಮಹಿಳೆಯ ದುಡಿಮೆ ಸಮಾಜದಲ್ಲಿ ಅದೃಶ್ಯವಾಗಿದೆ.

ಬಡತನವು ಕುಟುಂಬದಲ್ಲಿ ತೀವ್ರವಾಗಿರುತ್ತದೋ, ಎಲ್ಲಿ ಅದು ಸಹಿಸಲು ಸಾಧ್ಯವಾಗಿರುತ್ತದೋ ಅಲ್ಲಿ ಅವರ ನಿರ್ವಹಣೆಯ ಹೊಣೆಯು ಮಹಿಳೆಯರ ಮೇಲೆ ಬೀಳುತ್ತದೆ. ಹಿಂದುಳಿದ ಪ್ರದೇಶಗಳಲ್ಲಿ ಕಂಡುಬರುವ ದುಡಿಮೆಯ ಮಹಿಳಾಕರಣವು ವಾಸ್ತವವಾಗಿ ಬಡತನದ ಮಹಿಳಾಕರಣವಾಗಿರುತ್ತದೆ. ಇದರಿಂದ ಮಹಿಳೆಯರ ದುಡಿಮೆಯು ಅನೇಕ ಸಂದರ್ಭದಲ್ಲಿ ಭಾವನಾತ್ಮಕವಾಗಿರುತ್ತದೆ. ಮಾನಸಿಕವಾಗಿರುತ್ತದೆ. ಮಹಿಳೆಯರ ದುಡಿಮೆಯು ಕುಟುಂಬದ ಹಿತಾಶಕ್ತಿಗಳನ್ನು ಪೂರೈಸುವಲ್ಲಿಗೆ ಸೀಮಿತಗೊಂಡಿರುತ್ತದೆ. ಆದ್ದರಿಂದ ಮಹಿಳೆಯರ ಮಾಡುವ ಕೆಲಸ ಕಾರ್ಯಗಳು ಅರ್ಥಶಾಸ್ತ್ರದಲ್ಲಿ ದುಡಿಮೆ ಎನ್ನಿಸಿಕೊಳ್ಳುವುದಿಲ್ಲ. ಕುಟುಂಬದಲ್ಲಿ ಗಂಡನಿಗೆ, ಮಕ್ಕಳಿಗೆ, ಅತ್ತೆ-ಮಾವಂದಿರಿಗೆ ಅಥವಾ ಕುಟುಂಬದ ಕಡೆ ಗಮನ ಹರಿಸಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಹೆಂಗಸರು ಹೊರಗಿನ ಕೆಲಸ ಕಾರ್ಯದಲ್ಲಿ ತೊಡಗುವುದು ಸಹ ಕಷ್ಟಕರವಾಗುತ್ತದೆ. ಏಕೆಂದರೆ ದುಡಿಯುತ್ತಿರುವ ಮಹಿಳೆಯು ತನ್ನ ಮನೆಯಲ್ಲಿ ಪೂಜೆ ಪುನಸ್ಕಾರ ಇದ್ದರೆ ಮನೆಯಲ್ಲಿಯೇ ಇರಬೇಕು, ಮಗಳು ಗಂಡನ ಮನೆಯಿಂದ ಬಂದರೆ ಅವರನ್ನು ನೋಡಿಕೊಳ್ಳಲು ತಾಯಿ ಇರಬೇಕಾಗುತ್ತದೆ. ಹೆರಿಗೆ ಸಂದರ್ಭದಲ್ಲಿ, ಹಬ್ಬ ಹರಿದಿನಗಳಲ್ಲಿ, ಕಷ್ಟಕರ ದಿನಗಳಲ್ಲಿ ಕೆಲಸಕ್ಕೆ ಹೋಗಲು ಆಗುವುದಿಲ್ಲ. ಇದರಿಂದ ಉತ್ಪಾದನೆಯು ಕಡಿಮೆ ಮತ್ತು ಆದಾಯವು ಕಡಿಮೆಯಾಗುತ್ತದೆ. ಈ ಕೆಲಸವನ್ನು ಪುರುಷರು ಮಾಡುತ್ತಾರೆಯೇ, ಮಹಿಳೆಯರಷ್ಟು ಶ್ರಮವಹಿಸುವುದು ಕಷ್ಟಕರವಾಗಿರುತ್ತದೆ ಎಂಬುದು ಅವರು ತಿಳಿದುಕೊಳ್ಳಬೇಕಾಗುತ್ತದೆ.

ಪುರುಷರು ಮನೆಯಲ್ಲಿ ಖಾಲಿಯಿದ್ದರೂ ಸಹ ಒಂದು ಮನೆ ಕೆಲಸವನ್ನು ಮಾಡುವುದಿಲ್ಲ. ರಾಜನ ಹಾಗೆ ಮನೆಯಲ್ಲಿರುತ್ತಾರೆ. ಹೆಂಡತಿ ಮುಂಜಾನೆಯಿಂದ ಸಂಜೆಯತನಕ ದುಡಿದು ತಂದರೂ ಅವಳು ಬಂದ ಮೇಲೆ ಮನೆಕೆಲಸ, ಅಡಿಗೆ ಕೆಲಸ ಮಾಡಿ, ನೀರು ತಂದು ಮೊದಲಾದ ಕೆಲಸಗಳನ್ನು ಮಾಡಬೇಕಾಗುತ್ತದೆ. ಅವಳ ಶ್ರಮದ ಬಗ್ಗೆ ಪುರುಷರು ತಿಳಿದುಕೊಂಡರೆ ಮಹಿಳೆಯರ ನೋವು ಅವರಿಗೆ ಅರಿವಾಗುತ್ತದೆ. ಇಲ್ಲವಾದರೆ ಗಾಳಿಯ ಮಾತಿನಲ್ಲಿ ತೇಲಿಹೋಗುತ್ತದೆ. ಅವಳ ಕೆಲಸವು ಗೌಣವಾಗುತ್ತದೆ.

ಮನೆಯ ಹೊರಗಿನ ಕೆಲಸಗಳಲ್ಲಿ ಮಹಿಳೆಯರು ದುಡಿಯುತ್ತಿದ್ದರೂ ಸಹ ಅವಳ ಶ್ರಮಕ್ಕೆ ತಕ್ಕ ಕೂಲಿ ಸಂಬಳ ದೊರೆಯುವುದಿಲ್ಲ. ಒಂದು ವೇಳೆ ದೊರೆತರೂ ಸಹ ಆ ಹಣದ ಮೇಲೆ ತನ್ನ ಅಧಿಕಾರವಿರುವುದಿಲ್ಲ ಅಥವಾ ತನ್ನ ಹತೋಟಿಯಲ್ಲಿ ಇರುವುದಿಲ್ಲ. ಹೀಗಾಗಿಯೇ ಅಬಲೆ ಎನ್ನಿಸಿಕೊಳ್ಳುವ ಪರಿಸ್ಥಿತಿಗೆ ಆರ್ಥಿಕತೆಯೇ ಮುಖ್ಯ ಕಾರಣವಾಗಿದೆ. ಏಕೆಂದರೆ ಇವು ಉತ್ಪಾದಕ ಅಥವಾ ಮೌಲ್ಯವನ್ನು ಗುರುತಿಸುವವರ ಕೆಲಸವಲ್ಲ. ಕುಟುಂಬದಲ್ಲಿ ಗಂಡನಿಗೆ, ಮಕ್ಕಳಿಗೆ, ಅತ್ತೆ-ಮಾವಂದಿರುಗಳಿಗೆ ಅಥವಾ ಕುಟುಂಬದ ಸದಸ್ಯರೆಲ್ಲರಿಗೂ ಸೇವೆ ಸಲ್ಲಿಸಿದಂತಾಗುತ್ತದೆ. ಮನೆಯ ಹೊರಗಿನ ದುಡಿಮೆ ಅಂದರೆ ಯಾವ ಉತ್ಪದನಾ ಚಟುವಟಿಕೆಗಳನ್ನು ಪರಿಣಾಮಾತ್ಮಕವಾಗಿ ಅಳೆಯಲು

ಸಾಧ್ಯವೋ, ಗಣನೆ ಮಾಡಲು ಸಾಧ್ಯವೇ ಅವುಗಳನ್ನು ಮಾತ್ರ ಸಮಾಜದ ವಿಜ್ಞಾನಗಳು ದುಡಿಮೆ ಎಂದು ಪರಿಗಣಿಸಿವೆ.

ಮನೆಯ ಹೊರಗಿನ ಕೆಲಸಗಳೆಂದರೆ ಸರ್ಕಾರಿ, ಅರೆಸರ್ಕಾರಿ, ಖಾಸಗಿ ಮತ್ತು ಅಸಂಘಟಿತ ವಲಯಗಳಲ್ಲಿ ಕಾರ್ಮಿಕವಾಗಿ ಅಥವಾ ಯಾವುದೇ ಹುದ್ದೆಯನ್ನು ಪಡೆದುಕೊಂಡ ಮಹಿಳೆಯರು ತಾಯ್ತನದ ಹೊಣೆಗಾರಿಕೆಯ ಜೊತೆ ಜೊತೆಗೆ ತಮಗೆ ಕಾಯ್ದಿರಿಸಿದಂತಹ ಕೆಲಸವನ್ನು ಅಷ್ಟೇ ಜವಾಬ್ದಾರಿಯುತವಾಗಿ ನೆರವೇರಿಸಬೇಕಾಗುತ್ತದೆ. ಹೀಗಾಗಿ ಅವಳು ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದಕ್ಕಾಗಿ ಅಂದರೆ ಮಹಿಳೆಯರು ಕೆಲಸ ಮಾಡುವಂತಹ ಸಹಕಾರ ಅಥವಾ ಅಸಂಘಟಿತ ವಲಯಗಳಲ್ಲಿ ತಮ್ಮ ಮಕ್ಕಳನ್ನು ಪೋಷಣೆ ಮಾಡಲು ಶಿಶು ವಿಹಾರಗಳು ಮತ್ತು ವಿಶ್ರಾಂತಿಗಾಗಿ ವಸತಿ ನಿಲಯಗಳು ಇಲ್ಲದೇ ಇರುವುದರಿಂದ ಮತ್ತು ಇದರ ಬಗ್ಗೆ ಕೆಲವರಿಗೆ ತಿಳಿಯುತ್ತಿರುವುದು ಕಂಡುಬರುತ್ತದೆ. ತನ್ನ ದುಡಿಮೆಯ ಸಮಯದಲ್ಲಿ ಸಹ ಶಿಶುವಿನ ಕಡೆ ಅತಿ ಹೆಚ್ಚಿನ ಗಮನವಿರಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರ ಹೊರಗಿನ ಕೆಲಸಗಳಲ್ಲಿ ತೊಡುಗುವುದು ಸಹ ಕಷ್ಟಕರವಾಗುತ್ತದೆ.

ಉದಾಹರಣೆಗೆ ಕೆಲವು ಮಹಿಳೆಯರು ದಿನಗೂಲಿ ನೌಕರರಾಗಿ ದುಡಿಯುತ್ತಿರುತ್ತಾರೆ. ಅದು ಬೇರೆ ಊರಿನಿಂದ ಬಂದು ದುಡಿಯುತ್ತಾರೆ. ಅವರ ಮಕ್ಕಳನ್ನು ನೋಡಿಕೊಳ್ಳಲಾಗದೆ ಹತ್ತಿರದ ಸಂಬಂಧಿಕರ ಮನೆಯಲ್ಲಿ ಬಿಟ್ಟುಹೋಗುತ್ತಾರೆ. ಸಂಜೆಯಾದ ಮೇಲೆ ತಮ್ಮ ಮಕ್ಕಳನ್ನು ಪುನಃ ತಮ್ಮ ಊರಿಗೆ ಕರೆದುಕೊಂಡು ಹೋಗುತ್ತಾರೆ. ಬೆಳಗ್ಗೆ ೬ ಗಂಟೆಗೆ ಊರು ಬಿಟ್ಟರೆ ರಾತ್ರಿ ೮ ಗಂಟೆಗೆ ಊರು ಸೇರಬೇಕಾಗುತ್ತದೆ. ನಂತರ ಮನೆಯಲ್ಲಿ ಗಂಡನಿಗೆ ಮತ್ತು ಮಕ್ಕಳಿಗೆ ಅಡುಗೆ ಮಾಡಿ ಬಡಿಸಬೇಕಾಗುತ್ತದೆ. ಇದೇ ದಿನದ ಕೆಲಸವಾಗುತ್ತದೆ. ತಿಂಗಳ ಕೊನೆಯಲ್ಲಿ ಬಂದ ಸಂಬಳವು ಗಂಡನ ಕೈ ಸೇರುತ್ತದೆ. ಇದು ಯಾವ ನ್ಯಾಯ ಹೇಳಿ? ಏಕೆಂದರೆ ದುಡಿದು ಬೆವರು ಸುರಿಸಿ ಬಂದವಳು ಈ ಹೆಣ್ಣುಮಕ್ಕಳು. ಆದರೆ ಫಲ ಪಡೆಯುವವರು ಪುರುಷರು. ಅದು ಅವನ ಕುಡಿತ ಇಲ್ಲವೆ ಜೂಜಾಟ ಆಡುವುದಕ್ಕೆ ಸರಿಹೋಗುತ್ತದೆ. ದಿನದ ಬಳಕೆಗಾದರೂ ಹೇಗೆ? ತಿಂಗಳ ಕೊನೆಯವರೆಗೂ ಅವಳು ಅಳುತ್ತಾ, ಮನಸ್ಸು ನೋಯಿಸಿಕೊಳ್ಳುತ್ತಾ ಗತಿ ಇಲ್ಲದೇ ಕೆಲಸಕ್ಕೆ ಹೋಗಬೇಕಾಗುತ್ತದೆ. ಹೆಂಡತಿ ಒಂದು ವೇಳೆ ಹಣ ಕೊಡದಿದ್ದರೆ, ಕೆಲಸ ಬಿಟ್ಟು ಮನೆಯಲ್ಲೇ ಕುಳಿತುಕೋ ಎಂದು ಬೆದರಿಕೆ ಬೇರೆ. ಸಾಕುವ ಯೋಗ್ಯತೆ ಇರುವುದಿಲ್ಲ, ಆದರೂ ಸಹ ಅಹಂಕಾರ ಬೇರೆ. ಊರಿನವರ ಸಿಟ್ಟನ್ನೆಲ್ಲ ಮನೆಯ ಹೆಂಡತಿಯ ಮೇಲೆ ಹಾಕಲಾಗುತ್ತದೆ. ಇಂತಹ ಅನೇಕ ಉದಾಹರಣೆಗಳಿವೆ.

ನಾಗರಿಕ ಸಮಾಜದಲ್ಲಿ ಮಹಿಳೆಯರ ಮೇಲೆ ರಾಜಕೀಯವಾಗಿ ಸಾಮಾಜಿಕವಾಗಿ, ಕೌಟುಂಬಿಕವಾಗಿ, ಆರ್ಥಿಕವಾಗಿ ಆಗುತ್ತಿರುವ ಶೋಷಣೆ ಎಂಬ ಪದದ ಅರ್ಥ ಬಹಳ ಸಂಕೀರ್ಣ ವಾದುದು. ಇಂದಿಗೂ ಸಾಮಾನ್ಯ ಹಾಗೂ ಮಧ್ಯಮ ವರ್ಗದ ಕುಟುಂಬಗಳಲ್ಲಿ ಹೆಣ್ಣು ಮಕ್ಕಳು ಎಷ್ಟೇ ಬುದ್ಧಿವಂತಳಾದರೂ ಗಂಡ, ಮಗನಿಗೆ ಸಿಗುವ ಸೌಲಭ್ಯ ಇವಳಿಗಿಲ್ಲ. ಮನೆಯ ಹಿರಿಯ

ಮಗಳಾದರಂತೂ ತನಗಿಂತ ಕಿರಿಯ ಮಕ್ಕಳನ್ನು ಸಾಕುವುದು, ಮನೆ ಕೆಲಸದಲ್ಲಿ ತಾಯಿಗೆ ನೆರವಾಗಬೇಕಾದುದು ಅವಳ ಅನಿವಾರ್ಯ ಕರ್ತವ್ಯವಾಗಿ ಬಿಟ್ಟಿದೆ. ಅಷ್ಟೆಲ್ಲಾ ಮಾಡಿದರೂ ಕೊನೆಗೆ ಉಳಿದ ಅನ್ನ ಮಾತ್ರ ಅವಳ ಪಾಲಿಗೆ. ಇನ್ನು ಶಿಕ್ಷಣದ ಬಗ್ಗೆ ಅವಕಾಶವೇ ಇರುವುದಿಲ್ಲ. ಕೆಲವು ಸಾರಿ ಹೆಣ್ಣಿಗೇಕೆ ವಿದ್ಯೆ, ಮನೆ ಕೆಲಸ ಮಾಡಲು ಕಲಿತರೆ ಸಾಕು ಎಂದು ಹೇಳುವ ತಾಯಂದಿರು ಇದ್ದಾರೆ. ಇಂತಹ ಮನೆಗಳಲ್ಲಿ ಗಂಡನೇ ಯಜಮಾನ. ತಾನು ಸಂಪಾದಿಸಿದ್ದನ್ನು ಜೂಜು, ಸಾರಾಯಿ ಕುಡಿತಕ್ಕೆ ಹಾಕಿ ಹೆಂಡತಿ ಮಕ್ಕಳಿಗೆ ಗಂಜಿ ಊಟಕ್ಕೂ ಗತಿ ಇಲ್ಲದಂತೆ ಮಾಡುತ್ತಾರೆ. ಆದರೂ ಹೆಂಡತಿಯ ಸಣ್ಣ ಪುಟ್ಟ ಕೆಲಸದಿಂದ ಸಂಪಾದಿಸಿದ ಹಣದಿಂದ ತನ್ನ ಮಕ್ಕಳನ್ನು ಸಾಕಲು ಪ್ರಯತ್ನಿಸಿದರೆ, ಗಂಡ ಅವಳಲ್ಲಿದ್ದ ದುಡ್ಡನ್ನು ಕಸಿಯಲು ಪ್ರಯತ್ನಿಸುತ್ತಾನೆ. ಕೊಡದಿದ್ದಾಗ ಹಿಂಸೆಯಿಂದ ಮನೆಯನ್ನು ನರಕ ಮಾಡುತ್ತಾನೆ. ಗಂಡನ ದರ್ಪ, ದಬ್ಬಾಳಿಕೆಯನ್ನು ಸಹಿಸಿಕೊಂಡು ಮನೆಯವರೆಲ್ಲರ ಮನ ಗೆಲ್ಲುವಲ್ಲಿ ತನ್ನ ನೋವು ಸಂಕಟಗಳನ್ನು ನಗುಮುಖದಲ್ಲಿ ತೇಲಿಸಿ ಬಿಡುತ್ತಾಳೆ. "ಕ್ಷಮಯಾ ಧರಿತ್ರಿ" ಒಂದು ವೇಳೆ ಗಂಡು ಕೆಟ್ಟ ಕೆಲಸ ಮಾಡಿದರೂ ಸಹಿಸಿಕೊಂಡು ಸುಮ್ಮನೆ ಇರಬೇಕು, ಕ್ಷಮಿಸುವ ಗುಣ ಇರಬೇಕು ಎನ್ನುವ ಮಾತನ್ನು ನನಗೆ ಅನ್ವಯ ಎಂಬಂತೆ ಶೋಷಣೆಗೆ ಹೊಂದಿ ಕೊಂಡಿದ್ದಾಳೆ.

"ಹೆಣ್ಣನ್ನು ರಾಕ್ಷಸಿ, ಚಂಡಾಲೆ ಎಂದೆಲ್ಲಾ ಕರೆಯುವ ಜನರಿಗೆ ಸಿದ್ಧರಾಮ ಎಂಬ ವಚನಕಾರರು ಈ ರೀತಿ ಉತ್ತರಿಸುತ್ತಾರೆ.

ತಾ ಮಾಡಿದ ಹೆಣ್ಣು ತಲೆಯನೇರಿತ್ತು.
ತಾ ಮಾಡಿದ ಹೆಣ್ಣು ತನ್ನ ತೊಡೆಯವೇರಿತ್ತು
ತಾ ಮಾಡಿದ ಹೆಣ್ಣು ಬ್ರಹ್ಮದ ನಾಲಗೆಯನ್ನೇರಿತ್ತು.
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನ್ನೇರಿತ್ತು.
ಅದು ಕಾರಣ
ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ,
ಹೆಣ್ಣು ಪ್ರತ್ಯಕ್ಷ ಕಪಿಲ ಸಿದ್ಧಮಲ್ಲಿಕಾರ್ಜುನ ನೋಡಾ.

ನಮ್ಮ ಸಂಸ್ಕೃತಿಯಲ್ಲಿ ಪಾರ್ವತಿ, ಸರಸ್ವತಿ, ಲಕ್ಷ್ಮೀ, ಗಂಗೆ ಮೊದಲಾದ ಎಲ್ಲ ಶಕ್ತಿ ದೇವತೆಯರು ಹೆಣ್ಣಿನ ರೂಪವೇ ಆಗಿದ್ದಾರೆ. ಪ್ರಾಚೀನ ವೇದೋಪನಿಷತ್ತು 'ಮಾತೃದೇವೋಭವ' ಎಂದಿವೆ. ಆದರೆ ಲೌಕಿಕ ಬದುಕಿನಲ್ಲಿ ಮಾತ್ರ ಹೆಣ್ಣು ರಾಕ್ಷಸಿ ಹೇಗಾಗುತ್ತಾಳೆ? ಸಿದ್ಧರಾಮರ ದೃಷ್ಟಿಯಲ್ಲಿ ತಾಯಿ ಅಷ್ಟೇ ಅಲ್ಲ, ಪ್ರತಿಯೊಬ್ಬ ಸ್ತ್ರೀ ಪ್ರತ್ಯಕ್ಷವಾಗಿ ಆ ದೇವರುಗಳೇ ಆಗಿದ್ದಾಳೆ. ನಡೆ ನುಡಿಗಳಲ್ಲಿ ಒಂದಾಗಿ ಬಾಳಿದ ಅವರು ತಮಗೆ ತಿಳಿದ ವಿಚಾರವನ್ನು ನಿರ್ಭಯವಾಗಿ ಪ್ರಕಟಿಸುತ್ತಿದ್ದರು."[೧] ಕುಟುಂಬ ಪ್ರತಿಯೊಂದು ನಷ್ಟಗಳನ್ನು ಸಹನೆಯಿಂದ ನೋಡಿಕೊಂಡು ಹೋಗುತ್ತಾಳೆ. ಪತಿಗೆ ವಿಶ್ವಾಸದಿಂದ ಇರುತ್ತಾಳೆ. ಅದನ್ನು ತಿಳಿದುಕೊಳ್ಳಲು ಅನಕ್ಷರಸ್ಥರಾದ ಕೊರವರ ಮಹಿಳೆಯರಿಗೆ ಇದೆಲ್ಲ ಹೇಗೆ

ತಿಳಿಯುತ್ತದೆ. ವಿದ್ಯಾವಂತರಾದವರ ತಮ್ಮ ನಂಬಿಕೆಯಲ್ಲಿಯೇ ಮಹಿಳೆಯನ್ನು ಆಳುತ್ತಿದ್ದಾರೆ ಎಂದರೆ ತಪ್ಪಾಗಲಾರದು.

ಕುಟುಂಬದಲ್ಲಿ ಪುರುಷನಿಲ್ಲದಿದ್ದರೆ ಸ್ತ್ರೀಯರು ತಮ್ಮ ಜೀವನೋಪಾಯಕ್ಕಾಗಿ ಹೊರಗಡೆ ಹೋಗಿ ದುಡಿಯಬೇಕಾಗುತ್ತದೆ. ಮನೆಯ ಜವಾಬ್ದಾರಿಯನ್ನು ನೋಡಿಕೊಳ್ಳಬೇಕಾಗುತ್ತದೆ. ಆದರೂ ಅವರನ್ನು ಕುಟುಂಬದ ಯಜಮಾನಿ ಎಂದು ಗುರುತಿಸುವುದಿಲ್ಲ. ದುಡಿಮೆ ಎಂಬುದು ಜೀವನದ ಉಳಿವಿಗಾಗಿ ಬದುಕುವುದಕ್ಕಾಗಿ ನಡೆಯುತ್ತಿರುತ್ತದೆ. ಆದಾಯ ಗಳಿಸುವುದಕ್ಕಾಗಲಿ ಮತ್ತು ಲಾಭ ಪಡೆಯುವುದಕ್ಕಾಗಲಿ ನಡೆಯುತ್ತಿರುವುದಿಲ್ಲ. ಅದಕ್ಕೆ ಬಳಕೆಯ ಮೌಲ್ಯವಿರುತ್ತದೆ. ಮತ್ತು ಅದಿಲ್ಲದಿದ್ದರೆ ಬದುಕುವುದು ಸಾಧ್ಯವಿಲ್ಲ ಎಂಬುದು ಪುರುಷರು ತಿಳಿದುಕೊಳ್ಳುತ್ತಿಲ್ಲ. ಮಹಿಳೆಯು ಮನೆಯ ಒಳಿತಿಗಾಗಿ, ಸುಖದಿಂದ ಇರಲು ಕೆಲಸ ಮಾಡುತ್ತಿರುತ್ತಾಳೆ. ಆದರೆ ಯಾರು ಚಿನ್ನಕ್ಕೆ ಬೆಲೆ ಕೊಡುವಷ್ಟು, ನೀರಿಗೆ ಬೆಲೆಯನ್ನು ಕೊಡುತ್ತಾರೆ? ಆದ್ದರಿಂದ ಅದಕ್ಕೆ ವಿನಿಮಯ ಮೌಲ್ಯವಿಲ್ಲ. ಅದೇ ರೀತಿ ಸ್ತ್ರೀಯರ ದುಡಿಮೆ.

ಆದರೆ ಇತ್ತೀಚಿನ ದಿನಗಳಲ್ಲಿ ನೀರಿಗೆ ವಿನಿಮಯದ ಮೌಲ್ಯ ಇರುವುದು ಕಂಡುಬರುತ್ತಿದೆ. ಹಾಗೆಯೇ ಒಂದಿಲ್ಲೊಂದು ದಿವಸ ಮಹಿಳೆಯರ ಬೆಲೆಯು ಪುರುಷರಿಗೆ ತಿಳಿದುಬರುವುದುಂಟು. ಯಾವುದೇ ಅಧಿಕಾರದ ವಲಯದಲ್ಲಿದ್ದರೂ ಮಹಿಳೆಯರು (ನೌಕರಿಯಲ್ಲಿರಲಿ, ಇಲ್ಲದಿರಲಿ) ಕೂಡ ಕುಟುಂಬದ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸಬೇಕಾಗುತ್ತದೆ. ಇಲ್ಲದಿದ್ದರೆ ಕುಟುಂಬದಿಂದ, ಸಮುದಾಯದಿಂದ, ಬಯ್ಗುಳ, ಬಹಿಷ್ಕಾರಗಳಿಗೆ ಒಳಗಾಗುತ್ತಾಳೆ. ಇದರಿಂದಾಗಿ ಮಹಿಳೆಯ ಸಂಪೂರ್ಣವಾದ ಸ್ವತಂತ್ರವನ್ನು, ಮನೆಯ ಹೊರಗಿನ ಸಾಮಾಜಿಕ ಪರಿಸರದಲ್ಲಿಯೂ ಸಹ ಅವಳ ಶಕ್ತಿ ಸಾಮರ್ಥ್ಯವನ್ನು ಉಪಯೋಗಿಸುವುದಕ್ಕೆ ಆಗುವುದಿಲ್ಲ. ಹೊರಗೆ ಹೋದರೆ ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. ಅದಕ್ಕೆ ಎದುರುತ್ತರ ಕೊಟ್ಟರೆ ಅವರಿಗೆ ಚೆನ್ನಾಗಿ ಬಯ್ಯುವುದು ಕಂಡುಬರುತ್ತದೆ. ಸಂಜೆಯೊಳಗಾಗಿ ಮನೆಯನ್ನು ಸೇರಬೇಕೆಂಬುದು ಅವರ ಅಭಿಪ್ರಾಯ. ಏಕೆಂದರೆ ಯಾವುದಾದರೂ ದುರ್ಘಟನೆ ನಡೆಯದಂತೆ ಎಚ್ಚರಿಕೆ ವಹಿಸಲು ಈ ರೀತಿ ಹೇಳಲಾಗಿದೆ.

ಕುಟುಂಬದ ಚಿಂತೆಯಲ್ಲಿ ಸಾಮಾಜಿಕ ವಲಯದಲ್ಲಿ ಅಂದರೆ ಮನೆಯ ಹೊರಗಿನ ಕೆಲಸಗಳಲ್ಲಿಯೂ ಅದೇ ಚಿಂತನೆಯು ಮುಂದುವರೆಯುತ್ತಿರುವುದರಿಂದ ಅಲ್ಲಿಯೂ ಕೂಡ ಮಹಿಳೆಯರು ಸಬಲೆಯಾಗುವುದಕ್ಕೆ ಸಾಧ್ಯವಿಲ್ಲ. ಗಂಡನ ಒಳಿತಿಗಾಗಿ ಮಹಿಳೆಯು ತನ್ನೆಲ್ಲಾ ಕಾಲವನ್ನು ವ್ಯಯ ಮಾಡಬೇಕಾದ ಅನಿವಾರ್ಯತೆ ಇದ್ದು, ಆತನ ಹಿತರಕ್ಷಣೆಗೆ ಲಕ್ಷ್ಮೀಗೌರಿ ಮೊದಲಾದ ದೇವಿಯ ಪೂಜೆಗಳನ್ನು ನಡೆಸುತ್ತಾಳೆ. ಇಂಥ ಆಚರಣೆಗಳ ಹಿಂದೆ ಇರುವ ಉದ್ದೇಶ ಪುರುಷ ಹಿತಸಾಧನೆಯನ್ನು ಗಮನಿಸಬೇಕಾಗಿದೆ. ಗಂಡನ ಶ್ರೇಯಸ್ಸಿಗಾಗಿ, ಆಯಸ್ಸಿನ ವೃದ್ಧಿಗಾಗಿ, ಗಂಡು ದೇವತೆಗಳಿಗೆ ಬೇಡಿಕೊಳ್ಳದೆ ಹೆಣ್ಣು ದೇವತೆಗಳಿಗೆ ಮಾತ್ರ ಕೋರಿಕೊಳ್ಳುತ್ತಾಳೆ ಎಂಬುದು ತಿಳಿದುಬರುತ್ತದೆ. ರಕ್ಷಕನಾದ ಗಂಡಿನ ರಕ್ಷಣೆಗಾಗಿ ಸ್ತ್ರೀಯರು ಪ್ರಯತ್ನಿಸುವುದು ಕುತೂಹಲಕಾರಿ ಅಂಶವಾಗಿದೆ. ಮತ್ತೊಂದು ಕಡೆ ತಮ್ಮ ಮುತ್ತೈದೆ ಭಾಗ್ಯ ಸದಾಕಾಲ ಇರಲೆಂದು ಕೋರಿಕೊಳ್ಳುತ್ತಾಳೆ. ಏಕೆಂದರೆ ಅವಳ

ಜೀವನವೇ ಪತಿಯಲ್ಲವೇ ಎಂಬ ನಂಬಿಕೆ. ಶಿವನ ದೀಪಕ್ಕೆ ಎಣ್ಣೆಯಾಗಿ ಜ್ಯೋತಿ ಬೆಳಗುವಂತೆ ಗಂಡನ ಮನೆಯಲ್ಲಿ ಬಾಳಬೇಕೆಂದು ತಾಯಿಯು ಮಗಳಿಗೆ ತಿಳಿಹೇಳುವುದು, ಪ್ರತಿಯೊಂದು ಸಮಾಜದಲ್ಲಿಯೂ ಮಹಿಳೆಯು ಮನೆಯ ಗೌರವವನ್ನು ಕಾಪಾಡಿಕೊಂಡು ಹೋಗಬೇಕು ಎಂದು ಹೇಳುತ್ತಾಳೆ.

ಬದುಕು ಯಾವಾಗಲೂ ಹರಿಯುವ ನೀರಿನಂತೆ ನಿರಂತರವಾಗಿ ಬದಲಾಗುತ್ತಲೇ ಇರುತ್ತದೆ. ಮಹಿಳೆಯರು ತನ್ನ ಮನೆಯ ಜವಾಬ್ದಾರಿಯನ್ನು, ಗೌರವ, ಸಹನೆ, ತ್ಯಾಗದಿಂದ ಮಾಡಿಕೊಂಡು ಹೋಗುವುದು ಕಾಣುತ್ತೇವೆ. ಆದರೆ ಇಂದಿನ ದಿವಸಗಳಲ್ಲಿ ಮಹಿಳೆಯರಲ್ಲಿ ಸ್ವಲ್ಪ ಬದಲಾವಣೆ ಕಂಡುಬರುತ್ತದೆ. ಮಹಿಳೆಯರು ಗಂಡಸಿಗೆ ಸರಿಸಮಾನವಾಗಿ ದುಡಿಯುವುದರಲ್ಲಿ ಮುಂದಾಗುತ್ತಿದ್ದಾರೆ. ತಾವು ಸಹ ಅದರ ಅಧಿಕಾರ ಪಡೆಯಬಹುದೆಂಬ ಊಹೆಯಲ್ಲಿಯೇ ಇದ್ದಾರೆ. ನಮ್ಮ ಸಮಾಜದಲ್ಲಿ ಹೆಣ್ಣು ಮಕ್ಕಳು ಉತ್ತಮ ಗೃಹಿಣಿ, ಸೊಸೆ, ತಾಯಿ ಎನಿಸಿಕೊಳ್ಳುವುದೇ ತಮ್ಮ ಬದುಕಿನ ಧ್ಯೇಯ ಎಂದುಕೊಂಡವರೇ ಹೆಚ್ಚು. ಇಂದಿನ ಮಹಿಳೆಗೆ ತನ್ನದೇ ಆದ ವ್ಯಕ್ತಿತ್ವ, ಅಸ್ತಿತ್ವ ಇದೆಯೆಂದು ಭಾವಿಸುವವರು ಬಹಳ ವಿರಳ. ನಮ್ಮ ಸಮಾಜದ ಮಹಿಳೆಯರನ್ನು ನೋಡುವ ದೃಷ್ಟಿಕೋನದಲ್ಲಿ ಬದಲಾವಣೆಯಾಗಬೇಕು. ಹೆಣ್ಣು ಮಗುವನ್ನು ಪಡೆಯುವಲ್ಲಿ, ಸಾಂಪ್ರದಾಯಿಕ ಧೋರಣೆಗಳನ್ನು ಬಿಟ್ಟುಕೊಟ್ಟು ಇಂದಿನ ಕಾಲಕ್ಕೆ ತಕ್ಕಂತೆ ಅವಳನ್ನು ಬೆಳೆಸುತ್ತಾ ಕುಟುಂಬಗಳು, ಸಮಾಜ, ಸರಕಾರ ಆಲೋಚಿಸಬೇಕಾಗಿದೆ.

ಆದರೆ ಈ ಸಮಯದಲ್ಲಿ ಮಹಿಳೆಯರು ತಮ್ಮ ಕಸುಬುಗಳಿಂದ ತೃಪ್ತಿ ಹೊಂದುತ್ತಾ ಬದುಕುತ್ತಿದ್ದಾರೆ. ಆಸೆ ಆಕಾಂಕ್ಷೆಗಳಿಂದಾದರೂ ಸಹ ಸುಮ್ಮನಿರಬೇಕು. ಇದರಿಂದಾಗಿ ಮಹಿಳೆಯರು ಕೂಡ ತಮ್ಮಲ್ಲಿ ರಕ್ತಗತವಾಗಿರುವ ಸಂಕೋಚ ಸ್ವಭಾವದಿಂದ ಮೊದಲು ಹೊರಬರಬೇಕು. ಕೀಳರಿಮೆಯನ್ನು ಕಿತ್ತೆಸೆಯಬೇಕು, ಪ್ರತಿಯೊಬ್ಬ ಮಹಿಳೆ ತನ್ನದೇ ಆದ ಸ್ವಂತಿಕೆಯನ್ನು ಗಳಿಸಿಕೊಳ್ಳಬೇಕು. ಅನ್ಯಾಯವನ್ನು ಪ್ರತಿಭಟಿಸಬೇಕು. ತನ್ನನ್ನು ತಾನು ರಕ್ಷಿಸಿಕೊಳ್ಳಲು ಸಮರ್ಥಳಾಗ ಬೇಕು. ಒಂದು ಹೆಣ್ಣು ಇನ್ನೊಂದು ಹೆಣ್ಣಿಗೆ ವೈರಿಯಾಗಿ ಅವಳ ಕಣ್ಣಲ್ಲಿ ನೀರು ಬರಿಸುವ ಮಾರಿಯಾಗದೆ, ಅವಳ ಕಣ್ಣೀರೊರೆಸುವ ಕರುಣೆಯ ಕೈಯಾದಾಗ ಮಾತ್ರ ಮಹಿಳೆಯರ ಅನೇಕ ಸಮಸ್ಯೆಗಳು ಪರಿಹಾರವಾಗುವುದರಲ್ಲಿ ಸಂಶಯವಿಲ್ಲ.

ತಮ್ಮ ಕಾಲಿನ ಮೇಲೆ ತಾವು ನಿಂತಾಗ ಯಾರಿಗೂ ಹೊರೆಯಾಗಬೇಕಾಗಿಲ್ಲ. ಕೆಲವರು ಮದುವೆ ಮಾಡಿದರೆ ತಲೆಯ ಹೊರೆ ಹೋದಂತೆ ಆಗುತ್ತದೆ ಎಂದು ಹೇಳುತ್ತಿರುತ್ತಾರೆ. ಅದೇ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಟ್ಟು ಉದ್ಯೋಗದಲ್ಲಿ ಇರುವಂತೆ ಮಾಡಿದರೆ ಯಾರಿಗೂ ಹೆಣ್ಣು ಹೊರೆ ಯಾಗುವುದಿಲ್ಲ. ಮುಂದಿನ ಭವಿಷ್ಯ ಸುಖಕರವಾಗಿರುತ್ತದೆ. ಬದಲಿಗೆ ಅವಳು ತನ್ನ ಕುಟುಂಬದ ಊರುಗೋಲು ಆಗುತ್ತಾಳೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಮನುಷ್ಯನಿಗೆ ಬೇಕಾಗಿರುವುದು ಮನುಷ್ಯತ್ವ ಮತ್ತು ಮಾನವೀಯತೆ ಹೊರತು ಅಗೌರವಗಳಲ್ಲ. ಮಹಿಳೆಯರು ಸಾಕ್ಷರತೆಯ ಜೊತೆಗೆ

ಇವತ್ತು ನಮಗೆ ಸಿಗುವ ಧ್ವನಿ ಮತ್ತು ದೃಶ್ಯ ಮಾಧ್ಯಮಗಳಿಂದ ತಿಳುವಳಿಕೆ ಪಡೆಯಬಹುದು. ಈ ತಿಳುವಳಿಕೆ ಅವಳ ಯೋಚನಾ ಲಹರಿಗೆ ಹೋಗುತ್ತದೆ. ಯಾವುದರಿಂದ, ಏಕೆ ತನ್ನ ಸ್ಥಿತಿ ಈ ರೀತಿಯಲ್ಲದೆ ಎಂಬ ಯೋಚನೆಯೇ ಇಲ್ಲಿ ಚಲನೆಯ ಮೂಲ ಬಿಂದು ಆಗಿದೆ.

ಸಮಾಜದಲ್ಲಿ ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ವಾಕ್ಯ ಸಮುದಾಯದಲ್ಲಿ ಕಂಡುಬರುವುದಕ್ಕೆ ಅನೇಕ ವರ್ಷಗಳೇ ಬೇಕಾಗಿದೆ. ಸಮಾಜದ ವಾಸ್ತವ ಸಂಗತಿಯ ಬದುಕನ್ನು ತಿಳಿದುಕೊಳ್ಳಲು ವಿದ್ಯಾಭ್ಯಾಸವು ಮುಖ್ಯವಾಗುತ್ತದೆ. ಮಹಿಳೆಯು ತನ್ನ ಜವಾಬ್ದಾರಿಗಳನ್ನು ನಿರ್ವಹಿಸುವುದರಲ್ಲಿ ಬಹಳ ಮುಖ್ಯವಾಗಿರುತ್ತಾಳೆ. ಮನೆಯ ಅಲಂಕಾರ, ಸಂಘ ಸಂಸ್ಥೆಗಳಲ್ಲಿ ಪಾತ್ರ ವಹಿಸುವುದು ಕಾಣಬಹುದು. ಭಯದ ನೆರಳಿನಲ್ಲಿದ್ದ ಬದುಕು, ಪರಾವಲಂಬಿ ಜೀವನವನ್ನು ಪ್ರತಿಭಟನೆ ಮಾಡುವುದಕ್ಕೆ ಯೋಚಿಸಲು ಅಂಜುತ್ತಿದ್ದಾಳೆ. ಆದರೆ ಇಂದಿನ ವಿಚಾರವಂತ ಮನಸ್ಸುಗಳು ಆರ್ಥಿಕ ಸ್ವಾವಲಂಬಿತನ ಮನಸ್ಸಿನ ಮೂಲೆಯಲ್ಲಿ ಮಲಗಿದ್ದ ಸ್ತ್ರೀ ಪ್ರಜ್ಞೆಯನ್ನು ಜಾಗೃತಗೊಳಿಸುತ್ತಿದೆ. ಹೆಣ್ಣು ಗಂಡುಗಳಿಬ್ಬರೂ ಸಮಾನರು ಎಂಬ ಭಾವನೆಗಾಗಿ ಮೌನ ಹೋರಾಟ ಮಾಡುತ್ತಿದೆ. ಕೆಲವರು ಮನೆಯ ಜವಾಬ್ದಾರಿಯೇ ಸಾಕು, ಹೆಚ್ಚು ಓದಬೇಕಾಗಿಲ್ಲ ಎಂದು ಹೇಳುತ್ತಾರೆ. "ಮಹಿಳೆಯರಿಗೆ ಈ ಸಂಸಾರವೇ ಒಂದು ಪ್ರಪಂಚವಾಗಿದೆ. ಹೆಚ್ಚು ಓದುವುದರಿಂದ ಗೌರವವೂ ಮರ್ಯಾದೆಯೂ ಇರುತ್ತದೆ. ಆದರೆ ಮನೆಯ ಆರ್ಥಿಕತೆಯ ಅಭಾವದಿಂದಾಗಿಯೇ ಹೆಚ್ಚು ಓದಿಸಲು ಆಗಿಲ್ಲ ಎಂದು ಕೆಲವರು ಹೆಣ್ಣು ಮಕ್ಕಳು ಹೇಳಿಕೊಳ್ಳುತ್ತಾರೆ. ಮತ್ತೆ ಎಷ್ಟೇ ಓದಿದರೂ ಗಂಡನ ಮನೆಯಲ್ಲಿ ಮುಸರೆ ತಿಕ್ಕುವುದು ತಪ್ಪುವುದಿಲ್ಲ ಬಿಡಮ್ಮ ಎಂದು ಹೇಳುತ್ತಾರೆ. ಇವರಿಗೆ ದುಡಿಯುವುದೇ ಒಂದು ಮುಖ್ಯ ಗುರಿಯಾಗಿರುತ್ತದೆ. ಸಣ್ಣ ವಯಸ್ಸಿನಿಂದಲೇ ಅವರಿಗೆ ದುಡಿಯುವುದು ಕಲಿಸಿರುತ್ತಾರೆ. ವಿದ್ಯಾವಂತರು, ಹಣ ಉಳ್ಳವರು ತಮ್ಮ ಮಕ್ಕಳನ್ನು ಓದಿಸಲು ಮುಂದಾಗುವುದುಂಟು. ಇಂದಿನ ದಿನಗಳಲ್ಲಿ ಹೆಣ್ಣು ಮಕ್ಕಳು ಓದಿ ಕೆಲಸ ತೆಗೆದುಕೊಂಡರೆ ಅಷ್ಟೇ ಸಾಕು, ಅವರ ಜೀವನ ಸುಖವಾಗಿರುತ್ತದೆ ಎಂದು ದೇವೆಂದ್ರಮ್ಮನವರು ತಿಳಿಸುತ್ತಾರೆ".[೨]

ವ್ಯಾಪಾರ ಮಾಡಿ ಬಂದ ಹಣದಿಂದ ಮಹಿಳೆಯು ತನ್ನ ಸಂಸಾರದ ಜವಾಬ್ದಾರಿಯ ಜೊತೆಗೆ ಹಣ ಸಂಗ್ರಹ ಮಾಡುವುದಕ್ಕೂ ಹಣ ಜೋಡಿಸುತ್ತಾಳೆ. ಹಾಗಾದರೆ ಗಂಡು ಏನು ಮಾಡಿದಂತೆ ಎಂಬ ಪ್ರಶ್ನೆ ಕಾಡುತ್ತದೆ. ಇವಳ ಈ ಹಣದಿಂದ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರಕಿದೆ. ಉದಾಹರಣೆಗೆ ಮದುವೆ ಕಾರ್ಯಗಳಲ್ಲಿ ಸಾಲ ತೆಗೆದುಕೊಂಡು ಮದುವೆ ಮಾಡುವುದು, ಮಕ್ಕಳಿಗೆ ಆರೋಗ್ಯ ಸರಿ ಇಲ್ಲದ ಸಮಯದಲ್ಲಿ ಈ ಹಣ ಬಳಕೆಯಾಗುತ್ತಿರುತ್ತದೆ. ಹಣ ಬಾರದಾಗ ಎರಡು ಬಾರಿ ಕಟ್ಟುತ್ತಾರೆ. ಇದರಿಂದಲೇ ಇನ್ನೂ ಅನೇಕ ಸಮಸ್ಯೆಗಳಿಗೆ ಪರಿಹಾರವಿದ್ದಂತೆ ತಾವು ದುಡಿಯುವುದರಿಂದ ಆರ್ಥಿಕ ಹೊರೆ ಕಡಿಮೆಯಾಗುತ್ತದೆ. ಮತ್ತೆ ಗಂಡನ ಕುಡಿತಕ್ಕೂ ಇವಳ ಹಣ ಬೇಕಾಗುತ್ತದೆ. ಕೊಡದಿದ್ದರೆ ಅವಳಿಗೆ ಹೊಡೆತ ತಪ್ಪಿದ್ದಲ್ಲ.

ಬದಲಾಗಿರುವ ಆರ್ಥಿಕ ಪರಿಸ್ಥಿತಿ ಮತ್ತು ಮಾರ್ಪಾಡಾಗಿರುವ ವಿಚಾರದಿಂದಾಗಿ, ಪ್ರಗತಿ ಪರ

ಮತ್ತು ಪ್ರಗತಿಗಾಮಿ ಬೆಳವಣಿಗೆಯೂ ಮಹಿಳೆ ಪುರುಷನೊಡನೆ ದುಡಿದು ಸಂಸಾರದ ಭಾರಕ್ಕೆ ಹೆಗಲು ಕೊಡುವಂತೆ ಆಗಿದೆ. ಮತ್ತೊಂದು ಕೈ ದುಡಿಯುವುದರಿಂದ ಸಂಸಾರದ ಆರ್ಥಿಕ ಮುಗ್ಗಟ್ಟು ಹಗುರವಾಗುತ್ತದೆ ಎಂದು ಪುರುಷರು ತಿಳಿದುಕೊಳ್ಳಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಎಷ್ಟು ದುಡಿದರೂ ಸಾಲದು. ಮಕ್ಕಳಿಗೆ ಶಿಕ್ಷಣ ಕೊಡಿಸಲು ಈ ಸಮುದಾಯದವರು ಒದ್ದಾಡುತ್ತಿದ್ದರೂ, ಖಾಸಗಿ ಶಾಲೆಗಳ ಪ್ರಭಾವದಿಂದ ಮಕ್ಕಳನ್ನು ಉತ್ತಮ ಪ್ರಜೆಯಾಗಲು ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಕಳಿಸುತ್ತಿದ್ದಾರೆ. ಅವರು ಹೇಳಿದಂತೆ ಫೀಜ್, ಪುಸ್ತಕ, ಬಟ್ಟೆಬರೆಗಳಿಗೆ ಹಣ ಸಂಪಾದಿಸುವುದು ಒಂದು ಹರಸಾಹಸ ಮಾಡಿದಂತಾಗುತ್ತದೆ. ಆದರೂ ಕಷ್ಟ ಪಟ್ಟು ಓದಿಸಿದರೆ ತಂದೆ, ತಾಯಿಯ ಜವಾಬ್ದಾರಿಯನ್ನು ಮಗ ನೋಡದೇ ಮನೆ ತೊರೆದು ಪಟ್ಟಣ ಸೇರಿಕೊಳ್ಳುತ್ತಾರೆ. ನಾನು ನನ್ನ ಹೆಂಡತಿ ಎಂಬ ಭಾವನೆಯಿಂದಾಗಿ ಇಂದು ಈ ರೀತಿ ಮಾಡುತ್ತಾನೆ. ಆದರೆ ಅದನ್ನು ಹೆಣ್ಣಿಗೆ ಹೋಲಿಸುತ್ತಾರೆ. ಮಕ್ಕಳು ತಮ್ಮ ಇಚ್ಛೆಯಂತೆ ನಡೆದುಕೊಳ್ಳುವುದುಂಟು. ತಾಯಿಯ ಮನಸ್ಸನ್ನು ಕಷ್ಟ ಪಡಿಸುವುದುಂಟು.

ಹೆಣ್ಣುಮಕ್ಕಳ ವ್ಯಕ್ತಿತ್ವ ವಿಕಾಸ ಹೊಂದಿ ಆಕೆ ಸಂಸಾರದ ಒಳಿತಿಗಾಗಿ, ಅದರ ಸಮಸ್ಯೆಗಳನ್ನು ಬಿಡಿಸುವಲ್ಲಿ ಮಹಿಳೆಯು ಹರಸಾಹಸ ಮಾಡುತ್ತಿರುತ್ತಾಳೆ. ಹಣ್ಣು ವ್ಯಾಪಾರ ಮಾಡಿ, ಕಸಬರಿಗೆ ಕಟ್ಟಿ, ಕಲ್ಲು ಮಣ್ಣು ಹೊತ್ತು, ಮಿಷನ್ ತುಳಿದು ಇನ್ನು ಅನೇಕ ಕೆಲಸ ಮಾಡಿ ಪರಿಹಾರ ಕಂಡುಕೊಳ್ಳುತ್ತಾಳೆ. ದಿನಾಲೂ ಅವಳಿಗೆ ಅಗ್ನಿ ಪರೀಕ್ಷೆಯಾಗಿರುತ್ತದೆ. ಮಕ್ಕಳ ಮುಂದಿನ ಭವಿಷ್ಯವನ್ನು ಉತ್ತಮಪಡಿಸಲು ಕಷ್ಟಪಡುತ್ತಾಳೆ. ಎಷ್ಟೇ ದುಡಿದರೂ ಪುರುಷರು ಇದನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ ಎಂಬ ವಿಷಾದ ಬೇರೆ.

ಪುರುಷನ ಹಿತಕ್ಕೆ, ಪುರುಷನ ಚಿಂತನೆಗೆ ಆದ್ಯತೆ ಕೊಟ್ಟು ವ್ಯವಸ್ಥೆಯ ಮೌಲ್ಯಗಳನ್ನು ಗಂಡಸರು, ಹೆಂಗಸರೂ ಇಬ್ಬರೂ ರೂಢಿಸಿಕೊಂಡಿದ್ದಾರೆ. ಕೆಲವು ಸಂದರ್ಭಗಳಲ್ಲಿ ಈ ಕಾರಣದಿಂದಲೇ ಹೆಣ್ಣಿಗೆ ಹೆಣ್ಣೇ ಶತ್ರುವಾಗುವುದು ಎಂಬುದು ತಿಳಿಯುತ್ತದೆ. ತಮ್ಮ ಬೇರಿಗೆ ತಾವೆ ಬಿಸಿನೀರು ಹಾಕಿಕೊಳ್ಳುತ್ತಿರುವ ಈ ಸ್ಥಿತಿಯನ್ನು ಹೆಂಗಸರೂ ಕೂಡ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಹೀಗೆ ರೂಢಿಸಿಕೊಂಡ ಮೌಲ್ಯಗಳು ಇವತ್ತು ಯಾವ ಫಲ ಕೊಡುತ್ತಿವೆ. ಉದಾಹರಣೆಗೆ ಮಗನ ಹಿತದೃಷ್ಟಿಯಿಂದ ಅತ್ತೆಯು ಸೊಸೆಗೆ ಬಯ್ಯುವುದು, ಹೊಡೆಯುವುದು ಕಾಣುತ್ತೇವೆ. ಅವನನ್ನು ಚೆನ್ನಾಗಿ ನೋಡಿಕೊಳ್ಳಬೇಕು, ಎಲ್ಲಿಗಾದರೂ ಹೋಗಿಬಂದರೆ ಅವನನ್ನು ಉಪಚರಿಸಬೇಕು. ಅವನಿಗೆ ಕಾಫಿ, ಟೀ, ಊಟ ಮಾಡಿಕೊಡಬೇಕು, ಅವನು ತಿಂದು ಹೋಗುವುದು ನೋಡಿ ತಾಯಿಗೆ ಸಮಾಧಾನವಾಗುತ್ತದೆ ಎಂದು ಹೇಳಿ ಸೊಸೆಯನ್ನು ತನ್ನ ಮಗನ ಕಾರಣದಿಂದ ಮಹಿಳೆಯರು ಬಯ್ಯಬೇಕಾಗುತ್ತದೆ. ಆದ್ದರಿಂದಲೇ ಹೆಣ್ಣಿಗೆ ಹೆಣ್ಣೇ ಶತ್ರು ಎಂದು ಆಗಿರಬಹುದಲ್ಲವೆ? ಹೆಣ್ಣು ಹೆತ್ತ ಮನೆಯ ಹೊರಗೆ ಎಂಬ ಮಾತು ಪ್ರಾಣಕ್ಕಿಂತ ಮಿಗಿಲಾಗಿ ಪ್ರೀತಿಯಿಂದ ಸಾಕಿದ ಮಗಳನ್ನು ಗಂಡನ ಮನೆಗೆ ಕಳಿಸುವುದಕ್ಕೆ ತಾಯಿಯ ಮನಸ್ಸಿಗೆ ನೋವಾಗುದಿಲ್ಲವೇ ಆದರೆ ಅನಿವಾರ್ಯದಿಂದ ಕಳಿಸಲೇ ಬೇಕಾಗುತ್ತದೆ. ಕೊಟ್ಟ ಮನೆಯೇ ಅವಳಿಗೆ ಸರ್ವಸ್ವವಾಗಿರುತ್ತದೆ. ಆಗ ತವರುಮನೆಯು ಬೀಗರ

ಮನೆಯಾಗುತ್ತದೆ. "ಹೆಣ್ಣು ಹಡೆಯಲಿಬ್ಯಾಡ, ಹೆರವರಿಗೆ ಕೊಡಬ್ಯಾಡ, ಕೊಟ್ಟ ನಂತರ ಸಿಟ್ಟಾಗಿ ಶಿವಗ ಬೈಬ್ಯಾಡ" ಎಂಬ ಮಾತು ತಿಳಿದು ಬರುತ್ತದೆ. ಅತ್ತೆಯ ಮನೆಯಲ್ಲಿ ಮುತ್ತಾಗಿ ಇರಬೇಕು ಎಂಬ ಮಾತನ್ನು ತಾಯಿ ಮಗಳಿಗೆ ತಿಳಿಸುತ್ತಾಳೆ. ಅತ್ತೆಯ ಮನೆಯವರಿಗೆ ಎದುರು ಮಾತನಾಡದೆ, ಬಯ್ದರೂ ಸಹ ಸುಮ್ಮನಿರಬೇಕು ಎಂದು ಹೇಳಿಕೊಡುತ್ತಾಳೆ. ಪತಿಯ ಮೇಲೆ ಭಕ್ತಿಯಿದ್ದರೆ ಮಾತ್ರ ಮಾದೇವ ಒಲಿಯುತ್ತಾನೆ. ಪತಿಯೇ ಪರಮೇಶ್ವರ ಎಂದೂ ಹೇಳುತ್ತಾರೆ. ಜೀವನ ದೃಷ್ಟಿ ಮತ್ತು ಸಮರ್ಪಣ ಭಾವವು ಇವರಲ್ಲಿ ವ್ಯಕ್ತವಾಗುತ್ತದೆ. ಗಂಡ ಹೊಡೆದರೂ ಸಹ ಗಂಡನ ಮನೆಯೇ ಲೇಸು ಎಂದು ಮಹಿಳೆಯರು ಹೇಳುತ್ತಾರೆ. ಮತ್ತೆ ಮಕ್ಕಳು ಕೊಡು ಶಿವನೆ ಎಂದು ಬೇಡಿಕೊಳ್ಳುತ್ತಾಳೆ. ಮಕ್ಕಳು ಇಲ್ಲದಿದ್ದರೆ ಬಂಜೆ ಎಂಬ ನೋವಿನಿಂದ ಅತ್ತೆ ಮನೆಯವರ ದೃಷ್ಟಿಯಲ್ಲಿ ಕೀಳಾಗಿ ಇರಬಾರದು ಎಂದು ಮದುವೆಯಾಗಿ ೩-೪ ತಿಂಗಳು ನಂತರ ಹೆಣ್ಣು ಗರ್ಭಿಣಿ ಎಂಬ ಸುದ್ದಿ ಅವರಿಗೆ ತಲುಪಬೇಕು. ಇಲ್ಲವಾದರೆ ಅಕ್ಕ ಪಕ್ಕದ ಮನೆಯವರು ನಿಮ್ಮ ಸೊಸೆ ನೀರುಗೊಂಡಿಲ್ಲ ಎಂದು ಬೇರೆಯವರು ಕೇಳುತ್ತಾರೆ. ಇದರಿಂದ ಸಮಾಜದ ನಿಂದನೆಗಳಿಂದ ಹೆಣ್ಣು ನೋವನ್ನು ಸಹಿಸಿಕೊಳ್ಳಲಾರಳು. ಮಕ್ಕಳಿಲ್ಲದ ಹೆಣ್ಣು ಸಮಾಜದಲ್ಲಿ ನಿಂದನೆ ಟೀಕೆಗಳಿಗೆ ಗುರಿಯಾಗಬೇಕಾಗುತ್ತದೆ. ಇಲ್ಲವೇ ಅತ್ತೆ ಮನೆಯವರು ಮಗನಿಗೆ ಇನ್ನೊಂದು ಮದುವೆ ಮಾಡುವುದು ಸಹಜ. ಮಹಿಳೆಯರಿಗೆ ಸವತಿ ಮತ್ಸರ ಪ್ರಪಂಚದಲ್ಲಿ ಹೆಣ್ಣಿನ ಬಾಳಿಗೆ ಬೆಂದು ಸಹಿಸಿಕೊಳ್ಳಲಾಗದ ಬೆಂಕಿ ಕಿಚ್ಚು ಎಂದು ಹೇಳಲಾಗುತ್ತದೆ.

ಸೊಸೆಯನ್ನು ಅತ್ತೆ-ಗಂಡನು ಅತಿ ಕಾಡಿಸಿದರೆ, ನೋಯಿಸಿದರೂ ಅದನ್ನೆಲ್ಲ ಮರೆತು ಜೀವನ ನಡೆಸುತ್ತಾಳೆ. ನೋವನ್ನು ಹೇಳಿಕೊಳ್ಳುವುದಕ್ಕೆ ತವರಿನವರ ಸಹಾಯವನ್ನು ಬಯಸುವುದಿಲ್ಲ. ಏಕೆಂದರೆ ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎಂಬ ಮಾತಿನಿಂದ ನೋವನ್ನು ತನ್ನ ಮನದಲ್ಲಿಯೇ ಇಟ್ಟುಕೊಳ್ಳುತ್ತಾಳೆ. ತಂದೆ-ತಾಯಿಗಳಿಗೆ ಹೇಳಿದರೆ ಮಗಳಿಗೆ ಹಿತವಚನ ನೀಡಿ ಹೊಂದಿಕೊಂಡು ಹೋಗಬೇಕು. ಇಲ್ಲವಾದರೆ ನೋವು ಅನುಭವಿಸುತ್ತಲೇ ಇರಬೇಕು ಎಂದು ಹೇಳುತ್ತಾರೆ. ಮತ್ತೆ ಹೆಣ್ಣು ದೇವರಲ್ಲಿ ನನಗೆ ಮುತ್ತೈದೆ ಸಾವು ಬರಲೆಂದು ಕೇಳಿಕೊಳ್ಳುತ್ತಾಳೆ. ವೈಧವ್ಯ ಪ್ರಾಪ್ತಿಯಾದಾಗ ಹೆಣ್ಣಿನ ಜೀವನವು ಬೆಳಕಿಲ್ಲದ ಮನೆಯಂತೆ ಕಂಡುಬರುವುದುಂಟು ಎಂಬ ಮನೋಭಾವನೆಯನ್ನು ಮನದಲ್ಲಿ ಆವರಿಸಿಕೊಂಡಿದೆ. ಎಷ್ಟೆ ಕುಡಿದು ಹೊಡೆದರೂ, ಬಡಿದರೂ ಸಹ ಗಂಡ ಇದ್ದರೆ ಒಳ್ಳೆಯದು ಎಂಬ ಮಾತು ಮಹಿಳೆಯರಲ್ಲಿ ಬರುವುದನ್ನು ಕಾಣಬಹುದು.

ಹೆಣ್ಣಿಗೆ ವಿವಾಹ ಕಡ್ಡಾಯವಾದಾಗ ನಾಲ್ಕು ವರ್ಷಕ್ಕೆ ಮೊದಲೇ ವಿವಾಹ ಕಾರ್ಯ ನೇರವೇರಿಸಿ ಜವಾಬ್ದಾರಿಯಿಂದ ಕೈ ತೊಳೆದುಕೊಳ್ಳಬೇಕಾಗಿ ಬಂದಾಗ ವರದಕ್ಷಿಣೆಯ ಆಮಿಷವನ್ನು ತೋರಿಸಿ, ಯಾವುದೇ ಒಂದು ಗಂಡಿಗೆ ಅವಳನ್ನು ಗಂಟು ಹಾಕಬೇಕಾದ ಪ್ರಮೇಯ ಬರುತ್ತದೆ. ಅದೇ ವಿಚಾರ, ಪದ್ಧತಿ ಇಂದು ಸಮಾಜದ ಮುಂದೆ ವರದಕ್ಷಿಣೆಯ ಭೂತವಾಗಿ ಬೃಹದಾಕಾರವಾಗಿ ಬೆಳೆದಿರುತ್ತದೆ. ಒಂದು ವೇಳೆ ದಾಂಪತ್ಯದಲ್ಲಿ ಜಗಳ ಪ್ರಾರಂಭವಾಗಿ ಹೆಣ್ಣು ಮಗಳು ತವರಿಗೆ ಬರಬೇಕಾಗಿ ಬಂದಲ್ಲಿ, ಮದುವೆಗೆ ಮಾಡಿದ ಖರ್ಚು ವ್ಯರ್ಥ್ಯವಾಗಿರುತ್ತದೆ. ಕೊಟ್ಟ ವರದಕ್ಷಿಣೆ

ಗಂಡನ ಮನೆ, ತಂದೆ ತಾಯಿಯರ ಕೈಯಲ್ಲಿರುತ್ತದೆ. ಅದರ ಬಗ್ಗೆ ಯಾವ ಸಾಕ್ಷ್ಯಾಧಾರವೂ ಇರುವುದಿಲ್ಲ. ತವರಿಗೆ ಬಂದ ಹೆಣ್ಣು ಮಗಳು ತಾನು ತವರಿಗೆ ಭಾರವಾದನೆಂದು ಅಂದುಕೊಳ್ಳುತ್ತಾ ತಳಮಳಸುತ್ತಾಳೆ. ವರದಕ್ಷಿಣೆಯ ಬದಲು ಆಸ್ತಿಯಲ್ಲಿ ಒಂದು ಪಾಲನ್ನು ಅವಳಿಗೆ ಕೊಟ್ಟಲ್ಲಿ, ವಿವಾಹದ ಖರ್ಚನ್ನು ಕಡಿಮೆ ಮಾಡಿಕೊಂಡಲ್ಲಿ ಎಲ್ಲರಿಗೂ ನೆಮ್ಮದಿ. ಈ ಸಮುದಾಯದಲ್ಲಿ ಶ್ರೀಮಂತರು ಮತ್ತು ಆಸ್ತಿವಂತರು ಇರುವುದು ಕಡಿಮೆ. ಆದರೂ ಸಹ ಪಾಲು ಕೊಡುವುದನ್ನು ನಿರ್ಧರಿಸಬೇಕಾಗುತ್ತದೆ. ನೌಕರಿ ಮಾಡುತ್ತಿರುವ ಪುರಷರ ಅರ್ಧ ಸಂಬಳವನ್ನು ಕೇಳರುವ ಮಹಿಳೆಯರು ಕೆಲವರು ಇದ್ದಾರೆ. ಹೆಣ್ಣು ಮಕ್ಕಳ ಆಸ್ತಿಪಾಲಿನ ಬದಲು, ಎಷ್ಟೇ ಪ್ರೀತಿಯಿಂದ ವರದಕ್ಷಿಣೆ ಕೊಟ್ಟು ಅದ್ಧೂರಿಯಿಂದ ಹೆಣ್ಣುಮಗಳ ಮದುವೆ ಮಾಡಿಕೊಟ್ಟರೂ ಅದರಿಂದ ಅವಳಿಗೇನೂ ಲಾಭವಿಲ್ಲ. ತವರು ಮನೆಯಲ್ಲಾಗಲಿ ಗಂಡನ ಮನೆಯಲ್ಲಾಗಲೀ ಅದರಿಂದ ಅವಳ ಸ್ಥಾನಮಾನವೇನೂ ಬದಲಾಗುವುದಿಲ್ಲ ಅಲ್ಲವೇ ಎಂಬುದು ತಿಳಿದಿರುವ ವಿಷಯ.

ಅದೇ ಆಸ್ತಿಯಲ್ಲಿ ಅವಳಿಗೆ ಹಕ್ಕಿದ್ದಲ್ಲಿ ಆಸ್ತಿಯ ಒಡತಿಯಾದಲ್ಲಿ ತವರಿನಲ್ಲಿಯೂ ಬೆಲೆ ಇರುತ್ತದೆ. ಗಂಡನ ಮನೆಯಲ್ಲಿಯೂ ಒಂದು ಸ್ಥಾನಮಾನ ದೊರಕುತ್ತದೆ. ಇಲ್ಲವಾದಲ್ಲಿ ಎಲ್ಲಿದ್ದರೂ ಅವಳು ನಿರಾಶ್ರಿತಳೆಂದೇ ಎನಿಸಿಕೊಳ್ಳುತ್ತಾಳೆ. ಯಾವ ಕಾಲಕ್ಕೂ ಅವಳ ಸ್ಥಾನಮಾನದಲ್ಲಿ ಸುಧಾರಣೆ ಯಾಗುವುದು ಸಾಧ್ಯವಿಲ್ಲ. ಹೆಂಡತಿಯಾದವಳು ಗಂಡನ ಲೈಂಗಿಕ ಆಕರ್ಷಣೆಯನ್ನು ಕಾಯ್ದುಕೊಳ್ಳ ಬೇಕು. ಮಾನಸಿಕ ನೆಮ್ಮದಿಯನ್ನು ಕಾಪಾಡಬೇಕು, ಗಂಡನಿಗೆ ತಕ್ಕಂತೆ ಹೊಂದಿಕೊಂಡಾಗ ಮಾತ್ರ ಹೆಂಡತಿ ಪರಿಪೂರ್ಣವಾಗಲು ಸಾಧ್ಯ. ಹೆಂಡತಿ ಗಂಡ ಹೇಳಿದ್ದನ್ನು ಕೇಳಬೇಕೆಂಬ ಭಾವನೆ ಪುರುಷಪ್ರಧಾನ ವ್ಯವಸ್ಥೆ ಭಾವಿಸುತ್ತದೆ. ಕುಟುಂಬದಲ್ಲಿನ ಸಮಸ್ಯೆಗಳನ್ನು ಹೇಳಿದರೆ ಅವನ ನೆಮ್ಮದಿ ಹಾಳಾಗುತ್ತದೆ. ಕುಟುಂಬದ ಒಳಗಿನ ಮತ್ತು ಹೊರಗಿನ ಜವಾಬ್ದಾರಿಯನ್ನು ನಿಭಾಯಿಸಬೇಕಾದ ಗಂಡನ ಮೇಲೆ ತೀವ್ರವಾದ ಮಾನಸಿಕ, ಕೌಟುಂಬಿಕ ಹಾಗೂ ಸಾಮಾಜಿಕ ಒತ್ತಡಗಳಿರುತ್ತವೆ ಎಂದು ತಿಳಿಯುತ್ತಾಳೆ. ಆದರೆ ಸಿಟ್ಟು ಮಾಡಿಕೊಂಡರೂ ಶಾಂತಿಯುತವಾಗಿ ಪ್ರತಿಕ್ರಿಯಿಸುತ್ತಾ ಆತನಿಗೆ ಹಿತವಾಗುವಂತೆ ನಡೆದುಕೊಳ್ಳಬೇಕು. ಎಲ್ಲ ಕಡೆಯಿಂದ ಎದುರಾಗುವ ನೋವುಗಳನ್ನು, ಅಪಮಾನಗಳನ್ನು ದುಃಖದುಮ್ಮಾನಗಳನ್ನು ತನ್ನೊಳಗೆ ನುಂಗಿಕೊಂಡು ನಗುತ್ತಾ ಗಂಡನನ್ನು ಉಪಚರಿಸಬೇಕು ಎಂದೇಳುತ್ತದೆ. ಆದರೆ ಆತನಿಗೆ ಇಷ್ಟ ಬಂದಂತೆ ನಡೆದುಕೊಳ್ಳುತ್ತಾಳೆ ಎಂಬ ಮಾತನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಗಂಡ ಬಯಸಿದಾಗ ಹಾಸಿಗೆ ಸುಖವನ್ನು ನೀಡಬೇಕು. ಲವಲವಿಕೆಯಿಂದ ನಡೆದುಕೊಳ್ಳುತ್ತ ಗಂಡನ ಭೋಗಾಸಕ್ತಿಗಳನ್ನು ಪೂರೈಸಬೇಕು. ಹೀಗಿದ್ದಾಗ ಗಂಡಸು ಅನ್ಯ ಸ್ತ್ರೀಯತ್ತ ದೃಷ್ಟಿ ಹರಿಸುವುದಿಲ್ಲ. ಹೀಗೆ ಪುರುಷಪ್ರಧಾನ ಸಮಾಜವು ಗಂಡನ ವಿಷಯ. ಲಂಪಟತನವನ್ನು ಹೆಂಡತಿಯ ನಡವಳಿಕೆಯೊಂದಿಗೆ ತಳುಕು ಹಾಕುತ್ತದೆ. ಒಳ್ಳೆಯ ಹೆಂಡತಿಯಾಗಬೇಕಾದರೆ ಸಂಪೂರ್ಣ ಅವಧಿಯನ್ನು ಗಂಡನ ಸೇವೆಗೆ ಮೀಸಲಿಡಬೇಕಾಗುತ್ತದೆ. ಸಮಾಜದ ಈ ಅಪೇಕ್ಷೆಯು ಹೆಣ್ಣಿನ ಪೂರ್ಣ ಭವಿಷ್ಯವನ್ನೇ ನಿರಾಕರಿಸುತ್ತದೆ. ತನ್ನೊಳಗಿನ ಭಾವನೆಗಳನ್ನು, ಬಯಕೆಗಳನ್ನು ಹಾಗೂ ಆಸಕ್ತಿಗಳನ್ನು ಅದುಮಿಟ್ಟು

ಗಂಡನು ತನ್ನ ಮೇಲೆ ಎಸಗುವ ದೌರ್ಜನ್ಯಗಳನ್ನು ಅಪಮಾನಗಳನ್ನು ನುಂಗಿಕೊಳ್ಳುತ್ತಾಳೆ. ಆತನ ನಿಲುವುಗಳಿಗೆ ಅನುಸರಿಸಿ ನಡೆಯಬೇಕಾದ ಹೆಂಡತಿಯ ಪಾತ್ರವು ಗುಲಾಮ ಸ್ಥಿತಿಯಲ್ಲಿರುವುದನ್ನೇ ಹೇಳುತ್ತದೆ.

ಕಟ್ಟಿಕೊಂಡ ಗಂಡನು ಬುದ್ಧಿಹೀನ ಮತ್ತು ಸಂಪಾದನಾರಹಿತನಾಗಿದ್ದರೆ ಅವನ ಹೆಂಡತಿಯ ಕುಟುಂಬದವರ, ಸಮಾಜದವರ ತಿರಸ್ಕಾರಕ್ಕೆ ಒಳಗಾಗಬೇಕಾಗುತ್ತದೆ. "ಹೆಂಡತಿ ಹೆಗ್ಗಡತಿಯಾದರೆ ಗಂಡ ಮೂಳೆ ನಾಯಿಗಿಂತ ಕಡೆ" ಎನ್ನುವ ಗಾದೆ ಮಾತು ಹೆಣ್ಣನ್ನು ನಿರಾಕರಿಸುತ್ತದೆ. ಕುಟುಂಬ ದಲ್ಲಾಗಲೀ, ಸಮಾಜದಲ್ಲಾಗಲೀ, ಹೆಂಡತಿಯು ಗಂಡಿನ ಹೆಸರಿನಲ್ಲಿ ಗುರುತಿಸಿಕೊಳ್ಳುತ್ತಾಳೆ. ವಿನಃ ವ್ಯಕ್ತಿಗತ ಸ್ವತಂತ್ರ ನೆಲೆಯಲ್ಲಿ ಹೆಂಡತಿಯು ತನ್ನ ಕರ್ತವ್ಯದ ಮೂಲಕ ಕುಟುಂಬದಲ್ಲಿ ಸಮಾಜದಲ್ಲಿ ಗುರುತಿಸಿಕೊಳ್ಳುವುದೆಂದರೆ ಆತನ ಸ್ಥಾನವನ್ನು ಮತ್ತು ಅಧಿಕಾರವನ್ನು ಕಸಿದುಕೊಳ್ಳುವುದೇ ಆಗಿದೆ ಎಂಬ ಮನೋಭಾವನೆ ಅವರಲ್ಲಿರುತ್ತದೆ. ಹೆಂಡತಿಯಾದವಳ ಕ್ರಿಯಾಶೀಲತೆಯು ಅವಳಿಗೆ ಮಾನಸ್ಥಾನ ಗಳನ್ನು ತಂದುಕೊಡುತ್ತದೆ. ಗಂಡನ ಕುಟುಂಬದಲ್ಲಿ, ಸಮಾಜದಲ್ಲಿ ಎಷ್ಟು ಪ್ರಬಲನಾಗಿರುವನು ಎನ್ನುವುದರ ಮೇಲೆ ಅವಳಿಗೆ ಮಾನಮರ್ಯಾದೆಗಳು ನಿರ್ಧಾರಿತವಾಗುತ್ತದೆ. ಉದಾಹರಣೆ ನೌಕರಿಯಲ್ಲಿರುವ ಹೆಣ್ಣಿಗೆ ಕೊಡುವಷ್ಟು ಬೆಲೆಯನ್ನು ಅದೇ ಕಸುಬು ಮಾಡುತ್ತಿರುವ ಮಹಿಳೆಗೆ ಕೊಡುತ್ತಾರೆಯೇ ಎಂಬ ಪ್ರಶ್ನೆ ಬರುತ್ತದೆ. ಆದ್ದರಿಂದ ಮಹಿಳೆಯರು ಮುಂದೆ ಬರುವುದಕ್ಕೆ, ಅಡ್ಡಿ ಬರುವುದು ಅಜ್ಞಾನ ಅಂಧಕಾರ ಎಂಬುದು ಸ್ಪಷ್ಟವಾಗುತ್ತದೆ.

ಒಂದು ತ್ರಿಪದಿಯಲ್ಲಿ ಗಂಡನಿಗೋಸ್ಕರ ಅಡಿಗೆ ಮಾಡಬೇಕು, ಇಲ್ಲವಾದರೆ ಅವಳಿಗೆ ಅಡಿಗೆಯಲ್ಲಿ ಆಸಕ್ತಿ ಇರುವುದಿಲ್ಲ. ಏಕೆಂದರೆ ಕುಟುಂಬದ ಜವಾಬ್ದಾರಿಗಳನ್ನು ನೋಡಿಕೊಳ್ಳುವಷ್ಟು ಸಾಕಾಗಿರುತ್ತದೆ. ಯಾವ ಊಟವಾದರೆನೋ ಎಂಬ ಮನೋಭಾವನೆಯಲ್ಲಿ ಬದುಕುತ್ತಿರುತ್ತದೆ. ಉದಾಹರಣೆಗೆ ಮನೆಯಲ್ಲಿ ಗಂಡ ಇರದಿದ್ದರೆ ಮಕ್ಕಳಿಗೆ ಇರೋದು ಮಾಡಿ ಹಾಕಿ ಉಳಿದಿದ್ದನ್ನು ತಿಂದು ಬದುಕುವಳು ಹೆಣ್ಣು. ಅದೇ ಗಂಡ ಇದ್ದರೆ ಯಾವ ಅಡಿಗೆ ಮಾಡಬೇಕು ಎಂಬುದರ ಬಗ್ಗೆ ಯೋಚಿಸುತ್ತಿರುತ್ತಾಳೆ.

ಯಾಲಕ್ಕಿ ಕಾಯ್ ಸುಲಿದು ಯಾವಡಗಿ ಮಾಡಲಿ
ಊರಿಗ್ಹೋದರ ರಾಯರು । ಬಾರದೆ
ಯಾವಡಿಗಿ ಮಾಡಿ ಫಲವೇನು?
(ಊಟದ ಬಗ್ಗೆ ಮಹಿಳೆ ಈ ರೀತಿ ತಿಳಿಸುತ್ತಾಳೆ)

ಕೌಟುಂಬಿಕ ದೌರ್ಜನ್ಯ ಈಗ ಕೇವಲ ಅಪರಾಧವಷ್ಟೇ ಅಲ್ಲ. ಅದೊಂದು ಜಾಗತಿಕ ಮಟ್ಟದ ಸಾಮಾಜಿಕ ಸಮಸ್ಯೆಯಾಗಿದೆ. ಮಹಿಳೆಯರ ಸಂರಕ್ಷಣೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ಸರ್ಕಾರ ಅವರಿಗಾಗಿಯೇ ಪ್ರತ್ಯೇಕ ಕಾನೂನುಗಳನ್ನು ರಚಿಸಲು ನಮ್ಮ ಸಂವಿಧಾನದಲ್ಲಿ ಅವಕಾಶಗಳಿವೆ. ವರದಕ್ಷಿಣೆ ಕಿರುಕುಳ, ಅತ್ಯಾಚಾರ, ಲೈಂಗಿಕ ಕಿರುಕುಳ ಇವುಗಳಿಗೆ ಒಳಗಾದ ಮಹಿಳೆಯರು ಭಾರತೀಯ ದಂಡ ಸಂಹಿತೆ ಮತ್ತು ಭಾರತೀಯ ದಂಡ ಪ್ರಕ್ರಿಯೆ ಸಂಹಿತೆಯಡಿ ರಕ್ಷಣೆ ಪಡೆಯಲು ಅವಕಾಶವಿದೆ. ಇವಳ ಸಾಮಾಜಿಕ ಮತ್ತು ಆಸ್ತಿ ಹಕ್ಕುಗಳ ರಕ್ಷಣೆಗಾಗಿ ವಾರಸುದಾರ ಕಾಯಿದೆ,

ದತ್ತಕ ಕಾಯಿದೆ. ವಿಧವಾ ಪುನರ್ವಿವಾಹ ಕಾಯಿದೆ ಹೀಗೆ ಹಲವು ಕಾಯಿದೆಗಳು ಚಾಲ್ತಿಯಲ್ಲಿದೆ. ಆದರೆ ಕೌಟುಂಬಿಕ ದೌರ್ಜನ್ಯದಿಂದ ತತ್ತರಿಸಿದ ಮಹಿಳೆಯರ ಹಿತಾಸಕ್ತಿಯ ಉದ್ದೇಶವಾಗಿಟ್ಟುಕೊಂಡು ಯಾವುದೇ ಕಾನೂನು ರಚಿತವಾಗಿಲ್ಲ ಎಂಬುದು ತಿಳಿದುಬರುತ್ತದೆ. ಕೊರವರ ಸಮುದಾಯದಲ್ಲಿ ಇವುಗಳ ಬಗೆಗೆ ತಿಳುವಳಿಕೆಯಾದರೂ ಎಲ್ಲಿಂದ ಬರಬೇಕು. ಮಹಿಳೆಯರಂತೂ ಇದರ ಬಗ್ಗೆ ಯೋಚಿಸುವುದಿಲ್ಲ. ಏಕೆಂದರೆ ಮನೆಯ ಗೌರವ ಮತ್ತು ಮರ್ಯಾದೆಗೆ ಧಕ್ಕೆಯಾಗುತ್ತದೆ ಎಂದು ಇವುಗಳ ಬಗೆಗೆ ತಿಳಿದುಕೊಳ್ಳುವುದಿಲ್ಲ. ಇದಕ್ಕೆ ಅನಕ್ಷರತೆಯು ಕಾರಣವಾಗಿದೆ. ಅವರಿಗೆ ಪುರುಷ ಸಮಾಜವು ತಿಳಿದುಕೊಳ್ಳುವ ಅವಕಾಶವನ್ನು ಮಾಡಿಲ್ಲವಲ್ಲ. ಕೆಲವು ವಿದ್ಯಾವಂತರಿಗೆ ತಿಳಿದಿದ್ದರೂ ಅವರು ತಮ್ಮ ತಪ್ಪನ್ನು ಮಾಡುತ್ತಲೇ ಬರುತ್ತಿದ್ದಾರೆ. ಎಷ್ಟೇ ವಿದ್ಯಾವಂತರಾದರು ಮಹಿಳೆಯರು ತಮ್ಮ ಇಚ್ಛಾಶಕ್ತಿಗೆ ಅನುಗುಣವಾಗಿ ನಡೆದುಕೊಳ್ಳುವುದಿಲ್ಲ. ಅಂತಹ ಅವಕಾಶಗಳು ಕಡಿಮೆ ಸಿಗುತ್ತವೆ.

ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣಿಗೆ ವಿದ್ಯೆ, ಉದ್ಯೋಗಕ್ಕಿಂತಲೂ ಮದುವೆಯೇ ಅನಿವಾರ್ಯವೆಂಬುದನ್ನು ಆಕೆಗೆ ಬಾಲ್ಯದಿಂದಲೇ ತರಬೇತಿ ನೀಡಲಾಗುತ್ತದೆ. ಮನೆಯ ಒಳಗಿನ ಹೊರಗಿನ ದುಡಿತ ಆಕೆಯದೇ ಆಗಿದ್ದು, ಮಕ್ಕಳ ಕುಟುಂಬದ ಎಲ್ಲಾ ಸದಸ್ಯರ ಸೇವೆ ಕೂಡ ಆಕೆಗೆ ಕಟ್ಟಿಟ್ಟ ಬುತ್ತಿಯಾಗಿರುತ್ತದೆ. ವಿನಯಶೀಲತೆ, ತ್ಯಾಗ, ವಿಧೇಯತೆ, ಕ್ಷಮೆ, ತಾಳ್ಮೆ ಸಂಯಮವೆಂಬ ಪ್ರತಿಭಟನೆರಹಿತ ಮೌಲ್ಯಗಳನ್ನು ಆಕೆಯಲ್ಲಿ ಬಿತ್ತುತ್ತಿರುವ ಕಾರಣದ ಫಲಿತಾಂಶವಾಗಿ ಇಂದು ಅನೇಕ ಮಹಿಳೆಯ ವಧುದಹನ, ವರದಕ್ಷಿಣೆ ಸಾವು, ಆತ್ಮಹತ್ಯೆ ಅಸಹಜ ಸಾವುಗಳಿಗೆ ಈಡಾಗುತ್ತಿರುವರು. ಹೊಸದಾಗಿ ಮನೆಗೆ ಬಂದ ಸೊಸೆಯ ಮೇಲೆ ಅತ್ತೆಯಾದವಳು ಕೆಲವೊಂದು ರೀತಿ ರಿವಾಜುಗಳನ್ನು ಹಾಕುತ್ತಾಳೆ. ಕೆಲಸ ಬರದಿದ್ದಾಗ ಅವಳ ತಾಯಿಯನ್ನು ದೂಷಿಸುವುದು, ಹೀಯಾಳಿಸುವುದು ಕಂಡುಬರುತ್ತದೆ. ಸೊಸೆಯ ತಂದೆ ತಾಯಿಗಳನ್ನು ಅತ್ತೆಯು ಮತ್ತು ಗಂಡನು ಪರೋಕ್ಷವಾಗಿ ಪ್ರತ್ಯಕ್ಷವಾಗಿ ಬಯ್ಯುವುದು, ಆದರೆ ಇದರಿಂದ ಅತ್ತೆ ಮತ್ತು ಸೊಸೆ ಇಬ್ಬರು ಅವರಿಬ್ಬರ ನಡುವಿನ ಬಿಕ್ಕಟ್ಟಿಗೆ ಕಾರಣವಾಗುತ್ತದೆ. ಮಾತು ಮಾತಿಗೆ ಸೊಸೆಯ ತವರು ಮನೆಯವರನ್ನು ಟೀಕಿಸುತ್ತಾ, ಹಂಗಿಸುತ್ತಾ ಹೋಗುವುದು ಸರಿಯಲ್ಲ. ಸೊಸೆಯ ಉಡುಗೆ-ತೊಡುಗೆ, ಅವಳು ಮಾಡುವ ಅಡುಗೆ, ಅವಳ ನಡೆ-ನುಡಿ, ಮದುವೆಯಲ್ಲಿ ಕೊಟ್ಟ ವರದಕ್ಷಿಣೆ ಹೀಗೆ ಒಂದಲ್ಲ ಒಂದು ನೆಪಮಾಡಿಕೊಂಡು ಅತ್ತೆ ವ್ಯಂಗ್ಯವಾಗಿ ಸೊಸೆಯ ಮನಸ್ಸಿಗೆ ಚುಚ್ಚುವುದು ಕಂಡುಬರುತ್ತದೆ. ಹೊಸದಾಗಿ ಬಂದ ಸೊಸೆಯ ಕೋಮಲ ಮನಸ್ಸಿಗೆ ಆಘಾತವಾಗುವುದಿಲ್ಲವೆ? ಆರಂಭದಲ್ಲಿ ಆಕೆ ಎಲ್ಲವನ್ನು ಸಹಿಸಿಕೊಳ್ಳುತ್ತಾಳೆ. ಆ ನಂತರ ಆಕೆಯ ಬಾಯಿ ಮುಚ್ಚಿ ಕುಳಿತುಕೊಳ್ಳುವುದಿಲ್ಲ. ಆಕೆ ಅತ್ತೆಗೆ ಎದುರು ಉತ್ತರ ಕೊಡಲಾರಂಭಿಸುತ್ತಾಳೆ. ಇದು ಜಗಳಕ್ಕೆ ನಾಂದಿಯಾಗುತ್ತದೆ. ಈ ರೀತಿಯ ಜಗಳದಿಂದ ಮನೆಯ ಶಾಂತಿಯು ಹಾಳಾಗುತ್ತದೆ. ಗಂಡನ ಜೊತೆಗೆ ಬೇರೆ ಮನೆ ಮಾಡಿಕೊಳ್ಳುವುದರಲ್ಲಿ ಮುಂದಾಗುತ್ತಾಳೆ. ಮಗ ಮನೆಗೆ ಸರಿಯಾಗಿ ಹೊಂದಿಕೊಳ್ಳದಿದ್ದರೆ ಬೇರೆ ಮನೆ ಮಾಡಲು ಸಿದ್ಧನಾಗುತ್ತಾನೆ.

ಕುಟುಂಬಕ್ಕೆ ಕೆಟ್ಟ ಹೆಸರು ಬರುತ್ತದೆಂಬುದನ್ನು ಮರೆಯಕೂಡದು. ಜೊತೆಗೆ ಅತಿಮುಖ್ಯವಾದ ವಿಷಯವೆಂದರೆ ನಿಮ್ಮ ಮಗಳು ಬೇರೆ ಮನೆಯ ಸೊಸೆಯಾಗಿ ಹೋಗುತ್ತಾಳೆಂಬುದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇದೇ ರೀತಿ ಪ್ರತಿಯೊಬ್ಬ ಕುಟುಂಬದ ಮಹಿಳೆಯರು ಅಥವಾ ಸಮಾಜವು ಅರಿಯಬೇಕಾಗಿದೆ. ಆದರಿಂದ ಮಹಿಳೆಯರಿಗೆ ಅಜ್ಞಾನದಿಂದ ಜ್ಞಾನದ ಕಡೆಗೆ ಬರಲು ಶಿಕ್ಷಣ, ಸಹಕಾರ, ಮನಸ್ಸಿನಲ್ಲಿರುವ ಭಾವನೆಗಳಿಗೆ ತಿಳಿ ಹೇಳುವ ಸಂಘ ಸಂಸ್ಥೆಗಳು ಕೆಲಸ ಮಾಡ ಬೇಕಾಗುತ್ತದೆ.

"ಹೆಣ್ಣು ಹುಟ್ಟಿದರೆ ಹೆಗ್ಗಣ ಹುಟ್ಟಿದ್ಹಾಂಗ ಎನ್ನುವ ಒಂದು ಜನಪದ ಮಾತು ಹೆಣ್ಣಿನ ಆಗಮನವು ಎಷ್ಟೊಂದು ಅಹಿತಕರ ಎಂದು ತೋರಿಸುತ್ತದೆ. ಈ ಹೆಣ್ಣು ಹುಟ್ಟಿ ಬೆಳೆದು ದೊಡ್ಡವಳಾದಾಗ ಇವಳನ್ನು ವಿವಾಹವಾಗುವವನಿಗೆ ವಿವಾಹದ ಸಮಯದಲ್ಲಿ ವರದಕ್ಷಿಣೆಯನ್ನು ನೀಡಬೇಕಷ್ಟೇ ಅಲ್ಲ. ಗಂಡನ/ಆತನ ಮನೆಯವರ ಬೇಡಿಕೆಗಳನ್ನು ಹೊತ್ತು ಪದೇ ಪದೇ ಈ ಮಗಳು ತಾಯಿಯ ಮನೆಗೆ ಬರುತ್ತಾಳೆ. ಈ ಪರಿಸ್ಥಿತಿಯನ್ನು ತಪ್ಪಿಸುವುದು ಹೇಗೆ ಎಂದು ಯೋಚಿಸುತ್ತಿದ್ದವರಿಗೆ ಭ್ರೂಣ ಪರೀಕ್ಷೆಯನ್ನು ಸಾಧ್ಯವಾಗಿಸಿದಂಥ ಅಮಿನಿಯೋಸೆಂಟಸಿಸ್/ಸ್ಕ್ಯಾನಿಂಗ್ ವಿಧಾನಗಳು ವರವಾಗಿ ಪರಿಣಮಿಸಿದವು. ಈ ಹೆಣ್ಣು ಇದ್ದರೆ ತಾನೆ ಅವಳು ನಮಗೆ ಭಾರವಾಗುವುದು, ಅವಳನ್ನು ಜನಿಸುವ ಮುನ್ನವೆ ಚಿವುಟಿ ಬಿಟ್ಟರೆ ಈ ತೊಂದರೆಯೇ ಇರುವುದಿಲ್ಲ ಎಂದು ವಾದ ಮಾಡುವ ಪೋಷಕರು ತಮ್ಮ ದುಷ್ಕೃತ್ಯವನ್ನು ಸಮರ್ಥಿಸಿಕೊಳ್ಳುತ್ತಾರೆ".[೩] ಈ ಸಮುದಾಯದಲ್ಲಿಯೂ ಉತ್ತಮ ಸ್ಥಿತಿಯಲ್ಲಿರುವವರು ಮಾತ್ರ ಈ ರೀತಿಯಿಂದ ಪರೀಕ್ಷೆಗೆ ಒಳಗಾಗುವುದು. ಆದರೆ ದುಡಿದು ತಿನ್ನುವವರಿಗೆ ಇದರ ಬಗ್ಗೆ ಅರಿವೇ ಇರುವುದಿಲ್ಲ. ಯಾವುದೇ ಮಗು ಆಗಲಿ ಅವರನ್ನು ಸಾಕಿ ಬೆಳೆಸುವುದೇ ಒಂದು ದೊಡ್ಡ ಕೆಲಸವಾಗಿರುತ್ತದೆ. ಅದೇ ಜೀವನದ ಕರ್ತವ್ಯ ಎಂದು ಸುಮ್ಮನಿರುತ್ತಾರೆ.

ಕುಟುಂಬದಲ್ಲಿ ಮಹಿಳೆಯರು ತಮ್ಮ ಜವಾಬ್ದಾರಿಗಳನ್ನು ಎಷ್ಟೇ ಕಷ್ಟವಾದರೂ ಸಹ ನಡೆಸಿಕೊಂಡು ಹೋಗುತ್ತಾರೆ. ಮಾತಿಗೆ ಮಾತು ಬಂದು ಗಂಡಂದಿರಿಗೆ ಎದುರು ಮಾತನಾಡಿದರೂ ಸಹ 'ಮನೆಯ ಜವಾಬ್ದಾರಿಯ ಬಗ್ಗೆ ನನಗೂ ಗೊತ್ತಿದೆ ಸುಮ್ಮನೆ ಇರು' ಎಂದು ಹೇಳುತ್ತಾನೆ. ಕೊರವರ ಮನೆಯಲ್ಲಿ ಉದ್ಭವಿಸುವ ಕಷ್ಟಗಳ ಬಗ್ಗೆ ಮಹಿಳೆಗೆ ತಿಳಿದಷ್ಟು ಗಂಡನಿಗೆ ತಿಳಿಯುವುದಿಲ್ಲ. ಇನ್ನೊಂದು ಮದುವೆಯಾದ ಮಹಿಳೆಯು ತವರು ಮನೆಯಲ್ಲಿರುವ ಸಹೋದರರೂ ಸಹಾಯ ಸಹಕಾರದಿಂದ ಗಂಡನಿಗೆ ಬೇಜವಾಬ್ದಾರಿಯು ಬೆಳೆಯುತ್ತದೆ. ಏನಾದರೂ ಅವರು ನೋಡಿಕೊಳ್ಳುತ್ತಾರಲ್ಲ ಎಂದು ಅವಳನ್ನು ಹಿಂಸಿಸುವುದರಲ್ಲಿ ಕಾಲ ಕಳೆಯುತ್ತಾರೆ. ಪದೇಪದೇ ತವರಿನ ಮನೆಯವರು ನೋಡಿ ಕೊಳ್ಳುವುದರಿಂದ ಈ ರೀತಿ ಮಾಡುತ್ತಾರೆ. ಆದರೆ ಎಲ್ಲಿಯವರೆಗೆ ನೋಡಿಕೊಳ್ಳುತ್ತಾರೆ ಎಂಬುದು ಗಂಡನಿಗೆ ತಿಳಿದಿರಬೇಕು. ಇದರಿಂದ ಮಹಿಳೆಯು ಸಹ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇಂದಿನ ಆರ್ಥಿಕ ಬಿಕ್ಕಟ್ಟಿನಿಂದ ಬೆಲೆಗಳು ಗಗನಕ್ಕೆ ಹೋಗಿವೆ. ಬಡವರಿಗೆ ಸಂಸಾರ ನಿಭಾಯಿಸುವುದೇ ಕಷ್ಟವಾಗುತ್ತದೆ. ಇದರಿಂದ ಗಂಡನಾದವನು ತಿಳಿದುಕೊಳ್ಳಬೇಕು. ಇಲ್ಲವಾದರೆ ಗಂಡಸಿನ ಅಹಂಕಾರ, ಅಸಹಾಯಕತೆಯು ಹಾಗೆ ಮುಂದುವರೆಯುವುದರಲ್ಲಿ ಸಂಶಯವಿಲ್ಲ. ಮನೆಯಲ್ಲಿರುವ ಮಕ್ಕಳ

ಗ್ರಹಿಕಾಶಕ್ತಿ ಬೆಳೆಯುತ್ತಾ ಹೋದಂತೆಲ್ಲಾ ಆ ಮಗುವಿಗೆ ಸ್ತ್ರೀ-ಪುರುಷರ ಸ್ಥಾನಮಾನದ ಜವಾಬ್ದಾರಿಗಳು ಅವರನ್ನು ಕುರಿತ ಧೋರಣೆಗಳು ಇವುಗಳ ಬಗ್ಗೆ ಕುಟುಂಬದ ಸದಸ್ಯರಿಂದ ಅರಿತುಕೊಳ್ಳುತ್ತಾ ಹೋಗುತ್ತದೆ. ಅಲ್ಲಿಂದಲೇ ಹೆಣ್ಣು ಗಂಡು ಮಕ್ಕಳನ್ನು ಕುಟುಂಬದಲ್ಲಿ ನಡೆಸಿಕೊಳ್ಳುವ ರೀತಿಯಿಂದ ಲಿಂಗ ಪೂರ್ವಗ್ರಹಗಳು ಮತ್ತು ಲಿಂಗ ತಾರತಮ್ಯದ ಸಮಾನತೆಯ ತತ್ವಗಳು ಇವುಗಳೆರಡನ್ನು ಕುಟುಂಬದಲ್ಲಿಯೇ ವ್ಯಕ್ತಿಗಳು ಕಲಿಯುವುದುಂಟು.

ಸ್ತ್ರೀ ದೃಷ್ಟಿಯಲ್ಲಿ ಸಂಬಂಧಗಳು ಬರೀ ಸಂಬಂಧಗಳಲ್ಲ. ಅವು ಭಾವನೆ, ಕಲ್ಪನೆ, ಕನಸು, ಮನಸು, ಮುನಿಸು ತುಂಬಿದ ವಸ್ತುಗಳು. ಭೂತವನ್ನು ಮೆಲುಕು ಹಾಕುವ ವರ್ತಮಾನದಲ್ಲಿರುವ ಭವಿಷ್ಯದ ಬೇರುಗಳು, ಬಿಳಲುಗಳು. ತಂದೆ, ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿಯರಂಥ ಪ್ರಾಥಮಿಕ ಸಂಬಂಧಗಳಲ್ಲದೆ ತಾಯಿ ಮನೆಯ ಕಡೆಗೆ, ತಂದೆ ಕಡೆಯ ಸಂಬಂಧಿಕರು, ಮದುವೆಯಾದ ಪತಿ ಅತ್ತೆ, ಮಾವ, ಭಾವ, ಮೈದುನ, ನಾದಿನಿಯರು ಅವರ ಕುಟುಂಬ ಇಷ್ಟೇ ಅಲ್ಲ, ನೆರೆಹೊರೆಯವರು, ಸಹಪಾಠಿ, ಸಹೋದ್ಯೋಗಿಗಳು ಎಷ್ಟೊಂದು ಸಂಬಂಧಗಳು ಅವಳ ಸಂಬಂಧಗಳಾಗಿರುತ್ತವೆ. ಉಳಿದೆಲ್ಲ ಬಂಧುಗಳಿಗಿಂತ ವಿವಾಹ ಬಂಧನ, ಪತಿ ಮನೆಯೊಡನೆ ಅವಳ ಸಂಬಂಧ ಪ್ರಾಮುಖ್ಯ ಹಾಗೂ ಪ್ರಾಧಾನ್ಯಗಳು ಅನಿಸಿಬಿಡುತ್ತವೆ. ತಾನು ಬೆಳೆದ ಪರಿಸರಕ್ಕಿಂತ ಭಿನ್ನವಾದ ಪತಿಯ ಮನೆಯ ಪರಿಸರ, ಸಂಪ್ರದಾಯ, ರೀತಿ ರಿವಾಜುಗಳಿಗೆ ಹೊಂದಿಕೊಳ್ಳುತ್ತಲೆ, ಮನೆಯವರೆಲ್ಲರ ಪ್ರೀತಿ ಗಳಿಸಲು, ಆ ಮೂಲಕ ಪತಿಯ ಮನ ಗೆಲ್ಲಲು ಯತ್ನಿಸುವ ಪ್ರಬುದ್ಧ ತಿಳುವಳಿಕೆ ಅವಳಿಗಿರುತ್ತದೆ. ತನ್ನ ತವರಿನಲ್ಲಿ ಅವಳು ಎಲ್ಲರ ಮುದ್ದಿನ ಮಗಳು, ಅಷ್ಟೇನೂ ಆಳವಾಗಿ ಏನನ್ನೂ ಯೋಚಿಸದೆ ಯಾವ ಘನ ಜವಾಬ್ದಾರಿಯನ್ನು ಹೊರಲಾಗದ ಕೂಸು. ಆದರೆ ಇಲ್ಲಿ ಪತ್ನಿ, ಸೊಸೆ, ಅತ್ತಿಗೆ, ತಾಯಿ ಹತ್ತು ಹಲವಾರು ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸಬೇಕಾದ ಅನಿವಾರ್ಯ ಜವಾಬ್ದಾರಿ, ಇತ್ತ ತವರನ್ನು ಮರೆಯಲಾಗದ, ಇತ್ತ ತನ್ನ ಪತಿಯ ಮನೆಯನ್ನು ಬಿಟ್ಟುಕೊಡಲಾಗದ ಉಭಯ ಸಂಕಷ್ಟವನ್ನು ಅನುಭವಿಸುತ್ತಿರುತ್ತಾಳೆ. ಎರಡೂ ಮನೆಯ ನೆಮ್ಮದಿಗಾಗಿ ಇವರಿಂದ ದೊರೆಯುವ ಪ್ರೀತಿಗಾಗಿ ಹಂಬಲಿಸುವ ಭಾವಜೀವಿ ಮಹಿಳೆ. ಮದುವೆಯಾದ ತಕ್ಷಣ ಹೆಣ್ಣಿನ ಪ್ರೀತಿ ಪಾತ್ರದ ಪಟ್ಟಿಯಲ್ಲಿ ಪತಿ ಮೊದಲ ಸ್ಥಾನಕ್ಕೇರುತ್ತಾನೆ. ಪತಿಯ ಪ್ರೀತಿಯೇ ಪತ್ನಿಯ ಭವಿಷ್ಯ ಮತ್ತು ಭದ್ರತೆ ಎಂಬ ಬುದ್ಧಿ ಮಾತುಗಳ ಹೊರೆ ಹೊತ್ತುಕೊಂಡ ಆಕೆ ಅತ್ತೆಯ ಮನೆಗೆ ಪ್ರವೇಶಿಸುತ್ತಾಳೆ. ಅಲ್ಲಿಂದ ಪತಿಯ ಪ್ರೀತಿ ಗಳಿಸುವ, ಗಳಿಸಿದ ಮೇಲೆ ಉಳಿಸುವ ಪತಿವ್ರತೆಯ ಪಾತ್ರ ನಿರ್ವಹಣೆಯ ಒದ್ದಾಟ ಪ್ರಾರಂಭ ವಾಗುತ್ತದೆ.

ಮಹಿಳೆಯು ತನ್ನ ಗಂಡನ ಜೊತೆಯಲ್ಲಿಯೇ ಇರಬೇಕು. ಆದರೆ ತಮ್ಮ ಮನೆಯವರೊಂದಿಗೆ ಜಾಸ್ತಿ ಬೆರೆಯುವುದಿಲ್ಲ. ಇನ್ನು ಕೆಲವು ಗಂಡುಮಕ್ಕಳು ತಮ್ಮ ಹೆಂಡತಿಯ ಮನೆಯವರನ್ನು ವಿನಾಕಾರಣ ದೂಷಿಸುತ್ತಾರೆ. ಇದಕ್ಕೆಲ್ಲ ಕಾರಣ ಮದುವೆ ಸಂದರ್ಭಗಳಲ್ಲಿ ಇವರು ಕೇಳಿದಷ್ಟು ಹಣ ನೀಡದಿದ್ದ ಸಂದರ್ಭಗಳಲ್ಲಿ ಅಥವಾ ತವರು ಮನೆಯವರು ಸರಿಯಾದ ಮರ್ಯಾದೆ ಕೊಡುವುದಿಲ್ಲವೆಂದೂ ಹೆಂಡತಿಯನ್ನು ತವರು ಮನೆಗೆ ಕಳುಹಿಸಲು ಇಷ್ಟಪಡುವುದಿಲ್ಲ. ಗಂಡ ಹೇಳಿದ ದಿನ ಹೆಂಡತಿ

ಮನೆಗೆ ವಾಪಸ್ಸು ಬರಬೇಕು. ತಡವಾದರೆ ಕದನ ಪ್ರಾರಂಭವಾಗುತ್ತದೆ. 'ಅಲ್ಲಿಯೇ ಇರಬೇಕಿತ್ತು, ಇಲ್ಲಿಗೆ ಏಕೆ ಬಂದೆ' ಎಂದೆಲ್ಲ ಹೇಳುತ್ತಾನೆ. ಕೇಳ ಹೋದರೂ ಸಹ ಯಾವುದೋ ಒಂದು ವಿಚಾರಗಳಲ್ಲಿ ಹೆಂಡತಿಯನ್ನು ಬಯ್ಯುವುದು ಅವರಿಗೆ ಸಹಜವಾಗಿರುತ್ತದೆ. ಗಂಡ ಯಾರದೋ ಸಿಟ್ಟನ್ನು ತಂದು ಮನೆಯಲ್ಲಿ ಇರುವ ಹೆಂಡತಿಗೆ ಹಾಕುತ್ತಾನೆ. ತಮಗೆ ಅನುಕೂಲವಾಗುವ ರೀತಿಯಲ್ಲಿ ಮಹಿಳೆಯರನ್ನು ಉಪಯೋಗಿಸಿಕೊಳ್ಳುತ್ತಾರೆ. ಮಹಿಳೆಯರು ಗಂಡನಿಲ್ಲದ ವೇಳೆಯಲ್ಲಿ ಹೆಂಡತಿ ಯಾದವಳು ಒಳ್ಳೆಯ ಅಡಿಗೆ ಮಾಡಿ ಉಣಕೂಡದು ಎನ್ನುವುದು ಸಮಾಜದ ಸಾಮಾನ್ಯ ನಂಬಿಕೆ. ಪುರುಷನ ದುಡಿಮೆಯು ಉತ್ಪಾದನಾ ನೆಲೆಯಲ್ಲಿ ಗುರುತಿಸಲ್ಪಟ್ಟಿದ್ದರಿಂದ ಸುಲಭದ ಕೆಲಸವಾಗಿ ನಿರ್ವಚಿತವಾಗಿದೆ ಎಂಬುದು ತಿಳಿದುಬರುತ್ತದೆ.

ಪ್ರೀತಿ ಪ್ರೇಮ ಸಹಬಾಳ್ವೆಯು ಕುಟುಂಬ ಸಂಕೇತವಾಗಿರುತ್ತದೆ. ಕುಟುಂಬವನ್ನು ನಿರ್ನಾಮ ಮಾಡಲು ಸಂಶಯದ ಪಿಶಾಚಿಯೊಂದೇ ಸಾಕು. ಆದ್ದರಿಂದ ಹೆಚ್ಚು ನಂಬಿಕೆಯಿಂದ ಪತ್ನಿಯನ್ನು ನೋಡಿಕೊಳ್ಳಬೇಕು. ನಿಮ್ಮ ಪತ್ನಿ ತಪ್ಪು ಮಾಡಿದರೂ, ಪರಸ್ಪರ ಅರಿಯಬೇಕು. ಒಬ್ಬರು ಇನ್ನೊಬ್ಬರ ತಪ್ಪನ್ನು ಕ್ಷಮಿಸಿ ಪ್ರೀತಿಯಿಂದ ಜೀವಿಸುವುದೇ ಮಾನವ ಗುಣ. ಮನೆಗೆ ಬಂದ ಅತ್ತೆ, ಮಾವಂದಿರನ್ನು ಪ್ರೀತಿಯಿಂದ ಬರಮಾಡಿಕೊಳ್ಳುವುದರಿಂದ ನಿಮಗೊಂದೆ ಅಲ್ಲ ಇತರರಿಗೂ ಸಂತೋಷವಾಗುವುದು. ಹೆಂಡತಿ ಮಾಡುವ ಒಳ್ಳೆ ಕೆಲಸ ಕಾರ್ಯಗಳಿಗೆ ಮೆಚ್ಚುಗೆ ವ್ಯಕ್ತಪಡಿಸಬೇಕೆ ಹೊರತು ಮದುವೆಯಾಗ ಬೇಕಾಗಿ ಬಂದ ಪರಿಸ್ಥಿತಿ ಅಥವಾ ಕಾರಣಗಳನ್ನು ಹೇಳ ಅವಳನ್ನು ಕೆಣಕುತ್ತಿರಬಾರದು, ನೋಯಿಸ ಬಾರದು. ಹೆಂಡತಿ ಸ್ನೇಹಜೀವಿಯಾದಷ್ಟು ಒಳ್ಳೆಯದು. ಪತ್ನಿಯೊಂದಿಗೆ ಯಾವುದೇ ಮುಚ್ಚುಮರೆಯಿಲ್ಲದೆ ಬಿಚ್ಚು ಮನಸ್ಸಿನವರಾಗಿರಬೇಕು. ಅಂದಾಗ ಮಾತ್ರ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲವಾದರೆ ದಂಪತಿಗಳ ಮಧ್ಯೆ ಮುಕ್ತ ಮನಸ್ಸಿನ ಚರ್ಚೆಗೆ ಅವಕಾಶವಿರುವುದಿಲ್ಲ. ನಿರ್ಬಂಧ, ದ್ವೇಷಗಳು ಮೂಡುತ್ತವೆ. 'ನನ್ನಿಂದ ಇನ್ನು ಮಾಡಲಾಗುವುದಿಲ್ಲ' ಎಂಬ ಭಾವನೆಯಿಂದ ಹೆಣ್ಣು ಕೊರಗುತ್ತಾಳೆ. ಸಂಸಾರವನ್ನು ನಿಭಾಯಿಸಿಕೊಂಡು ಹೋಗಬೇಕಾಗುತ್ತದೆ.

ಪರಸ್ಪರರು ಕಷ್ಟಸುಖಗಳಲ್ಲಿ ಸಮಭಾಗಿಯಾಗುವುದು, ಕುಟುಂಬ ಕೆಲಸಗಳಲ್ಲಿ ಒಬ್ಬರ ಮೇಲೊಬ್ಬರು ಹೇಳುವ ಮೂಲಕ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಬದಲು ಪ್ರತಿಯೊಬ್ಬರೂ ಜವಾಬ್ದಾರಿ ನಿಭಾಯಿಸಲು ಸಿದ್ಧರಾಗಿರುವುದು, ಕುಟುಂಬದಲ್ಲಿ ಯಾವುದೇ ಕಷ್ಟಗಳು ಉಂಟಾದಾಗ ಆರೋಪ, ಪ್ರತ್ಯಾರೋಪ ಬದಲಿಗೆ ಸೂಕ್ತ ಸಲಹೆ ಸೂಚನೆಗಳೊಂದಿಗೆ ಕುಟುಂಬಗಳನ್ನು ಸುಧಾರಿಸಿಕೊಳ್ಳಬೇಕು. ಕುಟುಂಬದಲ್ಲಿ ಊಟ, ಬಟ್ಟೆಬರೆ ಇತ್ಯಾದಿ ವಿಷಯಗಳ ಬಗ್ಗೆ ಸಮಾನ ಆಸಕ್ತಿ ತೋರಿಸಬೇಕು ಮತ್ತು ಇತರರ ಭಾವನೆಗಳನ್ನು ಗೌರವಿಸಬೇಕು. ಕುಟುಂಬದಲ್ಲಿ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಮಕ್ಕಳನ್ನು ಪ್ರೋತ್ಸಾಹಿಸುವುದರ ಮೂಲಕ ಇತರ ಕೌಶಲ್ಯಗಳನ್ನು ಬೆಳೆಸಬೇಕು. ಇಲ್ಲವಾದರೆ ಅವರಲ್ಲಿ ಅಭಿವೃದ್ಧಿ ಅಥವಾ ಮುಂದುವರಿಕೆಯಾಗುವುದಾದರೂ ಯಾವಾಗ ಈ ರೀತಿ ಪ್ರೋತ್ಸಾಹ ಅನುಕೂಲ ಮಾಡಿಕೊಂಡಾಗ ಮಾತ್ರ ಇದು ಸಾಧ್ಯ. ಇಲ್ಲವಾದರೆ ಹಳೆಯ ತಮ್ಮ ಕಸುಬುಗಳ ಜೊತೆ ಆಧುನಿಕತೆಗೆ ಹೊಂದಿಕೊಳ್ಳಬೇಕು, ಇಲ್ಲವಾದರೆ ಅವರು ರೂಢಿಸಿಕೊಂಡ

ಸಂಪ್ರದಾಯದಿಂದ ಸುಧಾರಿಸಲು ಆಗುವುದಿಲ್ಲ. ಸಮಾಜದಲ್ಲಿ ಮಹಿಳೆಯರು ಪಡೆದಿರುವ ಸಾಮಾಜಿಕ ಸ್ಥಾನಮಾನಗಳ ಮೇಲೆ ಪೂರ್ವಗ್ರಹಗಳ ಪ್ರಭಾವ ಬೀರುತ್ತಿರುತ್ತದೆ. ಪುರುಷರ ಆಧಿಪತ್ಯ ಅನೇಕ ಸಂಗತಿಗಳ ಜೊತೆ ಸಂಬಂಧ ಹೊಂದಿರುತ್ತದೆ. ಸಂಪಾದನೆ ಮಾಡುತ್ತಾನೆ ಎಂಬ ಕಾರಣದಿಂದ ಪುರುಷರಿಗೆ ಪ್ರಾಪ್ತವಾಗುವ ಸ್ಥಾನಮಾನ ಹಾಗೂ ಕುಟುಂಬದೊಳಗಿನ ಆರ್ಥಿಕ ಅಧಿಕಾರಗಳು ಇಲ್ಲಿ ತುಂಬಾ ಮುಖ್ಯವಾಗಿ ಕೆಲಸ ಮಾಡುತ್ತಿರುವ ಸಂಗತಿಗಳಾಗಿವೆ. ಇದಕ್ಕೆ ಸಮನಾಂತರವಾಗಿ ಮಹಿಳೆಯೂ ಕೂಡ ದುಡಿಯಬಲ್ಲಳು ಎಂಬುದನ್ನು ತಿಳಿದುಕೊಳ್ಳಲಾಗುವುದಿಲ್ಲ. ಅವರ ದರ್ಪವನ್ನು ತೋರಿಸುತ್ತಾರೆ.

ತನ್ನ ತವರು ಮನೆಯಲ್ಲಿದ್ದಾಗ ಅಥವಾ ವಿವಾಹಕ್ಕಿಂತಲೂ ಮುಂಚೆ ಶಿಕ್ಷಣ, ಉದ್ಯೋಗದ ಬಗ್ಗೆ ಯೋಚಿಸುತ್ತಿರುತ್ತಾಳೆ. ಆದರೆ ಅದೆ ಮದುವೆಯಾಗಿ ಬಂದ ಮೇಲೆ ಅವರು ಹೇಳಿದಂತೆ ಕೇಳಬೇಕಾಗುತ್ತದೆ. ಇಲ್ಲವಾದರೆ ಅವರ ಬದುಕಿನ ರೀತಿಯನ್ನೇ ಬದಲಾಯಿಸಿಕೊಳ್ಳಬೇಕಾಗುತ್ತದೆ. ಕೆಲವರು ಅಳಿಯ ಎನಿಸಿಕೊಂಡ ವ್ಯಕ್ತಿಗೆ ಉದ್ಯೋಗ ಇರದಿದ್ದರೆ, ಉದ್ಯೋಗ ಸಿಗುವವರೆಗೂ, ತಮ್ಮ ಮನೆಯಲ್ಲಿ ಇರಲೆಂದು ಬಯಸುತ್ತಾರೆ. ಕೆಲವರು ತಾವೇ ಉದ್ಯೋಗಕ್ಕೆ ಹಚ್ಚುವ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಇನ್ನು ಕೆಲವರು ತಮಗೆ ಗಂಡು ಸಂತಾನವಿಲ್ಲದ ಕಾರಣ ತಾವು ಮನೆಯ ಅಳಿಯನಾಗಿರಬೇಕು ಎಂದೆಲ್ಲ ಅಭಿಪ್ರಾಯಪಡುತ್ತಾರೆ. ಇನ್ನು ಕೆಲವು ಮಹಿಳೆಯರ ಅಭಿಪ್ರಾಯದಂತೆ ಗಂಡನಾದವನು ಹೆಂಡತಿಯ ಮನೆಯಲ್ಲಿ ಇರುವುದು ಸೂಕ್ತವಲ್ಲ ಎಂದು ಹೇಳುತ್ತಾರೆ. ಕಾರಣ ತನ್ನ ಗಂಡನಿಗೆ ದೊರೆಯುವ ಗೌರವ, ಮರ್ಯಾದೆಗಳಿಗೆ ಧಕ್ಕೆಯುಂಟಾಗುತ್ತದೆ. ನೆರೆಹೊರೆಯರ ಹೇಳಿಕೆಗಳು, ಬಂಧುಗಳ ನಿಂದನೆಗಳು, ಉದಾಸೀನ ಮಾತುಗಳನ್ನು ಎದುರಿಸಬೇಕಾಗುತ್ತದೆ. ಎಷ್ಟೇ ಆದರೂ ಗಂಡನ ಮನೆಯಲ್ಲಿಯೇ ಇದ್ದು ಜೀವನವನ್ನು ನಡೆಸಬೇಕು ಎಂದು ಮಹಿಳೆಯರು ಹೇಳುತ್ತಾರೆ.

ಪುರುಷಪ್ರಧಾನ ಸಮಾಜವಾಗಿರುವುದರಿಂದಾಗಿಯೇ ಇಲ್ಲಿ ರೀತಿ-ನೀತಿಗಳನ್ನು ಮೀರಿ ಬಾಳುವಂತಿಲ್ಲ. ಹಿಂದೆ ತಂದೆ, ಅಣ್ಣ-ತಮ್ಮಂದಿರ ಹೇಳಿಕೆಗಳನ್ನು ಮೀರುತ್ತಿರಲಿಲ್ಲ. ಇಂದಿಗೂ ಕುಟುಂಬಗಳಲ್ಲಿ ಗಂಡನ ಅಪ್ಪಣೆ ಪಡೆಯದೆ ಯಾವುದೇ ಕಾರ್ಯಕ್ಕೂ ಮುಂದಾಗುವಂತಿಲ್ಲ. ಈ ನಿರ್ಬಂಧಗಳ ಚೌಕಟ್ಟಿನಲ್ಲಿಯೇ ಅವಳು ತನ್ನ ಬದುಕು ಸಾಗಿಸುವಂತಾಗಿದೆ. ತನ್ನ ದುಡಿಮೆಯ ಹಣ ತಾನು ಖರ್ಚು ಮಾಡಬೇಕು ಎನ್ನುವ ಮನಸ್ಸು ಅವಳಿಗೆ ಇದ್ದರೂ ಹಣ ಬಳಸುವ ಅಧಿಕಾರವನ್ನು ಅವಳು ಪಡೆದಿರುವುದಿಲ್ಲ. ಇನ್ನು ಕೆಲವೊಬ್ಬರ ಹೇಳಿಕೆಗಳನ್ನು ಗಮನಿಸಿದರೆ ಇವರ ಮೇಲೆ ಸಂಪೂರ್ಣವಾದ ಪುರುಷಪ್ರಧಾನವಾದ ಒತ್ತಡಗಳು ಇರುವುದರಿಂದ ಇವರ ಅಭಿಪ್ರಾಯ ತಮಗೆ ಒಳ್ಳೆಯ ಆಶೀರ್ವಾದ, ಹರಕೆಗಳನ್ನು ನೀಡಿದಂತೆ ಎಂದು ಮಹಿಳೆಯರು ತಿಳಿಯುತ್ತಾರೆ. ಆದರೆ ಈ ಸಮುದಾಯದಲ್ಲಿ ಹೆಚ್ಚಾಗಿ ತಮ್ಮ ಅಣ್ಣನ ಮಗನಿಗೂ ಇಲ್ಲವೆ ತಮ್ಮನಿಗೆ ಮಗಳನ್ನು ಕೊಟ್ಟು ಮದುವೆ ಮಾಡುವುದು ಅಧಿಕವಾಗಿದೆ.

ಮಾನವ ಇಂದು ಪರಿಸರದಿಂದ ಬಹಳ ಉಪಯೋಗ ಪಡೆಯುತ್ತಿದ್ದಾನೆ. ಇದನ್ನು ಮನಗಂಡ ಗಾಂಧೀಜಿಯವರು ಹೀಗೆ ಹೇಳಿದ್ದಾರೆ. "ಅರಣ್ಯ ನಮ್ಮ ಆಸೆಗಳನ್ನು ಈಡೇರಿಸುತ್ತದೆಯೇ, ಹೊರತು ನಮ್ಮ ದುರಾಸೆಗಳನ್ನಲ್ಲ." ನಮ್ಮ ಪೂರ್ವಿಕರು ಪರಿಸರದಲ್ಲಿ ದೊರೆಯುವಂತಹ ಉಪಯುಕ್ತವಾದುದನ್ನು ವೈಜ್ಞಾನಿಕವಾಗಿ ಗುರುತಿಸಿ ಕಾಡನ್ನು ನಾಶದ ಸ್ಥಿತಿಗೆ ತಳ್ಳದೆ ಅದರೊಂದಿಗೆ ಸಂಬಂಧ ಬೆಳೆಸಿಕೊಳ್ಳುತ್ತ ಉಪಯೋಗವಾದುದನ್ನು ತನ್ನ ಶ್ರೇಯೋಭಿವೃದ್ಧಿಗೆ ಬೇಕಾದ್ದನ್ನು ಬಳಸಿಕೊಂಡಿದ್ದಾರೆ. ಅದರಲ್ಲಿ ಗಿಡಮೂಲಿಕೆಯ ಔಷಧೀಯ ಸಸ್ಯಗಳು ಸೇರಿವೆ. ಸಾಮಾನ್ಯವಾಗಿ ಮನುಷ್ಯ ಜೀವಿ ಓಡಾಡಬಲ್ಲ ಸ್ಥಳಗಳಲ್ಲಿ, ಹೊಲಗಳಲ್ಲಿ, ಬೆಟ್ಟಗುಡ್ಡಗಳಲ್ಲಿ ಗಿಡಮೂಲಿಕೆ ಇರುವ ಸಸ್ಯಗಳನ್ನು ಕಂಡುಕೊಂಡು, ಅರೆದು ಸಾಮಾನ್ಯ ರೋಗಗಳಿಗೆ ದಿವ್ಯ ಔಷಧಿಯಾಗಿ ಬಳಸಲ್ಪಡುತ್ತಿದ್ದವು. ಆದರೆ ಇಂದು ಅವುಗಳ ವಹಿವಾಟು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚು, ಮನ್ನಣೆ ಗಳಿಸಿಕೊಳ್ಳುತ್ತಿರುವುದು ಒಂದು ಸೋಜಿಗವೇ ಸರಿ. ಕೆಲವು ಮಹಿಳೆಯರು ಗಿಡಮೂಲಿಕೆಗಳಿಂದ ಈಗಲೂ ಔಷಧಿಯನ್ನು ಕೊಡುತ್ತಾರೆ.

ಇತಿಹಾಸದ ಉದ್ದಕ್ಕೂ ಜನಸಂಖ್ಯೆಯ ಅರ್ಧದಷ್ಟು ಹೆಂಗಸರು ಇದ್ದಾರೆ. ಆದರೆ "ತತ್ವಜ್ಞಾನ, ಸಾಹಿತ್ಯ, ಕಲೆ, ಸಾಮಾಜಿಕ ಹಾಗೂ ಸಾರ್ವಕಾಲಿಕ ಮೌಲ್ಯಗಳು ಎಲ್ಲವೂ ಗಂಡಸಿನ ಮೇಲುಗೈತನಕ್ಕೆ ಸಾಕ್ಷಿಯಾಗಿವೆ. ಹೆಣ್ಣು ಈ ಬಗ್ಗೆ ಏನನ್ನು ಹೇಳುತ್ತಾಳೆ ಎಂಬುದನ್ನು ಕೇಳಿ ಪಡೆಯುವ ತನಗೆ ಈ ಭಾಗಗಳಲ್ಲಿ ಏಕಮುಖ ಹಾಗೂ ಅಪೂರ್ಣ. ಗಂಡಸಿನ ಸುಲಿಗೆಯ ಸಾಧನವಾಗಿ ಹೆಣ್ಣು, ಗಂಡು ಹೇಳುವ ಮೌಲ್ಯಗಳನ್ನೇ ವಿವೇಚನೆಯಿಲ್ಲದೆ, ಗಿಳಿ ಪಾಠವನ್ನು ಒಪ್ಪಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ. ಹೀಗೆ ಮೂಲೆಗುಂಪಾದ ಹೆಂಗಸರು ಜಾನಪದದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಂಡಿರುವುದು ಮಹತ್ವದ ಸಂಗತಿ"(ಕಾಳೇಗೌಡ ನಾಗವಾರ ೧೯೭೬). ಹಾಡು, ಒಗಟುಗಳನ್ನು ಹೇಳುವಾಗ ಗಂಡನ ಹೆಸರಿಲ್ಲದೆ ಅರ್ಧಕ್ಕೆ ನಿಲ್ಲಿಸುತ್ತಾರೆ. ಎಲ್ಲರೂ ಈ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕೆನ್ನುವ 'ಆತ್ಮಸಾಕ್ಷಿ' ಪ್ರಜ್ಞೆಯನ್ನು ಹುಟ್ಟು ಹಾಕುತ್ತಾಳೆ. ಪುರುಷಪ್ರಧಾನ ಮೌಲ್ಯಗಳನ್ನು ಮಹಿಳೆ ಏಕೆ ಒಪ್ಪಿಕೊಂಡಿದ್ದಾಳೆ ಹಾಗೂ ಹೀಗೆ ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯದ ಹಿಂದಿರುವ ಸಾಂಸ್ಕೃತಿಕ ರಾಜಕಾರಣವನ್ನು ಅರ್ಥ ಮಾಡಿಕೊಳ್ಳುವುದರತ್ತ ಮಹಿಳಾ ಜಾನಪದ ಆಸಕ್ತಿ ತೋರಿತು.

"ಸಾಮಾಜಿಕ ಸಂರಕ್ಷಣೆಗಾಗಿ, ಆದರ್ಶಕ್ಕಾಗಿ ನಡೆಯುವ ವ್ಯಕ್ತಿಯ ಸ್ವಯಂಕೃತ ತ್ಯಾಗಗಳು ಈ ಸಮಾಜದ ಪ್ರಶ್ನಾತೀತ ಮೌಲ್ಯಗಳಾಗಿವೆ. ವ್ಯವಸ್ಥೆಯು ವಿಧಿಸಿದ ವಿಧಿ ವಿಧಾನಗಳಿಗೆ ಹೆಣ್ಣು ಬಲಿಯಾದುದಕ್ಕೆ ಕನ್ನಡ ಜನಪದ ಸಾಹಿತ್ಯದಲ್ಲಿ ಹಲವಾರು ಉದಾಹರಣೆಗಳು ನಮಗೆ ದೊರಕುತ್ತವೆ. ಜಾನಪದ ಸ್ತ್ರೀ ಸಂಬಂಧಿ ಧೋರಣೆಗಳಲ್ಲಿ ಬಹುತೇಕವಾಗಿ ಶಿಷ್ಟ ಸಮಾಜದ ಧೋರಣೆಗಳಿಗೆ ಬದ್ಧವಾಗಿರುವುದರಿಂದ ನಿಯಂತ್ರಿತಳಾಗಿದ್ದಾಳೆ. ವ್ಯವಸ್ಥೆಯ ಆಶಯಗಳಿಗೆ ಅನುಕೂಲತೆಗಳಿಗೆ ತನ್ನನ್ನು ತಾನು ಬಲಿಯಾಗಿಸಿಕೊಳ್ಳುವುದರಲ್ಲಿಯೇ ಸುಖವನ್ನು ಅನುಭವಿಸಿದ್ದಾಳೆ. ಕೌಟುಂಬಿಕ ನೆಮ್ಮದಿಗಾಗಿ ಸಮಷ್ಟಿಯ ಒಳಿತಿಗಾಗಿ ನಿರಂತರವಾಗಿ ಹೆಣಗಾಡುತ್ತಾ ಆಕೆಯ ಅವ್ಯಕ್ತ ಬೇಗುದಿಗಳು ಸುಖದ ಕನಸುಗಳು ಸ್ತ್ರೀ ನಿರ್ಮಿತ ಮತ್ತು ಸ್ತ್ರೀ ಕೇಂದ್ರಿತ ಜನಪದ ಸಾಹಿತ್ಯದಲ್ಲಿ ನಿರೂಪಿತವಾಗಿದೆ".[೪] ಅದರಲ್ಲಿ ಸ್ತ್ರೀಯು ತಮ್ಮ ನೋವು, ನಲಿವುಗಳನ್ನು ಪ್ರತಿನಿಧಿಸುತ್ತಾಳೆ. ಏಕೆಂದರೆ ಸಂಸ್ಕೃತಿ ಹೇಳುವಂತೆ

ಅವಳು ಯಾರ ಎದುರು ಸಹ ಮಾತನಾಡಬಾರದು. ತಗ್ಗಿ ಬಗ್ಗಿ ನಡೆಯುವುದು ಒಳಿತು ಎಂದು ಹೇಳುತ್ತದೆ.

ಮೂಲತಃ ಪ್ರಾಚೀನ ಭಾರತೀಯರೆಲ್ಲರದೂ ಅವಿಭಕ್ತ ಕುಟುಂಬ ಜೀವನ ಕ್ರಮವೇ. ಒಂದೊಂದು ಕುಟುಂಬವೂ ಸಾಕಷ್ಟು ದೊಡ್ಡದಾಗಿರುತ್ತಿದ್ದು, ಅದರಲ್ಲಿ ಮುತ್ತಜ್ಜ ಅಜ್ಜಿಯರಿಂದ ಹಿಡಿದು ಮೊಮ್ಮಕ್ಕಳು, ಮರಿಮೊಮ್ಮಕ್ಕಳವರೆಗೆ ನಲವತ್ತಕ್ಕೂ ಹೆಚ್ಚು ಮಂದಿ ಒಂದೇ ಕಡೆ, ಒಬ್ಬನೇ ಯಜಮಾನನ ಅಧಿಕಾರದಲ್ಲಿ ಅನ್ಯೋನ್ಯವಾಗಿ ಬಾಳುವ ವಿಧಾನವಿತ್ತು. ೪೦-೫೦ ವರ್ಷಗಳ ಕೆಳಗೆ ಕೊರವರ ಸಮುದಾಯದಲ್ಲಿಯೂ ಇಂತಹ ಕುಟುಂಬಗಳು ಇದ್ದವು. ನಾಗರಿಕತೆಯ ಪ್ರಭಾವದಿಂದಾಗಿ ತಮ್ಮ ತಮ್ಮ ಕುಟುಂಬಗಳನ್ನು ಮಾಡಿಕೊಂಡು ಬೇರೆಯಾಗಿಯೇ ಬಾಳುತ್ತಿದ್ದರೆ, ಇದರಿಂದ ಅನೇಕ ಕಷ್ಟಗಳನ್ನು ಎದುರಿಸುತ್ತಿದ್ದಾರೆ, 'ಕೂಡಿ ಬಾಳದರೆ ಕೋಟಿ ಸುಖ' ಎಂಬ ಮಾತು ಮಹತ್ವವಾಗಿ ಕಂಡುಬರುತ್ತದೆ.

ತಮ್ಮ ಗಂಡಂದಿರ ಹೆಸರು ಹೇಳಲು ಈಗಲೂ ನಾಚಿ ನೀರಾಗುವ, ಮದುವೆಯಾದ ನಾಲ್ಕೈದು ವರ್ಷವಾದ ಮೇಲೆ ಕೂಡ ಗಂಡನ ಜೊತೆ ಬೀದಿಯಲ್ಲಿ ನಿಂತು ಮಾತನಾಡದಿರುವಂಥ ಮುಗ್ಧೆಯರು ಈಗ ಮುದುಕಿಯರಾಗಿ ಮನೆಗೊಬ್ಬರಾದರೂ ಇರುತ್ತಾರೆ. ಇವರಲ್ಲಿ ಮಾನಮರ್ಯಾದೆಯ ಪ್ರಜ್ಞೆ ಸದಾ ಜಾಗೃತವಾಗಿರುತ್ತದೆ. ಇವರು ದಾರಿ ತಪ್ಪಿ, ನೀತಿಗೆಟ್ಟು ಹೋಗುವ ಜನರನ್ನು ಆಯಾ ಕುಟುಂಬದವರು ಸಮುದಾಯದ ಊರಿನ ಎಲ್ಲರೂ ತಿದ್ದಿ ಬುದ್ದಿ ಹೇಳಿ ಛೀಮಾರಿ ಹಾಕುತ್ತಾರೆ. ನೆರೆಹೊರೆಯವರು ತಿದ್ದಿ ಬುದ್ದಿ ಹೇಳುತ್ತಾರೆ. ಊರಿಗೆ ಬಂದವಳು ನೀರಿಗೆ ಬಾರದೆ ಹೋದಾಳೆ? ಎಂಬ ಮಾತು, ಮದುವೆಯಾಗಿ ಬಂದ ಮಹಿಳೆಯ ಮನೆಯಲ್ಲಿಯೇ ಇರದೆ ನೀರಿಗೆ, ವ್ಯವಹಾರಕ್ಕೆ ಹೋಗಬೇಕಾಗುತ್ತದೆ. ಆವಾಗ ಅವಳ ನಯ-ವಿನಯ, ಬುದ್ಧಿ ನೋಡಿ ಜನರು ಮಾತನಾಡಿಕೊಳ್ಳುತ್ತಾರೆ.

ಸಣ್ಣದಿರಲಿ, ದೊಡ್ಡದಾಗಿರಲಿ ಒಂದು ಕುಟುಂಬ ಮೇಲೆ ಯಜಮಾನ, ಯಜಮಾನಿಯರು ಇದ್ದೇ ಇರುತ್ತದೆ. ಮನೆಯ ಹೊರಗಿನ ವ್ಯವಹಾರಗಳಲ್ಲಿ ಮನೆಯ ಒಡೆಯ ಪಾರುಪತ್ಯ ನಡೆಸಿದರೆ, ಮನೆಯೊಳಗಡೆ ಅವಳ ಹೆಂಡತಿಯದೇ ಯಜಮಾನಿಕೆಯಾಗಿರುತ್ತದೆ.

"ಮಹಿಳೆಗೆ ನಿಸರ್ಗ ನೀಡಿದ ವಿಶಿಷ್ಟ ಕೊಡುಗೆಯೆಂದರೆ ಫಲವಂತಿಕೆ. ಆಕೆಗೆ ಸಮಾಜದಲ್ಲಿ ಸ್ಥಾನಮಾನವೇನಾದರೂ ದೊರೆತಿದ್ದರೆ ಅದು ಈ ಕಾರಣದಿಂದಾಗಿಯೇ ಎಂಬುದು ವಿಧಿತ. ಫಲವಂತಿಕೆಯಿಂದಾಗಿ ಹೆಣ್ಣನ್ನು ನಿಸರ್ಗದೊಂದಿಗೆ ಹೋಲಿಸುವುದಿದೆ. ಹೆಣ್ಣಿನ ಗರ್ಭಧಾರಣ ಶಕ್ತಿಗೂ ಭೂಮಿಯ ಸಸ್ಯಧಾರಣ ಶಕ್ತಿಗೂ ಸಂಬಂಧ ಕಲ್ಪಿಸುವುದು ಕೂಡ ವಿರಳವೇನಲ್ಲ. ಇಲ್ಲಿ 'ಗದ್ದೆಗೆ ಹಸಿರು ಚಂದ ಹೆಣ್ಣಿಗೆ ಬಸಿರು ಚಂದ' ಎಂಬ ಗಾದೆ ಮಾತು ನೆನಪಿಗೆ ತಂದುಕೊಳ್ಳಬಹುದು. ಫಲ ಬಿಡುವ ವೃಕ್ಷಕ್ಕೆ ಹೆಣ್ಣನ್ನು ಹೋಲಿಸುವುದು. ಆಕೆಯ ಫಲವಂತಿಕೆಯ ಕುರುಹು. ಜನಪದರು ತಮ್ಮ ಅನುಭವದಿಂದ ಹೆಣ್ಣಿನ ಸೃಷ್ಟಿಶಕ್ತಿಯನ್ನು ಗುರುತಿಸಿದ್ದರು. ಆದುದರಿಂದಲೇ ಋತುಮತಿ, ವಿವಾಹ, ಗರ್ಭಧಾರಣೆಯಂಥ ಸಂದರ್ಭದಲ್ಲಿ ಕೆಲವೊಂದು ಆಚರಣೆಗಳನ್ನು ರೂಢಿಗೊಳಿಸಿ, ಇವುಗಳಿಗೆ ತಮ್ಮದೇ ಆದ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಈ ಮೂರು ಅವಸ್ಥೆಯನ್ನು ಜನರುಗಳಿಗೆ ಚಮತ್ಕಾರವಾಗಿ

ಹೇಳುವುದುಂಟು. ಉದಾಹರಣೆಗೆ ಕುಂತಾಗ ಬರಬ್ಯಾಡ, ನಿಂತಾಗ ಬರಬ್ಯಾಡ, ಮಲಗಿದಾಗ ಬರಬ್ಯಾಡ ಎಂದೂ ಈ ಮೂರು ಸಂದರ್ಭ ಯಾವಾಗ ಎಂದು ವಿನೋದಕ್ಕಾಗಿ ಪ್ರಶ್ನಿಸಿದರೂ ಇದು ಹೆಣ್ಣಿನ ಈ ಮಜಲುಗಳನ್ನು ಎಷ್ಟು ಸೂಕ್ಷ್ಮವಾಗಿ ಗಮನಿಸಿದ್ದರೆಂಬುದಕ್ಕೆ ನಿದರ್ಶನ".[೫]

ಇಲ್ಲಿ ಕುಂತಾಗ ಬರಬ್ಯಾಡ ಎಂದರೆ ಹೆಣ್ಣು ಋತುಮತಿಯಾಗಿ ಹೊರಗೆ ಕುಳಿತುಕೊಳ್ಳುವುದನ್ನು, ನಿಂತಾಗ ಬರಬ್ಯಾಡ ಎಂದರೆ ಹೆಣ್ಣು ಗರ್ಭ ಧರಿಸಿದಾಗ, ಗರ್ಭಿಣಿ ಎಂಬ ಸೂಚನೆ, ಮಲಗಿದಾಗ ಬರಬ್ಯಾಡ ಎಂದರೆ ಹೆಣ್ಣು ಮಗುವಿಗೆ ಜನ್ಮ ನೀಡಿದಾಗ ಬಾಣಂತಿಯಾಗಿದ್ದ ಸ್ಥಿತಿಯನ್ನು ನೋಡಿ ಹೇಳಲಾಗಿದೆ. ಹೆಣ್ಣು ಫಲವತಿಯಾಗಲು, ಬೇಡದ ಬಸಿರನ್ನು ಕಳೆಯಲು ಜನಪದರು ಅನೇಕ ಬಗೆಯ ಚಿಕಿತ್ಸೆಗಳನ್ನು ನಿಸರ್ಗದಿಂದಲೇ ಕಂಡುಕೊಂಡಿದ್ದರು. ಇಂದಿಗೂ ಹಳ್ಳಿಗಳಲ್ಲಿ ಸಂತಾನ ವಿಲ್ಲದವರಿಗೆ ನಾಟಿ ಔಷಧಿ ನೀಡುವುದುಂಟು. ಮಕ್ಕಳು ಬೇಡ ಎಂದು ಔಷಧಿ ತೆಗೆದುಕೊಂಡವರು ವಿಫಲವಾಗಿರುವುದು ಉಂಟು. ಇಂಥ ಪ್ರಯತ್ನಗಳು ಸಫಲವಾಗಿರುವ ಪ್ರಕರಣಗಳೂ ಇವೆ. ವಿಫಲರಾದವರು ಈ ರೀತಿ ಶಿವನಿಗೆ ಮೊರೆಹೋಗುತ್ತಾರೆ.

"ಕಂಡ ಕಂಡ ಕಲ್ಲಿಗೆಲ್ಲ ಕೈ ಮುಗಿದಾಯ್ತು
ತಿನ್ನಬಾರದ ಮದ್ದೆಲ್ಲ ತಿಂದಾಯ್ತು
ಮಾಡಬಾರದ ಮಾಟ ಮಾಡಿದ್ದಾಯ್ತು
ಆದರೂ ಶಿವ ಒಂದು ಸಂತಾನ ಕೊಡಲಿಲ್ಲ"[೬]

ಎಂದು ಬೇಡಿಕೊಳ್ಳುತ್ತಾರೆ. ಉದಾಹರಣೆಗೆ ಒಬ್ಬಳು ಹೆಣ್ಣು ತನಗೆ ಮಗು ಬೇಡ ಎಂದು ಮದ್ದು ತೆಗೆದುಕೊಂಡು ಸಫಲವಾದವರುಂಟು. ಇನ್ನು ಕೆಲವರು ಬೇಡವಾದ ಮಗುವನ್ನು ತೆಗೆಸಿಕೊಳ್ಳಲು ಮದ್ದು ತೆಗೆದುಕೊಂಡರೂ, ಅವರಿಗೆ ೫ ವರ್ಷಗಳ ನಂತರ ಮಗು ಆಗಿದೆ. ಇನ್ನೊಬ್ಬರು ಮದ್ದು ತೆಗೆದುಕೊಂಡು ಇಲ್ಲಿಯವರೆಗೆಯೂ ಅವರಿಗೆ ಮಗು ಆಗಿಲ್ಲ ಎಂದು ಹೇಳುವುದುಂಟು.

ವಿವಾಹದಂತಹ ಸಂಸ್ಥೆಯನ್ನು ಸೃಷ್ಟಿಸಿಕೊಂಡು ಕುಟುಂಬಗಳು ಪರಸ್ಪರ ಕೊಡುಕೊಳ್ಳುವುದರಲ್ಲಿ ಸಮಾಜಗಳು ಬೆಳೆದು ಬಹುರೂಪಗಳಲ್ಲಿ ವಿಸ್ತರಿಸಿದವು. ನಿರಂತರವಾಗಿ ನಡೆಯುತ್ತಲೇ ಹೋಗುವ ಈ ಬೆಳವಣಿಗೆ ಹಲವು ರೂಪಗಳಲ್ಲಿ ಕುಟುಂಬಗಳ ಹಾಗೂ ಅಲ್ಲಿನ ಸದಸ್ಯರ ಸ್ಥಿತಿಗತಿಗಳಲ್ಲಿ ಬದಲಾವಣೆಗಳನ್ನು ತರುತ್ತಲೇ ಇರುತ್ತದೆ. ಬರುಬರುತ್ತ ಇಡೀ ಪ್ರಪಂಚದ ಆಗುಹೋಗುಗಳಾಗುವುದನ್ನು ನಮಗೆ ಸಂಬಂಧವಿಲ್ಲದ್ದು ಎಂದು ಪಕ್ಕಕ್ಕಿಡಲಾರದ ಸ್ಥಿತಿಯಲ್ಲಿ ನಾವೀಗ ಇದ್ದೇವೆ. "ಕುಟುಂಬದ ಸದಸ್ಯರೆಲ್ಲರ ಪಾಲಿಗೆ ವಿಶೇಷವಾದ ಹಕ್ಕು ಬಾಧ್ಯತೆಗಳು ಅಲಿಖಿತವಾಗಿ ಬಂದಿರುತ್ತವೆ. ಪುರುಷ ಪ್ರಧಾನವಾದ ಈ ಸಮಾಜ ವ್ಯವಸ್ಥೆಯಲ್ಲಿ ಈ ಎಲ್ಲ ನಿಯಮಾವಳಿಗಳನ್ನು ರೂಪಿಸುವವನು ಪುರುಷನೇ ಎಂದ ಮೇಲೆ ಸಹಜವಾಗಿಯೇ ಎಲ್ಲವೂ ಅವನ ಮೂಗಿನ ನೇರಕ್ಕೆ ಅವನ ಅನುಕೂಲಕ್ಕೆ ಸರಿಯಾಗಿ ಇರುತ್ತದೆ".[೭]

ಹಾಗಾಗಿ ಹಕ್ಕುಗಳೆಲ್ಲ ಪುರುಷನದು, ಬಾಧ್ಯತೆಗಳೆಲ್ಲವೂ ಹೆಂಗಸಿನದು ಎಂದಾಗಿಬಿಟ್ಟಿದೆ. ಈ

ಎಲ್ಲದರ ಮುಖ್ಯ ಸೂತ್ರವಾಗಿ ವಿವಾಹ ಪದ್ಧತಿಯನ್ನು ರೂಪಿಸಲಾಗಿದೆ. ಹೆಂಗಸು ಹುಟ್ಟಿದ ಮನೆಯಲ್ಲಿ ಮಗಳಾಗಿ, ಸೋದರಿಯಾಗಿ ಬಾಲ್ಯ, ಹರೆಯದ ದಿನಗಳನ್ನು ಕಳೆಯುತ್ತಿರುವಾಗಲೂ ಸೇರುವ ಮನೆಯಲ್ಲಿ ಹೇಗೆ ಇರಬೇಕು, ಹೇಗೆ ಬದುಕಬೇಕೆಂಬ ತರಬೇತಿ ನೀಡುತ್ತಾರೆ ತಾಯಿ ಮನೆಯಲ್ಲೂ, ಅತ್ತೆ ಮನೆಯಲ್ಲೂ, ಅಲ್ಲಿನ ಪುರುಷ ಸದಸ್ಯರ ಜೊತೆಗಿನ ಸಂಬಂಧಗಳ ನೆರಳನ್ನು ಅವಲಂಬಿಸುವುದು ಅವಳ ಬದುಕಾಗುತ್ತದೆ. ತನ್ನ ಹಕ್ಕುಗಳ ಬಗ್ಗೆ ಎಂದು ಕೂಡ ಆಲೋಚಿಸದೆ, ತಾನು ನಿರ್ವಹಿಸಬೇಕಾದ ಬಾಧ್ಯತೆಗಳನ್ನು, ಕರ್ತವ್ಯಗಳನ್ನು ಕುರಿತು ಮಾತ್ರವೇ ಚಿಂತಿಸುವುದು ಅವಳಿಗೆ ಸೂಚಿತವಾಗಿರುವ ದಾರಿ. ಸಮಾಜವೇ ಆಗಲಿ, ಕುಟುಂಬವೇ ಆಗಲಿ, ಅವಳು ಈ ದಾರಿಯಲ್ಲಿ ನಡೆದರೆ ಮಾತ್ರ ಅವಳನ್ನು ಮನ್ನಿಸುತ್ತದೆ. ಗೌರವ ಆದರಗಳನ್ನು ತೋರುವ ನಾಟ್ಯವನ್ನಾಡುತ್ತದೆ.

“ಮದುವೆ ಸಂಸಾರಕ್ಕೆ ಬೆಲೆ ಕೊಟ್ಟು ನಮ್ಮ ಹಿರಿಯರು ಈ ಸಂಸ್ಕಾರ, ಸಮಾರಂಭದ ಆಚರಣೆಗೆ ರೀತಿ ರಿವಾಜುಗಳನ್ನು ತಂದರು. ಅದನ್ನು ಶಾಸ್ತ್ರಗಳಲ್ಲಿ ಅಳವಡಿಸಿ ಬರೆದು ವಿವರಿಸಿದರು. ವಿವಾಹ ಸಂಬಂಧವಾದ ಮಂತ್ರಗಳು, ಬ್ರಾಹ್ಮಣಾದಿ ಉಚ್ಛ ವರ್ಗದವರಲ್ಲಿ ಪ್ರಾಮುಖ್ಯತೆಯನ್ನು ಪಡೆಯಿತು. ಆದರೆ ಶೂದ್ರಾದಿಗಳಿಗೆ ಜನಪದ ಗೀತೆಗಳೇ ಮುಖ್ಯವಾದವು. ಮೇಲ್ವರ್ಗದವರು ಶಾಸ್ತ್ರೋಕ್ತವಾಗಿ ಬಳಸಿಕೊಂಡರೆ ಅದನ್ನು ಮನಗಂಡ ಶೂದ್ರಾದಿಗಳು ಜನಪದ ರೂಢಿ ಸಂಪ್ರದಾಯಕ್ಕೆ ಹೆಚ್ಚು ಒತ್ತುಕೊಟ್ಟಿರಬೇಕು ಎಂದು ತಿಳಿಸಲಾಗಿದೆ”.[೮]

ಮಗಳದೋ ಅಥವಾ ಮಗನದೋ ಮದುವೆ ಮಾಡುವುದು ಇತರರಷ್ಟೇ ಹೊಣೆಗಾರಿಕೆಯ ಕೆಲಸವಾದರೂ ಅವರಲ್ಲಿ ವಿಶಿಷ್ಟವಾದ ಪದ್ಧತಿ ಇರುವುದರಿಂದ ಈ ದಿಕ್ಕಿನಲ್ಲಿ ಅವರ ಜವಾಬ್ದಾರಿಯನ್ನು ಹೆಚ್ಚಿಸಿದೆ. ಹೆಣ್ಣು ಹುಡುಕಲು ಗಂಡಿನ ಮನೆಯವರು ಒಬ್ಬ ಹಿರಿಯ ವ್ಯಕ್ತಿಯನ್ನು ನೇಮಿಸುತ್ತಿದ್ದರು. ಹಿಂದಿನ ಕಾಲದಲ್ಲಿ ಹೆಣ್ಣು ಹುಡುಕಬೇಕಾದರೆ ಏಳು ಜೊತೆ ಮೆಟ್ಟು ಸವೆಯುತ್ತಿದ್ದವಂತೆ ಎಂದು ಹುಲಿಗೆಮ್ಮ ಅಬ್ಬೆಯವರು ಹೇಳುತ್ತಾರೆ. ಒಂದು ಮನೆಗೆ ಕಾಲಿಕ್ಕಿದರೆ ಸಂಬಂಧ ಕೂಡಿ ಬಂದ ಹಾಗೆಯೇ ಎನ್ನುವ ಕಾಲವದು. ಎಮ್ಮೆ ಎತ್ತು, ಹುರುಳಿ, ಕಾಳು ಮುಂತಾದವುಗಳನ್ನು ಕೊಳ್ಳುವವರಂತೆ ಹೋಗಿ ಹೆಣ್ಣು, ಗಂಡಿನ ಮನೆ ಇತ್ಯಾದಿಗಳನ್ನು ನೋಡಿಕೊಂಡು ಪರಿಶೀಲಿಸಿ ಬರುತ್ತಿದ್ದರು. ಹಿಂದೆ ವಧುದಕ್ಷಿಣೆ ಕಡ್ಡಾಯವಾಗಿತ್ತೆಂದು ಹೇಳುತ್ತಾರೆ. ಉದಾಹರಣೆಗೆ ಕೆಲವು ವರ್ಷಗಳ ಹಿಂದೆ (ಅಂದರೆ ೩೦-೪೦ ವರ್ಷಗಳ ಹಿಂದೆ) ವಧುವಿಗೆ ಅಂದರೆ ಹೆಣ್ಣಿನ ತಂದೆ ತಾಯಿಯವರಿಗೆ 'ತೆರ'ಟ್ಟು ವಿವಾಹವಾಗುತ್ತಿದ್ದರು. “ಇವತ್ತಿಗೂ ಕೊರವರ ಸಮುದಾಯದಲ್ಲಿ 'ತೆರ' ಕೊಡುವ ಪದ್ಧತಿಯು ಸ್ವಲ್ಪ ಬದಲಾವಣೆಯೊಂದಿಗೆ ಕಂಡುಬರುತ್ತದೆ. ಸಿದ್ದಪ್ಪನವರು ಮದುವೆಯಲ್ಲಿ ಹೆಣ್ಣಿನವರಿಗೆ ವಧುದಕ್ಷಿಣೆ ೫೦೦ ರೂಪಾಯಿಗಳನ್ನು ಕೊಟ್ಟು ವಿವಾಹವಾಗಿದ್ದರಂತೆ ಎಂದು ಹೇಳುತ್ತಾರೆ”.[೯]

ಒಂದು ಹೆಣ್ಣನ್ನು ಮದುವೆ ಮಾಡಿಕೊಡುವಾಗ ತಾಯಿಯ ಅಣ್ಣ-ತಮ್ಮಂದಿರಿಗೆ ಗಂಡನ ಮನೆಯವರು ಸ್ವಲ್ಪ ಹಣವನ್ನು ಇಳೇವು ಮಾಡುವಾಗ ಮಾವನ ಕಡೆಯವರಿಗೆ ಕೊಡಬೇಕಾಗುತ್ತದೆ. ಏಕೆಂದರೆ ಸೊಸೆಯ ಅಧಿಕಾರ ಮಾವಂದಿರಿಗೆ ಇರುವುದರಿಂದ ಬೇರೆಯವರ ಮನೆಗೆ ಹೋಗುವಾಗ,

ಗಂಡನ ಮನೆಯವರಿಗೆ ಒಪ್ಪಿಸುತ್ತಾರೆ. ಅವರು ಕೊಟ್ಟ ಹಣದಲ್ಲಿ ಇನ್ನಷ್ಟು ಹಣ ಹಾಕಿ ಸಾಮಾನು ತಂದುಕೊಡಲಾಗುತ್ತದೆ. ಆಗ ಅವಳು ಗಂಡನ ಮನೆಯವರ ಸ್ವತಃ ಆಗುತ್ತಾಳೆ. ದೈವದವರಿಗೆ ಸಹ ಹಣವನ್ನು ಕೊಡಬೇಕಾಗುತ್ತದೆ. ಮಕ್ಕಳಾಗಲೀ, ಸೊಸೆಯಾಗಲೀ, ಗರ್ಭಿಣಿಯಾಗಿರುವ ಮಹಿಳೆಗೆ ನೆರೆಹೊರೆಯವರು ಸಂತೋಷದಿಂದ ಉಂಡಕ್ಕಿ ತುಂಬುವುದು ಕಂಡುಬರುತ್ತದೆ.

"ಮಡಿಲ ತುಂಬೀರೆ ಕಡಲಸೈವಾಗೆ
ಕಡಲೆ ಬೆಲ್ಲ ಅಕ್ಕಿ ಹಣ್ಣು ಕೊಬರಿ
ಪಟ್ಟೆ ಸೀರೆ, ಗಟ್ಟಿ ತಟ್ಟೆಲಟ್ಟು
ರಾಜರುಕ್ಮಿಣಿ, ಮಾತೆ ಸೀತಾದೇವಿಗೆ
ಮಡಿಲ ತುಂಬೀರೆ......... ಎಂದು ಹೇಳಲಾಗುತ್ತದೆ".[೧೦]

ಉಂಡಕ್ಕಿ ತುಂಬುವುದರಲ್ಲಿ ಯಾವ ಯಾವ ಸಾಮಾನು ಇರಬೇಕು ಎಂದು ತಿಳಿಸುತ್ತದೆ. ತವರು ಮನೆಗೆ ಗರ್ಭಿಣಿ ಮಗಳು ಬಂದಾಗ ಅವಳಿಗೆ ಬಯಕೆಗಳು ಕಾಡುತ್ತವೆ. ಅದನ್ನು ಅವಳು ತಾಯಿಯ ಹತ್ತಿರ ಹೀಗೆ ಹೇಳಿಕೊಳ್ಳುತ್ತಾಳೆ. ಅದನ್ನು ತವರು ಮನೆಯವರು ತೀರಿಸುತ್ತಾರೆ. ಇಲ್ಲವಾದರೆ ತೊಂದರೆಯಾಗುತ್ತದೆ ಎಂಬ ನಂಬಿಕೆ ಇದೆ.

"ಎಳ್ಳು ಹಚ್ಚಿದ ರೊಟ್ಟಿ
ಎಣ್ ಬದನೆಕಾಯಿ,
ಮೊಸರ ಕಲಸಿದ ಬುತ್ತಿ,
ಬಿಸಿಯ ಬಾನ".[೧೧]

ಧರ್ಮಗಳಲ್ಲಿ ಮಹಿಳೆಯರನ್ನು ಅನಿಷ್ಟ ಪದ್ಧತಿಗಳಿಗೆ ಗುರಿ ಮಾಡಲಾಗಿದೆ. ಮಹಿಳೆಯರನ್ನು ದೇವತೆ ಎಂದು ಹೇಳುತ್ತಾ ಮತ್ತೊಂದು ಕಡೆ ಮಹಿಳೆಯರನ್ನು ಶೋಷಣೆ ಮಾಡುತ್ತಿದ್ದಾರೆ. ಮಹಿಳೆಯರನ್ನು ಗೃಹ ಬಂಧನದಲ್ಲಿ ಇಡುವುದು, ಜ್ಞಾನದ ಹಕ್ಕನ್ನು ನಿರಾಕರಿಸುವುದು ಸದಾಕಾಲ ಪುರುಷನ ಅಧೀನದಲ್ಲಿರುವುದು, ಆಕೆಯನ್ನು ದುಡಿಸಲು ಅಥವಾ ಶಿಕ್ಷಿಸಲು ಗಂಡನಾದವನಿಗೆ ಹಕ್ಕಿದೆ ಎಂಬ ಧರ್ಮದ ಮೌಲ್ಯಗಳು ತಿಳಿಸುತ್ತದೆ. ಇಂದಿಗೂ ಈ ಸಮುದಾಯದಲ್ಲಿ ೬೦%ರಷ್ಟು ಧರ್ಮವನ್ನು ಬಿಟ್ಟು ಹೋಗಲಾರರು. ಆದರೆ ಗಂಡ ಎಷ್ಟೇ ತಪ್ಪು ಮಾಡಿದರೂ ಅವನನ್ನು ದಂಡಿಸುವ ಅಥವಾ ಶಿಕ್ಷಿಸುವ ಅಧಿಕಾರ ಹೆಂಡತಿಗೆ ಏಕಿಲ್ಲ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದರೆ ಇವರಿಗೆ ಧರ್ಮದ ಪ್ರಕಾರ ಪತಿಯೇ ಪರದೈವ ಎಂಬ ನಂಬಿಕೆ ಇನ್ನೂ ಹೋಗಿಲ್ಲ.

ಮಹಿಳೆ ಕುಟುಂಬದ ಕಣ್ಣು ಎಂದು ಹೇಳಲಾಗುತ್ತದೆ. ಆದರೆ ಆ ಕಣ್ಣಿಗೆ ನೋವು ಆದರೆ ಸಹಿಸಿಕೊಳ್ಳುವುದು ಹೆಣ್ಣೇ ಹೊರತು ಪುರುಷನಲ್ಲ. ಆದ್ದರಿಂದ ಹೆಣ್ಣಿನ ಕಣ್ಣಿಗೆ ನೋವು ಆಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ ಮತ್ತು ಜವಾಬ್ದಾರಿ ಎಂದು ಹೇಳಬಯಸುತ್ತೇನೆ. ಮನೆಯಲ್ಲಿ ಮಾಡಿದ ಅಡುಗೆ ಮನೆ ಮಂದಿಗೆ, ಮಹಿಳೆಗೆ ಒಲೆಯ ಬೂದಿ, ಕಣ್ಣೀರು, ಆಕೆಯ

ಬಾಳಿನ ಬುತ್ತಿ ಎಂಬ ಮನೋಭಾವನೆಗಳೂ ಮೂಡಿಬಿಟ್ಟಿದೆ. ಗಂಡ ಸತ್ತರೆ, ಕೌಟುಂಬಿಕ ವ್ಯವಹಾರದಲ್ಲಿ ಸಾಮಾಜಿಕ ಪರಿಸರವನ್ನು ಹೆಣ್ಣಿಗೆ ಸಿಕ್ಕ (ಹೆಣ್ಣಿನ ಬಗ್ಗೆ ಇರುವ ಮಾನಮಾರ್ಯದೆಗಳು) ಸ್ಥಾನಮಾನಗಳು ಮರೆಯಾಗಿದೆ. ಚಾರಿತ್ರಿಕವಾಗಿ ಸಂಭವಿಸಿದ ಸ್ಥಿತ್ಯಂತರಗಳಿದ್ದರೂ ಸಹ ಆಚಾರ-ವಿಚಾರಗಳಲ್ಲಿ ಮಹಿಳೆಗೆ ಸ್ವಾತಂತ್ರ್ಯ ಕೊಡದೆ ನಿಯಮಗಳ ಬೇಲಿ ಕಟ್ಟಿದ್ದುಂಟು. ಒಟ್ಟಿನಲ್ಲಿ ಮಹಿಳೆಯರನ್ನು ಕಠೋರವಾಗಿ ನಡೆಸಿಕೊಂಡಿರುವುದೇ ಅಧಿಕ.

ಸಮಾಜವನ್ನು ಒಂದುಗೂಡಿಸುವ ಶಕ್ತಿಯನ್ನು ಸಂಪ್ರದಾಯ ಮತ್ತು ಆಚರಣೆಗಳು ಮಾಡುತ್ತವೆ. ಇವು ಮನುಷ್ಯನ ಜೀವನದ ಅವಿಭಾಜ್ಯ ಅಂಗಗಳಾಗಿ ಅವನ ಬದುಕನ್ನು ರೂಪಿಸಿ ಸಂಸ್ಕೃತಿಯನ್ನು ಪೋಷಣೆ ಮಾಡುತ್ತದೆ. ಅಲ್ಲದೆ ನಾಗರಿಕತೆಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ'ವನ್ನು ವಹಿಸುತ್ತವೆ. ಮನುಕುಲದ ಶ್ರೇಯಸ್ಸಿಗಾಗಿ ಅತ್ಯವಶ್ಯಕವೆಂದು ಎನಿಸಿಕೊಂಡಿರುವ ನಂಬಿಕೆಗಳೇ ಸಂಪ್ರದಾಯಗಳಾಗಿ ವಿಧಿ ನಿಷೇಧಗಳಾಗಿ, ಉಪಾಸನೆಗಳಾಗಿ ಸಾಕಾರತೆ ಪಡೆಯುತ್ತವೆ. ಇಂತಹ ಆಚರಣೆಗಳು ಇರುವುದ ರಿಂದಲೇ ಸಂಪ್ರದಾಯಗಳು ಜೀವಂತವಾಗಿವೆ. ಸಾಂಸ್ಕೃತಿಕ ವಾತಾವರಣದ ಹಿನ್ನೆಲೆಯಲ್ಲಿ ಆಯಾ ಜನರ ಮನೋಧರ್ಮಕ್ಕನುಗುಣವಾಗಿ ಸಂಪ್ರದಾಯಗಳು ಹುಟ್ಟಿಕೊಂಡು ಆಚರಣೆಗಳಾಗಿ ಉಳಿದಿವೆ. ಮನುಷ್ಯನ ಬೌದ್ಧಿಕ, ಮಾನಸಿಕ ಹಾಗೂ ದೈಹಿಕ ಗುಣಧರ್ಮಗಳು ಸಾರ್ವತ್ರಿಕವಾಗಿ ಏಕರೂಪವನ್ನು ಪಡೆದುಕೊಂಡಾಗ ಅವು ಒಂದೇ ವಿಧದ ಸಂಪ್ರದಾಯಗಳಿಗೆ ಮಾರ್ಪಾಡಾಗುತ್ತದೆ. ಇವು ಬೇರೆ ಬೇರೆ ಪ್ರದೇಶಗಳಲ್ಲಿ ಅದರ ಛಾಯೆಯಂತೆ ಕಂಡುಬರಬಹುದು. ಈ ಕಾರಣದಿಂದಲೇ ಬೇರೆ ಬೇರೆ ಪ್ರದೇಶದಲ್ಲಿ ನಡೆಯುವ ಸಾಂಪ್ರದಾಯಿಕ ವೃತ್ತಿ, ಹುಟ್ಟು, ಮದುವೆ, ಮರಣದಂತಹ ಆಚರಣೆಗಳಲ್ಲಿ ಕಂಡುಬರುತ್ತವೆ. ದಿನೇ ದಿನೇ ಅವುಗಳ ಆಚರಣೆಯಲ್ಲಿ ವ್ಯತ್ಯಾಸವಾದರೂ ಅವು ನಶಿಸಿ ಹೋಗುವುದಿಲ್ಲ. ಕೆಲವು ಆಚರಣೆಗಳು ಆಧುನಿಕತೆಯ ಹೊಡೆತವನ್ನು ಲೆಕ್ಕಿಸದೆ ಇನ್ನೂ ಜೀವಂತವಾಗಿ ನಡೆಯುತ್ತಿವೆ. ಇದು ಈ ಸಮುದಾಯಕ್ಕೆ ಹೊರತಾಗಿಲ್ಲ. ಇಲ್ಲಿನ ಜನಗಳ ಆಚರಣೆಗಳು ಅಲ್ಪಸ್ವಲ್ಪ ಬದಲಾವಣೆಗಳನ್ನು ಹೊಂದುತ್ತಾ ಇಂದಿಗೂ ಆಚರಣೆಯಲ್ಲಿದೆ.

ಪ್ರತಿಯೊಂದು ಸಮುದಾಯಗಳಲ್ಲಿಯೂ ಸಾವಿರಾರು ವರ್ಷಗಳಿಂದ ಬದುಕುತ್ತಾ ತಮ್ಮದೇ ಆದ ಆಚರಣೆಗಳನ್ನು, ನಂಬಿಕೆ, ನಡವಳಿಕೆಗಳನ್ನು ರೂಢಿಸಿಕೊಂಡಿದ್ದಾರೆ. ಕಾಲದಿಂದ ಕಾಲಕ್ಕೆ ಸಾಗಿಬರುವ ಸಂದರ್ಭದಲ್ಲಿ ಉಂಟಾಗುವ ಮಾನಸಿಕ ಬೆಳವಣಿಗೆಯಿಂದಲೋ ಭಿನ್ನ ಸಮುದಾಯಗಳಲ್ಲಿ ಬೆರತು ಮುಂದುವರೆದಾಗ ಉಂಟಾದ ಬದಲಾವಣೆಯಿಂದಲೋ ಅವು ತಮ್ಮ ಮೂಲಸ್ವರೂಪವನ್ನು ಕಳೆದುಕೊಳ್ಳಬಹುದು. ಕೆಲವು ಮಾಯವಾಗಬಹುದು. ಏನೇ ಆದರೂ ಸಂಪೂರ್ಣವಾಗಿ ಬದಲಾಗಲು ಯಾವುದೇ ಸಮುದಾಯ ತಮ್ಮ ನಂಬಿಕೆ ಮತ್ತು ಆಚರಣೆಗಳಿಂದ ಮುಕ್ತವಾಗಲು ಸಾಧ್ಯವಾಗುವುದಿಲ್ಲ. ತಮ್ಮ ಬದುಕಿನ ನಾನಾ ಸಂದರ್ಭಗಳಿಗೆ ಒಂದು ವಿಶೇಷತೆಯನ್ನು ತಂದುಕೊಳ್ಳಲು ಅನೇಕ ರೀತಿಯ ಆಚರಣೆಗಳನ್ನು ಆಚರಿಸುತ್ತದೆ. ಈ ಎಲ್ಲಾ ಆಚರಣೆಗಳನ್ನು ಆಚರಿಸುವುದರಲ್ಲಿ ಕೊರವರು ಹಿಂದೆ ಬಿದ್ದಿಲ್ಲ.

"ಹಟ್ಟಿಗಳನ್ನಾಗಿಸಿಕೊಂಡು ಬದುಕುತ್ತಿರುವ ಅಲೆಮಾರಿಗಳು ಬಹಳ ಹಿಂದಿನಿಂದಲೂ ಕಾಡು, ಗುಡ್ಡ, ಬೆಟ್ಟ, ಅರಣ್ಯಗಳ ಅಂಚಿನಲ್ಲಿ ಜೀವನ ಸಾಗಿಸುತ್ತ ಬಂದಿದ್ದಾರೆ. ಬುಡಕಟ್ಟುಗಳಾದ ಗೊಲ್ಲರು, ಕಾಡುಗೊಲ್ಲರು, ಕೊರವರು, ಬೇಡರು, ಮ್ಯಾಸಬೇಡರು, ಕಾಡು ಕುರುಬರು, ಗೊಂಡರು, ಕೊರಗರು, ಜೇನುಕುರುಬರು, ಮುಂತಾದ ಅಲೆಮಾರಿಗಳೆಂದು ಹೆಸರಿಸಬಹುದು. ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಕೊರಚರ ಹಟ್ಟಿಯಲ್ಲಿ ಮಾಡುವ ಜಾತ್ರೆಯನ್ನು ಕೊರಚರು ಗೌರಸಂದ್ರದ ಮಾರೆಮ್ಮನ ಜಾತ್ರೆ ಎನ್ನುವರು. ಗೌರಸಂದ್ರದ ಮಾರೆಮ್ಮ ತಮ್ಮ ಕುಲದೇವತೆ ಎಂದು ಕೊರಚರ ನಂಬಿಕೆ. ಗೌರಸಂದ್ರಕ್ಕೆ ಹೋಗಲಾರದವರು ಈ ಜಾತ್ರೆಯಾದ ನಂತರ ತಮ್ಮ ಹಟ್ಟಿಗಳಲ್ಲಿ ಜಾತ್ರೆ ಮಾಡುವರು. ಕಾಡುಗೊಲ್ಲರಂತೆ ಕೊರಚರೂ ಪಶುಪಾಲಕ ಅಲೆಮಾರಿ ಸಂಸ್ಕೃತಿಗೆ ಸೇರಿದವರು. ವಲಸೆಗೂ ಮಾರಮ್ಮನ ಆರಾಧನಾ ವಿಧಾನಕ್ಕೂ ನಿಕಟ ಸಂಬಂಧವಿದೆ ಎಂದು ತಿಳಿಸಿದ್ದಾರೆ".[೧೨]

ಯಾವುದೇ ಸಂಭ್ರಮ ನಡೆದರೆ ಮಗಳನ್ನು ಕರೆತರುವುದು ತವರು ಮನೆಯವರ ಕರ್ತವ್ಯ, ಜವಾಬ್ದಾರಿಯಾಗಿರುತ್ತದೆ. ಮನೆಮಗಳು ಇಲ್ಲದೇ ಕಾರ್ಯಕ್ರಮಗಳು ಇಲ್ಲಿ ನಡೆಯುವುದಿಲ್ಲ. ಹೆಣ್ಣು ಮಕ್ಕಳ ಮೇಲೆ ಅಷ್ಟು ಪ್ರೀತಿ ತಾಯಿಗಿರುತ್ತದೆ. ಆದರೆ ಗಂಡನ ಮನೆಯವರ ಒಪ್ಪಿಗೆಯನ್ನು ಪಡೆದೇ ಅವಳನ್ನು ಕರೆತರಬೇಕಾಗುತ್ತದೆ. ಇಲ್ಲವೇ ಗಂಡನ ಅಭಿಪ್ರಾಯವು ಮುಖ್ಯ. ಕುಟುಂಬದ ಯಾವುದೇ ಕಾರ್ಯಕ್ರಮಗಳಲ್ಲಿಯೂ ಸೋದರ ಮಾವನಿಗೆ ಪ್ರಮುಖ ಸ್ಥಾನಮಾನಗಳಿರುತ್ತವೆ. ಮದುವೆಯ ಸಂದರ್ಭದಲ್ಲಿ ಹುಡುಗಿಯನ್ನು ಧಾರೆ ಎರೆದುಕೊಡುವುದು ಸೋದರ ಮಾವ.

ತಮ್ಮ ಅಸ್ತಿತ್ವದ ಮೂಲ ಚಹರೆಯನ್ನು ಮಾತ್ರ ಮನೆಯಲ್ಲೇ ಕಂಡದ್ದು. ಈ ಮನೆಯನ್ನು ನಿರಂತರವಾಗಿ ರಕ್ಷಿಸಬೇಕು, ಬಲಪಡಿಸಿಕೊಡಬೇಕು, ಯಾವ ಪಲ್ಲಟಗಳಿಗೂ ಅವಕಾಶವಾಗಬಾರದು ಎಂದೇ ಬಯಸಿದವರು. ಮಹಿಳೆಯರು ಅತ್ಯಂತ ಕನಿಕರಕ್ಕೆ ಪಾತ್ರರಾದವರು ಎಂಬಲ್ಲಿಂದಲೇ ಈ ಆದರ್ಶ ಮೊದಲಾಗುತ್ತಿದ್ದು, ನವವಿವಾಹಿತ ತರುಣಿಯರು ತಮ್ಮ ನಿತ್ಯ ಜೀವನದ ಬಗೆಗೆ ಸಾಮಾನ್ಯ ತಿಳುವಳಿಕೆಗಳನ್ನು ಪಡೆದುಕೊಳ್ಳಬೇಕಾದ ಅಗತ್ಯ ಎಷ್ಟು ಎಂಬುದನ್ನು ತಿಳಿಸುತ್ತದೆ. ಮಹಿಳೆಯರು ತಮ್ಮ ಗಂಡಂದಿರ ದಯೆ ದಾಕ್ಷಿಣ್ಯಗಳಿಂದ ವರ್ತಿಸುತ್ತಾರೆ. ನಯ ನಾಜೂಕು ಶ್ರದ್ಧೆಗಳಿಂದ ಕರ್ತವ್ಯ ಗಳನ್ನು ನಿರ್ವಹಿಸುತ್ತಾರೆ. ಅವರಿಗೆ ವಿಧೇಯರಾಗಿ ನಡೆದುಕೊಳ್ಳುತ್ತಾರೆ. ಆದರೂ ಗಂಡಂದಿರು ಅವರನ್ನು ಬಯ್ದು ಗದರಿಸುತ್ತಿರುತ್ತಾರೆ. ಎಷ್ಟೋ ಸಲ ಕಾರಣವಿಲ್ಲದೆ ಹೊಟ್ಟೆ ಕಿಚ್ಚಿನಿಂದ ಮತ್ತು ಅಹಂಕಾರದಿಂದ ಮಹಿಳೆಯರ ಮೇಲೆ ಕ್ರೂರವಾಗಿ ವರ್ತಿಸುತ್ತಾರೆ.

ಕೊರವರ ಸಮುದಾಯದಲ್ಲಿ ಪುರುಷರಿಂದ ಮಹಿಳೆಯರು ಹಲವಾರು ಹಿಂಸೆಗಳನ್ನು ಎದುರಿಸುತ್ತಾರೆ ಎಂಬುದು ನಮ್ಮ ಕಣ್ಣೆದುರೇ ನೋಡುತ್ತಿದ್ದೇವೆ. ಉದಾಹರಣೆಗೆ ಕೌಟುಂಬಿಕ ಹಿಂಸೆ, ಸ್ತ್ರೀ ಭ್ರೂಣ ಹತ್ಯೆ, ಕಡಿಮೆಯಾಗುತ್ತಿರುವ ಹೆಣ್ಣು ಮಕ್ಕಳ ಸಂಖ್ಯೆ, ಕುಟುಂಬದಲ್ಲಿ ವರದಕ್ಷಿಣೆಯ ಹಿಂಸೆ, ವಧುದಹನ ಮಾಡುವುದು, ಎರಡನೇ ಮದುವೆ ಮಾಡುವುದು ಮೊದಲಾದವುಗಳಿವೆ.

ಸಾರ್ವಜನಿಕ ಪ್ರಾತಿನಿಧ್ಯ ಮತ್ತು ಶಕ್ತಿಯ ಕೇಂದ್ರೀಕರಣದ ನಮ್ಮ ಹಲವು ಪ್ರಗತಿಯ

ಯೋಜನೆಗಳ ಸೋಲಿಗೂ ಕೂಡ ಕಾರಣವಾಗಿದೆ. ಮಹಿಳೆಯರನ್ನು ಸಮಾಜದ ನೆಲೆಯಿಂದ, ವಿದ್ಯೆಯಿಂದ ದೂರವಿರಿಸಿ ಎಲ್ಲಾ ರೀತಿಯಲ್ಲೂ ಅವಳನ್ನು ದುರ್ಬಲರನ್ನಾಗಿ ಮಾಡಿರುವುದು ಪ್ರಗತಿಯ ಹಾದಿಗೆ ತಡೆ ಮಾಡಲಾಗಿದೆ. ಮಹಿಳೆ ಹುಟ್ಟಿನಿಂದ ಅಬಲೆಯಲ್ಲ. ಅಲ್ಲಿಯ ಪರಿಸರವು ಸೃಷ್ಟಿಸುತ್ತದೆ. ನಮ್ಮ ಸಮಾಜದ ಪ್ರಭಾವದಲ್ಲಿ ಅವಳ ಬಲವನ್ನು ಬೆಂಬಲಿಸದೆ ಹತ್ತಿಕ್ಕಿ ಅವಳನ್ನು ಅಬಲೆಯಾಗಿಸಿ ಅದನ್ನು ನಿಸರ್ಗದ ತಲೆಯ ಮೇಲೆ ಹಾಕಿದ್ದಾನೆ. ಈ ಅಬಲೀಕರಣ ಮತ್ತು ತಾರತಮ್ಯ ನೀತಿಯಿಂದ ಮಹಿಳೆಯೊಬ್ಬಳೇ ಅಲ್ಲ ಇಡೀ ಸಮಾಜವೇ ನರಳುವಂತೆ ಆಗಿದೆ ಎಂದು ವಿಜಯಾ ದಬ್ಬೆಯವರು ತಿಳಿಸುತ್ತಾರೆ.

"ಹದಿನೆಂಟನೆಯ ಶತಮಾನದ ಅಸಹನೀಯ ಸ್ಥಿತಿಯಿಂದ ಮಹಿಳೆಯರು ಹೊರಬರತೊಡಗಿದರು. ಈ ಅಸಹನೀಯ ಸ್ಥಿತಿಯನ್ನು ಎಸ್.ಪಿ. ದುಬೆಯವರು 'ವಿಮೆನ್ ಇನ್ ದಿ ನ್ಯೂ ಏಷ್ಯಾ'(೧೯೬೩)ದಲ್ಲಿ ಹೀಗೆ ವಿವರಿಸಿದ್ದಾರೆ. ಶಿಕ್ಷಣವಿಲ್ಲದೆ ಮಾನಸಿಕವಾಗಿ, ದೈಹಿಕವಾಗಿ ಬೆಳೆಯುವ ಮೊದಲೇ ಮದುವೆಯಾಗಿ ಪ್ರೀತಿ ಮತ್ತು ಸಹಾನುಭೂತಿಯ ತವರಿನ ಆವರಣದಿಂದ ಭಯದ ವಾತಾವರಣವಿರುವ ಅತ್ತೆಯ ಮನೆಗೆ ಬರಬೇಕಾಗುತ್ತದೆ. ಈ ಸಮಯದಲ್ಲಿ ಆ ಕುಟುಂಬದಲ್ಲಿ ಅವಳ ಸ್ಥಾನಮಾನವೂ ಇರಲಿಲ್ಲ. ಅವರದ್ದೇ ಆದ ದೃಷ್ಟಿಯಲ್ಲಿ ಕೂಡ ಅವರಿಗೆ ಬೆಲೆಯಿಲ್ಲ".[೧೩] ಎಂಬುದು ತಿಳಿದುಬರುತ್ತದೆ. ಈ ರೀತಿಯಲ್ಲಿ ಕೊರವ ಸಮುದಾಯದಲ್ಲಿಯೂ ಹೆಣ್ಣುಮಕ್ಕಳು ವಿದ್ಯೆ ಇಲ್ಲವೆ ಬಾಲ್ಯದಲ್ಲಿಯೇ ವಿವಾಹ ಮಾಡಿಸುವುದು ಕಾಣುತ್ತೇವೆ. ಹೆಣ್ಣಿನ ಮೇಲೆ ಎಷ್ಟೊಂದು ದುಷ್ಪರಿಣಾಮ ಉಂಟಾಗುತ್ತವೆ. ಎಂದು ತಂದೆ-ತಾಯಿಗಳು, ಬಂಧುಗಳು ಯೋಚಿಸುವುದಿಲ್ಲ. ಏಕೆಂದರೆ ಈ ಸಮುದಾಯದಲ್ಲಿ ಶಿಕ್ಷಣದ ಪ್ರಭಾವ, ತಿಳುವಳಿಕೆ ಮೂಡದಿರುವುದು ಕಾರಣ ಎಂದು ನನ್ನ ಅಭಿಪ್ರಾಯ.

ಮಹಿಳೆಯರು ಮೊದಲು ವಿಮೋಚನೆ ಪಡೆಯಬೇಕಾದದ್ದು ಅಜ್ಞಾನದಿಂದ ಜ್ಞಾನವೇ ಬಲ ಎಂಬುದು ಈ ಕಾಲದ ಸತ್ಯಸಂಗತಿ. ಎಲ್ಲಿಯವರೆಗೆ ಅಜ್ಞಾನದಲ್ಲಿ ಮಹಿಳೆಯರು ಉಳಿಯುತ್ತಾರೆಯೋ ಅಲ್ಲಿಯವರೆಗೂ ಅವರನ್ನು ಪುರುಷ ಸಮಾಜ ಹತ್ತಿಕ್ಕುವುದು ತಪ್ಪುವುದಿಲ್ಲ. ಚಿಕ್ಕಂದಿನಿಂದಲೂ ಹೆಣ್ಣು ಮಕ್ಕಳಿಗೆ ಮದುವೆ, ತಾಯ್ತನ ಜವಾಬ್ದಾರಿಗಳ ಬಗ್ಗೆ ತರಬೇತಿ ನೀಡುತ್ತಿರುತ್ತಾರೆ. ಆದರೆ ವಿದ್ಯಾವಂತ ಳಾಗಲೂ, ಉದ್ಯೋಗವಂತಳಾಗಲೂ ಪ್ರೋತ್ಸಾಹ ನೀಡುವುದಿಲ್ಲ. ಉದ್ಯೋಗ ಕೇವಲ ಪುರುಷ ಲಕ್ಷಣವಲ್ಲ. ಇಡೀ ಮನುಷ್ಯರ ಲಕ್ಷಣ ಮತ್ತು ಹಕ್ಕು ಎಂದು ಹೇಳಬೇಕಾಗುತ್ತದೆ.

ಜೀವನಾನುಭವದಿಂದ ಹುಟ್ಟಿಕೊಂಡ ಜನಪದ ಸಾಹಿತ್ಯ, ಜನಾಂಗದ ಪರಂಪರೆಯ ರೀತಿ ನೀತಿಗಳ ಸಂಸ್ಕೃತಿಯನ್ನು ತಿಳಿಸುತ್ತದೆ. 'ಬಾಲಕೃಷ್ಣನ ಬಾಯಿಯಲ್ಲಿ ಬ್ರಹ್ಮಾಂಡವು ಅಡಗಿದಂತೆ ಜಾನಪದದಲ್ಲಿ ಸಕಲವು ಅಡಗಿದೆ'. ಕೊರವರು ತಮ್ಮ ದಿನನಿತ್ಯದ ಬದುಕನ್ನು ಸಾಗಿಸುವಾಗ ಕೆಲವೊಮ್ಮೆ ದುಃಖದಲ್ಲಿ ಮುಳುಗುತ್ತಾರೆ. ಕೆಲವೊಮ್ಮೆ ಸಂತೋಷದಲ್ಲಿ ನಕ್ಕು ನಲಿದಾಡುತ್ತಾರೆ. ಸುಖದುಃಖಗಳ ನಡುವೆ ಕೆಲವೊಮ್ಮೆ ಕಥೆ, ಗಾದೆ, ಒಗಟು, ಹಾಡು ಮೊದಲಾದವುಗಳ ಮೂಲಕ ಸಾಹಿತ್ಯವನ್ನು ಹೊರ ಹಾಕುತ್ತಾರೆ. ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದ ಅನುಭವ,

ಸಂಪ್ರದಾಯ ಕುರಿತು ಆಚಾರ ವಿಚಾರವನ್ನು ಉಳಿಸಿ ಬೆಳೆಸಿಕೊಂಡು ಬಂದಿರುವುದೇ ಜಾನಪದ. ಸಂಪ್ರದಾಯದ ವಿಚಾರಗಳು ನಂಬಿಕೆಗಳು ಒಂದು ಜನಾಂಗದಲ್ಲಿ ಕಾಣಿಸಿಕೊಳ್ಳುತ್ತದೆ. ಈ ಜನಾಂಗದ ಶಾರೀರಕ, ಸಾಮಾಜಿಕ, ಭೌಗೋಳಿಕ, ಅಂಶಗಳಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆಯನ್ನು ಗುರುತಿಸುತ್ತೇವೆ. ಒಂದು ಜನಾಂಗ ಬೇರೆ ಬೇರೆ ರಾಜ್ಯದಲ್ಲಿ ಇದ್ದಾಗ ಆಡು ಮಾತಿನಲ್ಲಿ ವ್ಯತ್ಯಾಸ ಕಂಡುಬರುತ್ತದೆ.

ಮಹಿಳೆಯರು ಎರಡು ಮಕ್ಕಳಾದ ಮೇಲೆ ಸಂತಾನ ಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರೆ ಸರ್ಕಾರದಿಂದ ಧನಸಹಾಯವನ್ನು ಒದಗಿಸಿಕೊಡುತ್ತೇವೆಂದು ಪುರುಷರು ಸ್ತ್ರೀಯರ ಮೇಲೆ ಒತ್ತಡ ತಂದಿದ್ದುಂಟು. ಜನಸಂಖ್ಯೆ ನಿಯಂತ್ರಣ ಸಲುವಾಗಿ ಜಾರಿಯಾದ ಈ ಕಾರ್ಯಕ್ರಮವು ಇದು ಕೊರವ ಸಮುದಾಯದಲ್ಲಿ ವಿಫಲವಾಗಿದೆ. ಮಹಿಳೆಯರಲ್ಲಿ ಡಜನ್‌ಗಟ್ಟಲೇ ಮಕ್ಕಳನ್ನು ಪಡೆಯುವುದು ಇಂದಿಗೂ ನೋಡಬಹುದು. ಕುಟುಂಬ ಯೋಜನೆಯಲ್ಲಿ ಇವರಿಗೆ ಆಸಕ್ತಿ ಇರುವುದಿಲ್ಲ. ಆದರೂ ಇತ್ತೀಚಿನ ದಿನಗಳಲ್ಲಿ ಮಹಿಳೆಯರಿಗೆ ಇದರ ಚಿಕಿತ್ಸೆಯನ್ನು ಮಾಡಿಸಲಾಗುತ್ತದೆ. ಮಹಿಳೆಯು ಹೆಣ್ಣು ಮಗುವಿನ ಹುಟ್ಟು ಉಪೇಕ್ಷೆಗೆ ಗುರಿಯಾಗುವುದು ಕಂಡುಬರುತ್ತದೆ. ಅಲ್ಲಿ ಕಾಣುವ ನೋವು, ಅಸಹಾಯಕತೆ, ವಿಷಾದಗಳು ಹೆಣ್ಣಾಗಿ ಆಕೆ ಮುಂದೆ ಪಡಬೇಕಾದ ಕಷ್ಟ ತೊಂದರೆಗಳನ್ನು ಸೂಚಿಸುತ್ತದೆ. ಇಲ್ಲಿ ತಾಯಿ ಹೆಣ್ಣು ಮಗುವನ್ನು ಹಡೆದಿದ್ದಾಳೆ ಎಂದು ತಿಳಿದ ಮೇಲೆ ಜೀವನವೆಲ್ಲ ಕಣ್ಣೀರಿನಲ್ಲೇ ಬಾಳನ್ನು ಕಳೆಯಬೇಕಾಗಿಲ್ಲ ಎಂಬ ಮನೋಭಾವನೆ ಇವರಲ್ಲಿರುತ್ತದೆ. ಆದ್ದರಿಂದಲೇ ಮಹಿಳೆಯು ಗಂಡು ಮಗು ಬೇಕು ಎಂದು ಆಶಿಸುತ್ತಾಳೆ.

ಗಂಡುಮಕ್ಕಳು ದುಡಿದು ಹಾಕುತ್ತಾರೆ ಎಂಬ ಮೂಢನಂಬಿಕೆ ಸಮಾಜದಲ್ಲಿದೆ. ಉದಾಹರಣೆಗೆ ಕುಟುಂಬದಲ್ಲಿ ತಾಯಿ ತಂದೆಯನ್ನು ಮಗ ಬಿಟ್ಟು ಬೇರೆ ಸಂಸಾರ ಹೂಡಿರುತ್ತಾನೆ. ಆವಾಗ ತಾಯಿಯು ತನ್ನ ಮಗಳ ಮನೆಗೆ ಹೋಗುತ್ತಾಳೆ. ಅಲ್ಲಿ ಮಗಳು ತಂದೆ ತಾಯಿಯನ್ನು ಸಾಕುವುದಿಲ್ಲವೇ? ಅತ್ತೆ ಮಾವನ ಒಪ್ಪಿಗೆ ಪಡೆದು ಇರುವವರೂ ಉಂಟು. ಸಂಬಂಧಿಕರ ಮನೆಯಲ್ಲಿ ಇರಬೇಕಲ್ಲ ಎಂಬ ಸ್ವಾಭಿಮಾನದಿಂದ ತಾಯಿ ತಂದೆಯರು ಕೆಲವು ದಿನ ಇದ್ದು, ಪುನಃ ತಮ್ಮ ಮನೆಗೆ ಹೋಗುತ್ತಾರೆ. ಹೆಣ್ಣಿಗೂ ಸಹ ತಂದೆ ತಾಯಿಯ ಮೇಲೆ ಆಸೆ, ಪ್ರೀತಿ ಇರುತ್ತದೆ. ಹೆಣ್ಣು ಮಗುವನ್ನು ಹಡೆದ ಸಂದರ್ಭದಲ್ಲಿ ತಾಯಿಗೆ ಮಗುವಿನ ಮೇಲೆ ಪ್ರೀತಿ, ವಾತ್ಸಲ್ಯವಿದ್ದರೂ ಗಂಡನ ಮನೆಗೆ ಹೆಣ್ಣು ಹುಟ್ಟಿತೆಂದು ಹೇಳಿ ನೋವು ಅನುಭವಿಸುತ್ತಾಳೆ. ಇದರಿಂದ ಹೆಣ್ಣು ಮಗು ಬೇರೆ ಮನೆಗೆ, ಗಂಡು ವಂಶೋದ್ಧಾರಕ ಎಂಬ ಭಾವನೆಯಿದೆ.

ಕೌಟುಂಬಿಕ ಜೀವನವನ್ನು ಪರಿಶೀಲಿಸಿದರೆ ಒಬ್ಬ ವ್ಯಾಪಾರಸ್ಥನು ಒಂದು ಅಂಗಡಿ ಮಾಡಿ ಕೊಂಡರೆ ಅಲ್ಲಿ ಅವನ ಜೊತೆಯಲ್ಲಿಯೇ ಅವನ ಹೆಂಡತಿಯೂ ಕೆಲಸದಲ್ಲಿ ಭಾಗಿಯಾಗಿರುತ್ತಾಳೆ. ಅಲ್ಲಿ ಅವಳ ಶ್ರಮವು ಪಾಲುದಾರಿಕೆಯಲ್ಲಿ ಸೇರುತ್ತದೆ. ಪುರುಷರು ತಮ್ಮ ಅಂಗಡಿಗೆ ಅವನ ವೈಯಕ್ತಿಕ ಕಾರಣಗಳಿಂದ ಗೈರು ಹಾಜರಾದರೆ ಅಲ್ಲಿ ಹೆಂಡತಿಯ ಉಪಸ್ಥಿತಿಯನ್ನು ಕಾಣುತ್ತೇವೆ.

ಆದರೆ ಅವಳ ಉಪಸ್ಥಿತಿಯು ಆದರೆ ಇದು ದುಡಿಮೆಯ ಚೌಕಟ್ಟಿನಲ್ಲಿ ಬರುವುದಿಲ್ಲ. ಅಲ್ಲಿ ಅದು ಪುರುಷನ ದುಡಿಮೆ ಎಂದು ಹೇಳುತ್ತಾರೆ. ಹೆಂಗಸರು ಕೆಲಸ ಮಾಡುವುದಿಲ್ಲ ಎಂದರೆ 'ನಿಮ್ಮಪ್ಪ ಬಂದು ಕೆಲಸ ಮಾಡುತ್ತಾನೆಯೇ' ಎಂಬ ಬಯ್ಗುಳದಿಂದ ಪದೇ ಪದೇ ತವರಿನ ಮನೆಯ ಕಡೆಗೆ ಬೆರಳು ಮಾಡಿ ತೋರಿಸುತ್ತಾರೆ.

೨.೩. ಸಂಸ್ಕೃತಿ, ಧರ್ಮ ಮತ್ತು ಮಹಿಳೆ

ಇಂದು ಮಾನವನ ಮೂಲ ಸಂಸ್ಕೃತಿಯನ್ನು ಗುರುತಿಸುವಲ್ಲಿ ಅವರ ಹಲವು ಅಚ್ಚರಿಗಳನ್ನು ಅರ್ಥೈಸುವಲ್ಲಿ ಹಲವು ವಿಷಯಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗುತ್ತದೆ. ಅವುಗಳಲ್ಲಿ ಬಹುಮುಖ್ಯವಾದದ್ದು ಜಾನಪದ. ಜಾನಪದೀಯ ಅಧ್ಯಯನದ ಮೂಲಕ ಮನುಷ್ಯ ಸಂಬಂಧಿಯಾದ ಯಾವುದೇ ವಿಷಯವನ್ನು ಹೆಚ್ಚು ಸಮರ್ಥವಾಗಿ ವಿಶ್ಲೇಷಿಸಲು ಸಾಧ್ಯ ಎಂಬುದು ಈಗಾಗಲೇ ಮನದಟ್ಟಾಗಿದೆ. ಏಕೆಂದರೆ ಜಾನಪದದಲ್ಲಿ ಬರುವ ಸಂಗತಿಗಳೆಲ್ಲವೂ ಬಹುತೇಕವಾಗಿ ಅವರ ಬದುಕಿನೊಂದಿಗೆ ಅಂಟಿ ಬಂದವುಗಳು. ಅವರ ಬದುಕಿನ ಅವಿಭಾಜ್ಯ ಅಂಗವೆನಿಸಿ, ತಮ್ಮದೇ ಆದ ವಿಶಿಷ್ಟ ಪರಿಸರವನ್ನು ಅರಳಿ ನಿಂತವುಗಳು. ಅವರ ಬದುಕಿನ ಈ ಅಮೂಲ್ಯ ಸಂಗತಿಗಳನ್ನು ಹೆಕ್ಕಿ ತೆಗೆದು ಅವುಗಳನ್ನು ಸಮರ್ಥವಾಗಿ ವಿಶ್ಲೇಷಿಸಲೂ ಈ ವಿಶಿಷ್ಟ ಪರಿಸರದ ಪರಿಶ್ರಮ ಬೇಕಾಗುತ್ತದೆ. ಅದಿಲ್ಲದೆ ಸಾರ್ಥಕವಾಗಿ ಅಧ್ಯಯನ ಸಾಧ್ಯವಾಗದು. ಏಕೆಂದರೆ ಜಾನಪದದಲ್ಲಿ ಊಹೆಗೆ ಅವಕಾಶ ಹೆಚ್ಚಿರುವುದಿಲ್ಲ. ಅಲ್ಲಿ ವಾಸ್ತವಿಕತೆಗೆ ಹೆಚ್ಚು ಬೆಲೆ ಇರುತ್ತದೆ.

ಆದರೆ ಆ ವಾಸ್ತವಿಕತೆ ಬಹುವೇಳೆ ಅಚ್ಚರಿಯನ್ನು ಉಂಟುಮಾಡುತ್ತಾ ಕೌತುಕದಲ್ಲಿರುವುದೇ ಹೆಚ್ಚು. ಇಂತಹ ಸಂದರ್ಭಗಳು ಸಂಶೋಧನೆಗೆ ಸವಾಲಾಗಿ ನಿಲ್ಲುವುದು ಸಹಜ. ಆಗ ಅವರು ಎಚ್ಚರ ವಹಿಸಬೇಕಾಗುತ್ತದೆ. ಈ ಸಮುದಾಯದಲ್ಲಿ ವೈದ್ಯಕೀಯ ಸೇವೆ ನೋಡಿದಾಗ ಮಹತ್ವದ ಸಂಗತಿಗಳು ತಿಳಿದುಬರುತ್ತದೆ. ಇವರು ಆರೋಗ್ಯ ಕೇಂದ್ರಗಳಿಗೆ ಹೋಗುವುದಿಲ್ಲ. ಆದರೆ ತಮ್ಮಲ್ಲಿರುವ ಅನುಭವದಿಂದ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುತ್ತಿದ್ದರು. ಅವರ ಆರೋಗ್ಯಕ್ಕೆ ಗಿಡಮೂಲಿಕೆಗಳೇ ಮುಖ್ಯ ಔಷಧಿಗಳಾಗಿ ಕಂಡುಬರುತ್ತದೆ. ಮೊದಲಿನಿಂದಲೂ ಸಾಂಪ್ರದಾಯಿಕ ನಂಬಿಕೆಯನ್ನು ಹೊಂದಿರುವ ಕಾರಣ ಈ ಸಮುದಾಯದ ಜನರು ಹೆಚ್ಚಾಗಿ ಆರೋಗ್ಯ ಕೇಂದ್ರಗಳಿಗೆ ಹೋಗುತ್ತಿದ್ದಿಲ್ಲ. ಇಂದಿನ ದಿನಗಳಲ್ಲಿ ತಿಳುವಳಿಕೆ ಉಳ್ಳವರು ಆಸ್ಪತ್ರೆಗಳಿಗೆ ಹೋಗುವುದನ್ನು ಕಾಣಬಹುದು. ಯಾವುದೇ ವ್ಯಕ್ತಿಗೆ ಜ್ವರ ಬಂದರೆ ಚುಟುಗಿ ಹಾಕುವುದರ ಮೂಲಕ ಜ್ವರ ವಾಸಿ ಮಾಡುತ್ತಾರೆ. ಕೊರವರು ತಮ್ಮ ಜನ್ಮ ಸ್ಥಳವನ್ನು ತೊರೆದು ಇತರ ಸ್ಥಳಗಳಲ್ಲಿ ವಾಸ್ತವ್ಯ ಹೂಡಿದ್ದಾರೆ. ತಲೆನೋವು, ನರಗಳ ನೋವಿನಿಂದ ಬಳಲುವವರಿಗೆ, ತಲೆಗೆ ಒಂದು ಚುಟುಗಿ ಮತ್ತು ನರಗಳಿಗೆ ಚುಟುಗಿ ಹಾಕುವುದರಿಂದ ಮೈ ಕೈ ನೋವು, ತಲೆನೋವು ವಾಸಿ ಮಾಡುತ್ತಾರೆ.

ಹುಟ್ಟಿದ ಮಗುವಿಗೆ ಶುಚಿ ಮಾಡಿದ ಮೇಲೆ ಮೈಗೆಲ್ಲ ಚುಟುಗಿ ಹಾಕುತ್ತಾರೆ. ಮುಂದೆ ಯಾವುದೇ ರೀತಿ ತೊಂದರೆಯಾಗದಿರಲಿ ಎಂದು, ಮಗುವಿಗೆ ಸ್ಪರ್ಶಜ್ಞಾನವಾಗಲೆಂದು ಈ ರೀತಿ ಮಾಡಲಾಗುತ್ತದೆ.

ದೈವದ ಮೇಲೆ ತುಂಬ ನಂಬಿಕೆ ಇದ್ದವರಿಗೆ ಒಂದು ಬಿಳಿ ಬಟ್ಟೆಯಲ್ಲಿ ಒಂದು ರೂಪಾಯಿ ಇಟ್ಟು ಅದನ್ನು ಕಟ್ಟಿ ಜ್ವರ ಬಂದ ಹುಡುಗಿ ಅಥವಾ ಹುಡುಗರ ಕೈ ರಟ್ಟೆಗೆ ಕಟ್ಟಿ ದೇವರ ಹೆಸರು ಹೇಳಿ ಕುಂಕುಮ ಇಡುತ್ತಾರೆ. ಅದು ವಾಸಿಯಾಗುತ್ತದೆ ಎಂಬ ನಂಬಿಕೆ. ಆದರೂ ಆ ನಂಬಿಕೆ ನಿಜವಾಗುತ್ತದೆ. ಕುತೂಹಲಕಾರಿ ಮತ್ತು ಅಚ್ಚರಿಯು ಉಂಟಾಗುತ್ತದೆ. ಅತಿಸಾರವಾದಾಗ, ಬಟ್ಟಿ ಬಿದ್ದಾಗ, ಮೊಣಕಾಲಿನ ಹಿಂಭಾಗದಲ್ಲಿ ಎಣ್ಣೆಯಿಂದ ನೀವುದು (ತಿಕ್ಕುವುದು) ಮತ್ತು ಪಾದಗಳ ಮೇಲೆ ತಿಕ್ಕಿ ಬೆರಳುಗಳಿಂದ ಹೊಡೆಯುತ್ತಾರೆ. ನಂತರ ಕಾಲುಗಳನ್ನು ಮೂರು ಸಾರಿ ಬಸ್ಕಿ ಮಾಡುವುದರಿಂದ ಮೈಗೆ ಸಡಲಿಕೆಯಾಗಿ ಅತಿಸಾರವಾಗುವುದು ವಾಸಿಯಾಗುತ್ತದೆ. ಇವು ಮನೆಮದ್ದುಗಳಾಗಿವೆ.

ಸಂಸ್ಕೃತಿ ಎನ್ನುವುದು ಮಾನವ ಸಮಾಜವನ್ನು ಸುತ್ತುವರೆದಿದ್ದು, ಯಾವುದೇ ಸಮಾಜದಲ್ಲಿ ಸಾಂಪ್ರದಾಯಿಕವಾಗಿ ಬಂದ ಪದ್ಧತಿಗಳ, ಜೀವನ ಮೌಲ್ಯಗಳ ಮತ್ತು ಆದರ್ಶಗಳ ಸಂಗ್ರಹವನ್ನು ಸಂಸ್ಕೃತಿ ಎನ್ನುತ್ತಾರೆ ಎಂದು ಹಲವು ಸಮಾಜಶಾಸ್ತ್ರಜ್ಞರು ಹೇಳುತ್ತಾರೆ. ಆದರೆ ಸಂಸ್ಕೃತಿಯಲ್ಲಿ ಕೇವಲ ಮೌಲ್ಯಗಳು ಮತ್ತು ಭಾವನೆಗಳು ಮಾತ್ರ ಸೇರ್ಪಡೆಯಾಗಿರದೆ, ಬೌದ್ಧಿಕ ಸಾಧನೆಗಳು, ಜೀವನ ಶೈಲಿ, ರೀತಿ, ರಿವಾಜುಗಳು, ಆಚರಣೆ–ನಂಬಿಕೆಗಳು, ಪಾತ್ರ ಹಂಚುವಿಕೆ, ನೀತಿ ನಿಯಮಗಳು ಮುಂತಾದ ಅಂಶಗಳೂ ಸೇರಿವೆ. ಆದರೆ ಸಂಸ್ಕೃತಿ ಮತ್ತು ಸಮಾಜದ ನಡುವಣ ಸಂಬಂಧದ ಸ್ವರೂಪ ಏಕಮುಖವಾದುದಲ್ಲ. ಸಾಂಸ್ಕೃತಿಕ ಸಮಾಜದ ರೀತಿ ನೀತಿಗಳನ್ನೂ ಜನಜೀವನವನ್ನು ಪ್ರಭಾವಿಸುತ್ತದೆ. ಸಮಾಜವೂ ಸಂಸ್ಕೃತಿಯಲ್ಲಿ ಬದಲಾವಣೆಯನ್ನು ತರುತ್ತದೆ.

ಮಹಿಳೆಯರು ತಮ್ಮ ಜೈವಿಕ ರಚನೆಯ ಕಾರಣದಿಂದಾಗಿ ಶಿಶು ಜನನ ಹಾಗೂ ಶಿಶುವಿನ ಲಾಲನೆ ಪಾಲನೆಯ ಜವಾಬ್ದಾರಿಗಳನ್ನು ವಹಿಸಿಕೊಳ್ಳುತ್ತಾರೆ. ಈ ಸಮಯದಲ್ಲಿ ಅವರು ಹೆಚ್ಚಾಗಿ ಮನೆಯೊಳಗೆ ಇರುತ್ತಿದ್ದರಿಂದ ಮನೆಯ ಒಳಗೆ ಹಾಗೂ ಮನೆಯ ಸುತ್ತಮುತ್ತಲಿನ ಕೆಲಸಗಳನ್ನು ನಿರ್ವಹಿಸಬೇಕಾಗುವುದರಿಂದ ಜವಾಬ್ದಾರಿಗಳಿಗೆ ಅವರು ಹೊಣೆಯಾಗುತ್ತಿದ್ದರು. ಹಾಗೆಂದ ಮಾತ್ರಕ್ಕೆ ಆ ಕೆಲಸಗಳು, ಒಂದು ಸಮುದಾಯದ ಮತ್ತು ಕುಟುಂಬದ ಉಳಿವು ಹಾಗೂ ಅಭಿವೃದ್ಧಿಗಳ ದೃಷ್ಟಿಯಿಂದ ಅದು ಮುಖ್ಯವಾದವು ಎಂಬರ್ಥವಿರಲಿಲ್ಲ. ಅನ್ವೇಷಣೆಯ ಹಂತದಲ್ಲಿ ಮಾನವರು ಕನಿಷ್ಠ ಗುಂಪಾಗಿ ಚಲಿಸುತ್ತಿದ್ದರಿಂದ ಯಾರು ಮೇಲು, ಯಾರು ಕೀಳು ಎಂಬ ಕಲ್ಪನೆಗಳಿಗೆ ಆ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಥಾನವಿರಲಿಲ್ಲ. ಆದರೆ, ಎಲ್ಲಿಯವರೆಗೆ ಕೆಲಸವು ಜೀವನದ ಉಳಿವಿಗಾಗಿ, ಹೊಟ್ಟೆಪಾಡಿಗಾಗಿ ನಡೆಯುತ್ತಿತ್ತೊ ಅಲ್ಲಿಯವರೆಗೆ ಸ್ತ್ರೀ ಪುರುಷರ ಕೆಲಸಗಳ ನಡುವೆ ತಾರತಮ್ಯ ಭೇದಭಾವ ಇರಲಿಲ್ಲ. ಅವಶ್ಯಕತೆ ಮತ್ತು ಸಾಮರ್ಥ್ಯಗಳಿಗೆ ತಕ್ಕಂತೆ ಇಬ್ಬರೂ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿದ್ದರು. ಯಾವಾಗ ಕೆಲಸವು ಮಾರುಕಟ್ಟೆಗೆ ವಸ್ತುಗಳ ವಿನಿಮಯಕ್ಕೆ ಬಂದಿತ್ತೋ ಹಾಗೂ ಶ್ರಮವು ಹಣದ ವಿನಿಮಯಕ್ಕೆ ಒಳಪಟ್ಟಿತೋ, ಅಂದಿನಿಂದ ಕೆಲಸವು ದುಡಿಮೆಯಾಗಿ ಪರಿವರ್ತನೆಗೊಂಡಿತು. ಇಂತಹ ಕೆಲಸಗಳಲ್ಲಿ ಸ್ತ್ರೀ ಪುರುಷರಿಬ್ಬರೂ ತೊಡಗಿಕೊಂಡಿದ್ದರೂ ಪುರುಷರನ್ನು ಮಾತ್ರ ದುಡಿಮೆಗಾರರಾಗಿ ಗುರುತಿಸಲ್ಪಟ್ಟಿತು. ಈ ಹಂತದಲ್ಲಿ ದುಡಿಮೆ ಅಂದರೆ ಪುರುಷ, ಪುರುಷ ಅಂದರೆ ದುಡಿಮೆ ಎಂಬ ಕಲ್ಪನೆಯು ಮೂಡಿಬಂದಿತು. ದುಡಿಮೆಗಾರರು ಎಂಬ

ಪದ ಬಂದ ತಕ್ಷಣ ನಮ್ಮ ಕಣ್ಣೆದುರಿಗೆ ಬರುವ ಚಿತ್ರಣ ಪುರುಷರದ್ದು. ಸೇವೆ ಎಂದಾಕ್ಷಣ ಮಹಿಳೆಯರ ಚಿತ್ರಣ ಬರುತ್ತದೆ. ದುಡಿಮೆಯ ವ್ಯಾಖ್ಯೆಯಲ್ಲಿ ಅಥವಾ ಪರಿಕಲ್ಪನೆಯಲ್ಲಿ ವ್ಯತ್ಯಾಸ, ಭೇದಭಾವ ಇರುತ್ತದೆ. ದುಡಿಮೆಯನ್ನು ಅಳೆಯುವುದರಲ್ಲಿ ಲಿಂಗ ಸಮಾನತೆ, ಲಿಂಗ ತಾರತಮ್ಯ ಕಂಡುಬರುತ್ತದೆ. ಕುಟುಂಬ ಎಂಬ ಸಂಸ್ಥೆ ಅಸ್ತಿತ್ವಕ್ಕೆ ಬಂದು, ಪುರುಷ ಆಹಾರವನ್ನು ಉತ್ಪಾದಿಸುವವ, ಮಹಿಳೆ ಅದರ ಬಳಕೆದಾರಳು ಎಂಬ ಭಾವನೆ ಜಾಗೃತವಾಗಲು ಪುರುಷ ಕೆಲಸಕ್ಕೆ ಬೆಲೆ ಕಟ್ಟುವಂಥ ಪ್ರವೃತ್ತಿಯು ಬೆಳೆಯಿತು. ಮನೆಯ ಹೊರಗಿನ ದುಡಿಮೆಗೆ ಬೆಲೆ ಇದೆ. ಆದರೆ ಮನೆಯ ಒಳಗೆ ದುಡಿಮೆಯ ಅಥವಾ ಕೆಲಸಕ್ಕೆ ಬೆಲೆಯಿಲ್ಲದಂತೆ ಮಾಡಿದ್ದಾರೆ. ಮಕ್ಕಳಿಗೆ ಜನ್ಮ ನೀಡುವುದು, ಅವರನ್ನು ಬೆಳೆಸುವುದು, ರೋಗಿಗಳಿಗೆ ಆರೈಕೆ ಮಾಡುವುದು, ಮನೆಯ ಒಳಗೆ ಮತ್ತು ಹೊರಗೆ ಮಹಿಳೆಯರು ಮಾಡುವ ಅನೇಕ ಕೆಲಸಗಳಿಗೆ ಮೌಲ್ಯವೇ ಇಲ್ಲದಂಥ ಪರಿಸ್ಥಿತಿ ನಿರ್ಮಾಣವಾಗಿ, ಇದೇ ಒಂದು ಸ್ಥಾಪಿತ ವ್ಯವಸ್ಥೆಯಾಗಿದೆ. ಆಹಾರವನ್ನು ಉತ್ಪಾದಿಸಿದರೆ ಸಾಕೆ? ಆ ಆಹಾರವನ್ನು ಶುದ್ಧಿ ಮಾಡುವ, ವಿತರಿಸುವ ಹಾಗೂ ಸಂರಕ್ಷಿಸುವ ಕೆಲಸಗಳೂ ಕೂಡ ಅಷ್ಟೇ ಮುಖ್ಯವಾಗುವುದಿಲ್ಲವೇ ಎಂಬ ಪ್ರಶ್ನೆ ಬರುತ್ತದೆ.

ಸಂಸ್ಕೃತಿ ಸಾಮಾಜಿಕ ನಿಯಂತ್ರಣದ ಸಾಧನವಾಗಿದೆ. ಈ ಸಂಸ್ಕೃತಿ ಮಹಿಳೆಯರನ್ನು ದೇವಿ ಸಮಾನಳೆಂದು ನೋಡುವುದು ಒಂದು ಕಡೆಯಾದರೆ, ಇನ್ನೊಂದು ಕಡೆ ಒಂದು ಹೆಣ್ಣು ಬಾಲ್ಯದಲ್ಲಿ ತಂದೆ ಆಸರೆ, ಯೌವ್ವನದಲ್ಲಿ ಗಂಡನಾಸರೆ, ಮುಪ್ಪಿನಲ್ಲಿ ಮಕ್ಕಳ ಆಸರೆಯಲ್ಲಿ ಇರಬೇಕೆಂದು ಹೇಳುತ್ತದೆ. ಇಂತಹ ಸಂಸ್ಕೃತಿ ಇದ್ದರೂ ಕೂಡ ಮಹಿಳೆ ಮನೆ ಒಳಗಡೆ ಮತ್ತು ಹೊರಗಡೆ ಎರಡು ಬಗೆಯ ನೋವುಗಳನ್ನು, ಹಿಂಸೆಗಳನ್ನು ಅನುಭವಿಸುತ್ತಾಳೆ. ವರದಕ್ಷಿಣೆ, ಲೈಂಗಿಕ ಕಿರುಕುಳ ಇನ್ನಿತರ ಹಲವಾರು ಕಾರಣಗಳಿಂದ ಮಹಿಳೆ ಹುಟ್ಟಿನಿಂದ ಸಾಯುವವರೆಗೆ ಪ್ರತಿಯೊಂದು ಹಂತದಲ್ಲಿ ದೌರ್ಜನ್ಯಕ್ಕೆ ಒಳಗಾಗುತ್ತಾಳೆ. ಸಂಸ್ಕೃತಿಯ ಸಂಪೂರ್ಣ ವ್ಯವಸ್ಥೆಯು ಪುರುಷ ಪ್ರಧಾನ ಸಮಾಜವಾಗಿರುವುದರಿಂದ ಗಂಡಿಗೆ ಒಂದು ಸಂಸ್ಕೃತಿ, ಹೆಣ್ಣಿಗೆ ಒಂದು ಸಂಸ್ಕೃತಿಯನ್ನು ಸೃಷ್ಟಿಸುವುದರಲ್ಲಿ ಲಿಂಗ ತಾರತಮ್ಯವನ್ನು ಕಾಣಬಹುದು. ಉದಾಹರಣೆಗೆ ಹೆಣ್ಣು ಸೀರೆ ಉಟ್ಟುಕೊಳ್ಳುವುದು, ಬಳೆ, ಹಾಕಿಕೊಳ್ಳುವುದು ಸಂಸ್ಕೃತಿಯಾದರೆ, ಅವಳು ಮನೆ ಒಳಗಡೆ ಇದ್ದು ಅಡುಗೆ ಮಾಡಿ ಗಂಡ ಮಕ್ಕಳನ್ನು ನೋಡಿಕೊಂಡೆ ಇರಬೇಕೆಂಬ ಒಳತಂತ್ರಗಾರಿಕೆಯು ಸಂಸ್ಕೃತಿಯಲ್ಲಿ ಅಡಗಿರುವುದನ್ನು ನಾವು ಕಾಣಬಹುದಾಗಿದೆ. 'ಅವಳನ್ನು ವರದಕ್ಷಣೆಗಾಗಿ ಹಿಂಸಿಸುವ, ಬೆಂಕಿ ಹಚ್ಚಿ ಕೊಲೆ ಮಾಡುವುದು' ನಮ್ಮ ಸಂಸ್ಕೃತಿ ಎನ್ನುವ ಸಂದಿಗ್ಧತೆಗೆ ನಮ್ಮ ಬಳಿ ಉತ್ತರವಿದೆಯೇ? ಧರ್ಮದ ಹೆಸರಿನಲ್ಲಿ ಮಹಿಳೆಯನ್ನು ಎರಡನೇ ದರ್ಜೆಯ ಪ್ರಜೆಯಂತೆ ನಡೆಸಿಕೊಳ್ಳುವ ನಮ್ಮ ಸಮಾಜದಲ್ಲಿ ಹೆಣ್ಣು ಶಿಶುಹತ್ಯೆ, ದ್ವಿಪತ್ನಿತ್ವ, ಪುರುಷರ ದಬ್ಬಾಳಿಕೆ ಇವೆಲ್ಲವೂ ಸಂಸ್ಕೃತಿಯ ವಿವಿಧ ಮುಖಗಳೇ ಆಗಿವೆ. ಎಲ್ಲ ಧರ್ಮಗಳೂ ನಾಮಮಾತ್ರಕ್ಕೆ 'ಸರ್ವರೂ ಸಮಾನರು' ಎಂಬ ತತ್ವವನ್ನು ಹೇಳುತ್ತಿವೆ.

ಕುಟುಂಬ, ವಿವಾಹ, ಶಿಕ್ಷಣ, ಧರ್ಮ, ಮಾಧ್ಯಮ ಈ ವ್ಯವಸ್ಥೆಗಳಲ್ಲಿ ನಡೆಯುವ ಲಿಂಗಾಧಾರಿತ ಸಮಾಜೀಕರಣ ಆಯಾ ಸಮಾಜದ ಪ್ರಬಲ ಸಂಸ್ಕೃತಿಯ ಅಂಶಗಳು ತಲೆಮಾರಿನಿಂದ ತಲೆಮಾರಿಗೆ

ಮುಂದುವರೆಯುತ್ತಾ ಹೋಗುತ್ತವೆ. ಮಹಿಳೆಯರಿಗೆ ಆಯಾ ಸಂಸ್ಕೃತಿಯ ಪರಿಸರಕ್ಕೆ ಅನುಗುಣವಾಗಿ ಪಾತ್ರಗಳು ಹಾಗೂ ಜವಾಬ್ದಾರಿಗಳನ್ನು ವಹಿಸುತ್ತದೆ. ಮಹಿಳೆಯ ಸಾಮಾಜಿಕ ಸ್ಥಾನವನ್ನು ಅಧ್ಯಯನ ಮಾಡುವಾಗ ಅವರು ಬೆಳೆದು ಬಂದಂಥ ಅಥವಾ ಜೀವನವನ್ನು ನಡೆಸುತ್ತಿರುವ ಸಾಂಸ್ಕೃತಿಕ ಪರಿಸರದ ಹಿನ್ನೆಲೆಯಲ್ಲಿ ನೋಡಲಾಗುತ್ತದೆ. ಸಾಂಸ್ಕೃತಿಕ ಸೃಷ್ಟಿ, ಬೆಳವಣಿಗೆ ಹಾಗೂ ಉಳಿವಿನಲ್ಲಿ ಮಹಿಳೆಯರು ಪ್ರಮುಖ ಪಾತ್ರವನ್ನು ವಹಿಸುತ್ತಾರೆ ಎನ್ನುವುದು ಬಹುತೇಕ ಸಮಾಜಗಳಲ್ಲಿ ಜಾರಿಯಲ್ಲಿರುವುದು ಎಂದು ಹೇಳಬಹುದು. ಸಂಸ್ಕೃತಿಯನ್ನು ಉಳಿಸುವ ಸಲುವಾಗಿ ಮಹಿಳೆಯರು ಸಾಂಪ್ರದಾಯಿಕ ನಿರ್ಬಂಧನೆಗಳನ್ನು ತೊಡೆದು ಬರುವುದು ತರವಲ್ಲ ಎಂದು ಹೇಳುವ ಜನರೇ ಹೆಚ್ಚಾಗಿದ್ದಾರೆ.

ಕೊರವ ಸಮುದಾಯದವರು ಸಂಪ್ರದಾಯ ನಿಷ್ಠಾಪ್ರವೃತ್ತಿಯವರು. ಜನಪದ ಸಂಸ್ಕೃತಿ ರೂಢಿಗತ ಪರಂಪರೆ ಸಂಪ್ರದಾಯ ನಿಷ್ಠೆಗೆ ಇನ್ನೊಂದು ಹೆಸರು. ನಾಗರಿಕ ಸಂಸ್ಕೃತಿ ನಿರಂತರ ಪ್ರಗತಿಯ ಸಂಕೇತ. ಇವೆರಡಕ್ಕೂ ಕೊಡುಕೊಳ್ಳುವಿಕೆಗಳು ನಡೆಯುವುದು ಸ್ವಾಭಾವಿಕ. ನಿತ್ಯ ಜೀವನದಲ್ಲಿ ಸಂಪ್ರದಾಯ ನಿಷ್ಠೆ ಎದ್ದು ಕಾಣುತ್ತದೆ. ವಾಸ್ತವವಾಗಿ ಜಾನಪದದ ಜನನ ಮರಣ, ದೈವಭಕ್ತಿ ಮದುವೆ, ಮುಂಜಿ, ಅತಿಥಿ ಸತ್ಕಾರ, ದಾನಧರ್ಮಗಳು ಅನೇಕ ಆಚರಣೆಗಳ ಮೇಲೆ ಶಿಷ್ಟ ಸಂಪ್ರದಾಯದ ಪ್ರಭಾವ ಗಾಢವಾಗಿರುವುದನ್ನು ಗುರುತಿಸಬಹುದು.

ಜಾನಪದರು ಹುಟ್ಟಿನಿಂದ ಸಾಯುವವರೆಗೂ ದೇವರ ಸ್ಮರಣೆ ಮಾಡುತ್ತಾ ದೈನಂದಿನ ಕೆಲಸ ಬೊಗಸೆಗಳಲ್ಲಿ ತೊಡಗುವುದರಿಂದ ಹಿಡಿದು, ಹಬ್ಬ, ಮದುವೆ, ತಿಥಿ, ಪಂಚಾಯಿತಿ ತೀರ್ಪು ಮೊದಲಾದ ವಿಶೇಷ ಘಟನೆಗಳವರೆಗೆ ತಮ್ಮ ಪೂರ್ವಿಕರ ಸಂಪ್ರದಾಯಗಳನ್ನೆ ಆದರ್ಶವಾಗಿಸಿ ಕೊಂಡಿದ್ದಾರೆ. ಆಧುನಿಕತೆ ಬದಲಾದಂತೆ ಕಾಲ ಪರಿಸ್ಥಿತಿಗೆ ಮನುಷ್ಯನು ಕೂಡ ಬದಲಾಗುತ್ತಾನೆ. ಬುಟ್ಟಿ ಹೆಣೆಯುವ ಮಹಿಳೆಯ ಮನಸ್ಸು ಬದಲಾವಣೆಯನ್ನು ಬಯಸುತ್ತಿದೆ. ಇನ್ನು ಆಧುನಿಕ ಪ್ರಭಾವಗಳು ಇವರಿಗೆ ಆಗಲು ಇನ್ನೂ ಸಮಯ ಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಯಾರಾದರೂ ಪ್ರಶ್ನಿಸಿದರೆ ಅವರು ಹೇಳುವುದೇ ಒಂದು. ನಮ್ಮ ಹಿರಿಯರು ಮಾಡಿಕೊಂಡು ಬಂದ ಪದ್ಧತಿ ಅದನ್ನೇ ಮಾಡುತ್ತವೆ. ಇದೇ ಸರಿ ಎಂದು ಹೇಳುತ್ತಾರೆ ಮದುವೆ ಮುಂಜಿ ಮರಣ ಇಂತಹ ಸಂಸ್ಕಾರಗಳನ್ನು ಆಚರಿಸುವ ಪದ್ಧತಿಗಳಿಗೆ ಕನಿಷ್ಟವೆಂದರೂ ಒಂದು ಸಾವಿರ ವರ್ಷಗಳ ಪರಂಪರೆಯ ಹಿನ್ನೆಲೆ ಇದೆ. ಜನತೆಯ ನಿರಂತರ ಆಚರಣೆಗಳನ್ನು ಅಳಿಸಲಾಗದಂತೆ ಸ್ಥಿರಗೊಳಿಸಿದೆ.

ಆದರೆ ವಸ್ತುಸ್ಥಿತಿಯ ಬಗ್ಗೆ ಯೋಚಿಸಬೇಕಾಗುತ್ತದೆ. ಕಾಲಕ್ಕೆ ತಕ್ಕಂತೆ ಎಂಥ ಗ್ರಾಮಗಳಾದರು ಸಾಕಷ್ಟು ಬದಲಾಗುತ್ತಿವೆ. ನೂರಾರು ವರ್ಷಗಳ ಹಿಂದೆ ಇದ್ದ ವಾತಾವರಣವು ಈಗ ಸಂಪೂರ್ಣವಾಗಿ ಕಾಣಬರುವುದಿಲ್ಲ. ಇನ್ನೂ ನೂರು ವರ್ಷಗಳ ನಂತರವೂ ಪರಿಸ್ಥಿತಿ ಇನ್ನೂ ಬದಲಾಗುತ್ತದೆ. ಇದಕ್ಕೆ ಕಾರಣ ಹಲವಾರು. ಕೊರವರ ಸಮುದಾಯದಲ್ಲಿ ಅವರ ಕಸುಬುಗಳಿಗೆ ಬೆಲೆ ಕಡಿಮೆಯಾಗುತ್ತಿರುವುದು. ಶಿಕ್ಷಣದಿಂದ ಮುಂದುವರೆಯದೇ ಇರುವುದು. ಸಮಾಜದ ಬದಲಾವಣೆಗೆ ಹೊಂದಿಕೊಂಡು ಅನೇಕ

ಕೆಲಸಗಳನ್ನು ಮಾಡಬೇಕಾಗುತ್ತದೆ. ಆದರೆ ವಿದ್ಯಾವಂತರಾಗಿದ್ದರೆ ಮಾತ್ರ ಮುಂದುವರೆಯಲು ಸಾಧ್ಯವಾಗುತ್ತದೆ. ಇವರಲ್ಲಿ ಮಹಿಳೆಯರು ತಮ್ಮ ಮಕ್ಕಳನ್ನು ಓದಿಸಿ ಮಕ್ಕಳನ್ನು ದೊಡ್ಡ ಕೆಲಸಕ್ಕೆ ಸೇರಿಸಬೇಕು ಎಂಬ ಆಸೆ ಇರುತ್ತದೆ. ಕಷ್ಟಪಟ್ಟು ಬೆವರು ಸುರಿಸಿ ದುಡ್ಡು ಸಂಪಾದಿಸುತ್ತಾಳೆ. ಆದರೆ ಗಂಡ ಎಂಬುದು ದುಡಿದ ಹಣವನ್ನು ತನ್ನ ಸ್ವಂತಕ್ಕೆ ಬಳಸಿಕೊಳ್ಳುತ್ತಾನೆ. ಓದುವುದು ಬಿಟ್ಟು ಕೂಲಿ ಕೆಲಸ ಮಾಡು ಎಂದು ಬೈಯುವುದುಂಟು. ಇವರು ಅಭಿವೃದ್ಧಿ ಹೊಂದುವುದಕ್ಕೆ ಎಷ್ಟು ದಶಕಗಳು ಬೇಕು ತಿಳಿಯದು. ಗಗನಕ್ಕೆ ಏರಿರುವ ಬೆಲೆಗಳಿಂದ ಬದುಕುವುದಕ್ಕೂ ಯೋಚಿಸಬೇಕಾಗುತ್ತದೆ. ನಿತ್ಯ ಜೀವನದ ಕೆಲವು ಸಾಮಾನ್ಯ ಲಕ್ಷಣಗಳಲ್ಲಿ ಅಮೂಲ್ಯ ಬದಲಾವಣೆಗಳಿಗೆ ಹೋಗಿಲ್ಲ. ಸಂಪ್ರದಾಯದ ಸಂಗತಿಗಳಿಗೆ ಜಾನಪದರು ಕೊಡುವ ಮಹತ್ವ ಹಾಗೂ ಪರಂಪರೆಗೆ ಅಂಟಿಕೊಂಡಿರುವ ಗುಣ, ತಾವು ನಂಬಿರುವ ಆಚರಣೆ, ರೀತಿ–ನೀತಿಗಳು ಎಂದಿನಿಂದಲೂ ಜನಪದ ಸಂಸ್ಕೃತಿಗೆ ಒಗ್ಗಿ ಹೋಗಿರುವುದು ಇದರ ಪರಿಣಾಮ. ಈ ಎಲ್ಲ ಕಾರಣಗಳಿಂದ ಜನಪದರ ನಿತ್ಯ ಜೀವನ ಕಾಪಾಡಿ ಕೊಂಡೇ ಸಾಗುತ್ತಿದೆ.

ಮಾನವ ತನ್ನ ದೈನಂದಿನ ಬದುಕನ್ನು ಸುಗಮವಾಗಿ ಸಾಗಿಸಲು ಮತ್ತು ದೈಹಿಕ ಅಗತ್ಯಗಳನ್ನು ಈಡೇರಿಸಿಕೊಳ್ಳಲು ಆರ್ಥಿಕ, ವೈವಾಹಿಕ, ಕೌಟುಂಬಿಕ ವ್ಯವಸ್ಥೆಗಳನ್ನು ರೂಪಿಸಿಕೊಂಡತೆಯೇ ಮಾನಸಿಕ ಸ್ಥಿತಿಯಲ್ಲಿ ಹಾಗೂ ನೆಮ್ಮದಿಯನ್ನು ಪಡೆಯಲು ಧಾರ್ಮಿಕ ವ್ಯವಸ್ಥೆಯನ್ನು ರೂಢಿಸಿ ಕೊಂಡನೆಂದು ತೋರುತ್ತದೆ. ನಂಬಿಕೆ ಆಚರಣೆ, ಜಪ–ತಪ, ಪೂಜೆ–ಪ್ರಾರ್ಥನೆ, ಬಲಿ ಮೊದಲಾದವುಗಳ ಮುಖಾಂತರ ಮಾನವನ ಧಾರ್ಮಿಕ ಭಾವನೆ ಅಭಿವ್ಯಕ್ತಿಗೊಳ್ಳತೊಡಗಿತು. ಆದಿಮಾನವ ಮನುಷ್ಯ ಶಕ್ತಿಯೊಂದಿಗೆ ಏರ್ಪಡಿಸಿಕೊಂಡ ಹೊಂದಾಣಿಕೆಯ ಫಲವೇ ಧರ್ಮ ಎನ್ನಬಹುದು ಅಥವಾ ಅಗೋಚರವಾದ ಅಲೌಕಿಕ ಶಕ್ತಿಯೊಂದಿಗೆ (ಮಾಡಿಕೊಂಡ) ಏರ್ಪಡಿಸಿದ ಫಲವೇ ಧರ್ಮ ಎನ್ನಬಹುದು. ಮಾನವ ಯಾವುದನ್ನು ಪೂಜಾ ಭಾವನೆಯಿಂದ ನೋಡುವನೋ ಅದರೊಡನೆ ಇರಿಸಿಕೊಳ್ಳುವ ಸಂಬಂಧವೇ ಧರ್ಮ.

ದೇವತೆ, ದೇವರು–ದಿಂಡರು ಮತ್ತು ದೈವ ಎಂಬ ಶಬ್ದವನ್ನು ವೈಯಕ್ತಿಕವಾಗಿ ಬಳಸುತ್ತೇವೆ. ದೇವತಾ ಸ್ವರೂಪಗಳೊಡನೆ ಇರುವ ಮಾನವ ಸಂಬಂಧ ಧರ್ಮವೆನಿಸುವಂತೆ, ಅಂಥವುಗಳಲ್ಲದೆ ಪೂಜಾ ವಸ್ತುಗಳೊಂದಿಗೆ ಅವಳ ಸಂಬಂಧಕ್ಕೂ ಅನ್ವಯಿಸುವಷ್ಟು ಅದು ವಿಶಾಲವಾಗಿರುತ್ತದೆ. ಧಾರ್ಮಿಕ ಪೂಜಾ ವಿಧಿಗಳಿಗೆ ಪರಮಾತ್ಮನೊಬ್ಬ ಮುಖ್ಯವಾಗಿರುತ್ತಾನೆ. ಅವನ ಅಧೀನದಲ್ಲಿಯೇ ಚರಾಚರಗಳೆಲ್ಲ ಕಾರ್ಯ ನಿರ್ವಹಿಸುತ್ತದೆ. ಪಿತೃದೇವತೆಗಳು, ಭೂತಾದಿಗಳು, ಪವಿತ್ರ ಕಾರ್ಯಗಳು ಮತ್ತು ಪ್ರಾಣಿಗಳು ಹಾಗೂ ನಾಗ, ಮೊದಲಾದ ಅಗೋಚರ ಶಕ್ತಿ ಇವೆಲ್ಲವೂ ಧರ್ಮಾಚರಣೆಗಳ ಪರಿಧಿಯಲ್ಲಿ ಅಂತರ್ಗತವಾಗಬಲ್ಲವು. ವಿಧಿ ನಿಷೇಧಗಳು, ಶುಭಾಶುಭ, ಶಕುನಾದಿಗಳು, ಪುಣ್ಯ ದಿನಗಳು, ಗುರುಪರಂಪರೆ, ನಿತ್ಯ ತತ್ವಗಳು ಮೊದಲಾದವುಗಳಲ್ಲಿ ಸೇರಿಕೊಂಡೇ ಇರುತ್ತವೆ. ಭಿನ್ನ ಭಿನ್ನ ಮತಗಳಲ್ಲಿ ಇವೆಲ್ಲ ಬೇರೆ ಬೇರೆಯಾಗಿಯೇ ಇದ್ದರೂ ಪೂಜ್ಯ ಭಾವನೆ ಮಾತ್ರ ಎಲ್ಲ ಮತಗಳ ಪ್ರಕ್ರಿಯೆಗಳಿಗೂ ಸಮಾನವಿರುವುದು ಕಾಣಬಹುದು.

ಬದುಕಿನಲ್ಲಿ ಎದುರಾಗುವ ಸಂದಿಗ್ಧ ಪರಿಸ್ಥಿತಿಗಳನ್ನು ಎದುರಿಸಲು ಧರ್ಮ ಹಾಗೂ ಮಂತ್ರ ವಿದ್ಯೆಯ ಮೊರೆ ಹೋಗುವುದು ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ಆದಿಮಾನವ ಬದುಕಿನ ವಾಸ್ತವತೆಯನ್ನು ಎದುರಿಸಲು ಅಶಕ್ತನಾದಾಗ, ತನಗಿಂತಲೂ ಅತೀತವಾದ ಅಗೋಚರವಾದ ಶಕ್ತಿಯೊಂದಿದೆ ಎಂಬ ಭಾವನೆಯಿಂದ ಬದುಕುತ್ತಿರುತ್ತಾನೆ. ಪೂಜೆ, ಪ್ರಾರ್ಥನೆ, ಬಲಿ, ಮಾಟ ಮಂತ್ರ, ಇತ್ಯಾದಿಗಳು ಮಾನವ ಬದುಕನ್ನು ಆಕ್ರಮಿಸಿಕೊಂಡವು. ಮಾನವನನ್ನು ತೊಂದರೆಗಳಿಂದ ಪಾರು ಮಾಡುವ ಹಾಗೂ ಮನೋವೇದನೆಯನ್ನು ನಿವಾರಿಸಿ ಮಾನಸಿಕ ಸ್ವಾಸ್ಥ್ಯವನ್ನು ನೀಡುವ ಪ್ರಮುಖ ಉದ್ದೇಶವನ್ನು ಒಳಗೊಂಡ ಹೊಂದಾಣಿಕೆಯ ಸಾಧನಗಳಲ್ಲಿ ಪೂಜೆ ಪ್ರಾರ್ಥನೆಗಳಲ್ಲಿ ಶರಣಾಗತ ಭಾವನೆ ಕಂಡುಬರುತ್ತದೆ. ಆದರೆ ಮಂತ್ರವಿದ್ಯೆಯಲ್ಲಿ ಮಾಟಮಂತ್ರಗಳಿಂದ ಅಲೌಕಿಕ ಶಕ್ತಿಯನ್ನು (ಕಣ್ಣಿಗೆ ಕಾಣದಂತಹ ಶಕ್ತಿ) ವಶಪಡಿಸಿಕೊಂಡು ನೆರವು ಪಡೆದುಕೊಳ್ಳುವ ಭಾವನೆ ಕಂಡುಬರುತ್ತದೆ. ಧರ್ಮಕ್ಕೆ ಕೆಡಕನ್ನುಂಟುಮಾಡಲು ಬಳಸಿಕೊಳ್ಳಲಾಗುವುದಿಲ್ಲ. ಆದರೆ ಆತ್ಮ ಕಲ್ಯಾಣಕ್ಕಾಗಿ, ಲೋಕೋದ್ಧಾರಕ್ಕಾಗಿ ಬಳಸಿಕೊಳ್ಳಲಾಗುತ್ತದೆ. ಮಂತ್ರವಿದ್ಯೆ ಸ್ವಾರ್ಥ ಸಾಧನೆಗೆ ಪ್ರಮುಖ ವಾಗಿರುತ್ತದೆ. ಮಂತ್ರ ಶಕ್ತಿಯಿಂದ ರೋಗ ರುಜಿನಗಳನ್ನು ವಾಸಿ ಮಾಡಿಕೊಳ್ಳಬೇಕು. ಕಷ್ಟ ನಷ್ಟಗಳನ್ನು ನೀಗಿಸಿಕೊಳ್ಳಬೇಕು. ವೈರಿಗಳಿಂದ ತೊಂದರೆ ಬರದಂತೆ ಮಾಡುವುದು ವೈರಿಗಳಿಗೆ ತೊಂದರೆ ಕೊಡಬೇಕು.

ಭೂಮಿಯಲ್ಲಿ ಅಡಗಿರುವ ಗುಪ್ತ ನಿಧಿಯನ್ನು ಪಡೆಯಬೇಕು ಮತ್ತು ಇನ್ನೂ ಎಷ್ಟೋ ಸ್ವಾರ್ಥಿ ಹಾಗೂ ವ್ಯಾವಹಾರಿಕ ಪ್ರಯೋಜನವನ್ನು ಸಾಧಿಸಿಕೊಳ್ಳಲಾಗುತ್ತದೆ. ಧರ್ಮ ಬಹಿರಂಗವಾಗಿ ನಡೆಯುವಂತಹದ್ದು. ಮಂತ್ರವಿದ್ಯೆಯು ತುಂಬ ಗುಪ್ತವಾಗಿ ನಡೆಯುವಂಥದ್ದು. ಅದರ ಸುಳಿವು ಅನ್ಯರಿಗೆ ತಿಳಿಯುವುದಿಲ್ಲ. ಆದರೆ ದೈವವು ನಿಧಾನವಾಗಿ ಧರ್ಮದ ಫಲವಾಗಿ ಕಾರ್ಯಕ್ರಮಗಳನ್ನು ಮಾಡುತ್ತವೆ. ಧರ್ಮ ವ್ಯಕ್ತಿಗಳಿಗೆ ಉಲ್ಲಾಸವನ್ನು ಉಂಟುಮಾಡಿದರೆ ಮಂತ್ರವಿದ್ಯೆ ತಂಟೆ ತಕರಾರು ಗಳನ್ನು ಉಂಟುಮಾಡುತ್ತದೆ ಎಂದು ತಿಳಿಸುತ್ತಾರೆ.

ತಮ್ಮ ನಂಬಿಕೆಗಳಿಂದ ದೇವರಲ್ಲಿ ಮೊರೆಹೋಗುವುದು, ಅವರ ಕಷ್ಟ ನಷ್ಟಗಳನ್ನು ದೇವರು ನೋಡಿಕೊಳ್ಳುತ್ತಾನೆ ಎಂಬ ನಂಬಿಕೆ ನಿಜ. ಅವರವರ ನಂಬಿಕೆಯ ಜೊತೆ ಅವರ ಬದುಕು ಹೊಂದಿಕೊಂಡಿರುತ್ತದೆ. ಹರಕೆಯನ್ನು ತೀರಿಸದಿದ್ದಾಗ ಅವರಿಗೆ ಅನೇಕ ಕಷ್ಟಗಳು ಉದ್ಭವವಾಗುತ್ತವೆ. ಆ ಕ್ಷಣದಲ್ಲಿ ನೆನಪಿಸಿಕೊಂಡು ಇಲ್ಲವೆ ಬೇರೆಯವರಿಂದ ತಿಳಿದುಕೊಂಡು ಬಂದು, ಹರಕೆಯನ್ನು ಪೂರೈಸುತ್ತಾರೆ (ಹೇಳಿಕೆ ಹೇಳುವವರು ಅವರ ಮೈಮೇಲೆ ದೇವರು ಬರುವುದರಿಂದ ಜನರ ಕಷ್ಟಗಳನ್ನು ತಿಳಿಸಿ ಹೇಳುತ್ತಾರೆ). ಆವಾಗ ತಮ್ಮ ತಪ್ಪಿನ ಅರಿವಿನಿಂದ ಅವರು ಪೂರ್ಣಗೊಳ್ಳುತ್ತಾರೆ. ರೋಗ ರುಜಿನಗಳು ನಿವಾರಣೆಯಾಗುತ್ತವೆ ಎಂಬ ನಂಬಿಕೆ ಇಂದಿಗೂ ಇವೆ. ಕೆಲವು ಜನರು ತಿಳುವಳಿಕೆ ಉಳ್ಳವರು ಆಧುನಿಕ ಪ್ರಭಾವದಿಂದ ತಮ್ಮ ಜೀವನದಲ್ಲಿ ಬದಲಾವಣೆ ಕಾಣುತ್ತಿದ್ದಾರೆ. ಆಸ್ಪತ್ರೆಗಳ ಕಡೆ ಹೋಗುತ್ತಿದ್ದಾರೆ. ಇತ್ತೀಚೆಗೆ ಮೊದಲು ಮನೆಯ ನಂಬಿಕೆಯಂತೆ ಕಾಯಿಲೆ ಬಂದಾಗ ದೇವರ

ಹೆಸರಿನಲ್ಲಿ ಕಟ್ಟಿದ ದಾರಗಳು ಮಕ್ಕಳ ಕೊರಳಲ್ಲಿ ಇರುತ್ತಿದ್ದವು. ಇಂತಹವನ್ನು ಅವರ ಮನೆಯಲ್ಲಿ ಅಜ್ಜಿ ಇದ್ದರೆ ಇಂತಹ ಪದ್ಧತಿಗಳನ್ನು ರೂಢಿಸಿಕೊಂಡು ಬರಲಾಗುತ್ತದೆ.

ಎಲ್ಲರ ಮನೆಯ ದೋಸೆಯೂ ತೂತೆ ಎಂಬಂತೆ ಗಂಡ ಹೆಂಡತಿಯರು ಎಂದ ಮೇಲೆ ಜಗಳ ಇರುತ್ತದೆ. 'ಗಂಡ ಹೆಂಡತಿಯ ಜಗಳ ಉಂಡು ಮಲಗುವ ತನಕ' ಎಂದು ಹೇಳುತ್ತಾರೆ. ಹಿರಿಯರು

"ಹೆಣ್ಣು ಹಡಿಯಲಿ ಬೇಕು। ತಮ್ಮನಿಗೆ ಕೊಡಬೇಕು ।
ಅಮ್ಮ ಮನಿಯಾಗೆ ಇರಬೇಕು । ಮಗಳನ್ನಾ
ಮೊಮ್ಮಗಳು ಅಂತ ಸಲುವ್ಯಾಳು ।"[೧೯]

ತವರಿನಲ್ಲಿ ತಾಯಿ ಇದ್ದರೆ ತನ್ನ ಮಗಳನ್ನು ತಮ್ಮನಿಗೆ ಕೊಡು, ಮೊಮ್ಮಗಳು ಎಂಬ ಅಭಿಮಾನದಿಂದ ಅಮ್ಮ ನೋಡಿಕೊಳ್ಳುತ್ತಾಳೆ ಎಂಬ ಭಾವನೆ ಹೆಣ್ಣಿನಲ್ಲಿರುತ್ತದೆ. ಗಂಡನ ಮನೆಗೆ ಹೋದ ಹೆಣ್ಣಿನ ಆಸೆ ಇದಾಗಿದೆ.

ಹಳ್ಳಿಯ ಎಲ್ಲ ವ್ಯಕ್ತಿಗಳನ್ನು ಆ ಊರಿನ ಎಲ್ಲ ವ್ಯಕ್ತಿಗಳೂ ಅರಿತವರೆ; ಈತ ಇಂಥವನೇ ಸರಿ ಎಂಬುದಾಗಿ ಒಬ್ಬೊಬ್ಬನ ವಿಶಿಷ್ಟ ಗುಣದೋಷಗಳನ್ನು ಪ್ರತಿಯೊಬ್ಬರೂ ಅಮೂಲ್ಯವಾಗಿ ಬಲ್ಲವರಾಗಿ ರುತ್ತಾರೆ. ಒಂದು ಕುಟುಂಬದ ಹತ್ತಿರದ ಬಂಧು ಬಳಗವನ್ನೆಲ್ಲ, ಒಂದು ಊರಿನ ಹೆಣ್ಣು ಮಕ್ಕಳನ್ನು ಕೊಟ್ಟಿರುವ, ತಂದಿರುವ ಊರು ಕೇರಿಗಳನ್ನೆಲ್ಲ ಬಲ್ಲಂಥ ಹಿರಿಯರು ಇವತ್ತಿಗೂ ಅಲ್ಲಲ್ಲಿ ಕಾಣಿಸುತ್ತಾರೆ. ಆಯಾ ಕುಟುಂಬದ ಮುಖ್ಯ ವ್ಯಕ್ತಿಗಳ ಗುಣಾವಗುಣಗಳನ್ನು ಗುರುತಿಸಿ, ಅಡ್ಡ ಹೆಸರಿಟ್ಟು, ಆ ಹೆಸರಿನಿಂದಲೇ ಆ ಕುಟುಂಬದವರನ್ನು ಕರೆಯುವ ವಾಡಿಕೆಯುಂಟು. ವ್ಯಕ್ತಿ ವ್ಯಕ್ತಿಗೆ ಇಷ್ಟರಮಟ್ಟಿಗೆ ನಿಕಟ ಪರಿಚಯವಿರುವುದರಿಂದ ಅವರವರಲ್ಲಿ ಬಾಂಧವ್ಯ ಬೆಳೆಯುತ್ತದೆ. ಮದುವೆ ಮುಂಜಿ ಹಬ್ಬ ಹರಿದಿನ ಆಪತ್ತುಗಳಿಗೆ ಕುಟುಂಬದ ಬಂಧುಮಿತ್ರರು ಪಾಲ್ಗೊಳ್ಳುತ್ತಾರೆ.

ಬದುಕಿನಂತೆಯೇ ಅವರ ದೈವ ಭಕ್ತಿಯೂ ಮುಗ್ಧ, ಸರಳ, ಭಕ್ತಿಯ ಪೂಜಾ ವಿಧಾನ, ತಂತ್ರಗಳನ್ನು ಅವರು ಚೆನ್ನಾಗಿ ಬಲ್ಲವರು. ತಮ್ಮ ಹಿರಿಯರು ಆಚರಿಸುತ್ತಿದ್ದ ಸಂಪ್ರದಾಯದಂತೆ ಆಚರಿಸುವವರು. ತಮ್ಮ ಬೇಕು ಬೇಡುಗಳನ್ನು ದೇವರಲ್ಲಿ ಕೇಳಕೊಳ್ಳುವವರು. ದೇವರಿಗೆ ಜನ ತಾವು ಉಣ್ಣುವ ಅನ್ನದಲ್ಲಿಯೇ ಉತ್ತಮವಾದುದನ್ನು ಬಗೆ ಬಗೆಯಾದ ಅಪರೂಪಕ್ಕೆ ಮಾಡುವಂಥದನ್ನು ಭಯಭಕ್ತಿಯಿಂದ ಇಟ್ಟು ಎಡೆ ಮಾಡುತ್ತಾರೆ. ಕಂಡೋ ಕಾಣದೆಯೋ ಆಗಿರಬಹುದಾದ ತಪ್ಪುಗಳನ್ನು ಮೈಲಿಗೆಗಳನ್ನು ಮನಸ್ಸಿಗೆ ಹಾಕಿಕೊಳ್ಳದೇ ಕ್ಷಮಿಸು, ಹರಕೆ ಒಪ್ಪಿಸಿಕೊಳ್ಳಮ್ಮ ಎಂದು ಭಯಭಕ್ತಿಯಿಂದ ಬೇಡಿಕೊಳ್ಳುತ್ತಾರೆ. ದೇವರಿಗೆ ಒಡವೆ, ವಸ್ತ್ರಗಳನ್ನು ಕಾಣಿಕೆಯಾಗಿ ಸಲ್ಲಿಸುತ್ತಾರೆ. ಅವು ಇನ್ನಷ್ಟು ದೊಡ್ಡ ಪ್ರಮಾಣದವು, ಬೆಲೆಯುಳ್ಳವು ಇರಬಹುದು. ಬೆಳ್ಳಿ, ಬಂಗಾರ, ಸೀರೆ, ಮನೆ ಕಟ್ಟಿಸುವುದು, ದೀಡನಮಸ್ಕಾರ, ಕುರಿ, ಕೋಳಿ, ಬಲಿ ಕೊಡುವುದು, ಸಿಹಿ ಅಡುಗೆ ಮೊದಲಾದವುಗಳನ್ನು ದೇವರಿಗೆ ಅರ್ಪಿಸುತ್ತಾರೆ.

ದೇವರು ದೊಡ್ಡವನು; ಅವನು ಕಣ್ಣುಬಿಟ್ಟರೆ ಯಾವುದೂ ಅಸಾಧ್ಯವಲ್ಲ ಎಂಬ ಭಾವನೆ, ಅದು

ಸುಳ್ಳಾದಾಗ, ದೇವರೆಂದು ಸುಮ್ಮನಾಗದೆ ಬೈದು ತಮ್ಮ ಅಳಲನ್ನು ತೋಡಿಕೊಂಡು ದುಃಖವನ್ನು ಮರೆಯಲು ಯತ್ನಿಸುವುದು ಇವರ ಹಿಂದಿನಿಂದಿರುವ ಪರಿಪಾಟವಾಗಿದೆ. ಹಳ್ಳಿ ಹಳ್ಳಿಗೂ ಇರುವ ಹಲವು ದೈವಗಳ ಮೇಲೆ ತಮ್ಮ ಎಲ್ಲ ಹೊಣೆ, ಹೊರೆಯನ್ನು ಹೊರಿಸಿ, ನೀನೇ ಕಾಪಾಡಮ್ಮ ಎಂದು ಬೇಡುತ್ತಾರೆ. ಪರಿಸ್ಥಿತಿಯ ಒತ್ತಡದಿಂದ, ತಾವು ಮಾಡಿದ ತಪ್ಪಿನಿಂದ ದೇವರುಗಳನ್ನು ಬೈಯ್ಯುತ್ತಾರೆ. ಸಿಟ್ಟಿನಿಂದ ಅವನ್ಯಾರು ದೇವರು, ಕಣ್ಣು ಮುಚ್ಚಿಕೊಂಡು ಕುಳಿತಿದ್ದಾನೆ ಎಂದು ಬಯ್ಯುತ್ತಾರೆ. ಬಯ್ದರೂ ಮನಸ್ಸು ತಿಳಿಯಾದಾಗ, ತಪ್ಪೊಪ್ಪಿಕೊಂಡು ಕಾಣಿಕೆ ಕಟ್ಟಿ, ಮತ್ತೆ ಎಂದಿನಂತೆ ಸರಳ ಜೀವನ ನಡೆಸುವುದು ಅವರ ಜಾಯಮಾನವಾಗಿದೆ. ಯಾರೇ ಭಿಕ್ಷುಕರೂ ಬಂದರೂ ಅವರಿಗೆ ಇಲ್ಲವೆನ್ನದೇ ಏನಾದರೂ ನೀಡಿ ಕಳಿಸುತ್ತಾರೆ. ಇಂದಿನ ದಿನಗಳಲ್ಲಿ ಭಿಕ್ಷೆಗೆ ಬರುವುದು ಅಲ್ಪಸ್ವಲ್ಪ ಕಂಡುಬರುತ್ತದೆ.

ದೈವಭಕ್ತಿ

ಬದುಕೆಲ್ಲ ಧಾರ್ಮಿಕ ನಿಷ್ಠೆ ನಂಬಿಕೆಗಳಿಂದಾದುದರಿಂದ ದೈವಭಕ್ತಿ ಇರುತ್ತದೆ. ದೈವಭಕ್ತಿಯಿಲ್ಲದ ಜನ ಜಾನಪದರಾಗಿರುವುದು ಅಸಾಧ್ಯವಾದ ಸಂಗತಿ. ದೈನಂದಿನ ಜೀವನದಲ್ಲಿ ಜಾನಪದರು ಪದೇ ಪದೇ ದೈವ ಸ್ಮರಣೆ ಮಾಡುತ್ತಾರೆ. ಮಲಗುವಾಗ, ಎದ್ದಾಗ, ಸ್ನಾನ ಮಾಡುವಾಗ, ಹಲ್ಲಿ ನುಡಿದಾಗ, ಯಾವುದಾದರೂ ಆಪತ್ತು ಬಂದಾಗ ಅನೇಕ ಸಂದರ್ಭದಲ್ಲಿ, ದೇವರೆಂದು ಭಾವಿಸಲಾಗಿರುವ ವಸ್ತುವನ್ನು ಕಂಡಾಗ, ಉದಾಹರಣೆಗೆ ಬೇವಿನ ಮರ, ಅರಳಿಮರ, ಬನ್ನಿಮರ, ಕಸಬರಿಗೆ, ಕುಡಗೋಲು, ಮಾರ, ಒಳ್ಳು, ಮೊದಲಾದವು ದೇವರನ್ನು ನೆನೆಯುವುದು ಒಂದು ವಾಡಿಕೆಯಾಗಿದೆ. ತಮಗೆ ಅರಿವಿಲ್ಲದಂತೆ ಇವೆಲ್ಲವು ನಡೆಯುತ್ತವೆ. ಹುಟ್ಟಿನಿಂದಲೂ ಸಾಯುವ ಗಳಿಗೆಯವರೆಗೂ ದೇವರನ್ನು ನೆನೆಯುತ್ತಿರಬೇಕೆಂಬ ಪರಿಪಾಟವನ್ನು ಕುಟುಂಬದ ಹಿರಿಯರು ಮಕ್ಕಳಾಗಿರುವಾಗಿನಿಂದಲೂ ರೂಢಿಸಿಕೊಂಡು ಬಂದಿದ್ದಾರೆ. ದೈವಸ್ತುತಿಯು ಜಾನಪದರ ಜೀವನದ ರಕ್ಷಾ ಕವಚವಾಗಿದೆ. ಉದಾಹರಣೆಗೆ ಹುಲಿಗೆಮ್ಮಾ, ಏಳುಕೊಳ್ಳದ ಎಲ್ಲಮ್ಮ, ದುರ್ಗಮ್ಮ, ಶಿವ ಪರಮೇಶ್ವರ ಎಂದೆಲ್ಲ ನೆನೆಯುತ್ತಾರೆ.

ಗಂಡಸಾಗಲಿ, ಹೆಂಗಸಾಗಲಿ ಬೆಳಗ್ಗೆ ಏಳುವಾಗ ಬಲಮಗ್ಗುಲಿಗೆ ಹೊರಳಿಕೊಂಡು ಎದ್ದು, ದೈವಸ್ಮರಣೆ ಮಾಡಿಕೊಂಡು, ದೇವರ ಚಿತ್ರ ನೋಡುತ್ತಾರೆ. ಹಿರಿಯರು ಎದ್ದು ಕೈಕಾಲು ತೊಳೆದು ಕೊಂಡು ಸೂರ್ಯನಿಗೆ ನಮಸ್ಕರಿಸುತ್ತಾರೆ. ಇವರಲ್ಲಿ ಶಕುನ ಶಾಸ್ತ್ರಗಳಲ್ಲಿ ಬಹಳವಾದ ನಂಬಿಕೆ ಇದೆ. ಹಲ್ಲಿ ನುಡಿಯುವಾಗ, ಮಾತು ಕತೆಯಾಡುವಾಗ ದೇವರ ಗಂಟೆಯ ಸದ್ದು ಕೇಳಿದಾಗ, ಶುಭಕಾರ್ಯಕ್ಕೆ ಹೊರಟ ವೇಳೆಯಲ್ಲಿ ಬೆಕ್ಕು ಅಡ್ಡ ಬರುವುದು, ಖಾಲಿ ಕೊಡ ಬರುವುದು, ತುಂಬಿದ ಕೊಡ ಎದುರು ಬರುವುದು, ಕಟ್ಟಿಗೆ ಹೊರೆ ಬರುವುದು, ಒಂಟಿ ಸೀನು ಸೀನುವುದು, ಇಂತಹ ಶುಭ, ಅಶುಭ ಶಕುನ ಪ್ರಸಂಗಗಳು ಇವೊತ್ತಿಗೂ ಕಾಣಬಹುದು. ಇವೆಲ್ಲವೂ ದೈವದ ಬಗ್ಗೆ ದೃಢ ನಂಬಿಕೆ, ಭಯ, ಭಕ್ತಿಗಳಿಂದ ಕೆಲಸ ಕಾರ್ಯಗಳನ್ನು ಮಾಡುವುದು ಕಾಣಬಹುದು.

ಇವರಿಗೆ ದೈವವೆಂಬುದು ಎಂದೂ ತರ್ಕದ, ಚರ್ಚೆಯ ವಿಷಯವಲ್ಲ. (ನಾಸ್ತಿಕತೆ) ನಿರೀಶ್ವರವಾದ ಏಕೀಶ್ವರವಾದ ಭೌತಿಕವಾದ ಇತ್ಯಾದಿ ವಾದ ವಿವಾದಗಳು ಅವರಿಗೆ ತಿಳಿಯುವುದಿಲ್ಲ. ವಿದ್ಯಾವಂತರಾದವರು ಅವುಗಳನ್ನು ಪ್ರಶ್ನಿಸಿದರೆ ಅವರಿಗೆ ಬುದ್ಧಿ ಹೇಳಿಕೊಳ್ಳುತ್ತಾರೆ. ದೈವ ಎಂದರೆ ದೈವ. ಆ ರೀತಿಯಲ್ಲಿ ಮಾತನಾಡಬಾರದು ಎಂದು ಹೇಳುತ್ತಾರೆ. ಅವರಿಗೆ ದೈವಭಕ್ತಿ ಎಂಬುದು ಸತ್ಯವಾದುದು ಆಗಿರುತ್ತದೆ. ಇವರಿಗೆ ದೈವದ ಬಗ್ಗೆ ದೃಢವಾದ ನಂಬಿಕೆಯಾಗಿರುತ್ತದೆ. ಪ್ರತಿಯೊಂದು ಶುಭಕಾರ್ಯ ಆರಂಭ ಮಾಡುವಾಗಲೆಲ್ಲ, ಜಾನಪದರು ತಪ್ಪದೆ ದೈವ ಪೂಜೆಯನ್ನು ಮಾಡುವುದು ಪದ್ಧತಿ. ಇವರು ತಮ್ಮ ಕಸುಬನ್ನು ಆರಂಭಿಸುವಾಗ, ತಮಗಿಷ್ಟವಾದ ದೇವರನ್ನು ನೆನೆದು, ಪೂಜೆ ಮಾಡಿ, ಶುಭಲಾಭಗಳನ್ನು ಕೇಳಿಕೊಳ್ಳುತ್ತ ಕೆಲಸಗಳಲ್ಲಿ ತೊಡಗುವರು. ದೈವಭಕ್ತಿ ಬುದ್ಧಿ ಪ್ರಧಾನವಾದುದಲ್ಲ, ದೃಢ ನಂಬಿಕೆಯಿಂದ ಭಾವುಕತೆಯಿಂದ ಕೂಡಿರುವುದು. ಅವರು ತಮ್ಮ ಇಷ್ಟ ದೈವಗಳನ್ನು ಅತ್ಯಂತ ಭಯ ಭಕ್ತಿಯಿಂದ, ನಿಷ್ಠೆಯಿಂದ ಪೂಜಿಸುತ್ತಾರೆ.

ಹೆಣ್ಣಿನಲ್ಲಿ ಪ್ರೀತಿಯುಂಟು, ಪ್ರಣಯವುಂಟು, ತಾಯ್ತನದ ವಾತ್ಸಲ್ಯವುಂಟು, ಸವತಿ ಮಾತ್ಸರ್ಯಗಳುಂಟು, ತ್ಯಾಗ, ಸಹನೆ, ಸಂಯಮಗಳುಂಟು. ಮಿಗಿಲಾಗಿ ಕಷ್ಟವೆನ್ನೆದುರಿಸುವ ಎದೆಗಾರಿಕೆಯುಂಟು..... ಮೇಲಾಗಿ ಕಾಯಕವೇ ಕೈಲಾಸ ಎಂಬ ಉದಾರಗುಣವು ಹೆಣ್ಣಿನಲ್ಲಿದೆ. ಆದರೆ ಗಂಡಿನ ಅಲಂಕಾರ ಹೆಣ್ಣು ಎಲ್ಲ ಕಷ್ಟಗಳನ್ನು ತಾಳ್ಮೆಯಿಂದ ಸಹಿಸಿಕೊಳ್ಳುತ್ತಾಳೆ. ಆದ್ದರಿಂದಲೆ ಹೆಣ್ಣಿನ ತಾಳ್ಮೆಯನ್ನು ಭೂಮಿ ತಾಯಿಗೆ ಹೋಲಿಸುತ್ತಾರೆ. ದುರ್ಗೆಯೆಂದರೆ ಭೂಕಂಪವನ್ನು ತರುವಂತೆಯೇ ಹೆಣ್ಣಿನ ಕಿಡಿಯು ಇಡೀ ಮನೆಯನ್ನೇ ಸುಟ್ಟು ಹಾಕಬಲ್ಲಳು. ಒಂದು ಹೆಣ್ಣಿನಿಂದ ಉದಾರವೂ ಉಂಟು. ನಷ್ಟವೂ ಉಂಟು. ತ್ಯಾಗಕ್ಕೆ ಹೆಣ್ಣಿಗೆ ಸರಿಸಾಟಿಯಿಲ್ಲ ಎಂದು ಹೇಳಬೇಕಾಗುತ್ತದೆ.

ಬಾಲಗ್ರಹ

ಹಿಂದಿನ ಕಾಲದಲ್ಲಿ "ಆರೋಗ್ಯವಾಗಿದ್ದ ಮಕ್ಕಳು ಲವಲವಿಕೆಯನ್ನು ಕಳೆದುಕೊಂಡು ಮಂಕಾಗಿ ನಿಶ್ಯಕ್ತಿಯಿಂದ ಬಳಲುತ್ತಿದ್ದರೆ, ಅವಕ್ಕೆ ಬಾಲಗ್ರಹ ಹಿಡಿದಿದೆ ಎಂದು ಸಂಜೆ ಸಮಯದಲ್ಲಿ ಕೊರವಂಜಿಯಿಂದ ಪೂಜೆ ಮಾಡಿಸಿದರೇ ಬೇಗ ಗುಣವಾಗುತ್ತದೆ ಎಂದು ನಂಬುತ್ತಿದ್ದರು. ಮನೆಯ ತಲೆ ಬಾಗಿಲಿನ ಒಳಭಾಗದಲ್ಲಿ ಮೊಳದಗಲ ನೆಲ ಸಾರಿಸಿ ಬೆನಕನನ್ನು ಕೂರಿಸಿ ಅರಿಶಿಣ, ಕುಂಕುಮ ಹಾಕಿ ದಕ್ಷಿಣೆ ಇಡಿಸುತ್ತಾರೆ. ಒಂದು ಬಿಳಿ ಬಟ್ಟೆಗೆ ಅರಿಶಿಣ ಹಚ್ಚಿ ಅದರಲ್ಲಿ ಐದು ತರಹ ಗಿಡಮೂಲಿಕೆಗಳನ್ನಿಟ್ಟು ಕಟ್ಟಿ ಬೆನಕನ ಮುಂದಿಡುತ್ತಾರೆ. ಮಗುವನ್ನು ಎದುರಿಗೆ ಕೂರಿಸಿಕೊಂಡು ಅನ್ನ ಕಾಣದ ಮುಕ್ಕ, ಗಂಜಿ ಕಾಣದ ಮುಕ್ಕ, ಕೂಳು ಕಾಣದ ಮುಕ್ಕ, ಮೂಗು ಕೊಯ್ದೇನು, ಅಂದ ನೋಡಿ ಬಂದ್ಯಾ, ಚಂದಾ ನೋಡಿ ಬಂದ್ಯಾ, ನಿನ್ನ ನಾಲ್ಗೆ ಕೊಯ್ದು ನಾರಾಯಣನ ಪಾದಕೊಪ್ಪಿಸೇನು, ನಿನ್ನ ಮೂಗು ಕೊಯ್ದು ಮುಕುಂದನ ಪಾದಕ್ಕೊಪ್ಪಿಸೇನು, ತೋಳು ಬಿಟ್ಟು ಬಾ, ತೊಡೆ ಬಿಟ್ಟು ಬಾ, ಕೈ ಮುರಿದೇನು, ಕಾಲು ಮುರಿದೇನು, ಯಾ ಮೂಲೇಲಿ ಬಂದೆ ಆ ಮೂಲೇಲಿ ಹೋಗು, ಬನದಿಂದ ಬಂದೆ, ಆ ಬನಕ್ಕೋಗು ಎಂದು ಮಂತ್ರ ಹೇಳುತ್ತಾ ಓಕುಳಿ ನೀರನ್ನು, ಒಂದು ಚಂಬು

ನೀರನ್ನು ಆ ಮಗುವಿಗೆ ನೀವಾಳಿಸಿ ತೆಗೆಯುತ್ತಾರೆ. ಮೂರು ತೆರದ ಸೌದೆ, ನೀರುಳ್ಳಿ, ಬೆಳ್ಳುಳ್ಳಿ, ಮೆಣಸಿನ ಕಾಯಿ, ಉಪ್ಪು, ಅಕ್ಕಿ, ಅಸಿಟ್ಟು ಮುಂತಾದುವನ್ನು ಪಡೆದು ಆ ಮಗುವಿಗೆ ಒಂದಿಷ್ಟು ಹೊಟ್ಟೆಗೆ ಔಷಧಿ ಕೊಟ್ಟು, ಅರಿಶಿಣ ಬಟ್ಟೆಯಲ್ಲಿ ಕಟ್ಟಿದ್ದ ಗಿಡ ಮೂಲಿಕೆಯ ಗಂಟನ್ನು ಆ ಮಗುವಿನ ಕುತ್ತಿಗೆಗೆ ಕಟ್ಟಿ ಬರುತ್ತಾರೆ. ಮಗು ಆ ಗಂಟನ್ನು ಆಗಾಗ್ಗೆ ಬಾಯಲ್ಲಿಟ್ಟುಕೊಂಡು ಚೀಪುತ್ತಿದ್ದರೆ ಕಾಯಿಲೆ ಗುಣವಾಗುತ್ತಿತ್ತು. ಕೊರವಂಜಿಯು ಇದರಿಂದ ದವಸ, ಧಾನ್ಯ, ಕಾಣಿಕೆಯನ್ನು ಪಡೆದು ಕೊಂಡು ಹೋಗುತ್ತಿದ್ದಳು".[೧೫]

ಆದರೆ ಇಂದಿನ ದಿನಗಳಲ್ಲಿ ಮಗುವಿಗೆ ದೃಷ್ಟಿಯಾಗಿದ್ದರೆ, ದೃಷ್ಟಿ ಬಿದ್ದಿದ್ದರೆ ಆ ಮಗುವಿಗೆ ಸಂಜೆ ಸಮಯದಲ್ಲಿ ತುಂಬಿದ ಚಂಬಿನ ನೀರು ತೆಗೆದು ೩ ದಾರಿ ಕೂಡುವ ಸ್ಥಳದಲ್ಲಿ ಹಾಕಲಾಗುತ್ತದೆ. ಮತ್ತೆ ಮಕ್ಕಳು ಆಟ ಆಡುವಾಗ ಬಿದ್ದು ಹೆದರಿದರೆ ಅವರಿಗೂ ಸಹ ಇದೇ ರೀತಿ ಮಾಡಲಾಗುತ್ತದೆ. ಒಲೆಯಲ್ಲಿ ಮಗುವಿಗೆ ನೀವಾಳಿಸಿದ ಮೆಣಸಿನಕಾಯಿ, ಉಪ್ಪು, ಕೂದಲು, ಕಸಬರಿಗೆಯ ಒಂದು ತುಂಡು ತೆಗೆದುಕೊಂಡು ನೀವಾಳಿಸಿ ಅದನ್ನು ಒಲೆಯಲ್ಲಿ ಹಾಕುವುದರಿಂದ ಯಾವುದೇ ವಾಸನೆ ಬರುವುದಿಲ್ಲವೋ ಆವಾಗ ಮಗುವಿಗೆ ದೃಷ್ಟಿಯಾಗಿದೆ ಎಂದು ತಿಳಿದು ಆಗ ದೃಷ್ಟಿ ತೆಗೆದರೇ ಅದು ಬೇಗ ವಾಸಿಯಾಗುತ್ತದೆ. ಮಗುವಿನ ತೊಟ್ಟಿಲ ಕೆಳಗೆ ಕಸಬರಿಗೆ, ಕುಡುಗೋಲು ಇಲ್ಲವೆ ಚರ್ಮದ ಚಪ್ಪಲಿ ಇಡುತ್ತಾರೆ. ಇವನ್ನು ಇಡುವುದರಿಂದ ಯಾವುದೇ ಬೆದರಿಕೆ ಇರುವುದಿಲ್ಲ. ಶಾಂತವಾಗಿ ಮಗು ಮಲಗಿಕೊಳ್ಳುತ್ತದೆ. ತೊಟ್ಟಿಲಿಗೆ ದೇವರ ಹೆಸರೇಳಿ ಬಟ್ಟೆಯಲ್ಲಿ ಒಂದು ರೂಪಾಯಿ ಕಾಣಿಕೆಯಿಟ್ಟು ತೊಟ್ಟಲಿಗೆ ಕಟ್ಟುತ್ತಾರೆ. ಯಾವ ದೇವರ ಹೆಸರನ್ನು ಹೇಳಿ ಕಟ್ಟಿರುತ್ತದೆಯೋ, ಆ ದೇವರಿಗೆ ಹೋಗುವಾಗ ಅದನ್ನು ತೆಗೆದುಕೊಂಡು ಹೋಗಿ ದೇವರಿಗೆ ಅರ್ಪಿಸಲಾಗುತ್ತದೆ.

ಹೆಣ್ಣು ತನ್ನ ಬದುಕಿನುದ್ದಕ್ಕೂ ಗಂಧದ ಕೊರಡಾಗಿ ತೇದು ತವರು ಮನೆಗೆ ಅಂತೆಯೇ ಗಂಡನ ಮನೆಗೆ ಹೆಸರು ತರುವ ಸಲುವಾಗಿ ಬಾಳುವೆ ಮಾಡುತ್ತಾ ಬಂದಿದ್ದಾಳೆ. ತನ್ನ ಸುಖವನ್ನು ಕಡೆಗಣಿಸಿ, ತನ್ನವರ ಸಲುವಾಗಿ ತನ್ನನ್ನೆ ಅರ್ಪಿಸಿಕೊಂಡಿದ್ದಾಳೆ. ಸಿರಿವಂತರ ಮನೆಯ ಹೆಣ್ಣು ಮಕ್ಕಳ ಸ್ಥಿತಿ ಬೇರೆ. ಬಡವ ಮತ್ತು ಕೂಲಿಕಾರ ಹೆಣ್ಣುಗಳ ಸ್ಥಿತಿಗತಿಯೇ ಬೇರೆ. ಗಂಡನ ಅತ್ತೆ, ಮಾವ ಮತ್ತು ಮನೆಯವರ ದೌರ್ಜನ್ಯಕ್ಕೆ ಒಳಗಾಗಿಯೂ ಅವರ ಹೊಟ್ಟೆ ತುಂಬಲು ಹೆಣಗುವ ಹೆಣ್ಣು ಮಕ್ಕಳ ಸಂಖ್ಯೆ ಇಂದಿಗೂ ಕಡಿಮೆಯೇನಿಲ್ಲ. ಅಂತೆಯೇ ಕೊರಮ ಹೆಣ್ಣು ಮಗಳು ಕೊರವಂಜಿ ತನ್ನ ಕುಟುಂಬದ ಸೌಖ್ಯದ ಸಲುವಾಗಿ ನಿರ್ವಹಿಸುತ್ತಾ, ಬಂದಿರುವ ಕಾರ್ಯಗಳು ಅನುಭವಿಸಿದ ಕಷ್ಟ, ಪಡೆದ ಕೀರ್ತಿ, ಅಪಕೀರ್ತಿಗಳು ಯಾರಿಗೂ ಬೆರಗನ್ನು ಉಂಟುಮಾಡುತ್ತದೆ. ಮತ್ತು ಆಕೆಯ ಕಷ್ಟ ಸಹಿಷ್ಣತೆಯ ಬಗೆಗೆ ಮನಸ್ಸು ಕರಗುತ್ತದೆ.

ಅಲೆಮಾರಿಗಳಾದ ಇವರಿಗೆ ಬಸುರಿಯಿರಲಿ, ಬಾಣಂತಿಯಿರಲಿ ಯಾವ ರಕ್ಷಣೆಯೂ ಇರಲಿಲ್ಲ. ಎಲ್ಲಾ ಅನಾನುಕೂಲಗಳ ನಡುವೆಯೂ ತನ್ನ ಕರುಳ ಬಳ್ಳಿಯನ್ನು ರಕ್ಷಿಸಿಕೊಳ್ಳಬೇಕಾಗುತ್ತಿತ್ತು. ಆ ಸಮಯದಲ್ಲಿ ಆಕೆ ಪಡೆಯುತ್ತಿದ್ದ ವಿಶ್ರಾಂತಿಯಾದರೂ ಎಷ್ಟು ದಿನ? ಆದ್ದರಿಂದ ಆಕೆ ಕೆಲವು

ದಿನಗಳಲ್ಲಿ ಎಂದಿನಂತೆ ಮತ್ತೆ ಕೆಲಸಕ್ಕೆ ತೊಡಗಿಕೊಳ್ಳಬೇಕಾಗಿತ್ತು. ೧೫ ದಿನಕ್ಕೋ ತಿಂಗಳಿಗೋ ತಮ್ಮ ನೆಲೆಗಳು ಬದಲಾಗುತ್ತಿರುವುದಕ್ಕೆ ಹೊಂದಿಕೊಳ್ಳಬೇಕಾಗಿತ್ತು. ಬದುಕಿನ ಅನಿವಾರ್ಯತೆಯೇ ಹಾಗಿದ್ದುದರಿಂದ ಅಗತ್ಯವಾಗಿ ಅವರು ಅದಕ್ಕೆ ಹೊಂದಿಕೊಳ್ಳಬೇಕಾಗಿತ್ತು.

ಗಂಡಸರು ಬಿದಿರಿನಿಂದ, ಈಚಲ ಕಡ್ಡಿ, ಹೂಲಿಕಡ್ಡಿಗಳಿಂದ ಹೆಣೆದ ಕುಕ್ಕೆ, ಮಂಕರಿಗಳನ್ನು ಹೊತ್ತು ಹಳ್ಳಿಗಳಿಗೆ ಹೋಗಿ ಮಾರಿಕೊಂಡು ಬರುತ್ತಿದ್ದರು. ಹೆಂಗಸರೂ ಸಹಾ ಬುಟ್ಟಿ, ಕಸಬರಿಗೆಗಳನ್ನು ಹೆಣೆಯುತ್ತಿದ್ದರು. ಹಳ್ಳಿಗಳಲ್ಲಿ ಹೆಣ್ಣು ಮಕ್ಕಳ ನಡುವೆ ವ್ಯಾಪಾರಕ್ಕೆ ಹೋಗುತ್ತಿದ್ದರು. ಕೊರವಂಜಿಯರು ತಮ್ಮ ವ್ಯಾಪಾರವನ್ನು ಹೆಣ್ಣು ಮಕ್ಕಳ ನಡುವೆಯೇ ಮಾಡುತ್ತಿದ್ದರಿಂದ ಇವರು ಕೆಲವು ಉಪ ವೃತ್ತಿಗಳನ್ನು ರೂಢಿಸಿಕೊಂಡರು. ಅವುಗಳೆಂದರೆ ಕಣಿ ಹೇಳುವುದು, ಬಾಲಗ್ರಹ ಬಿಡಿಸುವುದು, ಮಕ್ಕಳ ಫಲಕ್ಕೆ ಔಷಧಿ ಕೊಡುವುದು, ಸೋಂಕು ಬಿಡಿಸುವುದು, ಹಚ್ಚೆ ಹೊಯ್ಯುವುದನ್ನು ಮಾಡುತ್ತಿದ್ದರು. ಇದರಿಂದ ಹೆಚ್ಚು ಸಂಪಾದಿಸುತ್ತಿದ್ದರು.

ಮಕ್ಕಳ ಫಲಕ್ಕೆ ಔಷಧಿ ಕೊಡುವುದು

“ಕೊರವಂಜಿಯರು ಬಂಜೆ ಹೆಣ್ಣು ಮಕ್ಕಳಿಗೆ ಮನೆಯಲ್ಲಿ ಯಾರೂ ಇಲ್ಲದ ಅಂದರೆ ಮನೆಯವರೆಲ್ಲ ಕೆಲಸಕ್ಕೆ ಹೋದ ಮೇಲೆ ಔಷಧಿ ಕೊಡುತ್ತಿದ್ದರು. ಬಂಜೆಯರ ಕೈ ನೋಡಿ ಕಣಿ ಹೇಳಿ ಮಕ್ಕಳ ಫಲ ಇದೆ ಎಂದು ಅವರನ್ನು ನಂಬಿಸುತ್ತಿದ್ದರು. ಹೊಕ್ಕ ತೊಳ್ದು ಔಸ್ತಿ ಕೋಡ್ತಿನಿ, ಮಕ್ಕಾಳಗ್ತವೆ ಎಂದು ಆಸೆ ಹುಟ್ಟಿಸುತ್ತಿದ್ದರು. ಈ ಔಷಧಿ ಕೊಡುವ ಸಮಯದಲ್ಲಿ ಬಂಜೆಯಲ್ಲದೆ ಮತ್ತಾರೂ ಇರುತ್ತಿರಲಿಲ್ಲ. ಮನೆಯ ಒಳಭಾಗದಲ್ಲಿ ಮೊಳದಗಲ ನೆಲ ಸಾರಿಸಿ, ಬೆನಕನನ್ನು ಕೂರಿಸಿ ಹೆಡಿಗೆ ತುಂಬ ದವಸ ತುಂಬಿಸಿ ಅದರ ಮುಂದಿಡಿಸಿ ಪೂಜೆ ಮಾಡುತ್ತಿದ್ದರು. ಬಂಜೆಯ ತೊಡೆ, ತೋಳು, ಬೆನ್ನು, ಎದೆಯ ಭಾಗದಲ್ಲಿ ಕಾಣುವ ಹಸಿರು ನರಕ್ಕೆ ತನ್ನಲ್ಲಿದ್ದ ಪಂಚಲೋಹದ ಮೊಳೆಯನ್ನು ಕಾಯಿಸಿ ಬೆಚ್ಚಗೆ ಮಾಡಿ ಚುಟಿಕೆ ಹಾಕುತ್ತಿದ್ದರು. ಇದನ್ನು ಬಂಜೆ ಗಂಟು ಚುಟಿಕೆ ಎನ್ನುತ್ತಿದ್ದರು. ಆ ದಿವಸ ತುಂಬಿದ ಗೂಡೆಯನ್ನು ಆಕೆಯ ತಲೆಯ ಮೇಲೆ ಹೊರಿಸಿ ಹೊಸಿಲು ದಾಟಿಸುತ್ತಿದ್ದಳು. ಗೂಡೆಯಲ್ಲಿ ತುಂಬಿದ ಕಾಳಿನ ಮೇಲ್ಭಾಗ ಬಾಗಿಲಿನ ಮೇಲ್ಭಾಗಕ್ಕೆ ಮುಟ್ಟುವಂತೆ ಕಾಳು ತುಂಬಿಸುತ್ತಿದ್ದಳು. ಆ ಕಾಳು ತುಂಬಿದ ಗೂಡೆಗೆ ಕೈಯಿಂದ ಬಡಿಸುತ್ತಾ ‘ತೊತ್ತೆ ಮುತ್ತೆ ಕಾಟವೇ ಕನಿಷ್ಠವೇ ಅರಿದೊಯ್ತು ಮುಕ್ಕ, ಬಂಜೆ ಫಲ ಹೋಯ್ತು ಮಕ್ಕಳ ಫಲ ಬಂತು ಎಂದು ಆಕೆಯಿಂದ ಹೇಳಿಸುತ್ತಿದ್ದರು. ತಮ್ಮ ಇಷ್ಟದೇವತೆಯನ್ನು ನೆನೆಯುತ್ತಾ ತಮ್ಮಲ್ಲಿದ್ದ ಔಷಧಿಯನ್ನು ಆಕೆಗೆ ನುಂಗಿಸುತ್ತಿದ್ದರು. ಕಾಣಿಕೆ, ಗೂಡೆಯಲ್ಲಿದ್ದ ಕಾಳು ಇವರ ಪಾಲಾಗುತ್ತಿತ್ತು. ಈ ಕಾಳಿನಿಂದ ಚೌಡಮ್ಮನಿಗೆ ಊಟ ಕೊಡುತ್ತೇನೆ ಎನ್ನುತ್ತಿದ್ದರು”.[೧೨]

ತಮ್ಮ ಔಷಧಿಯಿಂದ ಕೆಲವರಿಗೆ ಮಕ್ಕಳಾದದ್ದು ಇದೆ ಎನ್ನುತ್ತಾರೆ. ಮಕ್ಕಳಾದ ಮೇಲೆ ಕೆಲವರು ಇವರನ್ನು ಕರೆಸಿ ಸೀರೆ, ಉಡಿಸಿದ್ದಾರಂತೆ. ಅದೇನೆ ಇರಲಿ, ಬಂಜೆ ಹೆಣ್ಣು ಮಗಳನ್ನು ಕೆಲ ಸಮಯವಾದರೂ ಆ ಭಾವನಾ ಲೋಕಕ್ಕೆ ಇವರು ಕರೆದೊಯ್ಯುತ್ತಿದ್ದರು. ಮಾನಸಿಕ ಧೈರ್ಯ

ತುಂಬುತ್ತಿದ್ದರು. ಮನದ ಚಿಂತೆಯನ್ನು ಕಳೆಯುತ್ತಾ ಮನೋವಿಜ್ಞಾನಿಯಂತೆ, ರೋಗ ಪರಿಹರಿಸುವ ವೈದ್ಯಳಂತೆ, ಮನದ ಶಂಕೆ ಬಿಡಿಸುವ ಮಾಂತ್ರಿಕಳಂತೆ ಆಕೆ ಕೆಲಸ ಮಾಡಿದ್ದಾಳೆ. ಜನರ ಮೈಮನಗಳಗಂಟಿದ ಸೋಂಕನ್ನು ಬಿಡಿಸಿದ್ದಾಳೆ. ಸೋಂಕು ಬಿಡಿಸುವಾಗ ಸೋಂಕಿನ ದಾರವನ್ನು ಕಟ್ಟುತ್ತಾರೆ. ಕೊರವಂಜಿ ಬೂದಿ ಮಂತ್ರಿಸಿ ದಾರ ಕಟ್ಟುತ್ತಾರೆ. ಇದರಿಂದ ದುಷ್ಟ ಶಕ್ತಿಗಳು ದೂರವಾಗುತ್ತವೆ ಎಂದು ನಂಬುತ್ತಾರೆ. ಸೂರ್ಯಾಸ್ತದ ಸಮಯದಲ್ಲಿ ನೆಲ ಸಾರಿಸಿ, ಬೆನಕನನ್ನು ಕೂರಿಸಿ ಪೂಜೆ ಮಾಡಿ ಸೋಂಕು ಕಳೆಯುತ್ತಾರೆ. ಯಾವ ವ್ಯಕ್ತಿಗೆ ಸೋಂಕು ಇರುತ್ತದೆಯೋ ಆತನಷ್ಟು ಉದ್ದದ ದಾರವನ್ನು ತೆಗೆದುಕೊಂಡು ಮಂತ್ರಿಸಿ ಆತನಿಗೆ ನಿವಾಳಿಸಿ ತೆಗೆದು ಒಂದು ಗಿಡಕ್ಕೆ ಕಟ್ಟುತ್ತಾರೆ. ಸೋಂಕು ಗಿಡಕ್ಕೆ ಹೋಗುತ್ತದೆ ಎನ್ನುತ್ತಾರೆ. ಇತ್ತೀಚೆಗೆ ಆಧುನಿಕ ಪ್ರಭಾವದಿಂದಾಗಿ ಹಳ್ಳಿಯ ಜನರಲ್ಲಿ ಜಾಗ್ರತೆಯುಂಟಾಗಿ ಈ ನಂಬಿಕೆ ಹೊರಟು ಹೋಗಿದೆ. ಕೊರವಂಜಿಯರು ಔಷಧಿ ಕೊಡಲು, ಭವಿಷ್ಯ ಹೇಳಲು ಹೆದರುತ್ತಾರೆ.

ಯಾವುದೇ ಕೆಟ್ಟ ದೃಷ್ಟಿಗಳು ಬೀಳದಂತೆ ದೇವರ ಹೆಸರು ಹೇಳಿ ತಾಯಿತಗಳನ್ನು ತೋಳಿಗೆ, ಕೊರಳಿಗೆ ಕಟ್ಟಿಕೊಳ್ಳುತ್ತಾರೆ. ಯಾವುದೇ ದುಷ್ಟ ಶಕ್ತಿಗಳು ಬರುವುದಿಲ್ಲ ಎಂಬ ನಂಬಿಕೆಯಿಂದ ಯಾವುದೇ ತೊಂದರೆಯಾಗದಂತೆ ಎಚ್ಚರಿಕೆಗಾಗಿ ಈ ರೀತಿ ಮಾಡಲಾಗುತ್ತದೆ. ಇದು ಅವರವರ ನಂಬಿಕೆಯ ಮೇಲೆ ಆಧಾರವಾಗಿರುತ್ತದೆ. ಪ್ರಾಚೀನ ಸಮಾಜದಲ್ಲಿ ಪ್ರತಿಯೊಂದು ಸಂತತಿಯವರಿಗೂ ಒಂದೊಂದು ಕುಲದೇವತೆಗಳು ಇದ್ದವು. ಮರ, ಗಿಡ, ಪ್ರಾಣಿ ಮತ್ತು ಪ್ರಕೃತಿಯಲ್ಲಿಯ ಅತಿ ಪ್ರಿಯವಾದ ಯಾವುದಾದರೊಂದು ವಸ್ತುವನ್ನು ಅವರು ಅತ್ಯಮೂಲ್ಯವಾದುದೆಂದು ಪರಿಗಣಿಸಿ ಅದನ್ನು ಆರಾಧಿಸುತ್ತಿದ್ದರು. ಕುಲದೇವತೆ ತಮ್ಮ ವಂಶದ ಮೂಲಪುರುಷನೆಂದು ತಿಳಿದು ಅದನ್ನು ಕಡಿಯುವುದು, ಭಕ್ಷಿಸುವುದು, ನೋಯಿಸುವುದು, ಹೀಯಾಳಿಸುವುದು ಸರಿಯಲ್ಲವೆಂದು ಭಾವಿಸಿದ್ದರು. ಉದಾಹರಣೆಗೆ ಕುಡುಗೋಲು, ಕಸಬರಿಕೆ ಲಕ್ಷ್ಮೀ ಸಮಾನ. ಬೇವಿನಮರ ಕಡಿಯುವ ಆಗಿಲ್ಲ ಮೊದಲಾದವುಗಳು ಮೇಲೆ ನಂಬಿಕೆ ಇದೆ.

ಕೆಟ್ಟ ಕಣ್ಣಿನ ಪರಿಣಾಮ:

ಕೆಟ್ಟ ದೃಷ್ಟಿಯಿಂದ ಉಂಟಾಗುವ ಪರಿಣಾಮವನ್ನು ದೂರ ಮಾಡುವ ಉದ್ದೇಶಕ್ಕಾಗಿ ಅನೇಕ ನಂಬಿಕೆಗಳು ಹುಟ್ಟಿಕೊಂಡಿವೆ. ಮನೆಯ ನಿರ್ಮಾಣದ ಹಂತದಲ್ಲಿ ಮಡಿಕೆ ಇಲ್ಲವೇ ಬೆದರು ಗೊಂಬೆಯನ್ನು ಇಟ್ಟಿರುತ್ತಾರೆ. ಏಕೆಂದರೆ ಮನೆಯನ್ನು ಕಟ್ಟಿದ ಮೇಲೆ ಎಲ್ಲರ ಕಣ್ಣುಗಳು ಬೀಳುತ್ತವೆ. ಆಗ ಅವರು ಎಷ್ಟು ಚೆನ್ನಾಗಿದೆ ಎಂದು ಹೇಳುವಾಗ ಅಲ್ಲಿರುವ ಬೆದರುಗೊಂಬೆ ನೋಡಿ ಅವರ ದೃಷ್ಟಿಯೆಲ್ಲಾ ಗೊಂಬೆ ಮೇಲೆ ಬೀಳುತ್ತದೆ. ಆಗ ಮನೆ ನಿರ್ಮಾಣದಲ್ಲಿ ಯಾವುದೇ ತೊಂದರೆ ಉಂಟಾಗುವುದಿಲ್ಲ.

ಮಹಿಳೆ ಗರ್ಭಿಣಿಯಾಗಿದ್ದಾಗ ಮನೆ ಕಟ್ಟಬಾರದು ಎಂಬ ಮಾತಿದೆ. ಏಕೆಂದರೆ ಮನೆಯ ನಿರ್ಮಾಣ ಹಂತದಲ್ಲಿ ಯಜಮಾನನಿಗೆ ಕೌಟುಂಬಿಕ ವ್ಯವಹಾರದಲ್ಲಿ ತಲೆ ಹಾಕಲು ಸಮಯ ವಿರುವುದಿಲ್ಲ. ಯಾವ ಕೆಲಸವೂ ಸಮರ್ಪಕವಾಗಿ ನೆರವೇರದೇ ಹೋಗುವ ಸಂದರ್ಭವಿರುತ್ತದೆ.

ಆದ್ದರಿಂದ ಮನೆಯಲ್ಲಿ ಗರ್ಭಿಣಿ ಹೆಂಗಸಿದ್ದರೆ ಅವಳ ಪಾಡು ಅಧೋಗತಿಯಾಗುತ್ತದೆ. ಯಾವ ಹೊತ್ತಿನಲ್ಲಾದರೂ ತೊಂದರೆಗಳು ಎದುರಾಗಬಹುದು. ಅಂಥ ಹೊತ್ತಿನಲ್ಲಿ ಅವಳ ಸೇವೆಗೆ ನಿಂತರೆ ಮನೆ ನಿರ್ಮಾಣದ ಕೆಲಸ ನಿಂತು ಹೋಗುತ್ತದೆ ಎಂಬ ನಂಬಿಕೆ ಉಪದೇಶಾತ್ಮಕವಾಗಿದೆ. ಮನೆಯಲ್ಲಿ ಗರ್ಭಿಣಿ ಮಹಿಳೆಯರಿದ್ದರೆ ಅವಳ ಹೆರಿಗೆಯಾಗುವವರೆಗೆ ಮನೆ ಕಟ್ಟಬಾರದು, ಕಟ್ಟುವುದಿಲ್ಲ. ಏಕೆಂದರೆ ಅದು ಅನಿಷ್ಟ ಎಂಬ ನಂಬಿಕೆ. ಹೊಟ್ಟೆಯಲ್ಲಿರುವ ಹುಟ್ಟುವ ಮಗುವಿನ ಮೇಲೆ ಮನೆ ಕಟ್ಟಿದಂತೆ ಎಂದು ಹೇಳುತ್ತಾರೆ. ಆದ್ದರಿಂದ ಹೆರಿಗೆಯ ನಂತರವೇ ಮನೆಯನ್ನು ಕಟ್ಟುತ್ತಾರೆ. ಇದಕ್ಕೆ ಹೆಂಡತಿ ಬಸುರಿಯಾಗಿದ್ದಾಗ ಮನೆ ಕಟ್ಟಬಾರದು ಎಂಬ ನಂಬಿಕೆ ಇದೆ.

ಮಕ್ಕಳು ಮೊದಲ ಸಾರಿ ಹೊಸ್ತಿಲು ದಾಟಿದಾಗ ತೆಂಗಿನಕಾಯಿ ಒಡೆದು ಪೂಜೆ ಮಾಡಬೇಕು. ಏಕೆಂದರೆ ಮಗು ಹೊಸ್ತಿಲು ದಾಟುವುದು ಅದರ ಬೆಳವಣಿಗೆಯ ದೃಷ್ಟಿಯಿಂದ ಒಂದು ಮಹತ್ವದ ಘಟ್ಟವಾಗಿರುತ್ತದೆ. ಅವರ ಮುಂದಿನ ಭವಿಷ್ಯವು ಉಜ್ವಲವಾಗಿರಲಿ ಎಂದು ಹಾರೈಸುತ್ತಾರೆ. ಈ ಸಂತೋಷವನ್ನು ಸಹೋದರ ಮಾವ ಅಥವಾ ಸೋದರತ್ತೆ ಆ ಮಗುವಿಗೆ ಹೊಸ ಬಟ್ಟೆ ತಂದು ತೆಂಗಿನಕಾಯಿ ಹೊಡೆದು ಪೂಜೆ ಮಾಡಬೇಕು. ಮುಂದೆ ಹೆಣ್ಣು ಮಗುವಾಗಿದ್ದರೆ ಅವಳು ಮಾವನ ಮನೆಯ ಸೊಸೆಯಾಗಬಹುದು ಇಲ್ಲವೆ ಅತ್ತೆಯ ಮನೆ ಸೊಸೆಯಾಗಬಹುದು ಎಂಬ ಅಭಿಲಾಷೆ ಅವರಲ್ಲಿದೆ.

ಮನೆಯೊಳಗೆ ಉಗುರು ಕತ್ತರಿಸಬಾರದು ಎಂಬ ನಂಬಿಕೆ. ಏಕೆಂದರೆ ಯಾವ ಹಾನಿಯಾಗದಂತೆ ನೋಡಿಕೊಳ್ಳಲು ಮನೆಯೊಳಗೆ ಕತ್ತರಿಸಿದರೆ ಅದು ಆಹಾರದಲ್ಲಿ ಇಲ್ಲವೆ ಕಾಲು ಕೈಗೆ ಚುಚ್ಚುವುದೋ, ಇಲ್ಲವೆ ಚಿಕ್ಕ ಮಕ್ಕಳಿಗೆ ತೊಂದರೆಯಾಗಬಹುದು ಎಂಬ ನಂಬಿಕೆಯಿದೆ.

ಸಂಜೆ ಹೊತ್ತಿನಲ್ಲಿ ಕಸ ಹೊರ ಹಾಕಬಾರದು : ಏಕೆಂದರೆ ಮನೆಯಲ್ಲಿ ಸೂಕ್ಷ್ಮವಾದ ವಸ್ತುಗಳು ಬಿದ್ದಿದ್ದರೆ ಅವು ಕಸದಲ್ಲಿ ಹೋಗಿರುತ್ತವೆ. ಮತ್ತೆ ಮನೆಯ ಲಕ್ಷ್ಮಿಯನ್ನು ಹೊರಗೆ ಹಾಕಬಾರದು ಎಂಬ ನಂಬಿಕೆಯಿದೆ. ಪದೇ ಪದೇ ಕಸ ಹೊಡೆಯಬಾರದು. ಏಕೆಂದರೆ ಮನೆಯಲ್ಲಿರುವ ಲಕ್ಷ್ಮಿ ಹೊರ ಹೋಗುತ್ತಾಳೆ ಎಂಬ ನಂಬಿಕೆ ಇದೆ.

ಮನೆಯ ಬಾಗಿಲು ಪೂರ್ವ ಅಥವಾ ಉತ್ತರ ದಿಕ್ಕಿಗೆ ಇಡಬೇಕು ಎಂಬ ನಂಬಿಕೆ ಇದೆ. ಮನೆಗೋಡೆ ಮೇಲೆ ಇದ್ದಿಲು ಮಸಿಯಿಂದ ಬರೆಯಬಾರದು. ಹೊಸ್ತಿಲು ಮೇಲೆ ನಿಂತು ಭಿಕ್ಷೆ ಹಾಕಬಾರದು. ತಿನ್ನಬಾರದು, ತಿನಿಸುವುದು ಮಾಡಬಾರದು, ಕುಳಿತುಕೊಂಡರೆ ನಮ್ಮಪ್ಪನಿಗೆ ಸಾಲ ಕೊಟ್ಟಿದೆಯೆ ಎಂದು ಕೇಳುತ್ತಾರೆ.

ಮನೆಯೊಳಗೆ ಸಾಯಬಾರದು, ಸತ್ತರೆ ಮನೆ ಬಿಡಬೇಕು ಎಂಬ ನಂಬಿಕೆ. ಯಾರಾದರೂ ಮನೆಯೊಳಗೆ ಸತ್ತರ ಮೈಲಿಗೆಯಾಗುತ್ತದೆ. ಅದರಿಂದ ಮೂರು ದಿನದಲ್ಲಿ ಅವರಿಗೆ ಮಾಡಬೇಕಾದ ಶಾಸ್ತ್ರ ಮಾಡಿ ಮುಂದೆ ಏನು ಮಾಡಬೇಕು ಎಂಬುದನ್ನು ತಿಳಿದುಕೊಳ್ಳಲಾಗುತ್ತದೆ. ಮನೆ ಬಿಡುವ ಪರಿಸ್ಥಿತಿ ಬಂದರೆ ಅವರು ಬಿಡುತ್ತಾರೆ. ಇಲ್ಲವೆ ಯಾವುದೇ ದೋಷವಿದ್ದಾಗ ಮನೆ ಶಾಂತಿ ಮಾಡಿಸಿದ

ನಂತರ ಮನೆ ಬಿಡಬೇಕಾಗುವುದಿಲ್ಲ. ನವಗ್ರಹ ಪೂಜೆ ಮಾಡಿಸಿದರೆ ಸಾಕು ಎಲ್ಲ ಪೀಡೆಗಳ ನಾಶವಾಗುತ್ತದೆ ಎಂಬ ನಂಬಿಕೆ. ಇದನ್ನೆಲ್ಲಾ ಮನೆಯ ಹಿರಿಯ ಮಗ ಮಾಡಬೇಕಾಗುತ್ತದೆ. ತಿಥಿ ದಿನ ಮನೆ ಎದುರು ರಂಗೋಲಿ ಹಾಕಬಾರದು. ಏಕೆಂದರೆ ನೋವು ಸಂಕಟದಲ್ಲಿ ಇರುವ ಕುಟುಂಬ ದವರಿಗೆ ರಂಗೋಲಿ ಹಾಕುವ ಅವಶ್ಯಕತೆ ಇರುವುದಿಲ್ಲ. ಹಾಕಲೂಬಾರದು. ಸತ್ತ ದಿನದಂದು ಅವರು ಮನೆಯಲ್ಲಿ ಬೆಂಕಿ ಹಾಕುವುದಿಲ್ಲ. ಏಕೆಂದರೆ ಕುಟುಂಬವು ನೋವಿನ ಮಡುವಿನಲ್ಲಿರುತ್ತದೆ. ನೆರೆಹೊರೆಯ ಮನೆಯವರೇ ಕುಡಿಯಲು ಕಾಫಿ ಇಲ್ಲವೇ ನೀರು ಕೊಡುತ್ತಾರೆ. ಚಿಕ್ಕ ಮಗುವಿನ ತಾಯಿ ಇದ್ದರೆ ಅವಳಿಗೆ ಊಟವನ್ನು ತಂದುಕೊಡುತ್ತಾರೆ.

ತಾಳಿ ಬಿಚ್ಚಿ ಹೊಸ್ತಿಲು ದಾಟಬಾರದು: ಪಾವಿತ್ರತೆಯ ಸಂಕೇತವಾದ ತಾಳಿಯನ್ನು ಯಾವುದೇ ಗೃಹಿಣಿಯು ಬಿಚ್ಚುವುದಿಲ್ಲ. ಅದನ್ನು ಬಿಚ್ಚುವುದು ಗಂಡ ಸತ್ತ ನಂತರವೇ. ಯಾವುದೇ ಕಾರಣದಿಂದ ಅರಿಶಿನ ತಾಳಿ ಹರಿದರೆ ಅದನ್ನು ದಾರದಲ್ಲಿ ಕಟ್ಟಿಕೊಳ್ಳುತ್ತಾರೆ ವಿನಃ ಹೊಸ್ತಿಲು ದಾಟುವುದಿಲ್ಲ. ಸಂಜೆ ದೀಪ ಹೊತ್ತಿಸಿದ ಮೇಲೆ ಸ್ವಲ್ಪ ಹೊತ್ತಾದರೂ ಬಾಗಿಲು ತೆರೆದಿಡಬೇಕು ಎಂಬ ನಂಬಿಕೆ. ಸಂಜೆ ಹೊತ್ತು ಶುಚಿ ಮಾಡಿಕೊಂಡು ದೀಪವನ್ನು ಹಚ್ಚಿರುತ್ತಾರೆ. ಆವಾಗ ಸ್ವಲ್ಪ ಸಮಯದವರೆಗೆ ಬಾಗಿಲನ್ನು ಮುಚ್ಚಬಾರದು. ಏಕೆಂದರೆ ಲಕ್ಷ್ಮಿಯು ಆಗಮಿಸುವ ಹೊತ್ತಿನಲ್ಲಿ ಮುಚ್ಚಿದರೆ ಹಾಗೆಯೇ ಹೊರಟುಹೋಗುತ್ತಾಳೆ ಎಂಬ ನಂಬಿಕೆ ಇದೆ. ಮದುವೆಯಾದ ವರ್ಷದ ಆಷಾಢದಲ್ಲಿ ಅತ್ತೆ ಸೊಸೆ ಒಂದೆ ಬಾಗಿಲಲ್ಲಿ ತಿರುಗಾಡಬಾರದು ಎಂಬ ನಂಬಿಕೆ ಇದೆ.

ಪುರುಷಪ್ರಧಾನ ವ್ಯವಸ್ಥೆಯಲ್ಲಿ ರಂಗೋಲಿಯಂತಹ ಕಲೆ ಆಲಂಕಾರಿಕ ಕಲೆಯಾಗಿ ನಿರ್ವಹಿಸಲ್ಪಟ್ಟಿದ್ದರೂ, ಅದು ಇದುವರೆಗೂ ಮಾತೃ ಮೂಲ ಚರಿತ್ರೆಯನ್ನು ಹೇಳುವ ಕಲೆಯಾಗಿಯೇ ಉಳಿದುಕೊಂಡು ಬಂದಿದೆ. ರಂಗೋಲಿ ಮೂಲದಲ್ಲಿ ಅದು ಕಲೆಯಾಗಿರಲಿಲ್ಲ. ಸಾಂಕೇತಿಕ ಮಾಂತ್ರಿಕ ಭಾಷೆಯಾಗಿದ್ದಿತು. ಕಲೆಯೆಂದು ಪರಿಗಣಿಸಿದ ಈ ಯುಗದಲ್ಲೂ, ಮನೆಯ ಅಂಗಳದಲ್ಲಿ ರಂಗೋಲಿ ಇದ್ದರೆ ಮನೆಯ ಒಳಗೆ ಯಾವುದೇ ದುಷ್ಟಶಕ್ತಿಗಳನ್ನು ಪ್ರವೇಶಿಸಲು ಬಿಡುವುದಿಲ್ಲ ಎನ್ನುವ ನಂಬಿಕೆ ಪ್ರಬಲವಾಗಿಯೇ ಇದೆ. ಆದರೆ ಆಧುನಿಕತೆಯಲ್ಲಿ ಕೆಲವು ಜನರು ರಂಗೋಲಿ ಬಿಡಿಸುವುದಿಲ್ಲ. ಹಳೆಯ ಶೈಲಿಯ ಕಲೆಯನ್ನು ಅವರು ಬಿಡಿಸುವುದು. ಇಂದಿನ ಪೀಳಿಗೆಯವರು ಆಧುನಿಕ ಪ್ರಭಾವದಿಂದ ಪುಸ್ತಕದಲ್ಲಿ ನೋಡಿ ರಂಗೋಲಿ ಬಿಡಿಸುವುದನ್ನು ಕಲಿತುಕೊಂಡಿದ್ದಾರೆ. ರಂಗೋಲಿಯನ್ನು ವಿಶಿಷ್ಟವಾಗಿ ಹಬ್ಬ ಹರಿದಿನಗಳಲ್ಲಿ ಆಲಂಕಾರಿಕವಾಗಿ ಬಿಡಿಸುತ್ತಾರೆ.

ಲಕ್ಷ್ಮಿ ಪೂಜೆ ಮಾಡುವಾಗ ತುಂಬಿದ ಕೊಡ ಅಥವಾ ತಂಬಿಗೆಯನ್ನಿಡುವ ಜಾಗದಲ್ಲಿ ರಂಗೋಲಿ ಯನ್ನು ಹಾಕಿಯೇ ಇಡುವರು. ಯಾಂತ್ರಿಕ ವಿದ್ಯೆ ಮೊದಲು ಮಹಿಳಾಪ್ರಧಾನವಾಗಿತ್ತು ಎನ್ನುವುದಕ್ಕೆ ಇವತ್ತಿಗೂ ಜೀವಂತವಾಗಿರುವ ಈ ಎಲ್ಲ ನಂಬಿಕೆ ಹಾಗೂ ಆಚರಣೆಗಳು ಸಾಕ್ಷಿಯಾಗಿವೆ. ಒಲೆಯನ್ನು ಲಕ್ಷ್ಮಿ ಎಂದು ಪೂಜಿಸುತ್ತಾರೆ. ಒಲೆಯನ್ನು ಬಳಿದು, ಸಾರಿಸಿ ಕುಂಕುಮ, ಭಂಡಾರ ಇಟ್ಟು ಅದು ಸೂರ್ಯ ಮತ್ತು ಚಂದ್ರ ಆಕಾರದಲ್ಲಿ ರೂಪಿಸುತ್ತಾರೆ. ಬೆಳಗಾದೊಡನೆ ಮಹಿಳೆಯರು ಅಂಗಳವನ್ನು

ಶುಚಿ ಮಾಡಿ ರಂಗೋಲಿ ಬಿಡಿಸುತ್ತಾರೆ. ಮನೆಯಲ್ಲಿ ಹೆಣ್ಣು ಮಕ್ಕಳು ಇಲ್ಲದಿದ್ದಾಗ ಗಂಡಸರಿಗೆ ಮನೆಯನ್ನು ಯಾವ ರೀತಿ ಇಟ್ಟುಕೊಳ್ಳಬೇಕು ಎಂಬ ಅರಿವೇ ಇರುವುದಿಲ್ಲ. ಹೋಟೆಲಿನಲ್ಲಿ ತಿಂದು, ಊರೂರು ಸುತ್ತುತ್ತಾ ಕಾಲ ಕಳೆಯುತ್ತಾರೆ. ಅದೇ ಹೆಣ್ಣು ಇದ್ದರೆ ಶುಚಿಯಾಗಿ ಮನೆಯನ್ನು ಬೆಳಗುತ್ತಾ ಇರುವುದು ಕಂಡುಬರುತ್ತದೆ. ಅದು ಬದುಕಿನ ಮತ್ತು ಸೃಷ್ಟಿಯ ಕ್ರಿಯಾತ್ಮಕತೆಯನ್ನು ಹೇಳುತ್ತದೆ. ಪ್ರತಿನಿತ್ಯ ಜನಪದ ಮಹಿಳೆ ರಂಗೋಲಿಯನ್ನು ಭಿನ್ನ ಭಿನ್ನವಾಗಿಯೇ ಬಿಡಿಸುತ್ತಾಳೆ.

ನಾವು ಇವತ್ತು ಯಾವುದನ್ನು ಜನಪದ ಕಲೆ ಎಂದು ಗುರುತಿಸುತ್ತಿದ್ದೇವೆಯೋ ಅದು ಜನಪದರ ಪಾಲಿಗೆ ಕಲೆ ಅಲ್ಲ. ಅದೊಂದು ಜೀವನ ಕ್ರಮ. ನಾವು ಅದನ್ನು ಕೇವಲ ಜನಪದ ಕಲೆಯಾಗಿ ನಮ್ಮ ಅಧ್ಯಯನದ ಸಂದರ್ಭದಲ್ಲಿ ಕಾಣುತ್ತಿದ್ದೇವೆ. ಈ ಜನಪದ ಕಲೆಗಳನ್ನು ಮೂರು ವಿಧಗಳಲ್ಲಿ ವಿಂಗಡಿಸಿಕೊಂಡು ನೋಡಬಹುದು. ಮಹಿಳಾ ಜನಪದ ಕಲೆಗಳು, ಪುರುಷ ಜನಪದ ಕಲೆಗಳು, ಸ್ತ್ರೀ ಪುರುಷರಿಬ್ಬರೂ ಭಾಗವಹಿಸುವ ಕಲೆಗಳು. ಮಹಿಳಾ ಜನಪದ ಕಲೆಗಳನ್ನು ಸಾಮಾಜಿಕ ನೆಲೆಯಲ್ಲಿಟ್ಟು ವಿಶ್ಲೇಷಿಸುವುದು ಅತ್ಯವಶ್ಯಕವೆನಿಸುತ್ತದೆ. ಇಲ್ಲಿ ಕಲೆ ಎನ್ನುವುದನ್ನು ದುಡಿಮೆಗೆ ಸಂವಾದಿಯಾಗಿ ಬಳಸಲಾಗಿದೆ. ಪ್ರಕೃತಿಯಲ್ಲಿ ದೊರೆಯುವ ಆಹಾರವನ್ನು ಹುಡುಕಿಕೊಂಡು ಜೀವಿಸುವ ಉತ್ಪಾದನಾ ವಿಧಾನವನ್ನು ಅನುಸರಿಸುತ್ತಿದ್ದಾಗ ಅಂದಿನ ಉತ್ಪಾದನೆ ಅತ್ಯಲ್ಪವಾಗಿರುತ್ತದೆ. ಸಾಂಸ್ಕೃತಿಕ ಚರಿತ್ರೆಯಲ್ಲಿ ರೂಪಗೊಂಡ ಎಲ್ಲಾ ಘಟ್ಟಗಳು (ಪಿತೃಪ್ರಧಾನ, ಪುರೋಹಿತಶಾಹಿ, ರಾಜಶಾಹಿ, ಊಳಿಗಮಾನ್ಯಶಾಹಿ, ಸಾಮಂತಶಾಹಿ ಹಾಗೂ ಬಂರ್ಜ್ವಾ) ಪುರುಷಕೇಂದ್ರಿತವಾಗಿಯೇ ಬೆಳೆದುಕೊಂಡು ಬಂದುದರಿಂದ ಮಹಿಳಾ ವಿರೋಧಿ ನಿಲುವುಗಳನ್ನೇ ಹೊಂದಿದೆ. ಅವು ಮಹಿಳಾ ಸೃಜನಶೀಲತೆಯನ್ನು ಹತ್ತಿಕ್ಕಿದವು. ಹೆಣ್ಣಿನ ಮೇಲೆ ಪುರುಷ ಆರೋಪಿಸಿದ ಮೌಲ್ಯಗಳ ನಿರ್ದೇಶನದ ಭೂಮಿಕೆಯಲ್ಲಿಯೇ ಅವು ಪ್ರದರ್ಶನಗೊಳ್ಳತೊಡಗಿದ್ದವು.

ಮಹಿಳಾ ಕಲೆಗಳನ್ನು ಸೌಂದರ್ಯ ಮತ್ತು ನೈಪುಣ್ಯದ ನೆಲೆಗಳಲ್ಲಿ ಮಾತ್ರ ನೋಡಲಾಗುತ್ತಿದೆ. ಮಹಿಳಾ ಕಲೆಗಳ ಹಿಂದೆ ಇರುವ ಪುರುಷಪ್ರಧಾನ ವ್ಯವಸ್ಥೆಯ ರಾಜಕಾರಣವನ್ನು ಗುರುತಿಸಬೇಕಾದರೆ ಅವುಗಳನ್ನು ಸಾಮಾಜಿಕ ನೆಲೆಯಲ್ಲಿಟ್ಟು ವಿಶ್ಲೇಷಿಸಬೇಕಾಗುತ್ತದೆ. ಅಂದಾಗ ಮಾತ್ರ ಮಹಿಳಾ ಜನಪದ ಕಲೆಗಳಿಗಿರುವ ಬೇರೆ ಬೇರೆ ಆಯಾಮಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಮಹಿಳಾ ಜನಪದ ಕಲೆಗಳ ಕುರಿತು ಆಳವಾದ ಅಧ್ಯಯನ ನಡೆದಾಗ ಮಾತ್ರ ಅವುಗಳ ಮೇಲೆ ಹೆಚ್ಚಿನ ಬೆಳಕು ಬೀರಲು ಸಾಧ್ಯವಾಗುತ್ತದೆ.

ಕಾಗೆ, ಗೂಬೆ ಇವು ಮನೆಯ ಮೇಲೆ ಕುಳಿತುಕೊಳ್ಳುವುದು, ಅನ್ನ ಅಥವಾ ಹಣ ಕನಸಿನಲ್ಲಿ ಕಾಣಿಸಿಕೊಳ್ಳುವುದು, ಸಾವಿನ ಮುನ್ಸೂಚನೆ ಎಂದು ಭಾವಿಸುವುದು ಬಹುತೇಕ ಜನಾಂಗದಲ್ಲಿ ಕಂಡುಬರುತ್ತದೆ. ಕಾಗೆ ಮನೆಯ ಮುಂದೆ ಕುಳಿತು ಕೂಗಿದರೆ ಮನೆಗೆ ಬಂಧುಗಳು ಬರುತ್ತಾರೆ ಎಂಬ ನಂಬಿಕೆ. ಕೈಯಿಂದ ತುಂಬಿದ ಚಂಬು ಬೀಳುವುದು ಸಹ ಇದೆ ನಂಬಿಕೆಯಲ್ಲಿದೆ. ಗೂಬೆ ಮನುಷ್ಯನ ಮೇಲೆ ಕುಳಿತು ಹೋದರೆ, ಮನೆ ಮುಂದೆ ಕೂಗಿದರೆ ಸಾವಿನ ಸುದ್ದಿ ಅಥವಾ

ಯಾವುದಾದರೊಂದು ಅಪಾಯ ಇದೆ ಎಂದು ತಿಳಿದುಬರುತ್ತದೆ. ಆದರೆ ಯಾವುದೇ ಒಂದು ಅಪಾಯ ಆಗುವುದು ಖಂಡಿತ.

"ಮಾಟ-ಮಂತ್ರ ಮೋಡಿ, ಶಕುನ ವಿದ್ಯೆಗಳು ಆದಿಮ ಯುಗದ ಸಾಂಸ್ಕೃತಿಕ ಸಂಗತಿಗಳು. ಯಾವುದೇ ಸಾಂಸ್ಕೃತಿಕ ಸಂಗತಿಗಳಿಗೆ ಭೌತಿಕ ಅಸ್ತಿತ್ವ ಮತ್ತು ಆಂತರಿಕ ಅಸ್ತಿತ್ವಗಳಿರುತ್ತದೆ. ವೈಚಾರಿಕವಾಗಿ ಮಂತ್ರ ಒಳಗೊಂಡ ಸತ್ವ ಮತ್ತು ಪೊಳ್ಳುತನಗಳ ಚರ್ಚೆಗಿಂತಲೂ ಅದು ಪಡೆದುಕೊಂಡ ಸಾಮಾಜಿಕ ಆಯಾಮಗಳ ಚರ್ಚೆ ಮಹತ್ವಪೂರ್ವವಾಗಿದ್ದು, ಅದಕ್ಕೆಂದೇ ಅರ್ಥಕ್ಕೆ ಹಾಕಿದಷ್ಟೂ ನಿಗೂಢವಾಗಿ ಉಳಿಯುವ ಮಂತ್ರವಿದ್ಯೆಯ ಆಂತರಿಕ ಅಸ್ತಿತ್ವದ ವಿಶ್ಲೇಷಣೆಗಳಿರುವ ವ್ಯರ್ಥಸಾಹಸ ಮಾಡದೆ, ಅದರ ಭೌತಿಕ ಅಸ್ತಿತ್ವವನ್ನು ಸಾಮಾಜಿಕ ಆಯಾಮಗಳೊಂದಿಗೆ ಮಹಿಳಾಪರ ನೆಲೆಯಲ್ಲಿ ಚರ್ಚಿಸಬಹುದು. ಈ ದೀರ್ಘ ಪರಂಪರೆ ಒಂದರೊಳಗೊಂದು ಮಿಳಿತವಾಗಿ ಬೆರೆತುಹೋಗಿದ್ದರೂ ಮಾಟ, ವಿದ್ಯೆಯಂತಹ ಪ್ರಾಥಮಿಕ ಘಟ್ಟ, ಆದಿಮ ಯುಗದಲ್ಲಿದ್ದ ಮಾತೃಪ್ರಧಾನ ವ್ಯವಸ್ಥೆಗೂ ಆ ಮಾಂತ್ರಿಕ ವಿವರಗಳಿಗೂ ವಿಶೇಷವಾದ ಸಂಬಂಧವಿದೆ. ಇಂದು ಮಾಟ, ಮಂತ್ರಗಳು ಅಜ್ಞಾನದ ಫಲಗಳು ಎಂದು ಗುರುತಿಸಲಾಗುತ್ತಿದ್ದರೂ ಅಂದು, ಅವು ಮಾನಸಿಕವಾಗಿ, ಕ್ರಿಯಾತ್ಮಕವಾಗಿರಲು ಮಾರ್ಗದರ್ಶಿಯಾಗಿತ್ತು ಎಂಬುದನ್ನು ಮರೆಯಲಾಗುವುದಿಲ್ಲ. ಕೃಷಿ ಮಹಿಳೆಯ ಶೋಧನೆ, ಈ ತರ್ಕವನ್ನು ಒಪ್ಪುವುದಾದರೆ ಮಾಟ, ಮಂತ್ರಗಳ ಮೂಲ ಕರ್ತೃ ಮಹಿಳೆಯೇ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಮೊದಲು ಮಂತ್ರ ಅಥವಾ ಧಾರ್ಮಿಕ ಸಂಸ್ಕಾರಗಳು ಭೂಮಿಯ ಫಲವತ್ತತೆಯನ್ನು ರಕ್ಷಿಸುವ ಉದ್ದೇಶವನ್ನು ಹೊಂದಿದ್ದವು. ಹೀಗಾಗಿ ಕೃಷಿಯ ಜನನಿಯಾದ ಸ್ತ್ರೀಯು ಸಹಜವಾಗಿ ಇವುಗಳೊಂದಿಗೆ ವಿಶೇಷ ಸಮರ್ಥತೆಯನ್ನು ಪಡೆದುಕೊಂಡಳು".[೧೭]

ಭೂಮಿಗೆ ಹೊರೆಯಾಗಿ, ಯಾರಿಗೂ ಬೇಡದವಳಾಗಿ ಬಾಳುವ ಹೆಣ್ಣು ಜನ್ಮವೆತ್ತಿ ಬದುಕುವು ದಕ್ಕಿಂತ ಸತ್ತು, ಮಣ್ಣಾಗಿ ಹೋದರೆ, ತಮ್ಮ ಜನ್ಮ ಎಷ್ಟೋ ಸಾರ್ಥಕ ಎಂದು ಹೆಣ್ಣು ಮಕ್ಕಳು ಹೇಳುತ್ತಾರೆ.

ಹೆಣ್ಣು ಆಗೋದಕ್ಕಿಂತ ಮಣ್ಣು ಆಗೋದು ಲೇಸು
ಮಣ್ಣಿನ ಮ್ಯಾಲೆ ಮರವಾಗಿ ಹುಟ್ಟಿದರೆ ಪುಣ್ಯವಂತರಿಗೆ ನೆರಳಾದೆ
ಹೆಣ್ಣಿನ ಕಾಯುವ ಮಣ್ಣು ಮಾಡಲಬೇಕು
ಸುಣ್ಣದಲ್ಹಾಗಿ ಸುಡಬೇಕು ಈ ಜಲುಮ
ಮಣ್ಣು ಮಾಡಿ ಮರ್ತ್ಯ ಗೆಲಬೇಕು.

ಹೆಣ್ಣು ಮಕ್ಕಳ ಜನ್ಮದ ಕಷ್ಟ ನಿಷ್ಠುರಗಳನ್ನು ಸಹಿಸಿಕೊಂಡು ಒಂದು ಮರವಾಗಿ ಹುಟ್ಟಿದರೆ ನೆರಳಾಗಿ ಇರುತ್ತಿದ್ದೆ ಎಂದು ದೇವರಲ್ಲಿ ಬೇಡಿಕೊಳ್ಳುತ್ತಾಳೆ.

ಆಕಾಶ ಕಾಯಗಳು ಅನೇಕ ಕಥೆಗಳಿಗೆ ಸ್ಫೂರ್ತಿ ನೀಡಿರುವುದುಂಟು. ಆಕಾಶಗಂಗೆ, ಮಳೆ, ನಕ್ಷತ್ರಗಳು, ನವಗ್ರಹಗಳು, ರಾಹುಕೇತುಗಳು, ಚಂದ್ರಸೂರ್ಯರು ಮೊದಲಾದವುಗಳ ಸುತ್ತ

ಪುರಾಣಗಳು ಹೆಣೆದುಕೊಂಡಿವೆ ಎಂದು ಹೇಳುತ್ತಾರೆ. ಮದುವೆಯ ಸಂದರ್ಭದಲ್ಲಿ ಗಂಡು ತಾಳಿ ಕಟ್ಟಿದ ನಂತರ ಹೆಂಡತಿಗೆ ಅರುಂಧತಿ ನಕ್ಷತ್ರವನ್ನು ತೋರಿಸುತ್ತಾನೆ. ಅದು ಸಂಪ್ರದಾಯಗಳಲ್ಲಿ ಕಂಡುಬರುವುದುಂಟು. ನಕ್ಷತ್ರ ಕಂಡರೂ, ಕಾಣದಿದ್ದರೂ ಸಹ ಅಲ್ಲಿದೆ ನೋಡಿ ಎಂದು ಪುರೋಹಿತರು ಅವರಿಬ್ಬರಿಗೂ ಬೆರಳು ಮಾಡಿ ತೋರಿಸುತ್ತಾರೆ. ಪೂಜೆ ಸಹ ಮಾಡಿಸಲಾಗುತ್ತದೆ. ಇದು ಮದುವೆ ಸಂದರ್ಭದಲ್ಲಿ ಅನಿವಾರ್ಯವಾಗಿದೆ.

ಸೂರ್ಯಚಂದ್ರರಿಗೆ ಸಂಬಂಧಿಸಿದ ಒಂದು ನಂಬಿಕೆ

"ಸೂರ್ಯ ಚಂದ್ರರು ಅಣ್ಣತಮ್ಮಂದಿರು. ತಾಯಿಯ ಅಪ್ಪಣೆಯಂತೆ ಒಂದು ಮದುವೆ ಸಮಾರಂಭಕ್ಕೆ ಹೋಗುತ್ತಾರೆ. ಅಲ್ಲಿ ಮದುವೆ ಮನೆಯ ಊಟ ಮಾಡುತ್ತಾರೆ. ಸೂರ್ಯನು ತಾಯಿಯ ಮತ್ತು ತಂದೆಯ ಪಾಲು ಎಲ್ಲವನ್ನು ತಿನ್ನುತ್ತಾನೆ. ಆದರೆ ಚಂದ್ರನು ತನ್ನ ಪಾಲಿನದನ್ನು ತಾಯಿಗೆ ತಂದುಕೊಡುತ್ತಾನೆ. ಹಾಗೆ ತಾಯಿಯು ತನ್ನನ್ನು ತೃಪ್ತಿಪಡಿಸಿದ್ದಾಕ್ಕಾಗಿ ಸೂರ್ಯನಿಗೆ ಸದಾ ಉರಿಯುತ್ತಿರುವಂತೆ ಶಾಪವಿತ್ತಳು. ತನ್ನ ಪ್ರೀತಿಗೆ ಪಾತ್ರನಾದ ಚಂದ್ರನಿಗೆ ಸದಾ ತಣ್ಣಗಿರುವಂತೆ ಹರಸುತ್ತಾಳೆ. ಅಂದಿನಿಂದ ಇಂದಿನವರೆಗೆ ಸೂರ್ಯ-ಚಂದ್ರರ ಕಥೆಯು ಕೇಳಬರುತ್ತದೆ. ಸೂರ್ಯನನ್ನು ಜನರು ಬಯ್ದುಕೊಳ್ಳುತ್ತಾರೆ ಮತ್ತು ಚಂದ್ರನನ್ನು ಬಯ್ಯುವುದಿಲ್ಲ".[೧೮]

ಪುರಾಣಗಳು ಜನರ ನಂಬಿಕೆಗಳನ್ನು ವ್ಯವಸ್ಥಿತಗೊಳಿಸುವಲ್ಲಿ ಬಹು ಪ್ರಮುಖ ಪಾತ್ರವನ್ನು ವಹಿಸುತ್ತವೆ. ನಂಬಿಕೆ ವ್ಯವಸ್ಥೆಗಳಂತೂ ಬಹುಮಟ್ಟಿಗೆ ಪುರಾಣಗಳನ್ನವಲಂಬಿಸಿರುತ್ತದೆ. ಸಿಡಿಲು-ಗುಡುಗು ಬಡಿಯುವುದು. ಆಕಾಶದಲ್ಲಿ ಮಹಾಭಾರತ ಯುದ್ಧ ನಡೆಯುತ್ತಿರುತ್ತದೆ. ಆಗ ಅರ್ಜುನ, ಭೀಮ ಯುದ್ಧವನ್ನು ಮಾಡುತ್ತಿರುತ್ತಾರೆ. ಅವರ ರಥವು ರಭಸವಾಗಿ ಓಡುತ್ತಿರುವುದರಿಂದ ಆಗ ನಮಗೆ ಗುಡುಗು ಉಂಟಾಗುತ್ತದೆ. ಇನ್ನೊಂದು ರೀತಿಯಲ್ಲಿ ಅರ್ಜುನ ಭೀಮ ಬಿಡುವ ಬಾಣಗಳು ರಭಸವಾಗಿ ಬರುವುದರಿಂದ ಅವು ಸಿಡಿಲಿನಂತೆ ಅಪ್ಪರಿಸುತ್ತವೆ. ಆಗ ಆಕಾಶದಲ್ಲಿ ಸಿಡಿಲು ಕಾಣಿಸಿಕೊಳ್ಳುತ್ತವೆ. ಆಗ ಜನರು ಅರ್ಜುನ, ಭೀಮ, ಅರ್ಜುನಭೀಮ, ಎಂದು ನೆನೆದುಕೊಳ್ಳುವುದು ಕಂಡುಬರುತ್ತದೆ. ಆದ್ದರಿಂದ ಮನೆಯ ಬಾಗಿಲಿಗೆ ಸಿಡಿಲು ಬಡಿಯದಂತೆ ಕಬ್ಬಿಣದ ವಸ್ತುಗಳನ್ನು ಇಡುತ್ತಾರೆ. ಸೊಸೆ ಅತ್ತೆಯ ಮನೆಗೆ ಹೊಸದಾಗಿ ಬಂದಾಗ ಹೊಸ್ತಿಲಿಗೆ ಕಬ್ಬಿಣವನ್ನು ಅಥವಾ ಕುದುರೆ ಲಾಳವನ್ನು ಒಡೆಸುತ್ತಾರೆ. ಅದನ್ನು ತಂದು ಮನೆಯ ಬಾಗಿಲಿಗೆ ಹೊಡೆದರೆ ಅಶುಭದ ಕಾಟವಿರುವುದಿಲ್ಲ ಎಂಬ ನಂಬಿಕೆಯಿದೆ. ಬಾಲಗ್ರಹ ಪೀಡಿತರಾದಾಗ ಮಗುವಿನ ಕೈಗೆ ಅಥವಾ ಮೂರ್ಛೆ ರೋಗ ಇದ್ದವನಿಗೆ ಸಾಂಬರ್ ಕಾಕಿ(ರತ್ನ ಪಕ್ಷಿ)ಯನ್ನು ತಂದು ಅಡುಗೆ ಮಾಡಿ ಉಣಬಡಿಸಲಾಗುತ್ತದೆ. ಆಗ ಕ್ರಮೇಣವಾಗಿ ಈ ರೋಗ ವಾಸಿಯಾಗುತ್ತದೆ. ಮುಂದೆ ಬರುವುದಿಲ್ಲ. ಇದರ ರಕ್ತವನ್ನು ಮತ್ತು ಅಡವಿ ಪಾರಿವಾಳದ ರಕ್ತವನ್ನು ಪಾರ್ಶ್ವವಾಯು ಬಡಿದವರಿಗೆ ಹಚ್ಚಿದರೆ ಅದು ಕ್ರಮೇಣ ವಾಸಿಯಾಗುತ್ತದೆ. ಅದರ ಮಾಂಸವನ್ನು ತಿನ್ನಬೇಕು.

ಐದಾರು ವರ್ಷಗಳ ಹಿಂದೆ ಕಾಡಿನ ಪ್ರಾಣಿ ಬೇಡಿಕೆ ಇತ್ತು. ಇವುಗಳನ್ನು ಕಾಡಿನಲ್ಲಿ ಹೋಗಿ

ಹಿಡಿದುಕೊಂಡು ಬಂದು ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದರು. ಆದರೆ ಈಗ ಬೇರೆಯವರಿಗೆ ಬೇಕಾದರೆ ಬೇಟೆಗೆ ಹೋಗಿ ಹಿಡಿದುಕೊಂಡು ಬರುವುದುಂಟು. ಇದರಿಂದ ವಾಸಿಯಾದದ್ದು ಇದೆ. ಉದಾಹರಣೆಗೆ ಒಂದು ಹೆಣ್ಣು ಮಗು ೫ ವರ್ಷಗಳಿಂದ ಮೂರ್ಛೆ ರೋಗ ಕಾಯಿಲೆಯಿಂದ ಬಳಲುತ್ತಿತ್ತು. ಅವಳಿಗೆ ರತ್ನಪಕ್ಷಿ ಮತ್ತು ಅಡವಿ ಪಾರಿವಾಳಗಳನ್ನು ತಂದು ಊಟ ಮಾಡಿಸುತ್ತಿದ್ದರು. ಇದನ್ನು ೫-೬ ವರ್ಷಗಳವರೆಗೆ ಮುಂದುವರಿಸಿದರು. ಆದ್ದರಿಂದ ಅವಳಿಗೆ ೨೫ ವರ್ಷಗಳಾದರೂ ಈ ಕಾಯಿಲೆ ಬಂದಿಲ್ಲ, ಗುಣಮುಖಳಾಗಿದ್ದಾಳೆ.

ಹುಡುಗಿಯರು ಮೈ ನೆರೆದಾಗ ಮತ್ತು ಹೆರಿಗೆಯಾದಾಗ ಹೆಣ್ಣಿನ ಹಾಸಿಗೆ ಕೆಳಗೆ, ತಲೆಯ ಹತ್ತಿರ ಕುಡುಗೋಲು, ಕಸಬರಿಕೆ, ಚಪ್ಪಲ ಇಡುತ್ತಾರೆ. ಏಕೆಂದರೆ ದುಷ್ಟ ಶಕ್ತಿಗಳು ತಾಗದಂತೆ ಯಾವುದೇ ದೋಷವಾಗಬಾರದೆಂದು ಈ ರೀತಿ ಮಾಡುತ್ತಾರೆ. ಹಸಿ ಮೈಗಳಿಗೆ ಬೇಗ ದೆವ್ವ, ಪೀಡೆಗಳು ಸೇರಿಕೊಳ್ಳುತ್ತವೆ ಎಂಬ ನಂಬಿಕೆ ಇಂದಿಗೂ ಇದೆ. ಆದ್ದರಿಂದ ಹೊರಗಡೆ ಕರೆದುಕೊಂಡು ಹೋಗುವಾಗ ಅವಳ ಕೈಗೆ ಕುಡುಗೋಲು, ಇಲ್ಲವೆ ನಿಂಬೆಹಣ್ಣು ಕೊಡುತ್ತಾರೆ. ಮೈ ನೆರೆದವರು ಹದಿನಾರು ದಿನಗಳವರೆಗೆ ಮನೆ ಬಿಟ್ಟು ಬರುವುದಿಲ್ಲ. ಆಧುನಿಕತೆ ಪ್ರಭಾವದಿಂದ ೯ ದಿನ, ೧೧ ದಿನ ಕಾರ್ಯ ಮಾಡಿ ಬಿಡುತ್ತಾರೆ. ಹೆರಿಗೆಯಾದವಳಿಗೆ ೩ ತಿಂಗಳವರೆಗೆ ಎಲ್ಲಿಯೂ ಕಳಿಸುವುದಿಲ್ಲ. ಅವರು ಆರೋಗ್ಯದ ಮೇಲೆ ತುಂಬಾ ಕಾಳಜಿ ತೆಗೆದುಕೊಳ್ಳಬೇಕಾಗುತ್ತದೆ. ಮುಂದೆ ಆರೋಗ್ಯದಿಂದ ಇರಬೇಕಾದರೂ ಹಿಂದಿನ ಸಂಪ್ರದಾಯವನ್ನು ಪಾಲಿಸಬೇಕು. ಇಲ್ಲವಾದರೆ ಹೆಚ್ಚು ದಿನಗಳವರೆಗೆ ಆರೋಗ್ಯವಂತರಾಗಿರಲು ಸಾಧ್ಯವಿಲ್ಲ.

ಯಾವುದೇ ಅಡುಗೆ ಮಾಡಿದಾಗ ಇಲ್ಲವೆ ಅದನ್ನು ಬೇರೆಯವರಿಗೆ ಕಳಿಸುವಾಗ ಊಟದ ಜೊತೆ ಇದ್ದಿಲು, ಮೆಣಸಿನಕಾಯಿ, ಕಬ್ಬಿಣದ ಚೂರು ಇಟ್ಟು ಕಳಿಸುತ್ತಾರೆ. ಏಕೆಂದರೆ ಜಾಗಗಳು ಸರಿ ಇರುವುದಿಲ್ಲ, ರಾಹು ಬಡಿಯುತ್ತದೆ ಎಂಬ ನಂಬಿಕೆ. ಆದರೆ ಮಾಂಸ ಆಹಾರದಲ್ಲಿ ಬಹುಬೇಗ ರಾಹು ಬಡಿಯುತ್ತದೆ ಎಂಬ ನಂಬಿಕೆ ಇಂದಿಗೂ ಕಾಣುತ್ತೇವೆ.

ಬಲಹೀನ ಹೆಣ್ಣಿನ ಸ್ವರೂಪವನ್ನು ಸದಾ ತನ್ನ ಶೀಲಮಾನಗಳನ್ನು ಯಾರಾದರೂ ಅಪಹರಿಸಿ ಯಾರು ಎನ್ನುವ ಭಯದಲ್ಲೇ ಪರಾಧಿನಳಾಗಿ ಬದುಕಬೇಕಾದವಳನ್ನು ಅಸಹಾಯಕ, ಅಮಾಯಕಳಾಗಿ ಸಂಪೂರ್ಣವಾಗಿ ತನ್ನ ಗಂಡುಮಕ್ಕಳನ್ನೇ ಅವಲಂಬಿಸಿದ ಚಿಕ್ಕ ವಯಸ್ಸಿನ ಸ್ಫುರದ್ರೂಪಿ ತಾಯಿಯನ್ನು, ಭಾರತೀಯ ನಾರಿಯ ಪಾತಿವ್ರತ್ಯ, ಸ್ವಾಮಿನಿಷ್ಠೆ, ಮರ್ಯಾದೆ, ಶೀಲ, ಮಾನ, ಆಚಾರ-ವಿಚಾರ ಇತ್ಯಾದಿಗಳನ್ನು, ಹೀಗೆ ಹೊರಲಿಕ್ಕೆ ಸಾಧ್ಯವಾಗದ ಪರಂಪರೆಯ ಹೊರೆಯನ್ನು ಆಕೆಯ ಮೇಲೆ ಹೊರೆಸಿದ್ದರಿಂದ, ಬಿಡಿಸಿಕೊಳ್ಳಲಾಗದಂಥ ಅಪರಾಧ ಪ್ರಜ್ಞೆಯಲ್ಲಿ ಸಿಲುಕಿಸಿದ್ದರಿಂದ ಈ ದಿನದವರೆಗೆ ಭಾರತದಲ್ಲಿ ಹೆಣ್ಣು ಮಕ್ಕಳು ಯಾತನೆಯನ್ನು ಅನುಭವಿಸಬೇಕಾಗಿ ಬಂದಿದೆ. ತಮ್ಮ ಸ್ವಾಧೀನದಲ್ಲಿರು ವವರನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಹಾಗೂ ಅವರ ಅಸ್ತಿತ್ವವನ್ನು ನಿರ್ದಿಷ್ಟ ವಲಯಗಳಲ್ಲಿ ಮಾತ್ರವೇ ತಮ್ಮ ಅನುಕೂಲಕ್ಕನುಗುಣವಾಗಿ ಬಳಸಿಕೊಳ್ಳಲು ಧರ್ಮ, ಪರಂಪರೆ, ಜಾತಿ, ಪರಿಸರದಂಥ

ಸಲಕರಣೆಗಳನ್ನು ಕಾಲಕ್ಕನುಗುಣವಾಗಿ, ಕರ್ಮಕ್ಕನುಗುಣವಾಗಿ ಪುರುಷಪ್ರಧಾನತೆಯು ಬಹಳ ಜಾಣ್ಮೆಯಿಂದ ಬಳಸಿಕೊಳ್ಳುತ್ತಾ ಬಂದಿರುವ ಮಾತು ಹೊಸದೇನಲ್ಲ.

ಶರೀರವೇ ಹೆಣ್ಣಿಗೊಂದು ಹೊರೆ, ಶತ್ರು, ಬಂಧನ, ಮಗಳಾಗಿ, ತಾಯಿಯಾಗಿ, ವಿಧವೆಯಾಗಿ ಅಸಹಾಯಕ ಹೆಣ್ಣಾಗಿ ಅವಳು ಸಮಾನತೆ ಸ್ವಾತಂತ್ರ್ಯವಿಲ್ಲದೆ ಅನೇಕ ಸಮಸ್ಯೆಗಳಿಗೆ ಗುರಿಯಾಗಿ ಸಮಾಜದ ಕಟ್ಟುಪಾಡುಗಳಿಂದ ಬಂಧಿಸಲ್ಪಟ್ಟಿದ್ದಾಳೆ. ಆದ್ದರಿಂದ ಹೊರಬರಲು ಸಾಧ್ಯವಿಲ್ಲ. ಏಕೆಂದರೆ ಅವರಲ್ಲಿ ಶಿಕ್ಷಣದ ಪ್ರಭಾವ ಹೆಚ್ಚು ಆದಾಗ ಮಾತ್ರ ಈ ಸಮಸ್ಯೆಗಳು ಪರಿಹರಿಸಬಹುದಾಗಿದೆ. ವೈಚಾರಿಕತೆಯ ಕೊರತೆ ಇರುವ ಮಹಿಳೆ ಪ್ರಪಂಚವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡದೆ "ಗೂಟಕ್ಕೆ ಕಟ್ಟಿದ ಹಸುವಿನ ಹಾಗೆ" ಬೇರೆಲ್ಲೂ ಹೋಗದೆ ಹೊಸದಾಗಿ ಏನನ್ನು ತಿಳಿದುಕೊಳ್ಳದೆ ಪುರುಷ ಪ್ರಪಂಚವನ್ನು ಪ್ರವೇಶಿಸುವ ಧೈರ್ಯ ಇಲ್ಲದೆ ಶೋಷಣೆಯ ವಿರುದ್ಧ ಪ್ರತಿಭಟನೆ ದಂಗೇಳುವ ನಿರ್ಧಾರ ಕೈಗೊಳ್ಳದೆ ಸುಮ್ಮನೆ ಇರುವುದು ಕಂಡುಬರುತ್ತದೆ. ಮಾಡಿದ್ದನ್ನೇ ಮಾಡುತ್ತಾ ನಂಬಿದ್ದನ್ನೇ ನಂಬುತ್ತಾ ಯಾಂತ್ರಿಕವಾದ ಬದುಕಿನಲ್ಲಿ ಹೆಜ್ಜೆ ಹಾಕುತ್ತಿದ್ದಾರೆ.

ದಿನಬೆಳಗಾದರೆ ದೇಶದ ಯಾವುದಾದರೊಂದು ಭಾಗದಲ್ಲಿ ಮಹಿಳೆಯ ಮೇಲೆ ಹಲವು ಬಗೆಯ ಹಲ್ಲೆ, ಅತ್ಯಾಚಾರ ಮತ್ತು ದೌರ್ಜನ್ಯಗಳು ನಡೆಯುತ್ತಲೇ ಇರುತ್ತವೆ. ಸ್ತ್ರೀ ಪ್ರಪಂಚ ಸಂಕುಚಿತವಾಗಿದ್ದು, ಅವಳ ಜ್ಞಾನ, ತಿಳುವಳಿಕೆಯೂ ಸಂಕುಚಿತವಾಗಿರುತ್ತದೆ. ನಮ್ಮ ಸಮಾಜದ ಸಾಮಾಜಿಕ ಮೌಲ್ಯಗಳು, ಪ್ರತಿ ಹೆಜ್ಜೆಗೂ ಮಹಿಳೆಯರನ್ನು ಹಿಡಿದಿಟ್ಟಿದೆ. ಮೌಲ್ಯಗಳ ಹಿಡಿತದಿಂದ ಬಿಡುಗಡೆ ಮಾಡಿಕೊಂಡು ಮುನ್ನಡೆ ಸಾಧಿಸಲು ಧರ್ಮ, ದೇವರು, ಪತಿ, ಹಿರಿಯರು, ಸಂಸ್ಕೃತಿ ತಡೆಯನ್ನು ಉಂಟುಮಾಡುತ್ತಿವೆ. ಉದಾಹರಣೆಗೆ ಶಾಲೆಗೆ ಹೋಗುವ ಹುಡುಗಿಯು ಹುಡುಗನ ಜೊತೆ ಹೋದರೆ ಅವನ ಜೊತೆ ಏಕೆ ಹೋದೆ ಎಂದು ಬಯ್ಯುತ್ತಾರೆ. ಮತ್ತೆ ಶಾಲೆಗೆ ಹೋಗುವಾಗ ಯಾವ ಗಂಡಸರನ್ನು ತಲೆ ಎತ್ತಿ ಮಾತನಾಡಿಸಬಾರದು, ತುಂಬ ಎಚ್ಚರಿಕೆಯಿಂದ ಇರಬೇಕು ಎಂದು ತಿಳಿಹೇಳುತ್ತದೆ. ಸಮಾಜದಲ್ಲಿ ನಡೆಯುತ್ತಿರುವ ಘಟನೆಗಳಿಂದ ಮಹಿಳೆಯರ ಸ್ಥಿತಿ ಇನ್ನೂ ಘೋರವಾಗುತ್ತಿದೆ.

"ಮಾನವರ ಎಲ್ಲಾ ಕಲಾಪ್ರಕಾರಗಳಿಗೂ ಜಾನಪದ ಪ್ರವೃತ್ತಿಗಳೇ ಮುಖ್ಯವೆನಿಸಿದೆ. ತಾವು ಅಲಂಕರಿಸಿಕೊಂಡು ಸುತ್ತ ಮುತ್ತಲನ್ನು ಸುಂದರವಾಗಿ ಕಾಣುವಂತೆ ಮಾಡುವುದು ಅವರ ಸಹಜ ಸ್ವಭಾವವೆನಿಸಿದೆ. ಹಚ್ಚೆ ಹಾಕಿಸಿಕೊಳ್ಳುವುದು ಅಂಗಳವನ್ನು ರಂಗೋಲಿಯಿಂದ ಶೃಂಗರಿಸುವುದು. ತಮ್ಮ ಉಡುಪನ್ನು ಹೆಚ್ಚು ಹೆಚ್ಚು ಆಕರ್ಷಕಗೊಳ್ಳುವಂತೆ ಕಸೂತಿ ಕಲೆಯಿಂದ ಅಂದಗೊಳಿಸುವುದು. ಇವೆಲ್ಲಾ ಅಲಂಕಾರಕ್ಕೂ ಕಲೆಗೂ ಮನುಷ್ಯರಿಗೂ ತೀರಾ ನಂಟು ಎಂಬುದನ್ನು ಸಿದ್ಧಪಡಿಸುತ್ತದೆ".[೧೯]

ಹಚ್ಚೆ ಎಲ್ಲ ಧರ್ಮಗಳಲ್ಲೂ ಎಲ್ಲಾ ಸಮಾಜಗಳಲ್ಲಿ ಕಂಡುಬರುವ ಸಾಮಾನ್ಯ ಕಲೆ. ಆದರೆ ಅದರ ಸಂಕೇತ ಮತ್ತು ಅರ್ಥ ಬೇರೆ ಬೇರೆ ತೆರನಾಗಿರುತ್ತದೆ. ನಗರ ಜನಪದರಲ್ಲಿ ಈ ಕಲೆಯ ಅರ್ಥ ಮತ್ತು ಸಂಪ್ರದಾಯ ತಿಳಿಯದೆ ಇರಬಹುದು. ಆದರೆ ಅದು ವಿಶೇಷವಾಗಿ ಹಲವಾರು

ಬದಲಾವಣೆಯೊಂದಿಗೆ ನಗರ ಜನಪದದಲ್ಲಿ ಚಾಲ್ತಿಯಲ್ಲಿದೆ. ಹಿಂದೂ ಸಂಪ್ರದಾಯಕ್ಕೆ ಸೇರಿದ ಪ್ರತಿಯೊಬ್ಬ ಮಹಿಳೆಯು, ಹೆಣ್ಣುಮಕ್ಕಳು ಹಣೆಯಲ್ಲಿ ದೃಷ್ಟಿಬೊಟ್ಟು ಇರುವುದನ್ನು ಕಾಣಬಹುದು. ಭಾರತದಲ್ಲಿ ಹಚ್ಚೆಯ ಧರ್ಮ, ಅಲಂಕಾರ, ಜಾತಿ, ಸೌಭಾಗ್ಯ, ಸಂತಾನೋತ್ಪತ್ತಿ ದೈವ, ಮನೋಭಾವದಲ್ಲಿದೆ. ಇದು ಸೌಂದರ್ಯದ ಸಂಕೇತವೂ, ಲೈಂಗಿಕ ಪ್ರಚೋದನೆಯ ಕರೆಯೂ ಆಗಿರುತ್ತದೆ. ಇತ್ತೀಚೆಗೆ ಸಿನಿಮಾ ನಟನಟಿಯರು ತಮ್ಮ ಎದೆಯ ಮೇಲೆ ಕೆನ್ನೆಯ ಮೇಲೆ ಕೈತೋಳಿನ ರಟ್ಟೆಯ ಮೇಲೆ, ಬೆನ್ನಿನ ಮೇಲೆ, ಹಚ್ಚೆಯನ್ನು ಹಾಕಿಸಿಕೊಂಡಿರುತ್ತಾರೆ. ಈಗಿನ ಆಧುನಿಕತೆಯಲ್ಲಿ ಹಚ್ಚೆಯು ಪ್ಯಾಶನ್ ಆಗಿ ಪರಿವರ್ತನೆಯಾಗಿದೆ.

ಪರಂಪರಾಗತವಾದ ಈ ಕಲೆ ಇಂದಿಗೂ ನಮ್ಮ ಜನಪದರಲ್ಲಿ ಜೀವಂತವಾಗಿದೆ. ಈ ಕಲೆ ಎಲ್ಲರ ಗಮನವನ್ನು ಸೆಳೆಯುತ್ತದೆ. ಬಹುಶಃ ಆದಿಮಾನವ ತಾನೂ ಇನ್ನಷ್ಟು ಸುಂದರವಾಗಿ ಕಾಣಿಸಿ ಕೊಳ್ಳಬೇಕೆಂಬ ಹಂಬಲದಿಂದ ತನ್ನ ಮೈ ಮೇಲೆ ಸುಂದರವಾದ ಚಿತ್ತಾರಗಳನ್ನು ಬರೆಯಿಸಿ ಕೊಂಡಿರಬೇಕೆಂದು ತೋರುತ್ತದೆ. ಈ ಕಲೆ ತುಂಬಾ ಪ್ರಾಚೀನ ಕಾಲದಿಂದಲೂ ನಮ್ಮ ಜನಪದರಲ್ಲಿ ತುಂಬಾ ಆಕರ್ಷಕ ಹಾಗೂ ವ್ಯಾಪಕವಾಗಿ ಬೆಳೆದುಕೊಂಡು ಬಂದಿದೆ.

ನಿತ್ಯ ಬಳಸುವ ಬಟ್ಟೆಗಳು, ಮೈಮೇಲೆ ಧರಿಸುವ ಉಡುಪುಗಳಾಗಿರಬಹುದು, ಹಾಸುವ, ಹೊದಿಸುವ ಹಾಗೂ ಗೃಹಾಲಂಕಾರಿಕ ಬಟ್ಟೆಗಳಾಗಿರಬಹುದು. ನೇಯ್ಗೆಯಲ್ಲಿ ಹಾಗೂ ಬಣ್ಣದ ಅಚ್ಚುಗಳನ್ನು ಬೆರಗುಗೊಳಿಸುವ ಕಲಾಕೌಶಲ್ಯವನ್ನು ನಾವು ನೋಡುತ್ತೇವೆ. ಈ ಕಲಾತ್ಮಕ ಜಾನಪದ ವಸ್ತುಗಳು ಬೇರೆ ಬೇರೆ ಭಾಗಗಳಲ್ಲಿ ಅವರವರ ಭೌಗೋಳಿಕ ಹಾಗೂ ಸಾಂಸ್ಕೃತಿಕ ಸಾಮಾಜಿಕ ಪರಿಸರಗಳಲ್ಲಿ ಶೈಲಿಗಳ ವೈವಿಧ್ಯತೆಯನ್ನು ಪಡೆದಿದೆ. ಜಾನಪದ ಕಲೆಯು ಕಾಲವನ್ನು ಮೀರಿದ ಸತ್ಯವನ್ನು ಹೊಂದಿರುವುದರಿಂದ ನೂರಾರು, ಸಾವಿರಾರು ವರ್ಷಗಳ ನಂತರವೂ ಇಂದು ಜನ ಆತ್ಮೀಯತೆಯಿಂದ, ಮಾನಸಿಕ ಸಮಾಧಾನದಿಂದ, ನಂಬಿಕೆಯಿಂದ ಅದೇ ಭಾವನಾತ್ಮಕತೆಯಿಂದ ಬೆಳೆಸಿಕೊಂಡು ಬಂದಿದ್ದಾರೆ. ಅದು ಜನಜೀವನದ ಒಂದು ಅಗತ್ಯತೆ, ಅವಶ್ಯಕತೆ ಹಾಗೂ ಮಾನಸಿಕ ಅನಿವಾರ್ಯ ಕೂಡ ಹೌದು. ಮನುಷ್ಯನಲ್ಲಿ ಭಾವನೆ ಇರುವುದು ಸಹಜ. ಆದರೆ ತಮ್ಮ ಆಸೆ-ಆಕಾಂಕ್ಷೆಗಳನ್ನು ಮುಚ್ಚಿಟ್ಟು, ಬಂಧುಭಾಂಧವ್ಯವನ್ನು ಮಕ್ಕಳನ್ನು ಭಾವನಾತ್ಮಕ ಸಂಬಂಧದಿಂದ ಎಲ್ಲ ಸಮಸ್ಯೆಗಳಿಂದಲೂ ನಿಭಾಯಿಸಿಕೊಂಡು, ಸಹಿಸಿಕೊಂಡು ಹೋಗುವುದು ಕಾಣುತ್ತೇವೆ.

ಗಂಡಿನಂತೆ ಹೆಣ್ಣು ತನ್ನ ಆಸೆ-ಆಕಾಂಕ್ಷೆಗಳನ್ನು, ಕಾಮ-ಪ್ರೇಮಗಳನ್ನು ಅಭಿವ್ಯಕ್ತಿಸುವಲ್ಲಿ ಮೌನವಾಗಿದ್ದಾಳೆ. ಆಯ್ಕೆಯಿಲ್ಲದ ವೈವಾಹಿಕ ಬದುಕಿನ ಭಾರವನ್ನು, ಒತ್ತಾಯದ ತಾಯ್ತನ, ಬಂಜೆಯ ಅಪಮಾನ, ವೈಧವ್ಯದ ಅವಮಾನ, ಶೀಲ ಪಾತಿವ್ರತ್ಯದ ಹರಕೆಯನ್ನು, ಪರಾಧೀನತೆಯ ಬೇಗುದಿಯನ್ನು ಮಹಿಳಾ ಜಾನಪದ ಅಧ್ಯಯನದಲ್ಲಿ ನಾವು ಕಾಣಬಹುದು. ಉದಾಹರಣೆಗೆ ಜನಪದ ಮಹಾಕಾವ್ಯಗಳು ಮತ್ತು ಕಥನಗೀತೆಗಳಲ್ಲಿ ಹೆಣ್ಣಿನ ಅಧೀನತೆಯ ಜೀವನವನ್ನು ಕೆಲವೊಮ್ಮೆ ಪ್ರತಿರೋಧದ ನೆಲೆಯನ್ನು ಕಾಣಬಹುದು.

ಭಾರತೀಯ ಮಹಿಳೆಗೆ ಪ್ರತ್ಯೇಕವಾದ ಸಾಮಾಜಿಕ ಭಾಗವಹಿಸುವಿಕೆ ಎಂಬುದಿಲ್ಲ. ಅದೇನಿದ್ದರೂ

ಧಾರ್ಮಿಕ ಪರಿಧಿಯೊಳಗೆ ಕಾಣಿಸಿಕೊಳ್ಳುತ್ತದೆ. ಧರ್ಮದೊಳಗೆ ಮಹಿಳೆಯರ ಭಾಗವಹಿಸುವಿಕೆ ಯಾವ ಸಂದರ್ಭದಲ್ಲಿ ಎಷ್ಟು ಪ್ರಮಾಣದಲ್ಲಿರುತ್ತದೆ ಎಂಬುದು ಪ್ರಮುಖವಾಗಿರುತ್ತದೆ. ಧಾರ್ಮಿಕ ರಂಗದಲ್ಲಿ ಒಂದು ಸೀಮಿತ ಮಿತಿಯವರೆಗೆ ಮಾತ್ರ ಮಹಿಳೆಯ ಪಾತ್ರವಿದ್ದು, ಅದು ಪುರುಷರು ಹಾಕಿದ ಲಕ್ಷ್ಮಣರೇಖೆಯನ್ನು ದಾಟುವುದಿಲ್ಲ. ತಮ್ಮ ಸ್ವಾರ್ಥಕ್ಕೆ ಭದ್ರ ತಳಪಾಯವಾಗುವಂತೆ ಪೂರಕವಾಗುವಂತೆ ಸ್ತ್ರೀಯರನ್ನು ಧಾರ್ಮಿಕ ವ್ಯವಸ್ಥೆಯೊಳಗೆ ಆದರ್ಶಮಯ ಮುದ್ರೆಯಾಗಿ ಚಿತ್ರಿಸಿದ್ದಾರೆ, ಬೆಳೆಸಿಕೊಂಡಿದ್ದಾರೆ. ಪುರುಷಪ್ರಧಾನ ವ್ಯವಸ್ಥೆಯಲ್ಲಿ ಧರ್ಮ ಬಹಿಷ್ಕೃತಳಾಗಿಯೂ ಧಾರ್ಮಿಕ ಅಂಶಗಳನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ಅವಳ ಮೇಲೆ ಇರುವುದು ವಾಸ್ತವ.

ಸಮಕಾಲೀನ ಬದುಕಿನಲ್ಲಿ ಮಹಿಳೆಯ ಪಾತ್ರಗಳು ಹಾಗೂ ಸ್ಥಾನಗಳಲ್ಲಿ ಭಯ ಹುಟ್ಟಿಸುವಂಥ ರೀತಿಯಲ್ಲಿ ಪ್ರಭಾವಿಸುತ್ತಿರುವ ವ್ಯವಸ್ಥೆಗಳಲ್ಲಿ ಧರ್ಮವೂ ಒಂದು. ಸ್ತ್ರೀಯನ್ನು ಎರಡನೆಯ ದರ್ಜೆಯಾಗಿ ಕಾಣುತ್ತಿರುವುದು ಕಂಡುಬರುತ್ತದೆ. ಸ್ತ್ರೀಯನ್ನು ಕುರಿತ ಧರ್ಮದ ಧೋರಣೆಗಳು ದ್ವಿಮುಖ ಮೌಲ್ಯಗಳನ್ನು ಪ್ರತಿಪಾದಿಸುತ್ತಿದೆ. ಒಂದೆಡೆ ಆಕೆಯನ್ನು ದೇವತೆಯೆಂದು ಘೋಷಿಸುವುದು, ಮತ್ತೊಂದೆಡೆ ಆಕೆಯ ಮೇಲಿನ ದೌರ್ಜನ್ಯಕ್ಕೆ ಮಾನ್ಯತೆ ನೀಡುವುದು ಕಂಡುಬರುತ್ತದೆ. ಪುರುಷ ಮನಸ್ಸಿನಲ್ಲಿ ಅದಕ್ಕೆ ರೂಪುರೇಷೆಗಳನ್ನು ನೀಡಿದವರೆಲ್ಲಾ ಪುರುಷರೇ. ಧಾರ್ಮಿಕ ಆಚರಣೆಗಳನ್ನು ನಿರ್ದೇಶಿಸುತ್ತಿದ್ದವರು ಬಹುಮಟ್ಟಿಗೆ ಪುರುಷರೇ. ಆದುದರಿಂದ ಸ್ತ್ರೀಗೆ ಒಂದು ಸ್ವತಂತ್ರವಾದ ಅಸ್ತಿತ್ವವಿದೆ.

ಅಡಿ ಟಿಪ್ಪಣಿಗಳು

೧. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಹಿಳಾ ಪರಕಾಳಜಿಗಳು, (ಸಂ) ಎಂ.ಎಸ್. ಶೇಖರ್, ಪು. ೨೧

೨. ಮಾಹಿತಿದಾರರು: ದೇವೇಂದ್ರಮ್ಮ (೪೮), ಪಾತ್ರೆ ವ್ಯಾಪಾರ, ಕೊಟ್ಟೂರು.

೩. ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಆರ್. ಇಂದಿರಾ, ಪು. ೬೪

೪. ಮಹಿಳೆ-ಸಾಹಿತ್ಯ, ಸಂಸ್ಕೃತಿ, ಶಾಂತ ಇಮ್ರಾಪುರ, ಪು. ೪

೫. ಜಾನಪದ ಅಂತರ್ಯ, ಡಾ. ವೈ.ಸಿ. ಭಾನುಮತಿ, ಪು. ೨

೬. ಅದೇ ಪು. ೩

೭. ಹೆಣ್ಣು ಹೆಂಗಸು, ಎಚ್.ಎಸ್. ಶ್ರೀಮತಿ, ಪು. ೪೭

೮. ಜಾನಪದ ಜಗತ್ತು, ಸಂಪುಟ-೯, ಪು. ೨

೯. ಮಾಹಿತಿದಾರರು: ಮುದ್ದಮ್ಮ (೫೮) ಹಣ್ಣು ವ್ಯಾಪಾರ, ಕೊರವರ ಬೀದಿ, ಬಳ್ಳಾರಿ.

೧೦. ಜಾನಪದ ಅಂತರ್ಯ, ಡಾ. ವೈ.ಸಿ. ಭಾನುಮತಿ, ಪು. ೪೧

೧೧. ಅದೇ ಪು. ೪೪

೧೨. ಅಲೆಮಾರಿಗಳ ಸ್ಥಿತಿಗತಿ, (ಸಂ) ಸ.ಚಿ. ರಮೇಶ್, ಪು. ೧೪೩

೧೩. ನಾರಿ-ದಾರಿ, ದಿಗಂತ, ವಿಜಯದಬ್ಬೆ

೧೪. ಜಾನಪದ ಅಂತರ್ಯ, ಡಾ. ವೈ.ಸಿ. ಭಾನುಮತಿ, ಪು. ೨೨

೧೫. ದಕ್ಷಿಣ ಕರ್ನಾಟಕದ ಕೊರಮರು, ಡಾ. ಪಿ.ಬಿ. ರಾಮಯ್ಯ, ಪು. ೭೪

೧೬. ಅದೇ ಪು. ೭೫

೧೭. ಸ್ತ್ರೀ ಕಥನ, ಡಾ. ಶೈಲಜಾ ಹಿರೇಮಠ, ಪು. ೨೫

೧೮. ಮಾಹಿತಿದಾರರು: ಬಳ್ಳಾರಿ ಹೇಮಗಿರಿಯಮ್ಮ (೫೪), ಸರ್ಕಾರಿ ಕೆಲಸ, (ಎ.ಎಸ್.ಐ) ನೀಲಗುಂದ ಹರಪನಹಳ್ಳಿ ತಾ.

೧೯. ಜಾನಪದ ಕಸೂತಿ, ಮಧುವೆಂಕಾರೆಡ್ಡಿ, ಪು. ೩

ಅಧ್ಯಾಯ - ೩

ಕೊರವ ಸಮುದಾಯದ ಸಂಪ್ರದಾಯಗಳು

೩.೧ ಜೀವನಾವರ್ತನ ಆಚರಣೆಗಳು

೩.೨ ವಾರ್ಷಿಕವರ್ತನ ಆಚರಣೆಗಳು

ಅಧ್ಯಾಯ ಮೂರು

ಕೊರವ ಸಮುದಾಯದ ಸಂಪ್ರದಾಯಗಳು

ಜೀವನಾವರ್ತನ ಆಚರಣೆಗಳು

ಸಮಾಜವನ್ನು ಒಂದುಗೂಡಿಸುವ ಶಕ್ತಿಯಾಗಿ ಸಂಪ್ರದಾಯ ಮತ್ತು ಆಚರಣೆಗಳು ಮಾಡುತ್ತವೆ. ಇವು ಮನುಷ್ಯನ ಜೀವನದ ಅವಿಭಾಜ್ಯ ಅಂಗಗಳಾಗಿ ಅವರ ಬದುಕನ್ನು ರೂಪಿಸಿ ಸಂಸ್ಕೃತಿಯನ್ನು ಪೋಷಣೆ ಮಾಡುತ್ತವೆ. ಅಲ್ಲದೆ ನಾಗರಿಕತೆಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಮನುಕುಲದ ಶ್ರೇಯಸ್ಸಿಗಾಗಿ ಅತ್ಯವಶ್ಯವೆಂದು ಎಣಿಕೆಗೊಂಡಿರುವ ನಂಬಿಕೆಗಳೇ ಸಂಪ್ರದಾಯಗಳಾಗಿ ವಿಧಿನಿಷೇಧಗಳಾಗಿ, ಉಪಾಸನೆಗಳಾಗಿ ಸಾಕಾರತೆ ಪಡೆಯುತ್ತವೆ. ಇಂತಹ ಆಚರಣೆಗಳು ಇರುವುದ ರಿಂದಲೇ ಸಂಪ್ರದಾಯಗಳು ಜೀವಂತವಾಗಿವೆ. ಭೌಗೋಳಿಕ, ಜನಾಂಗಿಕ ಮತ್ತು ಸಾಂಸ್ಕೃತಿಕ ವಾತಾವರಣದ ಹಿನ್ನೆಲೆಯಲ್ಲಿ ಆಯಾ ಜನರ ಮನೋಧರ್ಮಕ್ಕನುಗುಣವಾಗಿ ಸಂಪ್ರದಾಯಗಳು ಹುಟ್ಟಿಕೊಂಡು ಆಚರಣೆಗಳಾಗಿ ಉಳಿದಿವೆ. ಮನುಷ್ಯ ಬೌದ್ಧಿಕ, ಮಾನಸಿಕ ಹಾಗೂ ದೈಹಿಕ ಗುಣ ಧರ್ಮಗಳು ಸಾರ್ವತ್ರಿಕವಾಗಿ ಏಕರೂಪವನ್ನು ಪಡೆದುಕೊಂಡಾಗ ಅವು ಒಂದೇ ವಿಧದ ಸಂಪ್ರದಾಯ ಗಳಾಗಿ ಮಾರ್ಪಡುತ್ತವೆ. ಇವು ಬೇರೆ ಬೇರೆ ಪ್ರದೇಶಗಳಲ್ಲಿ ಅದರ ಛಾಯೆಯಂತೆ ಕಂಡುಬರುವುದುಂಟು. ಈ ಕಾರಣಗಳಿಂದಲೇ ಬೇರೆ ಬೇರೆ ಪ್ರದೇಶದಲ್ಲಿ ನಡೆಯುವ ಸಾಂಪ್ರದಾಯಿಕ ವೃತ್ತಿ, ಹುಟ್ಟು, ಮದುವೆ, ಮರಣಗಳಂತಹ ಆಚರಣೆಗಳಲ್ಲಿ ಸಾದೃಶ್ಯ ಮತ್ತು ವೈದೃಶ್ಯಗಳಿವೆ. ದಿನೇ ದಿನೇ ಅವುಗಳ ಆಚರಣೆಯಲ್ಲಿ ವ್ಯತ್ಯಾಸವಾದರೂ ಅವು ನಶಿಸಿ ಹೋಗುವುದಿಲ್ಲ. ಕೆಲವು ಆಚರಣೆಗಳು ಆಧುನಿಕತೆಯ ಹೊಡೆತವನ್ನು ಲೆಕ್ಕಿಸದೆ ಇನ್ನು ಜೀವಂತವಾಗಿ ನಡೆಯುತ್ತಿವೆ. ಇದು ಕೊರವರ ಸಮುದಾಯದಲ್ಲಿಯೂ ಉಳಿದುಕೊಂಡು ಬಂದಿವೆ. ಆಚರಣೆಗಳು ಅಲ್ಪ ಸ್ವಲ್ಪ ವ್ಯತ್ಯಾಸ ಹೊಂದುತ್ತಾ ಇಂದಿಗೂ ಆಚರಣೆಯಲ್ಲಿದೆ.

ಜನನ

ಮನುಷ್ಯನ ಹುಟ್ಟಿನಿಂದ ಮರಣ ಹೊಂದುವವರೆಗೆ ಒಂದಲ್ಲ ಒಂದು ಆಚರಣೆಗಳು ನಡೆಯುತ್ತಿರುತ್ತವೆ. ಹೀಗೆ ನಡೆಯುವಾಗ ಅವುಗಳಲ್ಲಿ ವೈವಿಧ್ಯತೆ ಕಂಡುಬರುತ್ತದೆ. ಅವು ಒಂದು ಪ್ರದೇಶದ ವಿಭಿನ್ನ ಜನವರ್ಗಗಳು ರೂಢಿಸಿಕೊಂಡಿರುವ ಆಚರಣೆಗಳು ಸಹಜವಾಗಿಯೇ ಬೇರೆಯಾಗಿರುತ್ತದೆ. ಕೆಲವು ಸಲ ಅವು ಒಂದು ಇನ್ನೊಂದರ ಮೇಲೆ ಪರೋಕ್ಷವಾಗಿ ಪ್ರಭಾವ ಬೀರುತ್ತವೆ. ಇಲ್ಲವೆ ಸ್ವಲ್ಪ ವ್ಯತ್ಯಾಸವಾದರೂ ಆಗಿ ತನ್ನ ನಿಜ ಸ್ವರೂಪವನ್ನು ಉಳಿಸಿಕೊಂಡು ಬಂದಿರುತ್ತಾರೆ. ಅದರಲ್ಲಿ ಜನನವು ಒಂದು ಆಚರಣೆಯಾಗಿದೆ.

ಮಾನವ ತನ್ನ ಜೀವನದಲ್ಲಿ ಕಾಣುವ ಎರಡು ಮಹತ್ವವಾದ ಘಟ್ಟಗಳು ಒಂದು ಜನನ ಇನ್ನೊಂದು ಮರಣ. ಹುಟ್ಟು ಮತ್ತು ಸಾವು ಈ ಭೌತಿಕ ಜಗತ್ತಿನ ಎಲ್ಲ ಜೀವಿಗಳಿಗೂ ನೈಸರ್ಗಿಕವಾದ ಅನಿವಾರ್ಯತೆಗಳಾಗಿವೆ. ಹೀಗಾಗಿ ಪ್ರಪಂಚದ ಎಲ್ಲ ಜಾತಿ ಜನಾಂಗಗಳಲ್ಲಿ ಹುಟ್ಟು ಸಾವಿನ ಕುರಿತಾದ ನಂಬಿಕೆಗಳು, ಆಚರಣೆಗಳು, ಪರಂಪರಾನುಗತವಾದ ವಿಚಾರಗಳು, ವಿಧಿವಿಧಾನಗಳು ಬೆಳೆದು ಬಂದಿವೆ. ಹಾಗೆಯೇ ಇವು ಜನಾಂಗದಿಂದ ಜನಾಂಗಕ್ಕೆ ಸಾಕಷ್ಟು ಭಿನ್ನವಾಗುತ್ತದೆ. ಹಾಗೆಯೇ ಈ ಜನನ ಸಂಸ್ಕಾರವೂ ಬಾಲಕರಿಲ್ಲದ ಬಾಲದ್ಯಾತರ ಜನ್ಮ ಎಂಬ ಜನಪದ ನುಡಿಯು ಮಕ್ಕಳಿಲ್ಲದವರ ಬಾಳು ಅದೆಂತಹ ಬಾಳು ಎಂಬುದನ್ನು ಸೂಚಿಸಿದರೆ 'ನ ಪುತ್ರಸ್ಯ ಗತಿರ್ನಾಸ್ತಿ' ಎಂಬ ಸಂಸ್ಕೃತ ಉಕ್ತಿಯು ಗಂಡು ಮಕ್ಕಳಿಲ್ಲದಿದ್ದರೆ ಮುಕ್ತಿ ಸಿಗಲಾರದು ಎಂಬುದನ್ನು ತಿಳಿಸುತ್ತದೆ. ಪ್ರತಿಯೊಬ್ಬರಿಗೂ ಪುತ್ರನೆ ಮುಕ್ತಿಯ ಮಾರ್ಗ ಎಂದು ತಿಳಿದುಕೊಂಡಿದ್ದಾರೆ. ಕೊರವರು ನಾನಾ ಕಡೆಗಳಲ್ಲಿ ಹಂಚಿಹೋಗಿರುವುದರಿಂದ ಅವರು ಪ್ರದೇಶಗಳ ಪ್ರಭಾವಕ್ಕನುಸಾರವಾಗಿ ಸಂಪ್ರದಾಯಗಳನ್ನು ಮೈಗೂಡಿಸಿಕೊಂಡಿದ್ದಾರೆ.

ಕೊರವರು ಹುಟ್ಟಿದ ಮಗು ಹೆಣ್ಣಾಗಲಿ ಅಥವಾ ಗಂಡಾಗಲಿ ಸಂತೋಷದಿಂದಲೇ ಸ್ವೀಕರಿಸುತ್ತಾರೆ. ಆದರೆ ಗಂಡು ಮಗುವಿನ ಆಸೆ ಮಾತ್ರ ಇದ್ದೇ ಇರುತ್ತದೆ. ಇವರಲ್ಲಿ ಕೆಲವರಿಗೆ ಒಂದು ಡಜನ್ ಮಕ್ಕಳಿರುವುದು ಕಂಡುಬರುತ್ತದೆ. ಅದರಲ್ಲಿ ಹೆಣ್ಣು ಮಕ್ಕಳೇ ಅಧಿಕವಾಗಿರುತ್ತಾರೆ. ಇಂದಿನ ಆಧುನಿಕ ಪ್ರಭಾವದಿಂದ ನಾಲ್ಕು ಐದು ಮಕ್ಕಳಿಗೆ ಸಾಕು ಮಾಡುತ್ತಿದ್ದರೆ, ಕೆಲವರು ಅನಕ್ಷರಸ್ಥರೇ ಅಧಿಕವಾಗಿ ಮಕ್ಕಳನ್ನು ಪಡೆಯುತ್ತಾರೆ. ಇಂದಿಗೂ ಸಹ ಒಂದು ಡಜನ್ ಮಕ್ಕಳನ್ನು ಪಡೆದವರನ್ನು ನೋಡಬಹುದು. ಜೀವನೋಪಾಯದ ಬಗೆಗೆ ತಿಳುವಳಿಕೆ ಇಲ್ಲದವರು ಮಕ್ಕಳು ಕೊಟ್ಟ ದೇವರು ಹುಲ್ಲು ಮೇಯಿಸುತ್ತಾನೆಯೇ ಎಂಬ ಮಾತು ಬೇರೆ. ಹೆರಿಗೆಯಾದವರ ಮನೆಗಳಿಗೆ ಬೇರೆಯವರಿಗೆ ಪ್ರವೇಶವಿರುವುದಿಲ್ಲ. ಕೆಲವು ದಿನಗಳ ನಂತರವೇ ನೋಡಬೇಕಾಗುತ್ತದೆ. ಏಕೆಂದರೆ ತಾಯಿ ಮಗುವಿಗೆ ಹಸಿ ಮೈಯಲ್ಲಿ ಯಾವುದೇ ದುಷ್ಟ ಶಕ್ತಿಗಳು ಮನೆ ಒಳಗೆ ಬರಬಾರದೆಂದು ಈ ರೀತಿ ಮಾಡಲಾಗುತ್ತದೆ. ಸೂಕ್ಷ್ಮಕಣಗಳು ಒಳಪ್ರವೇಶಿಸುವುದರಿಂದ ಮಗು ಮತ್ತು ತಾಯಿಯ ರಕ್ಷಣೆಯ ಜವಾಬ್ದಾರಿಯು ಮುಖ್ಯವಾಗಿರುತ್ತದೆ. ಇನ್ನೊಂದು ಸೂತಕದ ಮನೆಯೆಂದು ಗುರುತಿಸುವುದು ಕಂಡುಬರುತ್ತದೆ.

ಕೆಲವರು ಮನೆಯಲ್ಲಿ ಅಥವಾ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳುತ್ತಾರೆ. ಹೆಚ್ಚಾಗಿ ಮನೆಯಲ್ಲಿಯೇ ಹೆರಿಗೆ ನಡೆಯುವುದು ಕಂಡುಬರುತ್ತದೆ. ಸೂಲಗಿತ್ತಿಯನ್ನು ಕರೆದುಕೊಂಡು ಬಂದು ಗರ್ಭಿಣಿ ಸ್ತ್ರೀಯರಿಗೆ ನೋವು ಪ್ರಾರಂಭವಾದಾಗ ಹೆರಿಗೆ ಸುಗಮವಾಗಿ ನಡೆಯಲಿ ಎಂದು ಕೊತ್ತಂಬರಿ ಕಾಳು, ಕರಿಬೇವು ಹಾಕಿ ಬಿಸಿ ನೀರಿನಲ್ಲಿ ಒಂದು ಲೋಟದಷ್ಟು ಕುದಿಸಿ ಗರ್ಭಿಣಿಗೆ ಕೊಡಲಾಗುತ್ತದೆ. ಆದ್ದರಿಂದ ಹೆರಿಗೆ ಸುಲಭವಾಗುತ್ತದೆ ಎಂಬ ನಂಬಿಕೆ ಇದೆ. ಸೂಲಗಿತ್ತಿ ಬಂದು ಸೊಂಟಕ್ಕೆ ಬಿಸಿ ನೀರು ಸ್ನಾನ ಮಾಡಿಸಿ ಬಟ್ಟೆ ಬದಲಾಯಿಸಿ ಕಾಟನ್‌ಬಟ್ಟೆ ತೊಡಿಸುತ್ತಾರೆ. ಕೆಲವರು ಆಸ್ಪತ್ರೆಯ ಸೌಲಭ್ಯವನ್ನು ಪಡೆಯುತ್ತಾರೆ. ಹೆರಿಗೆಯಾದ ಮೇಲೆ ತಾಯಿ ಮಗುವಿಗೆ ಸ್ನಾನಮಾಡಿಸಿ, ತಾಯಿಯ ಪಕ್ಕದಲ್ಲಿ ಹಾಲುಣಿಸಲು ಮಗುವನ್ನು ಕೊಡುತ್ತಾರೆ. ಕೆಲವರು ಗಂಟೆಗಳವರೆಗೆ ಸಕ್ಕರೆ ನೀರನ್ನು ಹನಿ ಹನಿಯಾಗಿ ಹಾಕಲಾಗುತ್ತದೆ. ಹಿಂದಿನ ಕಾಲದಲ್ಲಿ ೪೦-೫೦ವರ್ಷಗಳ ಹಿಂದೆ ಗರ್ಭಿಣಿಯರು ಮನೆಯಲ್ಲಿ, ಹೊಲಗಳಲ್ಲಿ ಒಬ್ಬರೆ ಹೆರಿಗೆ ಮಾಡಿಕೊಂಡು ಇರುತ್ತಿದ್ದರೆಂದು ಮತ್ತು ಆ ದಿನಗಳಲ್ಲಿಯೇ ಮನೆಕೆಲಸ ಮಾಡಿಕೊಂಡು, ಮಗುವನ್ನು ನೋಡಿಕೊಳ್ಳುತ್ತಿದ್ದರೆಂದು ಕೆಲವು ಮಹಿಳೆಯರು ತಿಳಿಸುತ್ತಾರೆ. ಆ ದಿನಗಳಲ್ಲಿ ತಾಯಿ, ಮಗಳು, ಸೊಸೆಯರು ಒಂದರ ನಂತರ ಒಂದರಂತೆ ಹೆರಿಗೆಯಾಗಿ ಬಾಣಂತನಕ್ಕೆ ತವರಿಗೆ ಬರುತ್ತಿದ್ದರು.

"ಹೆರಿಗೆಯಾದ ಮಹಿಳೆಗೆ ಮೂರು ದಿನಗಳವರೆಗೆ 'ಗಂಜಿ' (ಉಪ್ಪಿಟ್ಟಿನ ರವೆ, ಬೆಳ್ಳುಳ್ಳಿ, ಉಪ್ಪು, ತುಪ್ಪ ಹಾಕಿ ಮಾಡಿದ ಆಹಾರ) ಮಾಡಿಕೊಡಲಾಗುತ್ತದೆ. ನಂತರ ಹೆರಿಗೆ ನಂತರ 'ಕರುಳು ಬಳ್ಳಿ'ಯನ್ನು (ಹೊಕ್ಕಳ ಬಳ್ಳಿಯನ್ನು ಹಿಂದೆ ಸೂಲಗಿತ್ತಿಯರು ಕುಡುಗೋಲಿನಿಂದ ಕತ್ತರಿಸುತ್ತಿದ್ದರು. ಈಗ ಅವರಿಗೆ ಆರೋಗ್ಯ ಇಲಾಖೆಯಿಂದ ತರಬೇತಿ ನೀಡಿರುವುದರಿಂದ ಈಗ ಹೊಸ ಬ್ಲೇಡಿನಿಂದ ಹೊಕ್ಕಳ ಬಳ್ಳಿಯನ್ನು ಕತ್ತರಿಸುತ್ತಾರೆ.) ಕತ್ತರಿಸಿ ಮಾಸವನ್ನು ಮನೆಯ ಮುಂದೆ ಹೊಸ ಗಡಿಗೆಯಲ್ಲಿ ಎಡಗಡೆ ಇಡಲಾಗುತ್ತದೆ. ಅದಕ್ಕೆ ಮೂರನೇ ದಿನ ತಾಯಿ ಮಗು ಮತ್ತು ಮೂವರು ಬಾಲಕರಿಗೆ ಕಂಕಣ ಕಟ್ಟಿ ಮಾಸ ಇಟ್ಟ ಜಾಗದವರೆಗೆ ಹಾಲು ತುಪ್ಪ ಹಾಕುತ್ತಾ, ತುಪ್ಪ ನೀಡುತ್ತೇನೆ, ಹಾಲು ಕೊಡು ಎಂದು ಕೇಳುತ್ತಾ ಹೋಗುತ್ತಾರೆ. ಪೂಜೆ ಮಾಡಿ ಕಾಯಿ ಒಡೆದು ಒಂದು ಕೋಳಿ ಕೊಯ್ದು, ಅದರ ಆಹಾರವನ್ನು ಅವಳಿಗೆ ನೀಡಲಾಗುತ್ತದೆ. ಹೆರಿಗೆ ಮಾಡಿಸಿದವರಿಗೆ ಬಟ್ಟೆ ಕೊಟ್ಟು ಇಲ್ಲವೇ ಊಟ ಮಾಡಿಸಿ ಕಳಿಸಲಾಗುತ್ತದೆ. ಹಾಲು ಕೊಡು ತಾಯಿ ಎಂದು ಬೇಡಿಕೊಳ್ಳಲಾಗುತ್ತದೆ. ಹದಿನಾರು ದಿನಗಳಲ್ಲಿ ಅಥವಾ ಒಂಬತ್ತು ದಿನಗಳಲ್ಲಿ ಗಂಗೆ ಪೂಜೆ ಮಾಡಲಾಗುತ್ತದೆ. ಹೆರಿಗೆಯಾದಾಗ ಮಹಿಳೆಗೆ ಉಷ್ಣವಾದ ಪದಾರ್ಥಗಳನ್ನು ಕೊಡುವುದರಿಂದ ಅವಳಿಗೆ ಶೀತವಾಗದಂತೆ ನೋಡಿಕೊಳ್ಳಲಾಗುತ್ತದೆ.

ಉದಾ: ಉಪ್ಪಿಟ್ಟು ರವೆ, ಬೆಳ್ಳುಳ್ಳಿ, ಉಪ್ಪು ತುಪ್ಪ ಹಾಕಿ ಮಾಡಿದ ಪದಾರ್ಥವಾಗಿದೆ.

ಪ್ರಸವಕ್ಕೆ ಮೊದಲು ಗರ್ಭಿಣಿ ಹೆಂಗಸು ಏನಾದರೊಂದು ಆಸೆಯನ್ನು ಇಟ್ಟುಕೊಂಡಿದ್ದರೆ, ಪ್ರಸವಿಸುವಾಗ ತುಂಬಾ ಕಷ್ಟವಾಗುತ್ತದೆ ಎಂದು ಭಾವಿಸುತ್ತಾರೆ. ಆಗ ಏನನ್ನಾದರೂ ತಿನ್ನಿಸುತ್ತಾರೆ. ಹಿಂದಿನ ಕಾಲದಲ್ಲಿ ಸೂಲಗಿತ್ತಿಯು ಪ್ರಸವ ವೇದನೆಯಲ್ಲಿ ನಿನ್ನ ಗಂಡನ ಹೆಸರನ್ನು ಹೇಳಮ್ಮ ಎಂದು ಹೇಳುತ್ತ ಬಾಯಿಗೆ ಮಣ್ಣಿನ ಉಂಡೆಯನ್ನು ತಟ್ಟನೆ ಹಾಕಿ ತಿನ್ನುವಂತೆ ಹೇಳಿ ಹಾಸ್ಯಗೊಳಿಸಿ

ಪ್ರಸವ ವೇದನೆಯನ್ನು ತಗ್ಗಿಸುತ್ತಾರೆ. ೧೩ ದಿನಗಳವರೆಗೆ ಸೂತಕವನ್ನು ತೆಗೆಯಲಾಗುತ್ತದೆ. ಮಗುವಿಗೆ ಸಾಂಬ್ರಾಣಿ ಹೊಗೆಯನ್ನು ಹಾಕಲಾಗುತ್ತದೆ. ಮನೆಯನ್ನು ಶುದ್ಧ ಮಾಡಿದ ಮೇಲೆ ಆಕಳ ಗಂಜಲದಿಂದ ಮನೆಯಗೆಲ್ಲ ಸಿಂಪಡಿಸುತ್ತಾರೆ. ಬ್ರಾಹ್ಮಣರಲ್ಲಿ ಮಗು ಹುಟ್ಟಿದ ವೇಳೆಯನ್ನು ತಿಳಿಸಿ ಜಾತಕವನ್ನು ಕೇಳಿ ತಿಳಿದುಕೊಂಡು ಪರಿಹಾರವನ್ನು ತಿಳಿದುಕೊಳ್ಳಲಾಗುತ್ತದೆ. ಬ್ರಾಹ್ಮಣರಿಗೆ ದಾನವನ್ನು ಕೊಡಲಾಗುತ್ತದೆ. ಹೆಸರಿಡಲು ಹೆಸರನ್ನು ಕೇಳಿಸಿಕೊಂಡು ಬರುತ್ತಾರೆ. ಅಲ್ಲಿಯವರೆಗೆ ಅಡ್ಡ ಹೆಸರುಗಳಿಂದ ಕರೆಯಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಮನೆದೇವರ ಹೆಸರಿನಲ್ಲಿ ಮಕ್ಕಳನ್ನು ಕರೆಯಲಾಗುತ್ತದೆ.

ಹೆರಿಗೆಯ ಬಟ್ಟೆಯನ್ನು ಅಗಸಗಿತ್ತಿ ಮಡಿ ಮಾಡಿಕೊಡುತ್ತಾಳೆ. ಅಗಸಗಿತ್ತಿಯು ಗಂಗೆ ಪೂಜೆಗಾಗಿ ಪೂಜಾ ವಸ್ತುಗಳನ್ನು ಪಡೆದುಕೊಳ್ಳುವಳು. ಇಂದಿನ ದಿನಗಳಲ್ಲಿ ಹಣವನ್ನು ಕೊಡಲಾಗುತ್ತದೆ. ಪೂಜಾ ಸಾಮಾನು ಕೊಡಲಾಗುತ್ತದೆ. ಅಕ್ಕಿ, ಬೆಲ್ಲ, ಬೇಳೆ, ಕೊಬ್ಬರಿ, ಉಡಕ್ಕಿ ಸಾಮಾನು ಕೊಟ್ಟು ಹಣವನ್ನು ನೀಡಲಾಗುತ್ತದೆ. ಮಗು ಹುಟ್ಟಿದ ಮೇಲೆ 'ಬಿಸಿ' ಮಾಡಲಾಗುತ್ತದೆ. (ಮಗು ಹುಟ್ಟಿದ ತಕ್ಷಣ ಮಗುವಿಗೆ ಬೆಚ್ಚಗೆ ಮಾಡುವುದು ಕಂಡುಬರುತ್ತದೆ. ಇದು ಇಂದು ಕಡಿಮೆಯಾಗುತ್ತಿದೆ. ಏಕೆಂದರೆ ಆಸ್ಪತ್ರೆಯಲ್ಲಿ ಹೆರಿಗೆಯಾದವರು ಮಾಡುವುದಿಲ್ಲ) ಮಗು ಎಚ್ಚರವಾಗುವಂತೆ, ಅಳುವ ಧ್ವನಿಯು ಕೇಳಿಸುವಂತೆ ಮಾಡಲಾಗುತ್ತದೆ. ದುಷ್ಟಶಕ್ತಿಗಳು ಬರದಂತೆ, ಬೆದರುವುದು ಆಗದಂತೆ ಈ ರೀತಿ ಮಾಡಲಾಗುತ್ತದೆ. ಮಗು ಹುಟ್ಟಿದ ೧೩ ದಿನಕ್ಕೆ ಹೆಸರಿಡುವ ಪದ್ಧತಿಯು ರೂಢಿಯಲ್ಲಿದೆ. ಕೆಲವರು ೩ ಅಥವಾ ೫ ತಿಂಗಳುಗಳಲ್ಲಿ ಇಡಲಾಗುತ್ತದೆ. ತಾಯಿ ಮಗುವಿನ ಬಗ್ಗೆ ೩ ತಿಂಗಳವರೆಗೆ ತುಂಬಾ ಕಾಳಜಿ ವಹಿಸುತ್ತಾರೆ. ಆ ದಿನ ನೆಂಟರಿಷ್ಟರನ್ನೆಲ್ಲ ಸೇರಿಸಿ ಅಂದು ಎಲ್ಲರಿಗೂ ಸಡಗರದೊಂದಿಗೆ ಹಬ್ಬದೂಟವನ್ನು ಹಾಕುತ್ತಾರೆ.

ಹೆರಿಗೆಯಾದ ಮಹಿಳೆಗೆ ತವರು ಮನೆಯವರು 'ಕಾರದಚ್ಚು'ನ್ನು (ಕೊಬ್ಬರಿ, ಬೆಲ್ಲ, ಉತ್ತತ್ತಿ, ಕಾರದಚ್ಚು ಅಂಗಡಿಯಿಂದ ತಂದು ಇದರಲ್ಲಿ ಕಲಸಿ ಬಾಣಂತಿಗೆ ಕೊಡಲಾಗುತ್ತದೆ. ಮೈಯಲ್ಲಿ ರಕ್ತ ಉತ್ಪತ್ತಿಯಾಗಲಿ ಎಂದು) ತಂದು ಕೊಡುವರು. ಅವಳಿಗೆ ಕಾವು ಕೊಡಲಾಗುತ್ತದೆ. ಹುಟ್ಟಿದ ಮಗುವಿಗೆ ರೋಗ ರುಜಿನಗಳನ್ನು ತಡೆಯಲು ಮೊನ್ನೆ ಮೊನ್ನೆಯವರೆಗೆ ಕತ್ತೆ ಹಾಲನ್ನು ಹಾಕುತ್ತಿದ್ದರು ಎಂದು ತಿಳಿದು ಬರುತ್ತದೆ. ಸೂಜಿಯಿಂದ ಮಗುವಿಗೆ ನೆತ್ತಿ, ಪಕ್ಕೆಗಳು, ಹೊಟ್ಟೆಯ ಮೇಲೆ ಎದೆಯ ಮೇಲೆ ಕಾಲುಗಳ ಹೆಬ್ಬೆರಳುಗಳ ತುದಿಗಳಿಗೆ ಸುಟಿಕೆ ಹಾಕುತ್ತಿದ್ದರೂ, ಇಂದಿಗೂ ಹಾಕುವುದು ಕಂಡುಬರುತ್ತದೆ. ಕೆಲವು ಸಂಪ್ರದಾಯಸ್ಥರು ಇಂದಿಗೂ ಮಕ್ಕಳಿಗೆ ಕತ್ತೆ ಹಾಲು ಕುಡಿಸುತ್ತಾರೆ.

ನಾಮಕರಣ

ಈ ಆಚರಣೆಯು ಎಲ್ಲಾ ಜನಸಮುದಾಯದಲ್ಲಿ ಕಂಡುಬರುತ್ತದೆ. ಭಿನ್ನತೆ ಮಾತ್ರ ಕಂಡುಬರುತ್ತದೆ. ಸಾಮಾನ್ಯವಾಗಿ ತೊಟ್ಟಿಲಗೆ ಅಲಂಕಾರ ಮಾಡಿರುತ್ತಾರೆ. ಕೆಲವರು ೩ ತಿಂಗಳು ಅಥವಾ ೫ ತಿಂಗಳಿಗೆ ನಾಮಕರಣ ಮಾಡಲಾಗುತ್ತದೆ. ಇಲ್ಲಿ ಹೆಣ್ಣಿನ ತಮ್ಮಂದಿರಿಗೆ ಮುಖ್ಯ ಪಾತ್ರವಿರುತ್ತದೆ.

ದೇವಾಲಯಗಳಲ್ಲಿ ಅಥವಾ ಮನೆಯಲ್ಲಿ ನಾಮಕರಣ ಮಾಡಲಾಗುತ್ತದೆ. ತವರು ಮನೆಯವರು ತೊಟ್ಟಿಲು, ಹೊಸಬಟ್ಟೆ (ತಾಯಿ, ಮಗುವಿಗೆ) ಬೆಳ್ಳಿ ಉಡದಾರ, ಮುರುವು ತರಬೇಕಾಗುತ್ತದೆ. ಬಂಧು-ಮಿತ್ರರೆಲ್ಲರೂ ಈ ಸಡಗರದಲ್ಲಿ ಭಾಗವಹಿಸುತ್ತಾರೆ. ಹೊಸತೊಟ್ಟಿಲಿಗೆ ಹೂವು ಸುತ್ತಲು ಹಾಕಿ, ತೊಟ್ಟಿಲ ಮೂಲೆಗಳಲ್ಲಿ ಮಂಡಾಳ ಮೂಟೆಯನ್ನು ಹೊಸ ಕರವಸ್ತ್ರದಲ್ಲಿ ಕಟ್ಟಿ ಇಡುತ್ತಾರೆ. ಕೊಬ್ಬರಿ ಬಟ್ಟಲು ಇಟ್ಟಿರುತ್ತಾರೆ. ಜೋಯಿಸರಲ್ಲಿ ಹೋಗಿ ಹುಟ್ಟಿದ ದಿನ, ಸಮಯ ಹೇಳ ಒಳ್ಳೆಯದೂ ಕೆಟ್ಟದ್ದು ತಿಳಿದುಕೊಂಡು ದೋಷವಿದ್ದರೆ ಪರಿಹಾರ ತಿಳಿದುಕೊಂಡು ಜನ್ಮದ ಪ್ರಕಾರ ಯಾವ ಹೆಸರು ಬರುತ್ತದೆ ಎಂದು ಕೇಳಿಸಿ ಹೆಸರನ್ನು ಇಡಲಾಗುತ್ತದೆ. ಸೋದರ ಮಾವ ಬಂದು ಮಗುವಿನ ಕಿವಿಯಲ್ಲಿ ಒಂದೊಂದು ಹೆಸರು ಹೇಳ ಕೊಬ್ಬರಿ ಬಟ್ಟಲನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ. ಕೊಬ್ಬರಿ ಬಟ್ಟಲನ್ನು ತೆಗೆದುಕೊಂಡು ಹೋಗುವಾಗ ನೆರೆದವರು ಅವಳ ಬೆನ್ನಿಗೆ ಹೊಡೆಯುತ್ತಾರೆ. ೫ ಬಾರಿ ಹೆಸರೇಳ ನಂತರ ಅವಳನ್ನು ಒಂದು ಹೆಸರಿನಿಂದ ಕರೆಯುತ್ತಾರೆ.

ಈ ಸಂದರ್ಭದಲ್ಲಿ ತಂದೆ-ತಾಯಿಯನ್ನು ಕೂರಿಸಿ ಆರತಿ ಮಾಡಿ ಬಟ್ಟೆ ಮಾಡಲಾಗುತ್ತದೆ. ನಂತರ ಬಂದವರು ಮಗುವನ್ನು ನೋಡಿ ತಂದ ಉಡುಗೊರೆಯನ್ನು ಕೊಟ್ಟು ಊಟ ಮಾಡಿಕೊಂಡು ಹೋಗುತ್ತಾರೆ. ತಮ್ಮ ಇಷ್ಟ ದೇವರಿಗೆ ಪೂಜೆ ಮಾಡಿಸಿಕೊಂಡು, ಹರಕೆ ಇದ್ದರೆ ಪೂರೈಸಿಕೊಂಡು ಬರುತ್ತಾರೆ. ದೋಷವಿದ್ದರೆ ದಾನವನ್ನು ಬ್ರಾಹ್ಮಣರಿಗೆ ಮಗುವಿನ ಅಥವಾ ತಂದೆ ತಾಯಿಯ ಕೈಯಿಂದ ಕೊಡಲಾಗುತ್ತದೆ. ದೋಷವೆಲ್ಲ ಪರಿಹಾರವಾಗುತ್ತದೆ ಎಂಬ ನಂಬಿಕೆಯಿದೆ. ಹೆಚ್ಚಾಗಿ ಈ ಸಮುದಾಯದಲ್ಲಿ ಕುಲದೇವತೆಯ ಹೆಸರನ್ನು ಇಡುವುದು ಕಂಡುಬರುತ್ತದೆ. ಪುರೋಹಿತರಿಂದ ಶಾಸ್ತ್ರವನ್ನು ಕೇಳ ಹೆಸರು ಇಡುತ್ತಾರೆ. ಬೇರೆಯವರಿಗೆ ಊಟ ಹಾಕುವುದರಿಂದ ಸೂತಕ ಹೋಗುತ್ತದೆಂದು ನಂಬಿರುತ್ತಾರೆ. ಸೂತಕವು ಹೋದ ಮೇಲೆ ಬಾಣಂತಿಯನ್ನು ೩ರಿಂದ ೫ ತಿಂಗಳವರೆಗೆ ಆರೈಕೆ ಮಾಡಲಾಗುತ್ತದೆ. ಬಾಣಂತಿಯು ಮಸಾಲೆ ಪದಾರ್ಥವನ್ನು ತಿನ್ನುವಂತಿಲ್ಲ. ಕೆಲವು ಪಥ್ಯಗಳಲ್ಲಿ ಇರಬೇಕಾಗುತ್ತದೆ. ಮೆಣಸಿನ ಸಾರು, ಹಾಲು, ತುಪ್ಪ, ಕಾರದಚ್ಚು ಮೊದಲಾದ ಆಹಾರವನ್ನು ಸೇವಿಸುತ್ತಾಳೆ. ಗಂಗೆ ಪೂಜೆ ಮಾಡಲಾಗುತ್ತದೆ. ತಾಯಿಯನ್ನು ಬಾವಿಗೆ ಅಥವಾ ಬೋರ್‌ವೆಲ್‌ನಲ್ಲಿ ಹೋಗಿ ಮಣ್ಣಿನ ಉಂಡಿ ಇಟ್ಟು ಅನ್ನ, ಹಾಲು, ತುಪ್ಪ, ಹಾಕಿ ಹಾಲು ಕೊಡು ತಾಯಿ ಎಂದು ಪ್ರಾರ್ಥಿಸಿಕೊಳ್ಳುತ್ತಾರೆ. ಗಂಗೆ ಪೂಜೆ ನಂತರ ನೀರನ್ನು ಕೊಡದಲ್ಲಿ ತುಂಬಿಕೊಂಡು ಬರುತ್ತಾರೆ. ಶಾಸ್ತ್ರದ ಕಾರ್ಯ ಮುಗಿದ ನಂತರವೇ ಹೊರಗಡೆ ಹೋಗಬಹುದು ಇಲ್ಲವೇ ಶಾಸ್ತ್ರ ಮಾಡದೇ ಹೋಗುವಂತಿಲ್ಲ.

ಹುಟ್ಟಿದ ಕೂದಲು ತೆಗೆಸುವುದು (ಜಾವುಳ ತೆಗೆಸುವುದು)

ಕೊರವರು ಮಗುವಿಗೆ ಒಂಬತ್ತು ತಿಂಗಳು ಅಥವಾ ಒಂದು ವರ್ಷ ತುಂಬುವುದರೊಳಗೆ ತಮ್ಮ ಕುಲದೇವರಿಗೆ ಮುಡಿ ಕೊಡುತ್ತಾರೆ. ಅಂದರೆ ಹುಟ್ಟಿದ ಮಗುವಿನ ಮೊದಲ ಕೂದಲನ್ನು ದೇವರಿಗೆ ಅರ್ಪಿಸಬೇಕಾಗುತ್ತದೆ. ಈ ರೀತಿಯಲ್ಲಿ ಮಗುವಿಗೆ ಮುಡಿ ಕೊಡುವುದು ಕಡ್ಡಾಯವಾಗಿ ಮಗುವಿನ ಸೋದರಮಾವನಿಂದ ಮಾಡಲಾಗುತ್ತದೆ. ಕೂದಲು ಕತ್ತರಿಯನ್ನು ಎಲೆಗತ್ತರಿ ಮಾಡಿಸಿ,

ನಂತರ ಕತ್ತರಿಯಿಂದ ಕತ್ತರಿಸಲಾಗುತ್ತದೆ. ಈ ಕೆಲಸದಲ್ಲಿ ಕ್ಷೌರಿಕನಿಗೆ ಕೆಲಸವಿರುತ್ತದೆ. ತಮ್ಮ ಸಾಮಾನುಗಳಿಗೆ ಪೂಜೆ ಮಾಡಿ ನಂತರ ಮಗುವಿನ ಸೋದರ ಮಾವನಿಂದ ಮಗುವಿಗೆ ಕೂದಲನ್ನು ಶಾಸ್ತ್ರೀಯವಾಗಿ ಕತ್ತರಿಸಿದ ನಂತರ ಕ್ಷೌರಿಕನು ಸಂಪೂರ್ಣವಾಗಿ ಕೂದಲನ್ನು ತೆಗೆಯುತ್ತಾನೆ. ಈ ಕೆಲಸಕ್ಕೆ ಆತನಿಗೆ ಅಕ್ಕಿ, ಬೆಲ್ಲ, ಬೇಳೆ ಕಾಣಿಕೆಯನ್ನು ಕೊಡಲಾಗುತ್ತದೆ. ವೀಳೆ ಜೋಡಿ ಎಲೆಗಳಿಂದ ಮಗುವಿನ ಸೋದರ ಮಾವನು ಆಕಡೆ ಈಕಡೆ ಹಿಂದಕ್ಕೆ ಮುಂದಕ್ಕೆ ತಲೆಯ ಮೇಲೆ ಎಲೆ ಕತ್ತರಿಸಿ ಹಾಕಿ ನಂತರ ಕತ್ತರಿಯಿಂದ ಕೂದಲನ್ನು ತೆಗೆಸುವುದುಂಟು. ಕೂದಲು ಕತ್ತರಿಸಿದ ನಂತರ ತಾಯಿ ಮಗುವಿಗೆ ಸ್ನಾನ ಮಾಡಿಸಿ ತವರು ಮನೆಯವರು ಹೊಸಬಟ್ಟೆ ತಂದಿರುತ್ತಾರೆ. ಏಕೆಂದರೆ ತವರು ಮನೆಯವರ ಆಶೀರ್ವಾದ ಮತ್ತು ಹರಕೆ ಸದಾ ಮಗಳ ಮೇಲೆ ಇರಬೇಕೆಂದು ಈ ರೀತಿ ಮಾಡಲಾಗುತ್ತದೆ.

ಮಗುವನ್ನು ದೇವಸ್ಥಾನದ ಸುತ್ತಲೂ ಎತ್ತಿಕೊಂಡು ಪ್ರದಕ್ಷಿಣೆ ಹಾಕುತ್ತಾರೆ ದೇವರ ಸನ್ನಿದಾನದಲ್ಲಿ ಹೋಗಿ ಎಲ್ಲಾ ಕಷ್ಟಗಳನ್ನು ಪರಿಹರಿಸಿದ್ದಕ್ಕಾಗಿ ಪ್ರಾರ್ಥನೆ ಸಲ್ಲಿಸುತ್ತಾರೆ. ಮಗುವಿನ ಕೈಯಿಂದ ದೇವರಿಗೆ ದಕ್ಷಿಣೆ ಹಾಕಿಸಿ ದೇವರ ಎದುರಿಗೆ ಅಡ್ಡ ಬೀಳಿಸುತ್ತಾರೆ. ದೇವರ ಪೂಜಾರಿಯಿಂದ ಮಗುವಿನ ಮುಖಕ್ಕೆ ತೀರ್ಥ ಹಾಕಿಸಿ ತಾನು ತೀರ್ಥಪ್ರಸಾದ ತೆಗೆದುಕೊಂಡು ಅಡುಗೆ ಮಾಡಿಸಿದರೆ ಸಿಹಿಊಟ ಮಾಡಿಕೊಂಡು ಹೋಗುತ್ತಾರೆ. ಹುಟ್ಟಿದ ಕೂದಲನ್ನು ತೆಗೆಸದಿದ್ದರೆ ಮಕ್ಕಳು ಬಹಳ ಹಟ ಮಾಡುತ್ತಾರೆ ಎಂಬುದು ಇವರ ನಂಬಿಕೆಯಾಗಿದೆ.

ಕಿವಿ ಚುಚ್ಚುವುದು

ನಿರ್ದಿಷ್ಟ ಪಡಿಸಿದ ದಿನದಂದು ಸೋದರ ಮಾವನಿಂದ ಮಗುವಿನ ಕಿವಿಗೆ ಮುಟ್ಟಿಸುತ್ತಾರೆ. ನಂತರ ಬಂಗಾರದಿಂದ ಕಿವಿಯನ್ನು ಚುಚ್ಚಿಸಲಾಗುತ್ತದೆ. ಇಂದಿನ ದಿನಗಳಲ್ಲಿ ಬಂಗಾರದ ಅಂಗಡಿಗೆ ಹೋಗಿ ಕಿವಿ ಚುಚ್ಚಿಸಿಕೊಂಡು ಬರುವುದು ಕಂಡುಬರುತ್ತದೆ. ಮಣೆಯ ಮೇಲೆ ತಾಯಿ ಮಗು ಕೂಡಿಸಿ ಆರತಿ ಮಾಡಿ, ಅಕ್ಷತೆ ಹಾಕಿ ಪೂಜೆ ಮಾಡುತ್ತಾರೆ. ಕಿವಿಯನ್ನು ಚುಚ್ಚಿ ನಂತರ ಬಂದವರೆಲ್ಲ ಮುಯ್ಯಿ ಮಾಡಿ, ಸಿಹಿಊಟ ಮಾಡಿ ಮನೆಗಳಿಗೆ ಹೋಗುತ್ತಾರೆ. ಕಿವಿ ಚುಚ್ಚುವುದರಿಂದ ಮಗುವಿಗೆ ಮುಟ್ಟು ದೋಷ, ಸೂತಕವಾದಂತೆ ತಡೆಯಲೂ, (ಮಗು ಜನಿಸಿದ ಮೇಲೆ ಬಿಸಿಲಿಗೆ ಮೊರದಲ್ಲಿ ಮಲಗಿಸಿ ಇಡಲಾಗುತ್ತದೆ. ಎಳೆ ಬಿಸಿಲಿನಲ್ಲಿ ಇಟ್ಟರೆ ಮಗುವಿಗೆ A ವಿಟಮಿನ್ ದೊರೆಯುತ್ತದೆ. ಮತ್ತು ರಕ್ತ ಸಂಚಲನೆ ಆಗುತ್ತದೆ ಎಂಬ ನಂಬಿಕೆ ಇದೆ.) ಹೆಣ್ಣು ಮಕ್ಕಳು ಮುಟ್ಟಾದ ಸಂದರ್ಭದಲ್ಲಿ ಅಥವಾ ಯಾವುದೇ ಊರಿಗೆ ಹೋಗುವ ಸಂದರ್ಭದಲ್ಲಿ ಮುಟ್ಟಾದವರ ನೆರಳು ಅಥವಾ ಮಗುವನ್ನು ಮುಟ್ಟಾದವರು ಮುಟ್ಟಿದರೆ ದೋಷವಾಗಿ ಮಗು ಬಳಲುತ್ತದೆ. ಹೆಚ್ಚಾಗಿ ಭೇದಿ ಮಾಡಿಕೊಳ್ಳುತ್ತದೆ. ಇದನ್ನು ತಡೆಯಲು ಕಿವಿ ಚುಚ್ಚಿದರೆ ಇಂತಹ ದೋಷವಾಗುವುದಿಲ್ಲ ಎಂಬ ನಂಬಿಕೆ ಇಂದಿಗೂ ಇದೆ.

ಮುಟ್ಟು ದೋಷವನ್ನು ಪರಿಹಾರ ಮಾಡಲು ಹಾಗಲಕಾಯಿ ಎಲೆಯನ್ನು ತೆಗೆದುಕೊಂಡು

ಮಗುವನ್ನು ಬಾಗಿಲ ಮೇಲೆ ಕೂರಿಸಿ ಅತ್ತೆಯಾದವರು ಅಥವಾ ಚಿಕ್ಕಮ್ಮನವರು ಎಲೆಗಳ ರಸವನ್ನು ನೆತ್ತಿಯ ಮೇಲೆ ಮೂರು ದಿನಗಳವರೆಗೆ ಅದು ಗುರುವಾರ ಅಥವಾ ಭಾನುವಾರ ದಿನವೇ ಹಿಡಿಯ ಬೇಕಾಗುತ್ತದೆ. ಸಂಜೆ ಸಮಯದಲ್ಲಿ ಇದನ್ನು ಮಾಡಬೇಕು. ಸೊಪ್ಪನ್ನು ನೆತ್ತಿ ಮೇಲೆ ಇಟ್ಟು ಈ ರೀತಿಯಾಗಿ ಮಾಡುವುದರಿಂದ ದೋಷ ಹೋಗುತ್ತದೆ ಎಂಬ ನಂಬಿಕೆ ಇದೆ. ಇದು ಸತ್ಯವೂ ಹೌದು. ಇದರಿಂದಾಗಿ ಮಗುವಿಗೆ ೫ ವರ್ಷದೊಳಗೆ ಅಥವಾ ೧ ವರ್ಷದೊಳಗೆ ಕಿವಿ ಚುಚ್ಚುವ ಕಾರ್ಯ ಮಾಡಲಾಗುತ್ತದೆ. ಕೆಲವು ಸಂಪ್ರದಾಯಗಳು ಆಧುನಿಕತೆಯ ಪ್ರಭಾವದಿಂದ ಕಡಿಮೆಯಾಗುತ್ತಿರುವುದು ಒಂದು ವಿಪರ್ಯಾಸವೇ ಆಗಿದೆ ಎಂದು ಹೇಳಬಹುದು.

ಋತುಮತಿ

ಕೊರವ ಜನಾಂಗದಲ್ಲಿ ಜನನದ ಸೂತಕದಂತೆಯೇ ಈ ಋತುಮತಿಯ ಸೂತಕವನ್ನು ಬಹಳ ಕಟ್ಟುನಿಟ್ಟಾಗಿ ಆಚರಿಸುತ್ತಿದೆ. ಸೂತಕವೆಂದರೆ, ಇದರಿಂದ ಮನೆಯು ಮೈಲಿಗೆಯಾಯಿತೆಂದೂ ಈ ಮೈಲಿಗೆ ಕಳೆಯಬೇಕಾದರೆ ಮನೆಯನ್ನೆಲ್ಲಾ ಚೊಕ್ಕಟವಾಗಿ ಅವರ ಮನೆ ದೇವತೆಯ ಗುಡಿಯನ್ನು ಸುಣ್ಣಬಣ್ಣಗಳಿಂದ ಶುದ್ಧಗೊಳಿಸಿ ಒಂದು ನಿರ್ದಿಷ್ಟಪಡಿಸಿದ ದಿನ ಕುಲ ಪುರೋಹಿತರಿಂದ ಪೂಜಾ ವಿಧಾನಗಳನ್ನು ಆಚರಿಸುತ್ತಾರೆ. ಅಲ್ಲಿಗೆ ಸೂತಕ ಪರಿಹಾರವಾಯಿತೆಂದು ನಂಬಿಕೆ ಉಳ್ಳವರಾಗಿದ್ದರೆ ಈ ಸೂತಕದ ಸಮಯದಲ್ಲಿ ಯಾವುದೇ ದೇವರಿಗೂ ಪೂಜಾದಿಗಳನ್ನು ಮಾಡುವುದಿಲ್ಲ. ತಮ್ಮ ಕುಲದ ಕುಟುಂಬಗಳನ್ನು ಬಿಟ್ಟು ಬೇರೆಯವರ ಮನೆಗೆ ಹೋಗುವುದಿಲ್ಲ. ಈ ಸೂತಕವೂ ಕೇವಲ ಒಂದು ಮನೆಗೆ ಸಂಬಂಧಿಸುವುದಲ್ಲ. ಸೂತಕದ ಮನೆಯ ರಕ್ತ ಸಂಬಂಧಿ ಕುಟುಂಬಗಳಿಗೂ ಸಂಬಂಧಿಸಿರುತ್ತದೆ. ಅವರು ಸಹ ಸೂತಕವನ್ನು ಕಳೆದುಕೊಳ್ಳಬೇಕು, ಸೂತಕವನ್ನು ತೆಗೆದ ಮೇಲೆ ದೇವರಿಗೆ ಪೂಜೆ ಮಾಡಲಾಗುತ್ತದೆ.

ಹೆಣ್ಣು ಋತುಮತಿಯಾದಾಗ ತನ್ನ ಬದುಕಿನಲ್ಲಿ ಮೊಟ್ಟ ಮೊದಲು ಬಾರಿಗೆ ಜೈವಿಕ ಬದಲಾವಣೆಯಾಗುತ್ತಿರುವುದನ್ನು ಅನುಭವಿಸುತ್ತಾಳೆ. ಹುಡುಗಿ ಜೀವೋತ್ಪಾದನೆಗೆ ಸಿದ್ಧಳಾದುದನ್ನು ಸೂಚಿಸುವ ಹೆಣ್ಣಿಗೆ ಪ್ರಾಯ ಒಂದು ಪ್ರಥಮ ಋತುಮತಿಯಾದಾಗ ಕೆಲವು ನಿಯಮಗಳು ಅಥವಾ ಕಟ್ಟುಕಟ್ಟಳೆಗಳು ಹಿಂದಿನ ಕಾಲದಲ್ಲಿ ನಡೆಯುತ್ತಿತ್ತು. ಇಂದು ಸಹ ಅಲ್ಪಸ್ವಲ್ಪ ಬದಲಾವಣೆಗಳು ಕಂಡುಬರುವುದುಂಟು. ಇಂದಿನ ಕಾಲದಲ್ಲಿ ಕೆಲವರು ಋತುಮತಿಯ ಕಾರ್ಯವನ್ನು ಮಾಡುವುದಿಲ್ಲ. ಮುಂದೆ ಮದುವೆಗೆ ಮುಂಚೆಯೇ ಇರುವ ಕಾರ್ಯಕ್ರಮವನ್ನು ಮಾಡಿ ಮದುವೆಯನ್ನು ಮಾಡಲಾಗುತ್ತದೆ. ಹಿಂದೆ ಋತುಮತಿಯಾದಾಗ ಬೇರೆಯದೇ ಗುಡಿಸಿಲಿನಲ್ಲಿ ಇಡುತ್ತಿದ್ದರು ಎಂದು ತಿಳಿಸಲಾಗುತ್ತದೆ. ಮೈನೆರೆದ ಸಂದರ್ಭದಲ್ಲಿ ಹೆಣ್ಣು ಎಲ್ಲಿಗೂ ಹೋಗದೆ ಯಾರ ಕಣ್ಣಿಗೂ ಬೀಳದಂತೆ ನೋಡಿಕೊಳ್ಳಲಾಗುತ್ತದೆ. ಹೊರಗೆ ಹೋಗಬೇಕಾದರೆ ಬೆಳಗ್ಗೆ ಬೇಗನೆ ಎದ್ದು ಹೋಗಬೇಕು ಅಥವಾ ರಾತ್ರಿ ಸಮಯದಲ್ಲಿ ಹೋಗಬೇಕಾಗುತ್ತದೆ. ಅಂದರೆ ಯಾರ ಕಣ್ಣಿಗೂ ಬೀಳಬಾರದೆಂಬ ನಂಬಿಕೆ ಇದೆ. ಇದು ಅವಳ ಪಾಲಿಗೊಂದು ಸೆರೆಮನೆಯಾದರೂ, ಮನೆ ಮಂದಿಗೆಲ್ಲಾ ಸಂಭ್ರಮ ಸಂತೋಷದ ವಿಷಯವಾಗಿರುತ್ತದೆ.

ಮೈನೆರೆದ ದಿನದಂದು ಹುಡುಗಿಗೆ ಕೋಣೆಯ ಮೂಲೆಯಲ್ಲಿ ಕೂರಿಸಿ, ಮುತ್ತೈದೆಯರಿಗೆ ಅಥವಾ ಹತ್ತಿರದಲ್ಲಿದ್ದ ಅತ್ತೆ ಇಲ್ಲವೆ ಅಕ್ಕನ ಕೈಯಿಂದ ಹಾಲು, ತುಪ್ಪ, ಮೊಸರು, ಎಣ್ಣೆ ಅರಿಶಿನ ಮೊದಲಾದವನ್ನು ಮೈಗೆಲ್ಲ ಹಚ್ಚಿ ೫ ಜನ ಮುತ್ತೈದೆಯರಿಂದ ಅವಳಿಗೆ ಮಂಗಳ ಸ್ನಾನ ಮಾಡಿಸುತ್ತಾರೆ. ಅರಿಶಿನದ ನೀರು ಬಿದ್ದ ಮೇಲೆ ಅವಳು ಎಲ್ಲಿಗೂ ಹೋಗುವಂತಿಲ್ಲ, ಹಸಿ ಮೈ ಎಂದು ಕರೆಯುತ್ತಾರೆ. ಈ ಸಂದರ್ಭದಲ್ಲಿ ಅವಳಿಗೆ ಕೈಯಲ್ಲಿ ಒಂದು ಕಬ್ಬಿಣದ ಕತ್ತಿ, ನಿಂಬೆಹಣ್ಣು, ಕೊಡಲಾಗುತ್ತದೆ. ಅವಳಿಗೆ ಪ್ರತ್ಯೇಕವಾದ ಹಾಸಿಗೆಯಲ್ಲಿ ಊಟದ ತಟ್ಟೆ, ಕುಡಿಯಲು ನೀರು ಪ್ರತ್ಯೇಕವಾಗಿ ನೀಡಲಾಗುತ್ತದೆ. ಕಸಬರಿಗೆಯು ಅವಳ ತಲೆಯ ದಿಂಬಿಗೆ ಇಡಲಾಗುತ್ತದೆ. ಇದರಿಂದ ಅವಳಿಗೆ ಯಾವುದೇ ದುಷ್ಟಶಕ್ತಿಯು ತಗಲಬಾರದೆಂದು ಕೆಟ್ಟ ಕನಸು ಬೀಳಬಾರದೆಂದು ಈ ರೀತಿ ಮಾಡಲಾಗುತ್ತದೆ. ಇದಕ್ಕೆ ಐರ್ಯ ಚಂದ್ರಪ್ರಭಾ ಕೆ.ರೈ. ಅವರು 'ಸೌಂದರ್ಯವರ್ಧಕ' ಎಂದು ತಿಳಿಸುತ್ತಾರೆ. ಹೆಣ್ಣಿಗೆ ಅರಿಶಿನ ಚಂದವಾಗಿರುತ್ತದೆ. ಕಳೆಯು ಬರುತ್ತದೆ. ಅರಿಸಿನದಲ್ಲಿ ಔಷಧಿಯ ಗುಣವೂ ಹೊಂದಿದೆ. ಇವಳನ್ನು ಋತುಮತಿ, ಪುಷ್ಪವತಿ, ಪೆದ್ದಾಮನಿ ಮೊದಲಾದ ಹೆಸರಿನಲ್ಲಿ ಕರೆಯಲಾಗುತ್ತದೆ.

ಋತುಮತಿಯಾದ ಹುಡುಗಿಗೆ ಮೂರು ದಿನಗಳವರೆಗೆ ಸಿಹಿ ಪದಾರ್ಥಗಳನ್ನು ಕೊಡುತ್ತಾರೆ. ಅಕ್ಕ ಪಕ್ಕದವರು ಸಹ ಹುಡುಗಿಗೆ ತಮ್ಮ ಕೈಲಾದ ಆಹಾರವನ್ನು ತಂದು ಕೊಡುತ್ತಾರೆ. ಈ ಸಂದರ್ಭದಲ್ಲಿ ಋತುಮತಿಯಾದ ಮನೆಗೆ ಪ್ರವೇಶಿಸುವಂತಿಲ್ಲ. ಏಕೆಂದರೆ ಆ ಮನೆಯ ಸೂತಕ ಅಥವಾ ಮುಡುಚಟ್ಟು ಆಗಿರುತ್ತದೆ. ಇವಳಿಗೆ 'ಕಾರದಚ್ಚು' (ಋತುಮತಿಯಾದ ಹುಡುಗಿಗೆ ಬೆಲ್ಲ, ಕೊಬ್ಬರಿ ಮತ್ತು ಉತ್ತತ್ತಿ, ಶುಂಠಿ, ಯಾಲಕ್ಕಿ ಹಾಕಿ ಕುಟ್ಟಿದಂತಹ ಪದಾರ್ಥಕ್ಕೆ 'ಕೊಬ್ಬರಿ ಕಾರ' ಎಂದು ಕರೆಯುತ್ತಾರೆ. ಅದಕ್ಕೆ ತುಪ್ಪ ಸೇರಿಸಿ ತಿನ್ನಲು ಪ್ರತಿದಿನ ೨ ಬಾರಿ ಕೊಡಲಾಗುತ್ತದೆ. ಏಕೆಂದರೆ ಅವಳಿಗೆ ರಕ್ತ ವೃದ್ಧಿಯಾಗಲಿ ಮತ್ತು ಶಕ್ತಿ ಬರಲೆಂದು) ಮೂರು ದಿನಗಳ ನಂತರ ಕೊಡಲಾಗುತ್ತದೆ. ಮನೆಯನ್ನು ೯ ಅಥವಾ ೧೬ ದಿನ ಶುದ್ಧ ಮಾಡಿದ ಮೇಲೆ ಮನೆಯೊಳಗೆ ಬೇರೆಯವರಿಗೆ ಪ್ರವೇಶ ಮಾಡಲಾಗುತ್ತದೆ. ಹಿಂದಿನ ಕಾಲದಲ್ಲಿ ಮನೆಯ ಹೊರಗೆ ಅಂಗಳದಲ್ಲಿ ಗುಡಿಸಲು ಹಾಕಿ ಸೂತಕ ತೆಗೆಯುವವರೆಗೆ ಅಲ್ಲಿಯೇ ಇರಬೇಕಾಗಿತ್ತು. ಈ ದಿನಗಳಲ್ಲಿ ಮನೆಯೊಳಗೆ ಒಂದು ಮೂಲೆಯಲ್ಲಿ ಕೂರಿಸುತ್ತಾರೆ. ಕೆಲವರು ಸೋಬಾನೆ ಪದಗಳನ್ನು ಹಾಡುತ್ತಾರೆ. ಹಿರಿಯರು ಹೋದಂತೆಲ್ಲ ಸಾಹಿತ್ಯವೂ ಅವರ ಹಿಂದೆಯೇ ಹೋಯಿತು ಎಂದು ಹೇಳಬಹುದು. ಆಸಕ್ತಿ ಇಲ್ಲದಿರುವುದು, ಹಿರಿಯರು ಹೇಳಿದ್ದನ್ನು ಸರಿಯಾಗಿ ಆಲಿಸದೆ ಇರುವುದು ಕಲಿಯದಿರಲೂ ಕಾರಣವಾಗಿವೆ. ಕ್ಷೇತ್ರಕಾರ್ಯದಲ್ಲಿ ಹೋದಾಗ ಹಾಡು ಹೇಳಿಯೆಂದು ಕೇಳಿದರೆ ನಮಗೆ ಬರುವುದಿಲ್ಲ. ನಮ್ಮ ಅಜ್ಜಿಗೆ ಬರುತ್ತದೆ ಎಂದು ಉತ್ತರ ನೀಡುತ್ತಾರೆ. ನಾಚಿಕೆ ಸ್ವಭಾವದವರು ಹೇಳಲು ಹಿಂದೆ ಮುಂದೆ ಮಾಡುವುದು ಕಂಡುಬರುತ್ತದೆ. ೫ನೇ ದಿನಗಳಲ್ಲಿ ಸ್ನಾನ ಮಾಡಿಸಿ, ಗಂಗೆ ಪೂಜೆಯನ್ನು ಮಾಡಿಸುತ್ತಾರೆ. ಕೆಲವರು ೧೬ನೇ ದಿನದಂತೆ ಮುಂಜಾನೆಯಲ್ಲಿ ಮಾಡುತ್ತಾರೆ. ನೀರಿನ ಬಿಂದಿಗೆ ತೆಗೆದುಕೊಂಡು ಹೋಗಿ ಬಾವಿಗೆ ಅಥವಾ ಬೋರ್‌ವೆಲ್‌ಗಳಿಗೆ ಪೂಜೆ ಮಾಡಿ ನೀರಿನೊಂದಿಗೆ

ಮನೆಗೆ ಬರುತ್ತಾರೆ. ಕೆಲವರು ಮನೆಯಲ್ಲಿಯ ಪೈಪ್‌ಗಳಿಗೆ ಪೂಜೆ ಮಾಡುತ್ತಾರೆ. ನಂತರ ಮನೆಗೆ ಸುಣ್ಣ ಬಳಿದು, ಮನೆ ಸಾರಿಸಿ, ಗೋಮೂತ್ರದಿಂದ ಮನೆಯನ್ನು ಚಿಮುಕಿಸಿ ಶುದ್ಧ ಮಾಡಿ, ಪೂಜೆ ಮಾಡಲಾಗುತ್ತದೆ. ೧೩ನೇ ದಿನ ಮುಂಜಾನೆಯೇ ಎದ್ದು ಮುಳ್ಳು ಗಿಡವನ್ನು ಮುಟ್ಟಿ ಅವಳಿಂದ ಪೂಜೆ ಮಾಡಿ ಅದನ್ನು ಕತ್ತರಿಸಿಕೊಂಡು ಹಾಕಿ ಬರುತ್ತಾರೆ. ಏಕೆಂದರೆ ಯಾವುದಾದರೂ ದೋಷವಿದ್ದರೆ ಆ ಗಿಡಕ್ಕೆ ಹೋಗುತ್ತದೆ ಎಂಬ ನಂಬಿಕೆ ಇದೆ. ಈ ದಿನಗಳಲ್ಲಿ ಚಿಕ್ಕ ಮಕ್ಕಳನ್ನು ಎತ್ತಿಕೊಳ್ಳಬಾರದು, ಮಗುವಿಗೆ ಮುಟ್ಟುದೋಷವಾಗುತ್ತದೆ ಅಥವಾ ಮಗು ಒಣಗಿಕೊಂಡು ಹೋಗುತ್ತದೆ ಎಂಬ ನಂಬಿಕೆ ಇದೆ. ಋತುಮತಿಯಾದ ಹುಡುಗಿಗೆ ಪ್ರತಿದಿನವೂ ಸ್ನಾನ ಮಾಡಿಸಲಾಗುತ್ತದೆ. ಮೈಲಿಗೆ ಬಟ್ಟೆಯನ್ನು ಅಗಸರಿಗೆ ಕೊಡಲಾಗುತ್ತದೆ. ಅವರಿಗೆ ಕಾಣಿಕೆ ಅಥವಾ ಅಕ್ಕಿ, ಬೆಲ್ಲ, ಬೇಳೆ, ಕೊಬ್ಬರಿ ಬಟ್ಟಲು, ಉತ್ತತ್ತಿ, ಬೆಳ್ಳುಳ್ಳಿ ಇಟ್ಟು ಕೊಡಲಾಗುತ್ತದೆ.

ಒಂಬತ್ತು ದಿನ ಅಥವಾ ಹದಿನಾರು ದಿನ ಹುಡುಗಿಯನ್ನು ಎಬ್ಬಿಸುವ ಕಾರ್ಯ ಇರುತ್ತದೆ. ಆ ದಿನದಲ್ಲಿ ಮನೆಯವರಿಗೆ ಅಥವಾ ಬಂಧುಮಿತ್ರರಿಗೆ ಸಡಗರವಾಗಿರುತ್ತದೆ. ಸಂಬಂಧಿಕರಿಗೆಲ್ಲ ಹೇಳಿ ಕಳಿಸಿರುತ್ತಾರೆ. ಮೊದಲ ಸೀರೆಯು ತವರು ಮನೆಯವರದಾಗಿರುತ್ತದೆ. ನಂತರ ಅಜ್ಜಿ ಅಥವಾ ಅತ್ತೆ ಮಡಿಲಿಗೆ 'ಉಡಕ್ಕಿ' ತುಂಬುತ್ತಾರೆ. (ಮಡಿಲಕ್ಕಿ: ಅಕ್ಕಿ, ೨ ಕೊಬ್ಬರಿ ಬಟ್ಟಲು, ಬೆಲ್ಲದ ಚೂರು, ಉತ್ತತ್ತಿ, ೨ ಎಲೆ, ೨ ಅಡಿಕೆ, ಸೀರೆ ಕುಪ್ಪಸ, ಬಳೆ, ಹೂವು ಮಡಿಲಿಗೆ ಇಡಲಾಗುತ್ತದೆ) ಇದನ್ನು ಶಾಸ್ತ್ರೋಕ್ತವಾಗಿ ಮಾಡಲಾಗುತ್ತದೆ. ಇಂದಿನ ದಿನಗಳಲ್ಲಿ ವೈಭವವಾಗಿ ಮಾಡುವವರು ಇದ್ದರೂ, ಸಾಧಾರಣವಾಗಿ ಮಾಡುವವರೂ ಕಂಡುಬರುತ್ತಾರೆ. ನಂತರ ಬಂದವರೆಲ್ಲರೂ ಕೈಲಾದ ಬಟ್ಟೆ ಬರೆ, ಉಡುಗೊರೆ, ಬಂಗಾರದ ವಸ್ತು ಕೊಟ್ಟು, ಸಿಹಿ ಊಟ ಮಾಡಿಕೊಂಡು ಹೋಗುತ್ತಾರೆ. ಋತುಮತಿಯಾಗುವುದಕ್ಕಿಂತ ಮೊದಲೇ ಮದುವೆ ಮಾಡಿ ಕಳಿಸುತ್ತಾರೆ. ಋತುಮತಿಯಾದ ಮೇಲೆಯೇ ಸಂಸಾರಕ್ಕೆ ಕಳಿಸುತ್ತಾರೆ. ಕೆಲವರು ತಂದೆ ತಾಯಿಗಳಿಗೆ ಮಕ್ಕಳ ಮದುವೆ ಬಗೆಗೆ ಚಿಂತೆ ಇರುತ್ತದೆ ಫಲವಂತಿಕೆಯ ಪ್ರತಿರೂಪವಾಗಿದೆ. ಈ ಋತುಮತಿಯ ಕಾರ್ಯ ಮಾಡಲಾಗುತ್ತದೆ. ದೇವಾಲಯಗಳಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ತಂದೆಯು ಮಗಳನ್ನು ಎಬ್ಬಿಸಿದ ನಂತರ ಬಂಧುಬಾಂಧವರು ಮಾಂಸದೂಟ ಮಾಡಿಸಿ ಕಳಿಸುತ್ತಾರೆ. ನಂತರ ಎಂದಿನಂತೆ ಮತ್ತೆ ಹುಡುಗಿಯು ವ್ಯಾಪಾರದಲ್ಲಿ ತೊಡಗುತ್ತಾಳೆ.

ಋತುಮತಿಯಾದ ಹುಡುಗಿಯನ್ನು ಹಿಂದೆ ಸ್ನಾನ ಮಾಡಲು ಮನೆಯ ಪಕ್ಕದಲ್ಲಿಯೇ ಗುಂಡಿಯನ್ನು ತೆಗೆದು ಸ್ನಾನ ಮಾಡಿಸುತ್ತಿದ್ದರೂ, ೫ನೇ ದಿನದ ನಂತರ ಗುಂಡಿಯನ್ನು ಮುಚ್ಚಿ ಪೂಜೆ ಮಾಡಬೇಕೆಂದು ನಿಯಮವಿದೆ. ಇಂದು ಆಧುನಿಕತೆಯ ಪ್ರಭಾವದಿಂದ ಬಚ್ಚಲು ಮನೆಗಳು ಇರುವುದರಿಂದ ಗುಂಡಿ ತೋಡುವ ಅವಶ್ಯಕತೆ ಇಲ್ಲವಾಗಿದೆ. 'ದೊಡ್ಡೋಳಾದ್ಲು' ಎಂದು ಹೇಳಲಾಗುತ್ತದೆ. ನಂತರ ಬಂದ ಎಲ್ಲ ಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆದುಕೊಳ್ಳುತ್ತಾರೆ. ಬಂದವರೆಲ್ಲ ಕಡಲೆ, ಸಿಹಿ ಪದಾರ್ಥ ತೆಗೆದುಕೊಂಡು ಬಂದಿರುತ್ತಾರೆ. ಬಹುಪಾಲು ಜನರು ಒಣಕೊಬ್ಬರಿ ಹಣ್ಣು, ಎಳ್ಳಿನಿಂದ ತಯಾರಿಸಿದ ಅಡುಗೆ ಪದಾರ್ಥಗಳನ್ನು ಹುಡುಗಿಗೆ ಉಣಬಡಿಸುತ್ತಾರೆ. ಪ್ರೌಢಾವಸ್ಥೆಯ ಕಾಂತಿ ಹೊರಹೊಮ್ಮಲು ಇದು ಸಹಾಯಕವಾಗುತ್ತದೆ.

ಶುಕ್ರವಾರದ ದಿನ ಮೈನೆರೆತಾಳೆ
ಅಮಪ್ಪ ಹೋರನ ಬೆಸಗೊಂಡು ಕೇಳ್ಯಾನೆ
ನೆರೆತ ಗಳಗೆಯ
ನೆರೆತ ಗಳಗೆಯ ಕೇಳದರೆ
ಹುಟ್ಟಿದ ಮನೆಗೆ ಜಯ ಜಯ.

ಋತುಮತಿಯಾದ ಬಗೆಗೆ ಜೋಯಿಸರಲ್ಲಿ ಕೇಳುತ್ತಾರೆ. ಈ ಹುಟ್ಟಿದ ಮನೆಗೆ ಯಾವುದಾದರೂ ದೋಷ ಇದ್ದರೆ ಪರಿಹಾರ ಕಂಡುಕೊಳ್ಳಲು ಈ ರೀತಿ ಮಾಡಲಾಗುತ್ತದೆ. ದಾನವನ್ನು ಬ್ರಾಹ್ಮಣರಿಗೆ ಕೊಡಲಾಗುತ್ತದೆ.

ಹೆಣ್ಣು ನೋಡುವುದು

ಮೈನೆರೆದ ಮೇಲೆ ಸಮುದಾಯದವರಿಗೆ ಇಂತಹ ಮನೆಯವರ ಹುಡುಗಿ ಪ್ರಾಯಕ್ಕೆ ಬಂದಿದ್ದಾಳೆ ಎಂದು ತಿಳಿದು, ಮದುವೆಗೆ ಸಿದ್ಧ ಮಾಡಲಾಗುತ್ತದೆ. ಆ ಕಡೆಯವರಿಗೆ ಈ ಕಡೆಯವರಿಗೆ ತಿಳಿಸಿ ಹೇಳಿ ಅವರಿಗೆ ಗೋತ್ರ, ಬೆಡಗೂ ಕೂಡಿ ಬಂದರೆ, ಅವಳನ್ನು ನೋಡಲು ಸಿದ್ಧರಾಗುತ್ತಾರೆ. ಹೆಣ್ಣಿನ ಕಡೆಯವರಿಗೆ ಸಂಬಂಧಿಕರ ಜೊತೆ ಹೇಳಿ ಕಳಿಸುತ್ತಾರೆ. ನಂತರ ಹೆಣ್ಣಿನ ಮನೆಯವರಿಗೆ ಒಪ್ಪಿಗೆಯಾದರೆ ಹೆಣ್ಣುನೋಡಲು ಬರುತ್ತಾರೆ. ಇಂದಿನ ದಿನಗಳಲ್ಲಿ ಬುದ್ಧಿವಂತರು ಮತ್ತು ತಿಳುವಳಿಕೆ ಉಳ್ಳವರು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ. ಆದರೆ ಬಹಳ ಜನರು ತಮ್ಮ ಅಭಿಪ್ರಾಯವನ್ನು ತಿಳಿಸುವುದಿಲ್ಲ. ಏಕೆಂದರೆ ತಮ್ಮ ಮನೆಯವರು ಹೇಳಿದಂತೆ ಕೇಳಿಕೊಂಡು ಇರುತ್ತಾರೆ. ಹೆಣ್ಣು ನೋಡಲು ಹೆಣ್ಣಿಗೆ ಸಂಬಂಧವಿರುವವರು ಮತ್ತು ಗಂಡಿನ ಕಡೆಯವರು ಬಂದು ಹೆಣ್ಣು ನೋಡಿಕೊಂಡು ಹೋಗುತ್ತಾರೆ. ಇವರು ಬರುವುದಕ್ಕಿಂತ ಮೊದಲೇ ರೂಢಿಯಂತೆ ಅವಳು ಸಿದ್ಧಳಾಗಿ ಇರಲು ತಿಳಿಸಿರುತ್ತಾರೆ. ಆಕೆ ಗೊಂಬೆಯಂತೆ ಇರಬೇಕಾಗುತ್ತದೆ. ಅವರಿಗೆ ಒಪ್ಪಿಗೆಯಾದರೆ ಮುಂದಿನ ದಿನ ಬಂದು ನಿಶ್ಚಿತಾರ್ಥವನ್ನು ಮಾಡಿಕೊಂಡು ಹೋಗುತ್ತಾರೆ. ಕೆಲವು ನಂಬಿಕೆಯಂತೆ ಹುಡುಗಿಯನ್ನು ನೋಡಿಕೊಂಡು ಹೋದಮೇಲೆ ಗಂಡಿನ ಮನೆಯವರಿಗೆ ಒಳ್ಳೆಯದಾದರೆ, ಅಂತಹ ಹುಡುಗಿಯನ್ನು ಬಿಡುವುದಿಲ್ಲ. ಹೆಣ್ಣಿನ ಮನೆಯವರು ಬಡವರಾಗಿದ್ದರೂ ಸಹ ಅವರಿಗೆ ಮದುವೆ ಮಾಡಲು ಹಣ ಕೊಟ್ಟು ವಿವಾಹ ಮಾಡಿಕೊಳ್ಳುತ್ತಾರೆ. ಎಲ್ಲ ಮನೆಯವರು ಹಾಗೆ ಇರುವುದಿಲ್ಲ. ಮನೆಯ ಸೊಸೆಯು ಲಕ್ಷ್ಮಿ ಇದ್ದಂತೆ ಎಂಬ ಭಾವನೆ ಅವರಲ್ಲಿರುತ್ತದೆ. ಹೆಣ್ಣು ನೋಡಲು ಹಿಂದೆ ಅನೇಕ ಚಪ್ಪಲಿಗಳು ಸವೆಯಬೇಕಾಗಿತ್ತು ಎಂದು ಹುಲಿಗೆಮ್ಮಜ್ಜಿ ಹೇಳುತ್ತಾರೆ. ಬೇರೆ ಬೇರೆ ಊರುಗಳಲ್ಲಿ ಕೊರವರು ಇರುವುದರಿಂದ ವ್ಯಾಪಾರ ಮಾಡುತ್ತಾ, ತಮ್ಮ ಜಾತಿಯವರು ಎಂದು ತಿಳಿದರೆ ಹೆಣ್ಣು ನೋಡಿಕೊಂಡು ವಿವಾಹ ಮಾಡುತ್ತಿದ್ದರು. ಅವಳ ಇಚ್ಛೆಯು ಹಿರಿಯರಿಂದಲೇ ನಿರ್ಧಾರವಾಗುತ್ತಿತ್ತು. ಆದರೆ ಇಂದು ಕೆಲವರು ತಮಗೆ ಇಚ್ಛೆಯಾದರೆ ಮಾತ್ರ ಮದುವೆ ಮಾಡಿಕೊಳ್ಳುತ್ತಾರೆ. ಇಲ್ಲವಾದರೆ ಇಲ್ಲ ಎಂದು ಹೇಳುತ್ತಾರೆ.

ನಿಶ್ಚಿತಾರ್ಥ

ಹೆಣ್ಣು ಗಂಡಿನವರಿಗೆ ಒಪ್ಪಿಗೆಯಾದರೆ ನಂತರ ಎಲೆ ಶಾಸ್ತ್ರ ಮಾಡಲಾಗುತ್ತದೆ. ಕೆಲವರು

ಮದುವೆಯ ಹಿಂದಿನ ದಿನವೇ ಇಳೇವು ಮಾಡಿಕೊಳ್ಳುತ್ತಾರೆ. ಗಂಡಿನ ಮನೆಯವರನ್ನು ಎದುರುಗೊಳಸುತ್ತಾ, ನೀರು ಕೊಟ್ಟು ಹಾಸಿದ ಕಂಬಳ ಅಥವಾ ಚಾಪೆಯ ಮೇಲೆ ಕೂರಿಸುತ್ತಾರೆ. ಹಿರಿಯರೆಲ್ಲರೂ ಮತ್ತು ದೈವದವರು ಸೇರಿ ಮಾತುಕತೆ ಮಾಡುತ್ತಾರೆ. ಈ ಕಾರ್ಯವನ್ನು ರಾತ್ರಿ ವೇಳೆಯಲ್ಲಿ ಮಾಡುತ್ತಾರೆ. ಕೆಲವರು ಋತುಮತಿಯಾದ ದಿನವೇ ನಿಶ್ಚಿತಾರ್ಥ ಮಾಡಿಕೊಳ್ಳುತ್ತಾರೆ. ಗಂಡಿನ ಮನೆಯವರು ನೇರವಾಗಿ ಹೆಣ್ಣಿನ ಮನೆಗೆ ಹೋಗುವುದಿಲ್ಲ. ಮೊದಲು ದೈವದವರ ಮನೆಗೆ ಹೋಗಿ ಅವರ ಜೊತೆಗೆ ನಿಶ್ಚಿತಾರ್ಥದ ಕಾರ್ಯಕ್ಕೆ ಹೋಗುತ್ತಾರೆ. ಆ ದಿನ ಹೆಣ್ಣು ನಿಶ್ಚಿತಾರ್ಥಕ್ಕೆ ತಂದ ಹಸಿರು ಸೀರೆ ಕುಪ್ಪಸ ಉಡಬೇಕಾಗುತ್ತದೆ. ಗಂಡು ಹೆಣ್ಣಿಗೆ ಹಾರವನ್ನು ಬದಲಾಯಿಸಿ ಕೂರಿಸುತ್ತ ಮಾತುಕತೆ ನಡೆಸುತ್ತಾರೆ. ಕೊಡುಕೊಳ್ಳುವುದು ಮಾಡಿಕೊಂಡು ಹೆಣ್ಣು ಗಂಡಿಗೆ ತಂದ ವಸ್ತುಗಳನ್ನು ಅವರಿಗೆ ಕೊಟ್ಟು, ಹೆಣ್ಣಿನ ಉಡಿಗೆ ಅಕ್ಕಿ, ಕೊಬ್ಬರಿ ಬಟ್ಟಲು, ಎಲೆ, ಅಡಿಕೆ, ಕನ್ಯಾಶುಲ್ಕ ಕೊಟ್ಟು ಎಲ್ಲರ ಎದುರಿಗೆ ಮಾತನಾಡಿ ಒಪ್ಪಿಗೆಯ ನಂತರ ಮನೆಯವರ ಮತ್ತು ಗಂಡಿನ ಮನೆಯವರಿಗೆ ಬಾಯಿಗೆ ಸಕ್ಕರೆ ಸಿಹಿ ಮಾಡಿಕೊಳ್ಳುತ್ತಾರೆ. ನಂತರ ಸಂಬಂಧಿಗಳಾಗುತ್ತಾರೆ. ಎಲ್ಲರಿಗೂ ಸಕ್ಕರೆ ಹಂಚಿ, ಎಲೆ ಅಡಿಕೆ ಹಂಚಿ ನಿಶ್ಚಿತಾರ್ಥ ಮಾಡಲಾಗುತ್ತದೆ. ಅಕ್ಕ ಮತ್ತು ಸೋದರ ಮಾವನವರು ಹೆಣ್ಣಿಗೆ ಆರತಿ ಮಾಡಬೇಕಾಗುತ್ತದೆ. ವಿಭೂತಿ ಇಬ್ಬರಿಗೂ ಹಚ್ಚಲಾಗುತ್ತದೆ. ಗಂಡಿಗೆ ಸೋದರ ಮಾವನವರು ಕಾಲಿಗೆ ಬೆಳ್ಳಿ ಉಂಗುರ ಹಾಕುತ್ತಾರೆ. ಬಂದವರೆಲ್ಲರೂ ಸಿಹಿ ಊಟ ಮಾಡಿಕೊಂಡು ಮರುದಿನ ಹೋಗುತ್ತಾರೆ. ಇಂತಹ ಕಾರ್ಯದಲ್ಲಿ ಗಂಡಸರೆಲ್ಲರೂ ತಲೆಗಳಿಗೆ ಟವಲು ಕಟ್ಟಿಕೊಳ್ಳುತ್ತಾರೆ. ಯಾವುದೇ ಕಾರ್ಯಗಳಲ್ಲಿ ಶಿಸ್ತು ಪರಿಪಾಲಿಸುತ್ತಾರೆ. ವಾಲಗದವರೂ ಇವರೇ ಹೋಗಿರುವುದರಿಂದ ಎಲ್ಲರೂ ಇಲ್ಲಿಯೇ ಇರುತ್ತಾರೆ. ಇವರಲ್ಲಿ ಕೆಲವರು ಬ್ರಾಹ್ಮಣರನ್ನು ಕರೆತರುತ್ತಾರೆ. ಇಂದಿನ ದಿನಗಳಲ್ಲಿ ವಾದ್ಯಮೇಳಗಳು ಬದಲಾಗುತ್ತಿರುವುದರಿಂದ ಆಧುನಿಕ ವಾದ್ಯಗಳು ಪ್ರಭಾವ ಬೀರುತ್ತಿದೆ. ಜನಾಂಗದವರು, ಸಮೀಪದ ಸಂಬಂಧದವರು, ರಕ್ತಬಾಂಧವರು, ಕುಲದವರು ನೆರವಾಗುತ್ತಾರೆ. ಇಂಥ ವೈವಾಹಿಕ ಸಂಬಂಧದ ಸಂಪ್ರದಾಯ ಸಾಮಾನ್ಯವಾಗಿ ಎಲ್ಲ ಮುಂದುವರಿದ ಸಮಾಜಗಳಲ್ಲಿ, ಎಲ್ಲಾ ಜನಾಂಗಗಳಲ್ಲಿಯೂ ಕಂಡುಬರುವುದು ಒಂದು ವಿಶೇಷ. ಅಕ್ಕನ ಮತ್ತು ಅತ್ತೆಯ ಮಗಳನ್ನು ಇವರು ಮದುವೆಯಾಗುತ್ತಾರೆ. ಆದರೆ ತಂಗಿಯ ಮಗಳನ್ನು ಮದುವೆಯಾಗುವುದಿಲ್ಲ.

ಹಿಂದಿನ ದಿನಗಳಲ್ಲಿ ಮದುವೆಗಳನ್ನು ೫ ದಿನಗಳವರೆಗೆ ಮಾಡುತ್ತಿದ್ದರೂ ೫ ನೀರು ಹಾಕಲಾಗುತ್ತದೆ. ಕುಡಿದಾಗ ಸಣ್ಣಪುಟ್ಟ ಕಾರಣಗಳಿಂದ ಜಗಳ ಮಾಡುವುದು, ಹೊಡೆದಾಡುವುದು ಸಾಮಾನ್ಯವೇ ಆಗಿದೆ. ಹಿಂದಿನ ದಿನಗಳಲ್ಲಿ ರಾತ್ರಿ ವೇಳೆಯಲ್ಲಿ ಮದುವೆ ನಡೆಯುತ್ತಿದ್ದವು ಎಂದು ತಿಳಿಸುತ್ತಾರೆ. ಆದರೆ ಇಂದಿನ ದಿನಗಳಲ್ಲಿ ವಿವಾಹಗಳು ಹಗಲಿನಲ್ಲಿಯೇ ನಡೆಯುತ್ತವೆ. ಒಂದು ಮುಹೂರ್ತವಿಟ್ಟು, ಲಗ್ನ ಪತ್ರಿಕೆ ಹಾಕಿಸಿ, ನಿಶ್ಚಿತಾರ್ಥ ಮಾಡಿ ವಿವಾಹವನ್ನು ಮಾಡುತ್ತಾರೆ. ಬ್ರಾಹ್ಮಣನಿಂದ ಹೆಸರು ಕೇಳಿಸಿ ಸರಿಹೊಂದುವ ಮುಹೂರ್ತವಿಟ್ಟು ವಿವಾಹಕ್ಕೆ ಸಿದ್ಧ ಮಾಡುತ್ತಾರೆ. ಇಲ್ಲಿ ಸೇರಿ ಹೊಂದದಿದ್ದರೆ ಹೆಸರನ್ನು ಬದಲಾಯಿಸುತ್ತಾರೆ ವಿನಃ ಮದುವೆ ಬಿಡುವುದಿಲ್ಲ.

ಚಪ್ಪರ

"ಮದುವೆಯ ಹಿಂದಿನ ದಿನವೇ ಚಪ್ಪರ ಹಾಕಲಾಗುತ್ತದೆ. ಚಪ್ಪರಗಳನ್ನು ಗಂಡು ಹೆಣ್ಣಿನ ಮನೆಗಳ ಮುಂದೆ ಹಾಕಲಾಗುತ್ತದೆ. ಕೆಲವರು ಮನೆಯ ಮುಂದೆ ಚಪ್ಪರ ಹಾಕುವುದಿಲ್ಲ"[7] ಎಂದು ಹೇಳುತ್ತಾರೆ. ಹಿಂದಿನ ಮದುವೆ ಪದ್ಧತಿಯು ಇಂದಿನ ದಿನಗಳಲ್ಲಿ ಬದಲಾಗುತ್ತಿದೆ. ಚಪ್ಪರ ಹಾಕುವಾಗ ಪೂಜೆ ಮಾಡಿ, ಕಾಯಿ ಒಡೆದ ಮೇಲೆ ಚಪ್ಪರ ಹಾಕುತ್ತಾರೆ. ಮದುವೆಯ ಚಪ್ಪರಗಳನ್ನು ಅಲಂಕರಿಸಿ ಸಿದ್ಧಗೊಳಿಸುತ್ತಾರೆ. ತೆಂಗಿನ ಗರಿ, ತೆಂಗಿನಕಾಯಿ ಚಪ್ಪರದ ಮಧ್ಯೆ ಕಟ್ಟಿರುತ್ತಾರೆ, ಬಾಳೆ ಗಿಡಗಳನ್ನು ಚಪ್ಪರಕ್ಕೆ ಅಲಂಕರಿಸುತ್ತಾರೆ. ಇಲ್ಲಿ ಹಾಲು ಕಂಭವೆ ಮುಖ್ಯವಾಗಿರುತ್ತದೆ. ಕೆಲವರು ಚಪ್ಪರದಲ್ಲಿ, ಗುಡಿಗಳಲ್ಲಿ ಮನೆ ಮುಂದೆ ಅಥವಾ ಕಲ್ಯಾಣ ಮಂಟಪಗಳಲ್ಲಿ ಧಾರೆ ಎರೆಯುತ್ತಾರೆ. ಗಂಡನ ಮನೆಯವರಿಗೆ ಪ್ರತ್ಯೇಕವಾದ ಮನೆಯನ್ನು ಅಥವಾ ಬಿಡಾರದ ಮನೆ ಕೊಡಲಾಗುತ್ತದೆ.

ಶ್ರೀ ಎಚ್.ವಿ. ನಂಜುಂಡಯ್ಯನವರು ಹಿಂದಿನ ಮದುವೆ ಪದ್ಧತಿಯನ್ನು ವಿವರಿಸುತ್ತಾರೆ. ಇ ಥರ್ಸ್ಟನ್ ಅವರು ''On the day fixed for the marriage, two fresh huts are erected, with their doorü opening the east, one being for the bride and the other for the bride groom'' ಎಂದು ತಿಳಿಸಿದ್ದಾರೆ. ಇಂದಿನ ಬಡವರು ಹಿಂದುಳಿದಿದ್ದರಿಂದ ಅಧಿಕವಾಗಿ ದೇವಸ್ಥಾನದಲ್ಲಿಯೇ ಮದುವೆ ಮಾಡಲಾಗುತ್ತದೆ. They observer vilya sastra, do not call in any band of iperü, nor use the bhashinga, marriage chaplet, and some do not wen correct a marriage both' ಎಂದಿದ್ದಾರೆ".[9]

ಹಿಂದೆ ವಾದ್ಯಗಳು ಇರುತ್ತಿರಲಿಲ್ಲ. ಆದರೆ ತಲೆಗೆ ಪೇಟ ಸುತ್ತುತ್ತಾರೆ, ಕೆಲವರು ಬಾಸಿಂಗ ಕಟ್ಟುತ್ತಾರೆ, ಕೆಲವರು ಕಟ್ಟುವುದಿಲ್ಲ. ಧಾರೆಯನ್ನು ಕುಲದ ಹಿರಿಯರೇ ನೆರವೇರಿಸುತ್ತಿದ್ದರು. ಹೆಸರು, ಕುಲದ ಬಗೆಗೆ ಬ್ರಾಹ್ಮಣರನ್ನು ಕೇಳುತ್ತಿದ್ದರು.

ಮದುವೆ

''ವಿವಾಹವು ಆದಿಕಾಲದಿಂದಲೂ ಬೆಳೆದು ಬಂದಿರುವ ಮಾನವ ಜೀವಿಯ ಒಂದು ಅವಿಭಾಜ್ಯ ಅಂಗವಾದ ಸಾಮಾಜಿಕ ಸಂಸ್ಥೆ. ಇದು ಮಾನವನ ಲೈಂಗಿಕ ತೃಪ್ತಿ ಮತ್ತು ಸಂತಾನೋತ್ಪತ್ತಿಯ ದ್ಯೂತಕವಾಗಿದೆ. ವಿವಾಹವು ಸಮಾಜದಲ್ಲಿ ಸಾರ್ವತ್ರಿಕವಾದುದು. ಜನಾಂಗದ ಉದ್ಧಾರಕ್ಕೋಸ್ಕರ ಈ ವಿವಾಹ ಸಂಸ್ಥೆಯು ಹುಟ್ಟಿ ಬೆಳೆದು ಮುಂದುವರಿಯುತ್ತಿದೆ. ಸ್ತ್ರೀ ಪುರುಷರಲ್ಲಿ ನಿರಂತರ ಅನ್ಯೂನ್ಯ ಸಂಬಂಧವನ್ನು ಉಂಟುಮಾಡುವುದೇ ಈ ವಿವಾಹದ ಉದ್ದೇಶವಾಗಿದೆ ಎಂದು ತಿಳಿಸಿದ್ದಾರೆ".[೩] ಹಿಂದೂ ಧರ್ಮದ ಪ್ರಕಾರ ವಿವಾಹವು ಜೀವನದ ಅತಿ ಮುಖ್ಯವಾದ ಸಂಸ್ಕಾರಗಳಲ್ಲೊಂದಾಗಿದೆ. ಈ ಸಂಸ್ಕಾರವನ್ನು ಹೊಂದದೆ ಮುಕ್ತಿಯು ಸಿಕ್ಕಲಾರದು ಎಂಬ ನಂಬಿಕೆ ಗಾಢವಾಗಿ ಜನರಲ್ಲಿ ಬೆಳೆದು ಬಂದಿದೆ.

ಗಂಡು ಹೆಣ್ಣಿನ ಸಂಬಂಧವನ್ನು ಕಾನೂನುಬದ್ಧಗೊಳಿಸಿ, ವಂಶ ಬೆಳೆಯುವುದಕ್ಕೆ ಅನುವು

ಮಾಡಿಕೊಡುವ ಪ್ರಕ್ರಿಯೆ ಮದುವೆಯ ಮೂಲಕವೇ ನಡೆಯುತ್ತದೆ ಎಂಬ ಮಾತು ಸತ್ಯಸಂಗತಿ. ಕುಟುಂಬದ ಜೀವನ ಪದ್ಧತಿಯನ್ನು ಬಹುಹಿಂದಿನಿಂದಲೂ ಕಾಣಬಹುದು. ಇವರಲ್ಲಿನ ಬೆಡಗುಗಳು ಸ್ವಗೋತ್ರದಲ್ಲಿನ ವಿವಾಹಗಳನ್ನು ಹಿಂದಿನಿಂದಲೂ ತಡೆಹಿಡಿಯುತ್ತಿದ್ದಾರೆ. (ಅಣ್ಣ-ತಂಗಿಯ ಸಂಬಂಧವಿರುವುದರಿಂದ) ಮದುವೆಯ ಕಾವಾಡಿ, ಸತ್ವಾಡಿ ಎಂಬ ಬೆಡಗುಗಳಿಂದ ಹೆಣ್ಣು-ಗಂಡು ನೋಡಿ ಸಂಬಂಧ ಬೆಳೆಸುತ್ತಾರೆ. ಪವಿತ್ರ ಬಂಧನವೆಂದೂ ನಂಬುತ್ತಾರೆ. ಹಿರಿಯರು ಒಪ್ಪಿದ ವಿವಾಹವನ್ನು ಮುರಿಯುತ್ತಿರಲಿಲ್ಲ. ಇದು ತಮಗೆ ಇಷ್ಟವಾದರೆ ಮಾತ್ರ ಮಾಡಿಕೊಳ್ಳುತ್ತಾರೆ. ಅಂದರೆ ಅತ್ತೆ ಮಗಳು, ಅಕ್ಕನ ಮಗಳು, ಮಾವನ ಮಗಳನ್ನು ವಿವಾಹವಾಗುವುದು ಇಲ್ಲಿ ಅಧಿಕವಾಗಿ ಕಂಡುಬರುತ್ತದೆ.

ಇದರಲ್ಲಿ ಏಕಪತ್ನಿತ್ವದ ಪದ್ಧತಿ ರೂಢಿಯಲ್ಲಿತ್ತು. ಆದರೆ ಮೊದಲನೆ ಹೆಂಡತಿ ಸತ್ತರೆ ಅಥವಾ ಮಕ್ಕಳು ಆಗದಿದ್ದರೆ ಅಂತವರು ಮಾತ್ರ ಮದುವೆ ಆಗಬಹುದಾಗಿತ್ತು. ಇದು ಗಂಡಿಗೆ ಮಾತ್ರ. ಹೆಣ್ಣಿಗೆ ಒಮ್ಮೆ ಮದುವೆಯಾದರೆ ಇನ್ನೊಮ್ಮೆ ಮದುವೆ ಆಗುವಂತಿಲ್ಲ. ಇದು ಕುಲದ ಪದ್ಧತಿಯಾಗಿದೆ. ಬಾಲ ವಿಧವೆಯಾದರೂ ಹಾಗೆಯೇ ಇರಬೇಕಾಗುತ್ತದೆ. ಸಮುದಾಯದ ಹೆಣ್ಣು ಮಕ್ಕಳು ಮರುಮದುವೆ ಯಾಗಿರುವುದು ಕಂಡುಬರುವುದಿಲ್ಲ. ಸಮುದಾಯಕ್ಕೆ ಬೇರೆ ಜಾತಿಯವರನ್ನು ಸೇರಿಸಿಕೊಳ್ಳುವುದಿಲ್ಲ. ತಮಗಿಂತ ಮೇಲುಜಾತಿಯ ಹೆಣ್ಣನ್ನು ಮಾತ್ರ ಕೂಡಿಕೊಂಡರೆ ಆಕೆಯನ್ನು ಕುಲಕ್ಕೆ ತೆಗೆದುಕೊಳ್ಳ ಲಾಗುತ್ತದೆ. ಮೇಲುಜಾತಿಯ ಗಂಡು ಈ ಜಾತಿಯ ಹೆಣ್ಣನ್ನು ಪ್ರೀತಿಸಿದರೆ ಅಂಥವರನ್ನು ಬೇರೆಡೆಗೆ ಸೇರಿಸಿಕೊಳ್ಳುತ್ತಾರೆ. ಗಂಡಿನ ಮನೆಯವರು ದೈವದವರ ಸಮ್ಮುಖದಲ್ಲಿಯೇ ವಿವಾಹವನ್ನು ನಿಶ್ಚಯಿಸಿ ಮದುವೆಯನ್ನು ಮಾಡುತ್ತಾರೆ. ಏಕೆಂದರೆ ಮುಂದೆ ಬರುವ ತೊಂದರೆಗಳಿಗೆ ಇವರ ಸಾಕ್ಷಿಯಾಗಿ ದೈವದವರು, ಹಿರಿಯರು ಇರುತ್ತಾರೆ. ಮುಂದೆ ಮದುವೆಯನ್ನು ಮಾಡಿಕೊಳ್ಳುತ್ತಾರೆ.

ಮದುವೆ ಬಗ್ಗೆ ಇ ಥರ್ಸ್ಟನ್‌ರು ತಮ್ಮ castes and tribes of southern Indiaದಲ್ಲಿ ಈ ರೀತಿ ತಿಳಿಸಿದ್ದಾರೆ. ''Marriages are arranged by the elderü, the father of a youth who is of a marriageable, age calls together some of the elderü of his divition, and proceeds inquest of a suitable bride. If the family visited consents to the match, the head men is sent for, and a move is made to the today Shop. Here the father of the future, bride-groom fills a Small earthorn vessel, called is telugu muntha and offerü it to the father of the bride elect, asking him. Do you know why I give you this taddy? The recipient replies. it is because I have given you my daughter and I drink to her health. The vessel is refilled and offered to the head man. Who takes it, and enquiries of the father of the girl why he is to drink. the reply is, because I have given my daughter to...s, son, drink to her helth, The questions and answerü are repeated while every one present, according to rank, has a drink. Those who have so drank

at this betrothal ceremony are tooked upon as witnesses to the contract''[9] ಎಂದು ಹೇಳುತ್ತಾರೆ.

ಮದುವೆಯಲ್ಲಿ ಹೆಣ್ಣಿನ ಕಡೆಯವರಿಗೆ ತೆರಿಗೆ ರೂಪದಲ್ಲಿ ಗಂಡಿನ ಕಡೆಯವರು ತೆರವನ್ನು ಕೊಡುತ್ತಾರೆ. ಅದು ಸಾಕಿ ಬೆಳೆಸಿದ ತಂದೆ-ತಾಯಿಗೆ ಹೋಗುತ್ತದೆ. ತಾಯಿಯ ಅಣ್ಣ-ತಮ್ಮಂದಿರಿಗೆ ಕೊಡಲಾಗುತ್ತದೆ. ಏಕೆಂದರೆ ಎಲ್ಲರೂ (ತಾಯಿಯ ತಮ್ಮಂದಿರು ವಿವಾಹವಾಗಿದ್ದರೆ) ಮದುವೆಯಾಗಿದ್ದರೆ ಅವರಿಗೆ ಈ ಹಣವನ್ನು ಕೊಡಲಾಗುತ್ತದೆ. ಅದನ್ನು ಸೋದರಮಾವ ತೆಗೆದುಕೊಂಡು ಇನ್ನು ಸ್ವಲ್ಪ ಹಣ ಸೇರಿಸಿ ಸೊಸೆಗೆ ಯಾವುದಾದರೊಂದು ಸಾಮಾನು ತಂದುಕೊಡಲಾಗುತ್ತದೆ, ಇಲ್ಲದೆ ತಮ್ಮಲ್ಲಿಯೇ ಇಟ್ಟುಕೊಳ್ಳಬಹುದು. ''ಹಿಂದೆ ತೆರದಲ್ಲಿ ಸಣ್ಣತೆರ ಮತ್ತು ದೊಡ್ಡತೆರ ಎಂದು ಎರಡು ಬಗೆಗಳಿದ್ದವು. ಸಣ್ಣ ತೆರದ ಮೊತ್ತ ಎಪ್ಪತ್ತೊಂದು ರೂಪಾಯಿ ಇದ್ದರೆ ದೊಡ್ಡ ತೆರದ ಮೊತ್ತ ತೊಂಬತ್ತಾರು ರೂಪಾಯಿಗಳು. ಅನುಕೂಲವಿದ್ದವರು ದೊಡ್ಡ ತೆರ ಕೊಟ್ಟರೆ, ಬಡವರು ಸಣ್ಣ ತೆರ ಕೊಡುವ ಪದ್ಧತಿ ಇದೆ''.[10] ಇಂದಿಗೂ ಸಹ ತೆರ ಕೊಡುವ ಪದ್ಧತಿಯು ಮದುವೆಯಲ್ಲಿ ಕಂಡುಬರುತ್ತದೆ.

''ಹಿಂದೂ ಧರ್ಮಶಾಸ್ತ್ರಗಳ ಪ್ರಕಾರ ಪ್ರತಿಯೊಬ್ಬ ಸ್ತ್ರೀ ಮತ್ತು ಪುರುಷರೂ ವಿವಾಹವಾಗಲೇಬೇಕು, ವ್ಯಕ್ತಿಯ ಜೀವನದಲ್ಲಿ ಮುಖ್ಯ ಋಣಗಳನ್ನು ತೀರಿಸಬೇಕೆಂದು ಧರ್ಮಶಾಸ್ತ್ರಗಳು ಆದೇಶಿಸುತ್ತದೆ. ದೇವ ಋಣ, ಗುರುಋಣ ಮತ್ತು ಪಿತೃಋಣಗಳೇ ಈ ಮೂರು ಋಣಗಳಾಗಿವೆ. ಈ ಋಣಗಳನ್ನು ಕ್ರಮವಾಗಿ ಯಜ್ಞಯಾಗಾದಿ ವೇದಾಧ್ಯಯನ ಮತ್ತು ಪುತ್ರ ಸಂತತಿಗಳ ಮೂಲಕ ತೀರಿಸಬೇಕೆಂದಿದೆ. ಪುತ್ರನಿಲ್ಲದ ವ್ಯಕ್ತಿಗೆ ಅಥವಾ ಸಂತಾನಹೀನನಿಗೆ ಮೋಕ್ಷ ದೊರೆಯಲಾರದೆಂಬ ನಂಬಿಕೆಯು ವಿವಾಹ ಸಂಸ್ಥೆಗೆ ಧಾರ್ಮಿಕ ಸೋಂಕನ್ನು ನೀಡಿದೆ. ವಿವಾಹಗಳು ಸ್ವರ್ಗದಲ್ಲಿ ನೆರವೇರುತ್ತವೆ ಮತ್ತು ಪರಮಾತ್ಮನು ವಿವಾಹ ಸಂಸ್ಥೆಯನ್ನು ಹುಟ್ಟಿಸಿ ಬೆಳೆಸಿದನೆಂಬ ಪ್ರತೀತಿಯು, ವಿವಾಹವು ಅನಾದಿ ಹಾಗೂ ಪವಿತ್ರವಾದುದೆಂಬ ಭಾವನೆ ಜನಮನದಲ್ಲಿ ಬೇರೂರಲು ಕಾರಣವಾಗಿದೆ''.[11] ಒಂದು ಹೆಣ್ಣಿಗೆ ಒಂದು ಗಂಡನ್ನು ದೇವರು ಜೋಡಿಸಿರುತ್ತಾನೆ ಎಂದು ಹಿರಿಯರು ಹೇಳುತ್ತಾರೆ.

ಹಿಂದಿನ ದಿನಗಳಲ್ಲಿ ಒಪ್ಪಿಗೆಯಾದ ಮೇಲೆ ಕುಲದ ಮುಖ್ಯಸ್ಥರು ಎಲ್ಲರೂ ಸೇರಿ ಸಾರಾಯಿ ಅಂಗಡಿಗೆ ಹೋಗುವರು. ಗಂಡಿನ ತಂದೆಯು ಹೆಣ್ಣಿನ ತಂದೆಗೆ ಸಾರಾಯಿಯನ್ನು ಕುಡಿಸುತ್ತಾನೆ. ಇದನ್ನೆ ಇಲ್ಲಿ ಈ ರೀತಿ ಹೇಳಲಾಗುತ್ತದೆ.

''ನಿನಗೆ ಗೊತ್ತಾ...............
ನಾನ್ಯಾಕೆ ನಿನಗೆ ಸಾರಾಯಿ
ಕೊಡಿಸುತ್ತಿದ್ದೇನೆಂದು'

ಎಂದು ಪ್ರಶ್ನಿಸುತ್ತಾನೆ,

'ನಾನು ನನ್ನ ಮಗಳನ್ನು ನಿನ್ನ ಮಗನಿಗೆ
ಕೊಡಲು ಒಪ್ಪಿರುವುದರಿಂದ.' ಎಂದು ಹೆಣ್ಣಿನ

ತಂದೆ ಉತ್ತರ ಕೊಡುವನು. ಅನಂತರ ಕುಲದ ಹಿರಿಯರು ಮತ್ತೆ ಕುಡಿಕೆಯನ್ನು ತುಂಬಿಸಿ ಹೆಣ್ಣಿನ ತಂದೆಗೆ ಕೊಟ್ಟು ಅದೇ ಪ್ರಶ್ನೆ ಕೇಳುವನು. ಆಗ ಆತ "ನಾನು ನನ್ನ ಮಗಳನ್ನು.....

ಅವರ ಮಗನಿಗೆ ಕೊಡಲು ಒಪ್ಪಿದ್ದೇನೆ

ಅವರು ಚೆನ್ನಾಗಿರಲೆಂದು ಕುಡಿಯುತ್ತಿದ್ದೇನೆ"[೭] ಎಂದು ಉತ್ತರಿಸುವರು.

ಮದುವೆ ಸಂದರ್ಭಗಳಲ್ಲಿಯೂ ಕೆಲವರು ಕುಡಿತದ ಅಮಲಿನಲ್ಲಿಯೇ ಇರುವುದು ಸಣ್ಣಪುಟ್ಟ, ಜಗಳಗಳನ್ನು ಉಂಟುಮಾಡುತ್ತವೆ.

ಮದುವೆಯ ಹಿಂದಿನ ದಿನ ಮದುಮಗ ಅಥವಾ ಮದುಮಗಳನ್ನು ಅಲಂಕರಿಸುತ್ತಾರೆ. ಅಲ್ಲಿ ಕರಿ ಕಂಬಳಿಯಲ್ಲಿ ಸಾಸುವೆ ಕಟ್ಟಿ ರಚಿಸಿ, ಅದರ ಮೇಲೆ ಕುಳ್ಳಿರಿಸಿ, ಮೈಗೆಲ್ಲ ಅರಿಸಿನ ಹಚ್ಚಿ, ವಿಭೂತಿ ಕಟ್ಟು ಹಚ್ಚಿ, ಕುಂಕುಮ ಇಟ್ಟು. ಜೊತೆಗೆ ಸೊಸೆಯಾದವಳನ್ನು ಅಥವಾ ಹೆಣ್ಣಿಗೆ ತಂಗಿ ಮತ್ತು ಅಳಿಯನಾಗುವವರನ್ನು ಮದುಮಕ್ಕಳನ್ನು ಮಾಡಲಾಗುತ್ತದೆ. ಎಲ್ಲರೂ ಅಕ್ಷತೆ ಹಾಕಿ, ಆರತಿ ಬೆಳಗುತ್ತಾರೆ. ಅದಾದ ನಂತರ ಸುರಿಗಿ ನೀರು ಹಾಕಲು ಸಿದ್ಧರಾಗುತ್ತಾರೆ. ಹೊರಗಡೆ ಎರಡು ಒನಕೆ ಮೇಲೆ ಕುಳ್ಳಿರಿಸಿ ಸ್ನಾನವನ್ನು ಮಾಡಿಸಿ, ಹೊಸಬಟ್ಟೆ ತೊಡಿಸಿ ಆರತಿ ಬೆಳಗಿ ದೇವಾಲಯಕ್ಕೆ ಕರೆದುಕೊಂಡು ಹೋಗುತ್ತಾರೆ. ಅವರ ಕೈಯಲ್ಲಿ ಕತ್ತಿ ನಿಂಬೆಹಣ್ಣು ಇರುತ್ತದೆ. ಹಸಿ ಮೈಯಲ್ಲಿ ಗಾಳಿ ಸೇರಿಕೊಳ್ಳುವುದನ್ನು ತಡೆಗಟ್ಟಲು ಈ ರೀತಿ ಮಾಡಲಾಗುತ್ತದೆ. ಅದೇ ರೀತಿಯಾಗಿ ಮದುಮಗಳು ಸಿದ್ಧಳಾಗುತ್ತಾಳೆ. ಮದುವೆ ಮುಂಚೆಯೇ ಮನೆ ಸ್ವಚ್ಛ ಮಾಡಲಾಗುತ್ತದೆ. ಕೆಂಪು ಮಣ್ಣು ಅಥವಾ ಸುಣ್ಣದಿಂದ ಕಲಸಿದ ಬಣ್ಣದಲ್ಲಿ ಇದನ್ನು ಮಾಡಲು ಯಾರ ಹೆಸರು ಬಂದಿರುತ್ತದೆಯೋ ಅವರ ಎರಡು ಕೈಗಳನ್ನು ಬಣ್ಣದಲ್ಲಿ ಅದ್ದಿ ಮನೆಯ ಗೋಡೆಯ ಮೇಲೆ ಅಥವಾ ಮನೆಯ ಸುತ್ತಲು ಗಂಡು ಹೆಣ್ಣು ಕೈಯಿಂದ ಹಚ್ಚಲಾಗುತ್ತದೆ. ಇದನ್ನು ಬ್ರಾಹ್ಮಣರಿಂದ ಕೇಳಿಸಿ ಯಾರ ಅದೃಷ್ಟ ಇರುತ್ತದೆಯೋ ಅವರಿಂದ ಈ ಕೆಲಸವನ್ನು ಮಾಡಿಸಲಾಗುತ್ತದೆ.

ಮದುವೆ ದಿನ ಬೆಳಗ್ಗೆ ಗಂಗೆಗೆ ಹೋಗಲಾಗುತ್ತದೆ. ಬಾವಿಗೆ ಅಥವಾ ಬೋರವೆಲ್‌ಗೆ ಹೋಗಿ ಪೂಜೆ ಮಾಡಿಕೊಂಡು ಮದುವೆಯ ಮಂಟಪಕ್ಕೆ ಬರುವುದರೊಳಗೆ ಮಂಟಪದಲ್ಲಿ ಮದುವೆ ಸಿದ್ಧತೆ ಮಾಡಿ ಗಂಡು ಹೆಣ್ಣಿಗೆ ಸ್ನಾನ ಮಾಡಿಸಿ ತಾಳಿ ಕಟ್ಟಲು ಬಿಳಿ ಸೀರೆ, ಬಿಳಿ ಬಟ್ಟೆಯಿಂದಲೇ ಇರಬೇಕಾಗುತ್ತದೆ. ಬಾಸಿಂಗ ಇವರಲ್ಲಿ ಇರುವುದಿಲ್ಲ ಬದಲಿಗೆ ಟೋಪಿ ಧರಿಸಿರುತ್ತಾರೆ. ಬ್ರಾಹ್ಮಣರಿಂದ ಗೌರಿ ಪೂಜೆ ಮಾಡಿಸಿ ಬಿಳಿ ದಾರದಿಂದ ಸುರುಗೆ ದಾರವನ್ನು ಮಾಡಿ ಅದನ್ನು ಗಂಡಿನ ಕೊರಳಿಗೆ ಹಾಕಲಾಗುತ್ತದೆ. ಕೈಗಳಿಗೆ ಕಂಕಣ ಕಟ್ಟಿ ನಂತರ ಹೆಣ್ಣಿಗೆ ತಾಳಿ ಕಟ್ಟಲಾಗುತ್ತದೆ. ಮುಂದೆ ಕಳಸಕ್ಕೆ ಹೂ ಹಾಕಿ ಸಿಂಗರಿಸಿರುತ್ತಾರೆ. ಕಳಸದ ಚಂಬಿನ ಬಾಯಿಗೆ ಕಂಕಣ ಕಟ್ಟಿರುತ್ತಾರೆ. ಗಂಡಿಗೆ ಕಟ್ಟುವ ಕಂಕಣಕ್ಕೆ ಒಂದು ಅರಿಸಿನ ಕೊಂಬು, ಒಂದು ತಾಮ್ರದ ಉಂಗುರವನ್ನು ಕಟ್ಟಿ ಬಲಗೈಗೆ ಕಟ್ಟುತ್ತಾರೆ. ಶಾಸ್ತ್ರ ನಡೆಯುತ್ತಿರುವಾಗ ಅಲ್ಲಿ ಸೇರಿದ ಹೆಂಗಸರು ಸೋಬಾನ ಪದಗಳನ್ನು ಹೇಳುತ್ತಾರೆ. ಇಂದು ಸೋಬಾನ ಪದ ಹಾಡುವವರ ಸಂಖ್ಯೆ ಕಡಿಮೆಯಾಗಿದೆ. ಹಿಂದಿನ ಕಾಲದಲ್ಲಿ ೫ ಬಾರಿ ನೀರು

ಹಾಕಲಾಗುತ್ತದೆ. ಆದರೆ ಇಂದು ಮೂರು ನೀರು ಮಾತ್ರ ಹಾಕಲಾಗುತ್ತದೆ. ಮದುವಣಗಿತ್ತಿ ಶಾಸ್ತ್ರ ಮಾಡುವಾಗ, ಧಾರೆ ಮುಹೂರ್ತದ ಮೊದಲು ಗಂಡಿನ ಮನೆಯಲ್ಲಿ ಒಂದು ಬಾರಿ ನೀರು ಹಾಕಲಾಗುತ್ತದೆ. ಗಂಡು ಹೆಣ್ಣಿನ ಜೊತೆ ಕಳಸಗಿತ್ತಿ ಯಾವಾಗಲೂ ಇರುತ್ತಾರೆ. ಕಳಸ ಹಿಡಿದವಳು ಅಕ್ಕ ಇಲ್ಲವೇ ಚಿಕ್ಕಮ್ಮ ಆಗಿರುತ್ತಾಳೆ. ಅವರಿಗೆ ಪ್ರಸ್ತ ಮಾಡುವವರೆಗೆ ಜೊತೆ ಇರಬೇಕಾಗುತ್ತದೆ. ನಂತರ ಗಂಡು ಹೆಣ್ಣು ಮಾತ್ರ ಎಲ್ಲಿಗಾದರೂ ಹೋಗಬಹುದು. ಧಾರೆಯಲ್ಲಿ ಗಂಗೆಪೂಜೆ ಮಾಡಿ ತಂದಂತಹ ನೀರಿನ ಗಡಿಗೆಯನ್ನು ಪೂಜೆ ಮಾಡಲಾಗುತ್ತದೆ. ಅದನ್ನು ೫ ದಿನಗಳ ನಂತರ ಕಾಲುವೆ, ಬಾವಿಗೆ ಹಾಕಲಾಗುತ್ತದೆ. ಒಂದು ತಟ್ಟೆಯಲ್ಲಿ ಕರಿಮಣಿ, ಬಿಳಿದಾರ, ಕೊಬ್ಬರಿ ಬಟ್ಟಲು ಬೆಲ್ಲ ಇರುತ್ತದೆ. ಗಂಡು ಹೆಣ್ಣಿನ ಕೊರಳಿಗೆ ಹವಳದ ಸರಗಳನ್ನು ಹಾಕಿರುತ್ತಾರೆ. ಮದುಮಗನಿಗೆ ಬಿಳಿ ಪಂಚೆಯು ೧೬ ಗಜ ಆಗಿರಬೇಕು. ಚಪ್ಪರಕ್ಕೆ ಅತ್ತಿಕೊನೆ, ಬಾಳೆ ದಿಂಡು, ಮಾವಿನ ಎಲೆಗಳನ್ನು ಕಟ್ಟಲಾಗುತ್ತವೆ. ಮದುವೆ ಧಾರೆಯಲ್ಲಿ ಸ್ತ್ರೀಯರು ನಾಲ್ಕು ಕಡೆ ಗಡಿಗೆ ಹಿಡಿದುಕೊಂಡು ಕುಳಿತಿರುತ್ತಾರೆ. ಮುಂದೆ ವಾದ್ಯದವರು ಇರುತ್ತಾರೆ. ಹಾಲುಗಂಭಗಳು ಇಲ್ಲಿ ಮುಖ್ಯವಾಗುತ್ತದೆ.

ಆರ್. ಇ. ಎಂಥೋವನ್ ಅವರು ಈ ಬಗೆಗೆ ''Then a branch of the Khair or eatechu tree is felled and dropped into the nearest well, At midnight the five married women. singing songs go to the well, and, after each has drawn a pot fall of water, take the branch out of the well the brach is then plauted opposite the front door''[೮] ಎಂದು ವಿಷಯವನ್ನು ತಿಳಿಸಿದ್ದಾರೆ.

ಹಿಂದೆ ರಾತ್ರಿ ಸಮಯದಲ್ಲಿ ಮದುವೆಗಳನ್ನು ಏಕೆ ಮಾಡುತ್ತಿದ್ದರು ಎಂದು ಕೇಳಿದರೆ, ನಮ್ಮ ಮದುವೆಗಳನ್ನು ಬ್ರಾಹ್ಮಣರು ನೋಡಬಾರದೆಂದು ರಾತ್ರಿಯಲ್ಲಿ ಮದುವೆ ಮಾಡುತ್ತಿದ್ದುದಾಗಿ ಹಿರಿಯರು ಹೇಳುತ್ತಿದ್ದರು ಎನ್ನುತ್ತಾರೆ. ಆದರೆ ಈಗ ಹೆಸರು, ಕುಲ ಮತ್ತು ಮುಹೂರ್ತವನ್ನು ಕೇಳಿ ವಿವಾಹ ನಿಶ್ಚಯಿಸುತ್ತಾರೆ. ಈಗೆಲ್ಲ ರಾತ್ರಿ ಮದುವೆಗಳು ನಡೆಯುವುದಿಲ್ಲ. ಧಾರೆಯಲ್ಲಿ ಬ್ರಾಹ್ಮಣರಿಗೆ ಪ್ರವೇಶವಿದೆ, ಅತ್ತಿಗೊನೆ, ಬಾಳೆಗೊನೆ, ಮಾವಿನ ಕೊನೆಗಳು ಸುಖ, ಶಾಂತಿ ಮತ್ತು ಸಮೃದ್ಧಿಯ ಸಂಕೇತವಾಗಿರುವುದರಿಂದ ಇವನ್ನು ಇಲ್ಲಿ ತರಲಾಗುತ್ತದೆ.

ಹಿಂದೆ ತಾಳಿಗೆ ಬದಲಾಗಿ ಅರಿಸಿನ ಕೊಂಬು ಕಟ್ಟಿದ ದಾರವನ್ನು ಅಥವಾ ಕರಿಮಣಿ ಪೋಣಿಸಿದ ದಾರವನ್ನು ಹೆಣ್ಣಿನ ಕುತ್ತಿಗೆಗೆ ಕಟ್ಟುತ್ತಿದ್ದ ಬಗೆಗೆ ದಾಖಲೆಗಳು ಇವೆ. ಇ ಥರ್ಸ್ಟನ್‌ನ ಅವರು ಈ ಬಗೆಗೆ ಒಂದು ಕಥೆಯನ್ನು ಸಂಗ್ರಹಿಸಿದ್ದಾರೆ. ''Once upon a time a bride groom forget to bring the tali, and he was told off to procure the necessary piecc of gold from a gold smith. The parties waited and waited but the youngman did not return, since then the string of beads has been used as a marriage badge.'' ಇನ್ನೊಂದು ಕಥೆ ''ನದಿ ದಂಡೆಯ ಮೇಲೆ ಇಟ್ಟು ಬಂದಿದ್ದ ತಾಳಿಯನ್ನು ತರಲು ಹೋದಾಗ ಅದು ಕಾಣೆಯಾಗಿತ್ತಂತೆ ಅದಕ್ಕಾಗಿ

ಮತ್ತೊಂದು ಹೊಸ ತಾಳಿ ತರಲು ಹೋದ ವ್ಯಕ್ತಿ ಮರಳಲಿಲ್ಲವಂತೆ ಅದರಿಂದ ಅರಶಿನ ತುಂಡು ದಾರದಲ್ಲಿ ಕಟ್ಟಿ ಹಾಕಲಾಗಿತ್ತು ಎಂದು ತಿಳಿದುಬರುತ್ತದೆ".[೯]

ತಮಿಳುನಾಡು ಪ್ರದೇಶದಲ್ಲಿರುವ ಮತ್ತು ಆಂಧ್ರಪ್ರದೇಶದಲ್ಲಿರುವ ಜನರು ಅರಶಿನದ ದಪ್ಪದಾರದಿಂದ ತಾಳಿಯನ್ನು ಕಟ್ಟಿಕೊಳ್ಳುತ್ತಾರೆ. ಕರ್ನಾಟಕದಲ್ಲಿ ಮಾತ್ರ ಕರಿಮಣಿ ಸರವನ್ನು ಜೊತೆಗೆ ಹವಳವು ಇರುವುದನ್ನು ನೋಡಬಹುದು. ತಂದೆ ಕಡೆ, ಅತ್ತೆಕಡೆ ಎರಡು ತಾಳಿ ಕಟ್ಟಲಾಗುತ್ತದೆ. ತಾಳಿ ನಂತರ ಬ್ರಾಹ್ಮಣರು ಅರುಂಧತಿ ನಕ್ಷತ್ರವನ್ನು ಆಕಾಶದಲ್ಲಿ ದಂಪತಿಗಳಿಗೆ ತೋರಿಸುತ್ತಾರೆ. ನಂತರ ಆಶೀರ್ವಾದ ಮಾಡಿ ಮದುವೆ ಊಟ ಮಾಡಿಕೊಂಡು, ಮುಯ್ಯಿ ಮಾಡಿ ಹೋಗುತ್ತಾರೆ. ನಂತರ ದಂಪತಿಗಳಿಗೆ ಮನೋರಂಜನೆಗಾಗಿ ಮತ್ತೆ ಅವರಲ್ಲಿ ಅನ್ಯೋನ್ಯತೆ ಬರಲು ಬೆಲ್ಲ, ಕೊಬ್ಬರಿ, ಎಲೆ ಅಡಿಕೆಯ ಶಾಸ್ತ್ರವನ್ನು ಮಾಡಲಾಗುತ್ತದೆ. ಹಾಲಿನಲ್ಲಿ ಉಂಗುರ ಹುಡುಕುವ ಶಾಸ್ತ್ರವು ಇದೆ. ತಾಳಿಯಾದ ಮರುದಿನ ಗಂಡನ ಮನೆಯಲ್ಲಿ ಈ ಶಾಸ್ತ್ರ ನಡೆಸಿ, ಅಲ್ಲಿಯು ಮುಯ್ಯಿ ಮಾಡಲಾಗುತ್ತದೆ. ಮರುದಿನ ತವರು ಮನೆಗೆ ಬರಬೇಕಾಗುತ್ತದೆ. ನಂತರ ೫ ದಿನದಲ್ಲಿ ಅವರಿಬ್ಬರಿಗೂ ಗಂಗೆ ಪೂಜೆಯನ್ನು ಮಾಡಿಸುತ್ತಾರೆ. ಓಕಳಿ ನೀರು ಕಲಿಸಿ ಗಂಡು ಹೆಣ್ಣಿಗೆ ಹಾಕುವುದು ಹೆಣ್ಣು ಗಂಡಿಗೆ ನೀರು ಹಾಕುವ ಶಾಸ್ತ್ರ ಮಾಡುತ್ತಾರೆ.

ನಂತರ ಮದುವೆಯಾಗಿ ೬ ದಿನಕ್ಕೆ ಒಳ್ಳೆಯ ಮುಹೂರ್ತ ನೋಡಿಕೊಂಡು ಬಂದು ಗಂಡು ಹೆಣ್ಣಿಗೆ ಪ್ರಸ್ತಮಾಡಲಾಗುತ್ತದೆ. ಆ ಕಾರ್ಯವನ್ನು ಹೆಣ್ಣಿನ ಮನೆಯಲ್ಲಿ ಮಾಡಲಾಗುತ್ತದೆ. ಹೆಣ್ಣಿನ ಮನೆಯವರು ಹೊಸ ಹಾಸಿಗೆ, ಹೊದಿಕೆ ತಂದಿರುತ್ತಾರೆ. ಅದನ್ನು ಸೋದರ ಸೊಸೆಯಾದವಳು ಹಾಸಿಗೆ ಹಾಕಿ ಬರಬೇಕಾಗುತ್ತದೆ. ಹೆಣ್ಣು ಗಂಡನ್ನು ಒಂದು ಮನೆಯಲ್ಲಿ ಕೂಡಿಹಾಕಿ ಅಲ್ಲಿರುವವರೆಲ್ಲ ಬೇರೆ ಮನೆಯಲ್ಲಿರುತ್ತಾರೆ. ಮುಂಜಾನೆ ಎದ್ದು ದಂಪತಿಗಳಿಗೆ ಸ್ನಾನ ಮಾಡಿಸಿ ದೇವಾಲಯಕ್ಕೆ ಹೋಗಿ ಪೂಜೆ ಮಾಡಿಕೊಂಡು ಬರುತ್ತಾರೆ. ಹಾಸಿದ ಹೊದಿಕೆಯ ಕೆಳಗೆ ಗಂಡು ತನಗೆ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಇಟ್ಟಿರುತ್ತಾನೆ. ಅದು ಹಾಸಿಗೆ ಹಾಕಿದವಳಿಗೆ ಸೇರುತ್ತದೆ. ಅದು ಈ ಸಮುದಾಯದಲ್ಲಿ ಕಂಡುಬರುವ ಪದ್ಧತಿಯಾಗಿದೆ. ದೇವಾಲಯದಿಂದ ಬಂದ ದಂಪತಿಗಳು ದೇವರ ಕೋಣೆಯಲ್ಲಿ ಸಿಹಿ ಊಟವನ್ನು ಮಾಡುತ್ತಾರೆ. ಇಲ್ಲಿಗೆ ಮದುವೆಯ ಪದ್ಧತಿಗಳು ಮುಗಿಯುತ್ತದೆ. ಮುಂದೆ ಆಷಾಢಮಾಸದಲ್ಲಿ ಅತ್ತೆ ಸೊಸೆಯರು ಒಂದೇ ಬಾಗಿಲಿನಲ್ಲಿ ಓಡಾಡಬಾರದೆಂದು ಸೊಸೆಯನ್ನು ತವರುಮನೆಗೆ ಕಳಿಸುವ ಪದ್ಧತಿ ಇದೆ. ಗತ ಬಿದ್ದಾಗ ಹೆಣ್ಣು ತವರು ಮನೆಯಲ್ಲಿರುತ್ತಾಳೆ. ಶುಭ ಸುದ್ದಿ ತಿಳಿದು ಬಂದರೆ, ಅಂದರೆ ಗರ್ಭಿಣಿ ಎಂದು ತಿಳಿದುಬಂದರೆ ಮನೆಯವರಿಗಿಲ್ಲ ಸಂತೋಷ ಸಂಗತಿಯಾಗಿರುತ್ತದೆ. ಐದು ಅಥವಾ ಏಳನೇ ತಿಂಗಳಲ್ಲಿ ತವರು ಮನೆಗೆ ಕಳಿಸಲಾಗುತ್ತದೆ. ಐದನೇ ತಿಂಗಳಲ್ಲಿ ನೀರು ಬುತ್ತಿ ತವರು ಮನೆಯವರು ತೆಗೆದುಕೊಂಡು ಬಂಧುಗಳೊಂದಿಗೆ ಹೋಗುತ್ತಾರೆ. ಅವಳಿಗೆ ಸೀಮಂತ ಮಾಡಿ ೭ನೇ ತಿಂಗಳಲ್ಲಿ ತವರಿಗೆ ಕರೆತರಲಾಗುತ್ತದೆ. ಹೆರಿಗೆಯಾಗಿ ೫ನೇ ತಿಂಗಳ ವರೆಗೆ ತವರು ಮನೆಯಲ್ಲೆ ಇರುತ್ತಾರೆ.

ಮಾನವ ಜೀವರಾಶಿಯ ಅಸ್ತಿತ್ವ ಫಲವಂತಿಕೆಯ ಮೇಲೆ ನಿಂತಿದೆ. ಒಂದು ಜೀವ ಮತ್ತೊಂದು ಜೀವಕ್ಕೆ ಜನ್ಮನೀಡುವ ಶಕ್ತಿಯೇ ಫಲವಂತಿಕೆ. ಫಲವಂತಿಕೆ ಎಂದರೆ ಗರ್ಭಧಾರಣ ಶಕ್ತಿ. ಇದು ಪ್ರಾಣಿ, ಪಕ್ಷಿ, ಸಸ್ಯ, ಮಾನವ ಎಂಬ ಭೇದವಿಲ್ಲದೆ ಎಲ್ಲ ಜೀವರಾಶಿಗಳಲ್ಲಿಯೂ ಗೋಚರಿಸುವ ಸಾಮಾನ್ಯ ಅಂಶ. ನಿಸರ್ಗದ ಅನಂತ ಜೀವರಾಶಿಗಳನ್ನು ಗಮನಿಸಿದಾಗ ಮಾನವ ಭೂಮಿಯನ್ನು ಅದ್ಭುತ ಫಲವಂತಿಕೆಯ ಮೊತ್ತವೆಂದು ಭಾವಿಸಿರುವ ಸಾಧ್ಯತೆಯನ್ನು ಬುಡಕಟ್ಟು ಸಂಸ್ಕೃತಿಯಲ್ಲಿರುವ ಕೆಲವೊಂದು ಆಚರಣೆಗಳಿಂದ ವ್ಯಕ್ತವಾಗುತ್ತದೆ. ಮಹಿಳೆಗೆ ನಿಸರ್ಗ ನೀಡಿದ ವಿಶಿಷ್ಟ ಕೊಡುಗೆಯೆಂದರೆ ಗರ್ಭಧಾರಣಾ ಶಕ್ತಿ. ಆಕೆಗೆ ಸಮಾಜದಲ್ಲಿ ಸ್ಥಾನಮಾನವೇನಾದರೂ ದೊರೆತಿರುವುದು ಈ ಕಾರಣ ದಿಂದಲೇ ಎಂಬುದು ಸತ್ಯಸಂಗತಿ. ಫಲವಂತಿಕೆಯಿಂದಾಗಿ ಹೆಣ್ಣನ್ನು ನಿಸರ್ಗಕ್ಕೆ ಹೋಲಿಸಲಾಗುತ್ತದೆ. ಹೆಣ್ಣಿನ ಗರ್ಭಧಾರಣ ಶಕ್ತಿ ಮತ್ತು ಭೂಮಿಯ ಸಸ್ಯಧಾರಣ ಶಕ್ತಿಗೂ ಸಂಬಂಧವಿರುವುದನ್ನು ನಾವು ನೋಡುತ್ತೇವೆ.

''ಗದ್ದೆಗೆ ಹಸಿರು ಚಂದ, ಹೆಂಗಸಿಗೆ ಬಸಿರು ಚಂದ'' ಎಂಬ ಗಾದೆಯನ್ನು ನೋಡಬಹುದು. ಫಲ ಬಿಡುವ ವೃಕ್ಷಕ್ಕೆ ಹೆಣ್ಣನ್ನು ಹೋಲಿಸಲಾಗುತ್ತದೆ. ಒಂದು ಹೆಣ್ಣು ಋತುಮತಿಯಾದ ಮೇಲೆ ಮಧ್ಯವಯಸ್ಸಿನಲ್ಲಿ ಆಕೆಯ ಋತುಚಕ್ರ ನಿಲ್ಲುವವರೆಗೆ ಇರುವ ಕಾಲವನ್ನು ಫಲವಂತಿಕೆಯ ಕಾಲ ಎಂದು ಗುರುತಿಸುತ್ತೇವೆ. ಜನಪದರು ತಮ್ಮ ಅನುಭವದಿಂದ ಹೆಣ್ಣಿನ ಸೃಷ್ಟಿಶಕ್ತಿಯನ್ನು ಗುರುತಿಸಿದ್ದರು. ಆದುದರಿಂದಲೆ ಋತುಮತಿ, ವಿವಾಹ, ಗರ್ಭಧಾರಣೆಯಂಥ ಸಂದರ್ಭಗಳಲ್ಲಿ ಕೆಲವೊಂದು ಆಚರಣೆಗಳನ್ನು ಮಾಡಲಾಗುತ್ತದೆ. 'ಕುಂತಾಗ ಬರಬ್ಯಾಡ, ನಿಂತಾಗ ಬರಬ್ಯಾಡ, ಮಲಗಿದಾಗ ಬರಬ್ಯಾಡ' ಎಂಬ ಮಾತನ್ನು ಸೂಕ್ಷ್ಮವಾಗಿ ಗುರುತಿಸಿದ್ದಾರೆ.

ಸಾವು

ಸಾಮಾನ್ಯವಾಗಿ ಎಲ್ಲ ಜನಾಂಗದವರ ಆಚರಣೆಯಲ್ಲಿರುವಂತೆ ಕೊರವರಲ್ಲಿಯೂ ಸಾವಿನ ಸಂದರ್ಭದಲ್ಲಿ ಕೆಲವು ಆಚರಣೆಗಳಿವೆ. ಯಾವ ಮನೆಯಲ್ಲಿ ಸಾವು ಸಂಭವಿಸುತ್ತದೆಯೋ ಆ ಮನೆಯ ಮುಂದೆ ಬೆಂಕಿ ಹಾಕುತ್ತಾರೆ. ಕೆಲವರು ರಾತ್ರಿ ವೇಳೆಯಲ್ಲಿ ಸತ್ತರೆ ಭಜನೆಯು ನಡೆಯುತ್ತದೆ. ಯಾವುದೇ ವ್ಯಕ್ತಿ ಸತ್ತಾಗ ಅವಳ ಅಥವಾ ಅವನ ತಲೆಯ ಮೇಲೆ ದೀಪ, ಊದುಬತ್ತಿ, ಹಚ್ಚುತ್ತಾರೆ ಅದು ಅವರನ್ನು ಮಣ್ಣು ಮಾಡುವವರೆಗೆ ಹಾಗೆಯೇ ಇರುತ್ತದೆ. ಶವವನ್ನು ಒಂದು ದಿನ ಮಾತ್ರ ಇರಿಸಿಕೊಳ್ಳುತ್ತಾರೆ. ಸತ್ತವ್ಯಕ್ತಿಯ ಹೊಟ್ಟೆಯ ಮೇಲೆ ಉಪ್ಪಿನ ಗಂಟು ಇಡಲಾಗುತ್ತದೆ. ಏಕೆಂದರೆ ಹೊಟ್ಟೆ ಉಬ್ಬಿ ಒಡೆಯಬಾರದೆಂದು ಈ ರೀತಿ ಮಾಡಲಾಗುತ್ತದೆ. ಬಂಧು ಬಳಗ, ಮಿತ್ರರುಗಳಿಗೆ ತಿಳಿಸುತ್ತಾರೆ. ಬಂದವರೆಲ್ಲ, ಹೂವು, ಕಾಯಿ ಕರ್ಪೂರ, ಊದಿನಕಡ್ಡಿ ಕಡ್ಡಾಯವಾಗಿ ತಂದೆ ತರುತ್ತಾರೆ. ಹಾರ ಹಾಕಿ, ಊದಿನ ಕಡ್ಡಿ ಬೆಳಗುತ್ತಾರೆ. ಆ ದಿನ ಮನೆಯಲ್ಲಿ ಬೆಂಕಿ ಹಾಕುವುದಿಲ್ಲ. ಅಕ್ಕ ಪಕ್ಕದವರೇ ಅವರಿಗೆ ಟೀ ಕಾಫಿ ತಂದುಕೊಡುತ್ತಾರೆ. ಬಂದವರೆಲ್ಲರೂ ದುಃಖತಪ್ತವಾದ ಕುಟುಂಬಕ್ಕೆ ಸಮಾಧಾನ ಮಾಡುತ್ತಿರುತ್ತಾರೆ. ಎಲ್ಲರೂ ಬಂದ ಮೇಲೆ ಶವ ತೆಗೆದುಕೊಂಡು ಹೋಗಲು ಹೇಳುತ್ತಾರೆ.

ಸತ್ತ ವ್ಯಕ್ತಿಗೆ ಸ್ನಾನ ಮಾಡಿಸಿ, ಬಟ್ಟೆ ಉಡಿಸಿ ಹಣೆಗೆ ವಿಭೂತಿ ನಾಮ ಇಟ್ಟು, ಕುಂಕುಮ ಇಟ್ಟು ಸಿದ್ಧ ಮಾಡಲಾಗುತ್ತದೆ. ಬಾಯಿಗೆ ಎಲೆ ಅಡಿಕೆ ಕುಟ್ಟಿ ಇಟ್ಟಿರುತ್ತಾರೆ. ಹೊಸ ಗಡಿಗೆ, ಮುಚ್ಚಳ ತಂದು ಕೂಳು ಮಾಡಿ (ಅನ್ನಮಾಡಿ) ಶವಕ್ಕೆ ಹೂ ಹಾಕಿ, ಹೆಂಡತಿಯನ್ನು ಪಕ್ಕಕ್ಕೆ ಕೂರಿಸಿ ಆಕೆಗೆ ಮಡಿಲಕ್ಕಿ ಹಾಕಲಾಗುತ್ತದೆ. ಮುತ್ತೈದೆಯ ಕೊನೆ ಮಡಿಲಕ್ಕಿ ಇದಾಗಿದೆ. ಹಿರಿಯ ಮಗ ಅಥವಾ ಕಿರಿಯ ಮಗನಿಗೆ ಬೆಂಕಿಯ ಕುಂಡವನ್ನು ಕೊಡುತ್ತಾರೆ. ಶವವನ್ನು ಚಟ್ಟದ ಮೇಲೆ ಮಲಗಿಸಿ ತೆಗೆದುಕೊಂಡು ಹೋಗುವಾಗ', ಜೊತೆಗೆ ಹೆಂಡತಿಯು ಹೋಗಬೇಕಾಗುತ್ತದೆ. ಮನೆಯಲ್ಲಿ ಆರೋಗ್ಯ ಸರಿಯಿಲ್ಲದವರು ಮತ್ತು ಮಕ್ಕಳು ಉಳದುಬಿಡುತ್ತಾರೆ. ದಾರಿಯುದ್ದಕ್ಕೂ ರಾಗಿ, ಹಣ, ಎಲೆ, ನವಣಕ್ಕಿ, ಮಂಡಕ್ಕಿ ಉಗ್ಗಿಕೊಂಡು ಹೋಗುತ್ತಾರೆ. ಏಕೆಂದರೆ ಸತ್ತ ವ್ಯಕ್ತಿ ಗಾಳಿಯಾಗಿ ಅಥವಾ ದೆವ್ವವಾಗಿ ಮನೆಗೆ ಬರಬಾರದೆಂಬ ನಂಬಿಕೆ ಇಂದಿಗೂ ಇದೆ. ಒಂದು ವೇಳೆ ಆತ್ಮ ಬಂದರೆ ಅವುಗಳನ್ನು ಆರಿಸಿಕೊಂಡು ಬರಲು ಆಗುವುದಿಲ್ಲ ಎಂದು ಈರಮ್ಮಜ್ಜಿ ಹೇಳುತ್ತಾರೆ. ಅತಿಯಾದ ಪ್ರೀತಿ ಇರುವವರೂ ಇವುಗಳೆಲ್ಲ ಅರಿಸಿಕೊಂಡು ಬರುತ್ತಾರೆ. ಚಿಕ್ಕ ಮಕ್ಕಳಾದರೆ ಸೋದರಮಾವ ಕೈಯಲ್ಲಿ ಎತ್ತುಕೊಂಡು ಸ್ಮಶಾನಕ್ಕೆ ಕರೆದೊಯ್ಯುತ್ತಾನೆ. ಮೊದಲೆ ಹೊಲೆಯರಿಗೆ ಗುಂಡಿ ತೋಡಲು ಹೇಳರುತ್ತಾರೆ. ಕುಳಿಗೆ ಹೋಗುವುದಕ್ಕಿಂತ ಸ್ವಲ್ಪ ದೂರದಲ್ಲಿ ಶವವನ್ನು ಇಳಿಸಿ ತಂದ ಕುಳನು ಅಲ್ಲಿಯೇ ಇಟ್ಟು ಹಾಸಿಗೆ ಹೊದಿಕೆಗಳನ್ನು ಬಿಟ್ಟು ಶವವನ್ನು ಮುಂದಕ್ಕೆ ತೆಗೆದುಕೊಂಡು ಹೋಗುತ್ತಾರೆ. ಕುಣಿಯ ಹತ್ತಿರ ಹೋದ ಮೇಲೆ. ಕುಣಿಗೆ ಪೂಜೆ ಮಾಡಿ ದಕ್ಷಿಣ ದಿಕ್ಕಿನಲ್ಲಿ ಬೆತ್ತಲೆಯಲ್ಲಿ ಮಲಗಿಸಿ, ಮೈಮೇಲೆ ಸೊಪ್ಪುಗಳನ್ನು ಹಾಕುತ್ತಾರೆ. ನಂತರ ಮಣ್ಣುಹಾಕುತ್ತಾರೆ. ಬಂದವರೆಲ್ಲರೂ ಮಣ್ಣುಕೊಟ್ಟು ಹೋಗುತ್ತಾರೆ. ಸತ್ತ ವ್ಯಕ್ತಿಯ ಮಣ್ಣು ಎತ್ತರವಾಗಿದ್ದರೆ ಅವರ ಆಯುಷ್ಯ ಇಲ್ಲಿಗೆ ಮುಗಿದಿತ್ತು ಎಂದು ನಂಬಿಕೆ.

ಬಂದವರೆಲ್ಲರೂ ಮಣ್ಣು ಮಾಡಿದ ಜಾಗದಲ್ಲಿ ಕಾಯಿ ಹೊಡೆದು ಕರ್ಪೂರ, ಊದಿನಕಡ್ಡಿ ಹಚ್ಚಿ ಪೂಜೆ ಮಾಡುತ್ತಾರೆ. ನಂತರ ಬೀಗರು ತಂದ ಹೂವಿನ ಹಾರಗಳು ತುಂಬಾ ಇದ್ದರೆ ಅವರು ಸ್ವರ್ಗಕ್ಕೆ ದಾರಿ ಹಿಡಿದಿದ್ದಾರೆ ಎಂಬ ನಂಬಿಕೆ ಒಳ್ಳೆಯ ಮನುಷ್ಯ, ಅದೃಷ್ಟ ಮಾಡಿದನಪ್ಪ ಎಂದು ಹೇಳುತ್ತಾರೆ. ಆ ವ್ಯಕ್ತಿ ಬಳಸುತ್ತಿದ್ದ ವಸ್ತುಗಳನ್ನು ಸ್ಮಶಾನದಲ್ಲಿಯೇ ಬಿಟ್ಟುಹೋಗುತ್ತಾರೆ. ಸತ್ತ ವ್ಯಕ್ತಿಯನ್ನು ಮಣ್ಣು ಮಾಡಿದ ಮೇಲೆ ಹೆಂಡತಿಗೆ ೫ ಜನ ವಿಧವೆಯರಿಂದ ಅವಳ ಮುತ್ತೈದೆತನವನ್ನು ಕಳೆದುಹಾಕುತ್ತಾರೆ (ಹೂ, ಬಳೆ, ಕಾಲುಂಗರ, ತಾಳಿ ಕುಂಕುಮವನ್ನು ತೆಗೆದು ಹಾಕುತ್ತಾರೆ). ನಂತರ ಆ ಮಹಿಳೆ ಯಾರಿಗೂ ಕಾಣದಂತೆ ಮುಖವನ್ನು ಮುಚ್ಚಿಕೊಂಡು ಸಂಜೆಯ ನಂತರ ಮನೆಗೆ ಬರಬೇಕಾಗುತ್ತದೆ. ಅವಳ ಜೊತೆಗೆ ಕೆಲವರು ಇಲ್ಲಿಯೇ ಇರುತ್ತಾರೆ. ಮಣ್ಣು ಮಾಡಿದ ಮೇಲೆ ಬಂಧುಗಳು ದೀಪ ನೋಡಲು ಬರುತ್ತಾರೆ. ಬರುವುದರೊಳಗೆ ಮನೆಯನ್ನು ಸ್ವಚ್ಚವಾಗಿ ಮಾಡಿ, ಸೆಗಣಿಯಿಂದ ಮಾಡಿದ ದೀಪವನ್ನು ಬಾಗಿಲಿಗೆ ಕಾಣುವಂತೆ ಇಡಲಾಗುತ್ತದೆ. ಬಾಗಿಲ ಹೊರಗಡೆ ಹರಳೆಣ್ಣೆ, ನೀರು ಇಟ್ಟಿರುತ್ತಾರೆ. ಬಂದವರೆಲ್ಲರೂ ಕೈ ಕಾಲು ತೊಳೆದುಕೊಂಡು ಕೈಯನ್ನು ಎಣ್ಣೆಯಲ್ಲಿ ಅದ್ದಿ ದೀಪ ನೋಡಿಕೊಂಡು ಹೋಗುತ್ತಾರೆ. ಮನೆಯಲ್ಲಿರುವವರೆಲ್ಲರೂ ಸ್ನಾನ ಮಾಡಿ ಮನೆ ಸ್ವಚ್ಛ ಮಾಡಿರಬೇಕು. ಕೆಲವರು ಕಾಲುವೆಗಳಲ್ಲಿ ಸ್ನಾನ ಮಾಡಿಕೊಂಡು ಬರುತ್ತಾರೆ.

ಶವ ಮೆರವಣಿಗೆಯು ಜನರಿಗೆ ಎದುರು ಬಂದರೆ ಒಳ್ಳೆಯದು. ಸಂಸ್ಕಾರವಾದ ಮೇಲೆ ಜನ ಬರುವವರನ್ನು ನೋಡಬಾರದು ಎಂದು ಹೇಳುತ್ತಾರೆ. ಬಂದವರೆಲ್ಲರೂ ಸತ್ತ ವ್ಯಕ್ತಿಯ ಮನೆಯವರಿಗೆ ಬೀಗರು 'ವಿಷಬಾಯಿ' ತೊಳಸಬೇಕು. (ವಿಷಬಾಯಿ: ಸತ್ತ ಮನೆಯ ಅಣ್ಣ, ಮಗ, ತಮ್ಮಂದಿರುಗಳಿಗೆ ಬೀಗರು ಒಂದು ಲೋಟ ನೀರಿನಿಂದ ಬಾಯಿಯನ್ನು ತೊಳಸುತ್ತಾರೆ. ನಂತರ ಟೀ ಕಾಫಿ ಕುಡಿಸುವುದಕ್ಕೆ ವಿಷಬಾಯಿ ತೊಳಸುವುದು ಎಂದು ಹೇಳುತ್ತಾರೆ) ಚಟ್ಟವನ್ನು ಹೊತ್ತುಕೊಂಡ ನಾಲ್ವರು, ೩ ದಿನದ ಕಾರ್ಯದವರೆಗೆ ಹೆಗಲು ಕೊಟ್ಟವರು ಇರುತ್ತಾರೆ. ಅಥವಾ ೩ನೇ ದಿನ ಕಾರ್ಯಕ್ಕೆ ಇರಲು ಹೇಳುತ್ತಾರೆ. ಮೂರನೇ ದಿನ ಮುಂಜಾನೆಯ ಸತ್ತ ವ್ಯಕ್ತಿ ಇಟ್ಟ ಜಾಗದಲ್ಲಿ ಕೋಳಿ ಅಡಿಗೆ ಮಾಡಿಕೊಂಡು ಸ್ಮಶಾನಕ್ಕೆ ಹೋಗಿ ಅವರಿಗೆ ಇಷ್ಟವಾದ ವಸ್ತುಗಳನ್ನಿಟ್ಟು ಪೂಜೆ ಮಾಡಿಕೊಂಡು ಬರುತ್ತಾರೆ. ಆ ದಿನ ಮಾಂಸದಡಿಗೆ ಮಾಡಲಾಗುತ್ತದೆ. ಇದಕ್ಕೆ ಮೂರು ದಿನದ ಕುಳು ಎಂದು ಕರೆಯುತ್ತಾರೆ. ಕನ್ನಡ ಜಾನಪದ ವಿಶ್ವಕೋಶದಲ್ಲಿ ''ಅಲೆಮಾರಿ ಕೊರವ ಸತ್ತು ಹೋದರೆ ಸಾಧ್ಯವಾದಷ್ಟು ಬೇಗ ತಲೆಯನ್ನು ಉತ್ತರಕ್ಕಿಟ್ಟು ಹೂತು ಬಿಡುವರು ಎಂದು ತಿಳಸುತ್ತಾರೆ. ಆರ್.ಇ. ಎಂಥೋವನ್ ಅವರು ''The dead are either burnt or buried, burying being more common'' ಎಂದಿದ್ದಾರೆ. ವಿಶಾಖಪಟ್ಟಣದಲ್ಲಿ ಯರುಕಳರು ಶವವನ್ನು ನಗ್ನವಾಗಿ ಸುಡುವರೆಂದು ಹಯವದನ ರಾಯರು ಹೇಳಿರುವರು. ಆದರೆ ದಕ್ಷಿಣ ಕರ್ನಾಟಕದ ಕಡೆಗೆ ಹೆಣವನ್ನು ಹುಗಿಯುವುದೇ ರೂಢಿಯಲ್ಲಿದೆ. ತೊನ್ನು ಬಂದಿದ್ದರೆ ಅವರನ್ನು ಬೆಂಕಿಯಲ್ಲಿ ಸುಡಲಾಗುತ್ತದೆ. ಏಕೆಂದರೆ ತೊನ್ನು ಇದ್ದವರನ್ನು ಮಣ್ಣು ಮಾಡಿದರೆ ಮಳೆ ಮತ್ತು ಬೆಳೆ ಬೆಳೆಯುವುದಿಲ್ಲ ಎಂಬ ನಂಬಿಕೆಯಿದೆ. ಅವರನ್ನು ಮತ್ತು ಗರ್ಭಿಣಿ ಸ್ತ್ರೀ ಸತ್ತರೆ ಅವಳನ್ನು ಸುಡುವುದು ಕಂಡುಬರುತ್ತದೆ. ಎರಡು ಜೀವವಿರುವುದರಿಂದ ಗರ್ಭದಿಂದ ಮಗುವನ್ನು ತೆಗೆದು ಸುಟ್ಟುಹಾಕುತ್ತಾರೆ.

ಈ ಪದ್ಧತಿಯನ್ನು ಶ್ರೀ ಎಚ್.ವಿ. ನಂಜುಂಡಯ್ಯ ಮತ್ತು ಅನಂತಕೃಷ್ಣ ಅಯ್ಯರ್ ಅವರು ''The dead are buried. As soon as life if extinet, the body is washed, and a nama marüe in put on the fore head it a male and a kumkuma one if a female. Then it is covered with a new cloth and carried to the burial ground on a bier of bamboos. The carries must, if possible, be all related as agnates to the deceased, As usual, the body is placed on the l chief mourner going round it three times from right to left; breaks a new pot, standing by the head of the corpse and throus rice round about the bier. ನಂತರ ಹೆಣ ಹೊತ್ತವರು ಹೆಗಲು ಬದಲಾಯಿಸುವುದು, ಗಂಡಿಗೆ ಹೆಣವನ್ನು ಇಳಿಸಿ ಪೂಜೆ ಮಾಡುವುದು, ತೆಂಕ ದಿಕ್ಕಿಗೆ ತಲೆ ಇಡುವುದು, ನಂತರ ನೀರಿನ ಹತ್ತಿರ ಹೋಗಿ ಕೈ ಕಾಲು ತೊಳೆದು ಸಾವಿನ ಮನೆಯ ದೀಪ ನೋಡುವ ವಿವರಗಳನ್ನು ಹೇಳಿದ್ದಾರೆ".[೧೦]

ಸತ್ತ ವ್ಯಕ್ತಿಯ ಸುದ್ದಿಯನ್ನು ಬೇರೆ ಸ್ಥಳಗಳಲ್ಲಿರುವ ಬಂಧುಗಳಿಗೆ ಹೊಲೆಯರವನೇ ಹೋಗಿ ಹೇಳಬೇಕೆಂಬ ನಿಯಮವೇನೂ ಕಂಡುಬರುವುದಿಲ್ಲ. ಇಂದು ಸಾರಿಗೆ ವ್ಯವಸ್ಥೆ, ಫೋನ್ ಸಹಾಯದಿಂದ

ಕ್ಷಣದಲ್ಲಿಯೇ ಸಂಬಂಧಿಕರಿಗೆ ತಿಳಿಸಬಹುದು. ''ಮೈಸೂರು ಪ್ರಾಂತ್ಯದ ಕೊರವರ ಶವವನ್ನು ಹೊರಲು ಜನ ಸಿಗುವುದೇ ಕಷ್ಟ ಎಂದು ತಿಳಿದುಬರುತ್ತದೆ. ಒಂದು ವೇಳೆ ಸತ್ತ ವ್ಯಕ್ತಿಯ ಹೆಂಡತಿ ಬಾಲಕಿಯಾಗಿದ್ದಲ್ಲಿ ಅದೇ ದಿನ ಅವಳನ್ನು ಯಾರಾದರೂ ಮದುವೆಯಾಗಿ ಅವಳ ಶವಸಂಸ್ಕಾರ ಯಾತ್ರೆಯಲ್ಲಿ ಪ್ರಮುಖ ಪಾತ್ರ ವಹಿಸುವುದು ಸಂಪ್ರದಾಯವಾಗಿದೆ. ಎರಡು ಅಡಿ ಆಳದ ತಟ್ಟೆಯಾಕಾರದ ಗೋರಿಯನ್ನು ತೆಗೆದು ಅದರಲ್ಲಿ ಶವವನ್ನು ಮಲಗಿಸುವರು. ಅದರ ಮೇಲೆ ಚದುರಿದ ಹಾಗೆ ಮಣ್ಣನ್ನು ತುಂಬಿಸಿ ಮುಖ್ಯ ಶೋಕತಪ್ತ ವ್ಯಕ್ತಿ ಸೀಳಿದ ಬೊಂಬಿನ ತುದಿಯಲ್ಲಿಟ್ಟು ಬೆಂಕಿಯ ಮಡಿಕೆಯನ್ನು ಒಡೆದು ಹಾಕಿ ಸಮಾಧಿಯ ಮೇಲೆ ನೀರಿನ ಮಡಿಕೆಯನ್ನು ಇಡುತ್ತಾರೆ. ರಾತ್ರಿ ವೇಳೆ ನರಿಗಳು ಬಂದು ಶವವನ್ನು ತಿಂದು, ನೀರು ಕುಡಿದು ತಮ್ಮ ಹಸಿವನ್ನು ತೀರಿಸಿಕೊಳ್ಳುತ್ತವೆ. ಇದರಿಂದ ಅವನ ಆತ್ಮ ಬಿಡುಗಡೆ ಪಡೆದು ತನ್ನ ರಾಜ್ಯವನ್ನು ಸೇರಿಕೊಳ್ಳುತ್ತದೆ. ಇನ್ನು ಮೇಲೆ ಅವರಿಂದ ಮಕ್ಕಳು, ಹೆಂಗಸರು, ಗಂಡಸರು ಅಥವಾ ದನಗಳಿಗೆ ಯಾವುದೇ ತೊಂದರೆಯಿಲ್ಲ ಎಂದು ಭಾವಿಸುವರು. ಇದನ್ನು ಶುಭ ಶಕುನ ಎಂದು ನಂಬುವರು. ಆರನೆಯ ದಿನ ಶೋಕತಪ್ತ ವ್ಯಕ್ತಿ ಹುಂಜವನ್ನು ಕೊಂದು ಅದರ ರಕ್ತದಲ್ಲಿ ಅನ್ನವನ್ನು ಕಲೆಸಿ ವೀಳ್ಯೆದೆಲೆ ಮತ್ತು ಅಡಿಗೆಯೊಂದಿಗೆ ಸಮಾಧಿಯ ಬಳಿ ಇರಿಸುವನು. ಕಾಗೆ ಏನಾದರೂ ಅದನ್ನು ಹೊತ್ತುಕೊಂಡು ಹೋದದ್ದೇ ಆದರೆ ಎಲ್ಲವೂ ತೃಪ್ತಿಕರವಾಗಿ ನೆರವೇರಿತು ಎಂದು ಭಾವಿಸುತ್ತಾರೆ".[೧೧] ಇಂದು ಈ ರೀತಿ ನಡೆಯುವುದಿಲ್ಲ. ಅವರಿಗಿಟ್ಟ ಆಹಾರವನ್ನು ಕಾಗೆಗಳೇ ತೆಗೆದುಕೊಂಡು ಹೋಗಬೇಕು ಎಂದು ಹೇಳುತ್ತಾರೆ. ಸತ್ತ ವ್ಯಕ್ತಿಯು ಕಾಗೆಯ ರೂಪದಲ್ಲಿ ಬಂದು ಹೋಗುತ್ತಾನೆ ಎಂದು ತಿಳಿದಿದ್ದಾರೆ.

ಮೂರನೆಯ ದಿನ ಗುಡ್ಡೆ ಪೂಜೆ ಮಾಡುತ್ತಾರೆ. ಸಮಾಧಿ ಹತ್ತಿರ ಹೋಗಿ ಪೂಜೆ ಮಾಡಿಕೊಂಡು ಬರುತ್ತಾರೆ. ಮನೆಯಲ್ಲಿ ಮಾಡಿಕೊಂಡು ಹೋದ ಫಲಾಹಾರ, ಹೂವು, ಹಣ್ಣು ಇಟ್ಟು, ಕಾಯಿ ಒಡೆದು ಪೂಜೆ ಮಾಡುತ್ತಾರೆ. ಪೂಜೆಯಾದ ಮೇಲೆ ಫಲಾಹಾರವನ್ನು ಬಂದಿದ್ದವರೆಲ್ಲರಿಗೂ ಹಂಚಿ ತಿನ್ನುತ್ತಾರೆ. ಬರುವಾಗ ನೀರಿನ ಹತ್ತಿರ ಹೋಗಿ ಕೈ ಕಾಲು ಮುಖ ತೊಳೆದು ಮನೆಗೆ ಬರುತ್ತಾರೆ. ಮನೆಯಲ್ಲಿದ್ದ ಆಹಾರವನ್ನು ಮಾಡಿಕೊಂಡು ತಿನ್ನುತ್ತಾರೆ.

೫ನೇ ದಿನದ ಕಾರ್ಯ ಶವ ಸಂಸ್ಕಾರವಾದ ಐದನೇ ದಿನದಲ್ಲಿ ಹೆಗಲಿಳಿಸುವ ಶಾಸ್ತ್ರ ಮಾಡುತ್ತಾರೆ. ಹೆಗಲಿಳಿಸುವುದು ಎಂದರೆ ಹೆಣವನ್ನು ಹೊತ್ತುಕೊಂಡು ಹೋಗಿದ್ದ ಐದು ಜನರು ಸ್ನಾನ ಮಾಡಿ, ತಲೆಗೆ ಎಣ್ಣೆ ಹಾಕುತ್ತಾರೆ. ಹೆಗಲು ಹೊತ್ತವರು ಐದನೇ ದಿನಗಳವರೆಗೆ ಮನೆಯ ಹೊರಗೆ ಇರಬೇಕು, ಬೇರೆಯವರು ಮುಟ್ಟಿಸಿಕೊಳ್ಳುವಂತಿಲ್ಲ. ಐದನೆಯ ದಿನ ಸ್ನಾನ ಮಾಡಿದ ಮೇಲೆ ವಿಭೂತಿ ಹಾಕಿ, ತುಪ್ಪ ಮತ್ತು ಗೋಮೂತ್ರಗಳನ್ನು ಬೆರೆಸಿ ಒಂದು ಲೋಟದಲ್ಲಿ ಹಾಕಿಕೊಂಡು ಗರಿಕೆ ಹುಲ್ಲಿನಿಂದ ಆ ಮಿಶ್ರಣವನ್ನು ತೆಗೆದುಕೊಳ್ಳುತ್ತಾ ಆ ನಾಲ್ಕು ಜನರಿಗೂ ಹೆಗಲಿನಿಂದ ಕೆಳಕ್ಕೆ ಐದು ಬಾರಿ ಕೆಳಗೆ ಮೇಲೆ ಮಾಡಿ ಬಿಡುತ್ತಾರೆ. ಅಲ್ಲಿಗೆ ಅವರ ಹೆಗಲನ್ನು ಇಳಿಸಿದಂತೆ ಆಗುತ್ತದೆ. ಅವರಿಗೆ ಮಾಂಸದಡಿಗೆ ಮಾಡಿ ಉಣಬಡಿಸುತ್ತಾರೆ. ಅವರಿಗೆ ಕುಡಿಯುವಷ್ಟು ಸಾರಾಯಿ ಇಂದಿಗೂ ಕೊಡಲಾಗುತ್ತದೆ. ಒಂದು ಜಾನಪದ ಮಾತಿನಂತೆ ಸತ್ತ ಕೋತಿಯನ್ನಾಗಲಿ, ಕೊರವರ ಸ್ಮಶಾನವನ್ನಾಗಲಿ ಯಾರು ಕಂಡಿದ್ದಾರೆ

ಎಂದು ಹೇಳುತ್ತಾರೆ. ಕೊರವರಿಗೆ ಒಂದು ಪ್ರತ್ಯೇಕವಾದ ಸ್ಮಶಾನವಿಲ್ಲ ಇವೆಲ್ಲ ಸಮುದಾಯಗಳ ಜನರ ಆಚರಣೆಯು ಪಳೆಯುಳಿಕೆಗಳು ಸಂಸ್ಕೃತೀಕರಣಗೊಂಡ ಮೇಲೆ ಇವು ಬದಲಾಗಿರುವುದು ಸ್ವಾಭಾವಿಕವೇ ಆಗಿದೆ.

ಹೆಗಲಿಳಿಸುವ ದಿನ ಸಾವಿನ ಮನೆಯವರೆಲ್ಲರೂ ಸ್ನಾನ ಮಾಡಿ ಒಂದು ಕೋಳಿ, ಶಕ್ತಿಯಿದ್ದರೆ ಹಂದಿ ಕಡಿದು ಅದರ ಹೊಟ್ಟೆಯ ಕಳ್ಳು ಪಚಡಿಗಳನ್ನು ತೆಗೆದುಕೊಂಡು ಬೇರೆ ಸಾರು ಮಾಡುತ್ತಾರೆ. ಇದರ ಜೊತೆ ಜೊತೆಗೆ ತಾವು ಮಾಡಿದ ಇತರ ಅಡಿಗೆಯನ್ನು ಸ್ವಲ್ಪ ಸ್ವಲ್ಪ ತೆಗೆದುಕೊಂಡು ಹೂವು, ಹಣ್ಣು ಕಾಯಿ, ಊದಿನಕಡ್ಡಿ ಕರ್ಪೂರ ತೆಗೆದುಕೊಂಡು ಹೋಗಿ ಸಮಾಧಿಗೆ ಪೂಜೆ ಮಾಡಿ ಕಾಯಿ ಹೊಡೆದು ಬರುತ್ತಾರೆ. ಅಲ್ಲಿಂದ ತಂದ ಆಹಾರವನ್ನು ಒಂದು ಕಡೆ ಎಡೆ ಹಾಕಿ ಪೂಜೆ ಮಾಡುತ್ತಾರೆ. ನಂತರ ಎಲ್ಲರೂ ದೂರ ಹೋಗಿ ಕುಳಿತುಕೊಳ್ಳುತ್ತಾರೆ. ಏಕೆಂದರೆ ಎಡೆಯನ್ನು ಕಾಗೆ ಮುಟ್ಟಬೇಕು ಎಂದೂ ಕಾಗೆಗಳು ಬೇಗ ಬಂದು ಆ ಎಲೆಗಳ ಆಹಾರವನ್ನು ಮುಟ್ಟಿದರೆ ಸತ್ತವರಿಗೆ ಮುಕ್ತಿ ಸಿಗುವುದು ಎಂದು ನಂಬುತ್ತಾರೆ. ನಂತರ ವಿಧವೆಯಾದ ಹೆಂಡತಿ ೧೬ ದಿನಗಳವರೆಗೆ ಎಲ್ಲಿಗೂ ಹೋಗುವಂತಿಲ್ಲ. ನಂತರ ದೇವಾಲಯಕ್ಕೆ ಹೋಗಿ ಪೂಜೆ ಮಾಡಿಕೊಂಡು ತವರು ಮನೆ ಸೀರೆ, ಬಳೆ ತೊಟ್ಟುಕೊಂಡ ಮೇಲೆ ಹೊರಗಡೆ ಹೋಗಬಹುದು.

ತಿಥಿ

ತಿಥಿಯನ್ನು ವ್ಯಕ್ತಿ ಸತ್ತ ೧೬ನೇ ದಿನದಂದು ಮಾಡಲಾಗುತ್ತದೆ. ಅನುಕೂಲವಾಗದಿದ್ದರೆ ತಿಂಗಳೊಳಗೆ ಮಾಡುತ್ತಾರೆ. ತಿಥಿ ಮಾಡುವಾಗ ೧೬ನೇ ದಿನವೇ ಮನೆಯನ್ನು ಗುಡಿಸಿ ಸ್ವಚ್ಛ ಮಾಡಿಕೊಳ್ಳಬೇಕು. ಆ ದಿನ ಕುಲಸ್ಥರೆಲ್ಲರಿಗೂ ಊಟ ಹಾಕಲಾಗುತ್ತದೆ. ಇದ್ದವರು ಹೆಚ್ಚು ಹಂದಿಗಳನ್ನು ಅಥವಾ ಕುರಿಯನ್ನು ಕಡಿದು ಅಡಿಗೆ ಮಾಡಿದರೆ ಬಡವರು ತಮ್ಮ ಯೋಗ್ಯತಾನುಸಾರವಾಗಿ ಊಟ ಹಾಕುತ್ತಾರೆ. ಸಾಮಾನ್ಯವಾಗಿ ತಿಥಿಯ ದಿನ ಮಾಂಸದೂಟವೇ ಪ್ರಮುಖವಾಗಿರುತ್ತದೆ. ಈ ಕಾರ್ಯವನ್ನು ರಾತ್ರಿ ಸಮಯದಲ್ಲಿ ಮಾಡಲಾಗುತ್ತದೆ. ಒಂದು ಕುರಿಯನ್ನು ಸತ್ತ ವ್ಯಕ್ತಿಯ ಫೋಟೋ ಮುಂದೆ ಪೂಜೆ ಮಾಡಿ, ಎರಡು ಎಡೆಯನ್ನು ಮಾಡಲಾಗುತ್ತದೆ. ಕುರಿಯನ್ನು ಬಾಗಿಲ ಮುಂದೆ ಕಡಿದು ಅದು ಎಷ್ಟು ಬಾರಿ ಬಾಯಿ ತೆರೆಯುತ್ತದೆಯೋ ಅಷ್ಟು ಸಾರಿ ಒಳ್ಳೆಯದು ಎಂಬ ನಂಬಿಕೆ ಇದೆ. ಕುರಿ ಕಡಿದ ಮೇಲೆ ಅಡಿಗೆ ಮಾಡಿ ೭ ಗಂಟೆಗೆ ಮೊದಲ ಅನ್ನ ಮಾಂಸದ ಪಲ್ಲೆಯನ್ನು ಎಡೆ ಮಾಡುತ್ತಾರೆ. ನಂತರ ಅವರಿಗೆ ಇಷ್ಟವಾದ ಎಲ್ಲ ಪದಾರ್ಥಗಳನ್ನು ಚಾಚೂ ತಪ್ಪದೆಯೇ ಅಲ್ಲಿ ಇಟ್ಟಿರುತ್ತಾರೆ ಮತ್ತು ದೂಪ ಹಾಕುತ್ತಾರೆ. ಎರಡನೇ ಎಡೆಗೆ ಮಾಂಸದ ಅಡುಗೆ ಮಾಡಿ ಮತ್ತೆ ಪೂಜೆ ಮಾಡಿ, ಎಲ್ಲರೂ ನಿಶ್ಶಬ್ದದಿಂದ ಮನೆಯನ್ನು ಒಂದು ಸುತ್ತುವರೆದು ಗಂಗಾಳದಿಂದ ಹಿಂದುಗಡೆ ಹೊಡೆಯುತ್ತಾರೆ. ಹೊಡೆಯುವುದರಿಂದ ಸತ್ತವ್ಯಕ್ತಿಗೆ ಯಾವುದು ಆಹಾರ ಇಷ್ಟವಾಗಿರುತ್ತದೆಯೋ ಆ ಪದಾರ್ಥವನ್ನು ಮುಟ್ಟಿಹೋಗುತ್ತಾನೆ ಎಂಬ ನಂಬಿಕೆ ಇಂದಿಗೂ ಇದೆ. ನಂತರ ಬಂದು ನೋಡಿದ ಮೇಲೆ ಎಡೆಯನ್ನು ಉಪವಾಸ ಇದ್ದವರು ಮೊದಲು ತಿನ್ನುತ್ತಾರೆ. ಎಲ್ಲರಿಗೂ ಎಡೆ ಹಂಚುತ್ತಾರೆ.

ಇವೆಲ್ಲ ಆದ ಮೇಲೆ ಬಂದವರೆಲ್ಲರೂ ಬಂಧು ಬಳಗದವರು ಊಟ ಮಾಡಿಕೊಂಡು ಹೋಗುತ್ತಾರೆ. ಮುಂಚೆಯೇ ಸಮಾಧಿ ಹತ್ತಿರ ಹೋಗಿ ಎಡೆ ಮಾಡಿ ಬಂದಿರುತ್ತಾರೆ.

ಹಿರಿಯರಲ್ಲಿ ಕೂಡಿಸಿಕೊಳ್ಳುವುದು

ವ್ಯಕ್ತಿ ಸತ್ತ ಮೇಲೆ ಸಂಪ್ರದಾಯದಂತೆ ಎಲ್ಲ ಕಾರ್ಯಗಳು ಮಾಡಿದ ಮೇಲೆ ಸತ್ತವರು ನಮ್ಮನ್ನು ಕಾಡುವುದಿಲ್ಲ, ಅಂತ್ಯಕ್ರಿಯೆ ಎಲ್ಲವೂ ಸರಿಯಾಗಿ ಮಾಡಿದ್ದೇವೆ ಎಂದು ತಿಳಿದುಬಂದರೆ ಸತ್ತ ವ್ಯಕ್ತಿಯ ಆತ್ಮವನ್ನು ಆ ವರ್ಷದ ಹಿರಿಯರ ಹಬ್ಬದಲ್ಲಿ ಸೇರಿಸಿಕೊಳ್ಳಲಾಗುತ್ತದೆ. ಅಂದರೆ ತಮ್ಮ ಪೂರ್ವಜರ ಆತ್ಮಗಳೊಂದಿಗೆ ಸೇರಿಸುವುದು. ಕೆಲವರು ದಸರಾದಲ್ಲಿ ಹಿರಿಯರನ್ನು ಸೇರಿಸಿಕೊಂಡರೆ, ಕೆಲವರು ದೀಪಾವಳಿ, ಯುಗಾದಿಯ ಹಬ್ಬದಲ್ಲಿ ಸೇರಿಸಿಕೊಳ್ಳುತ್ತಾರೆ. (ಹಬ್ಬಗಳ ದಿನ ವ್ಯಕ್ತಿ ಸತ್ತರೆ ಮೂರು ವರ್ಷಗಳವರೆಗೆ ಹಬ್ಬವನ್ನು ಆಚರಿಸುವಂತಿಲ್ಲ.) ಮುಂದೆ ಪ್ರತಿವರ್ಷವೂ ಪೂಜೆ ನಡೆಯುತ್ತಾ ಇರುತ್ತದೆ. ಹಿರಿಯರ ಪೂಜೆ ದಿನ ಹಿರಿಯರಿಗೆ ಬಟ್ಟೆ ತಂದು ಏರಿಸಿ ಮನೆಯವ'ರು ಉಟ್ಟುಕೊಳ್ಳ ಬೇಕಾಗುತ್ತದೆ. ಹಿರಿಯರಲ್ಲಿ ಸೇರಿಸಿಕೊಂಡ ಮೇಲೆ ಸಾವಿನ ಸಂಪ್ರದಾಯಗಳು ಮುಗಿಯುತ್ತವೆ.

೧೩ನೇ ದಿನ ತಿಥಿಯಾದ ನಂತರ ಮಹಿಳೆಗೆ ತವರು ಮನೆಯವರು ೨೧ನೇ ದಿನದಂದು ದೇವಾಲಯದಲ್ಲಿ ಪುಣ್ಯಸ್ನಾನ ಮಾಡಿಸಿ ಅವರಿಗೆ ತವರು ಮನೆ ಸೀರೆಯನ್ನು ತೊಡಿಸಲಾಗುತ್ತದೆ. ನಂತರ ತಿಂಗಳ ಒಳಗೆ ಮನೆ ಮಗಳಿಗೆ ಸೀರೆ ನೀಡಿ, ತಾಯಿಗೆ ಐದು ತಿಂಗಳವರೆಗೆ ಸೀರೆ ನೀಡಲಾಗುತ್ತದೆ. ಅವಳಿಗೆ ಶಾಂತಿ ಮಾಡಲಾಗುತ್ತದೆ. ಬಳೆ ತೊಡಿಸುತ್ತಾರೆ. ಹಿಂದಿನ ಕಾಲದವರು ಹಣೆಯಲ್ಲಿ ಕುಂಕುಮ, ಹೂವು ಇಡುತ್ತಿರಲಿಲ್ಲ. ಇಂದಿನ ಕಾಲದಲ್ಲಿ ಕೆಲವರಲ್ಲಿ ಕುಂಕುಮ ಹೂವು ತೊಡುವುದು ಕಂಡುಬರುತ್ತದೆ.

ಮದುವೆಯಾಗದೆ ಇದ್ದವರು ಸತ್ತರೆ ಅವರನ್ನು ಸೋದರ ಮಾವನಿಂದ ತಾಳಿ ಕಟ್ಟಿಸಿ ಮುತ್ತೈದೆಯಾಗಿ ಹೂಳುತ್ತಾರೆ. ಇತರೆ ಎಲ್ಲ ಆಚರಣೆಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸುತ್ತಾರೆ. ದೋಷವೇನಾದರೂ ಇದ್ದರೆ ಬ್ರಾಹ್ಮಣರಿಂದ ಮನೆಗೆ ಶಾಂತಿ ಮಾಡಿಸುತ್ತಾರೆ. ನವಗ್ರಹಗಳ ಪೂಜೆ ಮಾಡಿಸಲಾಗುತ್ತದೆ. ಮುಂದೆ ಮಕ್ಕಳು ಮರಿಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿ ಕೊಳ್ಳಲಾಗುತ್ತದೆ. ಪೂಜೆಯಲ್ಲಿ ೯ ದಿನಸಿನ ಕಾಳುಗಳನ್ನು ತಂದು ೯ ತೆಂಗಿನ ಕಾಯಿ ೧ ಮರದಿಂದ ಇಳಿಸಿದ ತೆಂಗಿನಕಾಯಿಯನ್ನು ಒಂದು ಬಿಳಿಬಟ್ಟೆಯಲ್ಲಿ ಕಟ್ಟಿ ಪೂಜೆ ಮಾಡುತ್ತಾರೆ. ೯ ತರಹದ ಕಾಳುಗಳನ್ನು ಇಡಲು ಪಾತ್ರೆ ಮತ್ತು ಸತ್ತವರ ಫೋಟೋ ತೆಗೆದುಕೊಂಡು ಮೊದಲು ಗಣೇಶ ಪೂಜೆ ಮಾಡಿ ನವಗ್ರಹ ಪೂಜೆ ಮಾಡಿ, ನೀರುಕಾಯಿ ಮನೆಯ ಬಾಗಿಲ ಮೂಲೆಗೆ ಕಟ್ಟಿ ಗೋಮೂತ್ರದಿಂದ ಮನೆಯಲ್ಲಿ ಸಿಂಪಡಿಸಿ, ಶುಚಿ ಮಾಡುತ್ತಾರೆ. ಬ್ರಾಹ್ಮಣರಿಗೆ ದಾನವಾಗಿ ಪೂಜೆಗೆ ತಂದ ಎಲ್ಲ ವಸ್ತುಗಳನ್ನು ಕೊಡಲಾಗುತ್ತದೆ. ನಂತರ ಮನೆಯಲ್ಲಿ ಪೂಜೆ ಮೊದಲಾದ ಕಾರ್ಯಗಳನ್ನು ಮಾಡಿಕೊಳ್ಳಬಹುದಾಗಿದೆ.

೩.೧ ವಾರ್ಷಿಕಾವರ್ತನಗಳು

ಕೊರವರ ಸಮುದಾಯದವರು ಅಲೆಮಾರಿಗಳು ಆಗಿರುವುದರಿಂದ ಪ್ರದೇಶಾನುಗುಣವಾಗಿ ದೇವರುಗಳನ್ನು ಪೂಜಿಸುತ್ತಾರೆ. ಎಲ್ಲ ದೇವರುಗಳು ಇವರಿಗೆ ಪೂಜನೀಯವಾಗಿದೆ. ಕಂಡ ಕಂಡ ಕಲ್ಲಿಗೆ ಕೈ ಮುಗಿಯುವ ಇವರಿಗೆ ಮನೆ ದೇವತೆಗಳು, ಸ್ಥಳೀಯ ದೇವತೆಗಳು, ನಾಡದೇವತೆಗಳು ಒಂದೇ ಕಂಡುಬರುತ್ತವೆ. ತಮ್ಮ ಹಿರಿಯರು ಮೂಲ ನೆಲೆಯಿಂದ ಹೊರಟಾಗ ಅವರ ಜೊತೆಯಲ್ಲಿ ಬಂದ ದೇವತೆಗಳ ಬಗೆಗೆ ತಿಳಿದು ಬಂದಿಲ್ಲ. ಕೆಲವರು ವೆಂಕಟೇಶ್ವರ, ಸುಬ್ರಹ್ಮಣ್ಯ ಮೂಲ ದೇವರು ಎಂದು ತಿಳಿಸಲಾಗುತ್ತದೆ. ಇಂದಿನ ದಿನಗಳಲ್ಲಿ ಈ ಸಮುದಾಯದವರು ವೆಂಕಟೇಶ್ವರ, ಹನುಮಂತ, ಈರಣ್ಣ ದೇವರನ್ನು ಆರಾಧಿಸುವುದು ಹೆಚ್ಚಾಗಿ ಕಂಡುಬರುವುದುಂಟು. ಹೆಚ್ಚಿನವರು ತಿರುಪತಿಯನ್ನು ಧಾರ್ಮಿಕ ಕೇಂದ್ರವನ್ನಾಗಿ ಮಾಡಿಕೊಂಡಿದ್ದಾರೆ. ಮೂಢನಂಬಿಕೆಗೆ ದಾಸರಾದ ಇವರಿಗೆ ದೇವರ ಬಗೆಗೆ ವಿಶೇಷವಾದ ನಂಬಿಕೆ ಭಯಭಕ್ತಿಯನ್ನು ಕಾಣಬಹುದು. ವಾರದಲ್ಲಿ ಒಂದು ದಿನವನ್ನು ವಾರದ ದಿನವೆಂದು ಆಚರಿಸುತ್ತಾರೆ. ಕೆಲವರು ಶುಕ್ರವಾರ, ಮಂಗಳವಾರ, ಕೆಲವರು ಸೋಮವಾರ ಮಾಡಿದರೆ ಇತ್ತೀಚೆಗೆ ಕೆಲವರು ಗುರುವಾರವನ್ನು ಆಚರಿಸುತ್ತಾರೆ. ಅಂದರೆ ಇವರು ಪ್ರಾತಿನಿತ್ಯವು ದೇವರಿಗೆ ಪೂಜೆ ಮಾಡುತ್ತಿರಲಿಲ್ಲವೆಂದಲ್ಲ. ಏಕೆಂದರೆ ಕೊರವರು ಕೆಲಸದಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಅವರಿಗೆ ಸಮಯ ದೊರೆಯುವುದಿಲ್ಲ ಎಂದು ಕೆಲವರು ಹೇಳುತ್ತಾರೆ.

ಇವರು ಬೆಳಗ್ಗೆ ಎದ್ದ ಮೇಲೆ ಮನೆಯ ಬಾಗಿಲಿನಲ್ಲಿ ಹೊರಗಡೆ ಬಾಗಿಲಿಗೆ ಪೂಜೆ ಮಾಡಿ, ಮುಖ ತೊಳೆದುಕೊಂಡು ನಿತ್ಯ ಸೂರ್ಯ ನಮಸ್ಕಾರ ಮಾಡುವುದು ಕಂಡುಬರುತ್ತದೆ. ಕೆಲವು ಮನೆಗಳಲ್ಲಿ ಕೋಣೆಯಷ್ಟನ್ನೇ ಸಾರಿಸಿ ಯಾರಾದರೊಬ್ಬರು ಸ್ನಾನ ಮಾಡಿ ಪೂಜಿಸುವುದೂ ಇದೆ. ಕೆಲವರು ಆ ದಿನ ಕೋಣೆಯಲ್ಲಿ ಮಾಂಸದ ಅಡಿಗೆ ಮಾಡುವುದಿಲ್ಲ. ಹಿಂದಿನ ದಿನ ಮಾಡಿದ್ದು ಇದ್ದರೂ ಅದನ್ನು ಕೋಣೆಯಿಂದ ಹೊರಗಿಟ್ಟು ಶುಚಿಗೊಳಿಸುತ್ತಾರೆ. ಒಂದೊಂದು ವಂಶದ ಕುಟುಂಬ ಗಳು ಬೇರೆ ಬೇರೆ ಹೆಸರಿನ ಮನೆ ದೇವತೆಗಳನ್ನು ಪೂಜಿಸುತ್ತಾರೆ. ಕೈಕಾಡಿಗಳು ಭವಾನಿಯನ್ನು ಕೊರವರು ಸುಬ್ರಹ್ಮಣ್ಯವನ್ನು, ಯರಕಲರು ಲಕ್ಷ್ಮಿವೆಂಕಟೇಶರನನ್ನು ಪೂಜಿಸಿದರೆ, ಕೊಲ್ಲಾಪುರದಮ್ಮ ಪೆರಮಾಳಾಸ್ವಾಮಿ ಅಂದರೆ ವೆಂಕಟೇಶ, ಯಲ್ಲಮ್ಮ ಮೊದಲಾದ ದೇವತೆಗಳನ್ನು ಪೂಜಿಸುವವರಿದ್ದಾರೆ. ಮಾರುತಿಯನ್ನು ವಿಶೇಷವಾಗಿ ಪೂಜಿಸುತ್ತಾರೆ.

ಸಾಮಾನ್ಯವಾಗಿ ಇವರು ಹಿಂದೂಗಳು ಆಚರಿಸುವ ಕೆಲವು ಹಬ್ಬಗಳನ್ನು ಆಚರಿಸುತ್ತಾರೆ. ಯುಗಾದಿ, ದಸರಾ (ಮಹಾನವಮಿ) ಮತ್ತು ದೀಪಾವಳಿಗಳನ್ನು ಆಚರಿಸುತ್ತಾರೆ.

ಯುಗಾದಿ

ಕೊರವರು ಸಹ ಯುಗಾದಿ ಹಬ್ಬವನ್ನು ಆಚರಿಸುತ್ತಾರೆ. ಈ ದಿನಗಳಲ್ಲಿ ಕೆಲವರು ತಮ್ಮ ಹಿರಿಯರಿಗೆ ಬಟ್ಟೆ ಏರಿಸುವುದು ಕಂಡುಬರುತ್ತದೆ. ಚೈತ್ರ ಶುದ್ಧ ಪಾಡ್ಯಯಂದು ಯುಗಾದಿ ಹಬ್ಬ. ಯುಗಾದಿಯಿಂದ ಹೊಸ ವರ್ಷವು ಆರಂಭವಾಗುತ್ತದೆ. ಮನೆಮಂದಿಯೆಲ್ಲ ಅಭ್ಯಂಜನ ಸ್ನಾನ

ಮಾಡಿ ಕೈಲಾದವರು ಹೊಸ ಬಟ್ಟೆಗಳನ್ನು ಧರಿಸುತ್ತಾರೆ. ಇಷ್ಟ ದೇವತೆಗಳಿಗೆ ಪೂಜೆ ಮಾಡಿ, ಬೇವು ಬೆಲ್ಲ, ಸಿಹಿ ಅಡುಗೆ ಮಾಡುತ್ತಾರೆ. ದೇವಸ್ಥಾನಗಳಲ್ಲಿ, ಉತ್ಸವ ವಿಶೇಷಗಳು ನಡೆಯುತ್ತವೆ. ಯುಗಾದಿ ಆಚರಣೆಯ ವಿಧಿಗಳಲ್ಲಿ ಬೇವು-ಬೆಲ್ಲ ಸೇವನೆ ಮಾಡಿ, ಚಂದ್ರದ ದರ್ಶನಮಾಡುತ್ತಾರೆ. ಬೇವು-ಬೆಲ್ಲಗಳು ಜೀವನದ ಸುಖ ದುಃಖಗಳು ಸಂಕೇತವಾಗಿದೆ. ಜೀವನದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ನೋವು-ನಲಿವಿನಲ್ಲಿ ಬದುಕುವುದುಂಟು. ಚಂದ್ರ ದರ್ಶನಮಾಡಿ ಹಿರಿಯರ ಆರ್ಶೀವಾದ ಪಡೆಯುತ್ತಾರೆ. ಏಕೆಂದರೆ ವರ್ಷವೆಲ್ಲವು ಸುಖದಿಂದ ಇರಿ ಎಂದು ಹಾರೈಸುತ್ತಾರೆ. ಸಂಪೂರ್ಣ ಸುಖಾವಕಾಶಗಳ ಅಥವಾ ದುಃಖಾವಕಾಶಗಳ ನೆಲೆಯೂ ಅಲ್ಲಿ ಪ್ರಕೃತಿಯ ಕತ್ತಲು ಬೆಳಕಿನ ಚೆಲ್ಲಾಟದಂತೆಯೇ ಸುಖ ದುಃಖ, ಲಾಭ ನಷ್ಟಗಳ ದ್ವಂದ್ವದಿಂದಲೂ ಕೂಡಿದೆ. ಹಬ್ಬಗಳು ಆಚರಿಸುವುದು ಎಲ್ಲರೂ ಒಂದುಗೂಡಿ ಸುಖದುಃಖಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಳ್ಳುತ್ತದೆ.

ಶ್ರೀ ರಾಮನವಮಿ

ಕೊರವರಲ್ಲಿ ಕೆಲವರು ಶ್ರೀರಾಮನವಮಿಯನ್ನು ಆಚರಿಸುತ್ತಾರೆ. ವೆಂಕಟೇಶ್ವರ, ಹನುಮಂತ ಭಕ್ತರಾಗಿದ್ದರಿಂದ ಶ್ರೀರಾಮನವಮಿಯನ್ನು ಹನುಮಂತ ದೇವರಿಗೆ ಪೂಜೆ ಸಲ್ಲಿಸಿ, ಇಲ್ಲಿ ಪಾನಕ, ಪ್ರಸಾದವು, ಕೊಸಂಬರಿ ಮುಖ್ಯವಾಗಿರುತ್ತದೆ.

ನಾಗರ ಪಂಚಮಿ

ಶ್ರಾವಣ ಮಾಸದಲ್ಲಿ ನಾಗರ ಪಂಚಮಿಯನ್ನು ಆಚರಿಸಲಾಗುತ್ತದೆ. ಭಾರತೀಯರಲ್ಲಿ ನಾಗಪೂಜೆ, ನಾಗಾರಾಧನೆಗಳೂ ರೂಢಿಯಲ್ಲಿರುವಂತೆ ಕೊರವರಲ್ಲಿಯೂ ನಾಗರ ಪಂಚಮಿ ವಿಶಿಷ್ಟವಾಗಿದೆ. ತಮ್ಮ ಸರ್ಪದೋಷ, ಹರಕೆಯೆಂದರೆ ನಾಗಪ್ಪನಿಗೆ ಪೂಜೆ ಸಲ್ಲಿಸುತ್ತಾರೆ. ಕೊರವರಲ್ಲಿ ಕೆಲವರು ನಾಗರ ಪಂಚಮಿಯ ಮೊದಲ ವಾರ ಮಾಡಿದ್ದರೆ, ಕೆಲವರು ಕೊನೆಯವಾರ, ಸೋಮವಾರ ಅಥವಾ ಶನಿವಾರದಂದು ಹುತ್ತಿಗೆ ಅಥವಾ ಕಲ್ಲಿನ ಹಾವುಗಳಿಗೆ ಹಾಲು ಹಾಕುವುದು ಕಂಡುಬರುತ್ತದೆ. ಶ್ರಾವಣಮಾಸದಲ್ಲಿ ಹಾವುಗಳನ್ನು ಸಾಯಿಸಬಾರದು ಎಂಬ ನಂಬಿಕೆ ಇದೆ. ಹಾವಿನ ಹುತ್ತಕ್ಕೆ ಅಥವಾ ಕಲ್ಲಿನ ನಾಗಪ್ಪನಿಗೆ ಹಾಲು ಎರೆಯುವ ಪದ್ಧತಿ ಇದೆ. ಬೆಲ್ಲದ ನೀರು, ಒಡೆದ ಕಾಯಿಯ ಬಟ್ಟಲನಿಂದ ನಾಗಪ್ಪನಿಗೆ ಎರೆಯುವುದು ಇವರಲ್ಲಿರುವ ಪದ್ಧತಿ, ತಂಬಿಟ್ಟು ನೈವೇದ್ಯ ಮಾಡುತ್ತಾರೆ. ಅಕ್ಕಿಯನ್ನು ನೀರಿನಲ್ಲಿ ನೆನಸಿಟ್ಟು ಕುಟ್ಟಿ ಕಡುಬು ಮಾಡುತ್ತಾರೆ, ಜೋಳದ ಕಾಳುಗಳನ್ನು ಹುರಿದು ಅದನ್ನು ಕುಟ್ಟಿ ಕಡುಬು ಮಾಡುತ್ತಾರೆ. ಹಬ್ಬದಲ್ಲಿ ಕುಟ್ಟಿದ ಕಡುಬು ಮಾಡುವುದು ಕಡುಬು ಕರಿಯುವುದಿಲ್ಲ. ಏಕೆಂದರೆ ನಾಗಪ್ಪನ ಹೆಡೆ ಕರಿದಂತೆ ಎಂಬ ನಂಬಿಕೆ ಇದೆ.

ಮೋಹರಂ

ಕೊರವರು ಸಹ ಮೊಹರಂ ಆಚರಿಸುತ್ತಾರೆ. ಈ ಹಬ್ಬದ ದಿನ ಗುದ್ದಲಿ ಹಾಕಿದ ನಂತರ ಮೋಹರಂ ಕೊನೆಯ ದಿನಗಳವರೆಗೆ ಮಾಂಸದೂಟ ಮಾಡುವುದಿಲ್ಲ. ಮೊಹರಂ ದೇವರಿಗೆ ಸಕ್ಕರೆ ಹೊಯಿಸಿ, ಹರಕೆ ಹೊತ್ತವರು ಬೆಂಕಿ ಕುಂಡಕ್ಕೆ ಮೆಣಸು ಹಾಕುತ್ತಾರೆ.

ಮಕರ ಸಂಕ್ರಾಂತಿ

ಸಾಂಸ್ಕೃತಿಕ ದಿನ ಪೊಂಗಲ್ ಹಬ್ಬ ಎಂದು ಕರಿಯುತ್ತಾರೆ. ಈ ದಿನ ಪೊಂಗಲ್, ಕಬ್ಬಿನ ಜಿಲ್ಲೆಯನ್ನು ನೈವೇದ್ಯ ಮಾಡುತ್ತಾರೆ. ಹೆಣ್ಣು ಮಕ್ಕಳು ಹೊಸ ಬಟ್ಟೆ ಉಟ್ಟು ಎಳ್ಳು ಬೆಲ್ಲವನ್ನು ದೇವರಿಗೆ ನೈವೇದ್ಯ ನೀಡಿ ಎಲ್ಲರಿಗೂ ಹಂಚುತ್ತಾರೆ. ಎಳ್ಳು ಬೆಲ್ಲ ತಗೊಂಡು ಬೆಲ್ಲದಂತಾ ಮಾತನಾಡೋಣ ಎಂದು ಹೇಳ ಶುಭ ಹಾರೈಸುತ್ತಾರೆ.

ಶಿವರಾತ್ರಿ

ಶಿವರಾತ್ರಿ ಶಿವನ ಪೂಜೆ ಮುಖ್ಯವಾಗಿರುತ್ತದೆ. ಕೊರವರು ಸಹ ಎಲ್ಲರಂತೆ ಶಿವದೇವಾಲಯಕ್ಕೆ ಹೋಗಿ, ಉಪವಾಸವನ್ನು ಮಾಡುತ್ತಾರೆ. ಸಂಜೆ ವೇಳೆಯಲ್ಲಿ ಎಲ್ಲ ಶಿವನ ಗುಡಿಗೆ ಹೋಗಿ ಪೂಜೆ ಮಾಡಿಸಿ, ದೇವಾಲಯದ ಪ್ರಸಾದ ಸ್ವೀಕರಿಸಿ ಒಪ್ಪತ್ತು ಮಾಡುತ್ತಾರೆ. ರಾತ್ರಿಯಲ್ಲಿ ಜಾಗರಣೆ ಮಾಡಿ ಅಥವಾ ರಾತ್ರಿಯಲ್ಲಿ ಹಳೆಯ ದೇವಾಲಯ, ಸಿನಿಮಾಗಳು ನೋಡಿ ಹಿಂದಿನ ದಿನಗಳನ್ನು ನೆನೆಯುತ್ತಾರೆ. ಕಥೆಗಳನ್ನು ಹೇಳುವುದು ಕಂಡುಬರುತ್ತದೆ. ಮುಂಜಾನೆ ಮನೆಯಲ್ಲಿ ಪೂಜೆ ಮಾಡಿಕೊಂಡು ನೈವೇದ್ಯವನ್ನು ಅರ್ಪಿಸಿ, ಉಪವಾಸವನ್ನು ಬಿಡುತ್ತಾರೆ.

ಹೋಳಿಹಬ್ಬ

ಹೋಳಿ ಆಚರಣೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿರುವುದು ಸ್ವಾಭಾವಿಕ, ಹುಣ್ಣಿಮೆ ದಿನ, ಒಬ್ಬ ಮನುಷ್ಯನ ಮೂರ್ತಿಯನ್ನು ಮಾಡಿ ಅಥವಾ ಕಾಮನ ಸುಟ್ಟು, ನಂತರ ಹೋಳಿ ಎರಚುವ ಮೂಲಕ ಹೋಳಿ ಹಬ್ಬ ಆಚರಿಸುತ್ತಾರೆ.

ಭೀಮನ ಅಮವಾಸ್ಸೆ

''ಆಷಾಢ ಬಹುಳ ಅಮವಾಸ್ಯೆಗೆ ಭೀಮನ ಅಮವಾಸ್ಯೆ ಎನ್ನುವರು. ಮೃತನಾದ ಗಂಡನನ್ನು ಸತಿಶಿರೋಮಣಿಯೊಬ್ಬಳು ಪಾರ್ವತಿ ಪರಮೇಶ್ವರರ ಅನುಗ್ರಹದಿಂದ ಬದುಕಿಸಿ ದೀರ್ಘ ಸುಮಂಗಲಿತನ ಪಡೆದ ದಿನವಿದು ಆದ್ದರಿಂದ ಈ ದಿನ ಪತಿಸಂಜೀವಿನಿ ವ್ರತವೆಂದು ಕರೆಯುವರು".[೧೨] ಕೊರವರಲ್ಲಿಯು ಕೆಲವು ಮಹಿಳೆಯರು ಪತಿಯು ಆಯುಷ್ಯ ದೀರ್ಘವಾಗಿರಲೆಂದು ಪೂಜೆ ಮಾಡುವುದುಂಟು.

ರಕ್ಷಾಬಂಧನ

ಶ್ರಾವಣ ಮಾಸದ ಹುಣ್ಣಿಮೆಯ ದಿನ ಆಚರಿಸಲಾಗುವ ಈ ಹಬ್ಬವನ್ನು ರಕ್ಷಾಬಂಧನ, ನೂಲು ಹುಣ್ಣಿಮೆ ಎಂದು ಕರೆಯುತ್ತಾರೆ. ಈ ದಿನ ಸಹೋದರಿಯರು ತಮ್ಮ ಸಹೋದರರಿಗೆ ತಮ್ಮ ಮಾನ, ಪ್ರಾಣಗಳನ್ನು ಸದಾ ರಕ್ಷಿಸಿರೆಂದು ಮುಂಗೈಗೆ ದಾರದ ಎಳೆಗಳನ್ನು ಕಟ್ಟುತ್ತಾರೆ. ''ಉತ್ತರ ಭಾರತದಲ್ಲಿ ಇದು ಅತ್ಯಂತ ಜನಪ್ರಿಯವಾದ ಹಬ್ಬ ಹಿಂದೆ ರಾಜಮಹಾರಾಜರ ಕಾಲದಲ್ಲಿ ಯುದ್ಧದ ಸಂದರ್ಭದಲ್ಲಿ ಶತ್ರುಗಳಿಂದ ತಮ್ಮ ಪತಿಯ ಮಾನಪ್ರಾಣಗಳ ರಕ್ಷಣೆಯಾಗಲೆಂದು ಪತಿಗೆ ಶ್ರೀರಕ್ಷೆಯೆಂದು ರಕ್ಷಾ ಎಳೆಗಳನ್ನು ಕಟ್ಟುವ ವಾಡಿಕೆ ಇತ್ತು. ಹಾಗೆಂದೇ ಇಂದ್ರನಿಗೆ ಶುಚಿಯು ಮುಂಗಟ್ಟುಗಳನ್ನು ಕಟ್ಟುವುದರಿಂದಲೇ ಇಂದ್ರನಿಗೆ ಅಮರಾವತಿಯು ಲಭಿಸಿತೆಂದು ಹೇಳಲಾಗಿದೆ".[೧೩] ಕೊರವರ

ಮಹಿಳೆಯರು ತಮ್ಮ ಸಹೋದರಿಗೆ ರಾಖಿಯನ್ನು ಕಟ್ಟಲಾಗುತ್ತದೆ. ಆದರೆ ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎಂಬ ಹಾಗೆ ವಿವಾಹವಾದ ಮೇಲೆ ಹೆಣ್ಣುಮಕ್ಕಳನ್ನು ನೋಡಿಕೊಳ್ಳುವುದು ಬಹಳ ಕಡಿಮೆ ಎಂದು ಹೇಳಬಹುದಾಗಿದೆ.

ಗಣೇಶ ಹಬ್ಬ

ಗಣೇಶ ಚತುರ್ಥಿ ಭಾದ್ರಪದ ಮಾಸದ ನಾಲ್ಕನೇ ದಿನ ಬರುತ್ತದೆ. ಇದು ಎಲ್ಲರಿಗೂ ಅತಿ ದೊಡ್ಡ ಹಬ್ಬವಾಗಿರುತ್ತದೆ. ಅಂದು ಶಾಲಾ ಕಾಲೇಜುಗಳಿಗೆ ರಜೆ ಮನೆಮಂದಿಯೆಲ್ಲ ಬಲು ಬೇಗನೆ ಏಳುತ್ತಾರೆ. ಸ್ನಾನ ಮಾಡಿ, ಹೊಸ ಬಟ್ಟೆಗಳನ್ನು ಧರಿಸುತ್ತಾರೆ. ಮನೆಗಳಲ್ಲಿ ಮೋದಕಗಳು, ಹೋಳಿಗೆ ತಯಾರಿಸಿ ಹಬ್ಬ ಸಡಗರದಿಂದ ಆಚರಿಸುತ್ತಾರೆ. ಗಣಪತಿ ಪ್ರತಿಮೆಯನ್ನು ಕೊಳ್ಳಲು ಪಟ್ಟಣಕ್ಕೆ ಹೋಗುವುದೇ ಒಂದು ಸಂಭ್ರಮ.

ಮನೆಗೆ ಬಂದ ಗಣಪತಿಯನ್ನು ವಿಶೇಷವಾಗಿ ಅಲಂಕರಿಸಿದ ಒಂದು ಮಂಟಪದಲ್ಲಿ ಕೂಡಿಸುವರು. ತಳಿರು ತೋರಣಗಳಿಂದ ಹಾಗೂ ವಿದ್ಯುದೀಪಗಳಿಂದ ಮಂಟಪವನ್ನು ಅಲಂಕರಿಸುವರು. ನೆಂಟರಿಷ್ಟರ ಮತ್ತು ಸ್ನೇಹಿತರಿಗೆ ಹಬ್ಬಕ್ಕೆ ಬರಹೇಳುವರು. ಗಣೇಶನ ಹಬ್ಬದಂದು ಹಣ್ಣು-ಹಂಪಲಗಳನ್ನು ಮತ್ತು ಮೋದಕ ನೈವೇದ್ಯವೇ ಮುಖ್ಯವಾಗಿರುತ್ತದೆ.

ಹುಲಿಗಮ್ಮ

ಕೊರವರ ಬಹುತೇಕ ಕುಟುಂಬಗಳು ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಹುಲಿಗಿ ಹುಲಿಗಮ್ಮನ ಆರಾಧಕರು ಎಂಬುದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ತಮ್ಮ ಕಷ್ಟ ಸುಖಗಳಿಗೆ ಹುಲಿಗಮ್ಮನ ಮೊರೆ ಹೋಗುವುದು, ಹರಕೆ ಹೊರುವುದು ಕಂಡುಬರುತ್ತದೆ. ದೇವರು ಮಾಡುವುದುಂಟು ಹೊಳೆಗೆ ಹೋಗಿ ಗಂಗೆ ಪೂಜೆ ಮಾಡಿ ಅಲ್ಲಿಂದಲ್ಲೆ ದಿಡ್ ನಮಸ್ಕಾರ ಹಾಕುತ್ತ ಬರುತ್ತಾರೆ. ದೇವಾಲಯ ಐದು ಸುತ್ತು ಹಾಕುತ್ತಾ ಮುಗಿಸುತ್ತಾರೆ. ನಂತರ ಅವರ ತವರು ಮನೆಯವರು ಹೆಣ್ಣು ಮಕ್ಕಳಿಗೆ ಹೊಸ ಬಟ್ಟೆ ಉಡಿಸಿ, ಉಡಕ್ಕಿ ಹಾಕಿ ಮುಯಿಮಾಡುತ್ತಾರೆ. ಸಂಬಂಧಿಕರೆಲ್ಲರೂ ಮುಯ್ಯಿಮಾಡುತ್ತಾರೆ. ದೀಡ್ ನಮಸ್ಕಾರ ಮಾಡಿ, ಕುರಿ ಬಲಿ ಕೊಟ್ಟನಂತರ ಹುಲಿಗೆಮ್ಮನಿಗೆ ಉಡಕ್ಕಿ ಸೀರೆ, ಕುಪ್ಪಸ, ದೇವರಿಗೆ ಅರ್ಪಿಸುತ್ತಾರೆ. ಮಾಂಸದಡಿಗೆ ಮಾಡಿದ ಮೇಲೆ ಜೋಗಮ್ಮನವರನ್ನು ಕರೆಯಿಸಿ ಉದೋ ಎಂದು ದೇವರಿಗೆ ನೈವೇದ್ಯ ಬಿಡುತ್ತಾರೆ. ಕೊರವರು ತಮ್ಮ ಸಂಬಂಧಿಕರನ್ನೆಲ್ಲ ಕರೆದು ದೈವ ಕಾರ್ಯಮಾಡಿದ ನಂತರ ದೇವತೆ ನಮ್ಮನ್ನು ಹರಸಿದ್ದಾಳೆ ಎಂದು ನಂಬುತ್ತಾರೆ.

ಮಹಾನವಮಿ (ದಸರಾ)

ದಸರಾ ಹಬ್ಬದಲ್ಲಿಯೂ ಹಿರಿಯರಿಗೆ ಎಡೆ ಹಾಕುವ ಪದ್ಧತಿ ಇದೆ. ದಸರಾ ಅಮವಾಸ್ಯೆಯಿಂದ ೯ ದಿನಗಳ ಕಾಲ ಹೆಣ್ಣು ಮಕ್ಕಳು ಬನ್ನಿಮರಕ್ಕೆ ಹರಕೆ ಹೊತ್ತು ಪೂಜೆಯನ್ನು ನೆರವೇರಿಸುತ್ತಾರೆ. ಏಕೆಂದರೆ ಹಲವಾರು ಸುಖ ದುಃಖಗಳನ್ನು ಪರಿಹರಿಸಲು ಹರಕೆ ಹೊರುತ್ತಾರೆ. ಒಂಬತ್ತು ದಿನಗಳು ದುರ್ಗಿಯನ್ನು ಒಂದೊಂದು ಹೆಸರಿನಲ್ಲಿ ಪೂಜೆ ಸಲ್ಲಿಸುತ್ತಾರೆ. ದಸರಾ ಹಬ್ಬವನ್ನು ಬನ್ನಿಹಬ್ಬ ಎಂದು ಸಹ ಹೇಳುತ್ತಾರೆ.

ಗೌರಿಹಬ್ಬ

ಮಹಿಳೆಯರಿಗೆ ಗೌರಿಹಬ್ಬವು ಮುಖ್ಯವಾಗುತ್ತದೆ. ಮದುವೆಯಾದ ಮೇಲೆ ಗೌರಿಹಬ್ಬದ ದಿನ ಸಹೋದರರೂ ಹೆಣ್ಣು ಮಕ್ಕಳನ್ನು ತವರು ಮನೆಗೆ ಕರೆದುಕೊಂಡು ಹೋಗುತ್ತಾರೆ. ಹೊಸಬಟ್ಟೆಯನ್ನು ತಂದು ಹೆಣ್ಣು ಮಕ್ಕಳು ಸಹೋದರರಿಗೆ ಶುಭವಾಗಲಿ ಎಂದೂ, ಯಾವತ್ತಿಗೆ ಸುಖವಾಗಿರಲಿ ಎಂದು ಹಾರೈಸುತ್ತಾರೆ. ತವರು ಮನೆಯಲ್ಲಿ ಹೆಣ್ಣು ಮಕ್ಕಳು ಕಣ್ಣೀರು ಹಾಕಿದರೆ ತವರಿಗೆ ಕಷ್ಟಗಳು ಬರುತ್ತದೆ ಎಂದೂ, ಹೆಣ್ಣು ಮಕ್ಕಳು ಸುಖವಾಗಿ ಇದ್ದು ಹೋಗಲಿ ಎಂದು ಹಿರಿಯರು ಬಯಸುತ್ತಾರೆ. ಸಕ್ಕರಾರತಿ ಬೆಳಗುವುದು ಈ ಗೌರಿಹಬ್ಬದ ವಿಶಿಷ್ಟವಾಗಿದೆ.

ದೀಪಾವಳಿ

ಭಾರತೀಯರ ಪ್ರಮುಖ ಹಬ್ಬ ದೀಪಾವಳಿ. ಕರ್ನಾಟಕದಲ್ಲಂತೂ ಇದು ಬೆಳಕಿನ ಹಬ್ಬ, ದೊಡ್ಡ ಹಬ್ಬವೆಂಬ ಗೌರವಕ್ಕೆ ಪಾತ್ರವಾಗಿದೆ. ಆಶ್ವಯುಜ ಬಹುಳ ದ್ವಾದಶಿಯಿಂದ ಆರಂಭವಾಗಿ ಕಾರ್ತಿಕ ಶುದ್ಧ ಪಂಚಮಿಯವರೆಗೆ ಇದು ನಡೆಯುತ್ತದೆ. ದೀಪಗಳಿಂದ ಅಲಂಕೃತವಾಗುವ ಹಬ್ಬವೇ ದೀಪಾವಳಿ. ಭಾರತೀಯರ ಕಲ್ಪನೆಯಲ್ಲಿ ಮಹತ್ವದ್ದು. ಅದು ಸಾರ್ಥಕ ಬದುಕಿನ ಜೀವಂತಿಕೆಯ ಸಂಕೇತ. ಗುಡಿಸಲುಗಳಿಂದ ಗುಡಿಯವರೆಗೆ ದೀಪಾವಳಿಯ ತಳಿರುತೋರಣಗಳು ಕಾಣಿಸುತ್ತಿರುತ್ತವೆ. ನರಕ ಚತುರ್ದಶಿ, ಬಲಿಪಾಡ್ಯಮಿ, ಕರಿ ಎಂದು ಆಚರಿಸಲಾಗುತ್ತದೆ. ಶ್ರೀಕೃಷ್ಣ ನರಕಾಸುವ ಸಂಹಾರ ನರಕ ಚತುರ್ದಶಿ ಹೆಸರಿನಲ್ಲಿ ಶಾಶ್ವತವಾಗಿ ಉಳಿದು ಬಂದಿದೆ. ನರಕ ಚತುರ್ದಶಿಯಂದು ಹನುಮಂತ ಹುಟ್ಟಿದರೆಂಬ ನಂಬಿಕೆಯಿಂದ ಈ ದೇವರಿಗೂ ಪೂಜೆ ಸಲ್ಲಿಸುತ್ತಾರೆ. ವನವಾಸ ಮುಗಿಸಿಕೊಂಡು ಅಯೋಧ್ಯೆಗೆ ಬಂದಿದ್ದರಿಂದ ರಾಮನನ್ನು ದೀಪೋತ್ಸವದ ಮೂಲಕ ಜನರು ಬರಮಾಡಿಕೊಂಡರೆಂದು ಈ ಹಬ್ಬ, ಲಕ್ಷ್ಮೀಯನ್ನು ಒಲಿಸಿಕೊಂಡಿದ್ದರ ಸಂಕೇತವೆಂದು ಕೆಲವರು ಲಕ್ಷ್ಮೀ ಪೂಜೆ ಮಾಡುತ್ತಾರೆ. ಬಲಿಪಾಡ್ಯಮಿಯಂದು ಪಾಂಡವರು ಹಸ್ತಿನಾವತಿಗೆ ಬಂದು ಪುನಃ ರಾಜ್ಯಭಾರ ಮಾಡಿದರ ಕುರುಹು ಎಂದು ಭಾವಿಸಲಾಗಿದೆ. ಹಟ್ಟಿ ಹಬ್ಬ ಎಂದು ಸಹ ಕರೆಯುತ್ತಾರೆ. ಹೆಚ್ಚಾಗಿ ಪಾಡ್ಯ ಮುಖ್ಯ ಆಚರಣೆಯಾಗಿದೆ. ಅಭ್ಯಂಜನಕ್ಕೆ ಮುಂದೆ ಅರಿಶಿನದ ಎಣ್ಣೆಯನ್ನು ಮೈಗೆ ಹಚ್ಚಿಕೊಳ್ಳುತ್ತಾರೆ. ತ್ವಚೆಯ ಕಾಂತಿಗೆ, ಚರ್ಮರೋಗಕ್ಕೆ ಇದು ಉಪಶಮನಕಾರಿಯಾಗಿದೆ.

ಹಟ್ಟಿಹಬ್ಬದ ದಿನ ಮನೆಯಲ್ಲಿ ಸ್ವಚ್ಛ ಮಾಡಿಕೊಂಡು, ಎಲ್ಲರೂ ಸ್ನಾನ ಮಾಡಿ ಪೂಜೆಯನ್ನು ಮಾಡಲಾಗುತ್ತದೆ. ಹಸು ದನಗಳಿದ್ದವರು ಅದರ ಜಾಗದಲ್ಲಿ ಸ್ವಚ್ಛ ಮಾಡಿ ವಿಭೂತಿ ಹಚ್ಚಿ ಅಲಂಕರಿಸುತ್ತಾರೆ. ಮನೆಯ ಅಂಗಳದಲ್ಲಿ ಹಟ್ಟಿ ಇಟ್ಟು (ಸಗಣಿಯಿಂದ ಮಾಡಿದ ಗುಂಡಾನಾಕಾರದ ಹುಂಡೆಗಳು) ಅವುಗಳಿಗೆ ಉತ್ತರಾಣಿ ಗಿಡ, ಹೂವು ಇಟ್ಟು ಪೂಜೆ ಮಾಡಲಾಗುತ್ತದೆ. ಹಟ್ಟಿಯಲ್ಲಿ ಇರುವ ಸಗಣಿಯ ರಾಶಿಗೆ ಪೂಜೆ ಮಾಡಿಸಿ, ಹೋಳಿಗೆ ಎಡೆ ಮಾಡಲಾಗುತ್ತದೆ. ಹಗರಿಬೊಮ್ಮನಹಳ್ಳಿ, ಹೂವಿನಹಡಗಲಿ ಕಡೆಗಳಲ್ಲಿ ಇದು ನಡೆಯುತ್ತದೆ.

ಕೊರವರಿಗೆ ಹಿರಿಯರ ಹಬ್ಬವು ಮುಖ್ಯವಾಗಿರುತ್ತದೆ. ದೀಪಾವಳಿಯಲ್ಲಿ ಹಿರಿಯರಿಗೆ ಎಡೆ ಹಾಕಿದರೆ, ಮತ್ತೆ ಕೆಲವರು ಮಹಾನವಮಿಯಲ್ಲಿ ಎಡೆ ಹಾಕುತ್ತಾರೆ. ಮನೆ ಮಟಗಳಗೆಲ್ಲ ಶುಚಿ

ಮಾಡಿಕೊಂಡು, ಬಾಗಿಲಿಗೆ ತೋರಣ ಕಟ್ಟಿ ಅಲಂಕರಿಸುತ್ತಾರೆ. ಎಲ್ಲರೂ ಸ್ನಾನ ಮಾಡುತ್ತಾರೆ. ನೆಂಟರಿಷ್ಟರು ಕೂಡಿ ಹಬ್ಬ ಆಚರಿಸುತ್ತಾರೆ. ದೀಪಾವಳಿಯಲ್ಲಿ ಸಾಮಾನ್ಯವಾಗಿ ಎಲ್ಲರಿಗೂ ಹೊಸ ಬಟ್ಟೆ ಇದ್ದೇ ಇರುತ್ತದೆ. ರಾತ್ರಿಯ ವೇಳೆಯಲ್ಲಿ ಮಾಂಸದ ಅಡಿಗೆಯನ್ನು ಎಡೆ ಹಾಕಲು ಪ್ರಾರಂಭಿಸುತ್ತಾರೆ. ಕೆಲವರು ತಮ್ಮ ಮನೆಯಲ್ಲಿರುವ ಮುಖ್ಯ ಸಾಮಾನುಗಳನ್ನು ಇಟ್ಟು ಹಿರಿಯರಿಗೆ ಬಟ್ಟೆ ಏರಿಸುತ್ತಾರೆ. ಉಪವಾಸವಿದ್ದು ಎಡೆ ದೂಪ ಮಾಡಿದ ಮೇಲೆ ಉಪವಾಸ ಬಿಡುತ್ತಾರೆ. ಕೆಲವರು ಕೇರಿ ಹಬ್ಬ ಎಂದೇ ಮಾಡುತ್ತಾರೆ. ಕೆಲವರು ಸಿಹಿ ಅಡುಗೆ ಮಾಡುವುದು ಇತ್ತೀಚಿಗೆ ಕಂಡುಬರುತ್ತದೆ.

ಕ್ರೀಸ್‌ಮಸ್

ನಮ್ಮ ಭಾರತವು ಎಲ್ಲಾ ಧರ್ಮಗಳು ಹೊಂದಿರುವ ದೇಶವಾಗಿದೆ. ಕೊರವರಲ್ಲಿ ಮತಾಂತರ ನಡೆಯುತ್ತಾರೆ. ಕೆಲವರು ಕ್ರೀಸ್‌ಮಸ್ ಹಬ್ಬವನ್ನು ಆಚರಿಸುತ್ತಾರೆ. ಕ್ರಿಶ್ಚಿಯನ್ಸ್‌ಗಳು ಎಲ್ಲ ಕಡೆ ಇರುವುದರಿಂದ ಅವರ ಪ್ರಭಾವವು ಕೊರವಲ್ಲಿಯೂ ಆಗಿದೆ. ಕ್ರಿಸ್‌ಮಸ್ ಹಬ್ಬದಲ್ಲಿ ಕ್ರೈಸ್ತ ದೇವರಿಗೆ ಮುಂಬತ್ತಿಯನ್ನು ಹಚ್ಚಿಬರುವುದುಂಟು.

ಕೊರವರು ತಮ್ಮ ದೈನಂದಿನ ಜೀವನದಲ್ಲಿ ಹರಕೆ ಹೋರುವ ಪದ್ಧತಿಯೂ ರೂಢಿಯಲ್ಲಿದೆ. ಹರಕೆ ರೂಪದಲ್ಲಿ ವರ್ಷಕ್ಕೊಮ್ಮೆ ಅಥವಾ ಮೂರು ವರ್ಷಕ್ಕೊಮ್ಮೆ ದೇವಿಗೆ ಹೋತಗಳನ್ನು ಬಲಿ ಕೊಡುತ್ತಾರೆ. ಈ ಬಲಿ ಕೊಡುವ ಪದ್ಧತಿ ಈ ಜನಾಂಗದು. ಅಂದರೆ ಗಿರಿಜನ, ಲಂಬಾಣಿ, ತಳವಾರ, ಹರಿಜನ, ಕೊರವರು, ಒಡ್ಡರುಗಳಲ್ಲಿ ಕಂಡುಬರುತ್ತದೆ. ಬಲಿ ಕೊಡುವಾಗ ಪ್ರಾಣಿಯನ್ನು ಮಾತ್ರ ಬಲಿಕೊಡುವುದಿಲ್ಲ. ಬಲಿ ಕೊಡುವ ಕುರಿಯ ಕೋಡು ಮುರಿದಿರಬಾರದು. ಕಾಲು ಯಾವುದೇ ಹಾನಿಯಾಗಿರಬಾರದು ಎಂಬ ನಿಯಮವಿದೆ. ಹೆಚ್ಚಾಗಿ ಜನಪದರು ತಮ್ಮ ಗ್ರಾಮ ದೇವಿಯ ಹೆಸರಿನಲ್ಲಿ ಒಟ್ಟು ಒಂದು ವರ್ಷಕ್ಕೆ ಅಥವಾ ಮೂರು ವರ್ಷಕ್ಕೆ ಮತ್ತೇ ೫ ವರ್ಷಕ್ಕೊಮ್ಮೆ ಬಲಿಕೊಡುತ್ತಾರೆ. ಹೀಗೆ ಭಕ್ತಿ ದೇವತೆಗಳಿಗೆ ಬಲಿಕೊಡುವ ಪದ್ಧತಿಯು ಹರಕೆಯ ರೂಪದಲ್ಲಿ ಇದೆ.

ಮುಡುಪಿನ ರೀತಿಯಲ್ಲಿ ಹರಕೆಯು ಸಹ ಬೇಡಿಕೊಂಡವರು ದೇವರ ಹೆಸರಿನಲ್ಲಿ ಹಣ ಸಂಗ್ರಹಿಸಿ ಆ ಹಣವನ್ನು ದೇವರ ಹುಂಡಿಗೆ ಹಾಕಿ ಅಥವಾ ಹಬ್ಬದಲ್ಲಿ ಬಳಸಿಕೊಳ್ಳುವುದು ಮಾಡುತ್ತಾರೆ. ನಮ್ಮ ಕಷ್ಟವನ್ನು ದೂರ ಮಾಡಲು ಸುಖಮಯವಾಗಿ ಜೀವಿಸಲಕ್ಕೆ ನಿನ್ನ ದಯೆ, ನಿನ್ನ ಆಶೀರ್ವಾದ ನಮ್ಮ ಮೇಲೆ ಸದಾ ಇರಲಿ ಎಂದು ಇಂದಿನ ಜನಪದರು ಬೇಡಿಕೊಳ್ಳುವುದು ಸರ್ವೇಸಾಮಾನ್ಯವಾದ ಪದ್ಧತಿ. ಭಕ್ತಾಧಿಗಳು ಹೆಣ್ಣು ದೇವರಿಗೆ ಸೀರೆ, ಮುಖರಾಮ, ಕಣ್ಣು, ಕೂರೆ ಮೋಸೆ, ಕುದುರೆ, ತೊಟ್ಟಿಲು, ಹಣ, ಒಡವೆ, ಮೊದಲಾದವುಗಳನ್ನು ನೀಡುತ್ತಾರೆ. ಹರಕೆಯ ರೂಪದಲ್ಲಿ ಹಾಕುವುದುಂಟು. ತಮ್ಮ ಊರಿನಿಂದ ತಂದ ಕೋಳಿಯನ್ನು ದೇವಿಯ ಹಬ್ಬದಲ್ಲಿ ಕೋಳಿ ಹಾರ ಮಾಡುವುದು ತಮ್ಮ ಕೈಯಿಂದ ಮಾಡುತ್ತಾರೆ. ದೇವಿಗೆ ಅರ್ಪಿತವೆಂದು ನಮ್ಮನ್ನೆಲ್ಲಾ ಕಾಪಾಡುವಳು ನೀನೇ ದೇವಿ ಎಂದು ಬೇಡಿಕೊಳ್ಳುತ್ತಾರೆ.

ದೇವತೆಗೆ ಆದಿದ್ಯೆವ, ನಿಜವಾದ ದೈವ, ರಕ್ಷಣಾ ದೇವತೆ ಎಂದು ನಂಬಿ ದೇವತೆಯ ಬಗ್ಗೆ

ಅಪಾರ ಶ್ರದ್ಧೆ ಗೌರವ ತೋರಿಸುವುದು ಹರಕೆಯ ರೂಪದಲ್ಲಿಯೇ. ಜಾತಿ ಪಂಥಗಳನ್ನು ಮೀರಿ ಎಲ್ಲಾ ಜಾತಿ ಜನಾಂಗದವರು ಶಕ್ತಿ ದೇವತೆಗಳಿಗೆ ಹರಕೆಯನ್ನು ಕೋಡುತ್ತೇನೆಂದು ಬೇಡಿಕೊಳ್ಳುವುದುಂಟು. ಆಯಾ ಕ್ಷೇತ್ರಗಳಲ್ಲಿ ಸ್ತ್ರೀ ದೇವಾಲಯಗಳೇ ಆಗಿರುವುದರಿಂದ ಶಕ್ತಿ ದೇವತೆಗಳ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಉದಾಹರಣೆಗೆ ಹುಲಿಗಿಯ ಹುಲಿಗೆಮ್ಮ ದೇವಾಲಯ, ಊರಿನಲ್ಲಿರುವ ಊರಮ್ಮ ದೇವಾಲಯ, ಮಾರಮ್ಮ ದೇವಾಲಯ, ಸುಂಕಲಮ್ಮ ದೇವಾಲಯ, ಕಣವಿಯಮ್ಮ ಹೆಣ್ಣು ದೇವತೆಗಳಿಗೆ ಹರಕೆಯನ್ನು ಹೊತ್ತು ಏನಾದರೂ ಒಂದು ವಸ್ತುವನ್ನು ಕೊಡುತ್ತೇನೆಂದು ಬೇಡಿಕೊಳ್ಳುವ ಭಕ್ತಾದಿಗಳು ಈ ಸಮುದಾಯದಲ್ಲಿ ಕಾಣುತ್ತೇವೆ. ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿಯು ಈ ಸಮುದಾಯದವರು ಸಹ ಹೆಚ್ಚಿನ ಪ್ರಮಾಣದಲ್ಲಿ ಇರುವುದು ಕಂಡುಬರುತ್ತದೆ. ಭಾವುಕರು ಪ್ರಕೃತಿಯ ಆರಾಧಕರು, ಕಷ್ಟ ಬಂದಾಗ ದೇವರಲ್ಲಿ ಮೊರೆ ಹೋಗುವುದು. ಅದಕ್ಕಾಗಿಯೇ ಹಳ್ಳಿಗರು ತಮ್ಮ ಗ್ರಾಮದಲ್ಲೊಂದು ಗುಡಿ ಕಟ್ಟಿ ತಮ್ಮ ಕಲ್ಪನೆಯ ಪ್ರತೀಕವೆನಿಸಿದ ಮೂರ್ತಿಯೊಂದನ್ನು ಗುಡಿಯಲ್ಲಿಟ್ಟು ಪೂಜಿಸಿ ತೊಡಗಿದರು. ಅದೇ ಅವರಿಗೆ ದೇವತೆಯ ಆಗಿ ಸಾಮೂಹಿಕ ಪೂಜೆ ನಡೆಯುತ್ತದೆ. ಅಮ್ಮಾ ಕಾರ್ಪಣ್ಯ ಬಂದಾಗ ದೇವಿಯು ಪರಿಹಾರ ಮಾಡುವಳು ಎಂಬ ಗಾಢವಾದ ನಂಬಿಕೆಯಿದೆ.

ಮನಸ್ಸಿನಲ್ಲಿ ಮೂಡಿದ ಬಯಕೆಯನ್ನು ಪೂರೈಸುವಂತೆ ದೇವರಲ್ಲಿ ಬೇಡಿಕೊಳ್ಳುವುದು, ಬಯಕೆಯನ್ನು ದೇವರು ಪೂರೈಸಿಕೊಟ್ಟದ್ದೆಯಾದರೆ ಅದಕ್ಕೆ ಪರ್ಯಾಯವಾಗಿ ಯಾವುದನ್ನು ಕೊಡುತ್ತೇವೆ ಎಂದು ಅಂದುಕೊಂಡಿರುತ್ತೇವೋ ಅದನ್ನು ಕೊಡುವುದು ಅಥವಾ ಪ್ರಮಾಣಿಕತೆಯಿಂದ ನಿಭಾಯಿಸುವುದು. ಧಾರ್ಮಿಕ ಆಚರಣೆಗೆ ಒಳಪಟ್ಟದಾಗಿದರಿಂದ ಹರಕೆ ಸಂಪ್ರದಾಯವಲ್ಲ. ಸಂಪ್ರದಾಯ ನಮ್ಮೊಂದಿಗೆ ತಾನಾಗಿ ಸಾಮಾಜಿಕ ಜೀವನದ ಅಂಗವಾಗಿ ಕೂಡಿ ಬಂದರೆ, ಹರಕೆ ಎನ್ನುವುದು ವ್ಯಕ್ತಿಗತವಾಗಿ ಬಯಸಿ ತಂದುಕೊಂಡದ್ದಾಗಿರುತ್ತದೆ.

ಉಡುಗೊರೆ, ಹರಕೆಗಳು, ಬಲಿಕೊಡುವ ಹರಕೆಗಳು, ನಿರ್ಮಾಣ ಹರಕೆಗಳು, ನಿಗದಿಯಾದ ವಸ್ತುವನ್ನು ಯಥಾವತ್ತಾಗಿ ದೇವರಿಗೆ ಅರ್ಪಿಸುವಂತವುಗಳನ್ನು ಉಡುಗೊರೆ ಎಂದು ಕರೆಯಲಾಗಿದೆ. ಎಲ್ಲ ಬಗೆಯ ಹರಕೆಗಳಗಿಂದ ಉಡುಗೊರೆ ಹರಕೆಗಳು ಬಹುವ್ಯಾಪಕ ಮತ್ತು ಸಮೃದ್ಧವಾಗಿದೆ.

ಭಾರತೀಯ ಜನಜೀವನ ದೈವಭಕ್ತಿ ಪ್ರಧಾನವಾದದ್ದು, ಜನತೆಯಲ್ಲಿ ದೈವ ಮಹಿಮೆ ಭಕ್ತಿ, ಶ್ರದ್ಧೆಗಳ ಪ್ರಕಾಶನಕ್ಕೆ, ಪ್ರಸಾರಕ್ಕೆ ಹಬ್ಬ ಹರಿದಿನ, ವ್ರತ, ಕತೆ, ಪುರಾಣ, ಯಾತ್ರೆ, ಜಾತ್ರೆಗಳೆಲ್ಲ ಪೋಷಕ, ಹಬ್ಬದಾಚಾರಣೆಯಾದರೂ ಸಾಂಕ್ರಮಿಕ. ಒಬ್ಬರೂ ಮಾಡಿದಂತೆಯೇ ಮತ್ತೊಬ್ಬರು ಮಾಡದೆ ಇದ್ದರೂ ಇನ್ನೊಬ್ಬರಿಗಿಂತ ಉತ್ತಮವಾಗಿ ಹಬ್ಬ, ಉತ್ಸವ, ದೈವಾರಾಧನಾತೆಯಿಂದ ಮಾಡಬೇಕೆಂಬ ಹಂಬಲ ಎಲ್ಲ ಭಕ್ತಾದಿಗಳಿಗೂ ಉಂಟು. ಕೊರಮರಿಗೆ ತಮ್ಮ ತಮ್ಮ ಮನೆ ದೇವರು, ಕುಲದೇವರು ತಮ್ಮ ಪಿತೃದೇವತೆಗಳು, ತಾವೂ ಮರೆಬಿದ್ದ ದೇವರು ತಮ್ಮನ್ನು ಮರೆಹೊಕ್ಕ ದೇವರು, ಕಾಡಿದ ಬೇಡಿದ ದೇವರು ಜೋಯಿಸರ ಶಾಸ್ತ್ರದಲ್ಲಿ ಹುಟ್ಟಿದ ದೇವರು ಇವರೆಲ್ಲರಿಗೂ ಭಕ್ತಿಯಿಂದ ನಡೆದುಕೊಳ್ಳುತ್ತೇವೆ. ಪ್ರಾಕೃತಿಕವಾದ ನೆಲ ಮಳೆ, ಒಲೆ, ರಾಗೀಕಲ್ಲು, ಮೊರ, ಕಸಬಾರಿಕೆ ಇವು ಕೂಡ

ಇವರಿಗೆ ದೈವವೇ. ನಾಯಿ ನಾರಾಯಣಸ್ವಾಮಿ, ಮೊರ, ಕಸಬಾರಿಕೆ ಇವು ಕೂಡ ಲಕ್ಷ್ಮೀ ಎಂಬ ನಂಬಿಕೆ. ಈ ಜನ ಮುಸ್ಲಿಮರ ರಂಜಾನ ಹಬ್ಬದಲ್ಲಿ ವೇಷ ಕಟ್ಟುತ್ತಾರೆ, ಹರಕೆಯನ್ನು ಕಟ್ಟಿಕೊಳ್ಳುತ್ತಾರೆ.

ತಮ್ಮ ಬಂಧುಬಳಗದವರಷ್ಟೇ ಸೇರಿಕೊಂಡು ಮಾಡುವ ಹಬ್ಬ ಹರಿದಿನಗಳು ಉದಾಹರಣೆಗೆ: ಒಂದು ಮನೆ ದೇವತೆ- ಹುಲಿಗೆಮ್ಮ, ಹರಕೆ ಒತ್ತುಕೊಂಡು ಪೂಜೆ ಸಲ್ಲಿಸಲಾಗುತ್ತದೆ.

ಕೊರವರು ಪ್ರಮುಖವಾಗಿ ಶಕ್ತಿದೇವತೆಗಳನ್ನು ಆರಾಧಿಸುತ್ತಾರೆ. ಹುಲಿಗೆಮ್ಮ, ಮಾರೆಮ್ಮ, ಸುಂಕಲಮ್ಮ, ಯಲ್ಲಮ್ಮ, ತಾಯಮ್ಮ, ಊರಮ್ಮ ಮೊದಲಾದ ದೇವತೆಗಳನ್ನು ಹೆಚ್ಚಾಗಿ ಪೂಜಿಸುತ್ತಾರೆ. ಈ ದೇವತೆಗಳು ಇವರ ಕುಲದೇವತೆಗಳು ಆಗಿದ್ದಾರೆ. ಎಲ್ಲ ದೇವತೆಗಳನ್ನು ಮಂಗಳವಾರ, ಶುಕ್ರವಾರ ಪೂಜಿಸುವುದು ಈ ತಾಯಮ್ಮ ದೇವತೆ. ಈ ದೇವತೆ ಊರನ್ನು, ತಮ್ಮನ್ನು ಕಾಪಾಡುತ್ತಾಳೆಂದು ನಂಬುತ್ತಾರೆ. ಪೂಜೆಯ ದಿನ ಸ್ನಾನಮಾಡಿ ಉಪವಾಸದಿಂದ ಪೂಜಿಸ ಬೇಕಾಗುತ್ತದೆ. ಸಂಜೆ ಮಾತ್ರ ಊಟ ಮಾಡುತ್ತಾರೆ. ಈ ದೇವತೆಗೆ ವರ್ಷಕೊಂದು ಸಲ ಕುರಿ ಬಲಿ ಕೊಡುವುದು ಇವರ ಪದ್ಧತಿಯಾಗಿದೆ.

ಹಬ್ಬದ ದಿನ ಎಂಟು, ಒಂಬತ್ತು ಗಂಟೆಗೆ ಗಂಗೆಗೆ (ನೀರು ತರಲು ಹೋಗುವುದು) ಹೋಗುವರು. ಗಂಗೆಗೆ ಹೋಗುವಾಗ ಕೊರವರ ಬಂಧುಬಳಗ, ಓಲಗದೊಂದಿಗೆ ಹೋಗುತ್ತಾರೆ. ಪೂಜಾ ವಿಧಾನ ಪೂರೈಸಿದ ನಂತರ ನೀರಿನೊಂದಿಗೆ ಮೆರವಣಿಗೆ ಮಾಡುತ್ತಾ ದೇವಾಲಯಕ್ಕೆ ಬರಲಾಗುತ್ತದೆ.

ಉದಾಹರಣೆಗೆ ಕೊರವರು ಜಾತ್ರೆಗೆ ಹೋಗುವುದನ್ನು ಈ ಹಾಡು ತಿಳಿಸುತ್ತದೆ.

“ಹಚ್ಚೆ ಸುರಾರಂಗ ವಚ್ಚೆ ನುರಾ
ನೇನು ಮಾರೆಮ್ಮ ತೇರು ಜೂಡ ವಚ್ಚೆನೂರಾ
ಕಾರು ಕೋಡು ಕೂಸುಕೂಗಿ ಕಮ್ಮಂಗಿ
ಕಾಸಿನ ತೆಲ್ಲವಾರ್ಲ ವಚ್ಚೆ ನುರಾ
ಒಂದೇನೂರಂಗ ಒಂದೇನೋ
ನಾನು ಮಾರೆಮ್ಮ ತೇರು ನೋಡ ಒಂದೇನೋ
ಹಂದಿಕೋಳಿ ಕೊಯ್ದುಕೊಂಡು ಚೆನ್ನಾಗಿ ತಿಂದು ಬಿಟ್ಟಿ
ನಿದೆ ಇಲ್ಲದ ಹಗಲು ರಾತ್ರಿ ಒಂದೇನೋ”[೧೪]

ಈ ಹಾಡಿನಿಂದ ಕೊರವರ ಸಂಸ್ಕೃತಿ, ಅವರು ಜಾತಿಗೆ ಹೋಗುವ ರೀತಿಯನ್ನು ಇಲ್ಲಿ ಕಾಣುತ್ತೇವೆ. ಕೊರವ ಸಂಸ್ಕೃತಿಯಿಂದ ಅವರ ಜೀವನ ವಿಧಾನದಿಂದ ಅವರ ಪರಿಸರವನ್ನು ಕಾಣಬಹು ದಾಗಿದೆ. ಕೋಲಾಟದ ಹಾಡಿನಲ್ಲಿ ಉಪಮೆಗಳನ್ನು ಕೇಳಬಹುದು.

“ಒಳ್ಳೆದಯ್ಯ ಬಾಳು ಒಳ್ಳೆದಯ್ಯ
ಅನಂತದೇವರಿಗೆ ನಮಸ್ಕಾರಯ್ಯ

ಎರಡು ಕಾಲು ಎಮ್ಮೆ ಕಟ್ಟಬೇಕಂತೆ
ಬೆಂಕಿಯಿಲ್ಲದ ಹಾಲು ಕಾಯಿಸಬೇಕಂತೆ
ಬಾಯಿಯಿಲ್ಲದ ಬಾಲಕೇನು ಕುಡಿಬೇಕಂತ
ಒಳ್ಳೆಯದಯ್ಯ ಬಾಳ ಒಳ್ಳೆದಯ್ಯ"[೧೯]

ಇವರಿಗೆ ವಿಶಿಷ್ಟವಾಗಿರುವ ಯಾವ ಹಬ್ಬವೂ ಇಲ್ಲ ಅವರು ಉಳಿದ ಜನರೆಲ್ಲರೂ ಆಚರಿಸುವಂತೆಯೇ ಯುಗಾದಿ, ಶಿವರಾತ್ರಿ, ನಾಗರಪಂಚಮಿ ಆಚರಿಸುತ್ತಾರೆ. ಕೊರವ ಸಮುದಾಯದವರು ತಮ್ಮ ಹಬ್ಬಗಳ ಜೊತೆಗೆ ನಾಡಹಬ್ಬಗಳನ್ನು ಆಚರಿಸುತ್ತಾರೆ. ಮೊದಲು ಕೇವಲ ತಮ್ಮ ಸಮುದಾಯಕ್ಕೆ ಸಿಮೀತ ಹಬ್ಬಗಳನ್ನು ಆಚರಿಸುತ್ತಿದ್ದರು. ಆದರೆ ಇತ್ತೀಚೆಗೆ ಬದಲಾವಣೆಯಿಂದಾಗಿ ಗಣೇಶ ಹಬ್ಬ, ದೀಪಾವಳಿ, ಯುಗಾದಿ, ಮಹಾನವಮಿ, ಆಯುಧ ಪೂಜೆ ಮೊದಲಾದ ಹಬ್ಬಗಳನ್ನು ಆಚರಿಸುತ್ತಿದ್ದಾರೆ. ಇತ್ತೀಚೆಗೆ ಯುವಕರು ಸಾಮಾನ್ಯವಾಗಿ ನಗರ ಮತ್ತು ಹಳ್ಳಿಗಳಲ್ಲಿ ದೀಪಾವಳಿ ಹಬ್ಬವನ್ನು ಆಚರಿಸುವಂತೆ ಪಟಾಕಿಗಳೊಂದಿಗೆ ಹಬ್ಬವನ್ನು ಆಚರಿಸುತ್ತಾರೆ. ಯುಗಾದಿ ಹಬ್ಬವು ಇತರೆ ಜನಾಂಗದವರಿಗೆ ಇದ್ದಂತೆ ಕೊರವ ಜನಾಂಗದವರಿಗೆ ಹೊಸ ವರ್ಷದ ಆರಂಭದ ದಿನವಾಗಿದ್ದರೂ ಈ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಹಬ್ಬದ ದಿವಸ ಇವರು ತಮ್ಮ ತಮ್ಮ ದೇವರುಗಳಿಗೆ ಶೃಂಗರಿಸಿ ವಿಶೇಷವಾಗಿ ಪೂಜಿಸುತ್ತಾರೆ. ಅದರಲ್ಲಿಯೂ ತಮ್ಮ ಆಭರಣಗಳಿಂದ ರಾತ್ರಿಯಲ್ಲಿ ಪೂಜೆ ಮಾಡಲಾಗುತ್ತಾರೆ. ಇವರು ಆಚರಿಸುವ ಹಬ್ಬಗಳಲ್ಲಿಯೂ ಕಾರಹುಣ್ಣಿಮೆಯು ಮುಖ್ಯವಾಗಿದೆ. ತಮ್ಮ ವ್ಯಾಪಾರವು ಕಾರಹುಣ್ಣಿಮೆಗೆ ಮುಗಿಯುವುದರಿಂದ ವರ್ಷದಲ್ಲಿ ದುಡಿದ ಹಣವು ಒಂದೇ ಸಾರಿ ಬರುತ್ತದೆ. ಆದ್ದರಿಂದ ತಮ್ಮ ಮನೆಗಳಲ್ಲಿ ಹಬ್ಬದ ವಾತಾವರಣವು ಹಬ್ಬದ ರೀತಿಯಲ್ಲಿ ನಡೆಯುತ್ತದೆ.

ಈ ಹಬ್ಬಗಳಲ್ಲಿ ಅವರು ಸ್ನಾನ ಮಾಡಿ, ಹಣ ಉಳ್ಳವರು ಹೊಸ ಬಟ್ಟೆಗಳನ್ನು ಧರಿಸುತ್ತಾರೆ. ಕೆಲವರು ಇದ್ದ ಬಟ್ಟೆಗಳನ್ನು ಧರಿಸಿ, ದೇವರಿಗೆ ಹಣ್ಣು ಕಾಯಿ ಮಾಡಿಸುತ್ತಾರೆ. ತಮ್ಮ ಕೈಲಾದ ಅಡುಗೆ ಮಾಡಿ, ಎಡೆ ಇಟ್ಟು ಊಟ ಮಾಡುತ್ತಾರೆ. ಅವರ ಹಬ್ಬಗಳಲ್ಲಿ ವಿಶೇಷವೆಂದರೆ ತಮ್ಮ ಕುಲದೇವತೆಯ ಹಬ್ಬಗಳು ಮಾತ್ರ ಹುಲಿಗೆಮ್ಮ ಕೊರವರ ಮಾರೆಮ್ಮ, ಸುಂಕಲಮ್ಮ ದೇವರುಗಳು ಮುಖ್ಯವಾಗಿರುತ್ತವೆ.

ಯಾವುದೇ ಒಂದು ಸಮುದಾಯಕ್ಕೆ ತನ್ನದೇ ಆದ ದೈವಗಳ ಆಚರಣೆ ಇರುತ್ತದೆ. ಅಂತಾದ ದೈವಗಳನ್ನು ಅವರು ತಮ್ಮದೇ ಆದ ಕ್ರಮದಲ್ಲಿ ಪೂಜಿಸುವುದು, ಸ್ಥಾಪಿಸುವುದು ಅವುಗಳ ಕುರಿತ ನಂಬುಗೆಗಳನ್ನು ಇಟ್ಟುಕೊಳ್ಳುವುದು, ವಿಧಿ ನಿಷೇಧಗಳು ಇದ್ದೆ ಇರುತ್ತದೆ. ಮೂಲತಃ ಇವರು ಸ್ತ್ರೀಪ್ರಧಾನ ಸಂಸ್ಕೃತಿಯಲ್ಲಿ ಬೆಳೆದ ದ್ರಾವಿಡ ಮೂಲದ ಸಮುದಾಯವಾಗಿದೆ. ಇವರಿಗೆ ಸ್ತ್ರೀ ದೈವಗಳೇ ಪ್ರಧಾನವಾಗಿ ಕಂಡುಬರುತ್ತವೆ. ಪುರುಷ ದೈವಗಳೂ ಸಹ ಇವರಲ್ಲಿ ಪ್ರಾಮುಖ್ಯತೆ ಗಳಿಸಿದರೂ ಅವುಗಳಿಗೆ ಇವರು ಎರಡನೇ ಸ್ಥಾನದ ಕಲ್ಪನೆ ಇದೆ ಎಂದು ಹೇಳಬಹುದು. ಆ ಕಾರಣಕ್ಕಾಗಿಯೇ ಕೊರವರು ವೆಂಕಟೇಶ್ವರನಿಗೆ ಹುಲಿಗೆಮ್ಮ ದೇವಿ ಸಿಕ್ಕ ಪ್ರಾಧಾನ್ಯತೆ. ಇತರ ದೈವಗಳಿಗೆ ಸಿಕ್ಕಿರುವುದು ಕಡಿಮೆ

ಎಂದು ತೋರುತ್ತದೆ. ಅವರ ಮೂಲ ಆರಾಧನ ದೈವ ಹುಲಿಗೆಮ್ಮ ಆಕೆಯ ನಂತರ ಹುಲಿಗೆಮ್ಮ, ಯಲ್ಲಮ್ಮ ಸುಂಕಲಮ್ಮ, ಮೊದಲಾದ ದೈವಗಳನ್ನು ಆರಾಧಿಸುವ ಪರಿಪಾಠವಿದೆ. ಇವುಗಳ ನಂತರ ವೆಂಕಟೇಶ ಅಥವಾ ತಿರುಪತಿ ತಿಮ್ಮಪ್ಪನ ಕುರಿತು ಇವರು ಆರಾಧ್ಯ ಭಾವನೆಯನ್ನು ಒಳಕೊಂಡಿದ್ದಾರೆ.

ಕೆಲವರು ಹಲವಾರು ವಿಧಗಳಲ್ಲಿ ದೈವಗಳನ್ನು ಆರಾಧಿಸುತ್ತಾರೆ. ಯುಗಾದಿಯ ನಂತರದ ಜಾತ್ರೆ, ದೀಪಾವಳಿ ಸಂದರ್ಭದಲ್ಲಿ ಅಥವಾ ದಸರಾ ಸಂದರ್ಭದಲ್ಲಿ ಈರಣ್ಣ ದೇವರಿಗೆ ಹೋಗಿ ಬರುವುದು, ನಂತರ ಉರುಳು ಸೇವೆ, ಗಂಡಾರ್ತಿಸೇವೆ ಮೊದಲಾದವುಗಳು ನಡೆಯುತ್ತವೆ. ಇವರು ದಸರಾ ದೀಪಾವಳಿ, ಯುಗಾದಿಯಂತಹ ವಿಶೇಷ ದಿನಗಳಲ್ಲಿ ತಮ್ಮ ಕುಲದ ಸಾಮಗ್ರಿಗಳನ್ನು ಇಟ್ಟು ಪೂಜೆ ಮಾಡುವುದು. ಕೆಲವರು ಕೋಳಿ ಬಲಿ ಕೊಡುವ ಪರಿಪಾಠವನ್ನು ಇಟ್ಟುಕೊಂಡಿದ್ದಾರೆ. ಆದರೆ ಇಂದು ಬಹುತೇಕವಾಗಿ ಕೊರವರು ತಮ್ಮ ಮೂಲ ಕಸುಬಿಗೆ ದೂರಾಗುತ್ತಿದ್ದಾರೆ. ಆದರೂ ಸಹ ತಮ್ಮ ಹಬ್ಬ ಹರಿದಿನಗಳಲ್ಲಿ ಒಂದೆಡೆ ಸೇರಿ ಪೂಜೆ ಸಲ್ಲಿಸುವುದನ್ನು ನೋಡಬಹುದಾಗಿದೆ.

ಹುಲಿಗೆಮ್ಮ, ಯಲ್ಲಮ್ಮನ ಭಕ್ತರೂ ಸಹ ಆಗಿರುವ ಇವರು ಈ ದೈವಗಳನ್ನು ಕಾಳಿಯ ಸಹೋದರಿಯರೆಂದು ಪರಿಗಣಿಸುತ್ತಾರೆ. ಆದರೆ ಇವರಿಗಾಗಿ ವಿಶೇಷವಾದ ದೇವಾಲಯಗಳನ್ನು ನಿರ್ಮಿಸಿಕೊಂಡಿರುವ ಉದಾಹರಣೆಗಳಿವೆ. ಕೊರವರು ಇರುವ ಓಣಿ ಅಥವಾ ಕೇರಿಗಳಲ್ಲಿ ಹುಲಿಗೆಮ್ಮ, ಸುಂಕಲಮ್ಮ, ದುರ್ಗಮ್ಮನ ಗುಡಿಗಳನ್ನು ಕಟ್ಟಿಸಿಕೊಂಡಿರುವುದು ಬಳ್ಳಾರಿ ಜಿಲ್ಲೆಯ ಹಲವಾರು ಊರುಗಳಲ್ಲಿ ಕಂಡುಬರುವುದುಂಟು. ಕೆಲವು ವ್ಯಕ್ತಿಗಳಲ್ಲಿ ಹುಲಿಗೆಮ್ಮ ಆವಾಹಣೆಗೊಂಡು ವಿಶೇಷ ಸಂದರ್ಭಗಳಲ್ಲಿ ಹೇಳಿಕೆ ಇತ್ಯಾದಿ ನಡೆಯುವುದುಂಟು. ಇವುಗಳಿಗಾಗಿ ವಿಶೇಷ ಆಚರಣೆಗಳಿಲ್ಲ. ತಮ್ಮ ಮನೆಯಲ್ಲಿ ಯಾವುದೇ ಒಂದು ವಸ್ತು ಕಾಣೆಯಾದಾಗ, ಮನೆಯಲ್ಲಿ ಯಾರಾದರೂ ಸುಸ್ತುದಾಗ ಮನೆಗೆ ಯಾವುದಾದರೊಂದು ತೊಂದರೆ ಇದೆ ಎಂದು ತಿಳಿದು ಹುಲಿಗೆಮ್ಮನಲ್ಲಿ ಹೋಗಿ ಹೇಳಿಕೆ ಕೇಳಿಸಿಕೊಂಡು ಬರುತ್ತಾರೆ. ಇದು ಒಂದು ವಾಡಿಕೆಯಾಗಿದೆ.

ಯಲ್ಲಮ್ಮನಿಗೆ ಹೋಗುವಷ್ಟು ಅನುಕೂಲತೆಗಳನ್ನು ಹೊಂದಿದ ಕೊರವರು ಯಲ್ಲಮ್ಮ ಅಥವಾ ಹುಲಿಗೆಮ್ಮರ ಅಡ್ಡಲಿಗೆಗಳನ್ನು ಮನೆಯಲ್ಲಿಯೇ ಇಟ್ಟುಕೊಂಡಿರುತ್ತಾರೆ. ಕೆಲವರು ಒಂದು ಹುಣ್ಣಿಮೆ ಅಥವಾ ಅಮಾವ್ಯಾಸೆಗಳಲ್ಲಿ ಜೋಗತಿಯರನ್ನು ಕರಸಿ ಅಡ್ಡಲಿಗೆ ತುಂಬಿಸಿ, ಜೋಗ ಹೇಳಿಸುವ ಮೂಲಕ ಆ ದೈವಗಳನ್ನು ಮನೆಗೆ ತುಂಬಿಸಿಕೊಳ್ಳುವ ವಾಡಿಕೆ ಇದೆ. ವಿಶೇಷ ಸಂದರ್ಭದಲ್ಲಿ ಯಲ್ಲಮ್ಮ, ಹುಲಿಗೆಮ್ಮ, ಗಾಳೆಮ್ಮ ದೈವಗಳಿಗೆ ಕುರಿ ಕೋಳಿ ಬಲಿ ಕೊಡುವ ಪದ್ಧತಿಯು ಇದೆ. ವರ್ಷಕ್ಕೆ ಒಂದು ಬಾರಿ ಇಲ್ಲದೇ ಹರಕೆಯ ರೂಪದಲ್ಲಿ ಈ ರೀತಿ ಮಾಡಲಾಗುತ್ತದೆ. ಮೂರು ವರ್ಷಕ್ಕೊಂದು ಸಾರಿ ಕೊರವರ ಮಾರೆಮ್ಮನನ್ನು ಮಾಡುವುದು ವಾಡಿಕೆಯಾಗಿದೆ. ಈ ಸಂದರ್ಭದಲ್ಲಿ ಗಂಡ್ದೀಪ ತರುವುದು ಸಹ ಕಂಡುಬರುತ್ತದೆ.

ಹಬ್ಬ-ಹರಿದಿನಗಳು ಭಕ್ತಿ ಧರ್ಮ ಮತ್ತು ವ್ರತಾಚರಣೆ ಸಂಬಂಧಿಸಿದ ಶುಭ ದಿನಗಳು, ಸಾಂಸ್ಕೃತಿಕ ಸಂವರ್ಧಕ ದಿನಗಳೂ ಆಗಿದೆ. ಇವುಗಳು ಆಚರಣೆಯು ಪವಿತ್ರವಾಗಿದೆ. ಹಿಂದುಗಳಾದ ನಮಗೆ

ಧರ್ಮವೇ ಬಾಳಿನ ಉಸಿರು ಆಗಿದೆ. ಧರ್ಮದ ಕುಶಲತೆಯೇ ಬಾಳಿನ ತಂತ್ರ, ಜ್ಞಾನ ಪೂರ್ಣ ಅರಿವೇ ಆಗಿರುತ್ತದೆ. ಅತ್ಯಂತ ಪ್ರಾಚೀನ ಕಾಲದಿಂದಲೂ ಹಬ್ಬ ಹರಿದಿನಗಳನ್ನು ಕೊರವರು ಆಚರಿಸಿ ಕೊಂಡು ಬರುತ್ತಿದ್ದಾರೆ. ಕಾಲಕಾಲಕ್ಕೆ ತಕ್ಕಂತೆ ಅನೇಕ ಬದಲಾವಣೆಗಳು ಸಾಗಿಬಂದಿದೆ. ನಂಬಿಕೆಗಳು ಜೀವನ ಮಾರ್ಗದ ಸಾಧನ ವಿಶೇಷಗಳು, ಜೀವನದ ದಾರಿ ಸಾಗಲು ಇರುವ ದಾರಿಯ ಮೈಲಿಗಲ್ಲುಗಳು.

ಬೆಡಗುಗಳು

ಬೇರೆ ಮೇಲ್ವರ್ಗದವರಲ್ಲಿ ಗೋತ್ರಗಳಿರುವ ಹಾಗೆ ಕೊರವ ಸಮುದಾಯದಲ್ಲಿಯೂ ಬೆಡಗುಗಳಿವೆ. ಇಂದಿಗೂ ಅವುಗಳ ಪಾಲನೆ ಅತಿ ಕಟ್ಟುನಿಟ್ಟಾಗಿ ನಡೆಯುತ್ತದೆ. ತನ್ನ ಮೂಲದ ಶುದ್ಧತೆಯನ್ನು ಕಾಯ್ದುಕೊಳ್ಳುವಲ್ಲಿ ಈ ಬೆಡಗುಗಳು ಪ್ರಮುಖ ಪಾತ್ರ ವಹಿಸುತ್ತವೆ. ಈ ಕಾರಣಕ್ಕಾಗಿಯೇ ಹಿಂದೆ ಈ ಬೆಡಗುಗಳು ರೂಪುಗೊಂಡಿವೆ. ಈ ಸಮುದಾಯದಲ್ಲಿ ಯಾವುದೇ ಹೆಸರಿನಿಂದ ಕರೆಸಿಕೊಳ್ಳು ತ್ತಿದ್ದರೂ ಇವರು ಯಾವ ಪ್ರದೇಶದವರೇ ಆದರೂ ನಂಟಸ್ತಿಕೆಗಳನ್ನು ಬೆಡಗುಗಳ ಮೂಲಕವೇ ನಡೆಸುತ್ತಾರೆ. ಬೆಡಗುಗಳೆಂದರೆ ಕಾವಾಡಿ, ಸಾತಪಡಿ, ಮಾನಪಡೆ, ಮ್ಯಾನ್ರಗುತ್ತಿ ಕೊರವರಲ್ಲಿ ಕಾವಾಡಿ, ಸಾತಪಾಡಿ ಕಂಡುಬಂದರೆ, ಕೊರಚರಲ್ಲಿ ಮ್ಯಾನಪಾಡಿ, ಮ್ಯಾನ್ರಗುತ್ತಿಯನ್ನು ಕಾಣಬಹುದು. ಕೊರಚರಲ್ಲಿ ಕೊರವರಲ್ಲಿ ಹೆಣ್ಣು ಗಂಡು ನಡೆಯುವುದಿಲ್ಲ. ಕೇಳಿದರೆ ಒಬ್ಬರಿಗೊಬ್ಬರು ಅವರಿಗಿಂತ ನಾವೇ ಮೇಲು ಎಂದು ಹೇಳುತ್ತಾರೆ. ''ಕನ್ನಡ ಜಾನಪದ ವಿಶ್ವಕೋಶದಲ್ಲಿ ಮೈನ್ ವಾರಿಂಗ್ ಅವರು ಬೆಡಗುಗಳ ಬಗೆಗೆ ಹೇಳಿದ್ದಾರೆ. ಅವುಗಳಲ್ಲಿ ೧. ಸಂಕೈ, ಸಂಪತಿ, ಸಾತುಪಡಿ. ೨. ಕಾವಡಿ ಅಥವಾ ಗಜ್ಜಲ. ೩. ದೇವರಕೊಂಡ ೪. ಮಿಂಡ್ರಕಟ್ಟಿ ಅಥವಾ ಮಿನಪಡಿ ಮೊದಲ ಎರಡು ವರ್ಗದವರು ಶುದ್ಧ ಕೊರವರು, ಅಂದರೆ ಕೊರವರ ಜಾತಿಯಲ್ಲಿ ನ್ಯಾಯಬದ್ಧವಾಗಿ ವಿವಾಹವಾದವರಲ್ಲಿ ಹುಟ್ಟಿದವರು. ಮೂರನೆಯ ವರ್ಗದವರು ಮಿಶ್ರ ಮದುವೆಯಿಂದ ಜನಿಸಿದವರು ಎಂದು ತಿಳಿಸಲಾಗುತ್ತದೆ".[೧]

ಕೊರವರು ತಾವು ಇತರ ಗುಂಪುಗಳಾದ ಕೊರಚರು, ಕುಂಚಿ ಕೊರವರಿಗಿಂತ ಮೇಲೆಂದು ಹೇಳುತ್ತಾರೆ. ಕೊರವರನ್ನು ಊರ ಕೊರವರು, ಭಜಂತ್ರಿ ಕೊರವರು, ಪುಟ್ಟಿ ಕೊರವರು, ಹಗ್ಗದ ಕೊರವರು ಎಂದು ಕರೆದುಕೊಳ್ಳುತ್ತಾರೆ. ತಮಿಳುನಾಡಿನಲ್ಲಿ ಉಯಲೋ ಕೊರವರು, ತೋಗ ಕೊರವರು, ಕಾಡು ಕಟ್ಟುಕಿರವರ, ಪಾಮೂಲು ಕೊರವರು ಎಂಬುದಾಗಿ ತಿಳಿದುಬರುತ್ತದೆ. ಕೊರವರು ಉಳಿದ ಪಂಗಡಗಳಿಗಿಂತ ಮೊದಲೇ ಊರುಗಳ ಜೊತೆ ಸಂಪರ್ಕ ಬೆಳಸಿ ತಮ್ಮ ಮೂಲ ಬುಡಕಟ್ಟು ಲಕ್ಷಣಗಳನ್ನು ಹಂತ ಹಂತವಾಗಿ ಕಳೆದುಕೊಳ್ಳುತ್ತಾ, ಊರಿನಲ್ಲಿಯ ಇತರ ಜಾತಿ ಜನಾಂಗಗಳನ್ನು ತಮ್ಮ ದೈನಂದಿನ ಬದುಕಿನಲ್ಲಿ, ಧಾರ್ಮಿಕ ಮತ್ತು ಲೌಕಿಕ ವಿಧಿವಿಧಾನಗಳಲ್ಲೇ ಅನುಸರಿಸಿ ಊರಿನವರೇ ಆಗಿದ್ದಾರೆ. ತಾವು ಉಳಿದವರಿಗಿಂತ ಶ್ರೇಷ್ಠರು ಎಂಬ ಈ ಕಾರಣಕ್ಕಾಗಿಯೇ ಇವರು ಉಳಿದ ಪಂಗಡಗಳಲ್ಲಿ ಜೊತೆ ಊಟೋಪಚಾರ ಮಾಡುವುದಿಲ್ಲ. ಇವರಲ್ಲಿ ಎರಡು ಗೋತ್ರಗಳು ಕಾವಾಡಿ, ಸಾತ್ಪಾಡಿ ಅನೇಕ ಉಪ ಪಂಗಡಗಳಿವೆ.

ಕೊರವರು ಅಲೆಮಾರಿಗಳಾದರೂ ಈ ಸಾವಿರಾರು ವರ್ಷಗಳಲ್ಲಿ ಕೌಟುಂಬಿಕ ಜೀವನವನ್ನೇ ಕಾಣುತ್ತೇವೆ. ಇವರಲ್ಲಿ ಕಂಡುಬರುವ ಬೆಡಗುಗಳು ಮಾತ್ರ ತೀರಾ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ. ಅಷ್ಟೇ ಅಲ್ಲ. ಅವು ಇವರು ಒಂದು ಮೂಲನೆಲೆಯಿಂದ ಬಂದವರು ಪೂರ್ವದಲ್ಲಿಯೇ ಈ ಬೆಡಗುಗಳನ್ನು ರೂಢಿಸಿಕೊಂಡಿರುವುದು ಗೋಚರವಾಗುತ್ತದೆ. ಇವರಲ್ಲಿ ಒಂದೇ ಬೆಡಗಿನಲ್ಲಿ ಹೆಣ್ಣು ಗಂಡು ಕೊಟ್ಟು ತರುವ ಪದ್ಧತಿಯಲ್ಲಿ ಒಂದು ವೇಳೆ ಅಂಥದ್ದೇನಾದರೂ ನಡೆದರೆ ಅಂತವರನ್ನು ಕುಲದಿಂದ ಹೊರಗೆ ಇಟ್ಟು ಮೂರು ಕುಲದವರೆಂದು ಹೇಳುತ್ತಾರೆ. ಕೊರವರಲ್ಲಿ ಕಾವಾಡಿ, ಸಾತ್ಪಾಡಿ ಕಂಡುಬರುತ್ತವೆ. ಇಂದಿಗೂ ಅವುಗಳ ಪಾಲನೆಯು ಅತಿ ಅಚ್ಚುಕಟ್ಟಾಗಿ ನಡೆಯುತ್ತದೆ. ತನ್ನ ಮೂಲದ ಶುದ್ಧತೆಯನ್ನು ಕಾಯ್ದುಕೊಳ್ಳುವಲ್ಲಿ ಈ ಸಮುದಾಯದವರು ಪ್ರಮುಖ ಪಾತ್ರ ವಹಿಸುತ್ತಾರೆ. ಯಾವುದೇ ಹೆಸರುಗಳಿಂದ ಕರೆಸಿಕೊಂಡರೂ ಅವರಲ್ಲಿ ಈ ಗೋತ್ರಗಳು ಮಾತ್ರ ಕಂಡುಬರುತ್ತವೆ. ನನ್ನ ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯಿಂದ ಈ ಕೆಳಗಿನ ಅಂಶಗಳನ್ನು ತಿಳಿದುಕೊಳ್ಳಲಾಗಿದೆ.

ಕೊರವರು

ಕಾವಾಡಿ	**ಸಾತ್ಪಾಡಿ**
ಮಾಣಿಕ್ಯದವರು	ಪಸಾದಿಯವರು
ಕಂತ್ರಿಯವರು	ತಂಗಡಿಯವರು
ವಜ್ರದವರು	ಮಾನ್ಪಾಡಿಯವರು
ಚಿಂಚೊಳಯವರು	ಹಂಚಾಳಯವರು
ಬಸಗನವರು	ನಾಸದವರು
ಗಿಜಗನವರು	ಭೂಪನವರು
ನಾಗಸಾಗರದವರು	ಬುಡಗನವರು
ಪೊನ್ನಂಗದವರು	ಹಲಸಿಯವರು
ಚಿಟಾಣಿಯವರು	ತಪಾಸಿನವರು
	ಪ್ಯಾಡ್ಯಾರು

ನಂಬಿಕೆ ಮತ್ತು ನಿಷೇಧಗಳು

ನಂಬಿಕೆಗಳೇ ಸಂಪ್ರದಾಯಗಳಿಗೆ ಮೂಲ ಎಂಬುದು ತಿಳಿದಿರುವ ವಿಷಯ. ಹಬ್ಬ ಹರಿದಿನಗಳು ಅಷ್ಟೇ ಅಲ್ಲದೆ ಹುಟ್ಟು ಮದುವೆ ಸಾವು ಮೊದಲಾದ ಸಂದರ್ಭಗಳಲ್ಲಿ ಆಚರಣೆ ಮಾಡಲಾಗುತ್ತದೆ. ಈ ಬಗೆಯ ಆಚರಣೆಗಳನ್ನು ಮಾಡದಿದ್ದರೆ ಮುಂದೆ ಒಳ್ಳೆಯದಾಗುವುದಿಲ್ಲವೆಂಬ ನಂಬಿಕೆ ಇದೆ. ಆದ್ದರಿಂದಲೇ ಇವರ ಸಂಪ್ರದಾಯಗಳಲ್ಲಿ ಆ ಮೂಲದ ಅಂಶಗಳನ್ನು ಇನ್ನೂ ಉಳಿಸಿಕೊಂಡು ಬಂದಿದ್ದಾರೆ. ತಮ್ಮ ಪರಿಶ್ರಮದ ಅಲೆದಾಟದ ಬದುಕಿನಲ್ಲಿ ಬಿಡುವೆಂಬುದೇ ಇರಲಿಲ್ಲ. ಇವರಲ್ಲಿ ಹೆಣ್ಣು ಮಕ್ಕಳಂತು ಹೋರಾಟದ ಬದುಕನ್ನು ನಡೆಸುತ್ತಾರೆ.

ನಂಬಿಕೆಗಳಿಗೂ ಆಚರಣೆಗಳಿಗೂ ಇರುವ ವ್ಯತ್ಯಾಸಗಳನ್ನಿಲ್ಲಿ ಪರಿಭಾವಿಸುವುದು ಒಳ್ಳೆಯದು. ಭಾವನೆಯ ರೂಪದಲ್ಲಿ ನಂಬಿಕೆಯಿದ್ದರೆ, ಕಾರ್ಯರೂಪದಲ್ಲಿ ಆಚರಣೆಯಿರುತ್ತದೆ. ಉದಾಹರಣೆಗೆ ಶ್ರಾದ್ಧ ಮಾಡದಿದ್ದರೆ ಪಿತೃಗಳು ಪ್ರೇತಗಳಾಗಿ ಅಲೆದಾಡುತ್ತವೆ. ಅಲ್ಲದೆ ವ್ಯಕ್ತಿಯನ್ನು ಕಾಡುತ್ತವೆ ಎಂಬ ಭಾವನೆ ನಂಬಿಕೆಯಿಂದ, ಮೃತ ವ್ಯಕ್ತಿಗೆ ಮಾಡುವ ಶ್ರಾದ್ಧ ಆಚರಣೆ ಎನಿಸಿಕೊಳ್ಳುತ್ತದೆ. ಆದ್ದರಿಂದ ನಂಬಿಕೆಗಳು ಆಚರಣೆಗಳಿಗೆ ಕಟ್ಟಳೆಯುಂತೆ ಇರುತ್ತವೆ. ಅಲ್ಲದೆ ಇವು ಆಚರಣೆಗಳ ಮುನ್ನಡೆಗೆ ಸಹಕಾರಿಯಾಗಿಯೂ ಇರುತ್ತವೆ. ಆಚರಣೆಗಳನ್ನು ಸಾಮೂಹಿಕ ಅನುಷ್ಠಾನಗಳು ಎನ್ನಬಹುದು. ಒಬ್ಬ ವ್ಯಕ್ತಿಯು ಆರೋಗ್ಯ ರಕ್ಷಣೆಗಾಗಿ ಸ್ನಾನ ಮಾಡುವುದು ಆಚರಣೆಯಲ್ಲ ಶುದ್ಧತೆ ಆದರೆ, ಅದೇ ಪುಣ್ಯ ಬಾರದೆಂಬ ಭಾವನೆಯಿಂದ ಪುಣ್ಯಕ್ಷೇತ್ರಗಳ ದರ್ಶನ ಪಡೆಯುವುದು, ಅಲ್ಲಿ ಸ್ನಾನ ಮಾಡುವುದು ಆಚರಣೆಯಾಗಿರುತ್ತದೆ.

ನಂಬಿಕೆ ಮತ್ತು ಆಚರಣೆ ಹುಟ್ಟಿಕೊಳ್ಳಲು ಕಾರಣ ಪ್ರಕೃತಿಯ ವಿಕೋಪಗಳಿಗೆ ಭಯಪಟ್ಟು ಅಥವಾ ಕಷ್ಟಕಾರ್ಪಣ್ಯಗಳನ್ನು, ರೋಗರುಜಿನಗಳನ್ನು ಉಂಟುಮಾಡುವ ಶಕ್ತಿಗೆ ಬೆದರಿ ಅವುಗಳ ಸಂತೃಪ್ತಿಗಾಗಿ ಆದಿಮಾನವ ಆಚರಣೆಗಳನ್ನು ಅಸ್ತಿತ್ವಕ್ಕೆ ತಂದಿರಬಹುದು. ಇವು ಒಂದೇ ನಾಣ್ಯದ ಎರಡು ಮುಖ್ಯಗಳಿದ್ದಂತೆ ಎಂದು ಹೇಳಬಹುದು.

ಸಮಾಜದಲ್ಲಿ ವ್ಯಕ್ತಿ ಕೆಲವು ಕಾರ್ಯಗಳನ್ನು ಮಾಡುವಂತಿರಲಿಲ್ಲ. ಕರ್ತವ್ಯಗಳಿಗೆ ನಿರ್ದಿಷ್ಟ ಮಹತ್ವವನ್ನು ಕೊಟ್ಟು, ಅದರಂತೆ ಜನ ನಡೆದುಕೊಳ್ಳಬೇಕಾಗಿತ್ತು. ಇಲ್ಲದವರಿಗೆ ಶಿಕ್ಷೆಗೆ ಗುರಿಪಡಿಸ ಲಾಗುತ್ತಿದ್ದು. ಇಂಥ ಕಟ್ಟುಪಾಡುಗಳಿಗೆ ಮಹತ್ವಕೊಡುತ್ತಾರೆ. ನಿಷೇಧವನ್ನು ಸಮಾಜದ ಅಲಿಖಿತ ಕಾನೂನು ಎಂದು ಕರೆಯಬಹುದು. ಅಪರಾಧಿಯ ಭಾಗಕ್ಕೆ ನಿಷೇಧದ ಉಲ್ಲಂಘನೆಯೇ ಮಾನಸಿಕವಾಗಿ ಹಿಂಸಿಸುವ ಶಿಕ್ಷೆಯಾಗಿ ಪರಿಣಮಿಸುತ್ತಿತ್ತು.

ಕಣ ಮಾಡುವಾಗ ಕಣಕ್ಕೆ ಕೆರ ಮೆಟ್ಟಿಕೊಂಡು ಹೋಗಬಾರದೆಂಬ ನಿಷೇಧವೂ ಉಂಟು. ಧಾನ್ಯಗಳ ಆವಾಸಸ್ಥಾನ ಪವಿತ್ರವಾದದ್ದು ಎಂಬ ನಂಬಿಕೆ. ಮಹಿಳೆಯರು ಸೆರಗು ಆಗಿಕೊಂಡೆ ದವಸವನ್ನು ಅಳೆಯಬೇಕಾಗಿತ್ತು. ಮದುವೆಯಾದ ಮಹಿಳೆಯರು ಅಥವಾ ಪುರುಷರು ಅರಿಶಿಣದ ಮೈಯಲ್ಲಿ ಹುಣಸೆಮರದ ಕೆಳಗೆ ಹೋಗಬಾರದು, ಮನೆ ಬಿಟ್ಟು ಹೋಗಬಾರದು. ಗಂಗಮ್ಮನ ಮಾಡಿದ ನಂತರವೇ ಹೋಗಬೇಕು ಎಂಬ ನಿಷೇಧವಿದೆ. ಇದಕ್ಕೆ ಮರದಡಿ, ಸರಿ ಇಲ್ಲದ ಜಾಗದಲ್ಲಿ ರಾಹು ಇಲ್ಲವೆ ದೆವ್ವಗಳ ಅರಿಶಿಣದ ಮೈಯವರಿಗೆ ಬೇಗ ಹಿಡಿಯುವುವು ಎಂಬ ನಂಬಿಕೆ ಇದೆ. ಹೆರಿಗೆಯಾದ ಮಹಿಳೆಯರು ಸಹ ೧೩ ದಿನಗಳವರೆಗೆ ಹೊರಗೆ ಬರುವಂತಿಲ್ಲ.

ನಂಬಿಕೆ ಎನ್ನುವುದು ಆದಿಮಾನವನಿಂದ ಹಿಡಿದು ಆಧುನಿಕ ಮಾನವನವರೆಗೂ ಹರಿದು ಬರುತ್ತಿರುವ ಭಾವನಾತ್ಮಕ ಕ್ರಿಯೆ. ಸಾಮಾನ್ಯವಾಗಿ ಜೀವನ ಬಹಳಷ್ಟು ನಂಬಿಕೆಗಳ ಮೇಲೆ ನಿರ್ಧಾರ ವಾಗುತ್ತಿರುತ್ತದೆ. ಮುಂಜಾನೆ ಏಳುವ ಸಮಯದಿಂದಲೇ ಪ್ರಾರಂಭಗೊಳ್ಳುವ ನಂಬಿಕೆಗಳು ಮಲಗುವ ವೇಳೆಗೆ ಮುಗಿಯುತ್ತವೆ. ಜೀವನವಿಡೀ ನಂಬಿಕೆಗಳು ಮುಖ್ಯವಾಗುತ್ತವೆ.

ನಂಬಿಕೆಗಳು

೧. ಪತ್ನಿ ಗರ್ಭಿಣಿಯಾಗಿದ್ದಾಗ ಪತಿಯಾದವನು ಮರವನ್ನು ಕಡಿಯಬಾರದು, ಕೋಳಿಯನ್ನು ಕೊಯ್ಯಬಾರದು, ಹಾವುಗಳನ್ನು ಹೊಡೆಯಬಾರದು, ಸತ್ತವರ ಮನೆಗಳಿಗೆ ಹೋಗಬಾರದು

೨. ಪ್ರಾಣಿ ಹಿಂಸೆ ಮಾಡಿದರೆ ಭ್ರೂಣಕ್ಕೆ ಕೇಡುಂಟು.

೩. ಗರ್ಭಿಣಿಯರ ನೆರಳು ಹಾವುಗಳ ಮೇಲೆ ಬೀಳಬಾರದು.

೪. ಯಾವುದೇ ಊರಿಗೆ ಹೋಗುವಾಗ ಎದುರಿಗೆ ವಿಧವೆ ಬರಬಾರದು.

೫. ಮುಖ್ಯ ಕೆಲಸಗಳಿಗೆ ಹೋಗುವಾಗ ಖಾಲಿಕೊಡ ಬರಬಾರದು, ಮನೆಯಲ್ಲಿ ಮಕ್ಕಳು ಹಠ ಮಾಡಬಾರದು.

೬. ಹೆಣ್ಣಿನ ಕಾಲಿನ ಕಿರುಬೆರಳು ನೆಲಕ್ಕೆ ತಾಗಿಕೊಂಡು ಇರದಿದ್ದಲ್ಲಿ ಗಂಡ ಬೇಗನೇ ಸಾಯುತ್ತಾನೆ.

೭. ಹೆಣ್ಣಿನ ಕೂದಲು ಮೊಣಕಾಲಿಗೆ ತಾಗಿದರೆ ಗಂಡನ ಮನೆಗೆ ಕೇಡು.

೮. ಕುದುರೆ ಕಾಲಿನ ಹೆಣ್ಣು ಕುಲಕ್ಕೆ ಕೇಡು.

೯. ಆಷಾಢದಲ್ಲಿ ಹೆಣ್ಣು ಮೈನೆರೆತರೆ ಸಂಸಾರಕ್ಕೆ ಕೇಡು.

೧೦. ಹೆಂಡತಿ ಗಂಡನ ಹೆಸರು ಹೇಳಿದರೆ, ಗಂಡನ ಆಯಸ್ಸು ಕಡಿಮೆ ಆಗುತ್ತದೆ.

೧೧. ಶುಕ್ರವಾರ ಹಣವನ್ನು ಯಾರಿಗೂ ಕೊಡಲಾಗುವುದಿಲ್ಲ.

೧೨. ರಾತ್ರಿ ವೇಳೆ ಕಸ ಹೊರಗಡೆ ಹಾಕುವಂತಿಲ್ಲ.

೧೩. ಮನೆಯ ಬಾಗಿಲು ಪೂರ್ವ ಅಥವಾ ಉತ್ತರ ದಿಕ್ಕಿಗೆ ಇರಬೇಕು.

೧೪. ಮನೆಯನ್ನು ಕಟ್ಟುವಾಗ ಸುಣ್ಣದ ಮಡಕೆ, ಬೆದರುಗೊಂಬೆ ಕಟ್ಟಬೇಕು.

೧೫. ಗಂಡಸಿಗೆ ಎಡಹುಬ್ಬು, ಹೆಂಗಸರಿಗೆ ಬಲಹುಬ್ಬು ಹಾರಿದರೆ ಅಪಶಕುನ.

೧೬. ಮನೆಯ ಮುಂದೆ ಕಾಗೆ ಕೂಗಿದರೆ ದರಿದ್ರ.

೧೭. ಕಾಲವನ್ನು ತೊಳೆಯುವಾಗ ಹಿಮ್ಮಡಿ ಪೂರ್ತಿ ನೆನೆಯಬೇಕು, ಇಲ್ಲವಾದರೆ ಶನಿ ಒಳಗಡೆ ಬರುತ್ತಾನೆ.

೧೮. ತಾಳಿ ಬಿಚ್ಚಿ ಹೊಸ್ತಿಲು ದಾಟಬಾರದು.

೧೯. ಸಂಜೆ ದೀಪ ಹೊತ್ತಿಸಿದ ಮೇಲೆ ಸ್ವಲ್ಪ ಹೊತ್ತಾದರೂ ಬಾಗಿಲು ತೆರೆದಿಡಬೇಕು.

೨೦. ಮದುವೆಯಾದ ವರ್ಷದ ಆಷಾಢದಲ್ಲಿ ಅತ್ತೆ ಸೊಸೆ ಒಂದೇ ಬಾಗಿಲಲ್ಲಿ ತಿರುಗಾಡಬಾರದು.

೨೧. ಶುಭ ಕಾರ್ಯಕ್ಕೆ ಮೂರು ಜನ ಹೋಗಬಾರದು.

೨೨. ಹೊರಗಡೆ ಹೊರಟಾಗ ಬೆಕ್ಕು ಬಲದಿಂದ ಎಡಕ್ಕೆ ಹೋದರೆ ಅಶುಭ.

೨೩. ಶುಕ್ರವಾರ ಕುಂಕುಮ ಭರಣಿ ಡಬ್ಬಿ ಬೀಳಬಾರದು.

೨೪. ಮುಂಜಾನೆ ವಿಧವೆಯ ಮುಖ ನೋಡಬಾರದು.

೨೫. ಮುಂಸ್ಸಂಜೆ ಹೊತ್ತಿನಲ್ಲಿ ಹಣೆಯು ಖಾಲಿ ಇರಬಾರದು.

೨೬. ಖಾಲಿ ತೊಟ್ಟಿಲನ್ನು ತೂಗಬಾರದು.

೨೭. ಒಲೆಯನ್ನು ಒದೆಯಬಾರದು.

೨೮. ಮೈಲಿಗೆಯಾದ ಸ್ತ್ರೀ ದೇವಸ್ಥಾನಕ್ಕೆ ಹೋಗಬಾರದು.

೨೯. ತೆಂಗಿನಕಾಯಿಯನ್ನು ಕಾಲಿನಿಂದ ತುಳಿಯಬಾರದು.

೩೦. ಬೀಸುವ ಕಲ್ಲು, ಮೊರವನ್ನು ತುಳಿಯಬಾರದು.

೩೧. ಮಂಗಳವಾರ, ಶುಕ್ರವಾರ ಹೆಣ್ಣು ಮಕ್ಕಳು ತಾಯಿಯ ಮನೆಯಿಂದ, ಗಂಡನ ಮನೆಯಿಂದ ಹೊರಟುಬರಬಾರದು.

೩೨. ಹೆಂಡತಿ ಬಸುರಿಯಾಗಿದ್ದಾಗ ಮನೆ ಕಟ್ಟಬಾರದು.

೩೩. ಹೊಸ್ತಿಲು ಮೇಲೆ ನಿಂತು ಭಿಕ್ಷೆ ಹಾಕಬಾರದು.

೩೪. ಹೊಸ್ತಿಲ ಮೇಲೆ ತಲೆ ಹಾಕಿಕೊಂಡು ಮಲಗಬಾರದು.

ನಿಷೇಧಗಳು

೧. ಸಗೋತ್ರ ವಿವಾಹ ನಿಷೇಧ.

೨. ಮುಟ್ಟಾದ ಹೆಂಗಸನ್ನು ಮಗುವನ್ನು ಮುಟ್ಟಬಾರದು.

೩. ದನಗಳ ಕೊಟ್ಟಿಗೆಗೆ ಹೋಗಬಾರದು, ಹಾಲು ಹಿಂಡಬಾರದು,

೪. ಹಾಲಿನಿಂದ ಮಾಡಿದ ಭಕ್ಷ್ಯಗಳನ್ನು ಸೇವಿಸಬಾರದು

೫. ಋತುಮತಿಯಾದವರು ಹದಿನಾರು ದಿನಗಳ ಕಾಲ ಹೊರಗಡೆ ಬರುವಂತಿಲ್ಲ.

೬. ಮನೆಯೊಳಗಡೆ ಉಗುರು ಕತ್ತರಿಸಬಾರದು,

೭. ಮಂಗಳ ಕಾರ್ಯದಲ್ಲಿ ವಿಧವೆ ಭಾಗವಹಿಸಬಾರದು.

೮. ವಿಧವೆಯರು ಆರತಿ ಬೆಳಗಬಾರದು.

೯. ವಿಧವೆಯರು ಅಲಂಕಾರ ಮಾಡಿಕೊಳ್ಳಬಾರದು.

೧೦. ಅಮಾವಾಸ್ಯೆಯ ದಿನ ರಾತ್ರಿ ವೇಳೆಯಲ್ಲಿ ಹೊರಗೆ ಹೋಗಬಾರದು.

ಅಡಿ ಟಿಪ್ಪಣಿಗಳು

೧. ಮಾಹಿತಿದಾರರು: ಗಂಗಾಧರ ಭಜಂತ್ರಿ (೪೮) ವಾಲಗ ಊದುವುದು, ಕಂಪ್ಲಿ

೨. H.V. Nanjundaiah & L.K. Ananta krishna lyer The Mysore Tribes and Castes vol.iii, p. 593

೩. ಕೊರವರ ಸಂಸ್ಕೃತಿ, ಬರಗೂರು ರಾಮಚಂದ್ರಪ್ಪ, ಪುಟ ೯೨.

೪. Castes and Tribes of Southern India p. 476.

೫. ದಕ್ಷಿಣ ಕರ್ನಾಟಕದ ಕೊರಮರು, ಡಾ. ಬಿ.ಪಿ. ರಾಮಯ್ಯ, ಪು. ೧೬೮

೬. ಕೊರವರ ಸಂಸ್ಕೃತಿ, ಬರಗೂರು ರಾಮಚಂದ್ರಪ್ಪ, ಪುಟ ೯೩

೭ ಅದೇ. ಪು. ೯೪

೮. R.E. Enthavan, The Castes and Tribas of Bambay p. 483

೯. ದಕ್ಷಿಣ ಕರ್ನಾಟಕದ ಕೊರಮರು, ಡಾ. ಬಿ.ಪಿ. ರಾಮಯ್ಯ, ಪುಟ ೧೬೭

೧೦. ಅದೇ. ಪುಟ ೧೮೪

೧೧. ಕನ್ನಡ ಜಾನಪದ ವಿಶ್ವಕೋಶ, ಡಾ. ಚಂದ್ರಶೇಖರ ಕಂಬಾರ, ಪು. ೫೩೮

೧೨. ಭಾರತದ ಹಬ್ಬಗಳು, ಪ್ರೊ. ಡಿ.ಟಿ. ರಂಗಸ್ವಾಮಿ, ಪು. ೪೫

೧೩. ಅದೇ. ಪು. ೫೮

೧೪. ಕೊರವರು, ಈರಣ್ಣ ಎನ್. ಕೋಸಗಿ, ಪು.೩೯

೧೫. ಅದೇ. ಪು. ೪೦

೧೬. ಕನ್ನಡ ಜಾನಪದ ವಿಶ್ವಕೋಶ ಸಂಪುಟ-೧, ಡಾ. ಚಂದ್ರಶೇಖರ ಕಂಬಾರ, ಪು.೫೨೭

ಅಧ್ಯಾಯ - ೪

ಕೊರವ ಸಮುದಾಯದ ಆರ್ಥಿಕ ವ್ಯವಸ್ಥೆ

ಅಧ್ಯಾಯ ನಾಲ್ಕು

ಕೊರವ ಸಮುದಾಯದ ಆರ್ಥಿಕ ವ್ಯವಸ್ಥೆ

ಪ್ರತಿಯೊಂದು ಸಮುದಾಯಕ್ಕೂ ಯಾವುದಾದರೊಂದು ಮೂಲ ವೃತ್ತಿ ಇರುವಂತೆ ಇದರಲ್ಲಿಯೂ ಅವರದೇ ಆದ ಕಸುಬು, ಉಪಕಸುಬುಗಳು ಇರುವುದನ್ನು ನೋಡಬಹುದಾಗಿದೆ. ಕೊರವರು ತಮ್ಮ ಕಸುಬಿಗನುಗುಣವಾಗಿ ಹೆಸರು ಪಡೆದಿದ್ದಾರೆ. ಕೊರವರಲ್ಲಿ ಕಡಲ ತೀರದಿಂದ ಉಪ್ಪನ್ನು ತಂದು ಮಾರುವವರನ್ನು ಉಪ್ಪು ಕೊರವರು ಎಂದು ಕರೆಯುತ್ತಾರೆ. ಕೊರವರು ಬಿದಿರು ಸಿಗುವ ಬೆಟ್ಟದ ಬುಡಗಳಿಗೆ ಮಾತ್ರ ತಮ್ಮ ಅಲೆದಾಟವನ್ನು ಸೀಮಿತಗೊಳಿಸಿಕೊಂಡರು. ಕೆಲವರು ಆಂಧ್ರ ಪ್ರದೇಶಗಳಿಗೆ ಹೋದರೆ, ಇನ್ನು ಕೆಲವರು ತಮ್ಮ ಸುತ್ತಮುತ್ತ ದೊರೆಯುವ ಸಾಮಗ್ರಿಗಳನ್ನು ತಂದುಕೊಳ್ಳುತ್ತಾರೆ. ಇನ್ನು ಕೆಲವರು ಗಡಿಭಾಗದಲ್ಲಿ ಹೋಗಿ ಅರೆ ಅಲೆಮಾರಿಗಳಂತೆ ವಾಸಿಸಿ ತಿಂಗಳಗಟ್ಟಲೆ ಸಾಕುವ ಸಾಮಗ್ರಿಗಳನ್ನು ತೆಗೆದುಕೊಂಡು ಬರುವುದುಂಟು. ಬಿದಿರಿನಿಂದ ಇವರು ಧಾನ್ಯ ಶೇಖರಿಸುವ ಬುಟ್ಟಿಗಳು, ಗೊಬ್ಬರ ಹೊರುವ ಬುಟ್ಟಿಗಳನ್ನು, ವಿವಿಧ ಆಲಂಕಾರಿಕ ವಸ್ತುಗಳನ್ನು ತಯಾರಿಸುವರು ಎಂಬುದು ತಿಳಿದುಬರುತ್ತದೆ. ಕುಂಬಿ ಕೊರವರು ನೇಕಾರರಿಗೆ ಬೇಕಾಗುವ ಕುಂಚಿ, ಒಕ್ಕಲಿಗರಿಗೆ ಬೇಕಾಗುವ ನೆಲವು, ಬುಟ್ಟಿ, ಜಲ್ಲಿ ಮೊದಲಾದವುಗಳನ್ನು ಈಚಲಕಡ್ಡಿ, ದಾಗಡಿಯ ಬಳ್ಳಿಗಳಿಂದ ಮಾಡಿ ಮಾರಾಟವನ್ನು ಮಾಡುತ್ತಾ ಜೀವನ ಸಾಗಿಸುತ್ತಾರೆ. ವಾಲಗ ಕೊರವರು ಗ್ರಾಮವಾಸಿಗಳಾಗಿದ್ದಾರೆ. ಇವರು ಮದುವೆ ಮುಂಜೆ, ಮೊದಲಾದ ಶುಭಕಾರ್ಯಗಳಿಗೂ, ದುಃಖ ಕಾರ್ಯಗಳಿಗೂ ಊದುವುದನ್ನು ನೋಡಬಹುದಾಗಿದೆ. ಇವರನ್ನು ಭಜಂತ್ರಿಗಳು ಎಂದು ಕರೆಯುತ್ತಾರೆ. ಸಾಮುಲ ಕೊರವರು ಆಂಧ್ರದಲ್ಲಿ ಹಾವಾಡಿಸುವ ವೃತ್ತಿಯನ್ನು ಮಾಡುತ್ತಿದ್ದಾರೆ.

ಕೊರವರು ಬೇಟೆಯಾಡುವುದರಲ್ಲಿ ನಿಸ್ಸಿಮರು. ಬಲೆಹಾಕಿ ಮೊಲ, ಹಂದಿ ಹಲವಾರು ಪಕ್ಷಿಗಳನ್ನು

ಬುದ್ಧಿವಂತಿಗೆಯಿಂದ ಹಿಡಿಯುವುದು ನೋಡಬಹುದಾಗಿದೆ. ಕೊರವರು ಸಾಮಾನ್ಯವಾಗಿ ಈಗಾಗಲೇ ಅಲೆಮಾರಿ ಜೀವನಕ್ಕೆ ಕಡಿವಾಣ ಹಾಕಿದ್ದಾರೆ. ಹಳ್ಳಿಗಳಲ್ಲಿ ಇತರ ಸಮುದಾಯಗಳೊಂದಿಗೆ ಒಟ್ಟಾಗಿ ಸೇರಿ ವಾಸಿಸುತ್ತಿದ್ದು, ಎಲ್ಲರಂತೆ ಅವರ ಮಕ್ಕಳೂ ಸಹ ಸರ್ಕಾರಿ ಶಾಲೆಗೆ ಹೋಗಿ ಓದುವುದು, ಬರೆಯುವುದು ಮಾಡುತ್ತಿದ್ದಾರೆ. ಇವರಲ್ಲಿ ಕೆಲವರು ಶಿಕ್ಷಕರಾಗಿ, ಜೈಲು ಪಾಲಕರಾಗಿ, ಪೇದೆಗಳಾಗಿ, ಎಫ್.ಡಿ.ಎ. ವೃತ್ತಿಯಲ್ಲಿರುವುದು ಮೊದಲಾದ ಬೇರೆ ಬೇರೆ ಇಲಾಖೆಗಳಲ್ಲಿ ಕಾರ್ಯ ಪ್ರವೃತ್ತರಾಗಿ ಕೆಲಸ ಮಾಡುತ್ತಿದ್ದಾರೆ. ಇವರುಗಳು ತಮ್ಮ ಮೂಲ ಸ್ವರೂಪವನ್ನು ಬಹುತೇಕ ಕಳೆದುಕೊಂಡಿದ್ದಾರೆ ಎಂದು ಹೇಳಬೇಕಾಗುತ್ತದೆ. ಇವರು ಉಡುಗೆ, ತೊಡುಗೆ, ನಡವಳಿಕೆ ಮತ್ತು ಸಂಪ್ರದಾಯಗಳಲ್ಲಿ ರೈತರನ್ನು ಹೋಲುತ್ತಾರೆ. ಈ ಸಮುದಾಯಗಳು ತಲೆ ತಲಾಂತರಗಳಿಂದ ಅನುಸರಿಸಿಕೊಂಡು ಬರುತ್ತಿರುವ ವೃತ್ತಿಗಳ ಬಗೆಗೆ ಅಲ್ಲಲ್ಲಿ ಮಾಹಿತಿಗಳು ದೊರೆಯುತ್ತವೆ. ವೃತ್ತಿಯಲ್ಲಿ ಮೇಲು ಕೀಳೆಂದು ಭಾವಿಸದೆ ಬದುಕಿನ ಭವಿಷ್ಯದ ಚಿಂತನೆ ಮಾಡದೆ ಹಾಗೂ ಕನಸು ಕಾಣದೆ ಸಾಗಿಸಿಕೊಂಡು ಬರುತ್ತಿದ್ದಾರೆ ಎಂದು ಹೇಳಬಹುದು. ತಮ್ಮ ಹೊಟ್ಟೆಪಾಡಿಗಾಗಿ ಪ್ರತಿಯೊಬ್ಬರೂ ಒಂದಲ್ಲ ಒಂದು ಕೆಲಸವನ್ನು ಮಾಡುವುದು ಸ್ವಾಭಾವಿಕವಾಗಿದೆ. ಅಂತೆಯೇ ಕೊರವರು ತಮ್ಮ ಸುತ್ತಮುತ್ತಲ ಪ್ರಭಾವಕ್ಕೆ ಒಳಗಾಗಿ ವೃತ್ತಿಗಳನ್ನು ರೂಢಿಸಿಕೊಳ್ಳುತ್ತಾರೆ. ಇಲ್ಲಿ, ತೋರಿಬರುವ ವೃತ್ತಿಗಳು ಆಯಾ ಕಾಲಕ್ಕೆ ಬದಲಾಗುತ್ತಾ ಬಂದಿವೆ. ಇವರು ಬಳುಸುವ ವಾದನಕ್ಕೆ ಸನಾದಿ ಎಂದು ಕರೆಯುತ್ತಾರೆ. ದೇವಸ್ಥಾನದಲ್ಲಿ, ಪೂಜಾ ಸಮಯದಲ್ಲಿ, ಮದುವೆ, ಶುಭಕಾರ್ಯಗಳಲ್ಲಿ ವಾದ್ಯ ನುಡಿಸುತ್ತಾರೆ. ಕುಂಚಿ ಕೊರವರು ಬಳ್ಳಾರಿಯಲ್ಲಿ ಅಲ್ಲಲ್ಲಿ ಕಂಡುಬರುತ್ತಾರೆ. ಯಾವಾಗಲಾದರೊಮ್ಮೆ ವಲಸೆ ಬಂದಾಗ ಹುಲ್ಲಿನ ಪೊರಕೆಗಳನ್ನು ಮಾರಲು ಬರುತ್ತಾರೆ. ಇವರಲ್ಲಿ ಹೆಂಗಸರು ಕಣಿ ಹೇಳುವುದು ಕಂಡುಬರುತ್ತದೆ.

ಕೆಲವು ಊರುಗಳಲ್ಲಿ, ದೇವಾಲಯಗಳಲ್ಲಿ ಊರಿನ ಜಾತ್ರೆ, ಹಬ್ಬ ಹರಿದಿನಗಳಲ್ಲಿ, ಉತ್ಸವ ಶುಭಕಾರ್ಯಗಳಿಗೆ ವಾದ್ಯವನ್ನು ನುಡಿಸುವ ಕೊರವರಿಗೆ ದೇವಸ್ಥಾನದ ಭೂಮಿಯನ್ನು ಉಂಬಳಿಯಾಗಿ ಬಿಟ್ಟು ಕೊಟ್ಟಿರುತ್ತಾರೆ. ಹೀಗಾಗಿ ಇವರು ವ್ಯವಸಾಯವನ್ನು ಅವಲಂಬಿಸಿದ್ದಾರೆ. ಪ್ರಸ್ತುತ ದಿನಗಳಲ್ಲಿ ಕೆಲವು ಕುಟುಂಬಗಳು ವ್ಯವಸಾಯದಲ್ಲಿ ನೈಪುಣ್ಯತೆಯನ್ನು ಪಡೆದುಕೊಳ್ಳುತ್ತಿರುವುದು ನೋಡಬಹುದು. ಭೂಮಿ ಇಲ್ಲದ ಕುಟುಂಬಗಳು ತಾವೂ ನೆಲೆಯೂರಿದ ಸ್ಥಳಗಳ ಅಕ್ಕಪಕ್ಕದ ಹಳ್ಳಿಗಳಿಗೆ ದಿನಗೂಲಿಗಳಾಗಿ ಕೆಲಸಕ್ಕೆ ಹೋಗುತ್ತಾರೆ. ಈ ದಿನಗೂಲಿ ವರ್ಷದ ಎಲ್ಲ ತಿಂಗಳುಗಳಲ್ಲಿ ದೊರೆಯುವುದರಿಂದ ಉಳಿದ ಕಾಲದಲ್ಲಿ ಬುಟ್ಟಿ, ಕಸಬಾರಿಕೆ ಕಟ್ಟುವುದನ್ನು ನೋಡಬಹುದು.

೪.೧ ಕೊರವ ಸಮುದಾಯದ ಉತ್ಪಾದನಾ ವ್ಯವಸ್ಥೆ

ಆರ್ಥಿಕ ಬೆಳವಣಿಗೆ ಮತ್ತು ಜನಸಂಖ್ಯೆ ಬೆಳವಣಿಗೆಗಳು ಪರಸ್ಪರ ನಿಕಟ ಸಂಬಂಧ ಹೊಂದಿವೆ. ಆರ್ಥಿಕ ಬೆಳವಣಿಗೆ ಜನಸಂಖ್ಯೆಯ ಮೇಲೆ ಹಾಗೂ ಜನಸಂಖ್ಯಾ ಬೆಳವಣಿಗೆ ಆರ್ಥಿಕ ಬೆಳವಣಿಗೆ ಮೇಲೆ ಪ್ರಭಾವ ಬೀರುತ್ತದೆ. ಆದ್ದರಿಂದ ಆರ್ಥಿಕಾಭಿವೃದ್ಧಿ ಸಾಧನೆಗೆ ಅವಶ್ಯವಿರುವ ಭೂಮ ಮತ್ತು ಬಂಡವಾಳದ ಜೊತೆಗೆ "ಮಾನವ ಸಂಪನ್ಮೂಲ ಕ್ರಿಯೆಯನ್ನು ಮುಂದುವರೆಸಿಕೊಂಡು ಹೋಗ ಬೇಕಾದರೆ ಶ್ರಮ ಬಲ ಅತ್ಯಗತ್ಯ. ಈ ಶ್ರಮವವನ್ನು ಪೂರೈಸುವ ಕೆಲಸವನ್ನು ಮಾನ ಸಂಪನ್ಮೂಲ

ಮಾಡುತ್ತದೆ. ಶ್ರಮವು ಮಾನಸಿಕ ಶ್ರಮವಾಗಬಹುದು. ಅಥವಾ ದೈಹಿಕ ಶ್ರಮವಾಗಬಹುದು. ಅಥವಾ ಎರಡೂ ಆಗಬಹುದು. ಶ್ರಮವು ಉತ್ಪಾದನಾ ಚಟುವಟಿಕೆಯ ಕೇಂದ್ರ ಬಿಂದು. ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಮಾನವ ವರ್ತಿಸಿದಾಗ ಮಾತ್ರ ಉತ್ಪಾದನೆ ಸಾಧ್ಯವಾಗುವುದು. ಶ್ರಮವಿಲ್ಲದೆ ನೈಸರ್ಗಿಕ ಸಂಪನ್ಮೂಲಗಳು ಜಡವಾಗುತ್ತವೆ. ನೈಸರ್ಗಿಕವಾಗಿ ಸಂಪದ್ಭರಿತವಾಗಿರುವ ದೇಶ ಆರ್ಥಿಕವಾಗಿ ಶ್ರೀಮಂತವಾಗಬೇಕಾದರೆ ನಿಪುಣ ಶ್ರಮದ ಅಗತ್ಯವಿರುತ್ತದೆ".[೧]

ಗಾಂಧೀಜಿ ಹೇಳಿದಂತೆ, "ಜನರೆ ಒಂದು ದೇಶದ ನಿಜವಾದ ಆಸ್ತಿ ಅಥವಾ ಸಂಪತ್ತು, ಯಾವ ದೇಶ ಗರಿಷ್ಠ ಸಂಖ್ಯೆಯ ಸಂತೋಷಭರಿತ ಜನರನ್ನು ಸಲಹುತ್ತಿರುವುದೇ ಅದೇ ಸಂಪದ್ಭರಿತ ದೇಶ".[೨] ಮಾನವನಿಲ್ಲದೆ ಅಭಿವೃದ್ಧಿ ಸಾಧ್ಯವಿಲ್ಲ. ಮನು ಅಭಿವೃದ್ಧಿ ಬಂಡವಾಳವೇ ಮುಖ್ಯವಾಗುತ್ತದೆ. ಬಂಡವಾಳದ ಕೊರತೆ ಅನುಭವಿಸುತ್ತಿರುವ ಸಮುದಾಯಕ್ಕೆ ಹಿಂದುಳಿದಿರುವ ಸಾಧ್ಯತೆಗಳೆ ಅಧಿಕವಾಗಿರುತ್ತದೆ. ಜನರು ಆದಾಯ ಮತ್ತು ಉಳಿತಾಯ ಮಾಡುವ ಮನಸ್ಸು ಮತ್ತು ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಸಮುದಾಯದ ಜನರು ಹೆಚ್ಚು ಬುದ್ಧಿವಂತರೂ, ಶಕ್ತಿವಂತರೂ, ನಿಪುಣರೂ, ದಕ್ಷರೂ ಮತ್ತು ವಿವೇಚನಾಶೀಲರೂ ಆಗಿರುತ್ತಾರೋ ಅಲ್ಲಿ ಉತ್ತಮ ಮಾನವನ ಬುದ್ಧಿ ಮತ್ತು ಕೌಶಲ್ಯಗಳು ಅಭಿವೃದ್ಧಿಯ ದಿಕ್ಕನ್ನು ನಿರ್ಧರಿಸಬಲ್ಲವು.

ವ್ಯಾಪಾರ, ನಿರುದ್ಯೋಗ, ಬಡತನ, ಆಹಾರದ ಕೊರತೆ, ಸಾಮಾಜಿಕ ವೆಚ್ಚದ ಏರಿಕೆ, ಉಳಿತಾಯ, ಕೆಳಮಟ್ಟದ ಜೀವನ ಮಟ್ಟ, ಅನುತ್ಪಾದಕ ಅನುಭೋಗಿಗಳ ಹೊರೆ, ಮಹಿಳಾ ಸ್ಥಿತಿಗತಿ ಸುಧಾರಣೆ, ವಿವಾಹದ ವಯಸ್ಸನ್ನು ಹೆಚ್ಚಿಸುವುದು, ಮೌಢ್ಯತೆಯ ನಿವಾರಣೆ, ಶಿಕ್ಷಣ ನೀಡುವಿಕೆ, ವ್ಯಾಪಾರಾಭಿವೃದ್ಧಿ.

ಹಳ್ಳಿಗಾಡಿನ ಮತ್ತು ನಗರ ಪ್ರದೇಶಗಳೆರಲ್ಲೂ ಜನರ ಅಜ್ಞಾನ, ಮೌಢ್ಯತೆ, ಹಿಂಜರಿಕೆ, ತಪ್ಪು ತಿಳುವಳಿಕೆ, ಧಾರ್ಮಿಕ ಕಾರಣಗಳು ಮೊದಲಾದ ಅಂಶಗಳಿಂದಾಗಿ ಕುಟುಂಬ ಯೋಜನೆಯನ್ನು ಅಳವಡಿಸಿಕೊಳ್ಳಲು ಮುಂದಾಗುತ್ತಿಲ್ಲ. ಇದರಿಂದಾಗಿ ಜನನ ಪ್ರಮಾಣ ಹೆಚ್ಚಾಗಿ ವೃದ್ಧಿಗೊಳ್ಳುತ್ತಿದೆ.

ಆರ್ಥಿಕತೆಯ ಆಚೆಗೆ ಮಾನವ ಬದುಕನ್ನು ಸಂಪನ್ನಗೊಳಿಸುವ ಸಾಂಸ್ಕೃತಿಕ ಆಯಾಮವಿದೆ. ಹೀಗಾಗಿ ಪಶ್ಚಿಮದ ಅಭಿವೃದ್ಧಿ ಎಂದರೆ ಆರ್ಥಿಕ ಚೈತನ್ಯ ಎನ್ನುವ ಪರಿಕಲ್ಪನೆ ನಮ್ಮ ಸಂದರ್ಭಕ್ಕೆ ಒಗ್ಗುವುದಿಲ್ಲ. ಆದ್ದರಿಂದ ನಮ್ಮ ಅಭಿವೃದ್ಧಿಯಲ್ಲಿ ಆರ್ಥಿಕ ಚಲಕಗಳ ಜೊತೆಗೆ ನಾವು ಸಾಂಸ್ಕೃತಿಕ, ಸಾಮಾಜಿಕ ಅಂಶಗಳನ್ನು ಇಟ್ಟುಕೊಂಡೇ ನೋಡಬೇಕು. ಒಂದು ಸಮುದಾಯ ಅಭಿವೃದ್ಧಿಯಲ್ಲಿ ಆರ್ಥಿಕತೆ ಒಂದು ಅಂಶವಾಗಬೇಕೇ ಹೊರತು ಆರ್ಥಿಕತೆಯೇ ಅಭಿವೃದ್ಧಿಯಾಗಬಾರದು, ಆಗಲಾರದು ಆರ್ಥಿಕೇತರ ಅಂಶಗಳಾದ "ಬದುಕಿನ ಬಗೆಗೆ ಧೋರಣೆ, ದುಡಿಮೆ, ಅಧಿಕಾರ, ನೌಕರಶಾಹಿ, ಆಡಳಿತ ವ್ಯವಸ್ಥೆ, ಕುಲಸಂಬಂಧಿ ಅಂಶಗಳು, ಸಾಮಾಜಿಕ ವ್ಯವಸ್ಥೆ, ನ್ಯಾಯ ವ್ಯವಸ್ಥೆ, ಭೂಮಾಲೀಕತ್ವ ವ್ಯವಸ್ಥೆ, ಯಥಾಸ್ಥಿತವಾದ ಹಾಗೂ ಕ್ರಿಯಾಶೀಲ ಪ್ರಜ್ಞೆ ಮುಂತಾದ ನೂರಾರು ಸಾಮಾಜಿಕ, ಸಾಂಸ್ಕೃತಿಕ ಅಂಶಗಳು ಅಭಿವೃದ್ಧಿಯನ್ನು ನಿರ್ಧರಿಸುವ ಚಲಕಗಳಾಗಿವೆ ಎಂದು ತಿಳಿಸುತ್ತಾರೆ".[೩]

ಈ ಸಮುದಾಯದ ದುಡಿಮೆಗೆ ಬಂದರೆ ಅವರ ಸರಿ ಸ್ಥಿತಿಯು ಶೋಚನೀಯವಾಗಿದೆ ಎಂದು ಹೇಳಬೇಕಾಗುತ್ತದೆ. ಏಕೆಂದರೆ ಬ್ಯಾಂಡ್ ಕಂಪನಿಗಳನ್ನು ಇಟ್ಟುಕೊಂಡು ಗುಂಪು ಗುಂಪಾಗಿ ಕೆಲಸ ಮಾಡುವ ವಾಲಗದವರು ತುಂಬಾ ಕಷ್ಟಪಡಬೇಕಾಗಿದೆ. ಅವರಿಗೆ ಬ್ಯಾಂಡ್ ಬಿಟ್ಟು ಇನ್ನೇನು ಬರುವುದಿಲ್ಲ. ಇದರಿಂದಾಗಿ ಒಂದು ಸ್ಥಾನವಿದೆ. ಇವರ ಸ್ಥಿತಿಯು ಉತ್ತಮ ಮಟ್ಟದಲ್ಲಿ ಇದೆ ಎನ್ನಲು ಅವರಿಗೆ ಒಂದು ಅಸ್ತಿತ್ವ ಬೇಕಲ್ಲವೆ. ಆದ್ದರಿಂದ ಕೊರವರ ಸಮುದಾಯದವರು ಬ್ಯಾಂಡ್ ಕಂಪನಿಗಳ ವ್ಯವಹಾರದಿಂದ ಹಿಡಿದು ಆಧುನಿಕತೆಯ ಸಾಮಗ್ರಿಗಳವರೆಗೆ ವಿಸ್ತರಿಸಲು ಮುಂದಾಗುತ್ತಿದ್ದಾರೆ. ಅವರಿಗೆ ದೊರೆಯುತ್ತಿದ್ದ ಆದಾಯವು ಹಿಂದಿನ ಕಾಲಕ್ಕಿಂತಲೂ ಇಂದು ಕಡಿಮೆಯಾಗುತ್ತಿದೆ. ಜನರಿಗೆ ಮನಸೆಳೆಯುವ ಉಪಕರಣಗಳು ಬಂದಿರುವುದರಿಂದ ಇವರ ಬದುಕಿನಲ್ಲಿ ಬಿರುಗಾಳಿ ಬಿಸಿದ್ದಾದಾಗಿದೆ. ಇವರು ತಮ್ಮ ಪರಿಸ್ಥಿತಿಯಲ್ಲಿ ಹೊಂದಿಕೊಂಡು ಬಾಳಬೇಕಾಗುತ್ತದೆ. ಇಲ್ಲವಾದರೆ ಅವರು ಜೀವನ ಮಾಡುವುದು ಕಷ್ಟಸಾಧ್ಯ ವ್ಯಕ್ತಿ ಬೆಳೆದರೆ ಮಾತ್ರ ಸಮಾಜ ಬೆಳೆಯುತ್ತದೆ. ಜೀವನದ ಎದುರು ನಿಂತಿರುವ ಅನೇಕ ಪ್ರಶ್ನೆಗಳನ್ನು ಎದುರಿಸಲು ಮಾನವನ ವ್ಯಕ್ತಿತ್ವ ಬೆಳೆಯಬೇಕಾದುದು ಅನಿವಾರ್ಯ ಎಂದು ಹೇಳಬೇಕಾಗಿದೆ.

ವೈದ್ಯ ವಿದ್ಯೆ : ಮಾನವನಷ್ಟೇ ಪ್ರಾಚೀನವಾದದ್ದು ಮತ್ತು ಮಾನವನೊಂದಿಗೆ ಹುಟ್ಟಿ ಬಂದಿರುವಂತಹದ್ದು ಈ ವೈದ್ಯಕೀಯ ಜ್ಞಾನ ಮಾನವನ ಪ್ರಯತ್ನಗಳು ಬೆಳೆದಂತೆಲ್ಲಾ ಬೆಳೆಯಿತು. ಈ ಪಾರಂಪರಿಕ ವೈದ್ಯಕೀಯ ಜ್ಞಾನ ಒಬ್ಬ ವ್ಯಕ್ತಿಯಿಂದಾಗಲೀ ಒಂದು ಸಮೂಹದಿಂದಾಗಲೀ ಬೆಳದು ಬಂದಿರುವಂತಹದ್ದಲ್ಲ. ಈ ಜ್ಞಾನ ಶಾಖೆಯ ಹಿಂದೆ ಹಲವಾರು ಆದಿವಾಸಿ ಸಮುದಾಯಗಳ ವಿಶಿಷ್ಟವಾದ ಅನುಭವಗಳು ಇದೆ. ಜಗತ್ತಿನ ವೈದ್ಯಕೀಯ ಪರಂಪರೆಗೆ ಆದಿವಾಸಿಗಳ ವೈದ್ಯ ಪದ್ಧತಿ ಕೊರವರಲ್ಲಿಯೂ ಕಂಡುಬರುತ್ತದೆ. ಹಿಂದೆ ಇವರು ಹೆಚ್ಚು ಆರೋಗ್ಯವಂತರಾಗಿರಲು ಅವರು ಸೇವಿಸುತ್ತಿದ್ದ ಆಹಾರವೇ ಮೂಲ ಕಾರಣ. ಅನೇಕ ಜಾತಿಯ ಸೊಪ್ಪುಗಳು, ಹಣ್ಣು ಹಂಪಲಗಳು, ಆಹಾರಕ್ಕೆ ಔಷಧಿಗೆ ಅವುಗಳನ್ನು ಬಳಸಲಾಗುತ್ತಿತ್ತು. ಅವರು ಬಳಸುತ್ತಿದ್ದ ಆಹಾರಗಳಲ್ಲಿ ಪೌಷ್ಟಿಕತೆ ಅಂಶ ಇರುತ್ತಿತ್ತು. ಆಹಾರಕ್ಕೆ ಬಳಸುವ ಸಸ್ಯಗಳ ಬಗೆಗೆ ಸಂಪೂರ್ಣ ಜ್ಞಾನ ಉಂಟು. ಮಕ್ಕಳಿಂದ ಹಿಡಿದು ಮುದುಕರವರೆಗೆ ಅವರವರ ವಯಸ್ಸಿಗನುಗುಣವಾಗಿ ಆಹಾರ ಸೇವಿಸುವುದು ಕಂಡುಬರುತ್ತದೆ. ಋತುಮತಿ, ಗರ್ಭಿಣಿ, ಬಾಣಂತಿ ಅವರ ಬಗೆಗೆ ಕಾಳಜಿ ಇತ್ತು.

ಕಾಡಿನಲ್ಲಿ ದೊರೆಯುವ ಹಣ್ಣುಗಳು, ಸೊಪ್ಪು, ಜೇನು, ನಾರು ಬೇರು, ಮಾಂಸ ಸೇವಿಸುತ್ತಿದ್ದರು. ತಾಮ್ರ, ಹಿತ್ತಾಳೆ, ಹಾಳೆ, ಮಣ್ಣು ಮೊದಲಾದವುಗಳು ವೈದ್ಯ ಪದ್ಧತಿಗೆ ಬರುತ್ತಿದ್ದವು. ಇಂದು ಸರ್ಕಾರಿ ವೈದ್ಯ ಪದ್ಧತಿಯು ತಲೆ ಎತ್ತಿದೆ. ಆದರೂ ಕೊರವರು ನೇರವಾಗಿ ಆಸ್ಪತ್ರೆಗಳಿಂದ ಹೋಗುವುದಿಲ್ಲ. ಪ್ರಾರಂಭದಲ್ಲಿ ತಮ್ಮ ಪಾರಂಪರಿಕ ವೈದ್ಯ ಪದ್ಧತಿಯ ಮೂಲಕ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತದೆ. ಅದರಿಂದ ಗುಣವಾಗದಿದ್ದರೆ ಮಾತ್ರ ವೈದ್ಯರ ಹತ್ತಿರ ಹೋಗುತ್ತಾರೆ. ಕಾಡಿನಿಂದ ಸ್ಥಳಾಂತರಗೊಳಸುತ್ತಿರುವುದು, ಕಾಡಿನಲ್ಲಿ ಕೈಗಾರಿಕೆಗಳು, ಶಕ್ತಿ ಸ್ಥಾವರಗಳು, ಪೀಟರ್

ಕಾರ್ಬನ್, ಗಣಿಗಾರಿಕೆಗಳಿಂದ ಕಾಡು ನಾಶವಾಗುತ್ತದೆ. ಪರಿಸರ ನೈರ್ಮಲ್ಯ ಹಾಳಾಗುವುದಲ್ಲದೆ ಕಾಡಿನಲ್ಲಿ ದೊರೆಯುವ ಔಷಧಿ ಗುಣವಿರುವ ಸಸ್ಯಗಳು ಕಡಿಮೆಯಾಗುತ್ತದೆ. ಪ್ರಕೃತಿ ತನ್ನ ಸಹಜ ಸೌಂದರ್ಯವನ್ನು ಕಳೆದುಕೊಳ್ಳುತ್ತದೆ.

ಕಾಯಿಲೆ ಬಂದವರಿಗೆ ಹೇಳುವ ಗಾದೆ–ಮನುಷ್ಯನಿಗೆ ಬರದೇ ಮರಕ್ಕೆ ಬರುತ್ತದೆಯೇ ಕಾಯ್ಲೆ? ಎಂದು ಜನಪದ ಗಾದೆ. 'ಕೋಣೆ ಮಕ್ಕಳು ಕೊಳೆತೊ, ಬೀದಿ ಮಕ್ಕಳು ಬೆಳೆದೊ ಎಂಬ ನಾಣ್ಣುಡಿಯು ಪ್ರಕೃತಿಯು ಎಲ್ಲಾ ವಿದ್ಯಮಾನಗಳಿಗೆ ಮೈಯೊಡ್ಡಿ ಬೆಳೆವವರಿಗಿಂತ ನಾಜೂಕಿನ ಜೀವನ ಶೈಲಿಗೆ ಕಟ್ಟು ಬಿದ್ದವರು ನಿತ್ಯ ನೂರೊಂದು ರೋಗ ಪೀಡನೆಯಿಂದ ಬಿಳುವುದನ್ನು ನೋಡುತ್ತೇವೆ. ಕೆಲವರು ಊರೂರು ಅಲೆಯುತ್ತಾ ಬದುಕುವವರ ಮಕ್ಕಳು ಯಾವುದೇ ಕಾಯಿಲೆ ಇಲ್ಲದೇ ಇರುತ್ತಾರೆ. ಬೆಳೆದು ದೊಡ್ಡವರಾಗುತ್ತಾರೆ. ಅದೇ ಮನೆಯಲ್ಲಿ ಯಾವುದಾದರೂ ಕೇಳಿದರೆ ನಾಜೂಕಿನಿಂದ ನೋಡಿಕೊಂಡರೂ ಯಾವುದಾದರೂ ರೋಗಿದಿಂದ ಬಳಲುತ್ತಿರುತ್ತಾರೆ.

ರೋಗವು ಮಾನವನಷ್ಟೆ ಪ್ರಾಚೀನವಾದುದು. ತನ್ನ ದೇಹವನ್ನು ರಕ್ಷಿಸುವ ಹಾದಿಯಲ್ಲಿ ಹಲವಾರು ರೋಗ ರುಜಿನಗಳನ್ನು ಎದುರಿಸುತ್ತ ರೋಗಗಳನ್ನು ಹತ್ತಿಕ್ಕಬೇಕೆಂಬ ಫಲಿತದಲ್ಲಿ ಮಾನವನ ಹೋರಾಟ ಪ್ರಾರಂಭವಾಗುತ್ತದೆ ಎನ್ನಬಹುದು. ಜನಪದರ ವೈದ್ಯ ಪದ್ಧತಿಯು ಸುಮಾರು ವರ್ಷಗಳಿಂದಲೂ ಜನಪದರ ಬೆನ್ನಿನೊಂದಿಗೆ ಬೆಸೆದುಕೊಂಡು ಬಂದಿದೆ. ಕಾಡಿನಲ್ಲಿ ವಾಸಿಸುವ ಮಾನವರಿಗೆ ಪ್ರಕೃತಿಯೇ ಆರಾಧ್ಯ ದೈವವಾಗಿತ್ತು. ಪ್ರಕೃತಿಯ ಮಡಿಲಲ್ಲಿ ದೊರೆಯುವ ಎಲೆ, ಚಿಗುರು, ತೊಗಟೆ, ಹಣ್ಣು, ಕಾಂಡ, ಬೇರು ಮೊದಲಾದ ವಸ್ತುಗಳನ್ನು ಬೇರೆ ಮಾಡುವುದರಲ್ಲಿ ಮುಂದಾದ. ಕೆಮ್ಮು, ನೆಗಡಿ, ಜ್ವರ, ತಲೆನೋವು, ವಾಂತಿಬೇಧಿ, ಆಮಶಂಕೆ ಮೊದಲಾದ ರೀತಿಯ ತೊಂದರೆಗಳು ಸ್ವಾಭಾವಿಕವಾಗಿ ಕಾಡುತ್ತವೆ. ಜನಪದರು ದಿನನಿತ್ಯದ ಜೀವನದಲ್ಲಿ ಇಂತಹ ಹಲವಾರು ತೊಂದರೆಗಳನ್ನು ಎದುರಿಸ ಬೇಕಾಗುತ್ತದೆ. ಆಸ್ಪತ್ರೆಗಳ ಸೌಕರ್ಯಗಳು ದೊರೆಯದಿದ್ದರೂ ಅವರ ಅಪಾರ ಅನುಭವದಿಂದ ತಮ್ಮ ಸುತ್ತಮುತ್ತಲ ಪರಿಸರದಲ್ಲಿ ಸುಲಭವಾಗಿ ಸಿಗುವಂತಹ ಔಷಧಿಗಳನ್ನು ತಯಾರಿಸಿಕೊಂಡು ಕಾಯಿಲೆಗಳನ್ನು ಗುಣಪಡಿಸಿಕೊಳುತ್ತಿದ್ದರು.

ಉದಾಹರಣೆಗೆ ಕೆಮ್ಮು ಬಂದರೆ ಕಾಳು ಮೆಣಸನ್ನು ಪುಡಿ ಮಾಡಿ ಎರಡು ಚಮಚ ಜೇನುತುಪ್ಪ, ಅರ್ಧಚಮಚ ಕಾಳುಮೆಣಸಿನ ಪುಡಿಯನ್ನು ಮಿಶ್ರಣ ಮಾಡಿ ಬೆಳೆಗ್ಗೆ ಹಾಗೂ ರಾತ್ರಿ ಹೀಗೆ ದಿನಕ್ಕೆ ಎರಡು ಬಾರಿ ಇದನ್ನು ಸೇವಿಸಿದರೆ ಕೆಮ್ಮುವುದು ನಿಲ್ಲುತ್ತದೆ. ಮೆಣಸಿನ ಸಾರು ಮಾಡಿಕೊಂಡು ಕುಡಿದರೂ ವಾಸಿಯಾಗುತ್ತದೆ. ಬಾಯಿಯಲ್ಲಿ ಹುಣ್ಣಾದರೆ ಅದಕ್ಕೆ ಬೆಳಗಿನ ಸಮಯದಲ್ಲಿ ತುಳಸಿ ಎಲೆಯನ್ನು ಎರಡರಿಂದ ಮೂರು ಎಲೆ ದಿನ ದಿನಕ್ಕೆ ಒಂದು ಬಾರಿಯಂತೆ ಜಿಗಿದರೆ ಹುಣ್ಣುಗಳು ವಾಸಿಯಾಗುತ್ತವೆ ಎಂಬ ನಂಬಿಕೆ ಇದೆ. ತುಳಸಿ ಎಲೆಯನ್ನು ತಿಂದರೆ ವಾಸಿಯಾಗುತ್ತದೆ.

ಜನಪದ ವೈದ್ಯಕ್ಕೆ ಸಂಬಂಧಿಸಿದಂತೆ ಇವು ಗಮನಾರ್ಹವಾದುವು. ಮಕ್ಕಳಿಗೆ ಅಮ್ಮ ಆದಾಗ ದೊಡ್ಡವರಿಗೆ ದಣಿವಾದಾಗ ಗುಡಿಯಲ್ಲಿಯೇ ಅಥವಾ ಮನೆಯಲ್ಲಿಯೇ ಮಲಗಿರಬೇಕು. ಊರ

ಹೊರಗಾಗಲಿ ಅಥವಾ ಆಸ್ಪತ್ರೆಗಾಗಲಿ ಕರೆದೊಯ್ಯಬಾರದು. ಬೇಗ ವಾಸಿಯಾಗುವುದಿಲ್ಲ. ೧೩ ದಿನಗಳವರೆಗೆ ಮನೆಯಲ್ಲಿ ಇದ್ದು ದಿನಾಲೂ ಬೇವಿನಸೊಪ್ಪು, ಅರಿಸಿನ, ಉಪ್ಪುಗಳನ್ನು ಮಿಶ್ರಮಾಡಿ ಮೈಗೆ ಹಚ್ಚಿಕೊಳ್ಳಬೇಕು. ಈಗೇ ೫ ದಿನ ಮಾಡಿ ಕೊನೆಯ ದಿನದಂದು ಅಂದರೆ ೫ನೇ ದಿನ ಊರಮ್ಮ ದೇವರಿಗೆ ಜೋಳದ ಹಿಟ್ಟು, ೨ ಬದನೆ ಕಾಯಿ, ೨ ಈರುಳ್ಳಿ, ೫ ಹಸಿ ಮೆಣಸಿನಕಾಯಿ, ಜೊತೆಗೆ ಕಾಯಿ ಕರ್ಪೂರ, ಬಾಳೆಹಣ್ಣು ತೆಗೆದುಕೊಂಡು ಹೋಗಬೇಕು. ಆವಾಗ ಮೈಮೇಲಿನ ಅಮ್ಮ ದಿನೇ ದಿನೇ ಕಡಿಮೆಯಾಗುತ್ತಾ ಹೋಗುತ್ತದೆ. ನಿಯಮ ಮಾಡುವುದಿರಿಂದಲೇ ಬೇಗ ಹೋಗುವುದಿಲ್ಲ. ಇನ್ನೊಂದು ಅಮ್ಮ ಬಂದಾಗ ಮಾಂಸ ಹೆಚ್ಚು ತಿಂದರೆ ಬೇಗ ಹೋಗುತ್ತವೆ ಎಂದು ಅಜ್ಜಿ ಹೇಳುತ್ತಾಳೆ. ಅಡಿಕೆ ತಿಂದರೆ ಕಾಮಾಲೆ ರೋಗ ಬರುತ್ತದೆ. ಅತಿ ಭೇದಿಯಾದರೆ ಅದಕ್ಕೆ ಕಾಲಿನ ನರಗಳನ್ನು ಹಿಡಿದು (ಬಟ್ಟಿ) ತಿಕ್ಕಬೇಕು. ಮಕ್ಕಳು ಆಟ ಆಡದಿದ್ದರೆ, ಊಟ ತಿಂಡಿಯನ್ನು ಇದ್ದಕ್ಕಿದ್ದಂತೆ ಕಡಿಮೆ ಮಾಡುವುದು, ಹೆದರಿ ಭಯಪಟ್ಟು ರಾತ್ರಿಯ ವೇಳೆ ಮೂತ್ರ ಮಾಡಿಕೊಳ್ಳುವುದು, ಕೆಟ್ಟ ಕನಸು ಪದೇ ಪದೇ ಕಾಣುವುದು. ಇದಕ್ಕೆ ಕಸಬಾರಿಗೆ ಅಥವಾ ಒಣ ಮೆಣಸಿನಕಾಯಿ, ಉಪ್ಪು, ಕೂದಲು ತೆಗೆದುಕೊಂಡು ಇಳೆ ತೆಗೆದರೆ ತಟ್ಟನೆ ಮಗು ಆಳುವುದನ್ನು ನಿಲ್ಲಿಸುವುದುಂಟು. ನಂತರ ಗಾಬರಿ ಅಥವಾ ಬೆಂಕಿಯ ಬೆಳಕು ಮಕ್ಕಳ ಮನಸ್ಸನ್ನು ಬೇರೆ ಕಡೆಗೆ ತಿರುಗಿಸಿ ಅಳುವುದನ್ನು ನಿಲ್ಲಿಸಬಹುದು. ನಂತರ ಊಟ ಮಾಡುತ್ತವೆ. ಆಸರವಾಗಿರುವುದರಿಂದ ಈ ರೀತಿ ಮಾಡಬೇಕಾಗುತ್ತದೆ. ಮೇಲೆ ಹೇಳಿದಂತೆ ಮೂತ್ರ ಮಾಡುವುದು ಮತ್ತು ಪದೇ ಪದೇ ಕೆಟ್ಟ ಕನಸು ಬೀಳುವುದು, ಮತ್ತೆ ಜ್ವರ ಮಾರುವುದು ಇವುಗಳಿಗೆ ದೇವಸ್ಥಾನದ ಪೂಜಾರಿಗಳ ಪುರೋಹಿತ ಪೂಜಾರಿಯ ಹತ್ತಿರ ತಾಯಿತ ಅಥವಾ ಚೀಟುಗಳನ್ನು ಮಕ್ಕಳ ಕೊರಳಿಗೆ, ಕೈಗೆ ಕಟ್ಟಿಸುವುದರಿಂದ ಇವು ಹೋಗುತ್ತವೆ. ಜ್ವರ ಬಂದಾಗ ಚುಟಿಕೆ ಹಾಕಿಸುವುದು ನಮ್ಮ ಸಂಪ್ರದಾಯ. ಮತ್ತು ಭಾನುವಾರ ಅಮಾವಾಸ್ಯೆ ಬಂದರೆ ನಮ್ಮ ತಂದೆಯವರು ಎಲ್ಲರಿಗೂ ಒಂದೊಂದು ಚುಟಿಕೆಯನ್ನು ಹಾಕುತ್ತಿದ್ದರು. ಹೀಗೆ ಜನಪದ ವೈದ್ಯದಲ್ಲಿ ನಂಬಿಕೆ ಮನಸ್ಸಿಗೆ ಮೇಲೆ ಪರಿಣಾಮವನ್ನು ಉಂಟುಮಾಡಿ, ಆ ಮೂಲಕ ತೊಂದರೆಗಳಿಗೆ ಒಳಗಾಗಿರುವವರಿಗೆ ಆತ್ಮ ವಿಶ್ವಾಸ ಮೂಡಿಸಿ ಮೊದಲಿನಂತಾಗುವುದನ್ನು ಕಾಣಬಹುದು. ಇದಲ್ಲದೆ ಇನ್ನೂ ಹಲವಾರು ರೀತಿಯ ಕಾಯಿಲೆಗಳನ್ನು ನಂಬಿಕೆ ಮತ್ತು ಆಚರಣೆಗಳ ಮೂಲಕವೇ ನಿರ್ಧರಿಸಿಕೊಳ್ಳುತ್ತಾರೆ.

ಚಿಕ್ಕಮಕ್ಕಳಿಗೆ ಅರಿಶಿಣ, ಬೆಳ್ಳೊಳ್ಳಿ ಉಪಯೋಗಿಸುವುದು ಸಕ್ಕರೆ ರೋಗಕ್ಕೆ ಹಾಗಲಕಾಯಿ ರಸ್, ಅತಿಸಾರಕ್ಕೆ ಹುರಿದ ಹೆಸರು, ದಾಳಿಂಬೆ ಬೀಜ, ಬಿಲ್ವಪತ್ರೆ, ಎಳನೀರು, ಬೆಳ್ಳುಳ್ಳಿ ಆರೋಗ್ಯಕ್ಕೆ ಉತ್ತಮವಾದುದು.

ಪರಂಗಿಹಣ್ಣು, ತುಳಸಿ ಎಲೆ ಕೆಮ್ಮು ರೋಗಕ್ಕೆ ಔಷಧಿಯಾಗಿದೆ. ಗರಿಕೆ ಆರೋಗ್ಯದ ದೃಷ್ಟಿಯಲ್ಲಿ ಮುಖ್ಯವಾಗಿದೆ. ಬಿಳುಪು ನಿಲ್ಲಿಸುವುದಕ್ಕೆ ಬಿಳಿ ದಾಸವಾಳದ ಬೇರನ್ನು ೬ ದಿನಗಳ ಕಾಲ ಹಸುವಿನ ಹಾಲಿನಲ್ಲಿ ತೇಯ್ದು ಹಾಳು ಹೊಟ್ಟೆಯಲ್ಲಿ ಕುಡಿಯಬೇಕು. ನಿಂಬೆಹುಳಿ, ಜೇನು ಸಕ್ಕರೆಯಲ್ಲಿ ಬೆರೆಸಿ ಕುಡಿದರೆ ಕಫ ನೆಗಡಿ ನಿವಾರಣೆ.

ಎಳ್ಳೆದೆಲೆ ಬೆಚ್ಚಗೆ ಮಾಡಿ ಮಗುವಿನ ನೆತ್ತಿಯ ಮೇಲೆ ಇಡುವುದರಿಂದ ನೆಗಡಿ ಕಡಿಮೆಯಾಗುತ್ತದೆ. ಸುಳಿಯ ಮೇಲೆ ಅರಶಿಣ ಪುಡಿ ಇಡುವುದರಿಂದ ನೆಗಡಿ ಕಡಿಮೆಯಾಗುತ್ತದೆ.

ಬಿಸಿ ಹಾಲಿನಲ್ಲಿ ಅರಿಶಿನ, ಮೆಣಸು, ಉಪ್ಪು ಹಾಕಿ ಕುದಿಸಿ ಉಗುರು ಬೆಚ್ಚಗಾದ ಮೇಲೆ ಕಲಕಿ ಕುಡಿಯಬೇಕು. ಕೃಷ್ಣ ತುಳಸಿ, ಸೊಪ್ಪು ಮತ್ತು ಉಪ್ಪು ಸೇರಿಸಿ ೩ ದಿನಗಳ ಬೆಳಗ್ಗೆ ಹಾಗೆ ತಿಂದರೆ ಶೀತ ಕೆಮ್ಮು ವಾಸಿಯಾಗುತ್ತದೆ.

ಅಜುವಾನ ಕಾಳು ತೇದು ಹೊಟ್ಟೆ ಮೇಲೆ ಇಟ್ಟರೆ ಹೊಟ್ಟೆ ಉಬ್ಬರ ಕಡಿಮೆಯಾಗುತ್ತದೆ. ವಿಳ್ಯೆದೆಲೆ, ಹರಳೆಣ್ಣೆ ದೀಪದಲ್ಲಿ ಕಾಯಿಸಿ ತಲೆಯ ನೆತ್ತಿ ಭಾಗದಲ್ಲಿ ಇಟ್ಟು ಮುಚ್ಚುತ್ತಾರೆ. ಮಗುವನ್ನು ಸ್ನಾನ ಮಾಡಿಸಿದ ಮೇಲೆ ನೆತ್ತಿ ಮೇಲೆ ಅರಿಸಿನ ಪುಡಿ ಇಡುತ್ತಾರೆ.

ಬಾಳೆದಿಂಡು ಪಲ್ಯ ಮಾಡಿ ತಿಂದರೆ ಹೊಟ್ಟೆಯ ಗಡ್ಡೆಯನ್ನು ಕರಗಿಸುತ್ತದೆ. ಎಕ್ಕೆಯ ಹಾಲನ್ನು, ಮುಳ್ಳು ಚುಚ್ಚಿದ ಜಾಗದಲ್ಲಿ ಆಗಿದ್ದರೆ, ಆಗ ಮುಳ್ಳು ಬಿದ್ದು ಹೋಗುತ್ತದೆ. ನಿಂಬೆಹಣ್ಣನ್ನು ಉಗುರು ಸುತ್ತಿಗೆ ಬಳಸುತ್ತಾರೆ.

ಮೈಯಲ್ಲಿ ಗುಳಿಗಳಾದರೆ ಬೇವಿನ ಸೊಪ್ಪು ಮುಖ್ಯವಾಗುತ್ತದೆ. ಅರಿಶಿನ, ಉಪ್ಪು, ನುಗ್ಗೆ ಸೊಪ್ಪು, ಮನುಷ್ಯನಿಗೆ ಮಾಡಿಸಿ ಹಾಕಿದರೆ ಉಪಯೋಗ. ಅಜೀರ್ಣವಾದರೆ ಉಪ್ಪು ನಿಂಬೆರಸವನ್ನು ಕುಡಿಯುವುದು.

ಊಟ ಮಾಡಿದ ಮೇಲೆ ಮೈ ಮುರಿಯಬಾರದು. ಊಟ ಹೊಟ್ಟೆಗತ್ತುವುದಿಲ್ಲ. ಎಳನೀರಿನ ಕಾಯಿಯಿಂದ ಉಷ್ಣಷ್ಟವೂ ಕಡಿಮೆಯಾಗುತ್ತದೆ. ಇಂದು ಜನರಿಗೆ ಹಣ್ಣಿನ ರಸಗಳು, ಬೇರೆ ಬೇರೆ ಪಾನೀಯಗಲು ಮನುಷ್ಯನಿಗೆ ಹಾನಿ ಮಾಡುವುದು ಎಂದು ತಿಳಿದರೂ, ಇವುಗಳನ್ನು ಕುಡಿಯುತ್ತಾರೆ ವಿನಃ ಎಳನೀರು ಕುಡಿಯುವುದು ಕಡಿಮೆ ಎಂದು ಹೇಳಬಹುದು.

ಕೊರವರ ವೃತ್ತಿ

ಕೊರಮರು ಈ ಸಾವಿರಾರು ವರ್ಷಗಳಲ್ಲಿ ಅನುಸರಿಸಿಕೊಂಡು ಬಂದ ವೃತ್ತಿಗಳು ಹಲವಾರು. ಆದರೆ ಮೂಲದಲ್ಲಿ ಇವರು ಕಾಡಿನಲ್ಲಿ ವಾಸ ಮಾಡುತ್ತಾ ಪಶುಪಾಲನೆ ಮತ್ತು ಬುಟ್ಟಿ ಹೆಣೆಯುವುದು, ಹೆಂಗಸರು ಕಣಿ ಹೇಳುವುದನ್ನು ಮಾಡುತ್ತಿದ್ದ ಬಗೆಗೆ ಅನೇಕ ವಿದ್ವಾಂಸರು ದಾಖಲಿಸಿದ್ದಾರೆ. ಜೊತೆಗೆ ಇವರು ಬೇಟೆಗಾರರು ಎಂಬುದನ್ನು ಸೂಚಿಸಿದ್ದಾರೆ. ಈ ಬಗ್ಗೆ ಎಚ್.ವಿ. ನಂಜುಂಡಯ್ಯ ಮತ್ತು ಎಲ್.ಕೆ. ಅನಂತ ಕೃಷ್ಣ ಅಯ್ಯರ್ ಅವರು "Korachas also known as koravas and koramas are a tribe of huters, fortune letters, cattle breaders, carriers, basket makers and thives ಎಂದು ದಾಖಲಿಸಿದರೆ ಆರ್. ಇ. ಎಂಥೋವನ್ ಅವರು "They are wandring tribe of huaters, fortune letters, cattle breaders, carriers, musicians basket makers and thives" ಎಂದು ಹೇಳಿದ್ದಾರೆ. ಅಬೆದುಬೆ ಅವರು "them as carriers and basket makers who

were perpetually wandring about and showed much affinity with the Gypsies of Europe, especially in telling Fortunes. The women were skillful tattors about the tribe in his time and an evil reputation for thieving and house eaking ಎಂಬ ವಿಷಯಗಳನ್ನು ದಾಖಲಿಸಿದ್ದಾರೆ".[8] ಇನ್ನು ಅನೇಕ ವಿದ್ವಾಂಸರು ಇಂಥದ್ದೆ ವಿವರಗಳನ್ನು ದಾಖಲಿಸಿದ್ದಾರೆ. ಶ್ಯಾಮಪ್ರಸಾದ್ ಅವರು ಈ ಜನಾಂಗದವರು ಪೂರ್ವದಲ್ಲಿ ಹೆಚ್ಚಾಗಿ ಅರಣ್ಯ ಮತ್ತು ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿದ್ದರು. ಕಾಡಿನಲ್ಲಿ ಹೇರಳವಾಗಿ ದೊರಕುತ್ತಿದ್ದ ಬಿದಿರು, ಈಚಲು ಗರಿಗಳಿಂದ ಮಕ್ಕರಿ, ಬುಟ್ಟಿ, ತೊಟ್ಟಿಲು, ಬಂಡಿ ಮಕ್ಕರಿ, ಮರ, ಚಾಪೆ ಇತ್ಯಾದಿ ಕಸುಬುಗಳಿಂದ ಜೀವನ ಸಾಗಿಸುತ್ತಿದ್ದರು. ಹೆಂಗಸರು ಕಣಿ, ಭವಿಷ್ಯ ಹೇಳುವುದು ಪಚ್ಚೆ (tolhing) ಕಟ್ಟುವುದು ಈ ಕೈ ಕಲೆಗಳಿಂದ ಸಂಪಾದಿಸುತ್ತಿದ್ದರು ಎಂದು ಅವರ ಉದ್ಯೋಗದ ಕೆಲ ವಿವರಗಳನ್ನು ನೀಡಿದ್ದಾರೆ.

ಮೂಲದಲ್ಲಿ ಕೊರಮರು ಬೆಟ್ಟ ಗುಡ್ಡಗಳಲ್ಲಿ ವಾಸಿಸುತ್ತಿದ್ದರೂ ಅವರು ಜೀವನೋಪಾಯಕ್ಕಾಗಿ ಅಕ್ಕಪಕ್ಕದ ಹಳ್ಳಿಗಳನ್ನೇ ಆಶ್ರಯಿಸಿಬೇಕಾಗಿತ್ತು. ಗಂಡಸರು ಕಾಡಿನಲ್ಲಿ ದೊರೆಯುತ್ತಿದ್ದ ಬಿದಿರು. ಬೆತ್ತಗಳಿಂದ ಬುಟ್ಟಿ ಮಾಡಿದರೆ, ಹೆಂಗಸರು ಅವುಗಳನ್ನು ಹಳ್ಳಿಗಳಿಗೆ ತಂದು ಮಾರಾಟ ಮಾಡುತ್ತಿದ್ದರು. ಬೆಟ್ಟದಿಂದ ಬಿದಿರು ತರುವುದು ಎಷ್ಟು ಕಷ್ಟವೋ? ಎಲ್ಲಾ ಬಿದಿರು ಇವರ ಕೆಲಸಕ್ಕೆ ಬರುವುದಿಲ್ಲ. ಗಂಟು ಗಂಟಾದ, ಒರಟಾದ ಬಿದಿರು ಬಿಟ್ಟು ನೀಟಾಗಿ ಬೆಳೆದ ಉದ್ದ ಗೇಣುಳ್ಳ ಮೆದುವಾದ ಬಿದಿರನ್ನು ಹುಡುಕಿ ಕಡಿದು ಮಳೆಯಿಂದ ಬಿಡಿಸಿ, ಉದ್ದಕ್ಕೆ ಸೀಳಿ ತಲೆಯ ಮೇಲೆ ಹೊತ್ತು ತರಬೇಕಾಗುತ್ತಿತ್ತು. ಜೊತೆ ಜೊತೆಗೆ ಕೆಲಸ ಮಾಡುವಾಗ ಮೈ ಮೇಲಿನ ಬಟ್ಟೆ ಕಿತ್ತಿತ್ತು. ಬುಟ್ಟಿ ಹೆಣೆಯುವ ಕೆಲಸವನ್ನೇ ಮಾಡಿದರೆ ಮತ್ತೆ ಕೆಲವರು ಕಳ್ಳತನ, ದರೋಡೆ, ಮಾಡುವ ಕೆಲಸಕ್ಕೂ ಕೈಹಾಕಿದರು. ಕೆಲವರು ಮಂಗವನ್ನು ಆಡಿಸುವ, ಕೆಲವರು ಹಾವು ಆಡಿಸುವ, ಮತ್ತೆ ಕೆಲವರು ಹಗ್ಗ ಮಾಡುವ ಮತ್ತು ಇಂಥ ಅನೇಕ ವೃತ್ತಿಗಳನ್ನು ಅನುಸರಿಸಿದರು. ಅವುಗಳಲ್ಲಿ ಕಳ್ಳತನಗಳಾಗದಂತೆ ಊರ ಕಾಯುವುದು, ಎತ್ತುಗಳ ವ್ಯಾಪಾರ ಮಾಡುವುದು ಇತ್ತು.

ಇತ್ತೀಚೆಗೆ ನಾಗರಿಕ ಬದುಕಿಗೆ ಹೊಂದಿಕೊಳ್ಳುತ್ತಿರುವ ಜನ ತಮ್ಮ ಕುಲಕಸುಬಾದ ಕುಕ್ಕೆ ಹೆಣೆಯುವುದನ್ನು ಬಿಟ್ಟು ತೆಂಗಿನ ಗಿಡ ಮಾರುವ, ಬಟ್ಟೆಯನ್ನು ತಲೆಯ ಮೇಲೆ ಹೊತ್ತು ಮಾರುವ, ಫೋಟೋ, ಕನ್ನಡಿ ಮನೆ ಬಳಕೆಯ ಸಾಮಾನನ್ನು ಹಳ್ಳಿಗಳಿಗೆ ಹೋಗಿ ಮಾರುವ, ಅಲ್ಯೂಮಿನಿಯಂ ಪಾತ್ರೆಗಳನ್ನು ಮಾರುವ ಕೆಲಸವನ್ನು ಮಾಡುತ್ತಿದ್ದಾರೆ. ಕೆಲವರು ವಿದ್ಯೆ ಕಲಿತು ನೌಕರಿ ಮಾಡುತ್ತಿದ್ದಾರೆ. ಕಾಲಧರ್ಮಕ್ಕೆ ಹೊಂದಿಕೊಳ್ಳುವ ಗುಣ ಇವರಲ್ಲಿ ಎದ್ದು ತೋರುತ್ತದೆ. ಅನಕ್ಷರತೆ ಮತ್ತು ಮೂಢನಂಬಿಕೆಗಳಿಂದಾಗಿ ತಮ್ಮನ್ನು ಮೇಲೆತ್ತಿಕೊಳ್ಳಲಾಗಿದೆ. ಈ ಸಾವಿರಾರು ವರ್ಷಗಳಲ್ಲಿ ಅಲೆಮಾರಿಗಳಾಗಿ ಅತಂತ್ರವಾಗಿಯೇ ಸಾಗಿ ಬಂದಿದ್ದಾರೆ. ಇವರು ನಾಲ್ಕು ಗೋಡೆಯ ನಡುವೆ ಬದುಕು ಸಾಗಿಸುವ ಇವರದ್ದು ಬಡತನದೊಂದಿಗಿನ ಹೋರಾಟದ ಬದುಕಾಗಿದೆ.

"ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ ವೇದವನೋದಿ

ಹಾರುವವನಾದ.......... ಎಂದು ಬಸವಣ್ಣನವರು ಹೇಳಿದಂತೆ ವೃತ್ತಿಯಿಂದ ಕುಲಗಳು ಹುಟ್ಟಿಕೊಂಡಿವೆ" ವಿನಃ ಜಾತಿಯಿಂದಲ್ಲ. ಕೊರವರು ತಮ್ಮ ದೈಹಿಕ ಶ್ರಮವನ್ನು ನಂಬಿಕೊಂಡು (ಅವರಿಗೆ ಅನುಕೂಲವಾಗುವ) ಬೇರೆ ಬೇರೆ ವೃತ್ತಿಗಳಲ್ಲಿ ಹಂಚಿ ಹೋಗಿದ್ದಾರೆ. ಮಹಿಳೆಯರು ತಮ್ಮ ವೃತ್ತಿಯೊಂದಿಗೆ ತಮಗೆ ಅನುಕೂಲವಾಗುವ ರೀತಿಯಲ್ಲಿ ವ್ಯಾಪಾರಗಳನ್ನು ಮಾಡುತ್ತಿದ್ದಾರೆ. ಮನೆ ಕೆಲಸದ ಜೊತೆಗೆ ಬೇರೆ ಬೇರೆ ಕೆಲಸಗಳು ಅವರಿಗೆ ಆರ್ಥಿಕ ನೆರವು ನೀಡುತ್ತವೆ. ಆದ್ದರಿಂದ ತನ್ನ ಕುಟುಂಬದ ನಿರ್ವಹಣೆ ನಡೆಯುತ್ತದೆ.

ಬುಟ್ಟಿ ಹೆಣೆಯುವುದು

ಈಚಲು ಗಿಡದ ಬಿದಿರು ತೆಗೆದುಕೊಂಡು ಬುಟ್ಟಿಯನ್ನು ತಯಾರಿಸಲಾಗುತ್ತದೆ. ತಮ್ಮ ಜಾಣ್ಮೆ ಚಮತ್ಕಾರದಿಂದ ಬುಟ್ಟಿಯನ್ನು ಗಿಡದ ಕಡ್ಡಿಯನ್ನು ಒಂದು ಸಮ ಪ್ರಮಾಣದ ರೀತಿಯನ್ನು (ಕತ್ತರಿಸಿಕೊಂಡು) ಸೀಳಿಕೊಂಡು ಬುಟ್ಟಿ ತಯಾರಿಸಲಾಗುತ್ತದೆ. ಬುಟ್ಟಿಯನ್ನು ಕೋಳಿ ಮುಚ್ಚುವುದಕ್ಕೆ, ರೈತರು ಸಾಗಣೆ ತೆಗೆಯಲು, ಹೊಲಗಳಲ್ಲಿ ಧಾನ್ಯವನ್ನು ತೆಗೆಯಲು, ಕಸ ತೆಗೆದುಕೊಂಡು ಹೋಗಲು ಅವಶ್ಯವಾಗಿದೆ. ರೈತವರ್ಗಕ್ಕೆ ಬುಟ್ಟಿ ಬೇಕೇ ಬೇಕಾಗುತ್ತದೆ. ನೆಲವು ಮಾಡಲು ಅಂದರೆ ಧಾನ್ಯ ಇಡಲು, ಎತ್ತುಗಳಿಗೆ ಬಾಯಿ ಕಟ್ಟಲು, ಚುಕ್ಕ ಅಥವಾ ಮಂಗರಿ ತಯಾರಿಸುತ್ತಾರೆ. ಹೊಲದಲ್ಲಿ ಹೂಳುವಾಗ ಬೆಳೆಯನ್ನು ತಿನ್ನಬಾರದು ಎಂದು ಹಾಗೆ ಕಟ್ಟಲಾಗುತ್ತದೆ.

ಸನಾದಿ ಊದುವುದು

ಕೊರವರನ್ನು ವಾಲಗದವರು ಎಂದು ಸಹ ಕರೆಯುತ್ತಾರೆ. ವಾಲಗ, ಸನಾದಿ ಊದುವುದೇ ಕೊರವರ ಒಂದು ವೃತ್ತಿಯಾಗಿದೆ. ಇವರು ಮದುವೆ ಕಾರ್ಯದಿಂದ ಹಿಡಿದು ಹಬ್ಬ ಹರಿದಿನಗಳಲ್ಲಿ, ಸಾವಿನಲ್ಲಿಯೂ ಊದುವುದು ಕಂಡುಬರುತ್ತದೆ. ಅದು ಅವಶ್ಯಕವು ಆಗಿದೆ. ಆದರೆ ಆಧುನಿಕತೆಯ ಪ್ರಭಾವದಿಂದ ವಾಲಗದವರನ್ನು ಕರೆಯುವುದು ಕಡಿಮೆಯಾಗುತ್ತಿದೆ ಎಂದು ಹೇಳಬಹುದು. ನಗರದಂತಹ ಸ್ಥಳಗಳಲ್ಲಿ ಆಧುನಿಕತೆಯಲ್ಲಿ ಪರಿವರ್ತನೆಯಾಗುತ್ತಿರುವುದನ್ನು ನೋಡಬಹುದು. ಬಡವರಿಗೆ ಮಾತ್ರ ವಾಲಗದವರು ಬೇಕೇ ಬೇಕು ಅವಶ್ಯಕವು ಆಗಿದೆ.

ಬಾರಿಗೆ ಕಟ್ಟುವುದು

ಗಂಡಸರು ಮತ್ತು ಹೆಂಗಸರು ಈಚಲು ಗಿಡ ದೊರೆಯುವ ಜಾಗಕ್ಕೆ ಹೋಗಿ ತರುತ್ತಾರೆ. ತಂದ ನಂತರ ಅವುಗಳನ್ನು ಸಮ ಪ್ರಮಾಣದಲ್ಲಿ ಸೀಳಿಸಿಕೊಂಡು ನೀರಿನಲ್ಲಿ ಅದ್ದಿ ಬಿಸಿಲಿಗೆ ಒಣಗಿಸುತ್ತಾರೆ. ನಂತರ ಈಚಲು ಗರಿಯ ಒಂದೊಂದು ಎಳೆಗಳನ್ನು ತೆಗೆದುಕೊಂಡು ಉರುಗೋಣಿ ಮಾಡುತ್ತಾರೆ (ಅಂದರೆ ಬಾರಿಗೆ ಕಟ್ಟುವ ದಾರ). ಅದನ್ನು ನೀರಿನಲ್ಲಿ ನೆನೆಯಲು ಬಿಟ್ಟು ಸಮಪ್ರಮಾಣ ಮಾಡಿದ ಗರಿಗಳನ್ನು ದೊಡ್ಡ, ಸಣ್ಣ ಪ್ರಮಾಣದಲ್ಲಿ ಜೋಡಿಸಿಕೊಂಡು ಕಸಬಾರಿಗೆಗಳನ್ನು ಕಟ್ಟುತ್ತಾರೆ. ದೊಡ್ಡವು ಸಣ್ಣವು ಸೇರಿ, ಐದು ರೀತಿಯಲ್ಲಿ ಕಸಬರಿಗೆಯನ್ನು ಕಟ್ಟಲಾಗುತ್ತದೆ.

ಸಿಂಬೆ ಕಟ್ಟುವುದು

ಇದನ್ನು ತಾಳೆಗರಿ, ಈಚಲು ಗಿಡದ ಮುಳ್ಳಿನ ಗರಿಗಳಿಂದ ಕಟ್ಟಲಾಗುತ್ತದೆ. ಈಚಲು ಗಿಡದ ಗರಿಯಿಂದ ಮಾಡಿ ನಂತರ ತಾಳೆಗರಿ ಅದರ ಮೇಲೆ ಸುತ್ತಲಾಗುತ್ತದೆ. ಆಗ ಸಿಂಬೆ ಸಿದ್ಧವಾಗುತ್ತದೆ.

ಆಧುನಿಕತೆಯಲ್ಲಿ ಕೊರವರ ಹೆಂಗಸರು ಮೇಲೆ ಸಿಕ್ಕಿ ಹಾಕುವ ಸುಂದರವಾದ ವಸ್ತುವನ್ನು ತಯಾರಿಸುತ್ತಾರೆ. ಬೆಲೆ ಮಾತ್ರ ಬಹಳ ಕಡಿಮೆ. ಚೌಕಾಕಾರವಾಗಿರುತ್ತದೆ.

ಹಂದಿ ಸಾಕುವುದು

ಬಳ್ಳಾರಿ ಜಿಲ್ಲೆಯಲ್ಲಿ ಹಂದಿ ಸಾಕುವುದನ್ನು ಕಾಣಲಾಗುತ್ತದೆ. ಕಾನೂನಿನ ರೀತಿಯಲ್ಲಿ ಇದನ್ನು ನಿಲ್ಲಿಸಬೇಕು ಎದು ತಿಳಿಸಿದರೂ ಸಹ ಹಂದಿ ಸಾಕಾಣಿಕೆ ನಡೆಯುತ್ತಾ ಇವೆ. ಅವರ ವೃತ್ತಿಯೂ ಇದಾಗಿದೆ. ಅದರ ಮಾಂಸವನ್ನು ಕೊರವರಲ್ಲಿ ಕೆಲವರು ತಿನ್ನುತ್ತಾರೆ. ಕೆಲವರು ತಿನ್ನುವುದಿಲ್ಲ ಎಂಬುದು ತಿಳಿದುಬರುತ್ತದೆ. ಏಕೆಂದರೆ ಅವರ ಮನೆದೇವರು ವೆಂಕಟೇಶ್ವರ ಆಗಿದ್ದರೆ ಅವರು ತಿನ್ನುವುದಿಲ್ಲ. ಹಂದಿ ವೆಂಕಟೇಶ್ವರನ ಅವತಾರದದಲ್ಲೊಂದು ಎಂದೂ ನಂಬಿಕೆ ಇದೆ. ಇದರಲ್ಲಿ ದೇಶೀಯ ತಳಿ ಮತ್ತು ಬಿಳಿ ತಳಿಯ ಹಂದಿಗಳನ್ನು ಸಾಕುತ್ತಾರೆ. ದೇಶಿ ತಳಿ ಹಂದಿಗಳಿಗೆ ಆಹಾರವನ್ನು ಹಾಕುವುದಿಲ್ಲ. ಊರೆಲ್ಲ ಅಲೆದು ತನ್ನಷ್ಟಕ್ಕೆ ತಾನೆ ಸಂಗ್ರಹಿಸಿಕೊಳ್ಳುತ್ತದೆ. ಬಹಳಷ್ಟು ಹಂದಿಗಳನ್ನು ಸಾಕಿದವರು ಬೇರೆ ಊರುಗಳಿಗೆ ಮಾರಾಟಕ್ಕೆ ಕಳಿಸುವುದುಂಟು. ಲಾರಿಗಟ್ಟಲೇ ಹೋಗುತ್ತದೆ. ಅವುಗಳಿಗೆ ದೊಡ್ಡಿಯನ್ನು ಮಾಡಿರುತ್ತಾರೆ. ಮನೆಯ ಮುಂದೆ ಮುಸರಿ ಹಾಕುತ್ತಾರೆ. ಅವುಗಳನ್ನು ಬಿಳಿ ತಳಿಯ ಹಂದಿಗಳು ಕುಡಿಯುತ್ತದೆ.

ಇತ್ತೀಚಿನ ದಿನಗಳಲ್ಲಿ ಸರ್ಕಾರ ಹಂದಿಗಳನ್ನು ವಿಷವಿಟ್ಟು ಸಾಯಿಸುತ್ತಿರುವುದು ಕಂಡುಬರುತ್ತದೆ. ಆದರೂ ಹಂದಿಗಳನ್ನು ಸಾಕುತ್ತಾರೆ. ಅದರಿಂದ ಔಷಧಿ ಪಡೆಯುತ್ತಾರೆ. ಬಿಳಿ ತಳಿ ಹಂದಿಗಳನ್ನು ಶೌಚಾಲಯಗಳಲ್ಲಿ ಕೊರವರು ಬಿಡುವುದಿಲ್ಲ (ಬಿಳಿ ತಳಿಯ ಹಂದಿಗಳನ್ನು ಬೇರೆ ಜಾತಿಯವರೂ ಸಹ ಸಾಕುವುದುಂಟು ತಮ್ಮ ಗುಡಿಸಲ್ಲಿನ ಚಪ್ಪರದಲ್ಲಿ ದನಗಳಂತೆ ಕೂಡಿ ಹಾಕುತ್ತಾರೆ. ಹೋಟೆಲಿನಲ್ಲಿಯ ಮುಸುರೆ, ಎಂಜಲು, ಕಬ್ಬು ಮನೆಯಲ್ಲಿಯ ಮುಸುರೆ ಹಾಕಿ ಬಲಿಷ್ಟವಾಗಿ ಬೆಳೆಸಲಾಗುತ್ತದೆ. ದೇಶೀಯ ತಳಿಗಳಿಗಿಂತ ಹೆಚ್ಚಿನ ಮಟ್ಟದಲ್ಲಿ ನೋಡಬಹುದು. ಶಿವಮೊಗ್ಗ, ಹಾಸನಗಳಲ್ಲಿ ಹಂದಿ ಮಾಂಸವನ್ನು ಹೆಚ್ಚು ತಿನ್ನುವುದು ಕಂಡುಬರುತ್ತಾರೆ. ಇಂದು ನಾಗರಿಕ ಸಮಾಜದಲ್ಲಿ ವ್ಯಾಪಾರ ಮನೋಭಾವ ತೀವ್ರವಾಗಿ ಬೆಳೆಯುತ್ತಿದೆ. ಬಹುಶಃ ಈ ಹಿನ್ನೆಲೆಯಿಂದ ಕೊರವರು ಇತ್ತೀಚೆಗೆ ಬಾರಿಗೆ, ಬುಟ್ಟಿಗಳು ದೊಡ್ಡ ದೊಡ್ಡ ಪಟ್ಟಣಗಳಿಗೆ ಲಾರಿಗಟ್ಟಲೆ ರಫ್ತು ಮಾಡುವುದನ್ನು ಕಾಣುತ್ತೇವೆ. ಒಂದು ರೀತಿಯಲ್ಲಿ ಉತ್ಪಾದಕರಾಗಿ ಕಾರ್ಯ ನಿರ್ವಹಿಸಿ ವ್ಯಾಪಾರಸ್ಥರಿಗೆ ಕೊಡುತ್ತಾರೆ. ಅವರು ಪಟ್ಟಣಗಳಲ್ಲಿ ಮಾರಾಟ ಮಾಡುತ್ತಾರೆ.

೬.೨.ಮಹಿಳೆಯರ ಆರ್ಥಿಕ ಚಟುವಟಿಕೆಗಳು

ಯಾವುದೇ ಸಮಾಜದಲ್ಲಾಗಲಿ ಅಲ್ಲಿನ ಅಭಿವೃದ್ಧಿಯ ಮುಖ್ಯ ಸೂಚಕವೆಂದರೆ ಮಹಿಳೆಯರ ಸ್ಥಾನಮಾನ. ಈ ಸಮುದಾಯದಲ್ಲಿ ಅರ್ಧದಷ್ಟು ಜನಸಂಖ್ಯೆ ಇರುವ ಮಹಿಳೆಯರು ಅಮೂಲ್ಯ

ಮಾನವ ಸಂಪನ್ಮೂಲವಾಗಿದ್ದಾರೆ. ದೇಶದ ಸರ್ವಾಂಗೀಣ ಪ್ರಗತಿಗಾಗಿ, ಗೃಹಿಣಿಯರಾಗಿ, ಭಾವಿ ಪ್ರಜೆಗಳನ್ನು ಹೆತ್ತು ಹೊತ್ತು ಬೆಳೆಸುವ ತಾಯಂದಿರಾಗಿ ಮಹಿಳೆಯರು ಸಲ್ಲಿಸುತ್ತಿರುವ ಸೇವೆಯೇ ಅತೀ ದೊಡ್ಡದು ಹಾಗೂ ಅಮೋಘವಾದುದು. ಆದುದರಿಂದಲೇ ಅವರನ್ನು ಹಾಗೂ ಅವರ ಶಕ್ತಿಯನ್ನು ಗುರುತಿಸಿ ಅಭಿವೃದ್ಧಿ ಪಥದಲ್ಲಿ ಮುನ್ನಡೆಯುವ ಅವಶ್ಯಕತೆ ಇದೆ. ಇದರಲ್ಲಿ ಅವರ ಪ್ರಗತಿ ಮಾತ್ರವಲ್ಲದೇ ದೇಶದ ಪ್ರಗತಿಯೂ ಅಡಕವಾಗಿದೆ. ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಯಶಸ್ಸು ಗಳಿಸಿರುವ ಮಹಿಳೆಯರನ್ನು ಇಂದೂ ಸಹ ಅವಕಾಶಗಳಿಂದ ವಂಚಿತಗೊಳಿಸುವ ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು ೬೦ ವರ್ಷಗಳು ಕಳೆದುಹೋಗಿದ್ದರೂ, ಮಹಿಳೆಯನ್ನು ನಮ್ಮ ಸಮಾಜ ನೋಡುತ್ತಿರುವ, ಕಲ್ಪಿಸಿಕೊಳ್ಳುತ್ತಿರುವ ರೀತಿ ಮಾತ್ರ ಸಾವಿರಾರು ವರ್ಷಗಳಷ್ಟು ಹಿಂದಿನದ್ದೇ ಎಂಬುದು ದೈನಂದಿನ ಬದುಕಿನಲ್ಲಿ ಕಾಣುತ್ತೇವೆ. ಮಹಿಳೆಯ ಅನುಭವಗಳನ್ನು ಅರ್ಥ ಮಾಡಿಕೊಳ್ಳುವುದು ಇಂದು ತೀರಾ ಅವಶ್ಯಕವಾಗಿದೆ. ಪ್ರಾಚೀನ ಕಾಲದಿಂದಲೂ ಮಹಿಳೆ ಸಮಾಜದ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ ಬಂದಿದ್ದಾಳೆ. ಮಹಿಳೆ ಬೇರೆ ಸಮಾಜಗಳಂತೆಯೇ ಹಿಂದಿನಿಂದಲೂ ಕೃಷಿ ಕ್ಷೇತ್ರದ ಜೊತೆಗೆ ಮನೆಗೆಲಸವನ್ನು, ನಿಭಾಯಿಸಿಕೊಂಡು ಬರುತ್ತಿದ್ದಾಳೆ. ಇದರಿಂದಾಗಿ ಸಮಾಜದಲ್ಲಿ ಮಹಿಳೆಯ ಮಾನವೀಯ ಸಂಬಂಧಗಳು ಹತ್ತಿರವಾದವು. ಇಂತಹ ಚಾರಿತ್ರಿಕ ಯುಗಾಂತರದಲ್ಲಿ ಮಹಿಳೆಯ ಉತ್ಪಾದನಾ ಚಟುವಟಿಕೆ, ಕುಟುಂಬದ ಸಾಹಸ ಕ್ರಿಯೆಯಾಯಿತು. ಇಂತಹ ಪರಿಸ್ಥಿತಿಯಲ್ಲಿ ಮಹಿಳೆ ಉತ್ಪಾದನಾ ಘಟಕದಲ್ಲಿ ಕೆಲಸ ಮಾಡುತ್ತಾ, ಆರ್ಥಿಕ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಾ, ಮಗಳಾಗಿ, ಹೆಂಡತಿಯಾಗಿ, ಸೊಸೆಯಾಗಿ, ತಾಯಿಯಾಗಿ, ಅತ್ತೆಯಾಗಿ ಸಾಮಾಜಿಕ ಕಾರ್ಯಗಳಲ್ಲಿ ತನ್ನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾಳೆ. ಹೀಗೆ ಜೀವನದ ಅವಶ್ಯಕತೆಗಳನ್ನು ಪೂರೈಸುವುದರ ಜೊತೆಗೆ ಸಾಂಪ್ರದಾಯಿಕ ಆರ್ಥಿಕ ಬೆಳವಣಿಗೆಯನ್ನು ಬಲಪಡಿಸಿಕೊಳ್ಳುತ್ತಿದ್ದಾಳೆ.

ಮಹಿಳೆ ಇಂತಹ ಪ್ರತಿ ಹಂತದಲ್ಲೂ ಕುಟುಂಬದ ಜೀವನಾವಶ್ಯಕ ದುಡಿಮೆಯ ಜೊತೆಗೆ ಹೆಚ್ಚು ಕಡಿಮೆ ಉತ್ಪಾದನಾ ಹಾಗೂ ಕರಕುಶಲ ಕ್ಷೇತ್ರದಲ್ಲೂ ಸಮಾನಾಂತರವಾಗಿ ದುಡಿದಿದ್ದಾಳೆ. ಇದಕ್ಕೆ ಮುಖ್ಯವಾಗಿ ಸ್ಥಳೀಯ ಪ್ರದೇಶಗಳು ಹಾಗೂ ಹತ್ತಿರದ ಮಾರುಕಟ್ಟೆಗಳು ಸಹಾಯಕವಾದುವು. ಪ್ರಚಲಿತ ಸಾಂಪ್ರದಾಯಿಕ ವಿಧಾನದಿಂದ ಮಹಿಳೆಯರ ಆರ್ಥಿಕ ಸ್ಥಿತಿಯೂ ಉತ್ತಮಗೊಂಡಿತು. ಸ್ಥಳೀಯ ಮಾರುಕಟ್ಟೆಗಳು, ಬಳಕೆದಾರಿಕೆಯ ಗ್ರಾಹಕರನ್ನು ಒಳಗೊಂಡ ಆರ್ಥಿಕ ಕ್ಷೇತ್ರಗಳಲ್ಲಿ ಹೆಚ್ಚು ಸ್ಥಾನಮಾನ ಗಳಿಸಿಕೊಂಡಿತು. ಇದೇ ಸಮಯದಲ್ಲಿ ಮಾನವ ಪರಿಶ್ರಮಕ್ಕೆ ಬದಲಾಗಿ ಯಂತ್ರಗಳು ಬಳಸಲ್ಪಟ್ಟಾಗ ಈ ತಾಂತ್ರಿಕತೆಯಿಂದಾಗಿ ಮಹಿಳೆಯರು ದುಡಿಮೆಗೆ ಆರ್ಥಿಕ ಚಟುವಟಿಕೆಗಳ ಸಹಭಾಗಿತ್ವಕ್ಕೆ ಕೊಡಲಿ ಪೆಟ್ಟು ಬಿದ್ದಂತಾಗಿದೆ. ಇದರಿಂದಾಗಿ ಮಹಿಳೆಯ ದುಡಿಮೆಯು ಕಡಿಮೆಯಾಗಿ ಮನೆಯಲ್ಲಿ ದಾಸಿಯಾಗಿ, ಗಂಡ ಹೇಳಿದಂತೆ ಕೇಳಿಕೊಂಡು ಇರುವ ಪರಿಸ್ಥಿತಿಯು ಏರ್ಪಾಟಾಗುತ್ತಿದೆ ಎಂಬ ನಂಬಿಕೆಯಿದೆ. ಹೆಣ್ಣಿನಿಂದಲೇ ಕೃಷಿ ಚಟುವಟಿಕೆ ಆರಂಭವಾದುದು ಎಂಬುದು ತಿಳಿದ ಸಂಗತಿಯಾಗಿದೆ. ಖಾಸಗಿ ಆಸ್ತಿಯ ಉಗಮದೊಂದಿಗೆ ಪುರುಷ ಪ್ರಧಾನತೆ ಮತ್ತು ಮಹಿಳಾ ಅಧೀನತೆ

ಕಾಲಕ್ಕಿತು. ಉತ್ಪಾದನಾ ವ್ಯವಸ್ಥೆ ಗಂಡಿನ ಕೈಗೆ ತಲುಪಿತು. ಹೆಣ್ಣು ಶಿಕ್ಷಣ ಹಾಗೂ ಹೊರ ಪ್ರಪಂಚಕ್ಕೆ ಹೊರತಾದಳು, ಗೃಹ ಕೇಂದ್ರಿತಕ್ಕೆ ಒಳಪಟ್ಟಳು. ಶಿಕ್ಷಣ ಹಾಗೂ ಆರ್ಥಿಕ ಚೈತನ್ಯ ಕಳೆದುಕೊಂಡ ಹೆಣ್ಣು ದೌರ್ಬಲ್ಯದ ಸಂಕೇತವಾದಳು. ಅಲ್ಲಿಂದಲೇ ಹೆಣ್ಣು ಗಂಡಿನ ದಬ್ಬಾಳಿಕೆಗೆ ಮತ್ತು ದೌರ್ಜನ್ಯಕ್ಕೆ ಒಳಗಾದಳು. ಗಂಡ ಅರ್ಥೈಸಿದ ವಸ್ತುವಾದಳು, ಅವನ ಆದೇಶದ ಅನುಗುಣಕ್ಕೆ ಪಾತ್ರಧಾರಿಯಾದಳು. ನಮ್ಮ ಸಾಂಸ್ಕೃತಿಕ ಲೋಕದಲ್ಲಿ ಅನೇಕ ಸ್ತ್ರೀಶಕ್ತಿ ಮಾದರಿಗಳು ಕಂಡುಬರುತ್ತದೆ. ಆದರೆ ಕೊರವ ಸಮುದಾಯದಲ್ಲಿ ಸ್ತ್ರೀಶಕ್ತಿಗಳು ತಮ್ಮ ಮನೆಯ ಖರ್ಚುಗಳಿಗೆ, ಅನುಕೂಲಗಳಿಗೆ ಹೊಂದಿಕೊಂಡಂತೆ ಇರುತ್ತವೆ. ಅಂದು ಪ್ರಾಚೀನ ಕಾಲದಲ್ಲಿ ಹೆಣ್ಣಿಗೆ ಉನ್ನತ ವಿದ್ಯಾಭ್ಯಾಸಕ್ಕೆ ಅವಕಾಶವಿತ್ತು ಎಂಬುದು ತಿಳಿದು ಬರುತ್ತದೆ. ಆದರೆ ಇಂದು ಹೆಣ್ಣನ್ನು ವಿದ್ಯಾಭ್ಯಾಸಕ್ಕೆ ಕಳಿಸಲು ಈ ಸಮುದಾಯದವರು ಹಿಂದೆ ಮುಂದೆ ನೋಡುತ್ತಿದ್ದಾರೆ. ಶಿಕ್ಷಣವಂತಳಾದರೆ ಹೆಣ್ಣು ಅಭಿವೃದ್ಧಿ ಹೊಂದಲು ಅನುಕೂಲ ವಾಗುತ್ತದೆ.

ಮಾನವ ಇತಿಹಾಸದುದ್ದಕ್ಕೂ ಸ್ತ್ರೀ ಪುರುಷರು ದುಡಿಯುತ್ತಿರುವುದು ಕಂಡುಬರುತ್ತದೆ. ಆರಂಭದ ಬೇಟೆಗಾರನಲ್ಲಿ ದುಡಿಮೆಯ ಕಲ್ಪನೆ ಇರಲಿಲ್ಲ. ಹೊಟ್ಟೆ ಪೋಷಣೆಗಾಗಿ ಮತ್ತು ಉಳಿವಿಗಾಗಿ ಬೇಟೆಯನ್ನಾಡುತ್ತಿದ್ದುದು, ಮಾಂಸವನ್ನು ಹಸಿಯಾಗಿ ತಿನ್ನುತ್ತಿದ್ದ ಕಾಲದಲ್ಲಿ ಸ್ತ್ರೀಯರು ಪುರುಷರೊಂದಿಗೆ ಬೇಟೆಯಾಡುತ್ತಿದ್ದರು. ಬೇಯಿಸಿ ತಿನ್ನಲು ಕಲಿತ ಮೇಲೆ ಪುರುಷರು ಬೇಟೆಯಾಡಲು ಹೊರಗೆ ಹೋದರೆ ಸ್ತ್ರೀಯರು ಒಂದು ಕಡೆ ನೆಲೆಸಿ ಆಹಾರ ಬೇಯಿಸಿ ಹಂಚುವ ಕೆಲಸ ವಹಿಸಿಕೊಂಡರು. ಮಕ್ಕಳನ್ನು ಹೆರುವ ಮತ್ತು ನೋಡಿಕೊಳ್ಳುವ ಕೆಲಸವು ಅವಳನ್ನು ಒಂದು ನಿರ್ದಿಷ್ಟ ಸ್ಥಳದಲ್ಲಿ ವಾಸಿಸುವಂತೆ ಮಾಡಿತು. ಮಳೆ, ಗಾಳಿ, ಬಿಸಿಲು, ಚಳಿಯಿಂದ ರಕ್ಷಣೆ ಪಡೆಯಲು ಗುಡಿಸಲು ಕಟ್ಟಿಕೊಂಡು ಮಹಿಳೆ ತನ್ನ ಸುತ್ತಮುತ್ತಲಿನ ಪ್ರದೇಶದಲ್ಲಿ ದೊರೆಯುವ ಗೆಡ್ಡೆಗೆಣಸುಗಳನ್ನು ಬೆಳೆಯಲಾರಂಭಿಸಿದಳು. ಅಂದಿನಿಂದಲೇ ಕೃಷಿಯು ಪ್ರಾರಂಭವಾದದ್ದೇ ಮಹಿಳೆಯರಿಂದ ಎಂಬುದು ತಿಳಿದುಬರುತ್ತದೆ. ಕೃಷಿಯನ್ನು ಜೀವನದ ಉಳಿವಿಗಾಗಿ ಹಾಗೂ ಕುಟುಂಬವನ್ನು ನಿಭಾಯಿಸಲು ಮಹಿಳೆಯು ಮುಂದುವರೆಸಿದಳು. ೩೦-೪೦ ವರ್ಷಗಳು ಹಿಂದೆಯೂ ಕಮಲಾಪುರ, ಕಂಪ್ಲಿ, ಹಗರಿಬೊಮ್ಮನಹಳ್ಳಿ ಎಂಬ ಪ್ರದೇಶದಲ್ಲಿ ಕೊರವ ಮಹಿಳೆಯರು ಹೊಲಗದ್ದೆಗಳಲ್ಲಿ ದುಡಿಯುವುದು, ಬಂಡಿ ಹೊಡೆಯುವುದು ಗಂಡಿನಂತೆ ಮೊದಲಾದ ಕೆಲಸಗಳನ್ನು ಮಾಡುತ್ತಿದ್ದರು. ಜೊತೆಗೆ ಪಶುಸಂಗೋಪನೆ, ಕುರಿಸಾಕಾಣಿಕೆಯು ನಡೆಯುತ್ತಿತ್ತು. ಆಧುನಿಕತೆಯ ಪ್ರಭಾವದಿಂದ ಎಲ್ಲ ಕೆಲಸಗಳು ಕಾಲಕ್ರಮೇಣ ಕಡಿಮೆಯಾಗುತ್ತಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಮಹಿಳೆಯರಲ್ಲಿ ಹಣ್ಣು ವ್ಯಾಪಾರ, ತಮ್ಮ ಕುಲಕಸುಬು ಮಾಡಿಕೊಂಡು ಬರುವುದರಿಂದ ಅವರಲ್ಲಿ ಹೊಲಗದ್ದೆಗಳಿಗೆ ಹೋಗುವ ಆಸಕ್ತಿ ಕಡಿಮೆಯಾಗಿರುವುದು ಮತ್ತು ಮುಂದೆ ಮಕ್ಕಳು ವಿದ್ಯಾವಂತರಾಗಲು ಸಮುದಾಯದ ಜನರು ಬಯಸುತ್ತಿದ್ದಾರೆ. ದುಡಿಮೆಯ ಪರಿಕಲ್ಪನೆಯಲ್ಲಿ, ಪುರುಷರು ಹೆಚ್ಚು ಕೆಲಸ ಮಾಡುತ್ತಾರೆ, ಹೆಚ್ಚು ಶಕ್ತಿವಂತರು ಎಂಬ ನಿಲುವು ಹಾಗೂ ಕೃಷಿ ಉತ್ಪನ್ನಗಳ ಮಾರಾಟ, ಹಣದ ವ್ಯವಹಾರದಿಂದ ಅವರ ದುಡಿಮೆ ಆದ್ಯತೆ ಮನ್ನಣೆ ಪಡೆಯಿತು. ಆದರೆ ಸ್ತ್ರೀಯರು ಎಷ್ಟೇ ಅವಶ್ಯಕವಾದ ಹಾಗೂ

ಶ್ರಮದಾಯಕವಾದ ಕೆಲಸಗಳನ್ನು ಮಾಡಿದರೂ ಅದಕ್ಕೆ ಹಣದ ವ್ಯವಹಾರದೊಂದಿಗೆ ನೇರ ಸಂಬಂಧವಿಲ್ಲದಿದ್ದುದರಿಂದ ನಗಣ್ಯವಾಯಿತು, ಅಗೋಚರವಾಗಿ ಉಳಿಯಿತು ಎಂಬುದು ತಿಳಿದಿರುವ ಸಂಗತಿ. ಅವರು ದುಡಿದುಕೊಂಡು ಬಂದ ಹಣವನ್ನು ಗಂಡನ ಕೈಗೆ ಕೊಡಬೇಕಾಗುತ್ತದೆ. ಇಲ್ಲವಾದರೆ ಗಂಡ ಹೆಂಡರ ನಡುವೆ ಜಗಳ ಶುರುವಾಗುತ್ತದೆ. ಇದು ದಿನನಿತ್ಯದ ಸಂಗತಿಯಾಗಿರುತ್ತದೆ.

ನಮ್ಮ ಸಮಾಜದ ಸಾಂಪ್ರದಾಯಿಕ ಪರಿಕಲ್ಪನೆಗಳು ಸ್ತ್ರೀ ಪುರುಷರ ನಡುವೆ ನಿರ್ಬಂಧಗಳನ್ನು ಹೇರುತ್ತಿವೆ. ಉದ್ಯೋಗಂ ಪುರುಷ ಲಕ್ಷಣಂ ಎಂದು ಹೇಳಿ, ಪುರುಷರು ಹೊರಗೆ ಹೋಗಿ ದುಡಿದು ಆದಾಯ ಗಳಿಸಿ ಕುಟುಂಬವನ್ನು ನಿರ್ವಹಿಸಬೇಕು. ಸ್ತ್ರೀಯರು ಮನೆಯೊಳಗೆ ಇದ್ದು ಮನೆಗೆಲಸವನ್ನು ಮಾಡಬೇಕೆಂದು ಹೇಳುತ್ತದೆ. ಆದರೆ ಕೊರವ ಸಮುದಾಯದ ಮಹಿಳೆಯರು ಹೆಚ್ಚಾಗಿ ಮಾರಾಟ ಮಾಡಲು ಊರೂರು ಮತ್ತು ಇದ್ದ ಊರಿನಲ್ಲಿಯೇ ವ್ಯಾಪಾರ ಮಾಡಿಕೊಂಡು ಬರಲು ಹೋಗುತ್ತಾರೆ. ಆದರೆ ಕೆಲವು ಪುರುಷರು ವಾಲಗ ಊದುವುದು ಅಷ್ಟೇ ಆಗಿದ್ದರೂ, ಪಾತ್ರೆ ಅಂಗಡಿ ನೋಡಿ ಕೊಳ್ಳುವುದು, ಬಿದರಿನ ವ್ಯಾಪಾರ ಮಾಡುವುದು, ಆಟೋ ಓಡಿಸುವುದು, ಇನ್ನು ಕೆಲವು ವ್ಯಾಪಾರ ಗಳನ್ನು ಮಾಡುತ್ತಾರೆ. ಆದರೆ ಕೆಲವರು ಮನೆಯ ಜವಾಬ್ದಾರಿ ಇಲ್ಲದೇ ಸುಮ್ಮನೆ ಅಥವಾ ಸೋಮಾರಿ ಗಳಾಗಿ ಕುಳಿತಿರುವುದು ಕಂಡುಬರುತ್ತದೆ. ಕೊರವರು ಹೆಚ್ಚಾಗಿ ಕಂಪ್ಲಿ, ಕಮಲಾಪುರ, ಬಳ್ಳಾರಿ, ಹೊಸಪೇಟೆ, ಕುರುಗೋಡು, ಕುಡತಿನಿ, ಸಂಡೂರು, ಹಗರಿಬೊಮ್ಮನಹಳ್ಳಿ, ಮೊದಲಾದ ಕಡೆಗಳಲ್ಲಿ ವ್ಯಾಪಾರ ಮಾಡುವುದನ್ನು ನೋಡಬಹುದಾಗಿದೆ.

ಕೃಷಿಯನ್ನು ಆರಂಭಿಸಿದ ಮೇಲೆ ಜೀವನದ ಉಳಿವಿಗಾಗಿ ಹಾಗೂ ಕುಟುಂಬದ ನಿರ್ವಹಣೆಗಾಗಿ ಕೈಗೊಳ್ಳುವವರೇ ಅಂದು ಮಹಿಳೆಯ ಪ್ರಧಾನ ಪಾತ್ರವಾಗಿತ್ತು. ಪುರುಷರು ಭೂಮಿಯನ್ನು ಸಮತಟ್ಟಾಗಿ ಮಾಡಿದ್ದನ್ನು ಬಿಟ್ಟರೆ ಉಳಿದೆಲ್ಲ ಕೆಲಸಗಳು, ಬೀಜ ಬಿತ್ತುವುದು, ನಾಟಿ ಮಾಡುವುದು, ಕಳೆ ಕೀಳುವುದು ಬೀಜ ಸಂಸ್ಕರಿಸುವುದು, ಕೊಯ್ಲು ಮಾಡುವುದನ್ನು ಮಹಿಳೆಯರೇ ಮಾಡುತ್ತಿದ್ದರು. ಇದರ ಜೊತೆಗೆ ಕೃಷಿಗೆ ಪೂರಕವಾಗಿ ಪಶುಸಾಕಾಣಿಕೆಯನ್ನು ಪ್ರಾರಂಭಿಸಿದರು. ಯಾವಾಗ ಕೃಷಿಯಲ್ಲಿ ಲಾಭ, ಮಾರುಕಟ್ಟೆ ಮತ್ತು ವಾಣಿಜ್ಯ ಉದ್ದೇಶವನ್ನು ಹೊಂದಿತು ಆವಾಗಿನಿಂದ ಪುರುಷರ ಕೃಷಿ ಕೆಲಸದ ನಡುವೆ ತಾರತಮ್ಯ ಸೃಷ್ಟಿಯಾಯಿತು. ದುಡಿಮೆಯ ಪರಿಕಲ್ಪನೆ ಹುಟ್ಟಿಕೊಂಡಿತು. ಮಹಿಳೆಯರು ದುಡಿಯುವುದು ಜೀವನಾವಶ್ಯಕವಾದ ಸೌಲಭ್ಯಗಳನ್ನು ಪಡೆಯುವುದಕ್ಕಾಗಿ ಶ್ರಮಿಸಿದ್ದರು.

ಮಹಿಳೆಯರು ದುಡಿಯುವುದು ಆದಾಯ ಗಳಿಸುವುದಕ್ಕಾಗಲಿ, ಲಾಭ ಪಡೆಯುವುದಕ್ಕಾಗಲಿ ನಡೆಯುತ್ತಿರುವುದಿಲ್ಲ, ಮಹಿಳೆಯರ ದುಡಿಮೆಯನ್ನು ನೀರಿಗೆ ಹೋಲಿಸಲಾಗುತ್ತದೆ. ಆದರೆ ನೀರು ಅತ್ಯಂತ ಜೀವನಾವಶ್ಯಕ ಮತ್ತು ಅದಿಲ್ಲದಿದ್ದರೆ ಬದುಕುವುದು ಸಾಧ್ಯವಿಲ್ಲ ಎಂಬುದನ್ನು ಪುರುಷ ತಿಳಿದುಕೊಳ್ಳಬೇಕಾಗಿದೆ. ಅದೇ ರೀತಿ ಮಹಿಳೆಯರು ದುಡಿಯುವುದು ಮನೆಯಲ್ಲಿ ಮಕ್ಕಳು ಮರಿಗೆ ಸಹಾಯಕವಾಗಲು. ಜೀವನದ ದಿನ ಬಳಕೆಗೆ ದುಡಿದ ಹಣವೆಲ್ಲವು ಹೋಗುತ್ತದೆ. ಇದರಿಂದ ಬಳಕೆಯ ಮೌಲ್ಯವಿರುತ್ತದೆ. ಯಾರು ಚಿನ್ನಕ್ಕೆ ಬೆಲೆ ಕೊಡುವಷ್ಟು ನೀರಿಗೆ ಕೊಡುವುದಿಲ್ಲ. ಆದ್ದರಿಂದ

ನೀರಿಗೆ ವಿನಿಮಯ ಮೌಲ್ಯವಿಲ್ಲ ಎಂದು ಹೇಳುವಂತೆ ಅದೇ ರೀತಿ ಸ್ತ್ರೀಯರ ದುಡಿಮೆಗೆ ವಿನಿಮಯದ ಮೌಲ್ಯವು ಬಾರದಿರುವುದು ಕಾಣಬಹುದು. ಆದರೆ ನೀರು ಇವತ್ತಿನ ದಿನಗಳಲ್ಲಿ ಎಷ್ಟು ಅವಶ್ಯಕತೆ ಎಂಬುವಂತೆ, ಅದೇ ರೀತಿ ಹೆಣ್ಣಿನ ದುಡಿಮೆಯು ಅಷ್ಟೇ ಅವಶ್ಯಕತೆ ಆಗಿದೆ ಎಂದು ಹೇಳಬಹುದು.

‘‘೧೯೭೦ರ ದಶಕದಲ್ಲಿ ಅಮೇರಿಕಾದಲ್ಲಿ ಉದಾರವಾದಿ ಸ್ತ್ರೀವಾದ ಸಿದ್ಧಾಂತದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಮಹಿಳಾ ಚಳುವಳಿ ಅಭಿವೃದ್ಧಿ ವಲಯದ ಮೇಲೆ ಸಾಕಷ್ಟು ಪ್ರಭಾವ ಬೀರಿತು. ಅಭಿವೃದ್ಧಿ ಸಂಬಂಧಿ ಚಟುವಟಿಕೆ ಹಾಗೂ ನೀತಿಗಳ ನಿರೂಪಣೆಯಲ್ಲಿ ಮಹಿಳೆಯರನ್ನು ಸೀಮಂತೀಕರಣ ಮಾಡಿದ್ದು ಮಹಿಳೆಯರ ಪ್ರತಿಭಟನೆಗೆ ಕಾರಣವಾಯಿತು”.[೬] ‘‘ಮಹಿಳೆಯರು ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲು ಪ್ರೋತ್ಸಾಹ ಹಾಗೂ ಬೆಂಬಲ ನೀಡಬೇಕೆಂದು ಸೂಚಿಸಿತು. ಇದನ್ನು ಕಾರ್ಯರೂಪಕ್ಕೆ ತರಲು ‘ಯುನೈಟೆಡ್ ಏಜೆನ್ಸಿ ಫಾರ್ ಇಂಟರ್ ನ್ಯಾಷನಲ್ ಡೆವಲಪ್‌ಮೆಂಟ್’ ಸಂಸ್ಥೆಯು ಅಭಿವೃದ್ಧಿಯಲ್ಲಿ ಮಹಿಳೆ ಕಛೇರಿಯನ್ನು ಸ್ಥಾಪಿಸಿತು. ಅಭಿವೃದ್ಧಿ ಶೀಲ ರಾಷ್ಟ್ರಗಳ ಸರ್ಕಾರ ಹಾಗೂ ಅಲ್ಲಿಯ ಸ್ತ್ರೀವಾದಿ ಸಂಘಟನೆಗಳು ಕೂಡ ಮಹಿಳಾ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡವು. ಅಭಿವೃದ್ಧಿಯಲ್ಲಿ ಮಹಿಳೆಯ ದೃಷ್ಟಿಕೋನವನ್ನು ಪ್ರತಿಪಾದಿಸುವ ವಶೀಲಿ ಪ್ರಾರಂಭವಾಯಿತು. ಇದರ ಜೊತೆಗೆ ವಿಶ್ವವಿದ್ಯಾಲಯಗಳಲ್ಲಿ ತಜ್ಞರು ಮಹಿಳೆಯರನ್ನು ಕುರಿತು ಸಂಶೋಧನೆ ಮತ್ತು ಅಧ್ಯಯನಗಳನ್ನು ಕೈಗೊಂಡರು. ಮಹಿಳೆಯರ ಉತ್ಪಾದನಾ ಚಟುವಟಿಕೆಗಳು, ಸಂಪನ್ಮೂಲ ಹಂಚಿಕೆಯಲ್ಲಿ ಅವರು ಪಡೆಯುವ ಪಾಲು, ಲಿಂಗಾಧರಿತ ಶ್ರಮ ವಿಭಜನೆ, ಅಭಿವೃದ್ಧಿ ನೀತಿಗಳ ಪ್ರಭಾವ ಮುಂತಾದ ವಿಷಯಗಳನ್ನು ಕುರಿತು ಅಧ್ಯಯನಗಳು ವ್ಯಾಪಾರವಾಗಿ ಪ್ರಾರಂಭವಾದವು”.[೭]

ಆರ್ಥಿಕ ವ್ಯವಸ್ಥೆ

ಸಮಾಜವು ಹೆಣ್ಣನ್ನು ಉತ್ಪಾದನೆಯ ವಿಭಾಗದಿಂದ ದೂರ ಇಟ್ಟಿರಲು ಸತತ ಪ್ರಯತ್ನದಲ್ಲಿ ತೊಡಗಿವೆ ಎಂಬುದು ಚಾರಿತ್ರಿಕ ಸತ್ಯ. ಮಾನವ ಮನೆ ಮಾಡಿದಾಗಲಿ, ಕೃಷಿಯಲ್ಲಿ ಬೇಟೆಯಲ್ಲಿ ತೊಡಗಿದಾಗಲಿ, ಔದ್ಯೋಗೀಕರಣ ನಾಗರಿಕತೆಗೆ ಧಾವಿಸಿದಾಗಲೂ ಯಾವ ಸಂದರ್ಭದಲ್ಲೂ ಉತ್ಪಾದನೆಯಲ್ಲಿ ಹೆಣ್ಣಿಗೆ ಪಾಲು ದೊರೆತಿಲ್ಲ, ಹೆಣ್ಣು, ಮನೆಯಲ್ಲಿ ತಮ್ಮ ವೃತ್ತಿ ಕಸುಬಿನಲ್ಲಿ ದುಡಿದರೂ ಉದ್ಯೋಗದಲ್ಲಿ ದುಡಿದರೂ ಅವಳ ದುಡಿಮೆ ಮಾತ್ರ ಸೇವಾಕ್ಷೇತ್ರಕ್ಕೆ ಸೇರಿಸಲಾಗಿದೆ. ಗಂಡಸಿನ ಅಧೀನಕ್ಕೆ ಒಳಪಟ್ಟು, ಗಂಡಸಿನ ಸೌಲಭ್ಯಕ್ಕಾಗಿಯೇ ನಡೆಸಲಾಗುವ ಕೆಲಸ ಕಾರ್ಯಗಳಲ್ಲಿ ಮಾತ್ರವೇ ಅವಳು ತೊಡಗಿಕೊಳ್ಳಬೇಕಾಗುತ್ತದೆ. ಉತ್ಪಾದನೆಯ ಒಡೆಯನಾಗುವ ಗಂಡಸನ್ನೇ ಅವಲಂಬಿಸ ಬೇಕಾಗಿದೆ. ಇಲ್ಲವಾದರೆ ಹೆಣ್ಣಿಗೆ ಗತ್ಯಂತರವಿಲ್ಲ ಎಂಬ ಪರಿಸ್ಥಿತಿಯು ಈ ಸಮುದಾಯದಲ್ಲಿ ಗಾಢವಾಗಿ ಕಂಡುಬರುವುದುಂಟು. ಉದಾಹರಣೆಗೆ ಸರ್ಕಾರಿ ನೌಕರಿಯಲ್ಲಿರುವ ಮಹಿಳೆ ಸಂಬಳ ತಂದು ಗಂಡನಿಗೆ ಕೊಡಬೇಕೇ ವಿನಃ ತನ್ನ ಬಳಕೆಗೆ ಬಳಸುವಂತಿಲ್ಲ. ತನ್ನ ಅವಶ್ಯಕತೆಗೆ ಬಳಸಿ ಕೊಂಡರೆ ಗಂಡನನ್ನೆ ಕೇಳಬೇಕಾಗುತ್ತದೆ. ಬುಟ್ಟಿ ವ್ಯಾಪಾರ, ಬೇರೆ ಬೇರೆ ವ್ಯಾಪಾರ ಮಾಡುವ ಮಹಿಳೆ ದುಡಿದು ತಂದ ಹಣವನ್ನು ಗಂಡನ ಕೈಗೆ ಕೊಡಬೇಕಾಗುತ್ತದೆ.

ಹಿಂದಿನಿಂದಲೂ ಹೆಣ್ಣು ತನ್ನ ಮಕ್ಕಳನ್ನು ಸುಸಂಸ್ಕೃತರನ್ನಾಗಿ, ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ಮಾಡಲು ನೆರವಾಗಿದ್ದಾಳೆ. ಹಾಗೆಯೇ ಮಕ್ಕಳಿಗೆ ಸುರಕ್ಷೆಯ ಭಾವವನ್ನು ತುಂಬುವ ಹೊಣೆಯನ್ನು ನಿರ್ವಹಿಸುತ್ತಾ ಬಂದಿದ್ದಾಳೆ. ಆದರೆ ಈಗ ತನ್ನಲ್ಲೇ ತುಂಬುತ್ತಿರುವ ಆತಂಕಗಳಿಂದಾಗಿ ಭವಿಷ್ಯದಲ್ಲಿ ಮಕ್ಕಳಿಗೆ ಭರವಸೆಯನ್ನು ತುಂಬುವ ಅವಳ ಸಾಮರ್ಥ್ಯಕ್ಕೆ ಧಕ್ಕೆಯುಂಟಾಗುತ್ತದೆ ಅಲ್ಲದೆ, ಒಟ್ಟಾರೆಯಾಗಿ ಕುಟುಂಬದ ಎಲ್ಲಾ ಗಂಡು ಹೆಣ್ಣು ಸದಸ್ಯರ ಸಂಬಂಧಗಳ ಮೇಲೂ ಕುಟುಂಬದ ಹಿನ್ನಡೆ ನಕಾರಾತ್ಮಕ ಪರಿಣಾಮಗಳನ್ನು ಬೀರುತ್ತಿದೆ. ಈ ಪರಿಣಾಮಗಳು ಕೂಡ ಅಂತಿಮವಾಗಿ ಹೆಣ್ಣಿನ ಮೇಲೆಯೇ ವಾಲುತ್ತದೆ ಎಂಬುದು ತಿಳಿದುಬರುವುದುಂಟು. ಉದಾಹರಣೆಗೆ ಹಿಂದಿನ ದಿನಗಳಲ್ಲಿ ಹೆಣ್ಣು ಮಕ್ಕಳು ಸಮಾಜ ನಿರ್ಬಂಧನೆಗಳಿಗೆ ಹೊಂದಿಕೊಂಡು ಮಕ್ಕಳಿಗೆ ಬುದ್ಧಿವಾದ ಹೇಳಿ ಒಬ್ಬ ಉತ್ತಮ ಪ್ರಜೆಯಾಗಿ ಮಾಡಲಾಗುತ್ತಿತ್ತು. ಇಂದಿನ ದಿನಗಳಲ್ಲಿ ಕೆಲವರು ಹಿರಿಯರಿಗೆ ಗೌರವ ಸ್ಥಾನಮಾನ ಕೊಡಲಾಗದೆ. ತಮಗೆ ಇಷ್ಟ ಬಂದಂತೆ ಬದುಕುವುದನ್ನು ಕಲಿಯುತ್ತಿದ್ದಾರೆ. ಇದೆಲ್ಲದರ ಹೊಣೆಗಾರಿಕೆ ತಂದೆಯ ಮೇಲೆ ಅಲ್ಲದೆ ತಾಯಿಗೂ ಹೊರಿಸಲಾಗುತ್ತದೆ. ಮಕ್ಕಳನ್ನು ಬೆಳೆಸುವ ರೀತಿ ಇದೇನಾ ಎಂದೂ ಹಡೆದವರಿಗೆ ಬಯ್ಯುತ್ತಾರೆ. ಅವರು ದುಡಿಯದೇ ಸೋಮಾರಿಯಾಗಿ, ಇಲ್ಲವೆ ದುಡಿದರೂ ಅದನ್ನು ಜೂಜಾಟ, ಕುಡಿತ, ದುಂದುವೆಚ್ಚ ಇನ್ನಿತರ ದುರಭ್ಯಾಸವನ್ನು ಕಲಿತಿದ್ದಾರೆ. ಇಂದಿನ ದಿನಗಳಲ್ಲಿ ಉತ್ತಮವಾದ ಸಂಬಂಧಗಳು ದೂರವಾಗುವ ಪರಿಸ್ಥಿತಿಯು ಉಂಟಾಗುತ್ತದೆ ಎಂದು ಹೇಳಬಹುದು.

ಇಂದಿನ ಮಕ್ಕಳು ಆಧುನಿಕತೆಯ ಪ್ರಭಾವದಿಂದ ಕಡಿಮೆಯೇ ಓದಿದ್ದರೂ ಆಧುನಿಕತೆಗೆ ತಕ್ಕಂತೆ ಬದಲಾಗಲು ಬಯಸುತ್ತಿದ್ದಾರೆ. ಮನೆಯಲ್ಲಿ ಊಟ ಇದ್ದರೂ ಹೋಟೆಲ್‌ಗೆ ಹೋಗುವ ಆಸೆಯು ಅತಿಯಾಗಿದೆ. ಕೆಲಸವಿಲ್ಲದೆ ಕಟ್ಟೆಯಲ್ಲಿ ಕುಳಿತುಕೊಂಡು ಮಾತನಾಡುವುದು, ಊರೂರು ಸುತ್ತುವುದು, ಸಿನಿಮಾ, ಕುಡಿತ ಮೊದಲಾದವುಗಳಲ್ಲಿ ಪಾಲುದಾರರಾಗುತ್ತಾರೆ. ಮನೆಯಲ್ಲಿ ತಾಯಿಯಾದವಳ ಬಗ್ಗೆ ಕಿಂಚಿತ್ತು ಜವಾಬ್ದಾರಿ ಇಲ್ಲದಿರುವುದು ಕಾಣಬಹುದು. ಮುಂಜಾನೆಯಿಂದ ಸಂಜೆಯವರಿಗೆ ದುಡಿದರೂ ಮನೆಗೆ ಬಂದು ಗಂಡ ಮತ್ತು ಮಕ್ಕಳಿಗೆ ಅಡಿಗೆ ಮಾಡಿ ಹಾಕಬೇಕು. ಗಂಡಸರು ಕೆಲಸ ಇಲ್ಲದಿದ್ದರೂ ಸುಮ್ಮನೆ ಕುಳಿತಿರುವುದು ಕಾಣಬಹುದು. ಮುಂದಿನ ಭವಿಷ್ಯದ ಬಗ್ಗೆ ಯೋಚಿಸುವುದಿಲ್ಲ. ಇದರಿಂದ ತಾಯಿಯೇ ಮಗನಿಗೆ ಒಂದು ಮದುವೆ ಮಾಡಿದರೇ ಸರಿ ಹೋಗುತ್ತಾನೆ, ಎಂದು ವಿವಾಹ ಮಾಡಿದರೆ, ಅದೇ ರೀತಿ ಲಂಗು ಲಗಾಮು ಇಲ್ಲದೆ ಹಾರಾಡುತ್ತಾನೆ. ಜವಾಬ್ದಾರಿ ನಿಭಾಯಿಸುವ ತಾಯಿ ಹೋದ ಮೇಲೆ ಅವನಿಗೆ ಜವಾಬ್ದಾರಿಯ ಬಗ್ಗೆ ತಿಳಿದು ಬರುವುದುಂಟು. ಆದರೆ ಅಷ್ಟೊತ್ತಿಗೆ ಕಾಲವು ಮಿಂಚಿ ಹೋಗಿರುತ್ತದೆ. ಮುಂದಿನ ದಿನಗಳು ಕಷ್ಟಕರವಾಗಿರುತ್ತದೆ. ಹೆಂಡತಿಯನ್ನು ಪೋಷಿಸಲಾಗದೇ ಅವಳನ್ನು ಶೋಷಣೆ ಮಾಡಲು ಮುಂದುವರೆಸುತ್ತಾನೆ. ಇದು ಇಂದಿನ ಪರಿಸ್ಥಿತಿಯಾಗಿದೆ.

ಭಾರತೀಯ ಮಹಿಳೆಯನ್ನು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಪ್ರಭಾವಶಾಲಿಯನ್ನಾಗಿಸ ಲಾಯಿತು. ಆದರೆ ಎಲ್ಲಿಯವರೆಗೆ ಆರ್ಥಿಕ ಸಂಪನ್ಮೂಲಗಳು ಪುರುಷನ ಕೈವಶದಲ್ಲೇ ಇರುತ್ತವೆಯೋ

ಅಲ್ಲಿಯವರೆಗೂ ಮಹಿಳಾ ಸಬಲೀಕರಣ ಸಂಪೂರ್ಣವಾಗಿ ಹಗಲುಗನಸಾಗಿಯೇ ಉಳಿಯುತ್ತದೆ. ಬಹಳಷ್ಟು ಸಂದರ್ಭಗಳಲ್ಲಿ ಕುಟುಂಬದ ಆದಾಯವನ್ನು ಹೇಗೆ ಖರ್ಚು ಮಾಡಬೇಕೆನ್ನುವ ವಿಚಾರದಲ್ಲಿ ಪುರುಷರೇ ನಿರ್ಧಾರ ಕೈಗೊಳ್ಳುವರು. ಈ ಸಮುದಾಯದ ಮಹಿಳೆಯರ ನಿರ್ಧಾರಗಳು ಪುರುಷನ ಕೈಯಲ್ಲಿರುತ್ತದೆ. ಕೆಲಸ ಮಾಡದ ಮತ್ತು ಗಳಿಕೆಯಿಲ್ಲದ, ಅವಲಂಬಿತ ಮಹಿಳೆ ಕುಟುಂಬದ ಆರ್ಥಿಕ ವಿಚಾರಗಳಲ್ಲಿ ಅತ್ಯಲ್ಪ ಭಾಗವಹಿಸುವಿಕೆ ಇರುತ್ತದೆ. ಇದರಿಂದಾಗಿ ಸಮಾಜದಲ್ಲಿ ಮಹಿಳೆಯ ಕೈಗೆ ಹಣದ ಅಧಿಕಾರ ಇದ್ದರೆ ಅವರು ಮನೆಖರ್ಚುಗಳಿಗೆ ಮಾತ್ರ ಬಳಸಿಕೊಂಡು ಉಳಿದುದನ್ನು ಉಳಿತಾಯ ಮಾಡುತ್ತಾಳೆ. ಅವಶ್ಯಕವಾದ ಖರ್ಚುಗಳಿಗೆ ಉಳಿತಾಯ ಹಣವನ್ನು ಉಪಯೋಗಿಸಲಾಗುತ್ತದೆ. ಇಲ್ಲವಾದರೆ ಪುರುಷನ ಕೈಯಲ್ಲಿ ಇದ್ದರೆ ಮನೆ ಖರ್ಚು ನೋಡಿಕೊಂಡು ಉಳಿದ ಹಣವನ್ನು ತನ್ನ ಸ್ನೇಹಿತರ ಜೊತೆ ಸೇರಿ ದುಂದು ವೆಚ್ಚ, ಕುಡಿತ, ಮೊದಲಾದವುಗಳಿಗೆ ಖರ್ಚು ಮಾಡುತ್ತಾನೆ. ಮತ್ತೆ ಹಣ ಬರುವವರೆಗೆ ಕಾಯಬೇಕಾಗುತ್ತದೆ.

''ಮಹಿಳಾ ಸಬಲೀಕರಣದ ಮಾಪಕ ವಿವಾಹ ಪೂರ್ವನಿರ್ಧಾರ ಕೈಗೊಳ್ಳುವಿಕೆ ಸೂಚಿ; ವಿವಾಹಕ್ಕಿಂತ ಮೊದಲು ಮಹಿಳೆ ನಿರ್ಧಾರ ಕೈಗೊಳ್ಳುವಿಕೆಯ ಶಕ್ತಿ ದೊರೆಯುವಿಕೆಯ ಮಟ್ಟದ ವಿಶ್ಲೇಷಣೆಗೆ ಈ ಮಾಪನಗಳನ್ನು ಬಳಸಲಾಗುವುದು.

೧. ಶಿಕ್ಷಣ ಪಡೆಯಲು ಸ್ವಾತಂತ್ರ್ಯ, ಗೆಳತಿಯರೊಂದಿಗೆ ಹೊರಗಡೆ ತಿರುಗಾಡುವ ಸ್ವಾತಂತ್ರ್ಯ, ಅಗತ್ಯಕ್ಕೆ ಅನುಗುಣವಾಗಿ ತಮ್ಮ ಇಚ್ಛೆಯಿಂದ ಓದಲು ಮುಂದವರೆಸುವುದು.

೨. ಅವರ ಆಯ್ಕೆಯಂತೆ ಉಡುಪು ಧರಿಸುವ ಸ್ವಾತಂತ್ರ್ಯ (ಈ ಸಮುದಾಯದಲ್ಲಿ ಅಲ್ಪಸಂಖ್ಯೆಯಲ್ಲಿ ಈ ಆಯ್ಕೆಯನ್ನು ಮಾಡಿಕೊಂಡಿದ್ದಾರೆ).

೩. ವೃತ್ತಿಪರ ಕೋರ್ಸ್‌ಗಳ ಆಯ್ಕೆಯಲ್ಲಿನ ಸ್ವಾತಂತ್ರ್ಯ (ಆದರೆ ಓದಲು ಅವಕಾಶ ಮಾಡಿಕೊಂಡರೆ ಈ ಸ್ವಾತಂತ್ರ್ಯ ಮುಂದೆ ಬರುತ್ತದೆ).

೪. ವಿವಾಹ ಸಂಬಂಧಗಳನ್ನು ಮುಂದೂಡುವ ಹಕ್ಕು (ವಿದ್ಯಾವಂತರಾದವರೂ ಕೆಲವರು ಈ ಆಯ್ಕೆಯನ್ನು ಮಾಡಿರುತ್ತಾರೆ) (ಮಹಿಳೆ ಮತ್ತು ಅಭಿವೃದ್ಧಿ, ಪುಟ ೩೧)''.[೮]

ಇವರಲ್ಲಿ ಉತ್ಪಾದನೆ ವ್ಯವಸ್ಥೆ ಅಭಿವೃದ್ಧಿ ಹೊಂದಬೇಕಾದರೆ ಕೊರವರಿಗೆ ಶಿಕ್ಷಣ ಮುಖ್ಯ ಅವಶ್ಯಕವಾಗಿದೆ. ಕೆಲವರು ಪುರುಷರು ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಪಡೆದು ಮುಂದುವರಿಯುತ್ತಿದ್ದಾರೆ. ಅವರಿಗೆ ಈ ಮೇಲಿನ ಹಕ್ಕುಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಆದರೆ ಮಹಿಳೆಗೆ ಈ ಹಕ್ಕುಗಳನ್ನು ಕೊಡುವುದು ಅಪರೂಪವಾಗಿದೆ. ಹೆಣ್ಣು ಮಕ್ಕಳನ್ನು ಓದಿಸುವಂತಹ ಕುಟುಂಬಗಳು ಕಡಿಮೆ ಕಂಡುಬರುತ್ತವೆ. ಈ ಸಮುದಾಯದ ಹೆಣ್ಣು ಮಕ್ಕಳು ಗಂಡನ ಮನೆಗೆ ಹೋದರೆ ಸಾಕು ಒಂದು ಜವಾಬ್ದಾರಿ ಕಳೆಯುತ್ತದೆ ಎಂದು ಹೇಳುತ್ತಾರೆ. ಕೆಲವರು ಮುಂದಿನ ಭವಿಷ್ಯವನ್ನು ಗಮನದಲ್ಲಿಟ್ಟು ಕೊಂಡು ಹೆಣ್ಣು ಮಕ್ಕಳನ್ನು ಓದಿಸಲು ಮುಂದಾಗಿದ್ದಾರೆ. ಉದಾಹರಣೆಗೆ ಅನಕ್ಷರಸ್ಥಳಾದ ಒಬ್ಬ

ಮಹಿಳೆ ತನ್ನೆಲ್ಲ ಮಕ್ಕಳನ್ನು ಉನ್ನತ ವಿದ್ಯಾಭ್ಯಾಸ ಮಾಡಿಸುವಲ್ಲಿ ಮುಂದಾಗಿದ್ದಾಳೆ. ಅವರಿಗೆ ಒಂದು ಗುರಿಯನ್ನು ತೋರಿಸಿದವಳೇ ಹೇಮಗಿರಿಯಮ್ಮ. ಈ ಸಮುದಾಯದಲ್ಲಿ ಶಿಕ್ಷಣದಲ್ಲಿ ಲಿಂಗ ತಾರತಮ್ಯ ಮಾಡುವುದು ಕಂಡುಬರುತ್ತದೆ. ಮೂಡನಂಬಿಕೆಯಿಂದ ಶಿಕ್ಷಣದ ಬಗ್ಗೆ ಇವರಲ್ಲಿ ಅಷ್ಟೊಂದು ಆಸಕ್ತಿ ಇಲ್ಲದಿರುವುದು ಮತ್ತು ಸಮಾಜದಲ್ಲಿ ಆಗುತ್ತಿರುವ ಅತ್ಯಾಚಾರ, ಅನ್ಯಾಯಗಳಿಂದ ಇವರು ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ದೂರವಿರಿಸಿರುವುದು ಕಂಡುಬರುತ್ತದೆ. ಕೆಲವರು ಆಧುನಿಕತೆಗೆ ಹೊಂದಿಕೊಂಡು ನೌಕರಿ ಮಾಡಲಿ ಎಂದು ಅಭಿವೃದ್ಧಿ ಹಾದಿಗೆ ಸುಮಾರ್ಗವನ್ನು ಕಲ್ಪಿಸಿರುವುದು ಕಾಣಬಹುದಾಗಿದೆ.

ಹೆಣ್ಣು ಮಕ್ಕಳು ಶಿಕ್ಷಣವಂತಳಾದರೆ ಈ ಹಕ್ಕನ್ನು ಪಡೆಯುತ್ತಾಳೆ. ಈ ಸಮುದಾಯದಲ್ಲಿ ಹೆಣ್ಣು ಮಕ್ಕಳು ಗೆಳತಿಯರೊಂದಿಗೆ ಹೊರಗಡೆ ತಿರುಗಾಡಿದರೆ ಮನೆಯರು ಅಥವಾ ಸಮಾಜದಲ್ಲಿ ತಪ್ಪು ತಿಳುವಳಿಕೆಯಿಂದ ಅವರನ್ನು ಬಯ್ಯುತ್ತಾರೆ. ಆದರೆ ತಿಳುವಳಿಕೆ ಉಳ್ಳವರು ಇದನ್ನು ಒಪ್ಪಿಕೊಳ್ಳುತ್ತಾರೆ. ಇದರಿಂದ ದುಡಿಮೆಯ ಜೊತೆಗೆ ಬೇರೆಯವರೊಂದಿಗೆ ಯಾವ ರೀತಿ ಇರಬೇಕು ಎಂಬುದು ತಿಳಿದು ಬರುತ್ತದೆ. ಅವಳ ಆಯ್ಕೆಯಂತೆ ಉಡುಪು ಧರಿಸಿಕೊಳ್ಳಲು ಅನುವು ಮಾಡಿಕೊಡುವುದಿಲ್ಲ. ಸೀರೆ, ಲಂಗ ಉಡುವುದೇ ಸಾಂಪ್ರದಾಯಿಕ ಎಂದು ಇವರು ಹೇಳುತ್ತಾರೆ. ಆದರೆ ಆಧುನಿಕತೆಯ ಪ್ರಭಾವದಿಂದ ಹೆಣ್ಣು ಮಕ್ಕಳು ಚೂಡಿದಾರ, ಮಿಡಿ, ಗಾಗ್ರಾ ತೊಡುವುದನ್ನು ಇಲ್ಲಿ ಕಾಣಬಹುದು.

ಇನ್ನು ಪುರುಷರಿಗೆ ಶಿಕ್ಷಣ ಕೊಡುವುದರಿಂದ ವೃತ್ತಿಪರ ಕೋರ್ಸ್‌ಗಳ ಆಯ್ಕೆಯಲ್ಲಿನ ಸ್ವಾತಂತ್ರ್ಯ ಕೊಡಲಾಗುತ್ತದೆ. ಆದರೆ ಅದೇ ಹೆಣ್ಣು ಮಕ್ಕಳಿಗೆ ಮನೆಯಲ್ಲಿ ಹೇಳಿದಂತೆ ಓದಬೇಕು ವಿನಃ ತಮ್ಮ ಆಯ್ಕೆಯ ಸ್ವಾತಂತ್ರ್ಯವಿರುವುದಿಲ್ಲ, ವಿವಾಹ ಸಂಬಂಧಗಳನ್ನು ಮುಂದೂಡುವ ಅಧಿಕಾರ ಪುರುಷನಿಗಿರುತ್ತದೆ. ಆದರೆ ಹೆಣ್ಣಿಗೆ ಇರುವುದಿಲ್ಲ. ಆದರೆ ಓದಿದಂತಹ ಹೆಣ್ಣು ಮಕ್ಕಳು ವಿಮರ್ಶೆ ಮಾಡುವ ಮತ್ತು ವಿವಾಹ ಮುಂದೂಡುವ ಅವಕಾಶ ಇದೆ. ಉದಾಹರಣೆ ನಾನು ಹೆಣ್ಣು ನೋಡಲು ಬಂದವರನ್ನು ಮದುವೆ ಆಗುವುದಿಲ್ಲ. ಓದಬೇಕು ಎಂದು ಹೇಳಿ ಕಳಿಸಿದ್ದೇನೆ. ಇದರ ಉದ್ದೇಶ ಮಹಿಳೆಯು ಸಬಲವಾಗಲು ಅನುಕೂಲವಾಗುತ್ತದೆ. ಎಂಬ ಅಭಿಪ್ರಾಯ.

ಅಸಂಘಟಿತ ವೈವಿಧ್ಯಮಯ ಚಟುವಟಿಕೆಗಳಲ್ಲಿ ಮಹಿಳೆಯರು ದುಡಿಯುತ್ತಾರೆ. ಇಲ್ಲಿ ಕೃಷಿವಲಯದಲ್ಲಿ, ಕಟ್ಟಡ, ರಸ್ತೆ ನಿರ್ಮಾಣದಲ್ಲಿ, ಗೃಹ ಕೈಗಾರಿಕೆ, ಸಣ್ಣ ಸಣ್ಣ ಸ್ವಯಂ ಉದ್ಯೋಗ, ಹಣ್ಣು ತರಕಾರಿ ಮಾರಾಟ ಮಾಡುವುದು, ಬುಟ್ಟಿ, ಚಾಪೆ ಹೆಣೆಯುವುದು, ಬಟ್ಟೆ ಹೊಲಿಯುವುದು, ಆಹಾರ ಸಂಸ್ಕರಣೆ ಮತ್ತು ಇತರ ಉತ್ಪನ್ನ ಘಟಕಗಳಲ್ಲಿ ದುಡಿಯುವುದನ್ನು ಕಾಣಬಹುದಾಗಿದೆ.

ಹೆಣ್ಣು ಮಕ್ಕಳು ನಿರಂತರವಾಗಿ ನಿರೀಕ್ಷಿಸದ ಕೆಲಸಗಳಲ್ಲಿ ತೊಡಗುತ್ತಾರೆ. ಅನಕ್ಷರತೆ, ಶಿಕ್ಷಣ, ತರಬೇತಿ ಹಾಗೂ ಕೌಶಲ್ಯದ ಕೊರತೆಯಿಂದ ಅಪೇಕ್ಷೆಗಳನ್ನು ನಿರೀಕ್ಷಿಸದ ಅಸಂಘಟಿತ ಕ್ಷೇತ್ರ ಸುಲಭವಾಗಿ ಮಹಿಳೆಯರನ್ನು ತನ್ನತ್ತ ಸೆಳೆಯುತ್ತದೆ ಮತ್ತು ಮಹಿಳೆಯರು ಸುಲಭವಾಗಿ ಗಮನ ಹರಿಸುತ್ತಾರೆ. ಮಹಿಳೆಯರಿಗೆ ಜೀವನಕ್ಕೆ ಬೇಕಾಗುವ ಸಾಮಾಗ್ರಿಗಳು ಒದಗಿದರೆ ಸಾಕು. ಜೀವನವನ್ನು

ನಡೆಸಿಕೊಂಡು ಹೋಗುತ್ತಾರೆ. ತಮ್ಮ ಜವಾಬ್ದಾರಿಗಳನ್ನು ಚಾಚೂ ತಪ್ಪದೇ ಎಷ್ಟೇ ಕಷ್ಟವಾದರೂ ನಿಭಾಯಿಸಿಕೊಂಡು ಹೋಗುವುದನ್ನು ನೋಡಬಹುದು. ಆದ್ದರಿಂದಾಗಿ ಇವರಲ್ಲಿ ಅನಕ್ಷರತೆ ಎದ್ದುಕಾಣುತ್ತದೆ. ದುಡಿಮೆಯೇ ಜೀವನ ಎಂದುಕೊಂಡಿರುವ ಇವರು ಶಿಕ್ಷಣ, ಕರಕುಶಲ ಕಲೆಗಳ ತರಬೇತಿಯ ಕಡೆಗೆ ಗಮನ ಹರಿಸುವುದಿಲ್ಲ. ಕೆಲವರಿಗೆ ತಮ್ಮ ಕೆಲಸ ಮಾಡಿಕೊಂಡು ಹೋದರೆ ಸಾಕು, ಮುಂದೆ ನಮ್ಮ ಮಕ್ಕಳು ತಮ್ಮ ಕೆಲಸದ ಜೊತೆಗೆ ಓದಿಕೊಂಡರೆ ಸಾಕು ಎಂಬ ಭಾವನೆಯಿದೆ. ಆದರೆ ಪುರುಷರು ಅದಕ್ಕೆ ಒಪ್ಪಿಗೆ ಕೊಟ್ಟರೇ ಓದುವುದಕ್ಕೆ ಅನುಕೂಲವಾಗುತ್ತದೆ. ಇಲ್ಲವಾದರೆ ಮನೆಯಲ್ಲೇ ಇದ್ದುಕೊಂಡು ಮನೆಗೆಲಸ ನೋಡಿಕೊಂಡು ಮತ್ತು ಮಕ್ಕಳನ್ನು ನೋಡಿಕೊಂಡರೆ, ಸಾಕು ಓದುವುದೇಕೆ? ಎಂದು ಪ್ರಶ್ನಿಸುತ್ತಾರೆ. ಈ ಸಮುದಾಯದಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳು ಊರೂರು ಸುತ್ತಿ ವ್ಯಾಪಾರ ಮಾಡಿಕೊಂಡು ಹಣ ಕೊಟ್ಟರೆ ತಂದೆ ಖುಷಿಯಾಗುತ್ತಾನೆ. ಅದನ್ನು ಕುಡಿತಕ್ಕೆ, ಮನೆಯ ಖರ್ಚುಗಳಿಗೆ ಹಣವು ಸಹಾಯಕ. ಆದರೆ ಅವರ' ಅಭಿವೃದ್ಧಿಯನ್ನು ಬಯಸುವುದಿಲ್ಲ. ಮಹಿಳೆಯು ತನ್ನ ತಿಳುವಳಿಕೆಯಿಂದ ಕದ್ದುಮುಚ್ಚಿ ಕೂಡಿಟ್ಟಿದ್ದ ಹಣವನ್ನು ಮಕ್ಕಳನ್ನು ಓದಿಸುವುದಕ್ಕೆ ಸಹಾಯ ಮಾಡುತ್ತಾಳೆ.

ಯಾವುದೇ ಸಮಾಜದಲ್ಲಾಗಲಿ ದುಡಿಮೆಯಲ್ಲಿ ಪುರುಷರಿಗೆ ನೀಡುವ ಕೂಲಿಗಿಂತ ಕಡಿಮೆ ಕೂಲಿಯನ್ನು ಮಹಿಳೆಯರಿಗೆ ನೀಡಲಾಗುತ್ತದೆ. ದೈಹಿಕ ದುಡಿಮೆಗೆ ಸಂಬಂಧಿಸಿದಂತೆ ಇಂತಹ ಕೂಲಿ ತಾರತಮ್ಯವು ದಟ್ಟವಾಗಿ ಎದ್ದುಕಾಣುತ್ತದೆ. ಮನೆಯ ಹೊರಗೆ ದುಡಿಯುವ ಅನೇಕ ಮಹಿಳೆಯರಿದ್ದಾರೆ. ಅವರು ಅಪಾರವಾದ ವರಮಾನ ಗಳಿಸುತ್ತಾರೆ. ಆದರೆ ಅವರು ಗಳಿಸುವ ವರಮಾನದ ಮೇಲೆ ಅವರಿಗೆ ಪೂರ್ಣ ನಿಯಂತ್ರಣವಿರುವುದಿಲ್ಲ. ಇದ್ದರೆ, ಅದು ಕೇವಲ ಒಂದು ಮೊತ್ತದವರೆಗೆ ಇರುತ್ತದೆ. ಪುರುಷರು ಮಾತ್ರವೇ ದುಡಿಮೆಗಾರರು ಎಂಬ ತಾರತಮ್ಯವಾದ ಭಾವನೆಗಳಿವೆ. ಇದರಿಂದಾಗಿ ಮಹಿಳೆಯರು ಹಣಕಾಸಿಗೆ ಸಂಬಂಧಿಸಿದಂತೆ ಪುರುಷರನ್ನು ಅವಲಂಬಿಸ ಬೇಕಾಗುತ್ತದೆ. ಹೆಣ್ಣು ಗಂಡು ಸಮವಾಗಿ ದುಡಿದರೂ ಸಹ ಹೆಣ್ಣು ದುಡಿದ ಸಂಪಾದನೆಯಲ್ಲಿ ಖರ್ಚು ಮಾಡುವ ಯಾವುದೇ ಸ್ವಾತಂತ್ರ್ಯವಿರುವುದಿಲ್ಲ. ಮತ್ತೆ ಮಹಿಳೆ ದುಡಿದೇ ಮನೆ ಖರ್ಚುಗಳಿಗೆ ಹಣ ಸಂಪಾದನೆ ಮಾಡಬೇಕಾಗುತ್ತದೆ. ಮಹಿಳೆಯರು ಪುರುಷರಂತೆಯೇ ಅನೇಕ ಕಡೆಗಳಲ್ಲಿ ಹೋಗಿ ದುಡಿದು ಬರುತ್ತಾರೆ. ಇದಲ್ಲದೆ ಅವರು ಮನೆಯೊಳಗೆ ಅನೇಕ ಉತ್ಪಾದನಾ ಚಟುವಟಿಕೆ ನಿರ್ವಹಿಸುತ್ತಾರೆ. ಪ್ರತಿದಿನ ಅವರು ಎರಡು ದುಡಿಮೆಯನ್ನು ಮಾಡಿ ಬದುಕುತ್ತಿರುತ್ತಾರೆ. ಇವೆಲ್ಲಕ್ಕಿಂತ ಮಿಗಿಲಾಗಿ ಪುರುಷರಿಗೆ ಅಸಾಧ್ಯವಾದ ಮತ್ತು ಅತ್ಯಂತ ಉತ್ಪಾದನಾ ಮೌಲ್ಯವುಳ್ಳ ಸಂತಾನೋತ್ಪತ್ತಿ ಕಾರ್ಯವನ್ನು ನಿರ್ವಹಿಸುತ್ತಾರೆ. ಇಲ್ಲಿರುವ ವೈರುಧ್ಯವೆಂದರೆ ಮಹಿಳೆಯರ ಪರಿಶ್ರಮವು ಕಣ್ಣಿಗೆ ಗೋಚರಿಸುತ್ತದೆ. ಆದರೆ ಅವಳ ಕಾಣಿಕೆಯು ಅಗೋಚರವಾಗಿ ಕಂಡುಬರುತ್ತದೆ.

ಮಾನವ ಜನಾಂಗದ ಸೃಷ್ಟಿ ಹಾಗೂ ಅದರ ಸುಸ್ಥಿತಿ ಪ್ರಕ್ರಿಯೆಯ ಕೇಂದ್ರಬಿಂದು ಮಹಿಳೆ. ಆದರೆ ಅನೇಕ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕಾರಣಗಳಿಂದಾಗಿ ಸಾಮಾಜಿಕ ಜೀವನದ ಪ್ರಧಾನ ಧಾರೆಯಲ್ಲಿ ಮಹಿಳೆಯರು ಆಚೆಗೆ ನೂಕಲ್ಪಟ್ಟಿದ್ದಾರೆ. ಅಭಿವೃದ್ಧಿಯ ಫಲಗಳು,

ಸಂಪನ್ಮೂಲ, ಹಾಗೂ ದುಡಿಮೆಗಳಿಗೆ ಸಂಬಂಧಿಸಿದಂತೆ ಮಹಿಳೆಯರು ತೀವ್ರ ಸ್ವರೂಪದ ಅಸಮಾನತೆಯನ್ನು ಅನುಭವಿಸುತ್ತಿದ್ದಾರೆ. ವಿಚಾರವಾದಿಗಳು, ಮಹಿಳಾ ಸ್ತ್ರೀವಾದಿಗಳು ಈ ಸಮುದಾಯದ ಮಹಿಳೆಯರ ಅಭಿವೃದ್ಧಿಯ ಕಡೆಗೆ ಗಮನ ಹರಿಸಬೇಕಾಗುತ್ತದೆ ಮತ್ತು ತಿಳುವಳಿಕೆ ಮೂಡಿಸಲು ಅನುಕೂಲವಾಗುವಂತೆ ಮಾಡಬೇಕು. ಅಸಮಾನತೆ, ಶ್ರೇಣೀಕರಣ ಹಾಗೂ ಪುರುಷ ಸಮಾಜದಲ್ಲಿ ಇಂತಹ ಲಿಂಗ ಸಂಬಂಧಿ ಅಸಮಾನತೆಗಳು ಹೆಚ್ಚು ಸ್ಪಷ್ಟ ರೂಪದಲ್ಲಿ ಗೋಚರಿಸುತ್ತವೆ. ಈ ಎಲ್ಲಾ ಗುಣಗಳಿಂದ ಕೂಡಿರುವ ಭಾರತದಲ್ಲಿ ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ಹಾಗೂ ಆಳವಾಗಿ ಬೇರು ಬಿಟ್ಟಿರುವ ಸಾಮಾಜಿಕ, ಆರ್ಥಿಕ ಅಸಮಾನತೆಯಿಂದ ಕೂಡಿರುವ ವ್ಯವಸ್ಥೆಯಲ್ಲಿ ಮಹಿಳೆಯರು ತೀವ್ರ ನೋವು ಅನುಭವಿಸುತ್ತಿದ್ದಾರೆ. ಮನೆಯಲ್ಲಿ ಮಾತ್ರ ಉದಾರವಾದ ಮಾತುಗಳು ಕಂಡುಬರುತ್ತಿವೆ. ಅವರಲ್ಲಿ ಕಮಲಾಪುರದ ಮಹಿಳೆಯರೆಲ್ಲ ಸೇರಿ ಕೊರವರ ಮಾರೆಮ್ಮ ದೇವರಿಗೆ ಒಡವೆ ಮಾಡಿಸಲು ವಾರಕ್ಕೆ ಇಪ್ಪತ್ತು ರೂಪಾಯಿಗಳಂತೆ ಒಂದೊಂದು ಕುಟುಂಬಗಳಿಂದ ಜೋಡಿಸಿದ್ದಾರೆ. ಜೋಡಿಸಿದ ಹಣದಿಂದ ದೇವಿಗೆ ಒಡವೆ ತಂದು ಒಪ್ಪಿಸಿದ್ದಾರೆ. ಇದೇ ರೀತಿಯಾಗಿ ಬಳ್ಳಾರಿಯಲ್ಲಿ ದೇವಾಲಯಗಳ ಉದ್ಧಾರಕ್ಕಾಗಿ ಸಮುದಾಯದವರು ಸಹ ಸೇರಿಸಿ ದೇವಾಲಯಗಳ ಪುನರ್ ನಿರ್ಮಾಣ ಮಾಡಿದ್ದಾರೆ. ಅದೇ ರೀತಿ ಮಹಿಳೆಯರು ತಮ್ಮ ಉತ್ಪಾದನೆಯಲ್ಲಿ ಉಳಿಸಿದ ಹಣದಿಂದ ಸಹಕಾರಿ ಬ್ಯಾಂಕ್‌ಗಳಲ್ಲಿ ವಾರಕ್ಕೊಮ್ಮೆ ೧೦೦-೨೦೦ ರೂಪಾಯಿಗಳಂತೆ ಸೇರಿಸುತ್ತಾ ಹೋಗುತ್ತಾರೆ. ಒಂದು ಗುಂಪಿನಲ್ಲಿ ೨೦ ಜನರು ಕಡ್ಡಾಯವಾಗಿ ಒಂದು ಸ್ವಸಹಾಯ ಗುಂಪನ್ನು ಮಾಡಿಕೊಂಡಿದ್ದಾರೆ. ಇವರಲ್ಲಿಯೂ ಅಲ್ಪ ಸ್ವಲ್ಪ ಅಭಿವೃದ್ಧಿಯ ಕಾರ್ಯಗಳು ಕಂಡುಬರುತ್ತಿವೆ. ಗ್ರಾಮೀಣ ಜನರು ಸಹಾಯ ಸಹಕಾರಕ್ಕಾಗಿ ಬ್ಯಾಂಕ್‌ಗಳಲ್ಲಿ ಸಾಲ ಪಡೆದು ಹೆಚ್ಚಿನ ಕಷ್ಟವಿರುವವರೆಗೆ ಉಪಯೋಗವಾಗಲೆಂದು ಇಂತಹ ಸಣ್ಣ ಸಣ್ಣ ಉಪಯುಕ್ತ ಕಾರ್ಯಗಳನ್ನು ಕೊರವ ಮಹಿಳೆಯರು ಮಾಡುತ್ತಿರುವುದು ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುತ್ತವೆ. ನಗರ ಪ್ರದೇಶದಲ್ಲಿರುವ ಮಹಿಳೆಯರು ಇತರೆ ಜನರೊಂದಿಗೆ ಜೊತೆಗೂಡಿ ಚೀಟಿಹಾಕುವುದು ಇನ್ನೊಂದು ಬಗೆಯದ್ದಾಗಿದೆ. ಇದರಲ್ಲಿ ೨೦ ಸಾವಿರಗಳಿಂದ ೧ ಲಕ್ಷದವರೆಗೆ ಹಾಕಲಾಗುತ್ತದೆ. ಆದರೆ ಈ ಸಮುದಾಯದ ಮಹಿಳೆಯರಲ್ಲಿ ಶ್ರೀಮಂತರು ಮಾತ್ರ ೧ ಲಕ್ಷದ ಚೀಟಿಗಳನ್ನು ಕಟ್ಟುವುದು ಕಾಣಬಹುದು.

ಸ್ವ ಸಹಾಯ ಸಂಘಗಳಿಂದ ಮಹಿಳೆಯರು ಒಂದುಗೂಡಿ ಹಣ ಸಂಗ್ರಹಣೆ ಮಾಡಿ ಗ್ರಾಮೀಣ ಪ್ರಗತಿ ಬ್ಯಾಂಕ್‌ಗಳಲ್ಲಿ ಮತ್ತು ಬ್ಯಾಂಕ್ ಆಫ್ ಇಂಡಿಯಾ ಮತ್ತು ಇನ್ನಿತರೆ ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಲಾಗುತ್ತದೆ. ಇಂತಹ ಹಣದಿಂದ ಇಂದು ತಮ್ಮ ಮಕ್ಕಳ ಶಿಕ್ಷಣಕ್ಕೆ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಾರೆ. ಉದಾಹರಣೆಗೆ ದರೋಜಿ, ಕಮಲಾಪುರ, ಕಂಪ್ಲಿ, ಕಾರೂರು, ಬಳ್ಳಾರಿ, ಕೂಡ್ಲಿಗಿ, ಸಂಡೂರು ಹೊಸಪೇಟೆ, ಬತ್ನಳ್ಳಿ, ಹಗರಿಬೊಮ್ಮನಹಳ್ಳಿ, ಕೊಟ್ಟೂರು, ಮೊದಲಾದ ಹಳ್ಳಿಗಳಲ್ಲಿ ಇಂತಹ ಕೆಲಸವನ್ನು ಮಹಿಳೆಯರು ಮಾಡುತ್ತಿದ್ದಾರೆ. ಹೀಗೆ ತಮ್ಮದೇ ಆದ ಬಂಡವಾಳವನ್ನು ಸಂಘಕ್ಕೆ ಬಳಸಿಕೊಂಡು, ತಮ್ಮ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ನಿರ್ದಿಷ್ಟವಾದ ಉದ್ದೇಶಗಳನ್ನು ಸಾಧಿಸಲು ಸಂಘಗಳು ಪ್ರಯತ್ನಿಸುತ್ತವೆ. ಅನಕ್ಷರಸ್ಥರಾದ ಜನರಲ್ಲಿ ಉಳಿತಾಯದ

ಅರಿವು ಮೂಡಿಸಿ ಅವರಲ್ಲಿರುವ ಸಂಕಷ್ಟಗಳಿಗೆ ಧನ ಸಹಾಯವನ್ನು ಮಾಡುವ ಮೂಲಕ ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವ ಪರಿಕಲ್ಪನೆಯನ್ನು ಸ್ವಸಹಾಯ ಗುಂಪುಗಳು ಹೊಂದಿವೆ. ಆದರೆ ಸರ್ಕಾರದ ಮಾನ್ಯತೆಯನ್ನು ಕೆಲವು ಪಡೆದುಕೊಂಡಿವೆ, ಇನ್ನು ಕೆಲವು ಪಡೆದುಕೊಂಡಿಲ್ಲ. ಇದಕ್ಕೆ ಕಾರಣ, ಸಂಘದ ಮುಖಂಡ ಸ್ಥಾನವನ್ನು ನಿರ್ವಹಿಸುವ ತಮ್ಮ ಕಷ್ಟ ಸುಖಗಳ ಬಗ್ಗೆ ತಿಳಿಹೇಳುತ್ತಾ ಬ್ಯಾಂಕ್‌ಗಳು ಕೊಡುವ ಕಡಿಮೆ ಬಡ್ಡಿದರದಲ್ಲಿ ಸಾಲ ಸಿಗುವಂತೆ ಮಾಡಿ, ಸಾಲಗಾರರ ಕಪಿಮುಷ್ಟಿಯಿಂದ ಬಡವರನ್ನು ರಕ್ಷಿಸಿ, ಪರೋಕ್ಷವಾಗಿ ಸಹಾಯ ಮಾಡುತ್ತಿವೆ. ಮಹಿಳೆಯರು ಇಂತಹ ಕೆಲಸ ಮಾಡುವುದರಿಂದ ಅವರಲ್ಲಿ ಉಳಿತಾಯದ ಸಾಮರ್ಥ್ಯ ಬೆಳೆಯುತ್ತದೆ. ''ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಅದರಲ್ಲಿ ಪೂರ್ವ ಏಷ್ಯಾ ರಾಷ್ಟ್ರಗಳಲ್ಲಿ ಗ್ರಾಮೀಣ ಮಹಿಳೆಯರು ರಾಷ್ಟ್ರೀಯ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ವಂಚಿತ ವರ್ಗವಾಗಿ ಪರಿಣಮಿಸಿದ್ದಾರೆ. ಅದಕ್ಕೆ ಅವರ ಅನಕ್ಷರತೆ, ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆ ಸ್ವಾತಂತ್ರ್ಯಹೀನತೆ ಇತ್ಯಾದಿ ಸಾಮಾಜಿಕ ಕಂಟಕಗಳು, ಅನಿಷ್ಟ ಪಾರಂಪರಿಕ ನೆಲೆಗಳು ಕಾರಣ. ಇವುಗಳೆಲ್ಲವನ್ನು ಹಂತ ಹಂತವಾಗಿ ಕ್ರಮಿಸಿ ಮಹಿಳೆಯರನ್ನು ಸಮಾನತೆ, ಸ್ವಾವಲಂಬನೆಯತ್ತ ಸಾಗಿಸುವುದೇ ಆರ್ಥಿಕ ಚಟುವಟಿಕೆಯ ಘಟಕವಾದ ಈ ಸ್ವಸಹಾಯ ಗುಂಪಿನ ರಚನೆಯ ಉದ್ದೇಶವಾಗಿದೆ".[೬] ಆರ್ಥಿಕ ಘಟಕಗಳಾದ ಸ್ವಸಹಾಯ ಗುಂಪುಗಳ ಯೋಜನೆ ಗ್ರಾಮೀಣ ಪ್ರದೇಶದಲ್ಲಿ ಯಶಸ್ವಿಯಾಗಿ ಈ ದಶಕದಲ್ಲಿ ಜಾರಿಗೊಂಡು ಸಾಫಲ್ಯತೆಯನ್ನು ಗಣನೀಯವಾಗಿ ಸಾಧಿಸುತ್ತಿವೆ. ನಮ್ಮ ಭಾರತ ದೇಶದ ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಗ್ರಾಮೀಣಾಭಿವೃದ್ಧಿಗೆ ಪ್ರಥಮ ಆದ್ಯತೆ ನೀಡಿದ್ದರೂ ಗ್ರಾಮೋದ್ಯೋಗ ಭರವಸೆ ಕಾರ್ಯಕ್ರಮದಡಿಯಲ್ಲಿ ಮೊದಲಿಗೆ ಗ್ರಾಮೀಣ ಮಹಿಳೆಯರಿಗೆ ಸ್ವಸಹಾಯಗಳಿಂದ ಉದ್ಯೋಗಾವಕಾಶಗಳು ದೊರೆಯುತ್ತಿವೆ.

ಕೊರವರಲ್ಲಿ ಕಂಡುಬರುವ ಸ್ವಸಹಾಯ ಗುಂಪುಗಳು ಈ ಕೆಳಗಿನಂತಿವೆ.

ಕಂಪ್ಲಿ: ಸಂಘದ ಹೆಸರು ಇಲ್ಲ, ಅಲ್ಲಿಯ ಗ್ರಾಮೀಣ ಪ್ರಗತಿ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡುತ್ತಾರೆ.

ಕೂಡ್ಲಿಗಿಯ ಬತ್ನಹಳ್ಳಿ, ಬಳ್ಳಾರಿ, ಹೊಸಪೇಟೆ, ಕಮಲಾಪುರ ಸ್ತ್ರೀ ಶಕ್ತಿ ಸಂಘ, ಕೊಟ್ಟೂರು

ಪರಸ್ಪರ ಸಹಾಯ ಸಹಕಾರ ಮತ್ತು ವಿದ್ಯಾಭ್ಯಾಸದ ಮೇಲೆ ಉಳಿತಾಯ ಮನೋಭಾವದಿಂದ ಸಮಾನ ಆಸಕ್ತಿ ಜನರು (೧೦ರಿಂದ ೨೦ರವರೆಗೆ) ಒಮ್ಮತದಿಂದ ತಮ್ಮ ಒಳಿತಿಗಾಗಿ ರಚಿಸಿಕೊಂಡಿರುವ ಅನೌಪಚಾರಿಕ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಯ ಗುಂಪಾಗಿವೆ. ಇವು ಸ್ವಾಯತ್ತತೆ, ಸ್ವಯಂಪ್ರೇರಿತ, ಸ್ವಸಾಮರ್ಥ್ಯದ ಸಾಮಾಜಿಕ ಬದ್ಧತೆಯನ್ನು ಹೊಂದಿದ ಗುಂಪುಗಳಾಗಿವೆ. ಇಲ್ಲಿ ಅನೌಪಚಾರಿಕವೆಂದು ಉಲ್ಲೇಖಿಸಿರುವ ಉದ್ದೇಶ, ಕಾನೂನಿನ ರೀತ್ಯ ನೊಂದಾವಣಿಯಾಗಲೀ, ಇತರೆ ಸರಕಾರಿ ಕಟ್ಟಳೆಗೆ ಇವು ಒಳಪಡುವುದಿಲ್ಲ ಎಂಬುದನ್ನು ಸೂಚಿಸುವುದಾಗಿದೆ.

ತನಗೆ ಅವಶ್ಯಕವೆನಿಸಿದಾಗ ಗುಂಪಿನ ನಿರ್ಣಯದಂತೆ ಗುಂಪಿನ ಹೆಸರಿನ ಮೇಲೆ ಬ್ಯಾಂಕುಗಳಿಂದ ಸಾಲ ಪಡೆದು ಸದಸ್ಯರಿಗೆ ಹಂಚುವ ಮತ್ತು ಸಾಲದ ನಿಯಮದಂತೆ ಮರುಪಾವತಿ ಮಾಡುವ ವ್ಯವಹಾರವನ್ನು ಹೊಂದಿರುತ್ತದೆ. ನೆರವು ನೀಡುವ ಸಂಸ್ಥೆಗಳಿಂದ ಕೊಡುವ ನಿಧಿ ಮತ್ತು ಸಹಾಯಧನದ ರೂಪದಲ್ಲಿ ತನ್ನ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುತ್ತವೆ.

೧೦ ರಿಂದ ೨೦ ಬಡ ಕುಟುಂಬಗಳಿಗೆ ಉಳಿತಾಯದ ಬಗ್ಗೆ ತಿಳಿಸಿ, ಸದಸ್ಯರನ್ನೊಳಗೊಂಡ ತಮ್ಮ ಹಾಗೂ ತಮ್ಮ ಸಮುದಾಯದ ಅಭಿವೃದ್ಧಿಗೆ ಅನುಕೂಲವಾಗುವ ರೀತಿಯಲ್ಲಿ ಸ್ವಸಹಾಯ ಗುಂಪುಗಳು ಇರುತ್ತವೆ. ತಮ್ಮದೇ ಆದ ನೀತಿ ನಿಯಮಗಳು ಸಂಪನ್ಮೂಲಗಳು ಮತ್ತು ಸ್ವಂತ ಬಂಡವಾಳವನ್ನು ರೂಢಿಸಿಕೊಂಡು, ತಮ್ಮ ಆರ್ಥಿಕತೆ ಮತ್ತು ಸರ್ವತೋಮುಖ ಅಭಿವೃದ್ಧಿಯ ನಿರ್ದಿಷ್ಟವಾದ ಗುರಿ ಮತ್ತು ಉದ್ದೇಶಗಳನ್ನು ಸಾಧಿಸಬೇಕಾದ ಸಣ್ಣ ಗುಂಪು ಬಡ ಜನರನ್ನು ಸಂಘಟಿಸಿ ತಮ್ಮ ಅಭಿವೃದ್ಧಿಗೆ ತಾವೇ ಸಹಬಾಳ್ವೆಯಿಂದ ಮತ್ತು ಒಗ್ಗಟ್ಟಿನಿಂದ ಸಂಘವನ್ನು ಉಳಿಸಿ ಬೆಳೆಸಿಕೊಂಡು ಹೋಗುವಂತೆ ಜವಾಬ್ದಾರಿ ಹೊಂದುವಂತೆ ಮಾಡುವುದು. ಸದಸ್ಯರಲ್ಲಿ ಎಲ್ಲಾ ಅಭಿವೃದ್ಧಿ ಕ್ಷೇತ್ರಗಳ ಬಗ್ಗೆ ಅರಿವು ಮೂಡಿಸುವುದು. ಸದಸ್ಯರ ಮತ್ತು ಗ್ರಾಮದ ಸಮಸ್ಯೆಗಳನ್ನು ಗುರುತಿಸುವುದು ಮತ್ತು ಪರಿಹಾರ ಕಂಡುಕೊಳ್ಳುವುದು ಹಾಗೂ ಹಂತಹಂತವಾಗಿ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಪ್ರೇರೇಪಿಸುವುದು, ಉಳಿತಾಯ ಮನೋಭಾವ ಮೂಡಿಸುವುದು, ಹಾಗೂ ಬಂಡವಾಳವನ್ನು ಜವಾಬ್ದಾರಿಯುತವಾಗಿ ಬಳಸಲು ಪ್ರೋತ್ಸಾಹಿಸುವುದು, ಅನಕ್ಷರಸ್ಥ ಸದಸ್ಯರನ್ನು ಅಕ್ಷರಸ್ಥರನ್ನಾಗಿ ಮಾಡುವುದು, ಸ್ವಾವಲಂಬನೆಗಳಾಗಿ ಬದುಕಲು ಬೇಕಾದ ಪ್ರೋತ್ಸಾಹ ನೀಡುವುದು, ಮುಂದಾಳತ್ವದ ಗುಣಗಳನ್ನು ಮಹಿಳೆಗೆ ತರಬೇತಿ ನೀಡಲು ಮತ್ತು ಸಂಘಟಿತರಾಗಲು ಸಹಾಯಕವಾಗಿದೆ. ತಮ್ಮ ಸಮಸ್ಯೆಗಳನ್ನು ಹಂತಹಂತವಾಗಿ ಪರಿಹರಿಸಿಕೊಳ್ಳುವ ಸಾಮರ್ಥ್ಯವನ್ನು ಹಾಗೂ ಅವಕಾಶವನ್ನು ಕಲ್ಪಿಸಿಕೊಳ್ಳುವುದಾಗಿದೆ. ಸದಸ್ಯರ ಉಳಿತಾಯದ ಹಣವೇ ಸಂಘದ ಜೀವಾಳವಾಗಿದ್ದು ಈ ಸಂಘಗಳಲ್ಲಿ ಒಂದೇ ಸಮೂಹಕ್ಕೆ ಸೇರಿದ ಸದಸ್ಯರಿರುತ್ತಾರೆ. ಕೆಲವು ಸಂಘಗಳಲ್ಲಿ ಎಲ್ಲಾ ವರ್ಗದ ಜನರು ಇರುವುದನ್ನು ಕಾಣಬಹುದಾಗಿದೆ.

ಹಚ್ಚೆ

ಪ್ರಾಚೀನ ಕಲೆಗಳಲ್ಲಿ ಹಚ್ಚೆಯೂ ಒಂದು. ಕ್ರಿ.ಪೂ. ೨೦೦೦ ವರ್ಷಗಳಷ್ಟು ಹಿಂದೆಯೇ ಈಜಿಪ್ಟ್‌ನಲ್ಲಿ ಈ ಕಲೆಯಿದ್ದುದು ಕಂಡುಬರುತ್ತದೆ. ಗ್ರೀಕರು, ರೋಮನ್ನರು, ಪೂರ್ವ ಜರ್ಮನರಲ್ಲಿ ಇದು ಪ್ರಚಲಿತವಿತ್ತೆಂಬುದು ತಿಳಿಯುತ್ತದೆ. ಇಂಥ ಒಂದು ಪ್ರಾಚೀನ ಕಲೆಯನ್ನು ರೂಢಿಸಿಕೊಂಡು ಬೆಳೆಸಿ ಕೊಂಡು ಬಂದವರಲ್ಲಿ ಕೊರವಂಜಿಯರು ಪ್ರಮುಖರು. ಧಾರ್ಮಿಕ ಭಾವನೆಯನ್ನು ಹೆಚ್ಚಿಸಲು, ವ್ಯಕ್ತಿಗಳ ನಡುವಿನ ಪ್ರೀತಿಯನ್ನು ತೋರ್ಪಡಿಸಲು, ದೈಹಿಕ ಸೌಂದರ್ಯ ಹೆಚ್ಚಿಸಲು ಒಂದು ಸಾಧನವಾಗಿ ಹೊಮ್ಮಿದ ಹಚ್ಚೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಕೊರವಂಜಿಯವರು ಬಳಸಿಕೊಂಡರು. ಡಾ. ನಂ. ತಪಸ್ವೀಕುಮಾರ್ ಅವರು 'ಕೊರವಂಜಿ, ಕೊರಮರು, ಸುಕ್ಕೆ ಕೊರವರು, ಸಿಳ್ಳೇಕ್ಯಾತರು, ಮೋದಾರರು, ಜೋಗಿಗಳು, ಬುರುಡೆ, ಬೆಸ್ತರು ಮತ್ತು ಬೆತ್ತ ಮರಾಠಿ ಜನ ಮೊದಲಾದ ಜಾತಿಯ ವಯಸ್ಕರಾದ ನುರಿತ ಹೆಂಗಸರು ಹಚ್ಚೆ ಹೊಯ್ಯುತ್ತಿದ್ದರು ಎಂದರೆ ಡಾ. ಎಚ್.ಎಂ. ಮಹೇಶ್ವರಯ್ಯ ಅವರು "ಕೊರಮರು, ಕುಕ್ಕೆ ಕೊರಮರು, ಕಲೆಗಾರರು, ಬೆಸ್ತರು, ಗೂಡೆ ಬೆಸ್ತರು, ಬುರುಡೆ ಬೆಸ್ತರು, ಕೊರವಂಜಿಗಳು, ಬ್ಯಾಡರು ಕಿಳ್ಳೇಕ್ಯಾತರು, ಮೇದಾರರು, ಗೊಂದಲಿಗರು, ಜೋಗೆರರು, ಒಡ್ಡರು, ಗೊಂಬೆಯಾಟದ ಮರಾಠಿಗಳು, ಜಾತಿಗಾರರು, ಕುರುಬರು ಹಚ್ಚೆ ಹಾಕುತ್ತಾರೆ."[೧೦]

ಎಂದು ಹೇಳುವಲ್ಲಿ ಮೇಲಿನ ಇಬ್ಬರು ಲೇಖಕರು ಗುರುತಿಸುವಲ್ಲಿ ಕೊರವರು, ಕುಕ್ಕೆ ಕೊರಮರು ಮತ್ತು ಕೊರವಂಜಿಗಳು ಒಂದು ಬುಡಕಟ್ಟಿನವರೆಂದು ಹೆಸರಿಸಿಲ್ಲ.

"ಜನರಲ್ಲಿ ಪ್ರಾಚೀನ ಕಾಲದಿಂದಲೂ ಅತಿ ನೈಪುಣ್ಯತೆಯನ್ನು ಪಡೆದವರು ಕೊರಮ ಬುಡಕಟ್ಟಿನ ಮಹಿಳೆಯರು. ಹಚ್ಚೆ ಹಾಕುವವರು ಮಹಿಳೆಯರು. ಪುರುಷರು ಹಚ್ಚೆ ಹೊಯ್ಯುವುವರಲ್ಲ. ಇದು ಹೆಣ್ಣು ಮಕ್ಕಳಿಗೆ ಸಂಬಂಧಿಸಿದಂತೆ, ಗಂಡಸರು ಅಲ್ಲಿ ಇಲ್ಲಿ ಅಪರೂಪಕ್ಕೆ ಹೊಯ್ಯಬಹುದು. ಗ್ರಾಮೀಣ ಹೆಣ್ಣು ಮಕ್ಕಳ ಮೈ ಮೇಲೆ ಗಂಡಸರಿಂದ ಹಚ್ಚೆ ಹಾಕಿಸಿಕೊಳ್ಳಲು ನಾಚಿಕೊಳ್ಳುವುದುಂಟು. ಆದರೆ ಕೊರವಂಜಿಯರು ಹಚ್ಚೆ ಹಾಕುತ್ತಿದ್ದ ಬಗ್ಗೆ ಅಬೆ ದುಬಾಬೋಯಿಸ್ ಅವರು 'Tham as carries and basket makers who were perpetually wandering about and showed much affinity with the cypsies of Europe, especially in telling fortunes, the women were, skill full tattoers' ಎಂದಿದ್ದಾರೆ".[೧೧]

"ಹಚ್ಚೆ ಹೊಯ್ಯುವುದರಲ್ಲಿ ಸಾಮಾನ್ಯವಾಗಿ ಹೆಂಗಸರು, ಕಣಿ ಹೇಳಿ ಭಿಕ್ಷೆ ಎತ್ತುತ್ತ ಊರೂರು ತಿರುಗುವ, ಅವರು ಕಪ್ಪು, ಕೆಂಪು, ಹಸಿರು ಮೊದಲಾದ ಬಣ್ಣವನ್ನು ಸೂಜಿಯಲ್ಲಿ ಅದ್ದಿಕೊಂಡು ಹಚ್ಚೆ ಹೊಯ್ಯಿಕೊಳ್ಳುವವರ ಚರ್ಮಕ್ಕೆ ಚುಚ್ಚಿ ಬೇಕಾದ ಆಕಾರವನ್ನು ನಿರ್ಮಿಸುತ್ತಾರೆ. ಈ ದಿನಗಳಲ್ಲಿ ಯಂತ್ರಗಳ ಮೂಲಕ ಪುರುಷ ಜಾತ್ರೆ, ಉತ್ಸವಗಳಲ್ಲಿ ಹಾಕುವುದನ್ನು ಕಾಣಬಹುದು. ಕೊರವರು ತಮ್ಮ ಕುಳುವ ಭಾಷೆಯಲ್ಲಿ ಪಚ್ಚಿ ಎಂದು ಹಚ್ಚೆಯನ್ನು ಕರೆಯುತ್ತಾರೆ. ಒಂದು ಕಾಲದಲ್ಲಿ ಕೊರವಂಜಿಗಳಿಗೆ ಕಣಿ ಹೇಳುವುದೇ ವೃತ್ತಿಯಾಗಿದ್ದು, ಇದರಿಂದ ಹೊಟ್ಟೆ ತುಂಬದೆ ಹೋದಾಗ ಜೀವನೋಪಾಯಕ್ಕೆ ಈಗೀಗ ಈಚಲ ಕಡ್ಡಿಗಳಿಂದ ಬುಟ್ಟಿ, ತಟ್ಟೆ, ಜಲ್ಲೆಗಳನ್ನು ಹೆಣೆದು ಮಾರಿ ಜೀವಿಸುತ್ತಿದ್ದಾರೆ ಎನ್ನುವ ಮಾತು ಸತ್ಯಕ್ಕೆ ದೂರವಾದದ್ದು".[೧೩] ಈ ಸಮುದಾಯದವರು ಕಣಿ ಹೇಳುವುದರ ಜೊತೆಗೆ ತಮ್ಮ ಮೂಲಕಸುಬಾದ ಬುಟ್ಟಿ, ಮೊದಲಾದವನ್ನು ಹೆಣೆಯುವ ಕೆಲಸವನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಮಲ್ಲಿಕಾರ್ಜುನನ ಸೂಕ್ತಿ ಸುಧಾರ್ಣವದಲ್ಲಿ ಬಂದಿರುವ "ಅಣಚಿತನವಂಕೈಯೊಳ್ ನಿನ್ನೋಲೆ ಭಾಗ್ಯದ ಭದ್ರ ಲಕ್ಷಣದ ಪದದೊಳ್ ಸಂದೀ ಸೌಭಾಗ್ಯದಿಂ ಸ್ವಜನಗಳಿಂ ತಣಿಸೆ" ಎಂಬಲ್ಲಿ ಹಚ್ಚೆಯ ಶ್ರೇಷ್ಠತೆ ಮೆರೆದಿದೆ. ೧೩ನೇ ಶತಮಾನದ ಈ ಕಾವ್ಯದಲ್ಲಷ್ಟೇ ಅಲ್ಲದೇ ಶಿವಶರಣರ ಗಮನವನ್ನು ಹಚ್ಚೆ ಸೆಳೆದಿದೆ. ಬಸವಣ್ಣನವರು ತಮ್ಮ ವಚನವೊಂದರಲ್ಲಿ 'ಐದೇ ಹಚ್ಚೆಯಿಲ್ಲದವಳಿಗೆ ಸೌಭಾಗ್ಯದ ಹೂವಿನ ಬೊಟ್ಟೇಕೆ' ಎಂದು ಹೇಳುವಲ್ಲಿ ಆ ಕಾಲಕ್ಕೆ ಹಚ್ಚೆಯ ಸೌಭ್ಯಾಗದ ಕುರುಹಾಗಿ ಬೆಳೆದು ಬಂದಿರುವ ನಂಬಿಕೆಯನ್ನು ಸೂಚಿಸುತ್ತದೆ. ಅದೇ ಕಾಲಕ್ಕೆ ಚೆನ್ನಬಸವಣ್ಣ ತನ್ನ ವಚನಗಳಲ್ಲಿ ಹರಭಕ್ತರು ಹಸಿರು ಹಚ್ಚೆಗಳನ್ನು ಹಾಕಿಸಿಕೊಳ್ಳುವುದು ತಪ್ಪು ಎಂಬ ಮಾತು ಬರುತ್ತದೆ. ಹಚ್ಚೆ ಹಾಕಿಸಿಕೊಂಡ ಹರಭಕ್ತೆಯ ಕೈಯಿಂದ ಕೊಂಬ ಪ್ರಸಾದ ಪ್ರಸಾದವಲ್ಲ ಅದು ನರಮಾಂಸ, ಹೆಂಡ ಹಾಗೂ ನಾಯಿಯ ರಕ್ತಕ್ಕೆ ಸಮಾನವೆಂದು ಕಟುವಾಗಿ ಟೀಕಿಸುತ್ತಾರೆ. ಅದೇನೆ ಇರಲಿ ಹಚ್ಚೆಯು ಪ್ರಾಚೀನ ಕಲೆ ಎಂಬುದು ವ್ಯಕ್ತವಾಗುತ್ತದೆ".[೧೪]

ಎಲ್.ಕೆ. ಅನಂತಕೃಷ್ಣ ಐಯ್ಯರ್ ಅವರು "In Malaber and cochin tattoing in known as 'Pachakuttaka' or prinking with green colour. It is thus done"[೧೮] ಎಂದು ಗುರುತಿಸಿದ್ದಾರೆ.

ಕನ್ನಡದಲ್ಲಿ ಹಚ್ಚೆಯನ್ನು ಅಚ್ಚು, ಅಂಚೆ, ಅಣಚಿ, ಹಸಿರು ಮೊದಲಾದ ಹೆಸರಿನಲ್ಲಿ ಗುರುತಿಸುವುದು ರೂಢಿಯಲ್ಲಿದೆ. ಹಚ್ಚೆಯ ಬಗೆಗೆ ಹಲವಾರು ನಂಬಿಕೆಗಳನ್ನು ಗ್ರಾಮೀಣರು ರೂಢಿಸಿಕೊಂಡಿದ್ದಾರೆ. ಮುತ್ತೈದೆತನಕ್ಕೆ ಇವು ಮೇಲು. "ಗಿಂಡಿ ಇಲ್ದೋಳು ಗಂಡಂಗೆ ನೀರು ಕೊಡಬಾರ್ದು, ರಸಿ ಕಣಕ್ಕೆ ಹಚ್ಚೆ ಇಲ್ದೋಳು ಹೋಗಬಾರ್ದು. ಮೊದಲಾದವುಗಳು ಹಿಂದಿನ ಕಾಲದಲ್ಲಿ ಹಣೆಯಲ್ಲಿ ಕುಂಕುಮ ವಿಲ್ಲವೇನೊ, ಅದರಿಂದ ಹಚ್ಚೆಯೇ ಅವರಿಗೆ ಸೌಭಾಗ್ಯದ ಸಂಕೇತವಾಗಿರಬೇಕು. ಹಚ್ಚೆ ಇಲ್ಲದವಳು ಗಂಡನಿಗೆ ನೀರು ಕೊಡುವಂತಿಲ್ಲ. ಕಣ ರಸಿ ಮಾಡುವಾಗ ಅದರಲ್ಲಿ ಹೋಗಬಾರದು ಎಂದು ತಿಳಿಸುತ್ತಾರೆ. ಇವು ಆಯಾ ಕಾಲದ ಧೋರಣೆಗಳನ್ನು ಸೂಚಿಸುತ್ತವೆ. ಜಾನಪದ ಸಾಹಿತ್ಯದಲ್ಲಿ ಇದರ ವ್ಯಾಪಕತೆ 'ಗಂಗವ್ವ ಚುಚ್ಚಿಕೊಂಡ ಹಣಚಿ ಗರತಿತನ ತಂತ' ಹಚ್ಚಿ ಬಟ್ಟಿನ ತುಂಬ ಕುಂಕುಮ ಬಟ್ಟು ಚೆಂದ. ಸತ್ತರೆ ನಮಕೂಟ ಮತ್ತೇನ ಬರಬಹುದು, ಹಚ್ಚೆಯ ಬಟ್ಟ ಸುಲಿಹಲ್ಲಿ' ಕಟ್ಟಿಕೋ ತುರುಬು: 'ಅತ್ತೆ ಬಯ್ದ ಒಪ್ಪು, ಮಾವ ಬಯ್ದ ಒಪ್ಪು ಹಚ್ಚೇದು ಬೊಟ್ಟೊ ಹಣೆಗೊಪ್ಪು ತಂಗೆವ್ವ ಚೊಚ್ಚಲ ಬಸಿರು ನಿನಗೊಪ್ಪು' ಮುಂತಾದ ಮಾತುಗಳಲ್ಲಿ ಹಚ್ಚೆಯ ಬಗೆಗೆ ವ್ಯಕ್ತವಾಗುತ್ತದೆ".[೧೯]

ಇವರು ನೂರಾರು ಬಗೆಯ ಹಚ್ಚೆಗಳನ್ನು ಹೊಯ್ಯುತ್ತಾರೆ. ಅವು ಪುರಾಣ ಪುರುಷರಿಗೆ ಪ್ರಕೃತಿಗೆ ಸಂಬಂಧಿಸಿದ ಪೂಜ್ಯ ಭಾವನೆಯನ್ನು ಬೆಳೆಸುವ ಚಿತ್ರಗಳನ್ನು ಹಚ್ಚೆಯಲ್ಲಿ ಅಳವಡಿಸಿಕೊಂಡು ಸಾವಿರಾರು ವರ್ಷಗಳಿಂದ ಬೆಳೆಸಿ ಉಳಿಸಿಕೊಂಡು ಬಂದಿದ್ದಾರೆ. ಅವುಗಳಲ್ಲಿ ಪಾರಿಜಾತ, ಜೋಗಿ ಜಡೆ, ಸೀತೆ ತುರುಬು, ರಾಮನ ತೊಟ್ಟಿಲು, ಗಿಂಡಿ, ಗಂಗೆ ಕಣ್ಣು, ವೃಂದಾವನ, ಮುತ್ತಿನ ಬಲೆ, ಚೋಳೂರ ಬಾವಿ, ಬಾಳೆ ಮರ, ಹೂವು, ಶಿವನ ಶಂಕು, ತೊಂಡ್ಲ, ಬಾಷಿಂಗ, ತಿಂಗಳಮಾವ, ತೋಳ್ ಚಪು, ಸೀತೆ ಸೆರಗು, ನವಿಲು, ಗಿಣಿ, ನಾಗರಹೆಡೆ, ಗೌರಿಮುಡಿ, ಶಿವನ ಆಸೆ, ಬಾಳೆಬೆರಿಗೆ ಹೂವು, ಮಲ್ಲಿಗೆ ಮೊಗ್ಗು, ತುಪ್ಪದ ಕೊಣ, ಚಿಕ್ಕಸಾಲು, ಪಜ್ಜೆತೆನೆ, ನಿಂಬೆ ಹೂವು, ಗೌರಿಗದ್ದುಗೆ, ಗೌರಿಕಲ್ಲು ಚಿಕ್ಕ ತೇರು, ಚೇಳು, ಗರುಡ ಮೊದಲಾದುವುಗಳನ್ನು ನೋಡಬಹುದು. ಇವುಗಳನ್ನು ಹಣೆ, ಕೆನ್ನೆ, ಕುತ್ತಿಗೆ, ಎದೆ, ಕೈ, ತೋಳು, ತೊಡೆ ಏಳು ಮೇಲೂ ಜನರು ಹೊಯ್ಯಿಸಿಕೊಳ್ಳುತ್ತಾರೆ.

ಜಗತ್ತಿನಾದ್ಯಂತ ಜಾನಪದದಲ್ಲಿ ಸಾರ್ವತ್ರಿಕ ಪದ್ಧತಿಯಾಗಿ ಮೊನ್ನೆ ಮೊನ್ನೆಯವರಿಗೆ ರೂಢಿಯಲ್ಲಿದ್ದ ಹಚ್ಚೆ ಹೊಯ್ಯುವ ಸಂಪ್ರದಾಯವನ್ನು ತಪ್ಪದೇ ಗಮನಿಸಬೇಕು. ಇಂದಿಗೂ ಕೆಲವಡೆ ಕೆಲವರು ಹಾಕಿಸಿಕೊಳ್ಳುವುದನ್ನು ನೋಡಬಹುದು. ಗಂಡಸರು, ಹೆಂಗಸರು ಎಂಬ ಬೇದವಿಲ್ಲದೆ, ಕೈ, ಮೈ ಮುಖಗಳಿಗೆಲ್ಲ ಹಚ್ಚೆಯನ್ನು ಹಾಕಿಸಿಕೊಳ್ಳುವುದರ ಹಿನ್ನೆಲೆಯಲ್ಲಿ ನಾನಾ ಕಾರಣಗಳು ಇರಬಹುದಾಗಿದೆ. ತಮ್ಮ ಶರೀರದ ಸೌಂದರ್ಯವನ್ನು ಹೆಚ್ಚಿಸಲು ಹಚ್ಚೆಯನ್ನು ಹಾಕಿಸಿಕೊಳ್ಳುತ್ತದೆ. ಜನಪದರ ಹುಡುಗಿಯರಲ್ಲಿ ಎಡಗೈ ಹಚ್ಚೆಗಳಿಗೆ ಗಿಣ್ಣಿನ ಮೇಲೆ, ಮುಂಗೈ ಮಧ್ಯೆ ಹಾಗೂ ಮುಂದೋಳಿನ ಮೇಲೆ, ಮೊಳಕೈ ಒಳಭಾಗದ ಮೇಲೆ, ಮತ್ತೆ ಕೆಲವರು ಎದೆ, ಬಲಗೈ, ಮುಂದೋಳು, ಹೀಗೆ

ಶಾರೀರದ ಹಲವು ಕಡೆ ಹಚ್ಚೆ ಹೊಯ್ಯಿಸಿಕೊಳ್ಳುವುದನ್ನು ನೋಡಬಹುದು. ವಿಶೇಷವಾಗಿ ಹಣೆಯ ಮೇಲೆ ಇಂದಿನ ದಿನಗಳಲ್ಲಿ ಇರುವುದನ್ನು ನೋಡಬಹುದು' (ಅದು ವಿದ್ಯಾವಂತರಾದ ಹುಡುಗಿಯರು).

"ಹಚ್ಚೆ ಹಾಕುವುದು ಆಂಧ್ರದಲ್ಲಿ ಒಂದು ಕಲೆ. ಹೆಚ್ಚು ಕಡಿಮೆ ಎಲ್ಲ ಬುಡಕಟ್ಟಿನವರು ಬೆಟ್ಟದ ಜನರು ಹಾಗೂ ಹೆಂಗಸರು ಅಲಂಕಾರಕ್ಕಾಗಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಹಳ್ಳಿಗರು ಹಚ್ಚೆಯನ್ನು ಸೌಂದರ್ಯದ ಒಂದು ಗುರುತೆಂದು ಭಾವಿಸುತ್ತಾರೆ. ಗಲ್ಲದ ಮೇಲೆ, ಕೆನ್ನೆಯ ಮೇಲೆ ಕೈಯ ಮೇಲೆ ಪ್ರೇಮಿಗಳ ಹೆಸರುಗಳನ್ನು ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಸ್ತ್ರೀಯರಿಗೆ ಅದು ಅಂದವನ್ನು ಹೆಚ್ಚಿಸುತ್ತದೆ. ಒಂದು ತೆಲುಗು ಜನಪದ ಗೀತೆಯಲ್ಲಿ ಚತುರೆಯಾದ ಹುಡುಗಿಯೊಬ್ಬಳು ತನ್ನ ಪ್ರೇಮಿಯನ್ನು ಸೀತೆಯ ಹಚ್ಚೆಗಳನ್ನು, ರಾಮನ ಬಾಣಗಳನ್ನು ನಾಲ್ಕೂವರೆ, ಆಣೆ ಕೊಟ್ಟು ತೊಡೆಗಳ ಮೇಲೆ ಹಚ್ಚೆ ಹಾಕಿಸುವಂತೆ ಕೇಳುತ್ತಾಳೆ ಎಂಬುದಾಗಿ ತಿಳಿಸಿದ್ದಾರೆ. ದೃಢಕಾಯದವರು, ಪೈಲ್ವಾನರು, ಮುಂಗೈ, ಸ್ನಾಯು ಹಾಗೂ ತೊಡೆ ಹಾಗೂ ಎದೆಯ ಮೇಲೆ ಸಿಂಹ, ಗರುಡ ಪಕ್ಷಿ, ಹಾಗೂ ಹನುಮಂತನ ಗದೆ, ಅರಳಿದ ಕಮಲಗಳನ್ನು ಹಾಕಿಸಿಕೊಳ್ಳುತ್ತಾರೆ. ಹಚ್ಚೆ ಹಾಕುವವರ ಒಂದು ಜಾತಿಯೇ ಇದೆ. ಇವರಿಗೆ ಅದೇ ವೃತ್ತಿಯಾಗಿದೆ".[೧] ನಗರ ಸಂಸ್ಕೃತಿ ಹಬ್ಬುತ್ತಿರುವ ಈ ಕಾಲದಲ್ಲಿ ಹಚ್ಚೆ ಹಾಕುವ ಕಲೆಯು ಮರೆಯಾಗುತ್ತಿದೆ. ಇಂದಿಗೂ ಉಳಿದಿರುವ ಹಚ್ಚೆಯ ಒಂದು ರೂಪವೆಂದರೆ ಪ್ರೇಮಿಗಳು ಹೆಸರನ್ನು ಹಾಕಿಸಿಕೊಳ್ಳುವುದು.

ನಾವು ಮಾಧ್ಯಮದಲ್ಲಿ ನೋಡುತ್ತಿರುವಂತೆ WWF ದೃಢಕಾಯದವರು ತಮ್ಮ ಶರೀರದ ಮೇಲೆ ಹಚ್ಚೆಗಳನ್ನು ಹಾಕಿಸಿಕೊಂಡಿರುವುದು. ಚಿಕ್ಕ ಚಿಕ್ಕ ಮಕ್ಕಳು ಸಹ ತಮಗೆ ಇಷ್ಟವಾದ WWF ವ್ಯಕ್ತಿಗಳ ಫೋಟೋವನ್ನು ಕೈಗೆ ಅಂಟಿಸಿಕೊಳ್ಳುವುದು ಕಂಡುಬರುತ್ತದೆ. ಆದರೆ ಅದು ನೀರು ಹಾಕಿ ತೊಳೆದರೆ ಹೋಗಿ ಬಿಡುತ್ತದೆ. ಆದರೆ ಹಚ್ಚೆಯು ಶಾಶ್ವತವಾಗಿ ಇರುತ್ತದೆ. ಹಚ್ಚೆಯನ್ನು ಸೋದರ ಮಾವಂದಿರೂ ಹಾಗೂ ಅತ್ತೆಯರು ತಮ್ಮ ಪ್ರೀತಿಯ ಗುರುತಿಗಾಗಿ ತಮ್ಮ ಅಳಿಯ ಸೊಸೆಯರಿಗೆ ಹಾಕಿಸಬೇಕಾಗುತ್ತದೆ. ಏಕೆಂದರೆ ಹಚ್ಚೆ ಹೊಯ್ಯಿಸಿದವರು, ಹಾಡು ಕಲಿಸಿದವರು, ಮಕ್ಕಳಿಗೆ ಹಾಲು ಎರೆದವರು, ವಿದ್ಯೆ ಕಲಿಸಿದವರು ನಮ್ಮ ಸುತ್ತಲೂ ನೆರವಿಗೆ ಬರುತ್ತಾರಂತೆ. ಇದು ನಿಜ. ಮೊದಮೊದಲು ಭಾವನಾತ್ಮಕ ಸಂಬಂಧಗಳಿಂದ ಮೈಗೂಡಿಸಿಕೊಂಡು ತನ್ನ ಸ್ಥಾನವನ್ನು ಗಟ್ಟಿಯಾಗಿಸಿಕೊಂಡಿದೆ. ಕೆಲವೊಮ್ಮೆ ಸ್ನೇಹಿತರ ಗುರುತಾಗಿಯೇ ಹಚ್ಚೆಯಲ್ಲಿ ಉಳಿಯುತ್ತದೆ.

ಹಚ್ಚೆಯನ್ನು ಯಾವ ಯಾವ ದೇಶದಲ್ಲಿ ಯಾವ ಯಾವ ರೀತಿಯಲ್ಲಿ ಕಾಣಲಾಗುತ್ತದೆ ಎಂಬುದನ್ನು ತಿಳಿಸಲಾಗಿದೆ. ಮವೋರಿ ಪ್ರಮುಖರಿಗೆ ಹಚ್ಚೆ ಭಯೋತ್ಪಾದಕತೆಯನ್ನು ಉಂಟು ಮಾಡುತ್ತದೆ. ವ್ಯಾಲಿಸ್ ದ್ವೀಪವಾಸಿಗಳಿಗೆ ಹಚ್ಚೆ ಗೌರವದ ಸಂಕೇತ. ಫೆಸಿಫಿಕ್ ಸಾಗರದ ದ್ವೀಪವಾಸಿಗಳಿಗೆ ಆಲಂಕಾರಿಕ ಸಾಧನ, ಅಮೇರಿಕೆಯ ರೆಡ್ ಇಂಡಿಯನ್ನರಿಗೆ ಲೈಂಗಿಕ ಸೌಂದರ್ಯ ಮತ್ತು ಸಾಹಸ ಪ್ರವೃತ್ತಿಯ ಪ್ರತೀಕ. ಪಾಲಿನೇಷಿಯನ್ ಸ್ತ್ರೀ ಪುರುಷರಿಗೆ ಹಚ್ಚೆ ಆಕರ್ಷಣೆಯನ್ನು ಜಾಗೃತಿಗೊಳಿಸುತ್ತದೆ. ಹೆರೋಡೋಟಸ್ ಎನ್ನುವ ಇತಿಹಾಸತಜ್ಞ ದೇಸಿಯ ಮಹಿಳೆಯರಿಗೆ ಹಚ್ಚೆ ದೊಡ್ಡಸ್ತಿಕೆಯ ಕುರುಹು ಎಂದು ಗುರುತಿಸಿದ್ದಾರೆ. ಕನ್ನಡಗರಿಗೆ ಹಚ್ಚೆ ಮುತ್ತೈದೆತನದ ಸೌಭಾಗ್ಯದ ಸಂಕೇತವಾಗಿದೆ.

ಜಗತ್ತಿನಾದ್ಯಂತ ಕಂಡುಬರುವ ವಿವಿಧ ಜನಾಂಗಗಳ ರೂಢಮೂಲ ಸಂಪ್ರದಾಯಗಳಲ್ಲಿ ಹಚ್ಚೆ ಪ್ರಮುಖವಾದುದು. ಬಹಳ ಹಿಂದಿನಿಂದಲೂ ಅತ್ಯಂತ ವ್ಯಾಪಕವಾಗಿ ಹಾಗೂ ಜನಪ್ರಿಯವಾಗಿ ಬೆಳೆದು ಬಂದ ಹಚ್ಚೆ ಸಂಪ್ರದಾಯ ಇಂದಿಗೂ ನಮ್ಮ ಮಧ್ಯೆ ಜೀವಂತವಾಗಿದೆ. ಜಾನಪದದ ಉಸಿರು ಹಚ್ಚೆಯಾಗಿದೆ ಎಂದು ಹೇಳಬೇಕಾಗುತ್ತದೆ. ನಾವು ಸತ್ತರೆ ನಮ್ಮ ಹಿಂದೆ ಯಾವುದು ಬರುವುದಿಲ್ಲ. ಹಚ್ಚೆಯ ಬೊಟ್ಟು ಮಾತ್ರ ನಮ್ಮಿಂದ ಬರುತ್ತದೆ ಎಂದು ನಮ್ಮಮ್ಮ ನನಗೆ ಚಿಕ್ಕ ವಯಸ್ಸಿನಲ್ಲಿ ಹೇಳಿದ ಜ್ಞಾಪಕ.

ಹಚ್ಚೆಯ ಚಿತ್ತಾರ ಜಾನಪದರ ಕಲಾವಂತಿಕೆಯನ್ನು ಬೆಳಕಿಗಿಡುತ್ತದೆ. ಹಸಿರು ಗಿಡಮೂಲಿಕೆಗಳಿಂದ ತಯಾರಿಸಿದ ರಸ ಮೈಮೇಲೆ ಹಳದಿ ಮಿಶ್ರಿತ ಹಸಿರು ರೂಪವನ್ನು ಶಾಶ್ವತವಾಗಿ ಕೊಡುವುದರಿಂದ ಅದಕ್ಕೆ ಪಚ್ಚೆ, ಹಚ್ಚೆ ಎನ್ನುವ ಹೆಸರು ಬಂದಿದೆ. ಮಲೆಯಾಳಂನಲ್ಲಿ ಪಚ, ಪಚ್ಚ, ಪಚ್ಚೆ ಎಂದೂ ಕರೆಯುತ್ತಾರೆ.

ಅಮೇರಿಕದ ವ್ಯಕ್ತಿಯೊಬ್ಬ ವಿಜಯ ಕರ್ನಾಟಕ ಸಂಪಾದಕ ಪರಾಗ ಸ್ಪರ್ಶದ ಶ್ರೀವತ್ಸ ಜೋಶಿಯವರಿಗೆ ಇ-ಮೇಲ್ ಮುಖಾಂತರ ಮಾಡಿದ ಹಚ್ಚೆಯ ಮಹತ್ವ.

"ಅಗ್ನಿಶಾಮಕ ಸಿಬ್ಬಂದಿಯು ಅವನ ಹೆಂಡತಿ ತಂದ ಆಭರಣದ ಪೆಟ್ಟಿಗೆಯಲ್ಲಿ ಕಿರು ಪುಸ್ತಕದಲ್ಲಿ ಈ ಒಂದು ಮಾತಿನ ಸಾರವಿತ್ತು. ಅದರಲ್ಲಿ ಭಾರತೀಯ ಲಿಪಿಯ ಪಕ್ಕದಲ್ಲೇ ಅದರ ಇಂಗ್ಲೀಷ್ ಅನುವಾದ ಒಂದು ಕಡೆ 'Cannot be piered by weapons, cannot be burned by firem ಎಂದಿರುವುದು ಅವನ ಗಮನ ಸೆಳೆದಿದೆ. ಆದ್ದರಿಂದ ಅವನ ಭುಜದ ಮೇಲೆ ಹಚ್ಚೆಯಾಗಿ ಬರೆಸಬೇಕೆಂದು ಕೂಡಲೇ ತೀರ್ಮಾನಿಸಿದ್ದನು. ಸಂಸ್ಕೃತ ಎಂದರೆ ಅಭಿಮಾನ ಅವರಿಗೆ. ಆದರೆ ಅವನು ಓದುವುದು, ಬರೆಯುವುದು ಗೊತ್ತಿಲ್ಲದ್ದರಿಂದ ಇ-ಮೇಲ್ ಮೂಲಕ ಶ್ರೀ ವತ್ಸ ಜೋಶಿಯವರಿಗೆ ಡೆನಿಯಲ್ ಜಾವರ್ ಅಮೆರಿಕ ಪೂಜೆ. ಅಗ್ನಿಶಾಮಕ ದಳದ ಸಿಬ್ಬಂದಿಯಾಗಿ ಉದ್ಯೋಗ ಎಂದು ತಿಳಿಸಿದ್ದಳು. ಆ ಶ್ಲೋಕದಲ್ಲಿ ಈ ರೀತಿ ಇತ್ತು.

ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕ : । ನ ಚೈನಂ ಕ್ಲೇದಯಂತ್ಯಾಪೋನ್ ಶೋಷಯತಿ ಮಾರುತಃ ॥ ಎಂದು ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಉಪದೇಶಿಸುತ್ತಾ ಹೇಳಿದ ಶ್ಲೋಕ. ಅಮೆರಿಕಾದ ಅಗ್ನಿಶಾಮಕನಿಗೆ ವಿಶೇಷವಾಗಿ ರೋಮಾಂಚನ ತಂದದ್ದು ಈ ಶ್ಲೋಕದಲ್ಲಿನ ನೈನಂ ದಹತಿ ಪಾವಕಃ ಎಂಬ ಸಾಲು ಆಗಿದೆ.

ಅರ್ಥ 'ಭಗವದ್ಗೀತೆಯ ಎರಡನೆ ಅಧ್ಯಾಯನದ ೨೩ನೆಯ ಶ್ಲೋಕಃ ಅದರ ಪೂರ್ಣ ರೂಪ ಮೇಲಿನಂತಿತ್ತು. ಶರೀರ ನಶ್ವರವಾದುದು. ಆದರೆ ಆತ್ಮವೆಂಬುದು ಜರಾಮರಣಗಳಿಂದ ಅತೀತ ವಾದುದು. ಅದನ್ನು ಆಯುಧಗಳು ತುಂಡರಿಸಲಾರವು. ಬೆಂಕಿ ಅವನನ್ನು ಸುಡಲಾರದು ನೀರು ಅದನ್ನು ಒದ್ದೆಯಾಗಿಸದು ಮತ್ತು ಗಾಳಿ ಬಣಗಿಸಿದು ಎಂದು ತಿಳಿಸುತ್ತಾರೆ. ಅದರಿಂದ ಇ-ಮೇಲ್‌ಗೆ ಉತ್ತರಿಸಿದ ಅಗ್ನಿಶಾಮಕದ ಯೋಧನಿಗೆ ಸಂತೋಷವಾಗಿ ಅದರ ಜೊತೆಗೆ ಮೈ ಮೇಲೆ ಹಚ್ಚೆಯನ್ನು

ಬರೆಸಿಕೊಂಡದ್ದು ಆಗಿರಬಹುದು. ಹಚ್ಚೆ ಹಾಕಿಸುವುದು ಒಂದು ಪ್ಯಾಶನ್ ಆಗಿದೆ. ಮುಖ್ಯವಾಗಿ ಅಗ್ನಿಶಾಮಕದ ಸಿಬ್ಬಂದಿಯಂಥ ವೃತ್ತಿಯವರಿಗೆ ಅದೊಂದು ಶೌರ್ಯದ ಸಂಕೇತ. ಕೆಟ್ಟದ್ದಾಗದಂತೆ ರಕ್ಷಣೆಯ ತಾಯಿತವು ಈ ಹಚ್ಚೆ ಎಂದು ತಿಳಿಸುತ್ತದೆ. ಇದರಿಂದ ಬೆಂಕಿಯಲ್ಲಿ ಆರಿಸುವವನ ಹಚ್ಚೆಯಲ್ಲಿ ಭಗವದ್ಗೀತೆಯ ಕೆಚ್ಚು ! ಹತ್ತಿರುವುದು ಮಹತ್ವವಾಗಿದೆ".[೧೭]

ಕೊರವಂಜಿ

"ಕೊರವ ಜನಾಂಗದ ಪ್ರತಿನಿಧಿ ಈ ಕೊರವಂಜಿ. ಕೊರವಂಜಿ ಸಾಹಿತ್ಯ ಪ್ರಕಾರಗಳಾದ ಕಾವ್ಯ, ನಾಟಕಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಬಂದಿರುವುದು ಕಂಡುಬರುತ್ತದೆ. ತನ್ನ ಮೂಲಕ ಕೊರವ ಜನಾಂಗದ ವಿಷಯಗಳು ಪ್ರಸ್ತಾಪಗೊಂಡಿವೆ. ಕನ್ನಡ ಸಾಹಿತ್ಯದ ಕೊರವಂಜಿಯ ವಿಚಾರ ಬಂದಿರುವುದು ಹನ್ನೆರಡನೆಯ ಶತಮಾನದ ಪೂರ್ವಾರ್ಧದ ನೇಮಿನಾಥ ಪುರಾಣದಲ್ಲಿ ಅಲೆಮಾರಿ ಜನಾಂಗವಾದ ಇವರು ನಾಡಿನ ಸಂಪರ್ಕದಿಂದ ಸಮಾಜದ ಗಮನ ತಮ್ಮ ಕಡೆಗೆ ಸೆಳೆದು ಕೊಂಡಿರುವುದು ಸಾಮಾನ್ಯ ಸಂಗತಿಯಲ್ಲ. ವ್ಯಕ್ತಿ ಬೆಳೆದರೆ ಮಾತ್ರ ಸಮಾಜ ಬೆಳೆಯುತ್ತದೆ. ಜೀವನದ ಎದುರು ನಿಂತಿರುವ ಅನೇಕ ಪ್ರಶ್ನೆಗಳನ್ನು ಎದುರಿಸಲು ಮಾನವನ ವ್ಯಕ್ತಿತ್ವ ವಿಕಾಸವಾಗ ಬೇಕಾದುದು ಅನಿವಾರ್ಯವು ಹೌದು. ಅಂಥ ಬೆಳವಣಿಗೆಯಿಂದಾಗಿಯೇ ೨೨ನೆಯ ತೀರ್ಥಂಕರ ನೇಮಿನಾಥನ ಚರಿತವಾದ ಈ ಪುರಾಣದಲ್ಲಿ ಜೈನ ಕವಿಯೊಬ್ಬ ತನ್ನ ಉದ್ದೇಶ ಸಾಧಿಸಿಕೊಳ್ಳಲು, ಆ ಸಂದರ್ಭಕ್ಕೆ ಅತಿ ಸೂಕ್ತವಾಗಿ ಕಂಡುಬಂದ ಕೊರವಿಯನ್ನು ಬಳಸಿಕೊಂಡಿದ್ದಾನೆ"[೧೮] ಎಂದು ತಿಳಿಸಲಾಗಿದೆ. ಇದು ಶಿಷ್ಟ ಸಾಹಿತ್ಯದ ದಾಖಲೆಯಾಗಿದ್ದದರೂ, ಜಾನಪದದಲ್ಲಿ ಇದು ಮುಂಚೆಯೇ ತೋರಿರಬಹುದು.

"ಕೊರವಂಜಿ ಕಥೆಗಳು ನಮ್ಮಲ್ಲಿ ತಮಿಳುನಾಡಿನ ರಾಮಾನುಜಾಚಾರ್ಯರೊಡನೆಯೇ ಪ್ರವೇಶಿಸಿದಂತೆ ತೋರುತ್ತದೆ. ೧೭ನೆಯ ಶತಮಾನದ ಚಿಕ್ಕ ದೇವರಾಯರ ಕಾಲದ ಶ್ರೀ ವೈಷ್ಣವ ಸಾಹಿತ್ಯ ಪ್ರಕಾರದಿಂದಲೆ ಇಂಥ ಕಥೆಗಳ ಉಗಮವಾಗಿದೆ. ವಿಜಯನಗರ ಕಾಲಕ್ಕೆ ತೆಲುಗರೊಡನೆ ಹೊಕ್ಕು ಬಳಕೆ ಹೆಚ್ಚದ್ದರಿಂದ ತೆಲುಗಿನಲ್ಲಿ ಜನಪ್ರಿಯವಾದ ಭಾಮಾಕಲಾಪ (ಕೂಚಿಪುಡಿ, ವಲಸೆ ಬಂದಷ್ಟು, ಕೊರವಂಜಿ ಪಾತ್ರ ಸೃಷ್ಟಿ ಕನ್ನಡ ನೆಲದ್ದಲ್ಲ. ಆಂಧ್ರ ಮತ್ತು ತಮಿಳುನಾಡಿನಿಂದ ಕನ್ನಡನಾಡಿಗೆ ಬಂದು ಪ್ರಸಿದ್ಧಿ ಪಡೆಯಿತು"[೧೯] ಎಂದು ತಿಳಿಸಿದ್ದಾರೆ. ಆದರೆ ಕೊರವಂಜಿಯು ಕನ್ನಡಿಗರ ಜನ ಜೀವನದಲ್ಲಿ ಬೆರೆತದ್ದನ್ನು ಕಾವ್ಯದಲ್ಲಿ ಕಾಣುತ್ತೇವೆ. ಕ್ರಿ.ಶ. ೧೧೧೫ರಲ್ಲಿದ್ದ ಕರ್ಣಪಾರ್ಯನ ನೇಮಿನಾಥ ಪುರಾಣವೇ ಇದಕ್ಕೆ ಸಾಕ್ಷಿ ಎಂದು ತಿಳಿಸುತ್ತಾರೆ.

"ಅರ್ಜುನನ ತಪಸ್ಸು ಪಕ್ವಗೊಂಡಾಗ ಪರೀಕ್ಷಿಸಲು ಶಿವನು ಕಿರಾತನಾದನು. ಶಿವೆಯು ಕಿರಾತೆ ಯಾದಳು. ಆ ಕಿರಾತೆಯೆ ಕೊರವಿ ಎಂದು ಹೇಳುವರು. ಪುರಾಣಗಳಲ್ಲಿ ನಾರದ ಪಾತ್ರವಿದ್ದಂತೆ ಜನಪದ ಸಾಹಿತ್ಯದಲ್ಲಿ ಕೊರವಂಜಿ ಪಾತ್ರವಿದೆ. ಕೊರವಂಜಿ ಕನ್ನಡದ ನಾರದ-ನಾರದೆಯರು"[೧೦] ಎಂದು ತಿಳಿಸಲಾಗುತ್ತದೆ. ಮಹಾದೇವಿಯಕ್ಕ ಕೊರವಂಜಿಯ ಕಣಿಯ ದಾಟಿಯನ್ನು ಅನುಸರಿಸಿ 'ಹೇಳು ಕೈ ತೋರೆದುಂಡಿ' ಎಂಬ ಗೀತ ವಚನವಂತೂ ಕೊರವಂಜಿಯ ಪ್ರತಿಭೆಯನ್ನು ಸಾಕ್ಷಾತ್ಕರಿಸುತ್ತದೆ.

ಕೈತೋರೆ ಕೈತೋರೆ ಕೈತೋರೆ ದುಂಡಿ ನಿನ್ನ
ಮೈಯೊಳಗಿರ್ವ ವಸ್ತುವನ್ನು ಪೇಳುವೆನು ಎಂದು ತಿಳಿಸುತ್ತಾಳೆ".[೨೦]

ಕೊರವಂಜಿ ಒಂದು ಕಾಲಕ್ಕೆ ಜಾನಪದರ ಪ್ರೀತ್ಯಾದರಗಳಿಗೆ ಒಳಗಾದವಳು. ಕಾರ್ಯ ನೈಪುಣ್ಯತೆ ಆಕೆಯ ಪ್ರಸಿದ್ಧಿಗೆ ಕಾರಣವಾಗಿತ್ತು. ಎಷ್ಟೋ ಸಂದರ್ಭಗಳಲ್ಲಿ ಜನ ಆಕೆಗೆ ಶರಣು ಹೋಗುತ್ತಿದ್ದರು. ಆಕೆಯ ಪ್ರಭಾವವು ಹಾಗೆಯೇ ಇತ್ತು ಎಂಬುದು ಹಿಂದಿನ ಅನುಭವಗಳಿಂದ ತಿಳಿದು ಬರುತ್ತದೆ.

"ಕಣಿ ಹೇಳಲು ಬಂದೆ ಕೇಳಮ್ಮ
ಮಣಿ ಮಂತ್ರವ ಬಲ್ಲ ಕೊರವಂಜಿ ನಾನಮ್ಮ
ಮದ್ದು ಮಾಟವ ಮಾಡಲು ಬಲ್ಲೆ
ಬಿದ್ದ ಬೀಳನು ಎತ್ತಲು ಬಲ್ಲೆ
ಕದ್ದೋಡೋ ಕಳ್ಳನ ಹಿಡಿದು ಕೂಗಾಡಬಲ್ಲೆ
ಒದ್ದೋಡೋ ಗಂಡನ ಕರೆದು ಕೂಡಿಸಬಲ್ಲೆ
ಇದ್ದಂತೆ ಮಾಡಿದು ನನ್ನ ಮಗಳೆ
ಎಲ್ಲ(ವ) ಬಲ್ಲ ದೇವಲೋಕದ ಕೊರವಿ ನಾನಮ್ಮ"[೨೧]

ಕೊರವರು ಮಾಟ ಮಂತ್ರ, ವೈದ್ಯಗಳ ಬಗ್ಗೆ ತಿಳಿದವರು ಎಂಬುದು ಈ ಮಾತುಗಳಿಂದ ತಿಳಿದುಬರುತ್ತದೆ.

"ಈಕೆ ಕಣಿ ಹೇಳುವುದು ಪ್ರಾಚೀನ ತಮಿಳು ಕಾವ್ಯ "ಶಿಲಪ್ಪದಿಗಾರಮ್" ಕಾವ್ಯದಲ್ಲಿಯೇ ತೋರುತ್ತದೆ. ಕರ್ಣಪಾರ್ಯನ ನೇಮಿನಾಥ ಪುರಾಣ ಕನ್ನಡ ಕಾವ್ಯದಲ್ಲಿ, ಅಂತೆಯೇ ಶಿವಶರಣರ ವಚನಗಳಲ್ಲಿ ಕಂಡುಬರುತ್ತದೆ. ಕಣಿ ಹೇಳುವುದು ಕೊರವಂಜಿಯರ ಜನ್ಮಸಿದ್ಧ ಹಕ್ಕು. ಕಣಿ ಹೇಳುವ ವಿಧಾನಗಳು ಹಲವಾರು. ಕೊರವಂಜಿಯರು ಮೊರದಲ್ಲಿ ಅಕ್ಕಿ ಕಾಳನ್ನು ಹಾಕಿಕೊಂಡು ಅದನ್ನು ಎಣಿಸುವುದರ ಮೂಲಕ ಕಣಿ ಹೇಳುತ್ತಾರೆ. ಇಂದಿಗೂ ಗೌರಸಂದ್ರದ ಮಾರಮ್ಮನ ಜಾತ್ರೆಯಲ್ಲಿ ಕಣಿ ಹೇಳುವ ಕೊರವಂಜಿಯರು ಒಟ್ಟಾರೆ ಸೇರುತ್ತಾರೆ. ಕಣಿ ಹೇಳುವ ಕೊರವಂಜಿಯರಲ್ಲಿ ಒಂದು ಮಂತ್ರದ ಕೋಲು, ಒಂದು ಗೂಡೆ (ಬುಟ್ಟಿ) ಅದರೊಳಗೆ ಮನೆಯ ದೈವದ ಕಟ್ಟು ಇರುತ್ತದೆ. ದೇವರ ಕಟ್ಟಿಗೆ ಕವಡೆಗಳನ್ನು ಅಂಟಿಸುತ್ತಾರೆ. ಇದರೊಳಗೇನಿದೆ? ಎಂದು ಕೇಳಿದರೆ ಇದು ಬಾಣಂತಿಯ ಹಸ್ತ. ಇದನ್ನು ಭಾನುವಾರ ಸ್ಮಶಾನದಿಂದ ಶಾಂತಿ ಮಾಡಿ ತಂದು ಇಟ್ಟುಕೊಳ್ಳುತ್ತೇವೆ".[೨೨] ಅದು ಸೂರ್ಯಗ್ರಹಣ ಅಥವಾ ಚಂದ್ರಗ್ರಹಣದ ಭಾನುವಾರವೇ ಆಗಬೇಕು ಎನ್ನುತ್ತಾರೆ. ಇವರು ಕಣಿ ಹೇಳುವಾಗ ದೇವರ ಗುಡಿಯನ್ನು ಮುಂದೆ ಇಟ್ಟುಕೊಂಡು ಅದರ ಮೇಲೆ ಕಣಿ ಕೇಳುವವನ ಕೈ ಹಿಡಿದು ರೇಖೆಗಳನ್ನು ನೋಡುತ್ತಾ ಬಲಗೈಯಲ್ಲಿ ಮಂತ್ರದ ಕೋಲನ್ನು ಹಿಡಿದು ತಮ್ಮ ಮನೆ ದೇವತೆಗಳನ್ನು ಸ್ಮರಿಸಿ ಕಣಿ ಹೇಳಲು ಪ್ರಾರಂಭಿಸುತ್ತಾರೆ. ಇವರ ಕಣಿಯಲ್ಲಿ ದ್ವಂದ್ವಾರ್ಥ ಬರುವ ಶಬ್ದಗಳೇ ಹೆಚ್ಚು. ಉದಾಹರಣೆಗೆ "ಲಕ್ಷ್ಮೀ ವಿಷಯ ಕೇಳ್ತಾ ಇದೀಯಾ" ಅಂದರೆ ಆ ಲಕ್ಷ್ಮೀ ಹೆಣ್ಣು

ಆಗಬಹುದು, ಭೂಮಿ ಆಗಬಹುದು, ಸಂಪತ್ತು ಆಗಬಹುದು. ಅದೇನೆ ಇರಲಿ ಈಕೆ ಸಮಾಜದ ಸ್ವಾಸ್ಥ ಕಾಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾಳೆ ಎಂದು ಹೇಳಬಹುದು.

"ಕೊರವಂಜಿ ಕಣಿ ಹೇಳುವಾಗ ಭವಿಷ್ಯವನ್ನು ಹಾಡಿನ ಧಾಟಿಯಲ್ಲಿ ಹೇಳುತ್ತಾರೆ. ಈಚಲ ಗರಿಯಿಂದ ಮಾಡಿದ ಗಿಲಗಂಜಿ, ನೆಲವು, ಸಿಂಬಿ ಮೊದಲಾದ ವಸ್ತುಗಳನ್ನು ಮಾರಾಟ ಮಾಡುವುದು ಮತ್ತು ಹಚ್ಚೆ ಹೊಯ್ಯುವುದು ಕಂಡುಬರುತ್ತದೆ". ಈ ತರಹದ ಸಂಗೀತ ರೂಪದಲ್ಲಿ ಮುಖ್ಯ ಗುಣವೆಂದರೆ ಆಧ್ಯಾತ್ಮಿಕತೆ ಪಾತ್ರಗಳು ವಿಶಿಷ್ಟವಾದ ಸಂಕೇತಗಳಾಗಿರುತ್ತವೆ. ಜೀವಸತಿ ಜೀವಾತ್ಮನನ್ನು ಕ್ರಿಯಾಕಾಂತ ಜೀವಿಗಳು ಕ್ರಿಯೆಗಳನ್ನು ಸಿಂಗಡು ಅನಾದಿ ಕಾಲದ ಪ್ರಕೃತಿಯನ್ನು ಪ್ರತಿನಿಧಿಸುತ್ತದೆ. ಕುರುವಂಜಿ ಅಧ್ಯಾತ್ಮಜ್ಞಾನದ ಸಂಕೇತವಾಗಿಯೂ, ಸಿಂಗಿ ವಿಶ್ವದ ಮೂಲಭೂತ ಚಲನಾಶಕ್ತಿಗೆ ಸಂಕೇತವಾಗಿಯೂ ಇರುತ್ತದೆ. ಇಂತಹ ಸಂಗೀತ ಲಘುರೂಪಕಗಳ ಮಾಧ್ಯಮದಲ್ಲಿ ಜನಪದರಿಗೆ ಮತ್ತೆ ಮತ್ತೆ ತತ್ವ ಬೋಧನೆ ಮಾಡಲಾಗುತ್ತದೆ. ಧರ್ಮದ ಪ್ರಾಥಮಿಕ ಸಿದ್ಧಾಂತಗಳನ್ನು ನಾಟಕದ ನಡುವೆ ವಿನೋದವಾಗಿ ತಿಳಿಸಲಾಗುತ್ತದೆ (ಶ್ರೀ ಕೃಷ್ಣ ಪಾರಿಜಾತ).

ಇಂತಹ ಒಬ್ಬ ವ್ಯಕ್ತಿಯನ್ನು ಈ ಜನಪದ ರೂಪಕದಲ್ಲಿ ಸೇರಿಸಲಾಗಿದೆ. ರಂಗಸ್ಥಳದಲ್ಲಿ ಮೇಲೆ ಕೊರುವಂಜಿ ಬರುವುದನ್ನು ಕುತೂಹಲದಿಂದ ನಿರೀಕ್ಷಿಸಲಾಗುತ್ತದೆ. ಇದು ಸಂತೋಷವನ್ನುಂಟು ಮಾಡುವ ನಾಟಕದ ಒಂದು ವಿಷಯವಾಗಿರುತ್ತದೆ. ಅವಳ ಕೂಗು ಹಿಂದಿನ ದೃಶ್ಯದ ಒತ್ತಡವನ್ನು ಸಡಿಲಗೊಳಿಸುತ್ತದೆ. ಮುಖ್ಯವಾಗಿ ಈ ಕೊರವಂಜಿ ಪಾತ್ರದಲ್ಲಿ ಶೃಂಗಾರದ ವಸ್ತುಗಳನ್ನು ಸೇರಿಸಲಾಗುತ್ತದೆ. ಕೆಲವು ಸಾರಿ ಪ್ರೇಮಿಯೇ ಕೊರವಂಜಿಯ ಪಾತ್ರ ಧರಿಸಿ ವಿರಹಿಯಾದ ತನ್ನ ಪ್ರೇಯಸಿಯೇ ಮುಂದೆ ಬರುತ್ತಾರೆ. ಅವರ ಭೇಟಿ ಅವರ ಕೋರಿಕೆಗಳನ್ನು ಈಡೇರಿಸುತ್ತದೆ. ಉದಾಹರಣೆಗೆ ಶ್ರೀಕೃಷ್ಣನು ಸತ್ಯಭಾಮೆಗೆ ತಿಳುವಳಿಕೆ ಹೇಳಲು ಕೊರವಂಜಿಯ ರೂಪದಲ್ಲಿ ಬಂದು ತಿಳುವಳಿಕೆ ಹೇಳಿ ಹೋಗುವುದನ್ನು ಶ್ರೀಕೃಷ್ಣ ಪಾರಿಜಾತದಲ್ಲಿ ಕಂಡುಬರುವುದುಂಟು.

"ಕೊರವಂಜಿ ಕಣಿ ಹೇಳುವ ಹೆಂಗಸರಿಗೂ ಅನ್ವಯವಾಗುವ ಹೆಸರು. ಸಾಂಪ್ರದಾಯಿಕವಾಗಿ ಒಂದು ವರ್ಗದ ಹೆಂಗಸರು. ಮುಂಬರುವ ಘಟನೆಗಳನ್ನು ಹೇಳುವ ತರಬೇತಿಯನ್ನು ಪಡೆದಿರುತ್ತಾರೆ. ಅವರಿಗೆ ಕೊಡಬೇಕಾದ ಶುಲ್ಕ ಬಹಳ ಕಡಿಮೆ. ಒಂದು ಹಿಡಿ ಅಕ್ಕಿ, ಭತ್ತ ಅಥವಾ ಧಾನ್ಯ ಮತ್ತು ಸ್ವಲ್ಪ ಹಣ ಕೊಟ್ಟರೆ ಸಾಕು, ಭವಿಷ್ಯವನ್ನು ಕುರಿತು ಹೇಳುವ ಶಕ್ತಿ ಅವರಿಗಿದೆ ಎಂದು ನಂಬುವುದರಿಂದ ಅವರನ್ನು ಆಶ್ರಯಿಸಲಾಗುವುದು. ಇವರು ಗ್ರಾಮದ ಬೀದಿಗಳಿಗೆ ಬರುವುದನ್ನು ಜನರು ನಿರೀಕ್ಷಿಸುತ್ತಾ ಇರುತ್ತಾರೆ. ಆಕೆಯ ಕೂಗಾದ 'ಎರುಕ' ಎಂದರೆ ಅರಿವು ಎಂದರ್ಥ. (ಅಸ್ತಿತ್ವದ ಅರಿವನ್ನು ಪಡೆದಿರುವುದು) ಹತ್ತಿರದ ಸ್ಥಳಗಳಲ್ಲಿರುವ ದೇವದೇವತೆಯನ್ನು ಪ್ರಾರ್ಥಿಸುವ ಒಂದು ಸಾಂಪ್ರದಾಯಿಕ ಗೀತೆಯನ್ನು ಇವರು ಹಾಡುತ್ತಿದ್ದರು. ಅನಂತರ ಗುರುವಿಗೆ ಪ್ರಣಾಮವನ್ನು ಸಲ್ಲಿಸಲಾಗುತ್ತದೆ. ಆ ನಂತರ ಕಣಿ ಹೇಳುವುದು ಪ್ರಾರಂಭವಾಗುತ್ತದೆ. ಅದನ್ನು ಒಗಟುಗಳಲ್ಲಿ ಅಥವಾ ರಹಸ್ಯಾರ್ಥವುಳ್ಳ ಚಟುವಟಿಕೆಗಳಲ್ಲಿ ಹೇಳಲಾಗುತ್ತದೆ. ಅವರು ಹೇಳುವ ಮಾತುಗಳು, ವ್ಯಥೆಗಳಿಂದ ಪಾರಾಗಬೇಕೆಂದು

ಬಯಸುವ ಅನೇಕರಿಗೆ ಅನ್ವಯವಾಗುತ್ತದೆ. ಕಣಿ ಕೇಳುವವರು ಸಾಮಾನ್ಯವಾಗಿ ಚಿಂತೆಗೂ ಕಳವಳಕ್ಕೂ ಈಡಾದ ಗೃಹಸ್ಥರು, ಆಸ್ತಿಯನ್ನು ಕಳೆದುಕೊಂಡವರು, ಆಸ್ತಿಯನ್ನು ಗಳಿಸಬೇಕೆಂದುಕೊಂಡವರು. ಸಾಕುಪ್ರಾಣಿಗಳನ್ನು ಕಳೆದುಕೊಂಡವರು, ತಮ್ಮ ಪ್ರೀತಿಯವರು ಹತ್ತಿರದವರು ರೋಗಪೀಡಿತರಾಗುವವರು ಆಗಿಸುತ್ತಾರೆ. 'ಎರಕ' ಕೇಳುವುದು ಅವರಿಗೆ ನೆಮ್ಮದಿಯನ್ನು ಕೊಡುತ್ತದೆ".[೨೪]

ಹೇಳಿಕೆ ಕೇಳುವುದು ಸಾಮಾನ್ಯವಾಗಿ ಇದೇ ರೀತಿಯಲ್ಲಿರುತ್ತದೆ. ಇಲ್ಲಿಯು ತಮ್ಮ ಪ್ರತಿಯೊಂದು ಸಮಸ್ಯೆಗಳ ಬಗ್ಗೆ ತಿಳಿಸಿ, ಪರಿಹಾರ ಕೇಳಿಕೊಳ್ಳುತ್ತಾರೆ. ಪ್ರತಿಯೊಬ್ಬ ವ್ಯಕ್ತಿಯು ಇಂದಿನ ದಿನಗಳಲ್ಲಿ ಅನೇಕ ದೇವರುಗಳಿಗೆ ಹೇಳಿಕೆ ಕೇಳುವುದಕ್ಕೆ ಹೋಗುತ್ತಾರೆ. ಅವು ಎಲ್ಲ ಜಾತಿಯ ದೇವರುಗಳಾಗಿರಬಹುದು.

"ಕುರುತ್ತಿಯಾಟ ಒಂದು ಮೋಹಕ ದೃಶ್ಯಕಲೆ. ಇದು ಕೇರಳದಲ್ಲಿ ಬಹಳ ಕಡೆ ಇದೆ. ನಡೆಸುವವರು ಕುರುವರು. ಇದನ್ನು ನಾಯಕ ಜನಾಂಗವೂ ಇದನ್ನು ನಡೆಸುತ್ತಾರೆಂದು ತಿಳಿಯುತ್ತದೆ. ದೇವಸ್ಥಾನದ ಹೊರಗೆ ಉತ್ಸವದ ಸಂದರ್ಭದಲ್ಲಿ ಸಾಮಾನ್ಯ ಜನರಿಗಾಗಿ ಪ್ರದರ್ಶಿಸುವ ಕಲೆ, ದೇವಸ್ಥಾನದ ಒಳಗೆ ಸಂಭಾವಿತರಾಗಿ ಕೊತ್ತಂಗಳದಲ್ಲಿ ಕೂತ್ತು ನಡೆಯುತ್ತಿರುತ್ತದೆ. ಕುರತ್ತಿಯಾಟದಲ್ಲಿ ತಾಯಿ ಮುತ್ತಿಯಮ್ಮ ಸಾಮಾನ್ಯ ಅಟ್ಟು ಮುಂಭಾಗದಲ್ಲಿ ಕಂಚಿನ ದೀಪ ಅವರ ಪಕ್ಕ ಹಾಡುಗಾರರು, ಮೃದಂಗ ಮತ್ತು ಎಲೆತಾಳ, ವಾದ್ಯಗಳು ಜನಾಂಗದ ಸಾಂಪ್ರದಾಯಿಕ ಉಡುಗೆ ತೊಡುಗೆ ಪಾತ್ರಗಳ ವೇಷ ನಾಟಕಾರಂಭದಲ್ಲಿ ಗಣಪತಿ ಮತ್ತು ಸರಸ್ವತಿಯ ಪ್ರಾರ್ಥನೆ. ನಂತರ ಕುರುತ್ತಿಯರ ಪ್ರವೇಶ ಈ ಇಬ್ಬರಲ್ಲಿ ಒಬ್ಬಳು ಪಾರ್ವತಿ, ಮತ್ತೊಬ್ಬಳು ಲಕ್ಷ್ಮಿಯಾಗಿ ತಮ್ಮ ತಮ್ಮ ಗಂಡಂದಿರ ಮಹತ್ವ ಮತ್ತು ತಮ್ಮ ಸೌಂದರ್ಯ ಪ್ರಶಂಸೆ, ಇದು ಮುಗಿಯದ ಕಥೆಯಾಗಿ ಬಹಳ ಕಾಲ ಮುಂದುವರೆಯುತ್ತದೆ. ಸರಸ್ವತಿ ಪ್ರವೇಶಿಸಿ ಅವರಿಬ್ಬರನ್ನು ಸಮಾಧಾನ ಪಡಿಸುತ್ತಾಳೆ. ಅನೇಕ ವರಸೆಗಳ ನೃತ್ಯವನ್ನು ಮಾಡುತ್ತಾ ಕುರುವ ಪ್ರವೇಶಿಸುತ್ತಾನೆ. ಇದು ಉತ್ತರ ಸಂಪ್ರದಾಯ. ದಕ್ಷಿಣ ಸಂಪ್ರದಾಯದಲ್ಲಿ ಕುರುವ ಕುರುತ್ತಿಗಳು ಮುತ್ತಿಯಮ್ಮ ಸೇಂದಿ ವ್ಯಾಪಾರಿಗಳು ಮತ್ತು ಊರಗೌಡ ಬರುತ್ತಾರೆ. ಕುರುತಿಯರು ಪಾರ್ವತಿ ಮತ್ತು ಲಕ್ಷ್ಮಿಯಾಗಿ ಜಗಳವಾಡಿ ಹೋದ ಮೇಲೆ ಮೂರನೆಯ ರಂಗದಲ್ಲಿ ಕುರುವ ಪ್ರವೇಶಿಸುತ್ತಾನೆ. ಕಳೆದ ರಾತ್ರಿ ತನ್ನನ್ನು ಕೈ ಬಿಟ್ಟು ಹೋಲದ ಕುರತ್ತಿ ಎಲ್ಲಿ ಎಂದು ಹುಡುಕುವಾಗ ಕುರತ್ತಿ ಎದುರು ಬರುತ್ತಾಳೆ. ಹೆಂಡತಿಯ ಬಗ್ಗೆ ಸಂಶಯಗ್ರಸ್ತದಿಂದ ಕುರುವ ಅನೇಕ ರೀತಿಯ ಪ್ರಶ್ನೆಗಳನ್ನು ಹಾಕುತ್ತಾನೆ. ಆಕೆ ತನ್ನ ಅನುಭವಗಳನ್ನು ವಿವರಿಸುವುದರ ಜೊತೆಗೆ ಕುರುವನ ಪ್ರಶ್ನೆಗಳಿಗೆ ಜಾಣ್ಮೆಯಿಂದ ಉತ್ತರ ಕೊಡುತ್ತಾಳೆ. ಉತ್ತರ ಸಂಪ್ರದಾಯದಲ್ಲಿ ಏಕದೃಶ್ಯವಾಗಿ ರೂಪಿತವಾದ ಈ ನಾಟಕ ಹೆಚ್ಚು ರಂಗಗಳನ್ನು ನಿರ್ಮಿಸಿಕೊಂಡಿದೆ. ಕುರುತ್ತಿಯಾಟವನ್ನು ನಡೆಸುವವರಲ್ಲಿ ತುಳ್ಳಲ್ ನೃತ್ಯವನ್ನು ನಡೆಸುವವರೂ ಉಂಟು. ಇದರಿಂದ ನೃತ್ಯದಲ್ಲಿ ಅವರು ಹೆಚ್ಚು ಪರಿಗಣಿತರಾಗಿರುತ್ತಾರೆ. ನಂತರ ಕಾಲದಲ್ಲಿ ಹೆಣ್ಣುಗಳೇ ಹೆಣ್ಣು ವೇಷಗಳನ್ನು ಕಟ್ಟುತ್ತಿದ್ದರೆಂದು ತಿಳಿಯುತ್ತದೆ".[೨೫]

ಕೇರಳ ಜನಪದ ರಂಗಭೂಮಿಯಲ್ಲಿ ಕೊರವಂಜಿಯ ಸಾಂಪ್ರದಾಯಿಕ ಪಾತ್ರವನ್ನು ನಡೆಸುವವರು

ಕೊರವರು ಎಂದು ತಿಳಿಸಲಾಗಿದೆ. ದೇವಾಲಯಗಳ ಹೊರಭಾಗದಲ್ಲಿ ಹಬ್ಬದ ಉತ್ಸವದ ದಿನಗಳಲ್ಲಿ ಈ ಪಾತ್ರವನ್ನು ನಡೆಸುತ್ತಾರೆ ಎಂದು ತಿಳಿಸಲಾಗಿದೆ.

"ಎಂಟು ಮಂದಿಯು ನಂಟರು ನಿನಗಮ್ಮ
ಉಂಟಾದ ಹತ್ತು ದಿಕ್ಕಿನ ಒಳಗಮ್ಮ
ಗಂಟಲು ಮೆಟ್ಟಿ ಕೊಂಡೈದಾರೆ ಅಮ್ಮ
ಸುಂಟರಗಾಳಿಯಾಗಿ ತಿರುಗುವೆಯಮ್ಮ ನೀಲ
ಕಂಠನಂಘ್ರಿಯನು ಬಿಡದಿರು ಪಿಡಿಯಮ್ಮ- ಇದಕ್ಕೆ ಜನಪದವೇ ಮೂಲ ಆಕರವೆಂದು ಮಹಾದೇವಿಯಕ್ಕ ತನ್ನ ವಚನಕ್ಕೆ ನೆರವಾಗಿದೆ ಎಂದು ತಿಳಿಸುತ್ತಾರೆ.

ಎಂಟು ಮಂದಿಯು ನಿನ್ನಹ ನಂಟರು ಕಾಣೆ
ನೆಂಟರು ನಿನ್ನ ನೆಚ್ಚಿಕೊಂಡು ಇದ್ದರು ನಿನ್ನ
ಸುಂಟರಗಳಿಲಿ ತಿರುಗೂವೆಯಲ್ಲೇ"[೨೨]

"ಕೊರವಂಜಿಯ ಪ್ರಭಾವಯುತವಾದ ವರ್ಚಸ್ಸು ಅಂದರೆ ಸುಮಾರು ಕ್ರಿ.ಶ. ೧೧೧೫ಕ್ಕೆ ಕಂಡು ಬರುತ್ತಿದ್ದುದರಿಂದಲೇ ಕರ್ಣಪಾರ್ಯನು ಕೊರವಂಜಿಯನ್ನು ಬಳಸಿಕೊಂಡಿದ್ದಾನೆ.

ಕೊರವಿಯರ ರೂಪಿನಿಂದವ
ರರಿತಂ ಪೇಳಂ ಪೇವೆನುತ್ತು ಮೆಳ್ತರೆ ಕಂಡಾ
ಪರಮೆಯ ವೊಲೆಸೆವ ಕುಂತಳೆ
ಯುಱುಗುಜ್ಜಂ ಪೇಳ್ಗುಮೆಂದು ಕರೆಯಿಸೆ ಬಂದಿರ್
ವ । ಅಂತು ಬರಲವರೆ ಕಾಂತಕ್ಕಾಕಾಂತೆಯೆಯ್ದು ಮನದ ಕಾರ್ಯಮಂ,
ಪೇಳಮೆನಲವ ರಿಂತೆಂದರ್.
ಮ ॥ ಬಗೆದೈ ಗಂಡನಾಗಿಯುಂ ತರುಣನು ಮೂಲ ಬಂದ ಮಾದಿಂಗರೊಳ್
ಸೊಗಯಿಪೊರ್ವನ ನೆಂದೊಡಲ್ತು ಪ್ರಸಿದ್ಧೈಪೇಳೆಂದು ನಕ್ಕಳ್ಗೆ ಪೇಱ
ಮೃಗಾಶಾ ಬೇರ್ಪಣೆ ಪೇಳ್ದು ತಪ್ಪೆ ನನಗೆ ನೀನು ಮುಚ್ಚುವೈಸ್ವೇಚ್ಛೆಯಾ
ಗೆಗೆ ಪೇಳ್ವೆಂ ನಿಜಕಾರ್ಯ ಸಿಧಿಯನೆನಲ್ ಕೇಳ್ದಾಕೆ ಪೇಳೆಂಬುದುಂ
ಕಂ ॥ ಅದು ನಿನಗಾದಪ್ಪ್ರದು ಸ ।
ಮ್ಮದದಿಂದಿರು ದೇವಿ ದೇವಿಯಾಣೆ ವಿಷಾದಾ
ಸ್ಪದೆ ಯಾಗದಿರೆನೆ ಮನ್ನಿಸೆ
ಸುದತಿ ಸಮುತ್ಸವದಿನಿರ್ದು ಕೊರವಿಯಠಾಗಳ
ವ ॥ ಪೋಗಿ ತದ್ರೂಪರ್ಮನುಪಸುಹರಿಸಿ"[೨೩]

ಎಂಬುದರಿಂದ ಕೊರವಂಜಿಯರು ರಾಜಾಸ್ಥಾನಕ್ಕೆ ಬಂದು, ರಾಣಿಯರ ಏಕಾಂತ ಸ್ಥಳಗಳಿಗೆ

ಹೋಗಿ ಕಣಿ ಹೇಳುತ್ತಿದ್ದರು ಎಂಬುದು ತಿಳಿದುಬರುತ್ತದೆ. ಇದರಿಂದ ಅಂದಿನ ಕೊರವಂಜಿಯ ಸ್ಥಾನಮಾನದ ಬಗೆಯು ಪಾರಿಜಾತವೂ ಹೇಳಿದೆ. ಸಮಾಜದಲ್ಲಿ ಪ್ರಭಾವಯುತವಾಗಿ ತೋರುತ್ತಿದ್ದ ಕೊರವಂಜಿಯು ಶಿಷ್ಟ ಕವಿಗಳ ಗಮನ ಸೆಳೆಯುವಷ್ಟು ಸಾಮಾಜಿಕವಾಗಿ ಬೆಳೆದಿದ್ದಳು ಎಂಬುದು ಇದರಿಂದ ತಿಳಿದುಬರುತ್ತದೆ.

ಕಣಿ ಹೇಳುವ ವರ್ಣಮಯ ವ್ಯಕ್ತಿತ್ವದ ಕೊರವಂಜಿ ಬರಹಗಳಲ್ಲಿಯೂ ಹಾಡುಗಳಲ್ಲಿಯೂ ಕಾಣಸಿಗುತ್ತಾಳೆ. ಹನ್ನೆರಡನೇ ಶತಮಾನಕ್ಕಾಗಲೇ ಕೊರವಂಜಿ ಹೆಚ್ಚು ಜನಾನುರಾಗಿಯಾಗಿದ್ದರಿಂದಲೇ ಅವಳು ಕಣಿ ಹೇಳಲು ಅನುಸರಿಸುತ್ತಿದ್ದ ದಾಟಿ ನಮ್ಮ ಉಪದೇಶಕ್ಕೂ ಅನುಕೂಲವಾಗುತ್ತದೆಂದು ಅದನ್ನು ಶರಣರು ಅಳವಡಿಸಿಕೊಂಡಂತೆ ತೋರುತ್ತದೆ. ಇದಕ್ಕೆ ತಮ್ಮ ಆರಾಧ್ಯ ದೈವವಾದ ಶಿವಪಾರ್ವತಿಯರು ಕೊರವ-ಕೊರವಂಜಿ ವೇಷದಿಂದ ಜನರಿಗೆ ಕಾಣಿಸಿಕೊಳ್ಳುವ ಚಿತ್ರವು ಪ್ರೇರಣೆ ನೀಡಿರಬಹುದು.

ಪಾರ್ವತಿ ಕೊರವಂಜಿಯಾಗಿ ಕೌಸಲ್ಯೆಗೆ ಕಣಿ ಹೇಳಿದ ಕಥೆ ಅಲ್ಲದೆ ಪುರಾಣಗಳಲ್ಲಿ ಕಂಡುಬರುವ ಧರ್ಮರಾಜನನ್ನು ವಹಿಸಿದ ಕೊರವಂಜಿ ವೇಷದ ಹೆಣ್ಣೊಬ್ಬಳ ಕಥೆ ಪ್ರಧಾನವಾಗಿದೆ. ಹದಿನಾರರ ಹರೆಯದ ಗಿರಿಜೆ ಶಿವನನ್ನು ಮೆಚ್ಚಿಸುವ ಅತ್ಯುಗ್ರ ತಪಸ್ಸನ್ನು ಆಚರಿಸುತ್ತಿದ್ದಾಗ ಆಕೆಯನ್ನು ಪರೀಕ್ಷಿಸಲು ಈಶ್ವರ ಹಲವಾರು ವೇಷ ಧರಿಸುತ್ತಾನೆ. ಅಂಥ ಹಲವಾರು ಪಾತ್ರಗಳಲ್ಲಿ ಕೊರವಂಜಿಯ ಪಾತ್ರವೂ ಒಂದು.

ಡಾ. ಕೃಷ್ಣ ಕಟ್ಟಿಯವರು ಶೋಭಾನ ಪದ ಮತ್ತು ತಾಳಿಕೋಟೆಯ ಹಸ್ತಪ್ರತಿ ಹಾಗೂ ಜೀಜಾಬಾಯಿಯವರ ಚಿತ್ರರಹಿತ ಶ್ರೀಕೃಷ್ಣ ಪಾರಿಜಾತದಲ್ಲಿ ತಿಳಿಸುತ್ತದೆ. ಕೊರವಂಜಿ ಕುಕ್ಕೆ, ಎಂದರೆ ಕಣಿ ಹೇಳುವಾಗ ಕೊರವ ಹೆಣ್ಣು ಉಪಯೋಗಿಸುವ ಬುಟ್ಟಿ. ಇದರಲ್ಲಿ ಆಕೆ ಅವರು ಮಾರಾಟ ಮಾಡುವ ವಸ್ತುಗಳನ್ನು ಇಟ್ಟುಕೊಂಡಿರುತ್ತಾಳೆ. ಕೊರವಂಜಿ ಕುಕ್ಕೆಯನ್ನು ತಲೆಯ ಮೇಲೆ ಹೊತ್ತು ಕೊಂಡು ಹೋಗುತ್ತಿದ್ದಳು.

ಸಾಮಾನ್ಯ ಜನರು ಸಂಕಟ ನೋವಿನಲ್ಲಿ ನರಳುತ್ತ ಓರುಗಲ್ಲುರಾಯ ಕಣಿಯವರನ್ನು ಕರೆತರುವಂತೆ ಹೇಳಿದ್ದು, ದೇವಿಯೇ ಕಣಿಯವಳ ರೂಪ ತಾಳಿ ತಾನೇ ಬಂದು ಎಲ್ಲಮ್ಮನಿಗೆ ಓಲೆ, ಬರೆದುದರ ಫಲವೆಂದು ವಿವರಿಸಿದಳು. ಪರಿಹಾರವಾಗಿ ಮೈ ಮೇಲಿನ ಶತಕೋಟಿ ಲಿಂಗವನ್ನು ತೆಗೆದು ಪ್ರಪಂಚಕ್ಕೆ ಬಿಟ್ಟು ಎಲ್ಲಮ್ಮನಿಗೆ ಒಕ್ಕಲಾಗಬೇಕೆಂದು ಸೂಚಿಸಿದಳು. ಕೊರವಂಜಿ ಹೇಳಿಕೊಟ್ಟ ಏಳುಕೋಟಿ ಎಕ್ಕಲ್ದೆ ಉಘೇ ಎಂದೊಡನೆ ಅವರ ರೋಗಗಳೆಲ್ಲ ಅಳಿದು ಬಂಗಾರದ ಆಭರಣ ಕಿರೀಟ ಧರಿಸಿ ಶೋಭಿಸಿದನು. ಕೊರವಂಜಿ ಹೇಳಿದ ಮಾತುಗಳು ಒಂದಲ್ಲ ಒಂದು ದಿನ ಸತ್ಯವಾಗುತ್ತವೆ ಎಂಬ ನಂಬಿಕೆ ಜನರಲ್ಲಿದೆ.

ಕರ್ನಾಟಕದಲ್ಲಿ ಇವರನ್ನು ಕೊರವರು, ಕೊರಮ ಶೆಟ್ಟರು, ಭಜಂತ್ರಿಗಳು ಎಂದೆಲ್ಲ ಗುರುತಿಸಿದ್ದಾರೆ. "ಹೆಣ್ಣು ಮಕ್ಕಳನ್ನು ಕೊರವಿ, ಕೊರಮಿ, ಕೊರವಂಜಿ ಮೊದಲ ಹೆಸರುಗಳಲ್ಲಿ ಗುರುತಿಸುತ್ತಾರೆ.

ಕೊರವಂಜಿ ಶಬ್ದ ಪ್ರಮುಖ ದ್ರಾವಿಡ ಭಾಷೆಗಳಲ್ಲಿ ಕಂಡುಬರುತ್ತದೆ. ತಮಿಳಿನ ಪುಲ್ಲಿಂಗ ರೂಪ ಕುರುವನ ಎಂದಾದರೆ 'ಕುರತ್ತಿ', ಕುರವಿ, ಕುರವಂಜಿ ಎಂಬ ಹಲವಾರು ಸ್ತ್ರೀರೂಪಗಳಿವೆ. ಇದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಕೊರವಂಜಿ, ಕೊರವತಿ, ಕೊರವಿತಿ, ತೆಲುಗಿನಲ್ಲಿ ಕೊರವತ, ಕೊರವಂಜಿ ರೂಪಗಳು ಪ್ರಯೋಗದಲ್ಲಿದೆ. ಕು-ಕುರ-ಕುರು-ಕುರುವಿ-ಕೊರವಿ-ಕೊರವತಿ-ಕುರಂಜಿ-ಕೊರಮಿ-ಕೊರವಂಜಿ ಎಂದು ಕಾಲದಿಂದ ಕಾಲಕ್ಕೆ ರೂಪಾಂತರಗೊಂಡಿದೆ ಎಂದು ಹೇಳಲಾಗುತ್ತದೆ".[೨೮] ಡಾ. ಓಪರ್ಟ್ ಅವರು It is highly probable that the name and the occupation of the forune telling kuruvandlu or Kuluvandlu indeed the Telugu people to calle this tribe yarukulavandlu ಎಂದು ಹೇಳುವ ಈ ಮಾತಿನಿಂದ ಅವರ ಮಾಡುವ ವೃತ್ತಿಯಿಂದಲೇ ಜಾತಿಯ ಹೆಸರು ಬಂದಿದೆ ಎಂಬುದು ತಿಳಿಯುತ್ತದೆ.

೪.೩. ಮಹಿಳೆ ಮತ್ತು ಒಡೆತನ

ಯಾವುದೇ ಅಧಿಕಾರದ ವಲಯದಲ್ಲಿದ್ದರೂ ಮಹಿಳೆಯರು ಕೂಡ ಕುಟುಂಬದ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಬೇಕಾಗುತ್ತದೆ. ಆದ್ದರಿಂದ ಮಹಿಳೆಯರು ಸಂಪೂರ್ಣ ಸ್ವಾತಂತ್ರ್ಯವನ್ನು ಮನೆಯ ಹೊರಗಿನ ಸಾಮಾಜಿಕ ಪರಿಸರದಲ್ಲಿಯೂ ಸಹ ಅವಳ ಶಕ್ತಿ ಸಾಮರ್ಥ್ಯವನ್ನು ಉಪಯೋಗಿಸುವುದಕ್ಕೆ ಆಗುವುದಿಲ್ಲ. ಮತ್ತು ಕುಟುಂಬದ ಚಿಂತನೆಯನ್ನು ಸಾಮಾಜಿಕ ವಲಯದಲ್ಲಿ ಅಂದರೆ ಮನೆಯ ಹೊರಗಿನ ಕೆಲಸಗಳಲ್ಲಿಯೂ ಅದೇ ಚಿಂತನೆ ಮುಂದುವರೆಯುತ್ತಿರುವುದರಿಂದ ಅಲ್ಲಿಯೂ ಕೂಡ ಮಹಿಳೆಯರು ಸಬಲರಾಗುವುದಕ್ಕೆ ಸಾಧ್ಯವಿಲ್ಲ. ಉದಾಹರಣೆಗೆ ಮನೆಯ ಹೊರಗಿನ ಕೆಲಸಗಳಲ್ಲಿ ಮಹಿಳೆಯರು ದುಡಿಯುತ್ತಿದ್ದರೂ ಸಹ ಅವಳ ಶ್ರಮಕ್ಕೆ ತಕ್ಕ ಕೂಲಿ ಸಂಬಳ ದೊರೆಯುವುದಿಲ್ಲ. ಒಂದು ವೇಳೆ ದೊರೆತರೂ ಸಹ ಆ ಹಣದ ಮೇಲೆ ತನ್ನ ಅಧಿಕಾರವಿರುವುದಿಲ್ಲ. ತನ್ನ ಹತೋಟಿಯಲ್ಲಿ ಇರುವುದಿಲ್ಲ. ಹೀಗಾಗಿಯೇ ಸಾಮಾಜಿಕವಾಗಿ ಅಬಲೆ ಎನ್ನಿಸಿಕೊಳ್ಳುವ ಈ ಪರಿಸ್ಥಿತಿಗೆ ಆರ್ಥಿಕತೆಯೇ ಮುಖ್ಯ ಕಾರಣವಾಗುತ್ತದೆ.

ನಮ್ಮ ಸಮಾಜದ ಸಾಂಪ್ರದಾಯಿಕ ಪರಿಕಲ್ಪನೆಯಲ್ಲಿ ಸ್ತ್ರೀಯರು ಪುರುಷರ ದುಡಿಮೆಯ ನಡುವೆ ಭೇದಭಾವ ಹಾಗೂ ನಿರ್ಬಂಧಗಳನ್ನು ಹೇರಲಾಗುತ್ತದೆ. ''ಉದ್ಯೋಗಂ ಪುರುಷ ಲಕ್ಷಣಂ'' ಎಂದು ಹೇಳಿ ಪುರುಷರು ಹೊರಗೆ ಹೋಗಿ ದುಡಿದು ಆದಾಯ ಗಳಿಸಿ ಕುಟುಂಬವನ್ನು ನಿರ್ವಹಿಸಬೇಕು ಎಂದು ಹೇಳುತ್ತದೆ. ಆದರೆ ಮಹಿಳೆಯರು ಹೊರಗಡೆ ಹೋಗಿ ದುಡಿಯುವುದಕ್ಕೆ ನಿರ್ಬಂಧ ಹೇರಲಾಗುತ್ತದೆ. ಆದರೆ ಅವಳಿಗೆ ನೌಕರಿ ಮತ್ತು ಶಿಕ್ಷಣ ಪಡೆಯಲು ಅವಕಾಶ ಮಾಡಿಕೊಡುವುದಿಲ್ಲ. ಹಣ್ಣು ವ್ಯಾಪಾರ, ಬುಟ್ಟಿ ಹೆಣೆಯುವುದು, ಬಟ್ಟೆ ಹೊಲಿಯುವುದು, ಬಟ್ಟೆ ಮೇಲೆ ಕಸೂತಿ ಮಾಡುವುದು ಮೊದಲಾದ ಕೆಲಸಗಳನ್ನು ಮಾಡಲು ಅನುವು ಮಾಡಿಕೊಡುತ್ತಾರೆ. ಎಲ್ಲೋ ಕೆಲವರು ಮಹಿಳೆಯರು ದುಡಿಯುವುದಕ್ಕೆ ಸಹಕರಿಸುತ್ತಾರೆ. ಇನ್ನು ಕುಟುಂಬದಲ್ಲಿ ಪುರುಷರಿಲ್ಲದಿದ್ದರೆ ಮಹಿಳೆಯರು ಹೊರಗೂ ಮತ್ತು ಒಳಗೂ ದುಡಿದು ಮನೆಯ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಮನೆಯ ಒಡತಿಯಾದರೂ ಗಂಡನ ಮನೆಯಲ್ಲಿ ಅಧಿಕಾರವಿಲ್ಲದಿರುವುದು ಕಂಡುಬರುತ್ತದೆ. ಆದರೂ ಅವರನ್ನು

ಕುಟುಂಬದ ಯಜಮಾನಿ ಎಂದು ಸಮಾಜ ಗುರುತಿಸುವುದಿಲ್ಲ ಮತ್ತು ದುಡಿಮೆಗಾರಳನ್ನಾಗಿ ಪರಿಗಣಿಸುವುದಿಲ್ಲ.

ಮಹಿಳೆಯರ ದುಡಿಮೆಯು ಅನೇಕ ಸಂದರ್ಭಗಳಲ್ಲಿ ಭಾವನಾತ್ಮಕವಾಗಿರುತ್ತದೆ ಮತ್ತು ಮಾನಸಿಕವಾಗಿರುತ್ತದೆ. ಮಹಿಳೆಯರ ದುಡಿಮೆಯು ಕುಟುಂಬದ ಹಿತಾಸಕ್ತಿಗಳನ್ನು ಪೂರೈಸುವಲ್ಲಿಗೆ ಸೀಮಿತಗೊಂಡಿರುತ್ತದೆ. ಆದ್ದರಿಂದಲೆ ಮಹಿಳೆಯರು ಮಾಡುವ ಕೆಲಸ ಕಾರ್ಯಗಳು ಅರ್ಥಶಾಸ್ತ್ರಗಳಲ್ಲಿ ದುಡಿಮೆ ಎನಿಸಿಕೊಳ್ಳುವುದಿಲ್ಲ. ಏಕೆಂದರೆ ಇವು ಉತ್ಪಾದಕ ಮೌಲ್ಯವನ್ನು ಗುರುತಿಸುವಂತ ಕೆಲಸವಲ್ಲ. ಕುಟುಂಬದಲ್ಲಿ ಗಂಡನಿಗೆ ಮಕ್ಕಳಿಗೆ ಅತ್ತೆ ಮಾವಂದಿರಿಗೆ ಮತ್ತು ಕುಟುಂಬದ ಸದಸ್ಯರೆಲ್ಲರಿಗೂ ಸೇವೆ ಸಲ್ಲಿಸುವಂತದ್ದು. ಮನೆಯ ಹೊರಗಿನ ದುಡಿಮೆ, ಅಂದರೆ ಯಾವ ಉತ್ಪಾದನಾ ಚಟುವಟಿಕೆಗಳನ್ನು ಪರಿಗಣನಾತ್ಮಕವಾಗಿ ಅಳೆಯಲು ಸಾಧ್ಯವೇ, ಗಣನೆ ಮಾಡಲು ಸಾಧ್ಯವೇ? ಅವುಗಳನ್ನು ಮಾತ್ರ ಸಮಾಜ ವಿಜ್ಞಾನಗಳು ದುಡಿಮೆ ಎಂದು ಪರಿಗಣಿಸಿವೆ. ಮನೆಯ ಹೊರಗಿನ ಕೆಲಸಗಳೆಂದರೆ ಸರ್ಕಾರಿ, ಅರೆಸರ್ಕಾರಿ, ಖಾಸಗಿ ಮತ್ತು ಅಸಂಘಟಿತ ವಲಯಗಳಲ್ಲಿ ಕಾರ್ಮಿಕರಾಗಿ ಅಥವಾ ಯಾವುದೇ ಹುದ್ದೆಯನ್ನು ಪಡೆದುಕೊಂಡ ಮಹಿಳೆಯರು ತಾಯ್ತನದ ಹೊಣೆಗಾರಿಕೆಯ ಜೊತೆಗೆ ತಮ್ಮದೇ ಆದ ಕೆಲಸವನ್ನು ಅಷ್ಟೇ ಜವಾಬ್ದಾರಿಯುತವಾಗಿ ನೆರವೇರಿಸಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರು ಹೊರಗಿನ ಕೆಲಸಕಾರ್ಯಗಳಲ್ಲಿ ತೊಡಗುವುದು ಸಹ ಕಷ್ಟಕರವಾಗಿದೆ.

ಸಮುದಾಯ ವ್ಯವಸ್ಥೆಯಲ್ಲಿ ಸಂಚಾರ ಜೀವನವನ್ನು ನಡೆಸುತ್ತಿದ್ದ ಕಾಲಘಟ್ಟದಲ್ಲಿ ಗಂಡು ಹೆಣ್ಣುಗಳಿಬ್ಬರಿಗೂ ಸಮಾನವಾದ ಮುಕ್ತ ಅವಕಾಶ ಇದ್ದೇ ಇತ್ತು. ಆದರೆ ಮುಂದುವರಿದಂತೆ ಅಂದರೆ ಕೃಷಿ ಸಮಾಜಗಳು ಬೆಳೆದಂತೆಲ್ಲ ಅವರು ಒಂದೆಡೆ ನೆಲೆ ನಿಂತು ಬದುಕುವುದನ್ನು ಕಲಿತರು. ಅಂದಿನಿಂದಲೇ ಆಹಾರ ಸಂಗ್ರಹಕ್ಕೆ ಸೀಮಿತವಾಗಿತ್ತು. ಉದಾಹರಣೆಗೆ ಕೊರವಂಜಿ ಇದ್ದ ಕಾಲದಲ್ಲಿ ಅವರು ಭವಿಷ್ಯ ಹೇಳಿ, ಹಚ್ಚೆ ಹಾಕಿ ಬಂದಂತಹ ಹಣ, ಕಾಳುಕಡಿಗಳಿಂದ ಮನೆಯ ಜವಾಬ್ದಾರಿಯು ನಡೆಯುತ್ತಿತ್ತು. ಕೃಷಿಯಲ್ಲಿ ತೊಡಗಿದ ಮೇಲೆ ಬಂದಂತಹ ಹಣವು ಪುರುಷನ ಕೈಲಿರುತ್ತದೆ. ವಾಲಗ ಊದುವ ಮೂಲಕ, ಅಂದರೆ ಅಂದಿನ ದಿನದಲ್ಲಿ ಮದುವೆಯ ಸಂದರ್ಭದಲ್ಲಿ ಇವರಿಗೆ ಬೇಡಿಕೆ ಇತ್ತು. ಸಂಪಾದನೆಯಿಂದ ಆರ್ಥಿಕ ಬಲದ ಮೇಲೆ ಪುರುಷನು ಅಧಿಕಾರವನ್ನು ಪಡೆದನು. ನೆಲೆ ನಿಂತು ಮನೆಯನ್ನು ಕಟ್ಟಿಕೊಂಡು, ದುಡಿಯಲು ಮುಂದಾದುದರಿಂದ ಮನೆಯ ಒಳ ಮತ್ತು ಹೊರಗೆ ಎಂಬ ಎರಡು ಕ್ಷೇತ್ರಗಳಲ್ಲಿಯೂ ಒಡೆತನವು ಪುರುಷನ ಕೈ ಸೇರಿತು. ಆದ್ದರಿಂದ ಮನೆಯ ಕಾರ್ಯನಿರ್ವಹಣೆಗೆ ಮಹಿಳೆಯನ್ನೆ ಮೀಸಲಿಟ್ಟರು. ಆದರೂ ಅವಳು ಗಂಡನ ಜೊತೆಗೆ ಕಾಡುಗಳಿಗೆ ಸೌದೆ ಮತ್ತು ಈಚಲು ಗರಿಗಳನ್ನು ತರಲು ದೂರದೂರಿಗೆ ಹೋಗಿ ಅಲ್ಲಿ ಸ್ವಲ್ಪಕಾಲ ನೆಲೆ ನಿಂತು ಮತ್ತೆ ತಮ್ಮ ಸ್ವಂತ ಸ್ಥಳಕ್ಕೆ ಬರುವುದು ಕಂಡುಬರುತ್ತಿತ್ತು. ಸಾಮಗ್ರಿಗಳು ತಂದು ಪುರುಷನಿಂದ ಮಾರಾಟವಾದ ಮೇಲೆ ಬಂದ ಹಣವು ಅವನಲ್ಲಿಯೇ ಇರುವುದು ಕಂಡುಬರುತ್ತಿತ್ತು. ಇಂದಿನ ದಿನಗಳಲ್ಲಿ ಬೆರಳೆಣಿಕೆಯಷ್ಟು ಮಹಿಳೆಯರು ಆರ್ಥಿಕ ಬಲವನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳಲು ಮುಂದಾಗುತ್ತಿದ್ದಾರೆ. ಆದರೆ ಪುರುಷನು ಮಹಿಳೆಗೆ ಅರಿವು ಬರುವ ಮೊದಲೇ ಹತೋಟಿಯನ್ನು

ಸಾಧಿಸಲು ಸಾಧ್ಯವಾಯಿತು. ನೆಲೆ ನಿಂತ ಸಮುದಾಯವು ಮನೆಯನ್ನು ಕಟ್ಟಿಕೊಂಡಾಗ, ಮನೆಯ ಒಳಗೆ ಹಾಗೂ ಮನೆಯ ಹೊರಗೆ ಎಂಬ ಎರಡು ಕ್ಷೇತ್ರಗಳು ನಿರ್ಮಾಣವಾದವು. ಈ ಎರಡು ಕ್ಷೇತ್ರಗಳ ಕಾರ್ಯನಿರ್ವಹಣೆಗೆ ಶ್ರಮ ವಿಭಜನೆಯು ಅನಿವಾರ್ಯವಾಗಿ ಸಹಜವಾಗಿ ಮಕ್ಕಳು ಮರಿಗಳ ನಿರ್ವಹಣೆ, ಅದರೊಂದಿಗೆ ಮನೆಯೊಳಗಿನ ನಿರ್ವಹಣೆ ಹೆಣ್ಣಿನ ಪಾಲಿಗೆ ಬಂತು, ಮನೆಯ ಹೊರಗಿನ ನಿರ್ವಹಣೆ ಗಂಡಿನ ಪಾಲಾಯಿತು. ಮೂಲ ಭೂತವಾದ ಸೇವೆಯ ಸ್ವರೂಪವು ಬದಲಾಗಿರಲಿಲ್ಲ. ಮನೆಯ ಹೊರಗಿನ ಕ್ಷೇತ್ರದಲ್ಲಿಯೂ ಮಹಿಳೆ ದುಡಿಯುಲು ಪ್ರಾರಂಭಿಸಿದ್ದಳು. ಮನೆಯೊಳಗೆ ಇರುವ ಸದಸ್ಯರಿಗೂ ಒದಗುವಂತೆ ಆಹಾರವನ್ನು ಉತ್ಪಾದಿಸುವುದು. ಇಷ್ಟಾದರೂ ಮನೆಯ ಒಳಗೆ ದುಡಿಯುವುದು ಮತ್ತು ಹೊರಗೆ ದುಡಿಯುವುದೂ ಸಹಜವಾಯಿತು. ಆದರೆ ಮನೆಯ ಒಳಗೆ ದುಡಿಯುವ ಮಹಿಳೆಯ ಶ್ರಮ ಮಾತ್ರ ಕಣ್ಣಿಗೆ ಕಾಣುವಂತದಲ್ಲ, ಕೇವಲ ಅನುಭವದಿಂದ ತಿಳಿದುಕೊಳ್ಳುವಂತಹದು. ಆದರೆ ಗಂಡಸು ಶ್ರಮವಹಿಸಿ ಬೆಳೆದು ತಂದ ಆಹಾರ ಮಾತ್ರ ಕಣ್ಣಿಗೆ ದಿನನಿತ್ಯದ ಅಗತ್ಯ ವಸ್ತುಗಳಾದವು. ಯಾವ ಮಹಿಳೆಯ ಕೈಯಲ್ಲಿ ಹಣದ ಹತೋಟಿ ಇರುತ್ತದೆಯೋ ಅವರು ಕಾರ್ಯಸಾಧಿಸುವಲ್ಲಿ ಸಫಲರಾಗುತ್ತಾರೆ ಎಂದು ಹೇಳಬಹುದು.

ಪುರುಷನು ದುಡಿದಂತಹ ಹಣದಲ್ಲಿ ಮನೆಯ ಬಳಕೆಗೆ ಮಾತ್ರ ಸೀಮಿತವಾಗಿದ್ದು, ಅದನ್ನು ಇತರೆ ಕೆಲಸ ಕಾರ್ಯಗಳಿಗೆ ಉಪಯೋಗಿಸುವಂತಿಲ್ಲ ಎಂಬ ಮನೋಭಾವನೆ ಬೆಳೆಯಿತು. ಇದರಿಂದಾಗಿ ಸುಲಭವಾಗಿ ಪುರುಷನ ಹತೋಟಿಗೆ ಮಹಿಳೆ ಒಳಗಾದಳು. ಆರ್ಥಿಕ ಅವಲಂಬನೆಯೇ ಹೆಣ್ಣನ್ನು ಬಂಧನಕ್ಕೆ ಸಿಲುಕಿಸಿದ ಮೊದಲ ಸಾಧನವಾಯಿತು ಒಮ್ಮೆ ಬಂಧನಕ್ಕೆ ಒಳಗಾದ ಹೆಣ್ಣು ಹೊರಗೆ ಬರುವ ಸಾಧ್ಯತೆಗಳು ಕಾಲಕ್ರಮೇಣ ದುರ್ಬಲಗೊಳ್ಳುತ್ತಲೇ ನಡೆದವು. ನಿರ್ಬಂಧಗಳು ಹೊರಗಿನ ಪ್ರಪಂಚದೊಂದಿಗೆ ಸಂಪರ್ಕವನ್ನು ಸಂಪೂರ್ಣವಾಗಿ ಕಳೆದುಕೊಳ್ಳುವಂತೆ ಮಾಡುತ್ತಿದೆ.

ಹಿಂದಿನ ದಿನದಲ್ಲಿ ಹೆಣ್ಣು ತನ್ನ ಸಂಸಾರದ ಉನ್ನತಿಗೆ ಸುಣ್ಣದಂತೆ ಬೆಂದು, ಗಂಧದಂತೆ ತೇದು, ದೀಪದಂತೆ ಬೆಳಗುತ್ತಾ, ಸಾಮಾಜಿಕವಾಗಿ ಅರ್ಥವತ್ತಾದ ಬದುಕನ್ನು ಬದುಕುತ್ತಾ, ಆಯಾ ನೆಲೆಯಲ್ಲಿ ಬಂದ ದುಃಖ ದುಮ್ಮಾನಗಳನ್ನು ನುಂಗಿ ತವರಿಗೂ, ಗಂಡನ ಮನೆಗೂ ಅಂತೆಯೇ ನೆರೆ ಹೊರೆಯವರಿಗೆ ಪ್ರೀತಿಯ ಗರತಿಯಾಗಿ ಬಾಳುತ್ತಾ ಬಂದಿದ್ದಾಳೆ. ಉಣ್ಣಲಿಕ್ಕೂ ಗತಿಯಿಲ್ಲದೆ, ಇರುವ ಹೆಣ್ಣು, ತನ್ನೊಬ್ಬಳಿಗಲ್ಲದೆ ಇಡೀ ಸಂಸಾರಕ್ಕೆ ಆಧಾರವಾಗಿ ನಿಂತು ವಹಿಸುವ ಶ್ರಮ ಅಪಾರವಾದದ್ದು. ಅದರಲ್ಲೂ ಅಲೆಮಾರಿ ಹೆಣ್ಣು ಮಕ್ಕಳ ಜೀವನವನ್ನಂತೂ ಹೇಳುವಂತಿಲ್ಲ. ಆಕೆ ಗಾಣಕ್ಕೆ ಕಟ್ಟಿದ ಎತ್ತಿನಂತೆ ದುಡಿದು ಕುಟುಂಬದ ಸೌಖ್ಯಕ್ಕಾಗಿ ಸವೆದು ಹೋಗುತ್ತಾಳೆ. ಕೊರವರ ಹೆಂಗಸರಿಗೆ, ಅವರು ಬಸಿರಿ ಬಾಣಂತಿಯರಿದ್ದಾಗಲೂ ಚಳಿ, ಮಳೆ, ಗಾಳಿಯಿಂದ, ಬಿಸಿಲಿನ ತಾಪದಿಂದ ರಕ್ಷಣೆ ಸಿಕ್ಕುತ್ತಿರಲಿಲ್ಲ. ಆಕೆ ಇದ್ದುದರಲ್ಲಿಯೇ ತನ್ನನ್ನು ಮತ್ತು ತನ್ನ ಸಂತಾನವನ್ನು ರಕ್ಷಿಸಿಕೊಳ್ಳಬೇಕಾಗಿತ್ತು. ಅವಳಿಗೆ ಆ ಸಮಯದಲ್ಲಿಯೂ ಸಿಕ್ಕುತ್ತಿದ್ದ ವಿಶ್ರಾಂತಿ ಹೆಚ್ಚಲ್ಲ. ಬಸಿರಿಯಿದ್ದಾಗಲಂತೂ ಹಳ್ಳಿಗಳಿಗೆ ಹೋಗುವುದು ಸಾಮಾನ್ಯವಾದರೂ, ಬಾಣಂತಿ ಕೆಲವೇ ದಿನಗಳಲ್ಲಿ ತನ್ನ ನಿತ್ಯದ ಬದುಕಿಗೆ

ಸಿದ್ಧಳಾಗುತ್ತಿದ್ದಳು. ತಾವು ಉಳಿದ ಹಳ್ಳಿಯಲ್ಲಿಯೇ ಅಲ್ಪ ಸ್ವಲ್ಪ ಸಂಪಾದನೆಯನ್ನು ಮಾಡುತ್ತಿದ್ದರು. ಇಂದಿನ ದಿನಗಳಲ್ಲಿ ನೆಲೆ ನಿಂತಿದ್ದರಿಂದ ಮನೆಯಲ್ಲಿರುವುದಕ್ಕೆ ಅವಕಾಶವಾಗಿದೆ. ಇಂದಿಗೂ ಕೆಲವರು ಮಹಿಳೆಯರು ಅರೆಅಲೆಮಾರಿ ಜೀವನವನ್ನು ನಡೆಸುತ್ತಿದ್ದಾರೆ. ಆಸ್ಪತ್ರೆ, ಆರೋಗ್ಯದ ಕಾಳಜಿ ಬಗೆಗೆ ಅಷ್ಟೊಂದು ಗಮನ ಹರಿಸುವುದಿಲ್ಲ. ಇಂದಿನ ಹೆಣ್ಣು ಮಕ್ಕಳಲ್ಲಿ ತಿಳುವಳಿಕೆ ಮೂಡಿರುವುದರಿಂದ ಕೆಲವರು ಸೌಲಭ್ಯಗಳನ್ನು ಪಡೆಯಲು ಮುಂದಾಗುತ್ತಿದ್ದಾರೆ.

ತನ್ನ ಕುಟುಂಬದ ಪೋಷಣೆಯ ಕಡೆಗೆ ಆಕೆಗೆ ಗಮನ ಇರುತ್ತಿತ್ತು. ಮಕ್ಕಳಿಗೆ ಇದ್ದುದನ್ನು ಬೇಯಿಸಿಟ್ಟು, ತರತರಹದ ಸಾಮಾನುಗಳನ್ನು, ಕಸ ಬರಿಕೆಗಳನ್ನು ತಲೆ ಮೇಲೆ ಇಟ್ಟುಕೊಂಡು ಬಿಸಿಲೇರುವುದರೊಳಗೆ ಯಾವುದಾದರೂ ಒಂದು ಹಳ್ಳಿಗೆ ಸೇರಿಕೊಳ್ಳಲು ಬೇಗ ಬೇಗ ಕಾಲು ಹಾಕುತ್ತಾ ಸಾಗುತ್ತಾಳೆ. ಅವಳು ದಾರಿಯಲ್ಲಿರುವ ಅನೇಕ ದೇವರಿಗೆ ಕೈ ಮುಗಿಯುತ್ತಾ ಹೋಗುತ್ತಾಳೆ. ಕೆಲವು ಸಮಯದಲ್ಲಿ ತಂಗಳಿದ್ದರೆ ಅದನ್ನೆ ಉಂಡು, ಮಗುವಿದ್ದರೆ ಸೊಂಟಕ್ಕೆ ಎತ್ತಿಕೊಂಡು ಹೋಗುತ್ತಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಹೆಂಗಸರು ಇಬ್ಬಿಬ್ಬರು ಜೊತೆಗೂಡಿ ಹೋಗುವುದು ಕಾಣುತ್ತೇವೆ.

ಮಹಿಳೆಯರು ಹಳ್ಳಿ ಹಳ್ಳಿ, ಕೇರಿ ಕೇರಿಗೆ ಹೋಗಿ ವ್ಯಾಪಾರ ವ್ಯವಹಾರ ಮಾಡಿಕೊಂಡು ಬರುತ್ತಿದ್ದರು. ಗಂಡಸರಿಗಿಂತ ಹೆಂಗಸರೇ ವ್ಯಾಪಾರ ಮಾಡುವುದರಲ್ಲಿ ಹೆಚ್ಚು ಸೂಕ್ತವಾದರು. ಆದರೆ ವ್ಯಾಪಾರ ಮಾಡುವ ಮಾತಿನ ಸಲುಗೆಯಲ್ಲಿ ಕಾಳುಕಡಿಗಳನ್ನು ಪಡೆಯುತ್ತಿದ್ದರೂ, ಗಂಡಸರು ಮಾತ್ರ ಪಾತ್ರೆ ವ್ಯಾಪಾರ ಮಾಡಿಕೊಂಡು ಬರುತ್ತಾರೆ. ಇಂದಿನ ದಿನಗಳಲ್ಲಿ ದುಡ್ಡಿಗೆ ವ್ಯಾಪಾರವೇ ಕಡಿಮೆಯಾಗಿದೆ. ಇವರಲ್ಲಿ ವ್ಯಾಪಾರ ಕಡಿಮೆಯಾದರೂ ಸಹ ಕೆಲವೊಂದು ಹಳ್ಳಿಗಳಲ್ಲಿ ಕೊಳ್ಳುವವರು, ಬೆಳೆದ ಕಾಳು ಮನೆಯಲ್ಲಿರುವಾಗ ದುಡ್ಡುಕೊಟ್ಟು ಕಸಬರಿಗೆ ಕೊಳ್ಳುವವರ್‍ಯಾರು? ಕೊರವರಿಗೆ ಅದೇ ಬೇಕಾಗಿತ್ತು. ಆದರೆ ಆಧುನಿಕತೆಯ ಪ್ರಭಾವದಿಂದ ಕಸಬರಿಗೆ, ಬುಟ್ಟಿ ಕೊಳ್ಳುವವರು ಕಡಿಮೆ. ಅದು ಹಳ್ಳಿಗಳಲ್ಲಿ ಮಾತ್ರ ಕಾಳುಕಡಿ ಕೊಡುತ್ತಾರೆ. ನಗರ ಪಟ್ಟಣಗಳಲ್ಲಿ ಹಣ ಕೊಟ್ಟು ಕೊಳ್ಳುತ್ತಾರೆ. ಇದರಿಂದ ಕಸಬರಿಗೆ ವ್ಯಾಪಾರ ಕಡಿಮೆಯಾಗಿ ಪಾತ್ರೆ ವ್ಯಾಪಾರವೇ ಅಧಿಕವಾಗುತ್ತಿದೆ. ಆದರೆ ಬಡವರಿಗೆ ಕಸಬರಿಗೆಗಳು ಮುಖ್ಯವಾಗಿ ಬೇಕಾಗುತ್ತವೆ. ಇದರಿಂದ ಅವರ ಕಸುಬಿಗೆ ಅನುಕೂಲವಾಗುವ ಸಾಮಗ್ರಿಗಳನ್ನು ತರಲು ಹರಸಾಹಸ ಮಾಡಬೇಕಾಗುತ್ತದೆ. ಆದರೆ ಆಂಧ್ರದಲ್ಲಿಯ ಅರಣ್ಯದಲ್ಲಿ ಈಚಲು ಗರಿಗಳನ್ನು ಕಡಿಯಬಾರದು ಎಂದು ನಿರ್ಬಂಧ ಹೇರಿದರೂ ಸಹ ಈಚಲು ಗರಿಗಳನ್ನು ತೆಗೆದುಕೊಂಡು ಬರುತ್ತಾರೆ. ಆದ್ದರಿಂದ ಅವರು ತಮ್ಮ ಪ್ರದೇಶದಲ್ಲಿಯೇ ದೊರೆಯುವ ಪಾತ್ರೆ ವ್ಯಾಪಾರ ಮತ್ತು ಹಣ್ಣುಗಳ ವ್ಯಾಪಾರವೇ ಅಧಿಕವಾಗಿ ಮಾಡುವುದನ್ನು ಕಾಣಬಹುದು.

ತಾಯ್ತನ ಎಂಬುದು ಹೆಣ್ಣಿನ ಒಂದು ನಿರೀಕ್ಷಿತ ಸಹಜ ಸ್ಥಿತಿ ಮಾತ್ರವಲ್ಲ, ಅದೊಂದು ಪ್ರಕೃತಿಯ ದೊಡ್ಡ ಕೊಡುಗೆ. ಒಂದು ಹೆಣ್ಣು ಹುಟ್ಟಿ ಬೆಳೆದು, ಶಾಸ್ತ್ರೋಕ್ತವಾಗಿ ಮದುವೆಯಾಗಿ, ತಾಯಿಯಾಗಿ, ಸೊಸೆಯಾಗಿ, ಅನಂತರ ಅತ್ತೆಯಾಗಿ, ಕೊನೆಗೆ ಅಜ್ಜಿಯಾಗಿ, ತಮ್ಮ ವಂಶದ ಕುಡಿಗಳು

ಚಿಗುರುತ್ತಿರುವುದನ್ನು ಕಂಡು ಮುತ್ತೈದೆಯ ಸಾವನ್ನು ಶಿವನಿಂದ ಬೇಡಿ ಪಡೆದು, ಮುಕ್ತಿಯ ಜೀವನ ಕಾಣಲು ಬಯಸುತ್ತಾಳೆ. ಆದರೂ ಜೊತೆಗೆ ದುಡಿಮೆಯು ಮುಖ್ಯವಾಗಿರುತ್ತದೆ.

ಹೊಸದಾಗಿ ಮದುವೆಯಾದ ಹೆಣ್ಣುಮಕ್ಕಳಿಗೆ ತಾಯ್ತನದ ಬಗೆಗೆ ಒತ್ತಾಸೆಯನ್ನು ಹೇರುತ್ತಿರುತ್ತಾರೆ. ಕುಟುಂಬದ ಹಿರಿಯರು ಮದುವೆಯಾಗಿ ಸ್ವಲ್ಪವೇ ಕಾಲದಲ್ಲಿ ಗರ್ಭ ಧರಿಸಿದ ವಿಷಯ ತಿಳಿದು ಬಂದರೆ ಇದು ಗಂಡನ ಮನೆಯವರಿಗೆ ತವರು ಮನೆಯವರಿಗೆ ಸಂತೋಷದ ಸಂಗತಿಯಾಗಿರುತ್ತದೆ. ಗೌರವದ ಪ್ರಶ್ನೆ ಮತ್ತು ಗಂಡು ಮಗು ಆಗುವುದು ವಂಶೋದ್ಧಾರಕನನ್ನು ಪಡೆದಂತೆ, ಆದ್ದರಿಂದ ಹೆಣ್ಣಿಗೆ ಮುಕ್ತಿ ದೊರೆಯುತ್ತದೆ ಎಂಬ ನಂಬಿಕೆ. ಹೆಣ್ಣು ಮಗು ಆಗುವುದು ಬೇರೆಯವರ ಮನೆ ಬೆಳಕು ಎಂಬ ಭಾವನೆ ಸಮಾಜದಲ್ಲಿ ಬೇರೂರಿಬಿಟ್ಟಿದೆ. ಚೊಚ್ಚಲ ತಾಯಿಯಾದವಳು ತನ್ನ ತಾಯಿಯನ್ನು ನೆನೆದುಕೊಳ್ಳುತ್ತಾಳೆ. ಆದರೆ ಮೊಮ್ಮಕ್ಕಳನ್ನು, ಕಂಡ ವಯಸ್ಸಾದ ಮಹಿಳೆಯರು ಕೂಡ ತಮ್ಮ ತಾಯಿಯರನ್ನು ಇಂತಹ ಸಂದರ್ಭದಲ್ಲಿ ನೆನೆದುಕೊಳ್ಳುವುದು ಕಾಣುತ್ತೇವೆ. ಹೆರಿಗೆಯಾದ ಮೇಲೆ ಹೆಣ್ಣು ಮಕ್ಕಳು ತನ್ನ ತಾಯಿಯನ್ನು ಕರೆತಂದು, ಬೇಕಾದಂತೆ ಉಪಚಾರ ಮಾಡುವುದನ್ನು ಕಂಡಾಗ, ಜನಪದ ಜೀವನದಲ್ಲಿ ತಾಯಿಗೆ ಪರಮಪೂಜ್ಯತೆ ಇದೆ ಎಂದು ಒಪ್ಪಬೇಕಾಗುತ್ತದೆ. ತನ್ನ ಮಕ್ಕಳ ಬೇಕು ಬೇಡಗಳನ್ನು, ಬವಣೆ ಬೇಸರಗಳನ್ನು ಸರಿಯಾಗಿ ಗುರುತಿಸಲು ತಾಯಿಯಾದವಳು ಮಮ್ಮಲ ಮರುಗುವಳು. ಅದೇ ರೀತಿ ಗಂಡು ತಾಯಿಯ ಸ್ಥಾನ ಪಡೆಯಲು ಸಾಧ್ಯವಾಗುತ್ತದೆಯೇ?

ಗಂಡನ ಮನೆಯಲ್ಲಿ ಬಾಳುತ್ತಿರುವ ಹೆಣ್ಣು ಮಕ್ಕಳಿಗೆ ತಾಯಿಯದೇ ಧ್ಯಾನ. ತಾಯಿಯನ್ನು, ತವರನ್ನು ಬಿಟ್ಟು, ಕರ್ತವ್ಯಕ್ಕೆ ಕಟ್ಟು ಬಿದ್ದು, ಮತ್ತೆ ಗಂಡನ ಮನೆಗೆ ಅಥವಾ ಅತ್ತೆಯ ಮನೆಗೆ ಹಿಂದಿರುಗಬೇಕಾದಾಗಲೂ ತಾಯಿಯದೇ ಹಂಬಲ ಇರುತ್ತದೆ.

ಗಂಡಸಿನ ಪರಮಾಧಿಕಾರವನ್ನು ಒಪ್ಪಿಕೊಂಡಿರುವ ಮಹಿಳೆಯರಿದ್ದಾರೆ. ಪುರುಷರ ಅಹಂಕಾರದ ಲಯಗಳನ್ನು ಛಿದ್ರಗೊಳಿಸಿದ ಹೆಣ್ಣುಗಳಿದ್ದಾರೆ. ಜಗತ್ತಿನಲ್ಲಿ ಇದುವರೆಗೆ ಗಂಡು ಎಂಬ ಒಂದು ಕಣ್ಣಿನಿಂದ ನೋಡಿ, ನೋಡಿದ್ದನ್ನೇ ಸರ್ವಸ್ವ ಎಂದು ಭ್ರಮಿಸಿ ಅದನ್ನೆ ಅಧಿಕೃತವೆಂದು ಹೇಳುತ್ತ ಬಂದಿದ್ದೇವೆ. ಹೆಣ್ಣು ಎಂಬ ಇನ್ನೊಂದು ಕಣ್ಣನ್ನು ಮುಚ್ಚಿಕೊಂಡಿದ್ದರಿಂದ ನಮಗೆ ಇದುವರೆಗೆ ಆಂಶಿಕ ಸತ್ಯಗಳನ್ನು ಮಾತ್ರ ಗೋಚರಿಸಿವೆ. ಮನುಷ್ಯನಿಗೆ ಒಂದು ಕಣ್ಣಿನಿಂದ ನೋಡಲು ಸರಿಯಾಗಿ ಬರುವುದಿಲ್ಲ. ಎರಡು ಕಣ್ಣು ಬೇಕು ಆದ್ದರಿಂದ ಹೆಣ್ಣು ಗಂಡು ಇಬ್ಬರು ಬೇಕಾಗಿರುತ್ತಾರೆ. ಒಂದು ಕಣ್ಣಿಗೆ ನೋವಾದರೆ ಇನ್ನೊಂದು ಕಣ್ಣಿನಲ್ಲಿ ನೀರು ಬರುತ್ತದೆ. ಆದರೆ ಗಂಡು ಎಂಬ ಕಣ್ಣಿಗೆ ಹೆಣ್ಣಿನ ಬಗ್ಗೆ ಕಣ್ಣೀರು ಬರುವುದಿಲ್ಲವೇ? ಈಗ ಹೆಣ್ಣೆಂಬ ಕಣ್ಣನ್ನು ತೆರೆಯುವುದರಿಂದ ಗಂಡೆಂಬ ಕಣ್ಣನ್ನು ಮುಚ್ಚುವುದೆಂದು ಭಾವಿಸಬೇಕಾಗಿಲ್ಲ. ಬದಲಾಗಿ ಒಂಟಿ ಕಣ್ಣಿನ ಮಿತಿಗಳನ್ನು ಗುರುತಿಸುವುದು ಮತ್ತು ಎರಡು ಕಣ್ಣುಗಳ ನೋಟವನ್ನು ಎಂಬ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳುವುದೇ ಆಗಿದೆ. ಅರಿವಿನ ವಲಯಗಳ ವಿಸ್ತರಣೆ ಯಾವುದೇ ಹೋರಾಟಕ್ಕೆ ಅಡ್ಡಾಗಲಾರದು, ಆಗಬಾರದು ಎಂಬ ಅಭಿಪ್ರಾಯವನ್ನು ಡಾ. ಪುರುಷೋತ್ತಮ ಬಿಳಿಮಲೆಯವರು ತುಂಬ ಸ್ಪಷ್ಟವಾಗಿ ತಿಳಿಸಿದ್ದಾರೆ.

ಹೆಂಡತಿಯ ಬಗ್ಗೆ ಗಂಡನಿಗೆ ತಿಳುವಳಿಗೆ ಇರಬೇಕಾಗುತ್ತದೆ. ಕುಟುಂಬದಲ್ಲಿ ಮುಖ್ಯವಾಗಿ ತಂದೆ ತಾಯಿ ಮಕ್ಕಳನ್ನು ಬೆಳೆಸುವಲ್ಲಿ, ಅಭಿವೃದ್ಧಿ ಪಡಿಸುವಲ್ಲಿ ಇವರು ಮುಖ್ಯವಾಗುತ್ತಾರೆ. ಇಲ್ಲವೇ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ರೀತಿಯಲ್ಲಿ ಹೆಣ್ಣನ್ನು ನೋಡಲಾಗುತ್ತದೆ. ಮಹಿಳೆಯು ಆದಿಕಾಲದಿಂದಲೂ ಎಲ್ಲ ಸಮಾಜಗಳಲ್ಲೂ ಬಾರಿ ಸಂತಾನೋತ್ಪತ್ತಿಯ ಮತ್ತು ಮನೆಕೆಲಸಕ್ಕೆ ಮಾತ್ರವೇ ಸೀಮಿತ ಎಂಬ ಮನೋಭಾವನೆಯಲ್ಲಿ ಬದುಕುತ್ತಿರುವುದು ಕಾಣಬಹುದು. ಆದರೆ ಮಹಿಳೆಯು ತನ್ನ ಅಭಿವ್ಯಕ್ತಿಯನ್ನು ಹಿರಿಯರಿಗೆ ಹೇಳಿಕೊಳ್ಳಲಾಗದೇ ಮೌನಗೌರಿಯಂತೆ ಇರಬೇಕಾಗುತ್ತದೆ. ಪುರುಷರಿಗೆ ಮಹಿಳೆಯು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಆಯಾ ಸಮುದಾಯದಲ್ಲಿ ಸಹಾಯಕವಾಗಿರುವುದು ಕಂಡುಬರುತ್ತದೆ. ಆದರೆ ಇದನ್ನು ಪುರುಷ ವ್ಯವಸ್ಥೆ ಒಪ್ಪಿಕೊಳ್ಳುವುದಿಲ್ಲ. ಅವಳು ಕರ್ತವ್ಯ ಮಾಡಲೇಬೇಕು ಎಂದು ಹೇಳುತ್ತಾರೆ.

ಕಳೆದ ಅರವತ್ತು ವರುಷಗಳಲ್ಲಿ ಸಂಭವಿಸಿದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತ್ಯಂತರಗಳು ಮಹಿಳೆಯರ ಬಂಧವಿಮೋಚನೆಗೆ ಹೆಚ್ಚಾಗಿ ನೆರವಾಗಿವೆ. ಸ್ತ್ರೀ ಶಿಕ್ಷಣ, ಪಟ್ಟಣಗಳಿಗೆ ವಲಸೆ ಹೋಗುವುದರಿಂದ ಜಾತಿಯ ಪ್ರಭಾವ ಮತ್ತು ವರದಕ್ಷಿಣೆಯ ಬೇಡಿಕೆ ಇವು ಕೆಲವೊಂದು ವಿಚಾರಣೀಯ ಅಂಶಗಳಾಗಿವೆ. ಚುನಾವಣೆಗೆ ಸ್ಪರ್ಧಿಸುವುದು, ನೂರಾರು ಸುಶಿಕ್ಷಿತ ಹುಡುಗಿಯರು ಕಾರ್ಯಕರ್ತರು ಗ್ರಾಮಸೇವಕಿಯರು, ಶಿಕ್ಷಕಿಯರು, ವ್ಯಾಪಾರ ಮಾಡುವವರು, ಬೆರಳಚ್ಚುಗಾರ್ತಿಯರು, ಅಧಿಕಾರಿಗಳು, ವೈದ್ಯರು ಹಾಗೂ ಸಂಶೋಧಕ ವಿದ್ಯಾರ್ಥಿಗಳಾಗಿ ಕೆಲಸ ಮಾಡುತ್ತಿದ್ದಾರೆ ಎಂಬುದು ಗೌರವದ ಸಂಗತಿಯಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರು ಈಗ ಗ್ರಾಮ ಪಂಚಾಯತಿ ಸದಸ್ಯರಾಗಿ ಮತ್ತು ಕೆಲವೊಮ್ಮೆ ಪಂಚಾಯಿತಿಗಳ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸುಶಿಕ್ಷಿತ ಸ್ತ್ರೀಯರು ಪರಂಪರಾಗತವಾದ ವಿವಾಹ ಪದ್ಧತಿಯನ್ನು ಅಷ್ಟೊಂದು ಒಪ್ಪುವುದಿಲ್ಲ. ಆದರೆ ಸ್ತ್ರೀ ಪುರುಷರು ಒಬ್ಬರನೊಬ್ಬರು ಪರಸ್ಪರ ಅರಿಯುವ ಮನೋಭಾವವು ಕೆಲವರಲ್ಲಿ ಕಂಡುಬರುತ್ತದೆ. ಉದಾಹರಣೆಗೆ ಬೆರಳೆಣಿಕೆಯಷ್ಟು ಪ್ರೇಮ ವಿವಾಹಗಳು, ಇಂದಿನ ದಿನಗಳಲ್ಲಿ ಸ್ವಲ್ಪ ಬದಲಾವಣೆ ಯಾಗಿದ್ದರೂ ಇಂತಹ ವಿವಾಹಗಳನ್ನು ಕೆಲವೊಬ್ಬರು ಒಪ್ಪಿಕೊಳ್ಳುವರು. ಆದರೆ ಜಗಳವಾಡಿ ಮದುವೆ ಮಾಡಿಕೊಂಡು ಬೇರೆ ಮನೆ ಮಾಡಿಕೊಳ್ಳುತ್ತಾರೆ. ಇವರು ಅತ್ತೆ ಮಾವಂದಿರುಗಳಿಗೆ ಹೊಂದಿಕೊಳ್ಳದೇ ಜೀವನ ನಡೆಸುತ್ತಾರೆ. ಅವರು ಪ್ರತ್ಯೇಕವಾಗಿ ಮನೆ ಮಾಡಲು ಬಯಸುತ್ತಿದ್ದಾರೆ. ಹುಡುಗಿಯರು ತಡವಾಗಿ ಮದುವೆಯಾದಾಗ ಹುಟ್ಟಿದ ಮನೆ ಹಾಗೂ ಕೊಟ್ಟ ಮನೆಗಳ ಬಗೆಗಿನ ಸ್ಪರ್ಧಾತ್ಮಕ, ನಿಷ್ಠೆಗಳ ನಡುವಣ ಘರ್ಷಣೆಯು ತೀವ್ರಗೊಳ್ಳುತ್ತದೆ. ಮನೆಗೆಲಸ ಮಾಡುವುದು ಮತ್ತು ಯಾವುದೊಂದು ವೃತ್ತಿಯನ್ನು ಕೈಗೊಳ್ಳುವದು ಇವುಗಳ ನಡುವೆ ಘರ್ಷಣೆಯ ಸಂಭವಿಸುವುದು ಇಂದಿನ ವಿವಾಹಗಳ ಸ್ಥಿರತೆಯನ್ನು ಇನ್ನು ಮುಂದೆ ನಂಬುವಂತಿಲ್ಲ. ಕಾರಣ ಮದುವೆಯಾದ ಗಂಡು ಹೆಣ್ಣು ತಮ್ಮ ಇಚ್ಛೆಯಂತೆ ವಿಭಕ್ತವಾಗಿರಲು ಬಯಸುತ್ತಿದ್ದಾರೆ. ತಂದೆ ತಾಯಿಗಳನ್ನು ದೂರಮಾಡುವ ಪರಿಸ್ಥಿತಿ ಉದ್ಭವಿಸುತ್ತಿದೆ.

ಗಂಡಸರು ಅಡವಿಗೆ ಹೋಗಿ ಹುಲ್ಲು, ಪೊರಕೆಯನ್ನು ಕೊಯ್ದು ತಂದು ಹಾಕಿದ್ದರೆ. ಇವರ ಜೊತೆಗೆ ಹೆಂಗಸರು ಸಹ ಹೋಗಿ ಬರುತ್ತಾರೆ. ತಂದ ಪೊರಕೆ ಸಾಮಗ್ರಿಯಿಂದ ಹೆಂಗಸರು ಕಸಬರಿಗೆ, ಬುಟ್ಟಿ, ತಯಾರಿಸಿ, ಮಾರಾಟಕ್ಕೆ ಊರೂರಿಗೆ ಹೋಗಿ ಬರುತ್ತಾರೆ. ಹೆಂಗಸರು ಮಾರಾಟಕ್ಕೆ ಹೋದ ಜಾಗದಲ್ಲಿ ಕಾಡಿ ಬೇಡಿಕೊಂಡು ಬಂದು ಊಟ ಮಾಡಿ ಕಾಲ ಕಳೆಯುವವರು ಇದ್ದಾರೆ. ಪುರುಷರು ಕಾಡಿನ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡುತ್ತಾರೆ. ಇವರಿಗೆ ಮಾಂಸ ಪ್ರಿಯವಾದ ಆಹಾರವಾಗಿದೆ. ಜೊತೆಗೆ ಸಾರಾಯಿ ಇರಲೇಬೇಕಾಗುತ್ತದೆ. ಆಂಧ್ರದ ಕಡೆ ವ್ಯಾಪಾರ ಮಾಡುವವರು ಸುಸ್ತು ಆದಾಗ ಕತ್ತೆಗಳ ಮೇಲೆ ಹೇರಿಕೊಂಡು ಮುಂದಿನ ಊರಿಗೆ ಹೋಗುವುದು ಇಂದಿಗೂ ಕಂಡು ಬರುವ ಸಂಗತಿಯಾಗಿದೆ. ಕಸಬಾರಿಗೆ, ಚಾಪೆ, ಬುಟ್ಟಿ ಹೆಣೆಯಲು ಪೊರಕೆ ಬಾರಲುಗಳನ್ನು ಒದಗಿಸುವ ಈಚಲಮರ ಕೊರವರಿಗೆ ಜೀವನಾಧಾರವಾಗಿದೆ. ಈಚಲು ಗರಿಗಳನ್ನು ಕತ್ತರಿಸಲು ಕುಡುಗೋಲು ಮುಖ್ಯವಾಗಿದೆ. ಕುಡುಗೋಲು ಬಗ್ಗೆ ದೊರೆತ ಮಾಹಿತಿ ಈ ರೀತಿಯಲ್ಲಿದೆ. ಒಮ್ಮೆ ದೇವರು ಕೊರವ ಜಾತಿಯವನಿಗೆ ನಿನಗೆ ಏನು ಬೇಕು ಕೇಳು ಎಂದನಂತೆ ಕೊರವರು ಮರ್‍ಯಾದೆ ಮುಚ್ಚಲು ಒಂದು ಲಂಗೋಟಿ, ದುಡಿಯಲು ಒಂದು ಕುಡುಗೋಲು ಕೊಡು ಎಂದು ಕೇಳಿದನಂತೆ ದೇವರು ಅವುಗಳನ್ನು ದಯಪಾಲಿಸಿದನಂತೆ. ಅಂದಿನಿಂದ ಕೊರವನ ಹತ್ತಿರ ಯಾವಾಗಲೂ ಕುಡುಗೋಲು ಇದ್ದೆ ಇರುತ್ತದೆ ಎಂಬ ನಂಬಿಕೆ ಇಂದಿಗೂ ಇದೆ.

ಗಂಡಸರು ಸಿದ್ಧಪಡಿಸಿದ ಬುಟ್ಟಿಯನ್ನು ಹೆಂಗಸರು ಮಾರಿಕೊಂಡು ಬರುತ್ತಾರೆ. ಕೆಲವರು ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ಹಗ್ಗ, ನೆಲವು, ಕಸಬರಿಗೆ, ಗಿಲಗಿಂಚಿ, ಮೊದಲಾದವುಗಳನ್ನು ಊರಿನಿಂದ ಊರಿಗೆ ಹೋಗಿ ಮಾರಿಕೊಂಡು ಬರುತ್ತಾರೆ. ಹಿಂದಿನ ಕಾಲದಲ್ಲಿ ಹಣಕ್ಕಿಂತ ಹೆಚ್ಚಾಗಿ ಕಾಳುಕಡಿ, ಹಲವಾರು ಧಾನ್ಯಗಳು ಇವರಿಗೆ ನೀಡಿ ಕಸಬರಿಗೆಯನ್ನು ಪಡೆಯುತ್ತಿದ್ದರು. ಇಂದಿನ ಕಾಲದಲ್ಲಿಯೂ ಕೆಲವು ಕಡೆ ಒಕ್ಕಲಿಗರಿಗೆ ಅಥವಾ ರೈತ ಜನರಿಗೆ ಕಸಬರಿಗೆ, ಕಣ್ಣಿಗಳನ್ನು ಕೊಳ್ಳುತ್ತಿದ್ದರೆ. ಹಿಂದಿನ ಕಾಲದಲ್ಲಿ ಸೇರು ರೂಪದಲ್ಲಿ ಧಾನ್ಯವನ್ನು ಲೆಕ್ಕ ಮಾಡುತ್ತಿದ್ದರು. ಎರಡು ಸೇರು ಜೋಳಕ್ಕೆ ಒಂದು ಕಸಬರಿಗೆ ಮತ್ತು ಇದರ ಜೊತೆಗೆ ಕೊರವ ಹೆಂಗಸರು ಭಿಕ್ಷೆಯನ್ನು ಬೇಡುತ್ತಾರೆ. ಇಂದಿನ ದಿನದಲ್ಲಿ ಇವು ಕ್ರಮೇಣ ಕಡಿಮೆಯಾಗುತ್ತಾ ಬಂದಿದೆ. ಆಧುನಿಕತೆಯ ಪ್ರಭಾವದಿಂದ ಇವರು ಕಸುಬುಗಳನ್ನು ಮುಂದೆ ಕಾಣುವುದು ಕಷ್ಟವಾಗಬಹುದು. ನಗರದಲ್ಲಿ ವಾಸಿಸುವವರು ಉತ್ತಮ ಸ್ಥಿತಿಯಲ್ಲಿರುತ್ತಾರೆ. ಹಳ್ಳಿಯಲ್ಲಿ ವಾಸವಾಗಿರುವವರು ಮಧ್ಯಮ ಸ್ಥಾನದಲ್ಲಿ ಇರುವುದು ಕಾಣಬಹುದು. ವೃತ್ತಿಯು ಕಡಿಮೆಯಾಗಿ, ಹೊಸ ಉದ್ಯೋಗಗಳನ್ನು ಅವಲಂಬಿಸುತ್ತಿದ್ದಾರೆ. ಹಚ್ಚೆ ಹಾಕುವುದು, ಕಣಿ ಹೇಳುವ ಕೊರವಂಜಿಯು ಇಂದಿನ ದಿನಗಳಲ್ಲಿ ಕಾಣುವುದು ಅಪರೂಪವಾಗಿದೆ. ಹಿಂದಿನ ದಿನಗಳಲ್ಲಿ ಕಣಿ ಕೇಳುವವರು ಸಂಪ್ರದಾಯ ನಿಷ್ಠಾವಂತರಾಗಿದ್ದರು. ಆದರೆ ಇಂದಿನ ದಿನಗಳಲ್ಲಿ ಇದನ್ನು ವಿಮರ್ಶೆ ಮಾಡುವವರುಂಟು. ಎಂದು ಕಣಿ ಹೇಳುವ ಅಜ್ಜಿ ಹೇಳುತ್ತಾಳೆ.

ಗಂಡಸರು ಬಲವುಳ್ಳವರು, ಶೌರ್ಯವುಳ್ಳವರು, ಗಟ್ಟಿಯಾಗಿರುವವರು ಎನ್ನುವ ಸಾಮಾಜಿಕ

ನಂಬಿಕೆಯನ್ನೇ ದೃಢಪಡಿಸುತ್ತದೆ. ಮಹಿಳೆಯ ಮೇಲೆ, ಪುರುಷ ಪ್ರಧಾನ ಸಮಾಜ ಯಾವ ಮೌಲ್ಯಗಳನ್ನು ಆರೋಪಿಸಿದೆಯೋ ಅದೇ ಮೌಲ್ಯಗಳು ಅವರ ಕಲೆಗಳಲ್ಲೂ ಉಳಿದುಕೊಂಡು ಬರುವಂತೆ ಪುರುಷ ಸಮಾಜ ಎಚ್ಚರ ವಹಿಸಿದೆ. ಹಾಡು, ಹಸೆ, ಹಚ್ಚೆ, ಚಿತ್ರಕಲೆ, ಹಲವು ಬಗೆಯ ಮಹಿಳಾ ಜನಪದ ಕಲೆಗಳಲ್ಲಿ ಹೆಣ್ಣು ಉಪಭೋಗ ಹಾಗೂ ಆಲಂಕಾರಿಕ ಗೊಂಬೆಯಾಗಿಯೇ ಚಿತ್ರಿತವಾಗಿರುವಳೂ ಮಹಿಳಾ ಕಲೆಗಳಲ್ಲಿ ಕೈ ಮತ್ತು ಕಣ್ಣಿನ ಪಾತ್ರ ಹೆಚ್ಚಾಗಿರುತ್ತದೆ. ಪುರುಷರನ್ನು ಎದುರಿಸಲಾಗದೆ ಕೈ ಮತ್ತು ಕಣ್ಣು ಸನ್ನೆಯಲ್ಲಿಯೇ ನೋಡುತ್ತಾಳೆ. ದೀರ್ಘ ಸಮಯವನ್ನು ಅಪೇಕ್ಷಿಸುವ ಅವಳ ಕಲೆಗಳು ಸಮಾಜ ಹೆಣ್ಣಿಗೆ ಆರೋಪಿಸಿದ ಸಂಯಮ ಹಾಗೂ ಸೂಕ್ಷ್ಮತೆಯನ್ನು ನಿರೀಕ್ಷಿಸುತ್ತದೆ.

ಉತ್ಪಾದನಾ ಗುಣಗಳನ್ನು ಬಿದಿರಿನ ಬುಟ್ಟಿ, ಕಸಬರಿಗೆ, ಪಾತ್ರೆ ವ್ಯಾಪಾರ, ಬಟ್ಟೆ ವ್ಯಾಪಾರ, ಕೂದಲು ವ್ಯಾಪಾರ, ಸೂಜಿಪಿನ್ ಮಾರುವುದು, ಆಧುನಿಕ ಪ್ಲಾಸ್ಟಿಕ್ ಸಾಮಾನು ಮಾರಾಟ, ಕೃಷಿ ಮಾಡುವುದು, ಅನೇಕ ಕಡೆಗಳಲ್ಲಿ ದುಡಿಯುವುದು, ಬೇರೆ ಮನೆ ಕೆಲಸ ಮಾಡುವುದು ಇನ್ನೂ ಅನೇಕ, ಕಡೆಗಳಲ್ಲಿ ಮಹಿಳೆಯರು ಕೆಲಸಗಳನ್ನು ಮಾಡುತ್ತಾರೆ. ಇವೆಲ್ಲವೂ ಕುಟುಂಬದ ಸಲುವಾಗಿ ಮತ್ತು ಆಸೆ ಆಕಾಂಕ್ಷೆಗಳನ್ನು ಪಡೆಯುವುದಕ್ಕೆ ಮಾಡಲಾಗುತ್ತಿದೆ. ಇಂದಿನ ಸಮಾಜದಲ್ಲಿ ನಾವು ಯಾವ ರೀತಿಯಲ್ಲಿ ಇರಬೇಕು ಎಂಬುದನ್ನು ತಿಳಿದಿರುವ ಹೆಣ್ಣು ಇಷ್ಟೆಲ್ಲ ಕೆಲಸ ಮಾಡಿ ಮುಂದೆ ಬರುವ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ. ಹಚ್ಚೆಯಂತಹ ಮಹಿಳಾ ಜನಪದ ಕಲೆಗಳಲ್ಲಿ ಉತ್ಪಾದನೆ ಕಾಣಿಸಿಕೊಂಡರೂ ಅದು ಆಂಶಿಕವಾಗಿ ಬರುತ್ತವೆ ವಿನಃ ಪುರುಷ ದೃಷ್ಟಿಯಲ್ಲಿ ಅವು ಪ್ರಧಾನವಾಗಿರುವುದಿಲ್ಲ. ಮಹಿಳಾ ಜನಪದ ಕಲೆಗಳು ಉಪಯುಕ್ತತೆಯ ಆಯಾಮಗಳನ್ನು ಹೊಂದಿದೆ. ಅವಳ ಕಲೆಗಳು ಮಾರುಕಟ್ಟೆಗೆ ಬಂದಾಗ ಪುರುಷರಿಗೆ ಹಸ್ತಾಂತರವಾಗುತ್ತವೆ.

ಮಹಿಳೆಯರ ಪಾಲಿಗೆ ಚಿತ್ರಕಲೆ, ಕಸೂತಿಯಂತಹ ಕಲೆಗಳು ಕೇವಲ ಹವ್ಯಾಸದ ಕಲೆಗಳಾಗಿ ರುವುದಿಲ್ಲ. ಅವು ಒಂದು ಹೆಣ್ಣು ಸುಸಂಸ್ಕೃತಳು ಎನ್ನುವುದನ್ನು ನಿರೂಪಿಸುವ ಮಾನದಂಡಗಳಾಗಿರುತ್ತದೆ. ಮಹಿಳೆಯರು ಸುಸಂಸ್ಕೃತ ಹೆಂಡತಿ, ಸೊಸೆ, ಮಗಳು ಆಗಬೇಕಾದರೆ ಮನೆಗೆಲಸ, ಕಸೂತಿ, ರಂಗೋಲಿ, ಚಿತ್ರಕಲೆ ಮೊದಲಾದವುಗಳನ್ನು ಬಲ್ಲವಳಾಗಿರುತ್ತಾರೆ. ಆದರೆ ಮಹಿಳೆಯರು ಬೆಳಗಿನಿಂದ ರಾತ್ರಿಯವರೆಗೆ ಮನೆಗೆಲಸಗಳನ್ನು ಮಾಡುವುದರಲ್ಲಿ ಸಮಯ ಕಳೆಯುತ್ತಾರೆ. ಇದರಲ್ಲಿಯೇ ಅಲ್ಪ ಸ್ವಲ್ಪ ವೇಳೆಯಲ್ಲಿ ಕಸೂತಿ, ಚಿತ್ರಕಲೆ, ರಂಗೋಲಿ ಕಲಿತಿರುತ್ತಾರೆ. ಇನ್ನು ಅವರಿಗೆ ಎಲ್ಲಿದೆ ಸಮಯ? ಮನೆಯ ಒಳ್ಳೆಯ ಗೃಹಿಣಿಯಾಗಬೇಕಾದರೆ ಅವಳು ಎಲ್ಲವನ್ನು ಕಲಿತಿರಬೇಕಾಗುತ್ತದೆ. ಇಲ್ಲವಾದರೆ ಗಂಡನ ಕೈಯಲ್ಲಿ ನಿಂದನೆಗೆ ಒಳಗಾಗುತ್ತಾಳೆ.

ಪುರುಷಪ್ರಧಾನ ಕುಟುಂಬದಲ್ಲಿ ಅಧಿಕಾರದ ಚುಕ್ಕಾಣಿ ಇರುವುದು ಪುರುಷರಿಗೆ ಮಾತ್ರ. ಪುರುಷರು ಆತನ ಸಂಬಂಧಿಗಳೆಂಬ ಏಕೈಕ ಕಾರಣಕ್ಕಾಗಿ ಆತನ ತಾಯಿ ಅಕ್ಕ ತಂಗಿಯರು, ಅತ್ತಿಗೆ ಮತ್ತು ಇತರೆ ಬಂಧುಗಳ ಮೇಲೆ ದೈಹಿಕ ದಂಡನೆ ಮತ್ತು ಮಾನಸಿಕ ದಂಡನೆ ಯಾವ ಮಾರ್ಗವನ್ನು ಸಹ ಬೇಕಾದರೂ ಅನುಸರಿಸಬಹುದು. ಉದಾಹರಣೆ ಓದಲು ಸ್ತ್ರೀಯರು ಮುಂದಾದರೆ, ಪುರುಷನಿಗೆ

ಇಷ್ಟವಿಲ್ಲದಿದ್ದರೆ. ಓದಿ ಯಾರ ಉದ್ಧಾರ ಮಾಡಬೇಕು? ಎಂದು ಎಲ್ಲಿಗೂ ಹೋಗದೆ ಮನೆಯಲ್ಲಿ ಸುಮ್ಮನೆ ಬಿದ್ದಿರು ಎಂದು ಬಯ್ಯುತ್ತಾರೆ. ಅವಳ ಮನಸ್ಸಿಗೆ ಯಾವ ಪರಿಣಾಮ ಬೀರಬಹುದು ಎಂಬುದನ್ನು ಯೋಚಿಸುವುದಿಲ್ಲ. ಏಕೆಂದರೆ ನಾನು ಹೇಳಿದ್ದೇ ಸರಿ ನನ್ನದೇನು ತಪ್ಪಲ್ಲ, ಅವಳು ಹೇಳುವುದು ತಪ್ಪು ಎಂಬ ವಿಚಾರವನ್ನು ಸಮರ್ಥಿಸಿಕೊಳ್ಳುತ್ತಾನೆ. ಹೆಣ್ಣಾಗಿ ಹುಟ್ಟಿದ ತಪ್ಪಿಗೆ ಅವಳು ಹೊಂದಾಣಿಕೆಯನ್ನು ಮಾಡಿಕೊಂಡು ಹೋಗಬೇಕಾಗುತ್ತದೆ. ಇಲ್ಲವಾದರೆ ಮನೆಯಲ್ಲಿ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ.

ವಿವಾಹವಾದ ನಂತರ ಗಂಡನ ಮತ್ತು ಆತನ ಮನೆಯವರು ನೀಡಬಹುದಾದ ಕಿರುಕುಳಗಳನ್ನು ಸಹಿಸಿಕೊಳ್ಳಬೇಕು. ಯಾವುದೇ ಸಂದರ್ಭದಲ್ಲಿಯೂ ತನ್ನ ತವರು ಮನೆಗೆ ಕಳಂಕವನ್ನು ತರುವಂಥ ರೀತಿಯಲ್ಲಿ ವರ್ತಿಸಬಾರದು ಎನ್ನುವ ಬೋಧನೆಗಳನ್ನು ಮತ್ತು ತಿಳುವಳಿಕೆಯನ್ನು ಅನೇಕ ಹೆಣ್ಣುಗಳು ವಿವಾಹದ ಪೂರ್ವದಲ್ಲಿಯೇ ತರಬೇತಿಯನ್ನು ಪಡೆದುಕೊಂಡಿರುತ್ತಾರೆ. ಹೆಣ್ಣು ಮಗಳಿಗೆ ಮದುವೆಯಾದ ಮೇಲೆ ಹುಟ್ಟಿದ ಮನೆಗೂ ಕೊಟ್ಟ ಮನೆಗೂ ನೀನು ಹೆಸರು ತರಬೇಕೆಂಬ ಸಲಹೆ ಕೊಡುತ್ತಾ ಏನೇ ಬಂದರೂ ಸಹಿಸಿಕೊಳ್ಳುವ ಮನೋಭಾವನೆಯನ್ನು ತುಂಬಿ ಕಳುಹಿಸುತ್ತಾರೆ. ಈ ದೌರ್ಜನ್ಯವನ್ನು ಮೌನದಿಂದಲೇ ಸಹಿಸಿಕೊಂಡು ಹೋಗುತ್ತಾಳೆ. ಪುರುಷ ಶ್ರೇಷ್ಠತೆಯನ್ನು ಇನ್ನು ಪ್ರಬಲಗೊಳಿಸುತ್ತಾ ಹೋಗುತ್ತದೆ. ಅವರು ಏನು ಮಾಡಿದರೂ ಸರಿಯಾಗಿರುತ್ತದೆ. ಅದು ದಿನನಿತ್ಯ ಜೀವನದ ಬದುಕಿಗೆ ಅವಿಭಾಜ್ಯ ಅಂಗವೇನೋ ಎಂಬಂತೆ ಪರಿಗಣಿಸಲ್ಪಟ್ಟಿರುತ್ತದೆ. ಸ್ವತಹ ತಾನು ಹಿಂಸೆಯನ್ನು ಅನುಭವಿಸುತ್ತಿರುವವರೇ ಆ ಹಿಂಸೆಯನ್ನು ಸಹಿಸಿಕೊಂಡು ಅನುಭವಿಸುತ್ತಿರುವಾಗ ಹೊರಗಿನ ವ್ಯವಸ್ಥೆ ಬಗ್ಗೆ ತಿಳಿದುಕೊಳ್ಳುವುದಾದರೂ ಏನು?

ಪಾರಂಪರಿಕ ಸಮಾಜ ಬದಲಾವಣೆಯಾಗುತ್ತ ಬಂದಂತೆಲ್ಲಾ ಹಳೆಯ ವ್ಯವಸ್ಥೆಗಳು ನಾಶವಾಗಿ ಹೊಸ ವ್ಯವಸ್ಥೆ ಹುಟ್ಟಿಕೊಂಡವು. ಹಳೆಯ ಸಾಮಾಜಿಕ ಸಿದ್ಧಾಂತಗಳು, ಸಾಮಾಜಿಕ ಸಂಬಂಧಗಳ, ಬದಲಿಗೆ ಹೊಸ ಸಾಮಾಜಿಕ ಸಂಬಂಧಗಳು ಅಸ್ತಿತ್ವಕ್ಕೆ ಬಂದವು. ಉದಾಹರಣೆಗೆ ಹಿಂದಿನ ದಿನಗಳಲ್ಲಿ ಕೂಡಿಬಾಳುವುದು ಕಂಡುಬರುತ್ತಿತ್ತು. ಆದರೆ ಇಂದು ವಿಭಕ್ತ ಕುಟುಂಬಗಳು ಕಂಡುಬರುತ್ತವೆ. ಇದರಲ್ಲಿ ಪ್ರಮುಖವಾಗಿ ನಮ್ಮ ಗಮನಕ್ಕೆ ಬರುವ ಅಂಶಗಳೆಂದರೆ ಹಳೆಯ ಮಾನದಂಡಗಳು ನಾಶವಾದಾಗ, ಅವು ಪ್ರತಿನಿಧೀಕರಿಸುತ್ತಿದ್ದ ಕೆಲವು ಕೌಟುಂಬಿಕ ವ್ಯವಸ್ಥೆಗಳು ಹಾಗೂ ಮೌಲ್ಯಗಳು ಹಾಗೆಯೇ ಉಳಿದುಹೋದವು. ಆದರೆ ಈ ವ್ಯವಸ್ಥೆಯನ್ನು ಮತ್ತು ಮೌಲ್ಯಗಳನ್ನು ಗುರುತಿಸಿ ಅದಕ್ಕೆ, ಮಾನ್ಯತೆ ನೀಡಿ ಅದನ್ನು ಗೌರವಿಸುವ ವಿಷಯದಲ್ಲಿ ಆಧುನಿಕ ವ್ಯವಸ್ಥೆ ನಿರಾಸಕ್ತಿ ವಹಿಸುವ ಮೂಲಕ ಮಹಿಳೆಯರಿಗೆ ಆಧುನಿಕ ಚಿಂತನೆಯಲ್ಲಿ ಅನ್ಯಾಯವೆಸಗಿದೆ ಎಂದು ಹೇಳಬೇಕಾಗುತ್ತದೆ. ಸ್ತ್ರೀಯ ಸಹಜ ಕ್ರಿಯೆಗಳಾದ ಮೈ ನೆರೆಯುವಿಕೆ, ಮುಟ್ಟು, ಗರ್ಭಧಾರಣೆ, ಹೆರಿಗೆ, ಶಿಶುಪಾಲನೆ ಮೊದಲಾದ ಸಹಜ ಸ್ವಾಭಾವಿಕ ಗುಣಗಳು ಒಂದು ಸಮಾಜದ ನಿರ್ಮಾಣದಲ್ಲಿ ಅಮೂಲ್ಯವಾದ ಕೊಡುಗೆ ನೀಡುತ್ತದೆ. ಆದರೆ ಸಮಾನತೆ, ವ್ಯಕ್ತಿ ಕೇಂದ್ರಿತ ಉದ್ಯಮಶೀಲತೆ ಮೊದಲಾದ ಮೌಲ್ಯಗಳು

ಗುಣಗಳ ಸ್ತ್ರೀಸಹಜವಾದ ವಿಶಿಷ್ಟತೆಗಳನ್ನು ಮೌನವಾಗಿಟ್ಟುಕೊಂಡೇ ನಿರಾಕರಿಸುತ್ತಿವೆ. ಪುರುಷರು ಸ್ತ್ರೀಯ ಆರ್ಥಿಕ ಚಿಂತನೆಯ ಮೂಲ ಆಶಯಗಳಲ್ಲೇ ಮಹಿಳೆಯ ಅಸ್ತಿತ್ವದ ನಿರಾಕರಣೆಯನ್ನು ನಾವು ಗಮನಿಸಬೇಕು.

ಮಾನವ ಆಹಾರ ಉತ್ಪಾದನೆಗೆ ತೊಡಗಿದಾಗಿನಿಂದ ಮಹಿಳೆ ಮನೆಯ ಒಳಗೆ ಹೊರಗೆ ದುಡಿಯುತ್ತಾ ಬರುತ್ತಿದ್ದಾಳೆ. ಈ ಹಿಂದಿನ ದಿನಗಳಲ್ಲಿ ಸ್ತ್ರೀಯರು ಉದ್ಯೋಗ ಮಾಡುವ ಅಗತ್ಯತೆಯೇ ಇಲ್ಲವೆಂಬ ಭಾವನೆ ಇದೆ. ಮಕ್ಕಳ ಪಾಲನೆ ಮಾಡಿ, ಮನೆಯ ಜವಾಬ್ದಾರಿಗಳನ್ನು ನೋಡಿಕೊಳ್ಳುವುದೇ ಅವರ ಜಗತ್ತು ಆಗಿತ್ತು. ಇಂದಿಗೂ ಸಹ ೧೦೦ರಲ್ಲಿ ೭೫ರಷ್ಟು ಸ್ತ್ರೀಯರು ಇದನ್ನೇ ಮಾಡುತ್ತಿರುವುದು ಕಾಣಬಹುದು. ಮೊದಲಿನಿಂದಲೂ ಸ್ತ್ರೀ ಸಂಸಾರದಲ್ಲಿ ಪಾಲ್ಗೊಳ್ಳುತ್ತಿದ್ದಳು. ಆದರೆ ಕೆಲವೇ ವರ್ಷಗಳಂದೀಚೆಗೆ ಆರ್ಥಿಕ ಸಮಸ್ಯೆಗಳು ಹೆಚ್ಚಾದಂತೆ ಆಕೆ ಧನ ಸಂಪಾದನೆಗಾಗಿ ಹೊರಗಿನ ಉದ್ಯೋಗ ಮಾಡತೊಡಗಿದ್ದಾಳೆ ಎನ್ನಬಹುದು. ಇಂದಿನ ಪರಿಸ್ಥಿತಿಗೆ ಬದಲಾವಣೆಗಳಿರುವುದರಿಂದಲೇ ಎಲ್ಲರೂ ದುಡಿಯುವುದು ಸಹಜವಾಗುತ್ತದೆ. ವಿಶಿಷ್ಟ ಸೌಲಭ್ಯಗಳಿಲ್ಲದೆ ಸ್ತ್ರೀಯರು ದುಡಿಮೆ ಮಾಡುವುದು ಕಷ್ಟವಾಗುತ್ತದೆ. ಹೆಣ್ಣು ಮಕ್ಕಳ ವ್ಯಕ್ತಿತ್ವ ವಿಕಾಸ ಹೊಂದಿ ಆಕೆ ಸಂಸಾರದ ಒಳಿತಿಗಾಗಿ, ಅವಳ ಸಮಸ್ಯೆಗಳನ್ನು ಬಿಡಿಸುವ ಸಮಾನವಾಗಿ ನಿಲ್ಲಬಲ್ಲ ಶಕ್ತಿ ಮತ್ತು ಸಾಮರ್ಥ್ಯಗಳನ್ನು ಪಡೆಯುವುದು ಎಂಬ ಅರ್ಥದಲ್ಲಿ ದುಡಿಮೆಯು ಅವಶ್ಯಕವಾಗಿದೆ.

ಪುರುಷಪ್ರಧಾನ ವ್ಯವಸ್ಥೆ ಮಹಿಳೆಯನ್ನು ಹೊರಗೆ ದುಡಿಯಲು ಅವಕಾಶ ಕೊಡದೆ ಕೇವಲ ಅವಳನ್ನು ಗೃಹಕೇಂದ್ರಿತಕ್ಕೆ ಸೀಮಿತಗೊಳಿಸುತ್ತಿದ್ದಾನೆ. ಒಂದು ವೇಳೆ ದುಡಿಯಲು ಹೊರಟರೆ ಮನೆ, ಮಕ್ಕಳೆಂಬ ನಿರ್ಲಕ್ಷ್ಯ ಮಾಡುವ ಮನೋಭಾವನೆ ಸೃಷ್ಟಿಸುತ್ತದೆ ಎಂದು ತಿಳಿದುಕೊಳ್ಳುತ್ತಾರೆ. ದುಡಿಯುವ ಪತ್ನಿ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದು ಅವರೊಂದಿಗೆ ವಿಚಾರ ಸ್ವಾತಂತ್ರವನ್ನು ಚಲಾಯಿಸುವುದು ಕೂಡ ಬಂದರೆ ಗಂಡನಿಗೆ ಸಹಿಸಿಕೊಳ್ಳಲು ಆಗದೇ ಅವಳಿಗೆ ಮಾನಸಿಕ ಹಿಂಸೆಯನ್ನು ನೀಡಲಾಗುತ್ತದೆ. ಅವಳ ನೋವುಗಳು ಇವರಿಗೆ ತಿಳಿಯುವುದಿಲ್ಲ. ಅಜ್ಞಾನದಿಂದ ಅವರು ಮಾಡಿದ್ದನ್ನೇ ಸಹಿಸಕೊಂಡು ಸಂಸಾರ ನಡೆಸಿಕೊಂಡು ಹೋಗುತ್ತಾರೆ. ಇಂತಹ ಸ್ವತಂತ್ರ ಮನೋಭಾವ ಆಕೆಗೂ ಆಕೆಯ ಪತಿಗೂ ಮನಸ್ತಾಪ ತರುತ್ತದೆ ಮತ್ತು ಸಂಸಾರದಲ್ಲಿ ಅಶಾಂತಿಯನ್ನು ಹುಟ್ಟುಹಾಕುತ್ತದೆ. ಇಂದು ಮಹಿಳೆಯು ಮನೆಯ ಜವಾಬ್ದಾರಿಗಳೊಂದಿಗೆ ಹೊರಗೆ ಹಣ್ಣು ಮಾರಾಟ, ಬಟ್ಟೆ ವ್ಯಾಪಾರ ಮಾಡಲು, ಕಸಬರಿಗೆ, ಪಾತ್ರೆ ಮಾರಾಟಕ್ಕೆ ಹೋಗಿ ದುಡಿದುಕೊಂಡು ಬರುತ್ತಾಳೆ. ದುಡಿಮೆ ಕಡಿಮೆಯಾದರೂ ಅಂದಿನ ದಿನಕ್ಕೆ ಅದು ಸರಿಹೋಗಬಹುದು, ಎಂದು ಭಾವಿಸಿ ಜೀವನ ನಡೆಸುತ್ತಾಳೆ.

ಈ ಸಮುದಾಯದಲ್ಲಿ ಉದ್ಯೋಗ್ಯಸ್ಥರು ಕಡಿಮೆ ಇದ್ದರೆ, ದುಡಿದು ತಿನ್ನುವವರೇ ಅಧಿಕ. ಮನೆಯಲ್ಲಿ ಗಂಡ ತಂದು ಹಾಕಿದನ್ನು ಮಾಡಿಕೊಂಡು ಹೋಗುವುದು ಅವರ ಕರ್ತವ್ಯವಾಗಿದೆ. ಮನೆಯ ಬಗ್ಗೆ ಕಾಳಜಿ ಇಲ್ಲವಾದರೆ ಗಂಡ ಮನೆಯಲ್ಲಿ ಇದು ಏನು ಏನು ಮಾಡುತ್ತಿಯೇ ನೋಡಿಕೊಳ್ಳಲು ಆಗುವುದಿಲ್ಲವೇ ಎಂದು ಹೇಳುವುದುಂಟು. ದುಡಿದು ಬರುವವನು ನಾನು ಕೂತು

ತಿನ್ನುವವರಿಗೇನು ಗೊತ್ತು ಅದರ ಕಷ್ಟ ಎಂಬ ಮಾತುಗಳನ್ನುಡುತ್ತಾರೆ. ಆದರೆ ಮನೆಯ ಜವಾಬ್ದಾರಿಗಳ ಬಗ್ಗೆ ಅವರಿಗೇನು ಗೊತ್ತಿರುತ್ತದೆ. ಹೊರಗೆ ದುಡಿದು ಬಂದರೆ ಆಯಿತೇ, ಮನೆಯಲ್ಲಿಯ ಕಷ್ಟ ನಷ್ಟಗಳು ಸುಖ ದುಃಖಗಳನ್ನು ನಿರ್ವಹಿಸುವುದು ಎಷ್ಟು ಕಷ್ಟ ಎಂಬುದು ತಿಳಿದುಕೊಳ್ಳಬೇಕಾಗುತ್ತದೆ.

ಸಂತಾನೋತ್ಪತ್ತಿ ದುಡಿಮೆಯನ್ನು ಮಹಿಳೆಯರಿಗೆ ಮೀಸಲಿಟ್ಟು ಆರ್ಥಿಕೋತ್ಪಾದನೆಯನ್ನು ಪುರುಷರಿಗೆ ನಿರ್ದಿಷ್ಟಪಡಿಸಿರುವ ವರ್ಗೀಕರಣದಲ್ಲಿ ಮಹಿಳೆಯರ ಅಧೀನ ಸ್ಥಾನ ಮಾನಗಳಿಗೆ ಕಾರಣವನ್ನು ಕಂಡುಕೊಳ್ಳಬಹುದಾಗಿದೆ. ಕುಟುಂಬವು ಅವಳ ಪ್ರಧಾನ ಕಾರ್ಯಕ್ಷೇತ್ರ. ಆರ್ಥಿಕತೆಯಲ್ಲಿ ಅವಳ ಪಾತ್ರ ಅಪ್ರಧಾನವಾದುದು, ಆನುಷಂಗಿಕವಾದುದು ಮತ್ತು ಪ್ರಾಸಂಗಿಕವಾದುದು. ಸಂಪತ್ತಿನ ಉತ್ಪಾದನೆಯಲ್ಲಿ ತೊಡಗಿರುವ ಉತ್ಪಾದನಾಂಗಗಳು, ತಾವು ಉತ್ಪಾದಿಸಿದ ಸಂಪತ್ತನ್ನು ಅನುಭೋಗಿಸುತ್ತವೆ.

ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎಂಬ ಸಂಪ್ರದಾಯದಂತೆ ಮಹಿಳೆಯರು ಇದನ್ನೇ ಮುಂದುವರೆಸಿ ಕೊಂಡು ಹೋಗುತ್ತಿರುವುದರಿಂದಾಗಿಯೇ ತವರು ಮನೆಯ ಆಸ್ತಿ ಬೇಡ ಎನ್ನುವ ಅಭಿಪ್ರಾಯಗಳು ಬರುತ್ತಿವೆ. ತಮ್ಮ ತವರು ಮನೆಯವರು ಸುಖವಾಗಿರಲಿ ಎಂದು ಹಾರೈಸುತ್ತಾರೆ.

''ಮಹಿಳಾ ಬಾಧ್ಯಸ್ಥರಿಗಿದ್ದ ಕೇವಲ ಆಸ್ತಿಯ ಲಾಭಮಾತ್ರದ ಹಕ್ಕನ್ನು ಸಂಪೂರ್ಣವಾಗಿ ತೊಡೆದು ಹಾಕಿ ಮಹಿಳೆಯರು ಆಸ್ತಿಗೆ ಹಕ್ಕುದಾರರಾಗುವಂತೆ ಮಾಡಲಾಯಿತು. ಈ ಬದಲಾವಣೆಯನ್ವಯ ಮೃತನೊಬ್ಬನ ಆಸ್ತಿಗೆ ಕ್ರಮವಾಗಿ ಆತನ ವಿಧವೆ ಹೆಂಡತಿ, ತಾಯಿ, ಮಗ, ಮಗಳು, ಹಕ್ಕುದಾರ ರಾಗಿರುತ್ತಾರೆ. ಇಂದಿನ ಕಾನೂನು ಅನ್ವಯ ರೂಪಿಸಲಾಗುವ ಮುನ್ನು ಹಲವಾರು ಒತ್ತಡಗಳು ಏರ್ಪಟ್ಟಿದ್ದುದರಿಂದಾಗಿ, ಮೂಲವಾಗಿ ಮಾಡಲಾದ ಕಾನೂನಿನ ಕರಡು ಮಸೂದೆಯಲ್ಲಿ ಹಲವಾರು ಬದಲಾವಣೆಯನ್ನು ಮಾರ್ಪಾಡು ಮಾಡಬೇಕಾಯಿತು".[೫] ಉದಾಹರಣೆಗೆ ಉತ್ತರಾಧಿತ್ವ ಕಾಯ್ದೆ ಗಂಡನ ಆಸ್ತಿಯಲ್ಲಿ ಸಮಪಾಲು ದೊರೆಯುವುದು, ಇನ್ನು ಅನೇಕ ಕಾನೂನುಗಳಿವೆ. ಆದರೆ ಶಿಕ್ಷಣ ಇಲ್ಲದ ಕಾರಣದಿಂದ ಮಹಿಳೆಯರಿಗೆ ಇವುಗಳ ಬಗ್ಗೆ ತಿಳುವಳಿಕೆ ಇಲ್ಲವಾಗಿದೆ.

''ಮಹಿಳೆಯರ ಜೀವನಾಂಶದ ಹಕ್ಕು ವೈಯಕ್ತಿಕ ಕಾನೂನುಗಳಿಗೆ ಸಂಬಂಧಿಸಿದುದರಿಂದ, ಹಲವು ಮತಾವಲಂಬಿ ಪ್ರಜೆಗಳಲ್ಲಿ ವಿಭಿನ್ನ ಸಂಪ್ರದಾಯಗಳು ಆಚರಣೆಯಲ್ಲಿತ್ತು. ಆದ್ದರಿಂದ, ಆ ಬಗೆಯ ವ್ಯವಸ್ಥೆ ಏಕರೀತಿಯದಾಗಿರಲಿಲ್ಲ. ಆದರೆ ಜೀವನಾಂಶ ನೀಡುವ ಹೊಣೆ ವಿವಾಹದ ಬಂಧನದಿಂದ ಉಂಟಾದ ಜವಾಬ್ದಾರಿ ಮತ್ತು ಅದು ಯಾವ ಒಪ್ಪಂದದ ಆಧಾರದ ಮೇಲೆ ಸ್ಥಾಪಿತ ವಾಗಿಲ್ಲ. ವೈಯಕ್ತಿಕ ಕಾನೂನುಗಳಲ್ಲಿ ಅಲ್ಲದೆ, ದಂಡ ಪ್ರಕ್ರಿಯಾ ಸಂಹಿತೆಯಲ್ಲಿಯೂ (೧೮೯೮) ಜೀವನಾಂಶದ ಹಕ್ಕಿನ ಬಗ್ಗೆ ವಿಧಿಸಲಾಗಿತ್ತು. ಅದರ ಪ್ರಕಾರ ಎಲ್ಲಾ ಜಾತಿಗೆ ಸೇರಿದ ಯಾವುದೇ ಮಹಿಳೆಯೂ, ತನ್ನ ಮತ್ತು ಮಕ್ಕಳ ಪೋಷಣೆಯನ್ನು ತಿರಸ್ಕರಿಸಿದ ಅಥವಾ ನಿರಾಕರಿಸಿದ ಪತಿಯ ವಿರುದ್ಧ ಕ್ರಮ ಒದಗಿಸುವ ಅವಕಾಶ ನೀಡಲಾಗಿತ್ತು. ಈ ಪ್ರಕ್ರಿಯೆ ಸಂಹಿತೆಯನ್ನು ೧೯೮೭ರಲ್ಲಿ ತಿದ್ದುಪಡಿ ಮಾಡಲಾಗಿದ್ದು, ಗಮನಾರ್ಹವಾದ ಬದಲಾವಣೆಯೇನೂ ಆಗಿಲ್ಲ. ಈ ರೀತಿಯಲ್ಲಿ

ಅನೇಕ ಕಾನೂನುಗಳ ಬಗ್ಗೆ ತಿಳುವಳಿಕೆ ಇಲ್ಲದಿರುವುದು ಕಂಡುಬರುತ್ತದೆ. ಶಿಕ್ಷಣದ ಕೊರತೆಯಿಂದ ಕಾನೂನಿನ ಬಗ್ಗೆ ತಿಳುವಳಿಕೆ ಮಹಿಳೆಯರಿಗೆ ಇಲ್ಲವಾಗಿದೆ".[೨೦]

ಇಂದಿನ ಜಾಗತೀಕ ಜಗತ್ತಿನಲ್ಲಿ ಮಹಿಳಾ ಶೋಷಣೆ ಹೆಣ್ಣಿನ ವಿಮೋಚನೆ ಹೆಚ್ಚು ಪ್ರಚಲಿತವಾಗಿ ಚರ್ಚೆಯ ಪ್ರಮುಖ ಅಂಶಗಳಾಗಿವೆ. ಭಾರತದೇಶ ಹೆಣ್ಣನ್ನು ತಾಯಿಯಾಗಿ, ದೇವತೆಯಾಗಿ ಕಂಡ ಸಮಾಜವನ್ನು ಹೊಂದಿತ್ತು. ಆದರೆ ಅದೇ ಸಮಾಜ ಹೆಣ್ಣನ್ನು ಇಂದು ದೀನಾವಸ್ಥೆಗೆ ತಲುಪಿಸಿರುವುದು ಒಂದು ವಿಪರ್ಯಾಸವೇ ಸರಿ. ಹೆಣ್ಣಿನ ಸಮಸ್ಯೆ ಈ ಸಮುದಾಯಕ್ಕೆ ಮಾತ್ರವಲ್ಲ, ಇಡೀ ಭಾರತಕ್ಕೆ ಒಂದು ಸಾಮಾಜಿಕ ಪಿಡುಗಾಗಿದೆ.

ನಮ್ಮ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಎಲ್ಲರೂ ದುಡಿಯುತ್ತಾರೆ. ಅವರ ಕುಲಕಸುಬುಗಳಾದ ಚಾಪೆ ಹೆಣೆಯುವುದು ಕಸಬರಿಕೆ ಮಾರುತ್ತಾ ಸಾಕಷ್ಟು ಹಣ ಸಂಪಾದಿಸುತ್ತ ಇರುತ್ತಾರೆ. ಆದರೆ ಅನೇಕರ ಸಂಸಾರದಲ್ಲಿ ಆ ಹಣ ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಕಾರಣ ಹೆಚ್ಚಿನ ಸಂಸಾರಗಳಲ್ಲಿ ಆಕೆಯ ಗಂಡ ಯಾವುದೋ ದುಶ್ಚಟಕ್ಕೆ ಬಲಿಯಾಗಿರುತ್ತಾನೆ. ಹೆಚ್ಚಿನ ದುಡ್ಡನ್ನು ಹೊಡೆದೊ, ಬಡಿದೊ ವಶಪಡಿಸಿಕೊಳ್ಳುತ್ತಾನೆ. ಹೆಣ್ಣು ಹಣವನ್ನು ಸಂಪಾದಿಸಿದರೂ ಆ ಹಣ ನನ್ನದು, ಅದು ನಾನು ದುಡಿದದ್ದು ಎನ್ನುವ ತಿಳುವಳಿಕೆ ಆಕೆಗೆ ಇಲ್ಲದೆ ಇರುವುದು ಅವಳ ಸಂಸಾರದ ದುಸ್ಥಿತಿಗೆ ಕಾರಣ ವಾಗುತ್ತದೆ. ಆಕೆ ಶೋಷಿತಳಾಗಿಯೇ ನಿಲ್ಲುತ್ತಾಳೆ. ಆರ್ಥಿಕ ಸ್ವಾತಂತ್ರ್ಯ ಆಕೆಗೆ ದೊರೆತಿದ್ದರೂ ಅದನ್ನು ಉಪಯೋಗಿಸಿಕೊಳ್ಳುವ ಎಚ್ಚರಿಕೆ, ತಿಳವಳಿಕೆ ಮಹಿಳೆಯರಿಗೆ ಇಲ್ಲದಿರುವುದು. ಆ ಅರಿವನ್ನು ಮಹಿಳೆಯರಲ್ಲಿ ಮೂಡಿಸಿದಾಗ ಮಾತ್ರ ಅವಳಿಗೆ ಆರ್ಥಿಕ ಸ್ವಾತಂತ್ರ್ಯ ದೊರೆಯುತ್ತದೆ. ಹಳ್ಳಿಗಳಲ್ಲಿ ಅನೇಕ ಸಂಸಾರಗಳು ಸುಖಮಯವಾಗಲು ಸಾಧ್ಯವಾಗುತ್ತದೆ.

''ಇಪ್ಪತ್ತೊಂದನೇ ಶತಮಾನಕ್ಕೆ ಪಾದಾರ್ಪಣೆ ಮಾಡಿರುವ ಮಹಿಳೆ ಇಂದು ಕವಲು ದಾರಿಯಲ್ಲಿ ನಿಂತಿದ್ದಾಳೆ. ಸಮಸ್ಯೆ-ಸಂತೋಷ, ಸವಾಲು-ಫಲತಾಂಶ, ಸಂಘರ್ಷ-ಸಮಾಧಾನ, ಸೋಲು-ಗೆಲವು, ನೋವು-ನಲಿವು, ಪ್ರತಿಕೂಲ-ಅನುಕೂಲ, ಇಂಥ ಅನೇಕ ಸಂದಿಗ್ಧ ದ್ವಂದ್ವಗಳಲ್ಲಿ ಮಹಿಳೆ ಕತ್ತಿಯ ಅಲುಗಿನ ಮೇಲೆ ನಡೆದಿದ್ದಾಳೆ. ಇಂದೂ ನಡೆಯುತ್ತಿದ್ದಾಳೆ. ದ್ವಿತೀಯ ದರ್ಜೆ ಪ್ರಜೆಯಾಗಿ ಪರಿಗಣಿತವಾದ ಹೆಣ್ಣು ಸಾಗಿ ಬಂದ ದಾರಿ ಸುದೀರ್ಘವಾದುದು. ಅವಳು ಕತ್ತಲಲ್ಲಿ ನಡೆದದ್ದೇ ಹೆಚ್ಚು. ಅಲ್ಲೊಮ್ಮೆ ಮಂಜುಮುಸುಗತ್ತಲು, ಇಲ್ಲೊಮ್ಮೆ ಕೊಂಚಬೆಳಕು, ಅವಳ ಬದುಕಿನಲ್ಲಿ ಹಾದು ಹೋದದ್ದುಂಟು. ಆ ಬೆಳಕು ಅವಳ ಕನಸಿನ, ಆದರೆ ವಾಸ್ತವಿಕ ಬದುಕಿಗೆ ಕೊಂಡೊಯ್ಯಲು ಸಾಧ್ಯವಾಗಿಲ್ಲ. ಪುರುಷನಿಗೆ ಯಾವುದು ಸಹಜ ವಾಸ್ತವದ ಬದುಕಾಗಿ ಸುಗಮವಾಗಿ ಹಕ್ಕು ದಕ್ಕಿದೆಯೋ, ಆದರೆ ಹೆಣ್ಣಿನ ಕನಸಿನಲ್ಲಿ ಇನ್ನು ಕಾಡುವ, ಹಂಬಲಿಸುವ ವಿಷಯವಾಗಿದೆ".[೨೧]

ಯಾರ ಮನೆಯಲ್ಲಿ ತಾಯಂದಿರು ಕಲಿತಿರುತ್ತಾರೋ ಆ ಮನೆಯಲ್ಲಿ ಅರಿವಿಗೆ ಸ್ಥಾನವಿರುತ್ತದೆ. ಕಲಿತ ಮಾತೆಯರು ಇರುವ ಮನೆಗಳೆಲ್ಲಾ ಸ್ವಲ್ಪಮಟ್ಟಿಗೆ ವಿದ್ಯಾಲಯಗಳೇ ಇದ್ದಂತೆ. ಆದ್ದರಿಂದ ಹೆಣ್ಣು ಮಕ್ಕಳು ಹೆಚ್ಚು ಹೆಚ್ಚು ವಿದ್ಯಾವಂತರಾಗಬೇಕು. ವಿದ್ಯಾವಂತರಾದ ಹೆಣ್ಣು ಮಕ್ಕಳು ಮುಂದೆ

ಹೆಣ್ಣು ಮಕ್ಕಳನ್ನು ವಿದ್ಯಾವಂತರಾಗುವಂತೆ ಪ್ರೇರೇಪಿಸಬೇಕಾಗುತ್ತದೆ. 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬ ಮಾತು ಮಹತ್ವದ್ದಾಗಿದೆ. ತಾಯಿ ತನ್ನ ಹುಟ್ಟಿದ ಮಗುವಿನ ಮುಖವನ್ನು ಕಾಣುತ್ತಿದ್ದಂತೆಯೇ ತನ್ನ ಪ್ರಸವ ವೇದನೆಯನ್ನು ಮರೆಯುತ್ತಾಳೆ. ಮುಂದೆ ಆ ಮಗು ಚೆನ್ನಾಗಿ ಬೆಳೆದು ತನ್ನ ಮನೆಯವರ, ಸಮುದಾಯದಕ್ಕೆ ಉಪಯುಕ್ತ ವ್ಯಕ್ತಿಯಾಗಿ ಬೆಳೆದು ಒಳ್ಳೆಯ ಹೆಸರನ್ನು ಗಳಿಸಿದ ದಿವಸ ಆ ತಾಯಿ ತನ್ನ ಹುಟ್ಟು ಸಾರ್ಥಕವಾಗಿದ್ದು ಎಂದು ಹೇಳಿ ತನ್ನ ನೋವನ್ನು ಮರೆಯುತ್ತಾಳೆ. ಆದ್ದರಿಂದ ಅಂಥ ಪೀಳಿಗೆಯನ್ನು ನಾವು ಮುಂದೆ ತರಬೇಕಾಗಿದೆ. ಹೆಣ್ಣು ಗಂಡಿನ ಆಸ್ತಿಯಾಗಿ ಪರಿವರ್ತನೆಯಾದಂದಿನಿಂದ ಗಂಡಿನ ಒಡೆತನದ ಹಕ್ಕು ಆಕೆಯ ಮೇಲೆ ಸ್ಥಾಪನೆಯಾದುದು ಹೆಣ್ಣಿನ ದಮನದ ಇತಿಹಾಸ ಆರಂಭವಾಯಿತು. ಹೆಣ್ಣು ಬದುಕುವುದು ಹಾಗೂ ಸಾಯುವುದು ಎಲ್ಲವೂ ಗಂಡಿಗಾಗಿ ಎಂಬ ಮೌಲ್ಯ ವ್ಯವಸ್ಥೆಯಲ್ಲಿ ಹೆಣ್ಣಿನ ಎಲ್ಲ ಮಹತ್ವದ ಕಾರ್ಯಗಳನ್ನು ಮುಚ್ಚಿಹಾಕಿ ಅದು ಗಂಡಿನ ಕರ್ತವ್ಯವೆಂದು ನಿರ್ವಹಿಸಲ್ಪಡುತ್ತದೆ. ಹೆಣ್ಣಿನ ದಮನದ ಅಥವಾ ಹಿಂಸೆಯ ಮೂಲಭೂತ ಕೇಂದ್ರಗಳಲ್ಲಿ ಕುಟುಂಬವೂ ಒಂದು.

ಅಡಿ ಟಿಪ್ಪಣಿಗಳು

೧. ಭಾರತದ ಆರ್ಥಿಕ ವ್ಯವಸ್ಥೆ, ಎಚ್ಚಾರ್ಕೆ ಪು. ೧೩೭
೨. ಅದೇ. ಪು. ೧೩೮
೩. ಬುಡಕಟ್ಟು ಅಭಿವೃದ್ಧಿ ಒಂದು ಪರಿಕಲ್ಪನೆ, ಎ.ಎಸ್. ಪ್ರಭಾಕರ, ಪು. ೮೩
೪. ದಕ್ಷಿಣ ಕರ್ನಾಟಕದ ಕೊರಮರು ಡಾ.ಬಿ.ಪಿ. ರಾಮಯ್ಯ. ೧೦೮
೫. ಕೊರವರು, ಈರಣ್ಣ ಎನ್, ಕೋಸಗಿ ಪು. ೧೦
೬. ಮಹಿಳಾ ಅಧ್ಯಯನ-೨ ಡಾ.ಎಚ್.ಎಂ. ಹೇಮಲತಾ, ಪು. ೮೦
೭ ಅದೇ. ಪು. ೮೧
೮. ಮಹಿಳೆ ಮತ್ತು ಅಭಿವೃದ್ಧಿ, ಕೆ. ಶಿವಚಿತ್ತಪ್ಪ, ಪು. ೩೧
೯. ಗ್ರಾಮೀಣ ಮಹಿಳಾಭಿವೃದ್ಧಿಯಲ್ಲಿ ಸ್ವಸಹಾಯ ಗುಂಪುಗಳ ಪಾತ್ರ, ಡಾ. ವೆಂಕಟಯ್ಯ ಅಪ್ಪಗೆರೆ ಪು.೨
೧೦. ಜಾನಪದ ಜಗತ್ತು, ಸಂಪುಟ-೧, ಸಂಚಿಕೆ-೨, ಮಾರ್ಚ್ ೧೯೮೦ ಪು.೨೮
೧೧. ದಕ್ಷಿಣ ಕರ್ನಾಟಕದ ಕೊರಮರು, ಡಾ.ಬಿ.ಪಿ ರಾಮಯ್ಯ ಪು.೮೬
೧೨. ಕನ್ನಡ ಜಾನಪದ ವಿಶ್ವಕೋಶ, ಸಂಪುಟ-೧, ಡಾ. ಚಂದ್ರಶೇಖರ ಕಂಬಾರ, ಪುಟ.೫೪೧
೧೩. ದಕ್ಷಿಣ ಕರ್ನಾಟಕದ ಕೊರಮರು, ಡಾ.ಬಿ.ಪಿ ರಾಮಯ್ಯ ಪು. ೮೫
೧೪. ಅದೇ. ಪು. ೮೭
೧೫. ಅದೇ. ಪು. ೮೪
೧೬. ಆಂಧ್ರಪ್ರದೇಶದಲ್ಲಿ ಜಾನಪದ, ಬಿ. ರಾಮರಾಜು ಅನು ಆರ್.ಬಿ. ಸುಂದರಂ, ಪು. ೧೪೪
೧೭. ವಿಜಯ ಕರ್ನಾಟಕ ಪತ್ರಿಕೆ, ೬ ಜನವರಿ ೨೦೦೮
೧೮. ಜಾನಪದ ಸಾಹಿತ್ಯ ದರ್ಶನ-೩, ಡಾ.ಎಮ್.ಎಸ್. ಸುಂಕಪುರ, ಪು. ೬೧

೧೯. ದಕ್ಷಿಣ ಕರ್ನಾಟಕದ ಕೊರಮರು, ಡಾ.ಬಿ.ಪಿ ರಾಮಯ್ಯ ಪು. ೪೨

೨೦. ಅದೇ ಪು. ೪೩

೨೧. ಕರ್ನಾಟಕ ಬುಡಕಟ್ಟು ಸಂಪುಟ-೨, ಡಾ.ಎಂ.ಎಂ. ಕಲಬುರ್ಗಿ ಪು. ೨೯೩

೨೨. ಅದೇ. ಪು. ೨೯೩

೨೩. ಕನ್ನಡ ಜಾನಪದ ಕೋಶ, (ಸಂ) ಎಚ್.ಎಲ್. ನಾಗೇಗೌಡ, ಪು. ೨೪೯

೨೪. ಆಂಧ್ರಪ್ರದೇಶದಲ್ಲಿ ಜಾನಪದ, ಬಿ. ರಾಮರಾಜು (ಅನು) ಆರ್.ಬಿ. ಸುಂದರಂ, ಪು. ೧೪೪

೨೫. ಜಾನಪದ ವ್ಯಕ್ತಿ ಮತ್ತು ವಿಚಾರ, ಡಾ.ಹಿ.ಚಿ. ರಾಮಚಂದ್ರೇಗೌಡ, ಪು. ೧೯೧-೧೯೨

೨೬. ದಕ್ಷಿಣ ಕರ್ನಾಟಕದ ಕೊರವರು, ಡಾ.ಬಿ.ಪಿ. ರಾಮಯ್ಯ, ಪು. ೪೩

೨೭. ಅದೇ ಪು. ೪೦

೨೮. ಕರ್ನಾಟಕ ಬುಡಕಟ್ಟು, ಸಂಪುಟ-೨, ಡಾ.ಎಂ.ಎಂ. ಕಲಬುರ್ಗಿ, ಪು. ೨೮೮

೨೯. ಭಾರತೀಯ ನಾರಿ ಮತ್ತು ಸಮಾನತೆ, ಪು. ೬೨

೩೦. ಅದೇ ಪು. ೬೮

೩೧. ಬೊಗಸೆ, ಡಾ. ಕಮಲಾ ಹಂಪನಾ, ಪು. ೧೩೮

ಅಧ್ಯಾಯ - ೫

ಪ್ರಸ್ತುತದಲ್ಲಿ ಕೊರವ ಸಮುದಾಯದ ಮಹಿಳೆ

೫.೧. ಆಧುನಿಕತೆಯೊಂದಿಗೆ ಕೊರವ ಸಮುದಾಯದ ಮುಖಾಮುಖಿ

೫.೨ ವರ್ತಮಾನದ ಸವಾಲುಗಳು

೫.೩. ಬದಲಾವಣೆಯ ತವಕದಲ್ಲಿ ಕೊರವ ಮಹಿಳೆ

ಅಧ್ಯಾಯ ಐದು

ಪ್ರಸ್ತುತದಲ್ಲಿ ಕೊರವ ಸಮುದಾಯದ ಮಹಿಳೆ

ಆಧುನಿಕತೆಯೊಂದಿಗೆ ಕೊರವ ಸಮುದಾಯದ ಮುಖಾಮುಖಿ

ಕೊರವರ ಸಮುದಾಯಗಳ ಇಂದಿನ ಸ್ಥಿತಿಯು ತುಂಬಾ ಅತಂತ್ರವಾಗಿದ್ದು. ಅನೇಕ ಕಾರಣಗಳಿಂದ ಅವರು ತಮ್ಮ ಮೂಲ ನೆಲೆಗಳನ್ನು ಕಳೆದುಕೊಂಡಿರುವ ಮತ್ತು ಕಳೆದುಕೊಳ್ಳುತ್ತಿರುವ ಪ್ರಕರಣಗಳು ದೇಶದಾದ್ಯಂತ ದಿನದಿಂದ ದಿನಕ್ಕೆ ಹೆಚ್ಚುತ್ತಲೆ ಇದೆ. ವಸಾಹತುಶಾಹಿ ನಂತರದಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ನಡೆದ ಕೈಗಾರಿಕೆಗಳ ಸ್ಥಾಪನೆ, ವಿವಿಧ ಗಣಿಗಾರಿಕೆಗಳು ಇತ್ಯಾದಿ ಚಟುವಟಿಕೆಗಳು ಅನೇಕ ಬುಡಕಟ್ಟುಗಳ ಮೂಲ ನೆಲೆಗಳಿಗೆ ಕೊಡಲಿಪೆಟ್ಟು ಕೊಟ್ಟಿದೆ. ಪ್ರಗತಿಯ ಹೆಸರಿನಲ್ಲಿ ನಡೆದ ಈ ಎಲ್ಲ ಯೋಜನೆಗಳ ಅನುಷ್ಠಾನವು ಬುಡಕಟ್ಟು ಜನರ ಸಾಂಸ್ಕೃತಿಕ ಪ್ರಗತಿಯನ್ನುಂಟುಮಾಡಿವೆ. ಬುಡಕಟ್ಟು ಜನರ ಅಭಿವೃದ್ಧಿ ಎಂಬುದು ಸತ್ಯಕ್ಕೆ ದೂರವಾದ ಮಾತಾಗಿದೆ. ಇವರು ಬುಟ್ಟಿ ತಯಾರಿಸುವವರು, ಅಲೆಮಾರಿಗಳು, ಬೇಟೆಗಾರರು, ಹಚ್ಚೆ ಹಾಕುವವರು, ಕಣಿ ಹೇಳುವ ವೃತ್ತಿಯವರು ಎಂಬುದಾಗಿ ಹೇಳಲ್ಪಟ್ಟಿದ್ದು ಕೊರವಂಜಿಯು ಕೊರವ ಸ್ತ್ರೀ ಎಂಬುದಾಗಿ ತಿಳಿದುಬರುತ್ತದೆ. ಕೊರವರು ಹಳ್ಳಿಗಳಲ್ಲಿ ಮತ್ತು ನಗರಗಳಲ್ಲಿ ಪ್ರತ್ಯೇಕವಾಗಿಯೇ ನೆಲೆ ನಿಂತು ವಾಸಿಸುತ್ತಿರುವುದು ಕಂಡುಬರುತ್ತದೆ. ಐತಿಹ್ಯಗಳು, ಪುರಾಣಗಳು ಕೊರವರ ಬಗ್ಗೆ ಆಧಾರಗಳನ್ನು ತಿಳಿಸುತ್ತವೆ. ಕೊರವರ ಭಾಷೆಯ ಬಗ್ಗೆಯೂ ತಿಳಿದುಬರುತ್ತದೆ. ಭಾರತದ ಪುರಾತನ ಸಂಸ್ಕೃತಿಗಳ ಇತಿಹಾಸವನ್ನು ಅರಿಯಲು ಇವು ಸಹಕಾರಿಯಾಗುತ್ತದೆ. ಸೂಳೆಗಾರಿಕೆ ಪದ್ಧತಿಯು ಇವರಲ್ಲಿ ಕಂಡುಬರದಿರುವುದು ಈ ಸಮುದಾಯದ ಆರೋಗ್ಯಕರ ಬೆಳವಣಿಗೆಯಾಗಿದೆ.

ಬಹುಮಟ್ಟಿಗೆ ಕೊರವರು ವಿದ್ಯೆಯಿಂದ ವಂಚಿತರಾಗಿದ್ದು, ಈಗ ತಕ್ಕಮಟ್ಟಿಗೆ ಅಕ್ಷರಸ್ಥರಾಗ

ತೊಡಗಿದ್ದಾರೆ. ಇವರ ಕೇರಿಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆ ನೀಡಲಾಗುತ್ತಿದೆ. ಕ್ರೈಸ್ತಧರ್ಮಕ್ಕೆ ಮತಾಂತರಗೊಂಡ ಕೊರವರಲ್ಲಿ ವಿದ್ಯೆಯ ಪ್ರಮಾಣವು ಸ್ವಲ್ಪ ಹೆಚ್ಚಾಗಿದೆ. ಶಿಕ್ಷಣವು ಅವರ ಬದುಕನ್ನು ಕೆಲಮಟ್ಟಿಗೆ ಬದಲಾಯಿಸಿದೆ.

ಭಾರತದಲ್ಲಿ ಯಾವುದೇ ಸಮುದಾಯಗಳು ತನ್ನ ಸಾಮಾಜಿಕ ನಿಯಮಗಳನ್ನು ಯಾವತ್ತೂ ಕಟ್ಟುನಿಟ್ಟಿನಿಂದಲೇ ಪಾಲಿಸುತ್ತಾ ಬರುತ್ತದೆ. ಇದೇ ಕಾರಣಕ್ಕೆ ಸಹಜವಾಗಿ ಒಂದು ಸಮಾಜ ತನ್ನ ರೂಢಿಗತ ಬದುಕಿನ ನಿಯಮಗಳನ್ನು ಆತ್ಮದಂತೆ ಪೋಷಿಸಿಕೊಂಡು ಬರುತ್ತದೆ. ಈ ನಿಯಮಗಳಿಗೆ ಕಾರ್ಯ, ವ್ಯವಸ್ಥೆಯನ್ನು ರೂಪಿಸುವ ಹುನ್ನಾರಗಳು ಇರುವುದಿಲ್ಲ. ಅದರಲ್ಲೂ, ಆದಿವಾಸಿ, ಕೆಳಜಾತಿ, ಅಲೆಮಾರಿ ಮತ್ತು ಶ್ರಮಿಕ ಸಮಾಜಗಳ ಬದುಕಿನ ಕ್ರಮಗಳು ಯಾವತ್ತು ಯಾವುದೇ ಸನಾತನ ಉರುಳಿಗೆ ತಮ್ಮ ಕೊರಳನ್ನು ಕೊಟ್ಟುಕೊಳ್ಳಲಿಚ್ಛಿಸುವುದಿಲ್ಲ. ಸಮುದಾಯಗಳು ಯಾವತ್ತೂ ತಮ್ಮ ಸಂಸ್ಕೃತಿಯ ಕೋಶದ ಒಳಗೆ ಹೊಸತನ್ನು ಸ್ವೀಕರಿಸುವ ಮತ್ತು ನಿರಾಕರಿಸುವ ಎಚ್ಚರವನ್ನು ಸದಾ ಜಾಗೃತವಾಗಿಟ್ಟುಕೊಂಡಿರುತ್ತದೆ. ಈ ಬಗೆಯ ನಮ್ಮ ಸ್ವಭಾವದಿಂದಾಗಿಯೇ ಈ ಸಮುದಾಯಗಳು ಬದಲಾವಣೆಗಳನ್ನು ಚಿಕಿತ್ಸಾ ನೆಲೆಯಲ್ಲೆ ಒಪ್ಪಿಕೊಳ್ಳುತ್ತವೆ. ಆಧುನಿಕವಾಗುತ್ತಲೇ ತನ್ನ ಆದಿಮ ನಿಲುವುಗಳನ್ನು ಉಳಿಸಿಕೊಳ್ಳುವ ಛಲ ಯಾವತ್ತೂ ಈ ಸಮುದಾಯಗಳಲ್ಲಿ ಜೀವಂತವಾಗಿರುತ್ತದೆ. ಆದರೆ ಯಾವುದೋ ಒಂದು ಕಾಲದಲ್ಲಿ ಬದಲಾವಣೆಯಾಗುವುದು ಕಾಣಬಹುದು.

ಜಾಗತೀಕರಣದಲ್ಲಿ ಇನ್ನು ಕೆಲ ಕೊರವರು ಅರೆ ಅಲೆಮಾರಿಗಳಾಗಿ ಸಂಚಾರಿ ಜೀವನ ನಡೆಸುತ್ತಿರುವುದು ಕಂಡುಬರುತ್ತದೆ. ''ಪ್ರಪಂಚವೇ ಒಂದು ಹಳ್ಳಿಯಾಗುವ, ಆರ್ಥಿಕತೆಯೇ ಜೀವನದ ಪರಮ ಮೌಲ್ಯವಾಗಿರುವ ಈ ದಿನಗಳಲ್ಲಿ ಪ್ರಪಂಚೀಕರಣದ ಅಬ್ಬರದ ದಾಳಿಗೆ ಭಾರತದ ಯಾವುದೊಂದು ಬುಡಕಟ್ಟುಗಳಲ್ಲಿ ಬದುಕು ಹಸನುಗೊಳ್ಳುವ ಲಕ್ಷಣಗಳು ಕಾಣುವುದಿಲ್ಲ. ವಿವಿಧ ಭಾಷೆ, ಧರ್ಮ, ಜಾತಿ, ಬುಡಕಟ್ಟುಗಳಿರುವ ಭಾರತದಲ್ಲಿ ಜಾಗತೀಕರಣವು ಕಷ್ಟವೂ ಅಲ್ಲ, ಸಾಧುವೂ ಅಲ್ಲ ಎನ್ನುವ ಸ್ಥಿತಿ ನಿರ್ಮಾಣವಾಗಿದ್ದರೂ ಅದರ ಪರಿಣಾಮಗಳು ಸಮಾಜದ ಮೇಲೆ, ಕುಟುಂಬದ ಮೇಲೆ, ರಾಷ್ಟ್ರದ ಮೇಲೆ ಬೀರಿವೆ. ಮಾಹಿತಿ ತಂತ್ರಜ್ಞಾನವೂ ಇಂದು ಮನುಷ್ಯ ಜೀವನದ ಪ್ರತಿಯೊಂದು ಹೆಜ್ಜೆಯನ್ನು ನಿಯಂತ್ರಿಸುತ್ತದೆ''.[೧]

ಹುಟ್ಟಿನಿಂದ ಸರಳ ಸ್ವಭಾವದವರೂ ಶ್ರಮಜೀವಿಗಳು, ಪ್ರಕೃತಿ ಪ್ರೇಮಿಗಳು, ತಾವು ಹುಟ್ಟಿ ಬೆಳೆದ ನೆಲ ಜಲದ ಬಗ್ಗೆ ಹೆಮ್ಮೆ ಭಕ್ತಿಭಾವಗಳನ್ನುಳ್ಳವರು, ನಾಗರಿಕ ಪ್ರಭಾವ ತೀವ್ರವಾಗಿರುತ್ತಿದ್ದರೂ 'ಅಪ್ಪ ಹಾಕಿದ ಆಲದ ಮರಕ್ಕೆ ಗಂಟುಬಿದ್ದವರಂತೆ' ತಮ್ಮ ಪರಂಪರಾಗತ ಸಂಪ್ರದಾಯ, ನಂಬಿಕೆಗಳನ್ನು ನಂಬಿ, ನಿಷ್ಠೆಯಿಂದಾಚರಿಸುತ್ತಾ ಬರುವ ಪ್ರವೃತ್ತಿಯುಳ್ಳವರು, ಆಧುನಿಕ ಪ್ರಭಾವಕ್ಕೆ ಸಿಲುಕಿ ನರಳ ಬೇಕಾಗುತ್ತದೆ. ನಾಗರಿಕ ಸಂಪರ್ಕ ಅನಿವಾರ್ಯವಾಗುತ್ತಿದೆ. ಕೋರ್ಟ್ ಕಚೇರಿಗಳ ವ್ಯವಹಾರ, ಶಾಲಾ ಕಾಲೇಜುಗಳ ಹೆಚ್ಚಳ, ಸರ್ಕಾರಿ ನೌಕರಿ ಮತ್ತು ನಗರ ಕಾರ್ಖಾನೆಗಳ ಆಕರ್ಷಣೆ, ನಾಗರಿಕ ಜೀವನದ ಭೋಗವಸ್ತು ವಿಲಾಸ, ಸಾರಿಗೆ ಸಂಪರ್ಕದ ಸುಧಾರಣೆ ಇಂಥ ಬಹುಕಾರಣಗಳ ಸಲುವಾಗಿ

ನಾಗರಿಕರೊಂದಿಗೆ ಹೆಚ್ಚು ಹೆಚ್ಚಾಗಿ ಬೆರೆತು ವ್ಯವಹರಿಸತೊಡಗಬೇಕಾಗುತ್ತದೆ. ಇವತ್ತಿಗೂ ಹಳ್ಳಿಯವರಂತೆ ಬಾಳುವುದಕ್ಕೆ ಮೂಲಭೂತವಾದ ಪ್ರಬಲ ಕಾರಣ ಆ ಜನತೆಯಲ್ಲಿ ಪರಂಪರಾಗತವಾಗಿ, ರಕ್ತಗತವಾಗಿ ರೂಢಿಗೆ ಬಂದಿರುವ ಸಂಪ್ರದಾಯ, ಜನಪದ ಸಮಾಜದ ಆಂತರಿಕ ಒತ್ತಡ ಮತ್ತು ಹಂಗಿಲ್ಲದ ಹಳ್ಳಿಯ ಬಾಳಿನಲ್ಲಿ ಮಾತ್ರ ಲಭ್ಯವಿರುವ ಸ್ವತಂತ್ರ ಜೀವನದಾಸೆ ತಮ್ಮ ಬಾಳಿನಲ್ಲಿ ಹಾಸುಹೊಕ್ಕಾಗಿರುವ ಶ್ರಮ ದಾರಿದ್ರ್ಯ ಮತ್ತು ಇತಿ ಮಿತಿಗಳ ಇಕ್ಕಟ್ಟಿನ ಪರಿವೆ ಆ ಜನತೆಗೆ ಸ್ಪಷ್ಟ ವಾಗಿದ್ದರೂ ಅದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ನಗರಗಳತ್ತ ಒಟ್ಟೊಟ್ಟಿಗೆ ನಡೆಯುವುದು ಕಡಿಮೆ. ಇವರು ನವೀನತೆಯನ್ನು ಬಯಸುತ್ತಾರೆ. ಚೆನ್ನಾಗಿ ಉಂಡುಟ್ಟುಕೊಂಡು ಸುಖವಾಗಿರಲೆಂದು ಅಪೇಕ್ಷಿಸುತ್ತಾರೆ. ತಮ್ಮ ಬಾಳಿನ ಪ್ರತಿಯೊಂದು ವಿಷಯಕ್ಕೂ ಅವರು ಪಟ್ಟಣಗಳತ್ತ ನೋಡುವುದಿಲ್ಲ. ಅನ್ಯರ ಕೈ ಚಾಚದೆ ತಮ್ಮ ಕೆಲಸವನ್ನು ಮುಂದುವರಿಸುತ್ತಾರೆ. ನಾಗರಿಕರೇ ತಮಗೆ ಸರ್ವಾದರ್ಶವೆಂದು ಭಾವಿಸುವುದಿಲ್ಲ. ವಾಸ್ತವವಾಗಿ ಅನೇಕ ವಿಷಯಗಳಲ್ಲಿ ತಾವು ನಾಗರಿಕರಿಗಿಂತ ಎಷ್ಟೋ ಮೇಲು, ಶ್ರೇಷ್ಠರು ಎಂಬ ಅಭಿಮಾನ ಅವರಲ್ಲಿ ತುಂಬಿರುತ್ತದೆ. ಸಮಾಜದಲ್ಲಿ ನವೀನತೆ ತಲೆದೋರುತ್ತದೇನೋ ಸರಿ, ಆದರೆ ಅದು ತುಂಬ ನಿಧಾನ. ಜೀವನಕ್ಕೆ ಹೊಂದಿಕೊಂಡಂತೆ ಮಾತ್ರ ಹೊಸತನ ಬಂದು ಬದುಕಬಲ್ಲರು. ದಿನಕ್ಕೊಂದರಂತೆ ಹೊಸತನದ ಸಲುವಾಗಿಯೇ ಉಡುಗೆ ತೊಡುಗೆಯಲ್ಲಿ ಹೊಸತನ ತರುವ, ತೋರುವ ಪ್ರವೃತ್ತಿ ಜಾನಪದದಲ್ಲಿ ಕಾಣಬಹುದಾಗಿದೆ. 'ಹಳೆ ಬೇರು ಹೊಸ ಚಿಗುರು' ಎನ್ನುವಂತೆ ಹೊಸದಾಗಿ ಕಾಣುವುದೆಲ್ಲ ಹಿಂದಿನ ದಿನಗಳ ನೆನಪನು ತರುತ್ತವೆ. ವಿನ್ಯಾಸದಲ್ಲಿ ಮಾತ್ರ ಅಲ್ಪಸ್ವಲ್ಪ ಬದಲಾವಣೆಗಳು ಕಂಡುಬರುತ್ತವೆ. ನಾಗರಿಕರಿಂದ ಅನೇಕಾಂಶಗಳನ್ನು ಸ್ವೀಕರಿಸಿ ತಮ್ಮದಾಗಿಸಿಕೊಳ್ಳುತ್ತಿದ್ದಾರೆ. ಉದಾಹರಣೆ ಹಿಂದೆ ಹಚ್ಚೆ ಹಾಕುವ ಪದ್ಧತಿ ರೂಢಿಯಲ್ಲಿತ್ತು. ಇಂದು ಕಡಿಮೆಯಾಗುತ್ತಿರುವುದನ್ನು ಕಾಣಬಹುದು. ಆದರೆ ಇಂದಿನ ದಿನಗಳಲ್ಲಿ ಹಚ್ಚೆ ಹಾಕಿಸಿಕೊಳ್ಳುವುದು (ಟ್ಯಾಟೋ) ಪ್ಯಾಶನ್ ಆಗಿದೆ.

ಯಾವುದೇ ಜೀವನ ಸಮಾಜಕ್ಕೆ ಸಹಜವಾಗಿಯೇ ಚಲನಶೀಲತೆ ಎಂಬುದು ಅಂತರ್ಗತ ವಾಗಿರುತ್ತದೆ. ಚಲನಶೀಲತೆ, ಜೀವಂತಿಕೆಯ ಸಹಜ ಗುಣ. ಭಾರತದ ಚರಿತ್ರೆಯುದ್ದಕ್ಕೂ ಇಲ್ಲಿನ ಸಮುದಾಯಗಳು ನಿರಂತರ ಬದಲಾವಣೆಗೆ ಹಲವು ಶತಮಾನಗಳ ಇತಿಹಾಸವನ್ನು ರೂಪಿಸುತ್ತಾ ಬಂದಿವೆ. ಆಹಾರ ಸಂಗ್ರಹಣೆಯ ಆದಿಮ ಹಂತದಿಂದ ಇಂದಿನ ಆಧುನಿಕ ಕಾಲದವರೆಗೆ ಸಮುದಾಯಗಳು ನಡೆದುಬಂದ ಹಾದಿ ಉದ್ದಕ್ಕೂ ಚರಿತ್ರೆ ತನ್ನ ರೂಪವನ್ನು ಬದಲಿಸಿಕೊಂಡಿದೆ. ಚರಿತ್ರೆಯು ತನ್ನಿಂದ ತಾನೇ ಸೃಷ್ಟಿಯಾಗುವ ಸಂಗತಿಯಲ್ಲ. ಮನುಷ್ಯ ತನ್ನ ಒಟ್ಟಾರೆಯ ಚಲನಶೀಲತೆಯ ಮೂಲಕ ಚರಿತ್ರೆಯನ್ನು ಸೃಷ್ಟಿಸುತ್ತಾನೆ. ಆಹಾರ ಸಂಗ್ರಹಣೆಯ ಹಂತದಲ್ಲಿ ಸಮಾಜ ರೂಪುಗೊಂಡಿರಲಿಲ್ಲ. ಈಗ ನಮ್ಮೆದುರಿಗಿರುವ, ವ್ಯವಸ್ಥಿತವೆಂದು ಭಾವಿಸಿಲ್ಪಟ್ಟಿರುವ ಸಮಾಜದ ಯಾವ ಲಕ್ಷಣಗಳೂ ಆಹಾರ ಸಂಗ್ರಹಣೆಯ ಹಂತದಲ್ಲಿನ ಮಾನವ ಗುಂಪುಗಳಾಗಿರಲಿಲ್ಲ ಯಥೇಚ್ಛವಾಗಿ ಕಾಡಿನಲ್ಲಿ ಸಿಗುವ ಉತ್ಪನ್ನಗಳನ್ನೇ ಮನುಷ್ಯ ಆಯ್ದು ಜೀವನ ಸಾಗಿಸುತ್ತಿದ್ದ ಮಾನವನ ಆಹಾರ ಗಳಿಕೆ ಮತ್ತು ಬದುಕಿನ ವ್ಯವಹಾರಗಳೆಲ್ಲ ನಿಸರ್ಗದ ಮಡಿಲಲ್ಲಿ ನಡೆಯುತ್ತಿತ್ತು. ಜೊತೆಗೆ

ಮಾನವನ ಯಾವ ಸಾಂಘಿಕ ಪ್ರಯತ್ನವು ಅವನ ನಿತ್ಯದ ಬದುಕನ್ನು ರೂಪಿಸಲು ಯತ್ನಿಸದಿರುವ ಸಾಧನಗಳಾಗಲಿ ರೂಪುಗೊಂಡಿರಲಿಲ್ಲ. ದುಡಿಮೆ ಎಂಬುದು ಸಾಧ್ಯವಾಗುವುದು ಮನುಷ್ಯನ ದೈಹಿಕ ಶಕ್ತಿಯಿಂದಾದರೂ ಸಹ ಆ ಬಲವನ್ನು ಕೌಶಲ್ಯಪೂರ್ಣವಾಗಿ ಅನ್ವಯಿಸಲು ಬೇಕಾದ ಪರಿಕರಗಳು ಅನ್ವೇಷಿಸಲ್ಪಟ್ಟಿರದ ಕಾರಣ ಆ ಹಂತದಲ್ಲಿ ಮನುಷ್ಯ ಯಾವ ಮೂಲದಿಂದಲೂ ಆಹಾರವನ್ನು ಉತ್ಪಾದಿಸಲು ಸಾಧ್ಯವಿರಲಿಲ್ಲ. ಈ ಕಾರಣದಿಂದ ಆಹಾರವು ಸಂಗ್ರಹಿಸಲ್ಪಡುತ್ತಿತ್ತು, ಮತ್ತು ಸಂಗ್ರಹಣೆಯ ಒಂದು ಸಾಂಘಿಕ ಕ್ರಿಯೆಯಾಗಿರುವ ಕಾರಣ ಈ ಹಂತದಲ್ಲಿ ದುಡಿಮೆ ಸಂಬಂಧಗಳು ರೂಪುಗೊಂಡಿರಲಿಲ್ಲ.

ಬೇಟೆಯ ಹಂತದಲ್ಲಿ ಇವರು ಸಾಂಘಿಕತೆಯನ್ನು ಹೊಂದಲಾರಂಭಿಸಿದರು. ಪ್ರಕೃತಿಯಲ್ಲಿ ಸಹಜವಾಗಿ ದೊರೆಯುವ ಧಾನ್ಯ, ಹಣ್ಣು ಹಂಪಲು, ಪ್ರಾಣಿ ಪಕ್ಷಿಗಳು ಮೊದಲಾದ ಆಹಾರಗಳನ್ನು ಸಂಗ್ರಹಿಸುವ ಅಥವಾ ಬೇಟೆಯಾಡಿ ಜೀವಿಸುವ ಮಾನವರು ಚಿಕ್ಕ ಚಿಕ್ಕ ಗುಂಪುಗಳಾಗಿ ಕೂಡುತ್ತಾರೆ. ರಕ್ಷಣೆಗಾಗಿ ಇದು ಅಗತ್ಯ. ಅಲ್ಲದೆ ಪ್ರತಿದಿನ ಪ್ರತಿಯೊಬ್ಬರೂ ಹೀಗೆ ತಮಗೆ ಸಾಕಾಗುವಷ್ಟು ಆಹಾರವನ್ನು ಸಂಪಾದಿಸಿಯೇ ಸೇರುತ್ತಾರೆ ಎನ್ನಲು ಸಾಧ್ಯವಿಲ್ಲವಾದ್ದರಿಂದ ಗುಂಪು ಗುಂಪಾಗಿ ಆಹಾರ ಸಂಗ್ರಹಣೆ ಮಾಡಲಾಗುತ್ತಿತ್ತು.

ಅರಣ್ಯ ಕಾಯ್ದೆಯನ್ವಯ, ಈಚಲು ಮರ ಕಡಿಯುವ ಪ್ರಕ್ರಿಯೆಯಲ್ಲಿ ಕರ್ನಾಟಕದ ಮಹಿಳೆಯರ ಸ್ಪಷ್ಟ ಪಾತ್ರ ವಹಿಸಿದರು. ಅರಣ್ಯಕಾನೂನನ್ನು ಮುರಿದು ಬಿಸಿಲಕೊಪ್ಪ ಮುಕ್ಕುಂಟೆಯವರನ್ನು ದಸ್ತಗಿರಿ ಮಾಡಿದಾಗ ಅವರ ಹೆಂಡತಿ ತಾವೂ ಒಂದು ಮರ ಕಡಿದು ತನ್ನನ್ನು ದಸ್ತಗಿರಿ ಮಾಡಬೇಕೆಂದು ಹಟ ತೊಟ್ಟರು. ಪೋಲಿಸರು ನಿರಾಕರಿಸಿದಾಗ ಅವರ ಹೇಡಿತನಕ್ಕೆ ಬಳೆಗಳನ್ನು ಕೊಟ್ಟು ಪ್ರತಿಭಟಿಸಿದರು. ಬಳ್ಳಾರಿ ಸಿದ್ಧಮ್ಮ ಮತ್ತು ನಾಗರತ್ನಮ್ಮ ಹಿರೇಮಠ ಅವರ ಹಿರಿತನದಲ್ಲಿ ಚಿತ್ರದುರ್ಗ, ದಾವಣಗೆರೆ, ತುಮಕೂರು, ಶಿರಾ ಭಾಗಗಳಲ್ಲಿ ಈಚಲು ಮರ ಕಡಿಯುವ ಯಜ್ಞ ಒಳ್ಳೆಯ ಪ್ರತಿಕ್ರಿಯೆಯನ್ನು ತಂದಿತು ಎಂದು ತಿಳಿಸಲಾಗಿದೆ.

ಕೊರವರು ವಾಸಿಸುವುದಕ್ಕೆ ಸಾಮಾನ್ಯವಾಗಿ ಗುಡಿಸಲುಗಳಿವೆ. ಸರ್ಕಾರದ ಸವಲತ್ತಿನಿಂದಾಗಿ ಇತ್ತೀಚೆಗೆ ಆಶ್ರಯ ಮನೆಗಳು, ಹಂಚಿನ ಮನೆಗಳು, ಅವರವರ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿಕೊಂಡಿರುವುದು ಕಂಡುಬರುತ್ತದೆ. 'ಉದ್ಯೋಗಂ ಪುರುಷ ಲಕ್ಷಣಂ' ಎಂಬ ಮಾತಿದೆ. ಆದರೆ ಅದರ ಜೊತೆಗೆ 'ಉದ್ಯೋಗಂ ಸ್ತ್ರೀ ಲಕ್ಷಣಂ' ಎಂಬಂತಹ ಪರಿಸ್ಥಿತಿಯು ಏರ್ಪಾಡಾಗುತ್ತಿದೆ. ಇಂದಿನ ಬದಲಾದ ಸಮಾಜದ ಪರಿಸ್ಥಿತಿಯಲ್ಲಿ ಎಲ್ಲಾ ಸ್ಥಾನ ಮಾನಗಳ ಜೊತೆಗೆ ಉದ್ಯೋಗ ಸ್ಥಾನದಲ್ಲಿ ಪ್ರಮುಖವಾಗಿ ಸ್ತ್ರೀಯರು ಕಾಣಿಸಿಕೊಳ್ಳುತ್ತಿದ್ದಾರೆ. ಕುಲ ಕಸುಬು ಮಾನವನ ಜೀವನದ ಚಕ್ರ ತಿರುಗಲು ಮುಖ್ಯವಾಗಿ ಬೇಕಾದ ಜೀವತಸ್ವದ ಚೈತನ್ಯವಿದ್ದಂತೆ. ತಮ್ಮ ಕಸುಬುಗಳನ್ನು ಮಾಡುವುದರ ಜೊತೆಗೆ ಹಚ್ಚೆ ಹುಯ್ಯುವುದು, ಈಚಲು ತೆಗೆದುಕೊಂಡು ಬಂದು ಬುಟ್ಟಿಗಳನ್ನು ಹೆಣೆಯುವುದು ಕಂಡುಬರುತ್ತದೆ.

ಕೊರವರ ಪುರುಷರು ತಮ್ಮ ದುಡಿಮೆಯಿಂದ ಗಳಿಸುವ ಆದಾಯವು ಮುಕ್ತವಾಗಿ ತಮ್ಮ ಖರ್ಚನ್ನೇ ಅಧಿಕವಾಗಿ ನೋಡಿಕೊಳ್ಳುತ್ತಾರೆ. ಕೊರವರು ಕೂಡಿ ಇರುವುದರಿಂದ ಅವರು ನೋಡಿ ಕೊಳ್ಳುತ್ತಾರೆ, ಇವರು ನೋಡಿಕೊಳ್ಳುತ್ತಾನೆ ಎಂದು ಕುಂಟುಬದ ಹೊರೆಯನ್ನು ಮಹಿಳೆಯರ ಮೇಲೆ ಹೇರಲಾಗುತ್ತದೆ. ಆದ್ದರಿಂದ ಆಕಡೆ ಈಕಡೆ ಒದ್ದಾಡದೇ ಮನೆಯ ಜವಾಬ್ದಾರಿಯನ್ನು ಸುಧಾರಿಸಿ ಕೊಂಡು ಹೋಗುವುದುಂಟು. ತಿಳುವಳಿಕೆಯುಳ್ಳ ಪುರುಷರು ಮನೆಯ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನೋಡಿಕೊಳ್ಳುತ್ತಾರೆ. 'ಕೊರವ ಕೂಡಿ ಕೆಟ್ಟ, ದೊಂಬ ಅಗಲಿ ಕೆಟ್ಟ', ಎಂಬ ಗಾದೆಯು ಮುಖ್ಯವಾಗಿ ಕಂಡುಬರುತ್ತದೆ. ಇವರಿಗೆ ಒಗ್ಗಟ್ಟು ಎಂಬುದೇ ತಿಳಿಯುವುದಿಲ್ಲ. ಜೊತೆ ಜೊತೆಗೆ ಇದ್ದು ಜಗಳ ವಾಡುವುದು, ದೂರ ಇರುವುದರಿಂದ ಪ್ರೀತಿ ವಿಶ್ವಾಸಗಳು ಹೆಚ್ಚಾಗಿರುತ್ತವೆ. ವರ್ಷಕ್ಕೊಂದು ಬಾರಿ ಬಂದು ಹೋಗುವುದರಿಂದ ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಪ್ರತಿದಿನ ನೆರೆಹೊರೆಯವರ ಜೊತೆ ಯಾವುದೋ ಕಾರಣಕ್ಕೆ ಜಗಳವಾಡುವುದು ಕೊರವರ ಓಣಿಗಳಲ್ಲಿ ಕಂಡುಬರುತ್ತದೆ.

ಕೊರವ ಸಮುದಾಯಗಳು ತಮ್ಮ ತಮ್ಮ ಕಲ್ಯಾಣ ಸಾಧನೆಗಾಗಿ ಸಂಘಟನೆಗಳನ್ನು ಕಟ್ಟಿ ಕೊಳ್ಳುತ್ತಿವೆ. ಹೀಗೆ ಸಂಘಟಿತವಾಗುವ ಸಮುದಾಯದ ಆಶಯಗಳು ಮಾತ್ರ ರಾಜಕೀಯವಾಗಿ ತೀರಾ ಅಮಾಯಕ ನೆಲೆಗಳಿಂದಲೇ ರೂಪುಗೊಂಡಿರುತ್ತವೆ. ಬಹುತೇಕವಾಗಿ ಜಾತಿ ಸಂಘಟನೆಗಳ ರಾಜಕೀಯ ನೆಲೆಗಳು ವ್ಯವಸ್ಥೆಗೆ ಪೂರಕವಾಗಿಯೇ ಇವೆ. ಕೇವಲ ಮೀಸಲಾತಿ ಮತ್ತು ಅನುದಾನ ಗಳನ್ನು ಪಡೆಯುವ ಸೀಮಿತ ಉದ್ದೇಶಗಳಿಗಾಗಿ ಮಾತ್ರ ಸಂಘಟನೆಗಳು ಹುಟ್ಟಿಕೊಳ್ಳುತ್ತಿವೆ. ಮುಂದೆ ''ಸೈದ್ಧಾಂತಿಕವಾಗಿ ಸ್ಪಷ್ಟವಾಗಿಲ್ಲದ ಯಾವುದೇ ಸಂಘಟನೆ ಎಷ್ಟೆ ಬಲಶಾಲಿಯಾಗಿದ್ದರೂ ಸಹ ಅಂತಿಮವಾಗಿ ಅದು ವ್ಯವಸ್ಥೆಗೆ ಪೂರಕವಾಗಿ ಶೋಷಣೆಯ ಕೇಂದ್ರವಾಗಿಯೇ ರೂಪಗೊಳ್ಳುತ್ತದೆ. ಅಲ್ಲಿ ಸಮುದಾಯದ ದುರ್ಬಲರ ರಕ್ಷಣೆ ಮತ್ತು ಹಿತ ಸಂವರ್ಧನೆಯ ಮಾತು ಕನಸಾಗಿಯೇ ಉಳಿಯುತ್ತದೆ".[೨]

ಯಾವ ಜನಾಂಗವೇ ಆಗಲಿ ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರಗತಿ ಹೊಂದಬೇಕಾದರೆ ಶಿಕ್ಷಣ ಅತ್ಯವಶ್ಯಕ. ಸರಿಯಾದ ಶಿಕ್ಷಣವಿಲ್ಲದಿದ್ದಲ್ಲಿ ಯಾವ ಯೋಜನೆಯೂ ಫಲಕಾರಿಯಾಗದು. ''ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ೩೦ ಕೋಟಿ ರೂಪಾಯಿಗಳನ್ನು ಶಿಕ್ಷಣಕ್ಕಾಗಿ ಮಂಜೂರು ಮಾಡಲಾಗಿದೆ. ಉನ್ನತ ವ್ಯಾಸಾಂಗಕ್ಕಾಗಿ ತೆರಳುವ ಆದಿವಾಸಿ ವಿದ್ಯಾರ್ಥಿಗಳಿಗೆ ಆಸ್ಸಾಂ, ಬಿಹಾರ್, ಗುಜರಾತ್ ಹಾಗೂ ಮಹಾರಾಷ್ಟ್ರ ಸರ್ಕಾರಗಳು ವಿದ್ಯಾರ್ಥಿ ವೇತನಗಳನ್ನು ಕೊಡುತ್ತಿವೆ. ಕೇಂದ್ರ ಸರ್ಕಾರ ಶಿಕ್ಷಣಕ್ಕಾಗಿ ಕೊಡುವ ಒಟ್ಟು ಮೊಬಲಗಿನಲ್ಲಿ ಶೇಕಡ ೧೭% ಭಾಗ ಆದಿವಾಸಿ ವಿದ್ಯಾರ್ಥಿಗಳಿಗೆ ಮೀಸಲಾಗಿದೆ. ಸುಧಾರಿತ ಸನ್ನಿವೇಶಗಳಲ್ಲಿ ಹಾಸ್ಟೆಲ್ ಸೌಲಭ್ಯವನ್ನು ಕಲ್ಪಿಸಿ ಕೊಡಲಾಗಿದೆ. ಆದರೆ ಸ್ವಾತಂತ್ರ್ಯಪ್ರಿಯರಾದ ಆದಿವಾಸಿಗಳಿಗೆ ತರಗತಿಯ ಕೋಣೆಗಳ ಶಿಕ್ಷಣ ವ್ಯವಸ್ಥೆ ಹಿಡಿಸುವುದಿಲ್ಲ. ಈ ವ್ಯವಸ್ಥಿತ ಕ್ರಮ ಅವರಿಗೆ ಕ್ರೂರ ಹಿಂಸೆಯಂತಿದೆ. ಕೇವಲ ಶಾಲೆಯ ಶಿಕ್ಷಣದಿಂದ ಅವರಿಗೆ ಬೇಸರವಾಗಬಾರದೆಂದು ಅವರ ಪಂಚಪ್ರಾಣವಾದ ಗಾಯನ, ನೃತ್ಯ ಮುಂತಾದ ಮನರಂಜನೆಯ ಸೌಲಭ್ಯಗಳನ್ನು ಒದಗಿಸಲಾಗಿದೆ. ಇಂದು ೩೦೦ ಆಶ್ರಯ ಮಾದರಿಯ

ಶಾಲೆಗಳು ಆಂಧ್ರಪ್ರದೇಶ, ಗುಜರಾತ್, ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ, ಒರಿಸ್ಸಾ, ರಾಜಸ್ಥಾನ, ಹಿಮಾಚಲ ಪ್ರದೇಶ ಹಾಗೂ ತ್ರಿಪುರ ಮುಂತಾದ ಕಡೆಗಳಲ್ಲಿ ಸ್ಥಾಪಿತವಾಗಿದೆ. ಆದಿವಾಸಿಗಳಿಗೆ ಅವರವರ ಮಾತೃಭಾಷೆಯಲ್ಲಿಯೇ ಶಿಕ್ಷಣ ನೀಡಬೇಕೆಂಬ ತನ್ನ ಧೋರಣೆಯನ್ನು ಭಾರತ ಸರ್ಕಾರ ಸಮ್ಮೇಳನಗಳಲ್ಲಿ ಪ್ರಕಟಿಸದೇ ಇದ್ದರೂ ಅವರು ಪ್ರಾಂತೀಯ ಭಾಷೆಗಳನ್ನು ಕಲಿಯುವಂತೆ ಮಾಡಿರುವ ಉದಾಹರಣೆಗಳು ಇವೆ. ಅವರ ಶಿಕ್ಷಣಕ್ಕಾಗಿ ಭಾರತ ಸರ್ಕಾರ ಕೋಟ್ಯಂತರ ರೂಪಾಯಿಗಳನ್ನು ವೆಚ್ಚ ಮಾಡುತ್ತಿದೆ".[೩] ಕೊರವರ ಸಮುದಾಯದಲ್ಲಿ ಮೇಲಿನ ವಿಷಯದ ಬಗ್ಗೆ ಇವರಿಗೆ ತಿಳುವಳಿಕೆಯಿಲ್ಲ ದಿರುವುದಕ್ಕೆ ಕಾರಣ ಶಿಕ್ಷಣವೇ ಪ್ರಮುಖ ಅಂಶವಾಗಿದೆ. ಇಂದು ಶಿಕ್ಷಣದಲ್ಲಿ ದೊರೆಯುತ್ತಿರುವ ಸೌಲಭ್ಯಗಳನ್ನು ಪಡೆಯುವಲ್ಲಿ ವಿಫಲರಾಗಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಹಲವಾರು ಸಮುದಾಯಗಳಿಗೆ ಸಹಾಯಧನ ಶಿಕ್ಷಣದ ವ್ಯವಸ್ಥೆ, ವಸತಿ ಸೌಲಭ್ಯ ಮೊದಲಾದ ಸೌಲಭ್ಯಗಳನ್ನು ನೀಡುತ್ತಿರುವುದು ವಿದ್ಯಾವಂತ ಅಥವಾ ತಿಳುವಳಿಕೆ ಉಳ್ಳವರಿಗೆ ಇದು ತಿಳಿದು ಬರುತ್ತದೆ.

ವಸತಿ

ಮೊದಮೊದಲು ಅಲೆಮಾರಿಗಳಾದ ಕೊರವರು ತಂಡೋಪತಂಡವಾಗಿ ಗುಡ್ಡಗಾಡುಗಳಲ್ಲಿ ವಾಸಿಸುತ್ತಿದ್ದರು. ನಂತರ ನೆಲೆ ನಿಂತು ಅದರಲ್ಲಿಯೂ ಕೆಲವರು ತಮ್ಮ ಕುಲಕಸುಬಿಗೆ ಬೇಕಾದ ವಸ್ತುಗಳನ್ನು ತರಲು ಆಂಧ್ರದ ಕಡೆಗಳಲ್ಲಿ ಒಂದು ತಿಂಗಳವರೆಗೆ ತೆರಳಿ ಅಲ್ಲಿಯೇ ಬಿಡಾರ ಹೂಡಿಕೊಂಡು ಇರುತ್ತಾರೆ. ವ್ಯಾಪಾರಕ್ಕೆ ಬೇಕಾದ ಈಚಲು ಗರಿಗಳನ್ನು ತೆಗೆದುಕೊಂಡು ಪುನಃ ವಾಸಸ್ಥಾನಕ್ಕೆ ಬರುತ್ತಾರೆ. ಈ ಸಮುದಾಯದಲ್ಲಿ ಕೆಲವರು ಅರೆ ಅಲೆಮಾರಿಗಳಂತೆ ಜೀವನ ನಡೆಸುತ್ತಾರೆ.

‘‘ನಮ್ಮಪ್ಪನ ಹೆಂಡತಿಗೆ ಯಾವುರ್‍ಗಿ ಕೊಡಲೆವ್ವ
ಕ್ವಾಟಿ ತೆಳಗಿರುವ ಕೊರವಾಗ | ಕೊಟ್ಟ
ಬಾಲೀಗಿ ಚಿಂತೆ ನನಗಿಲ್ಲ"[೪]

ಇವರಿಗೂ ಸರಕಾರದಿಂದ ಆಶ್ರಯ ಮನೆಗಳು ನೀಡಲಾಗಿದೆ. ಕೆಲವರಿಗೆ ಮಾತ್ರ ಆಶ್ರಯ ಮನೆಗಳ ಸೌಲಭ್ಯ ದೊರೆತಿದೆ. ಇನ್ನೂ ಕೆಲವರಿಗೆ ಇಲ್ಲಿಯವರಿಗೂ ಆಶ್ರಯ ಮನೆಗಳಿಲ್ಲ. ತಾತ ಮುತ್ತಜ್ಜಗಳ ಕಾಲದ ಮನೆಗಳಲ್ಲಿಯೇ ವಾಸಿಸುತ್ತಿದ್ದಾರೆ. ಉದಾಹರಣೆಗೆ ಸಿರುಗುಪ್ಪದ ಕೊರವರ ಬೀದಿ, ಬಳ್ಳಾರಿಯಲ್ಲಿರುವ ಬಂಡಿ ಮೋಟು ಕೊರವರ ಬೀದಿ. ಕೆಲವೆಡೆ ಕೊರವರು ಒಂದೇ ಕೇರಿಯಲ್ಲಿರುವುದು ಕಾಣುತ್ತೇವೆ. ಇಂದಿನ ದಿನಗಳಲ್ಲಿ ಕೆಲವರು ದೂರ ದೂರ ವಾಸಿಸುವುದನ್ನು ನೋಡಬಹುದು. ನೌಕರಿಯನ್ನರಸಿ ಹೋದವರು ತಮ್ಮ ಕೇರಿಯಲ್ಲಿರದೇ ಬೇರೆ ಜಾತಿಯವರೊಡನೆ ಹೊಂದಿಕೊಂಡಿರುವುದು ಕಾಣಬಹುದಾಗಿದೆ. ಇವರ ಬಹಳಷ್ಟು ಕೊರವರ ಮನೆಗಳು ತುಂಬಾ ಸರಳವಾಗಿವೆ. ಇವರಲ್ಲಿ ತಿಳುವಳಿಕೆ ಮತ್ತು ಬುದ್ಧಿವಂತರು ತಮ್ಮ ವಸತಿಯನ್ನು ಅಚ್ಚುಕಟ್ಟಾಗಿರಲು ಬಯಸುತ್ತಾರೆ. ಇಂದಿನ ಆಧುನಿಕತೆಗೆ ಹೊಂದಿಕೊಂಡು ಬೇರೆಯವರಂತೆ ಇರುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ನೌಕರಿಯಲ್ಲಿರುವವರು, ಮುಖಂಡರು ಸ್ಥಿತಿವಂತರು ಮಾತ್ರ ದೊಡ್ಡ ಮನೆಗಳಲ್ಲಿ

ವಾಸಿಸುತ್ತಿದ್ದಾರೆ. ನೌಕರಿ ಇಲ್ಲದೆ ಇರುವಂತಹವರು ಸರಳವಾದ ರೀತಿಯಲ್ಲಿ ಹೊಂದಿಕೊಂಡು ಹೋಗುತ್ತಿದ್ದಾರೆ. ಮಕ್ಕಳಿಗೆ ಇಂದಿನ ಪರಿಸರದ ಪ್ರಭಾವದಿಂದ ನಮ್ಮಲ್ಲಿಯೂ ಈ ರೀತಿ ಇರಬೇಕು ಎಂಬ ಹಂಬಲವು ಅಧಿಕವಾಗುತ್ತಿದೆ.

ಚುನಾವಣೆಗಳಲ್ಲಿ ಕೊರವರ ಕೇರಿಯ ಉದ್ಧಾರಕ್ಕೆ ಹಣವನ್ನು ಕೊಡುದನ್ನು ಕಾಣುತ್ತೇವೆ. ಅವರು ಇದನ್ನು ದೈವದವರ ಕೈಯಲ್ಲಿ ಕೊಟ್ಟು ತಮ್ಮ ದೇವಾಲಯದ ಅಭಿವೃದ್ಧಿಗೆ ಮತ್ತು ಮನೆಗಳಿಗೆ ಹಣವನ್ನು ಹಂಚಿ ಬಿಡುತ್ತಾರೆ. ಆದ್ದರಿಂದ ಮನೆ ಮನೆಗೆ ಹಣ ಸೇರುವುದರಿಂದ ಇವರು ಬೇರೆ ಬೇರೆ ಖರ್ಚುಗಳಿಗೆ ಬಳಸಿಬಿಡುತ್ತಾರೆ. ತಮ್ಮ ಮನೆಯ ಖರ್ಚುಗಳಿಗೆ ಉಳಿಸಿಕೊಳ್ಳುವುದಿಲ್ಲ. ಗುಡಿಸಲುಗಳನ್ನು, ಕಲ್ಲಿನ ಮನೆಗಳನ್ನು, ಆಶ್ರಯ ಮನೆಗಳನ್ನು, ತಮಗೆ ಇಚ್ಛೆಯಂತೆ ಕಟ್ಟಿಸಿ ಕೊಂಡಿರುವುದನ್ನು ನೋಡಬಹುದಾಗಿದೆ. ಚುನಾವಣೆಯ ಸಂದರ್ಭದಲ್ಲಿ ರಾಜಕೀಯ ವ್ಯಕ್ತಿಗಳು ಮನೆ ಕಟ್ಟಿಕೊಡಲು ಆಶ್ವಾಸನೆ ನೀಡುತ್ತಾರೆ. ಕೆಲವು ಪಕ್ಷಗಳು ಕೊರವರ ಸಮುದಾಯದ ಮುಖಂಡನ ಕೈಯಲ್ಲಿ ಹಣವನ್ನು ನೀಡುತ್ತಾರೆ. ಸರಕಾರದಿಂದ ಕೆಲವರಿಗೆ ಆಶ್ರಯ ಮನೆ ದೊರೆತಿರುವುದು ಕಾಣಬಹುದಾಗಿದೆ.

ಊಟೋಪಚಾರಗಳು

ಕೊರವರು ಸಸ್ಯಹಾರಿಗಳೂ ಹೌದು, ಮಾಂಸಹಾರಿಗಳೂ ಹೌದು. ಹೆಚ್ಚಿನ ಪ್ರಮಾಣದಲ್ಲಿ ಇವರು ಮಾಂಸಾಹಾರಿಗಳೆಂದು ಕಂಡುಬರುತ್ತದೆ. ಇವರು ವಿಶೇಷವಾದ ಆಹಾರವನ್ನು ತಯಾರಿಸು ವುದಿಲ್ಲ. ಆದರೂ ಹಬ್ಬ ಹರಿದಿನಗಳಲ್ಲಿ ಹೋಳಿಗೆ, ಮರುಗಡಬು ಇತ್ಯಾದಿ ಸಿಹಿ ಪದಾರ್ಥಗಳನ್ನು ಮಾಡಿಕೊಳ್ಳುತ್ತಾರೆಂದರೂ ಬಹುಪಾಲು ಜನರು ಇಂತಹ ಸಂದರ್ಭದಲ್ಲೆಲ್ಲಾ ಮಾಂಸಾಹಾರವನ್ನೇ ಅಧಿಕವಾಗಿ ಬಳಸುವುದಾಗಿ ತಿಳಿದುಬರುತ್ತದೆ. ಬಂಧುಗಳಿಗೆ ಹಬ್ಬ ಮುಗಿದ ಮೇಲೆ ಇಂತಹ ಆಹಾರವನ್ನು ತಯಾರಿಸುವುವುದು ಇಂದಿಗೂ ಕಂಡುಬರುವುದುಂಟು. ಕೊರವರು ವಿಶೇಷವಾಗಿ ಉಡುಗೆ ತೊಡುಗೆಗಳನ್ನು ತೊಡುವುದಿಲ್ಲ. ಏಕೆಂದರೆ ಅವರಿಗೆ ದುಡಿಮೆಯ ಲಾಭವು ಅಷ್ಟಕಷ್ಟೆ ಆಗಿರುತ್ತದೆ. ಉತ್ತಮ ಸ್ಥಿತಿಯಲ್ಲಿರುವವರು ತಮಗೆ ಇಚ್ಛೆ ಬಂದ ಉಡುಪುಗಳನ್ನು ತೆಗೆದುಕೊಳ್ಳುತ್ತಾರೆ. ವಾಲಗ ಊದುವಾಗ ಯಾವಾಗಲೂ ಬಿಳಿಯ ವಸ್ತ್ರವನ್ನೇ ಧರಿಸಿರುತ್ತಾರೆ. ಆಧುನಿಕತೆ ಪ್ರಭಾವದಿಂದ ಗಂಡಸರು ಮತ್ತು ಹೆಂಗಸರು ಜೀನ್ಸ್ ಪ್ಯಾಂಟ್, ಟೀ ಶರ್ಟ್ ತೊಡುತ್ತಾರೆ. ಅದೇ ಸ್ತ್ರೀಯರು ಸೀರೆ, ಲಂಗಾದಾವಣಿ ತೊಡುತ್ತಾರೆ. ಆಧುನಿಕತೆ ಪ್ರಭಾವದಿಂದಾಗಿ ಓದದಿರುವ ಹುಡುಗಿಯರು ಅಥವಾ ಅನಕ್ಷರಸ್ಥರು ಸಹ ಚೂಡಿದಾರ ಹಾಕಿಕೊಳ್ಳುವುದನ್ನು ನೋಡಬಹುದು.

ಊಟೋಪಚಾರಗಳ ಬಗೆಗೆ ಅಷ್ಟಾಗಿ ಗಮನ ಕೊಡುವುದಿಲ್ಲ. ದಿನವಿಡೀ ಅವಿಶ್ರಾಂತವಾಗಿ ದುಡಿಯುವ ಮನೆಯಲ್ಲಿ ಮಹಿಳೆಯರು ಆ ಹೊತ್ತಿಗೆ ಯಾವುದೋ ಅಡಿಗೆ ಮಾಡಿ ಊಟ ಮಾಡುತ್ತಾರೆ. ಕೆಲವರು ಮನೆಯಲ್ಲೇ ಇದ್ದು ಕೆಲಸ ಮಾಡಿಕೊಂಡು ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಹಬ್ಬ ಹರಿದಿನಗಳಲ್ಲಿ ಯಾರಾದರೂ ಸಂಬಂಧಿಕರು ಬಂದಿದ್ದಾರೆ, ಅವರಿಗೆ ಮಾಂಸದ ಅಡಿಗೆಯನ್ನು ಮಾಡುತ್ತಾರೆ.

ಮುದ್ದೆ, ಅನ್ನ, ರೊಟ್ಟಿ, ಸೊಪ್ಪಿನ ಪಲ್ಯ, ಚಟ್ನಿ, ಸಾರು, ಕಾಳು ಪಲ್ಯ, ಹೊಲದಲ್ಲಿ ದೊರೆಯುವ ಸೊಪ್ಪು ನಿತ್ಯದ ಸಸ್ಯಹಾರದ ಸಂದರ್ಭಗಳು ಇರುತ್ತದೆ. ಕಾಫಿಯನ್ನು ಮನೆಯಲ್ಲಿ ಮಾಡುವುದಿಲ್ಲ. ಹೋಟೆಲ್‌ಗಳಿಂದ ತಂದು ಕುಡಿಯುತ್ತಾರೆ. ಅಪರೂಪಕ್ಕೆ ಸಂಬಂಧಿಕರು ಬಂದರೆ ಮನೆಯ್ಲಿಯೇ ಮಾಡುವುದುಂಟು. ಸ್ತ್ರೀಪುರುಷರಿಬ್ಬರಿಗೂ ಸಮಾನ ಆಹಾರದ ಅಗತ್ಯವಿರುತ್ತದೆ. ಆದರೆ ಸಂಪ್ರದಾಯದಲ್ಲಿ ಮೊದಲು ಗಂಡನಿಗೆ ಬಡಿಸಿದ ನಂತರ ಮಕ್ಕಳು ತಿಂದ ಮೇಲೆ ಉಳಿದ ಆಹಾರವನ್ನು ಹೆಂಡತಿಯು ಪಡೆಯಬೇಕಾಗಿತ್ತು. ಅವರಿಗೆ ಎಲ್ಲ ಪೌಷ್ಟಿಕ ಆಹಾರ ಸಿಗುತ್ತದೆ. ಮಹಿಳೆ ಮಾತ್ರ ಉಳಿದರೆ ತಿನ್ನಬೇಕು, ಇಲ್ಲವಾದರೆ ನೀರು ಕುಡಿದು ಮಲಗಬೇಕಾಗುತ್ತದೆ.

ಸಸ್ಯಹಾರ ಮತ್ತು ಮಾಂಸಾಹಾರ ಎರಡೂ ರೂಢಿಸಿಕೊಂಡಿರುವ ಕೊರವರು, ಪಶುಪಾಲನೆ ಮತ್ತು ಬೇಸಾಯದಲ್ಲಿ ತೊಡಗಿರುವುದರಿಂದ ತಾವು ವಾಸಿಸುವ ಪ್ರದೇಶಗಳಿಗೆ ಅನುಗುಣವಾಗಿ ದೊರೆಯುವ ಆಹಾರ ಪದಾರ್ಥಗಳನ್ನು ಬಳಸುತ್ತಾರೆ. ಮಾಂಸಹಾರಕ್ಕಾಗಿ ಸಾಕುಪ್ರಾಣಿಗಳಾದ ಕೋಳಿ, ಕುರಿ, ಮೇಕೆ, ಹಂದಿ ಬೇಟೆಯಾಡಿ ತಂದವರು ಪ್ರಾಣಿಗಳನ್ನು ವಿಶೇಷ ಸಂದರ್ಭಗಳಲ್ಲಿ ಬಳಸುತ್ತಾರೆ. ಭತ್ತ, ರಾಗಿ, ಜೋಳ, ಹಳದಿ ಜೋಳ (ಈಗ ನಲವತ್ತು, ಐವತ್ತು ವರ್ಷದ ಹಿಂದೆ ಹಳದಿ ಜೋಳವನ್ನು ನಾವು ಬೆಳೆಯುತ್ತಿದ್ದುದಾಗಿಯೂ, ಚಿತ್ತಿದ ಆರು ತಿಂಗಳಿಗೆ ಈ ಹಳದಿ ಜೋಳದ ಬೆಳೆ ಬರುತ್ತಿತ್ತು ಎಂಬ ಮಾಹಿತಿಯನ್ನು ಅಮಲಾಪುರದ ಹುಲಿಗೆಮ್ಮ ಮತ್ತು ಭೀಮಪ್ಪ ದಂಪತಿಗಳು ತಿಳಿಸುತ್ತಾರೆ) ಗೋಧಿ, ನವಣೆ, ಸಜ್ಜೆ, ಶ್ಯಾವಿ ಮೊದಲಾದ ಆಹಾರ ಧಾನ್ಯಗಳನ್ನು ತೊಗರಿ, ಅಲಸಂದಿ, ಮಡಿಕೆ, ಹೆಸರು, ಹುರುಳಿ ಇತ್ಯಾದಿ ಬೆಳೆಗಳನ್ನು, ಎಳ್ಳು, ಗುರುಳ್ಳು, ಸೂರ್ಯಕಾಂತಿ ಮೊದಲಾದವುಗಳನ್ನು ಮುಖ್ಯವಾಗಿ ಬೆಳೆಯುತ್ತಾರೆ. ಪುಂಡಿಸೊಪ್ಪು, ಕೊಣ್ಣೆ ಪಲ್ಲಿ, ಅಣಬೆ, ಅಲೆಸೊಪ್ಪು, ತರಕಾರಿಗಳನ್ನು ಬೆಳೆಸುತ್ತಾರೆ. ಪುಂಡಿಸೊಪ್ಪು ಕೊರವರಿಗೆ ಅತ್ಯಂತ ಪ್ರಿಯವಾದ ತರಕಾರಿಯಾಗಿದೆ. ಹಾಲು, ಮೊಸರು, ಮಜ್ಜಿಗೆಗಳ ಬಳಕೆ ಕೂಡಾ ಇದೆ.

ಜೋಳದ ನುಚ್ಚಿನ ಅಂಬಲಿ, ಹಿಟ್ಟಿನ ರೊಟ್ಟಿ, ಮುದ್ದೆ, ರಾಗಿ ಮುದ್ದೆ ಹಾಗೂ ರಾಗಿ ರೊಟ್ಟಿ, ನವಣೆ ಅನ್ನ, ಶ್ಯಾವಕ್ಕಿ ಅನ್ನವನ್ನು ಆಹಾರವಾಗಿ ದಿನನಿತ್ಯ ಬಳಸುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಅಂದರೆ ಬೀಗರು ಬಂದಾಗ, ಹಬ್ಬ ಹರಿದಿನಗಳಲ್ಲಿ ಗೋಧಿ ಹುಗ್ಗಿ, ನೆಲಕ್ಕಿ ಅನ್ನವನ್ನು ಮಾಡುತ್ತಾರೆ. ಕರಿ ಎಂದು ಕರೆಯುವ ಕೋಳಿ, ಕುರಿ ಮಾಂಸದ ಅಡುಗೆ ಮಾಡುವುದಕ್ಕೆ ಕರಿ ಎಂದು ಕರೆಯುತ್ತಾರೆ. 'ಹೊಟ್ಟೆ ತುಂಬ ಹಿಟ್ಟು, ಬಾಯಿ ತುಂಬ ಅನ್ನ' ಎಂಬ ಗಾದೆ ಮಾತು ಬೆಳೆದು ಬಂದಿದೆ. ಅನ್ನವನ್ನು ಸ್ವಲ್ಪ ಮಟ್ಟಿಗೆ ತಿಂದು ಉಳಿದಂತೆ ಹೊಟ್ಟೆ ತುಂಬ ತಮ್ಮ ದೈನಂದಿನ ಮುಖ್ಯವಾದ ಆಹಾರವಾದ ಮುದ್ದೆಯನ್ನು ಇವರು ಬಳಸುವುದು ಈ ಮಾತಿನಿಂದ ತಿಳಿದುಬರುತ್ತದೆ.

ಸುಟ್ಟ ಹಂದಿಯ ಚರ್ಮವನ್ನು ವಾರ್ ಎಂದು ಕರೆಯುತ್ತೇವೆ. ಇದರಲ್ಲಿ ಕೊಬ್ಬಿನ ಅಂಶ ಹೆಚ್ಚಾಗಿದ್ದು, ತಿನ್ನಲು ತುಂಬಾ ರುಚಿ ಇರುವುದರಿಂದ ಅದನ್ನು ಹಾಗೆಯೇ ತಿನ್ನುತ್ತೇವೆ ಎಂದು ಹನುಮಂತಪ್ಪ ಅವರು ತಿಳಿಸುತ್ತಾರೆ. ಕಾಡುಹಂದಿ ಮಾಂಸದ ಅಡುಗೆಯನ್ನು ಉಳಿದ ಕುರಿ, ಮೇಕೆ,

ಕೋಳಿ ಮಾಂಸದ ಅಡುಗೆ, ಮಾಡುವಂತೆ ಮನೆಯ ಒಳಗೆ ಮಾಡದೆ, ಮನೆಯ ಅಂಗಳದಲ್ಲಿ ಒಲೆ ಹೂಡಿ ಮಾಡಲಾಗುತ್ತದೆ. ಇಂದಿನ ದಿನಗಳಲ್ಲಿ ಈ ಮಾಂಸಹಾರವನ್ನು ಸೇವಿಸುವುದು ಕಡಿಮೆಯಾಗಿದೆ. ಈ ಮಾಂಸದ ಕೊಬ್ಬಿನಿಂದ ಔಷಧಿಯು ಕಂಡುಬರುವುದುಂಟು. ಆಕಳು, ಎತ್ತಿನ ಮಾಂಸವನ್ನು ಇವರು ಬಳಸುವುದಿಲ್ಲ. ಬೇರೆ ಜಾತಿಯವರೂ ಹಂದಿ ಸಾಕಾಣಿಕೆ ಮಾಡುವುದು ಕಂಡುಬರುತ್ತದೆ. ವ್ಯಾಪಾರಕ್ಕಾಗಿ ಈ ವ್ಯವಹಾರವನ್ನು ಮಾಡಲಾಗುತ್ತದೆ.

ಹೆಂಡ ಮಾಂಸಗಳೆಂದರೆ ಇವರಿಗೆ ಪ್ರಾಣ. ಹೆಂಡದ ಅಂಗಡಿಗೆ ಹೋಗುವಾಗ ಹಾದಿಯಲ್ಲಿ ಹಕ್ಕಿ ಪಕ್ಷಿಗಳನ್ನು, ಅಳಿಲು ಮೊದಲಾದವುಗಳನ್ನು ಹಿಡಿದು ತಿನ್ನುತ್ತಿದ್ದರು. ಇಂದು ಇದು ಕಾಣುವುದಿಲ್ಲ. ಮತ್ತೆ ಬುರುಡೆ ತುಂಬಿಸಿಕೊಂಡು ತೂಗಾಡುತ್ತಾ ಹೊರಡುವ ವೇಳೆಗೆ ಕತ್ತಲಾಗುತ್ತಿತ್ತು. ದಾರಿಯುದ್ದಕ್ಕೂ ಜೊತೆಯವರೊಂದಿಗೆ ಜಗಳವಾಡುತ್ತಲೋ ಹಾಡು ಹೇಳುತ್ತಲೋ ಮನೆಗಳನ್ನು ಸೇರಿಕೊಳ್ಳುತ್ತಾರೆ. ಆದರೆ ಮನೆಯ ಹೆಂಡತಿಗೆ ಕೈಕಾಲುಗಳು ನಡುಗುತ್ತಿದ್ದವು. ಅಡಿಗೆ ಮಾಡಿಕೊಂಡು ದಾರಿ ಕಾಯುತ್ತ ಕುಳಿತ ಹೆಂಡತಿಗೆ ಬುರುಡೆ ಬಗ್ಗಿಸಿ ಕುಡಿಯಲು ಕೊಟ್ಟು ಮತ್ತೆ ತಾನು ಕುಡಿದು ಇದ್ದುದನ್ನು ಉಂಡು ಸುಮ್ಮನಿದ್ದಾರೆ. ಇನ್ನು ಕೆಲವು ಗಂಡಸರಿಗಿಂತೂ ಹೆಂಡತಿಯರಿಗೆ ಬಡಿಯದಿದ್ದರೆ ಸಮಾಧಾನ ವಾಗುತ್ತಿರಲಿಲ್ಲ. ಇಲ್ಲ ಸಲ್ಲದ ಕಾರಣಗಳನ್ನು ಕೆದರಿ ಬೆಳಗಿನಿಂದ ಒಂದೇ ಸಮನೆ ದುಡಿದು ನೆಲ ಸಿಕ್ಕರೆ ಸಾಕಪ್ಪ ಎನ್ನುವಂತಿದ್ದ ಅವಳಿಗೆ ಹೊಡೆದು, ಬಯ್ದು ರಾದ್ಧಾಂತ ಮಾಡಿ ತಮ್ಮ ಪೌರುಷ ತೋರಿಸಿಕೊಳ್ಳುತ್ತಿದ್ದರು. ಇವರ ನಾಲ್ಕಾರು ಮನೆಗಳದ್ದಲ್ಲಿ ಗಲಾಟೆ ತಪ್ಪಿದ್ದಲ್ಲ.

ಕೊರವ ಗಂಡಸರಿಗೆ ಕುಡಿಯಲು ಕಾಸಿಲ್ಲದೆ ಹೋದಾಗ ಹೆಂಗಸರನ್ನು ಕೇಳುತ್ತಿದ್ದರು. ಹೆಂಗಸರು ಹಳ್ಳಿಗಳಿಗೆ ಹೋದಾಗ ಕಸಬಾರಿಗೆ, ಹಣ್ಣು (ವರ್ಷದಲ್ಲಿ ಎಲ್ಲ ದಿನಗಳು ದುಡಿಮೆಯಿಲ್ಲದೇ ಕಾಲ ಕಳೆಯುತ್ತಾರೆ), ಪಾತ್ರೆ ವ್ಯಾಪಾರ, ಬಟ್ಟೆ ವ್ಯಾಪಾರ, ಸೂಜಿ ಪಿನ್ನ ವ್ಯಾಪಾರ, ತರಕಾರಿ ವ್ಯಾಪಾರ ಇನ್ನು ಮೊದಲಾದವುಗಳನ್ನು ಮಾರಿ ಬಂದ ಹಣವನ್ನು ತೆಗೆದಿಟ್ಟುಕೊಂಡಿರುತ್ತಾರೆ. ಸುಖಕ್ಕೆ ಬೇಕೆಂದು ಇಟ್ಟುಕೊಂಡ ಪುಡಿಗಾಸನ್ನು ಕೊಡಬೇಕಾಗುತ್ತದೆ. ಕೆಲವು ಹೆಂಗಸರು ಗಲಾಟೆ ಮಾಡಿದರೂ ಮನೆಯ ಮಡಿಕೆ, ಕುಡಿಕೆ, ಗಂಟು ಮೂಟೆಗಳನ್ನು ತಡಕಿ ಎಲ್ಲಿಯೂ ಸಿಕ್ಕದಿದ್ದರೆ ಅವರ ಸೊಂಟದ ಸೀರೆಯ ಗಂಟನ್ನು ತೆಗೆದುಕೊಳ್ಳುತ್ತಿದ್ದರು. ಎಷ್ಟೋ ಸಾರಿ ದುಡ್ಡು ಕೊಡದೆ ಹೋದರೆ ಅವರಿಗೆ ಪೆಟ್ಟು ಬೀಳುತ್ತಿತ್ತು.

ಭಾಷೆ

ಕೊರವರನ್ನು ವೃತ್ತಿಗನುಗುಣವಾಗಿ ಇವರನ್ನು ಕುಳುವರು ಎಂದು ಕರೆಯುತ್ತಾರೆ. ಕೊರವರಲ್ಲಿ ಅನೇಕ ಪ್ರಭೇದಳಿದ್ದರೂ ಸಹ ಭಾಷೆಯ ದೃಷ್ಟಿಯಿಂದ ಭಿನ್ನತೆ ಕಂಡುಬರುವುದಿಲ್ಲ. ಇವರದು ದ್ರಾವಿಡ ಮೂಲಭಾಷೆಯಾಗಿದೆ. ಕುಂಚಿ ಕೊರವರು, ಕೊರವರು, ಕೊರಚರು ತುಳು ಭಾಷೆ ಯನ್ನಾಡುವುದು ಕಂಡುಬರುತ್ತದೆ. ಈ ಭಾಷೆಯಲ್ಲಿ ತಮಿಳು ಪದಗಳೇ ಹೆಚ್ಚಾಗಿ ಕಂಡುಬರುತ್ತವೆ. ಆದರೆ ಆಧುನಿಕತೆ ಪ್ರಭಾವದಿಂದ ಸಮುದಾಯದ ಜೊತೆ ಇದ್ದು ಶಿಕ್ಷಣ ಕಲಿತವರು ಈ

ಭಾಷೆಯನ್ನಾಡುತ್ತಾರೆ. ಆದರೆ ಮಾತನಾಡುವ ಪ್ರದೇಶದಿಂದ ದೂರು ಇರುವವರು ಈ ಭಾಷೆ ಯನ್ನಾಡುವುದಿಲ್ಲ. ಏಕೆಂದರೆ ಅದರ ಸಂಪರ್ಕವಿದ್ದರೆ ಮಾತ್ರ ಕಲಿಯಲು ಸಾಧ್ಯ. ಇಂತಹ ಜನರು ಕೊರವರಲ್ಲಿ ಇಂದಿಗೂ ಕಂಡುಬರುತ್ತಾರೆ. "ಡಾ.ಅರ್ಜುನ ಗೊಳಸಂಗಿ ಅವರು ಕುಳುವ ಭಾಷೆಯಲ್ಲಿ ಮರಾಠಿ, ಉರ್ದು, ಹಿಂದೂಸ್ತಾನಿ, ತೆಲುಗು, ತಮಿಳು ಮೊದಲಾದ ಪದಗಳು ಸಮ್ಮಿಳಿತಗೊಂಡಿವೆ ಎಂದು ಹೇಳುತ್ತಾರೆ".[5] ಆದರೂ ತನ್ನ ಮೂಲ ಸ್ವರೂಪವನ್ನು ಇವು ಉಳಿಸಿಕೊಂಡು ಬಂದಿದೆ. ಕೆಲವು ವಿದ್ಯಾವಂತರಾದವರಿಗೆ ಈ ಭಾಷೆಯ ಬಗ್ಗೆ ತಿಳಿಯದು. ಮಾತನಾಡುವುದು ಮತ್ತು ಅರ್ಥ ಮಾಡಿಕೊಳ್ಳಲು ಆಗುವುದಿಲ್ಲ. ಇಂತವರನ್ನು ಬಳ್ಳಾರಿ ಜಿಲ್ಲೆಯಲ್ಲಿ ಕಾಣುತ್ತೇವೆ. ಕೊರವರ ಭಾಷೆಗೆ ಲಿಪಿ ಇಲ್ಲ.

ವೃತ್ತಿಗಳು

ಕೊರವರಲ್ಲಿ ಸಾಮಾನ್ಯವಾಗಿ ಒಂದೊಂದು ಪಂಗಡದವರು ಒಂದೊಂದು ವಿಶಿಷ್ಟ ವೃತ್ತಿಯನ್ನು ಕೈಗೊಂಡಿರುವುದು ಕಂಡುಬರುತ್ತದೆ. ಕೊರವರಿಗೆ ಸಂಬಂಧಿಸಿದ ಪ್ರಾಚೀನ ಪ್ರಥಮ ದಾಖಲೆಯೆನಿಸಿದ ''ಕೊರವರ ವಾಂಡ್ಲೆ ಕೈಷಿಯತ್ತು'' ಎಂಬ ಕೃತಿಯಲ್ಲಿ ಕುಕ್ಕೆ ಕೊರಮರು, ಮೋಡಗಾರ ಆಟ, ವಡ್ಡ ಕೊರವರದು ವಾಲಗ ಊದುವುದು, ಹಕ್ಕಿಕೊರವರದು ಹಕ್ಕಿ ಹಿಡಿಯುವುದು, ಕಳ್ಳಕೊರಮರದು ಕನ್ನ ಹಾಕಿ ಕಳ್ಳತನ ಮಾಡುವುದೆಂದು ಅವರವರ ವೃತ್ತಿ ವಿಶೇಷಗಳನ್ನು ಹೇಳಲಾಗಿದೆ. ಹೀಗೆಯೇ ಸನಾದಿಯನ್ನು ಊದುವವರು ಸನಾದಿ ಕೊರವರು, ಕಡಲು ತೀರದಲ್ಲಿ ಕತ್ತೆಯ ಮೇಲೆ ಉಪ್ಪನ್ನು ಹೇರಿಕೊಂಡು ಉಪ್ಪನ್ನು ಮಾರುವವರು ಉಪ್ಪುಕೊರವರು, ನೇಕಾರರಿಗೆ ಕುಂಚನ್ನು ತಯಾರಿಸಿ ಕೊಡುವವರು ಕುಂಚಿಕೊರವರು, ಹಗ್ಗವನ್ನು ತಯಾರಿಸುವವರು ಹಗ್ಗದ ಕೊರವರು ಎಂದೆಲ್ಲ ಕರೆಯಲಾಗುತ್ತದೆ.

ಇಂದಿನ ದಿನಗಳಲ್ಲಿ ಕುಂಚಿ ಕೊರವರು, ಹಗ್ಗ ಕೊರವರು, ವಾಲಗ ಕೊರವರುಗಳಲ್ಲಿ ಪರಸ್ಪರ ಹೆಣ್ಣುಗಂಡು ತೆಗೆದುಕೊಳ್ಳುವ ಪದ್ಧತಿಯಿಲ್ಲ. ಬೆರಳೆಣಿಕೆಯಷ್ಟು ಮಹಿಳೆಯರು ಶಿಕ್ಷಕಿಯರಾಗಿರುವುದು, ದೇವಾಲಯಗಳನ್ನು ಕಾಯುವ ವೃತ್ತಿಯಲ್ಲಿ ಕಂಡುಬರುತ್ತಾರೆ. ಕೆಲವು ಮಹಿಳೆಯರಿಗೆ ಕೆಲಸ ಬಂದರೂ ಸಹ ಗಂಡ ಒಬ್ಬನು ದುಡಿದರೆ ಸಾಕು ಎಂದು ಬಿಡಿಸಿರುವುದುಂಟು. ಆದರೆ ಆಧುನಿಕತೆಯಲ್ಲಿ ಇಬ್ಬರು ದುಡಿದರೂ ಸಹ ಜೀವನ ನಡೆಸುವುದು ಕಷ್ಟಕರವಾಗುತ್ತದೆ.

"ಕಟ್ಟೀಯ ನೆವೆಳ್ಳಾಗ ಬುಟ್ಟಿ ಹೆಣೆಯೋಣ
ದಿತ್ತ್ಯೀನ ದೂಳ ಎದಿಮ್ಯಾಗ | ಬಿದ್ದರ
ಸೆರಗೀಲೆ ಒರೆಸಿ ಇರುವೇನ"[6]

ಈ ಪದವನ್ನು ಅರ್ಜುನ ಗೊಳಸಂಗಿಯವರು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ್ದಾರೆ. ಈ ಹಾಡಲ್ಲಿ ಬುಟ್ಟಿ ಹೆಣೆಯುವ ಬಗ್ಗೆ ತಿಳಿಸಲಾಗಿದೆ. ಬುಟ್ಟಿ ಹೆಣೆಯುವುದು ಕೊರವರ ಪ್ರಮುಖ ಕೆಲಸ. ಕಸ ಆಯಲು, ಕೋಳಿ ಮುಚ್ಚಲು, ಗೊಬ್ಬರ ತುಂಬಲು ಮೊದಲಾದವುಗಳಿಗೆ ಬುಟ್ಟಿ ಬಳಸಲಾಗುತ್ತದೆ.

ಬುಟ್ಟಿ ಹೆಣೆಯುವ ಕೆಲಸವನ್ನು ಗಂಡಸರು, ಹೆಂಗಸರು ಮಾಡುತ್ತಾರೆ. ಕೆಲವರು ಸಂತೆ, ಸಂತೆಗೆ ಹೋಗಿ ಮಾರಿಕೊಂಡು ಬರುತ್ತಾರೆ. ಕೆಲವರು ರೈತರಿಗಾಗಿಯೇ ಬುಟ್ಟಿ ಮಾಡುತ್ತಾರೆ. ಅವಶ್ಯಕತೆ ಇದ್ದವರು ಇವರಲ್ಲಿಗೆ ಬಂದು ಬುಟ್ಟಿ ಮಾಡಲು ಹೇಳಿ ಹೋಗುತ್ತಾರೆ. ಹಿಂದಿನ ದಿನಗಳಲ್ಲಿ ಬುಟ್ಟಿ, ಸಿಂಬಿ, ಚಾಪಿ, ಹಚ್ಚೆ, ಕಣಿ ಭವಿಷ್ಯ ನುಡಿಯುವುದು ಮೊದಲಾದ ಕೆಲಸ ಮಾಡುತ್ತಿದ್ದರು. ಆದರೆ ಇವುಗಳಲ್ಲಿ ಇಂದು ಕೆಲವನ್ನು ಮಾತ್ರ ಕಾಣಬಹುದಾಗಿದೆ.

"ಸಿಂಬಿ ಬಗ್ಗೆ ಹೆಂಡರಿಬ್ಬರನಾದ ಏಡಿಯ ಮುಳ್ಳಾದ
ಕೋಡಿಗನಾದ ಕೊರವಾದ ಬಾಲೇರು
ಮಾಡಿಟ್ಟ ಸಿಂಬಿ ಅರಿವ್ಯಾದ"[೭]
ಕೊರವರಲ್ಲಿ ಕೆಲವರು ಸಿಂಬೆ ತಯಾರಿಸುತ್ತಾರೆ.

ಗಂಡಸರು ಅಡವಿಗೆ ಹೋಗಿ ಈಚಲು ಗಿಡವನ್ನು ತಂದು ಪೊರಕಿಯಿಂದ ಹಗ್ಗ ತಯಾರಿಸಿ ಅದರಿಂದಲೇ ಸಿಂಬಿ, ನೆಲವು ಬಾರಿಗೆಗಳನ್ನು ಮಾರಿ ಕಾಳುಕಡಿ ಹಣವನ್ನು ಸಂಗ್ರಹಿಸುತ್ತಾರೆ. ಇನ್ನು ಕೆಲವರು ಮಕ್ಕಳ ಆಟಕ್ಕಾಗಿ ಗಿಲಗುಂಜಿ ಮಾರುತ್ತಾರೆ. ಹೆಚ್ಚಾಗಿ ಕಸಬರಿಗೆ, ಬುಟ್ಟಿಗಳನ್ನು ಹೆಣೆಯುವುದು ಕೊರವರಲ್ಲಿ ಕಂಡುಬರುತ್ತದೆ.

ಬೇಟೆಯಾಡುವುದು

ಇದು ಪುರುಷಪ್ರಧಾನವಾದ ವೃತ್ತಿ. ಬೇಟೆಯಾಡುವುದು ಕೊರವರ ವೃತ್ತಿ ಮತ್ತು ಪ್ರವೃತ್ತಿಯೂ ಹೌದು. ಇದನ್ನು ಜೀವನೋಪಾಯಕ್ಕೆ ಅನುಸರಿಸಿದರು. ಇದನ್ನು ಇಂದಿನವರೆಗೂ ಉಳಿಸಿಕೊಂಡು ಬೆಳೆಸಿಕೊಂಡು ಬಂದಿದ್ದಾರೆ. ಆದರೆ ಸರ್ಕಾರವು ಬೇಟೆಯಾಡುವುದನ್ನು ನಿಷೇಧಿಸಿದೆ. ಆದ್ದರಿಂದ ಸಣ್ಣ ಪುಟ್ಟ ಬೇಟೆಯನ್ನಾಡುವುದು ಕಂಡುಬರುತ್ತದೆ. ಕೆಲವರು ವಿದ್ಯಾವಂತರಾದರೂ ಖಾಲಿ ಸಮಯದಲ್ಲಿ ಒಟ್ಟುಗೂಡಿ ಮೊಲವನ್ನು ಬೇಟೆಯಾಡಲು ಹೋಗುತ್ತಾರೆ. ಮೋಜಿಗಾಗಿ ಈ ರೀತಿ ಮಾಡುತ್ತಾರೆ. ಎರಡು ಮೂರು ದಿನಗಳನ್ನು ಬೇಟೆಯಾಡಲು ನಿಗದಿಪಡಿಸಿಕೊಳ್ಳುತ್ತಾರೆ. ಬೆನ್ನಿಗೆ ಬಲೆ, ಕೈಯಲ್ಲಿ ನಾಯಿ ಹಿಡಿದುಕೊಂಡು ಅಡವಿ-ಹಳ್ಳಿ, ಬೆಟ್ಟಗಳಲ್ಲಿ ಹೋಗಿ, ಮೊಲ, ಉಡ, ಕೌಜುಗ, ಬುರ್ಲಕ್ಕಿ, ಅಡವಿ ಪಾರಿವಾಳ ಮೊದಲಾದ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡುವುದು ಇವರ ವೃತ್ತಿಯಾಗಿದೆ. ಮೊಲ, ಕೌಜುಗ, ಅಡವಿ ಪಾರಿವಾಳ, ಅಡವಿ ಬೆಕ್ಕು ರತ್ನಪಕ್ಷಿ (ಸಾಂಬಾರು ಕಾಗೆ)ಯನ್ನು ಇವುಗಳನ್ನು ಹಣಕ್ಕಾಗಿ ಮಾರುತ್ತಾರೆ. ಉಳಿದ ಪ್ರಾಣಿಪಕ್ಷಿಗಳನ್ನು ತಮ್ಮ ಆಹಾರಕ್ಕೆ ಬಳಸಿಕೊಳ್ಳುತ್ತಾರೆ. ಇಂದಿನ ವಿದ್ಯಾವಂತ ಜನರಲ್ಲಿ ನೌಕರಿ ಕೆಲಸ ಮಾಡಿದರೆ ಸಾಕು ಎಂದು ಹೇಳುವವರು ಇದ್ದಾರೆ. ಕೊರವರೂ ಇಂತಹ ನೌಕರಿಗಳಲ್ಲಿ ತೊಡಗಿಕೊಳ್ಳುವುದು ಕಡಿಮೆ ಕಂಡುಬರುತ್ತದೆ. ೩೦-೪೦ ವರ್ಷಗಳ ಹಿಂದೆ ಹೆಣ್ಣುಮಕ್ಕಳು ಸಹ ಮೊಲ ಹಿಡಿಯಲು ಹೋಗುತ್ತಿದ್ದರು. ಅಡವಿಗಳು ನಾಶವಾಗುತ್ತಿರುವುದರಿಂದ ಬೇಟೆಯ ಪ್ರವೃತ್ತಿಯು ಕಡಿಮೆಯಾಗುತ್ತಿದೆ."[೮]

ವಸಾಹತು ಆಡಳಿತದ ಮೂಲಕ ಬಂದ ಶಿಕ್ಷಣ, ಆಧುನಿಕತೆ ಸಮುದಾಯಗಳ ಪರಿವರ್ತನೆಗೆ

ಸಾಕಷ್ಟು ಪ್ರಭಾವ ಬೀರಿದೆ. ಕೈಗಾರಿಕೀಕರಣದ ಪ್ರಭಾವವೂ ಬುಡಕಟ್ಟು ಸಮುದಾಯಗಳ ಬದಲಾವಣೆಗೆ ಸಹಕಾರಿಯಾಗಿದೆ. ಇಂತಹ ಬದಲಾವಣೆಗಳಿಗೆ ಒಳಗಾದ ಭಾರತ, ಅಂತೆಯೇ ಕರ್ನಾಟಕದಲ್ಲಿಯ ಬಳ್ಳಾರಿಯಲ್ಲಿ ನೆಲೆ ನಿಂತಿರುವ ಸಮುದಾಯಗಳಿಗೆ ಆಧುನೀಕರಣದ ಪ್ರಭಾವವು ನುಂಗಲಾರದ ಬಿಸಿ ತುಪ್ಪದಂತಾಗಿದೆ. ಪರಂಪರೆಯಿಂದ ನಂಬಿಕೊಂಡು ಬಂದ ವೃತ್ತಿಗಳಿಗೆ ಹಾಗೂ ಜೀವನದ ಮೌಲ್ಯಗಳಿಗೆ ಆಧುನಿಕತೆಯ ಬಿಸಿಗಾಳಿ ಗೊಂದಲಕ್ಕೀಡು ಮಾಡಿದೆ ಎಂದು ಹೇಳಬಹುದು. ಇವರಿಗೆ ಸಂವಿಧಾನಬದ್ಧ ಹಕ್ಕುಗಳು ಸಾಮಾಜಿಕ ಸ್ಥಾನಮಾನವನ್ನು ತಂದುಕೊಟ್ಟಿಲ್ಲ. ಶಿಕ್ಷಣದಲ್ಲಿ ಕೊರತೆ ಇರುವುದರಿಂದ ಇವರು ತಮ್ಮ ಹಕ್ಕುಗಳ ಬಗೆಗೆ ತಿಳಿದುಕೊಂಡಿಲ್ಲ. ಕೆಲವರಿಗೆ ತಿಳಿದಿದ್ದರೂ ಅವುಗಳನ್ನು ಸಮುದಾಯಗಳಿಗೆ ತಿಳಿಸಿದರೂ, ಸಹ ಅವರು ನಿರ್ಲಕ್ಷ್ಯ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಶಿಕ್ಷಣದ ಬಿರುಗಾಳಿ ತಾಗುತ್ತಿರುವ ಸಂದರ್ಭದಲ್ಲಿ ಇವತ್ತಿನ ಮಕ್ಕಳಿಗೆ ಶಿಕ್ಷಣದ ವ್ಯವಸ್ಥೆ ಒದಗಿ ಬರುತ್ತಿದೆ ಮತ್ತು ಮಕ್ಕಳಿಗೆ ಆಸಕ್ತಿಯೂ ಇರುವಂತದ್ದು ಕಾಣಬಹುದು. ಅರೆ ಅಲೆಮಾರಿ ಮತ್ತು ನೆಲೆ ನಿಂತ ಕೊರವರ ಜೀವನ ಸಾಗಿಸುತ್ತಿರುವ ಇವರು ಇಂದು ಸಹ ಪರಕೀಯರಂತೆ ಜೀವನ ಸಾಗಿಸುತ್ತಿದ್ದಾರೆ. ಸುಮಾರು ೭೦% ರಷ್ಟು ಜನರು ತಮ್ಮ ಹಿರಿಯರು ಮಾಡಿದ ಮನೆಗಳಲ್ಲಿಯೇ ವಾಸವಾಗಿರುವುದು ಕಂಡುಬರುತ್ತದೆ. ಮಿಕ್ಕವರು ತಮ್ಮ ಸ್ವಬುದ್ಧಿಯಿಂದ ಸರಕಾರದ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಆದಕ್ಕಾಗಿ ಹೋರಾಟಗಳನ್ನು ಮಾಡುತ್ತಿದ್ದಾರೆ. ''ತಮ್ಮ ಕುಟುಂಬದ ನಿರ್ವಹಣೆಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಅಚ್ಚುಕಟ್ಟಾಗಿ ಜೋಡಿಸಿಕೊಂಡು ಮಲಗಲು ಸ್ಥಳಾವಕಾಶ ಮಾಡಿಕೊಂಡಿರುತ್ತಾರೆ. ಹಂಚಿನ ಮನೆ, ಶೀಟ್ ಮನೆ ಹಾಗೂ ಆರ್.ಸಿ.ಸಿ. ಮನೆ, ಗುಡಿಸಲುಗಳನ್ನು ಕಟ್ಟಿಕೊಂಡು ಒಂದೆಡೆ ನೆಲೆಯಾಗಿರುವುದನ್ನು ರೂಢಿಸಿಕೊಂಡಿದ್ದಾರೆ. ದಿನಬಳಕೆ ವಸ್ತುಗಳಾದ ಮಣ್ಣಿನ ಪಾತ್ರೆಗಳು ಅಲ್ಯೂಮಿನಿಯಂ, ಸ್ಟೀಲ್ ಪಾತ್ರೆ, ಪ್ಲಾಸ್ಟಿಕ್ ಸಾಮಾನುಗಳು ಇವರಲ್ಲಿ ಕಾಣುತ್ತೇವೆ.''[೬] ಆಧುನೀಕರಣದ ಪ್ರಭಾವದಿಂದ ಕೆಲವರು ಸೀಮೆ ಎಣ್ಣೆ ದೀಪಗಳಿಂದ ಬೆಳಕನ್ನು ಪಡೆಯುತ್ತಿದ್ದರೆ ಇನ್ನು ಕೆಲವರು ಸರ್ಕಾರಿ ಭಾಗ್ಯಜ್ಯೋತಿಯಡಿಯಲ್ಲಿ ವಿದ್ಯುತ್ ದೀಪಗಳ ಮೂಲಕ ಬೆಳಕನ್ನು ಪಡೆಯುತ್ತಿದ್ದಾರೆ. ನಗರ ಪ್ರದೇಶದ ಪ್ರಭಾವಕ್ಕೊಳಗಾದ ಕೆಲವು, ಪುರುಷರು ಟೀಷರ್ಟ್, ಜೀನ್ಸ್ ಪ್ಯಾಂಟ್ ಇನ್ನಿತರೆ ರಂಗು ರಂಗಿನ ಉಡುಪುಗಳಿಗೆ ಮಾರು ಹೋಗಿದ್ದಾರೆ. ಮಹಿಳೆಯರು ಕೆಲವರು ಮಾತ್ರ ಚೂಡಿದಾರ, ನೈಟಿ, ಲಂಗ, ರವಿಕೆ, ಮಿಡಿಯಂತಹ ಹಲವಾರು ಉಡುಪುಗಳನ್ನು ಬಳಸುವುದರ ಜೊತೆಗೆ ಆಲಂಕಾರಿಕ ವಸ್ತುಗಳಾದ ಸ್ನೋ, ಪೌಡರ್, ಲಿಪ್‌ಸ್ಟಿಕ್‌ನಂತಹ ಸಾಮಗ್ರಿಗಳನ್ನು ಬಳಸುತ್ತಿರುವುದನ್ನು ಕಾಣಬಹುದು. ಆದರೆ ಹಿರಿಯ ತಲೆಮಾರಿನ ಸ್ತ್ರೀ ಪುರುಷರು ಮಾತ್ರ ತಮ್ಮ ಮೂಲ ಉಡುಗೆ ತೊಡುಗೆಯನ್ನು ಬಳಸುತ್ತಾರೆ. ಕೊರವರಲ್ಲಿ ವಿದ್ಯಾವಂತರಾದವರು ಆಧುನಿಕತೆಗೆ ಹೊಂದಿಕೊಳ್ಳಲು ತುದಿಗಾಲಿನಲ್ಲಿ ನಿಂತಿರುವುದು ಕಂಡುಬರುತ್ತದೆ. ಅದರ ಪರಿಣಾಮದ ಬಗೆಗೆ ತಿಳುವಳಿಕೆ ಮೂಡುತ್ತಿಲ್ಲ ಎಂದು ಹೇಳಬಹುದು.

ಕೊರವರು ಪಾತ್ರೆ ವ್ಯಾಪಾರ ಮಾಡುತ್ತಿರುವುದರಿಂದ ಅವರ ಮನೆಗಳಲ್ಲಿ ಪಾತ್ರೆಗಳನ್ನು ಸಂಗ್ರಹಿಸಿರುವುದನ್ನು ನೋಡಬಹುದು. ಸಾಮಾಜಿಕ ಸಂದರ್ಭದಲ್ಲಿ ಕೊರವರು ಬದಲಾಗುತ್ತಿರುವ

ಪರಿವರ್ತನೆಯ ಹಾದಿಯಲ್ಲಿದ್ದಾರೆಂದು ಹೇಳಿದರೂ, ಇದು ಮೇಲ್ನೋಟಕ್ಕೆ ಮಾತ್ರ ಅನ್ನಿಸುತ್ತದೆ. ಆದರೆ ವಸ್ತು ಸ್ಥಿತಿ ಹಾಗಿಲ್ಲ. ಭೌತಿಕವಾಗಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಕಂಡುಕೊಂಡಿದ್ದರೂ ಸಹ ಸಾಂಸ್ಕೃತಿಕವಾಗಿ ಅಷ್ಟೊಂದು ಬದಲಾವಣೆಗಳು ಕಂಡುಬರುವುದಿಲ್ಲ. ಮದುವೆ, ಜನನ, ಸಾವು ಇತ್ಯಾದಿ ಸಂಪ್ರದಾಯ ಆಚರಣೆಗಳ ಸಂದರ್ಭಗಳಲ್ಲಿ ಬ್ರಾಹ್ಮಣ ಪೌರೋಹಿತ್ಯಕ್ಕೆ ಅವಕಾಶವಿರುವುದಿಲ್ಲ. "ನಾಗರಿಕ ಸಮಾಜದೊಂದಿಗೆ ಸಂಬಂಧವನ್ನು ಹೊಂದಿದ್ದರೂ ಸಹ ನಗರಸಂಸ್ಕೃತಿಯ ಪ್ರಭಾವಕ್ಕೆ ಅಷ್ಟಾಗಿ ಒಳಗಾಗಿಲ್ಲ ಎಂದು ಹೇಳಬೇಕಾಗುತ್ತದೆ. ತಮ್ಮಲ್ಲಿನ ಒಳಜಗಳಗಳನ್ನು ತಮ್ಮ ಕುಲಪಂಚಾಯ್ತಿಯಲ್ಲಿಯೇ ಬಗೆಹರಿಸಿಕೊಳ್ಳುತ್ತಾರೆ. ಅವರಲ್ಲಿ ಬಗೆಹರಿಸದ ಪರಿಸ್ಥಿತಿಯಲ್ಲಿದ್ದರೆ ಮಾತ್ರ ಪೊಲೀಸ್, ಕೋರ್ಟ್, ಕಛೇರಿಗಳಿಗೆ ಹೋಗುತ್ತಾರೆ. ವರದಕ್ಷಿಣೆ ಸಮಸ್ಯೆ ಮುಗಿಲು ಮುಟ್ಟುತ್ತಿರುವ ಇಂದಿನ ಸಂದರ್ಭದಲ್ಲಿ ಕೊರವರಲ್ಲಿ ಇನ್ನು ವಧುದಕ್ಷಿಣೆ ಪದ್ಧತಿಯೇ ಮುಂದುವರಿದಿರುವುದು ವಿಶೇಷವಾಗಿದೆ. ಇವರು ಅಪಾರ ದೈವಭಕ್ತಿಯುಳ್ಳವರಾಗಿದ್ದು ಎಷ್ಟೇ ಕಷ್ಟದಲ್ಲಿದ್ದರೂ ಸಹ ಯಾವ ಆಚರಣೆಗಳನ್ನು ನಿಲ್ಲಿಸಿಲ್ಲ. ಸಾಮಾಜಿಕ ಶಿಕ್ಷಣ ಕೊರತೆಯಿರುವ ಇವರಲ್ಲಿ ಬಲಿಯಂತಹ ಕ್ರೂರ ಆಚರಣೆಗಳೂ ಇನ್ನೂ ನಿಂತಿಲ್ಲ. ಇಂತಹ ಆಚರಣೆಗಳ ಮೂಲಕ ದೇವರನ್ನು ತೃಪ್ತಿಪಡಿಸುತ್ತೇವೆ ಎಂದು ಹಿರಿಯರು ಹೇಳುತ್ತಾರೆ".[೧೦] ಈ ಬಗ್ಗೆ ಅವರಿಗೆ ಭಾವನಾತ್ಮಕ ಸಂಬಂಧವೇರ್ಪಟ್ಟಿರುವುದರಿಂದ ಇಂತಹ ಆಚರಣೆಗಳಿಗೆ ಕೊನೆಯಿಲ್ಲ ಎಂಬುದು ತಿಳಿದು ಬರುತ್ತದೆ. ತಮ್ಮ ಸಾಂಸ್ಕೃತಿಕ ಪ್ರತ್ಯೇಕತೆಯನ್ನು ಹಾಗೂ ವೈಶಿಷ್ಟ್ಯಗಳನ್ನು ಉಳಿಸಿಕೊಂಡು ಬಂದಿರುವುದನ್ನು ನೋಡಬಹುದು.

ಸ್ತ್ರೀ ತನ್ನ ದ್ವಂದ್ವವನ್ನು ಬಿಟ್ಟು ಉದ್ಯೋಗ ಮಾಡಲು ತಾನು ಮುಂದಾಗ ಬೇಕಾದರೆ ಅವಳಿಗೆ ಶಿಕ್ಷಣ, ತಿಳುವಳಿಕೆ ಅವಶ್ಯಕವಲ್ಲವೆ? ಆದ್ದರಿಂದ ತಮ್ಮ ಹೆಣ್ಣು ಮಕ್ಕಳಿಗೆ ಬೇದಭಾವ ಮಾಡದೇ ಅವಳನ್ನು ಓದಿಸಲು ಮುಂದಾಗಬೇಕು ಅವಳ ಜೀವನವನ್ನು ರೂಪಿಸಲು ಈ ಸಮುದಾಯದವರು ಸಹಕರಿಸಬೇಕಾಗುತ್ತದೆ. ಅಲ್ಲದೆ ಪ್ರತಿಯೊಂದು ಕುಟುಂಬದಲ್ಲಿಯೂ ಶಿಕ್ಷಣ ಬರುವುದು ಒಂದು ಒಳ್ಳೆಯ ಬದಲಾವಣೆಯ ಗುಣ.

ನ್ಯಾಯ ಪದ್ಧತಿ

ಕೊರವ ಸಮಾಜ ಸಂಪೂರ್ಣವಾಗಿ ಕುಲಪತಿಯ (ಅಧಿಪತಿಯ) ಆಡಳಿತಕ್ಕೆ ಒಳಪಟ್ಟಿದೆ. ಕೊರವ ಜಾತಿಯ ಯಾವುದೇ ಕುಲ ಅಥವಾ ಗುಂಪಿನಲ್ಲಿ ಕೊರವ ಹುಟ್ಟಿದರೆ ಅವನು ಆತನ ಹಿರಿಯರಿಗೆ ಅಥವಾ ತನ್ನ ಗುಂಪಿನ ಹಿರಿಯರಿಗೆ ಅಧೀನರಾಗಿ ಅವರ ಇಚ್ಛೆಯಂತೆ ನಡೆದುಕೊಳ್ಳಬೇಕು. ಅವರ ಗುಂಪಿನ ಮುಖ್ಯಸ್ಥರನ್ನು 'ಪೆರುಮನುಷನ್ ಅಥವಾ ಬರಿಯ ಮನುಷನ್" ಎಂದು ಕರೆಯುವರು. ಬುದ್ಧಿ ವಯಸ್ಸು ಮತ್ತು ಯೋಗ್ಯತೆಯ ಆಧಾರದ ಮೇಲೆ ಅವನನ್ನು ಆರಿಸುವವರು ಅವನು ಎಲ್ಲೇ ಹೋಗಲಿ ಅವನ ಜೊತೆಯಲ್ಲಿ ಒಬ್ಬ ವ್ಯಕ್ತಿ ದಂಡವನ್ನು ಹಿಡಿದುಕೊಂಡು ಹೋಗುವರು. ಎಲ್ಲ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಅವನಿಗೆ ಗೌರವ ಲಭಿಸುತ್ತದೆ ಎಂದು ತಿಳಿಸುತ್ತಾರೆ.

ಕುಲಂ ಅಥವಾ ಕುಲಸಭೆ ಮೊಕದ್ದಮೆಗಳನ್ನು ತೀರ್ಮಾನಿಸುತ್ತದೆ. ದಂಡ ವಿಧಿಸುತ್ತದೆ. ಜಾತಿ

ಭ್ರಷ್ಟರನ್ನು ಹೊರಹಾಕುವುದು, ದಂಡ ವಿಧಿಸುವುದು, ತಮ್ಮ ಜಾತಿಗೆ ಸೇರಿಸಿಕೊಳ್ಳುವುದು ಕಂಡು ಬರುತ್ತದೆ. ಪ್ರತಿಯೊಂದು ಕುಲಸಭೆಯಲ್ಲೂ ಒಂದು ಪಕ್ಷದವರ ಖರ್ಚಿನಲ್ಲಿ ಸ್ವೇಚ್ಛೆಯಾಗಿ ಕುಡಿಯಲು ಅವಕಾಶವಿದೆ. ಬಹುಮಟ್ಟಿಗೆ ಸಮಾರಂಭದ ಖರ್ಚನ್ನು ಕುಲಸಭೆಯನ್ನು ಸೇರಿಸಿದ ಪಕ್ಷದವರು ಕೊಡುತ್ತಾರೆ. ವಾದಿಗಳೆಲ್ಲರೂ ಒಂದಾಗಿ ಕುಲಸಭೆಯವರಿಂದ ತಮ್ಮ ವಿವಾದ ತೀರ್ಮಾನವಾಗ ಬೇಕೆಂದು ಕೇಳಕೊಳ್ಳುವರು. ಪ್ರತಿಯೊಬ್ಬರೂ ಒಂದೊಂದು ರೂಪಾಯಿ ಹಾಕಿಕೊಂಡು ಸಾರಾಯಿ ಕುಡಿಯುವರು. ಕುಲಸಭೆಯವರ ಕರೆಯನ್ನು ತಿರಸ್ಕರಿಸಿದವರನ್ನು ಜಾತಿಯನ್ನು ಕಳೆದುಕೊಳ್ಳ ಬೇಕಾಗುತ್ತದೆ ಒಂದು ವೇಳೆ ತೀರ್ಪು ಮೂರನೆ ಬಾರಿ ಮುಂದಕ್ಕೆ ಹೋದರೆ ಕೆಲವು ವೇಳೆ ಉಗ್ರ ಪರೀಕ್ಷೆಯಿಂದ ಸಮಸ್ಯೆಯನ್ನು ಬಗೆಹರಿಸುವರು. ಎರಡು ಸಮವಾದ ಪಾತ್ರೆಗಳಲ್ಲಿ ಅಕ್ಕಿ ನೀರನ್ನು ಸಮವಾಗಿ ಹಾಕಿ ಸಮವಾಗಿ ಸೌದೆಯನ್ನು ಉರಿಸಿ ಅನ್ನ ಮಾಡುವರು. ಇದನ್ನು ಸರಿಯಾಗಿದೆಯೇ ಮತ್ತು ಇಲ್ಲವೇ ಎಂಬುದನ್ನು ನ್ಯಾಯವಾದಿಗಳು ಪರಿಶೀಲಿಸುವರು. ಯಾರ ಅನ್ನ ಮೊದಲು ಕುದಿಯುವುದೋ ಅವನೇ ವಿವಾದದಲ್ಲಿ ಗೆದ್ದವನು ಎಂದು ತೀರ್ಮಾನಿಸುವರು. ಸೋತವನು ಅವನಿಗೆ ಅಲ್ಲಿ ನಷ್ಟವನ್ನು ಕಟ್ಟಿಕೊಡಬೇಕು. ಒಂದು ವೇಳೆ ಎರಡು ಪಾತ್ರೆಗಳಲ್ಲೂ ಒಟ್ಟಿಗೆ ಕುದಿತ ಕಂಡುಬಂದರೆ ಕುದಿಯುವ ಎಣ್ಣೆ ಪಾತ್ರೆಯಿಂದ ಕಾಸನ್ನು ತೆಗೆಸುವರು.

ಕುಲಪದ್ಧತಿಗಳನ್ನು ಮೀರುವ, ಕುಲಗೆಟ್ಟವರನ್ನು ಹೊರಕ್ಕೆ ಹಾಕುವ ಅಥವಾ ಕುಲಕ್ಕೆ ತೆಗೆದು ಕೊಳ್ಳುವ, ಅಷ್ಟೆ ಅಲ್ಲದೇ ಮದುವೆ, ಕೂಡಿಕೆಗೆ ಸಂಬಂಧಿಸಿದ, ತಮ್ಮ ತಮ್ಮಲ್ಲಿ ಆಗುತ್ತಿದ್ದ ಜಗಳ ಮೊದಲಾದವುಗಳನ್ನು ತಾವೇ ತಮ್ಮ ದೈವದವರೆದುರಿಗೆ ಬಗೆಹರಿಸಿಕೊಳ್ಳುತ್ತಿದ್ದಾರೆ. ಇವರಲ್ಲಿ ಪ್ರತಿಯೊಂದು ಗುಂಪಿಗೂ ಯಜಮಾನರಿರುತ್ತಾರೆ. ಇವರನ್ನು ಬೆರು ಮನುಷ್ಯ ಎನ್ನುತ್ತೇವೆ. ಸಾಮೂಹಿಕ ನ್ಯಾಯನಿರ್ಣಯ ಪದ್ಧತಿ ಇವರದಾಗಿದೆ. ಇವರಲ್ಲಿ ಯಜಮಾನ ಹೇಳದ ಸುದ್ದಿಯನ್ನು ಕೊರವರ ಕೇರಿಯಲ್ಲಿ ಹೇಳಬೇಕಾಗಿತ್ತು ಮತ್ತು ಬೇಕಾದವರನ್ನು ಕರೆದುಕೊಂಡು ಬರುವ ಕೆಲಸ ಮಾಡುತ್ತಿದ್ದರು. ಮೊನ್ನೆ ಮೊನ್ನೆಯವರೆಗೆ ತಮ್ಮ ತಮ್ಮಲ್ಲೆ ಬಗೆಹರಿಸುತ್ತಿದ್ದವು. ಈಗ ಆಧುನಿಕತೆಯ ಪ್ರಭಾವದಿಂದ ಕೋರ್ಟು ಕಛೇರಿ ಪೋಲೀಸ್ ಸ್ಟೇಷನ್‌ನಲ್ಲಿ ತಪ್ಪು ತೀರ್ಮಾನವಾಗುತ್ತವೆ. ನಂತರ ಅವರಿಗೆ ಇವರಿಂದ ದಂಡ ವಿಧಿಸಲಾಗುತ್ತದೆ. ಸಣ್ಣ ಸಣ್ಣ ಜಗಳವಾದರೆ ಯಜಮಾನನೇ ನ್ಯಾಯ ಬಗೆಹರಿಸುತ್ತಿದ್ದ ಹೊಡೆದಾಟ ಬಡಿದಾಟಗಳಾದರೆ, ಕುಲಕ್ಕೆ ಸಂಬಂಧಿಸಿದ ವಿಷಯಗಳನ್ನು ಬಗೆಹರಿಸಲು ಮನೆ ಮನೆಗೊಬ್ಬರಂತೆ ಹಿರಿಯರು ಒಂದೆಡೆ ಸಾರಿ ಪಂಚಾಯ್ತಿ ಮಾಡಬೇಕಾಗುತ್ತದೆ.

ಇಂದಿನ ದಿನಗಳಲ್ಲಿಯೂ ಸಹ ನ್ಯಾಯಪದ್ಧತಿ ಕಂಡುಬರುತ್ತದೆ. ಆಧುನಿಕತೆಯ ಪ್ರಭಾವದಿಂದ ಹಿಂದಿನ ಆಚಾರಗಳು ಬದಲಾಗಿದ್ದರೂ ಸಹ ಶಿಕ್ಷೆ, ದಂಡ ಮಾತ್ರ ಉಳಿದು ಬಂದಿದೆ. ಕೊರವ ಸಮುದಾಯಕ್ಕೆ ಮುಖಂಡ ಇದೇ ಇರುತ್ತಾನೆ. ಸಮುದಾಯದ ಆಗು ಹೋಗುಗಳನ್ನು ನೋಡಿಕೊಳ್ಳುತ್ತಾ ಮುಂದಿನ ಪೀಳಗೆಯವರಿಗೆ ತಿಳುವಳಿಕೆ ಹೇಳುತ್ತಾ ಇರುತ್ತಾರೆ. ಇಂದಿನ ಮಕ್ಕಳು ಇಷ್ಟ ಬಂದಂತೆ ನಡೆದುಕೊಳ್ಳುತ್ತಾ ಸಮುದಾಯದ ಮರ್ಯಾದೆಯನ್ನು ಕೆಲವರು ಕೆಡುಸುತ್ತಿದ್ದಾರೆ ಎಂದು ಹೇಳದರೆ ತಪ್ಪಾಗಲಾರದು. ರಾಜಕಾರಣದಿಂದ ಮುಖಂಡರನ್ನು ಆಯ್ಕೆ ಮಾಡಲಾಗುತ್ತದೆ. ಬುದ್ಧಿ, ವಯಸ್ಸು

ಮತ್ತು ಯೋಗ್ಯತೆಗಳು ಇರುತ್ತವೆ. ಎಲ್ಲಾ ಸಾಮಾಜಿಕ ಕಾರ್ಯಕ್ರಮಗಳಲ್ಲಿ 'ದೈವದವರು' 'ಕುಲದವರು' ಪ್ರಮುಖವಾಗಿ ಬೇಕಾಗುತ್ತದೆ.

ಕುಲಸಭೆ, ಚರ್ಚೆಗಳು ಮತ್ತು ತೀರ್ಮಾನಗಳು ಇಂದು ನಡೆಯುತ್ತಿದೆ. ಆದರೆ ಆಧುನಿಕತೆಯ ಕೋರ್ಟು ಮತ್ತು ಕಛೇರಿಯಲ್ಲಿ ಅಲೆಯುತ್ತಾ ಸಮಯ ಮತ್ತು ಹಣವನ್ನು ವೆಚ್ಚ ಮಾಡಿಕೊಳ್ಳುತ್ತಿದ್ದಾರೆ. ಯಾವುದೇ ಒಂದು ಕಾರ್ಯವಾದರೂ ದೈವದವರು ಬಂದೇ ಬರುತ್ತಾರೆ. ಅವರಿಗೆ ಪ್ರಾಮುಖ್ಯತೆ ಮತ್ತು ಗೌರವ ಇದ್ದೇ ಇರುತ್ತದೆ. ಹಣದ ರೂಪದಲ್ಲಿ ದಂಡ ವಿಧಿಸುವ ಕುಲದಿಂದ ಬಹಿಷ್ಕಾರ ಹಾಕುವ ಪದ್ಧತಿಯು ಇದೆ ಮತ್ತು ಒಳಗಡೆ ಕರೆದುಕೊಳ್ಳುವುದಕ್ಕೆ ದಂಡ ಭರಿಸಿ ಬರಬೇಕಾಗುತ್ತದೆ.

ಒಂದು ವೇಳೆ ಪಂಚಾಯಿತಿಯ ಖರ್ಚು ಮತ್ತು ದಂಡವನ್ನು ಭರಿಸಬೇಕಾಗುತ್ತದೆ. ತಮಗಿಂತ ಕೆಳ ಜಾತಿಯ ಹೆಣ್ಣನ್ನು ಹೊತ್ತುಕೊಂಡು ಹೋಗುವುದು, ಮತ್ತೊಬ್ಬರ ಹೆಂಡತಿಯನ್ನು ಕೂಡಿಕೊಂಡರೆ, ಕುಲದ ಚೌಕಟ್ಟನ್ನು ಮೀರಿದರೆ ಅಂಥವರನ್ನು ಕುಲಗೆ ಹೊರೆಗೆ ಇಡುತ್ತಾರೆ. ಅಂಥವರಿಗೆ ನೀರನ್ನಾಗಲಿ, ಬೆಂಕಿಯನ್ನಾಗಲಿ ಕೊಡುವಂತಿಲ್ಲ. ಆದರೆ ಇಂದಿನ ಜಾಗತೀಕರಣ ಯುಗದಲ್ಲಿ ಇಂತಹ ಕೆಲಸವನ್ನು ಮಾಡುತ್ತಿದ್ದರೆ ನ್ಯಾಯ ಪದ್ಧತಿಗೆ ಎದುರು ಮಾತನಾಡುತ್ತಾರೆ. ಅವರ ಕಷ್ಟ ನಷ್ಟಗಳಿಗೆ ಯಾರು ಹೋಗುವಂತಿಲ್ಲ. ಕುಲದಿಂದ ಹೊರಗಿಡುತ್ತಾರೆ. ಅವರನ್ನು ಮಾತನಾಡಿಸುವಂತಿಲ್ಲ. ಅಂತವರು ಬದುಕಿದ್ದೂ ಸತ್ತಂತೆ. ಆದ್ದರಿಂದ ಎಷ್ಟೇ ದಂಡ ಕೊಟ್ಟಾದರೂ ಕುಲಕ್ಕೆ ಸೇರಿಕೊಳ್ಳುತ್ತಾರೆ. ಕುಲಕ್ಕೆ ತೆಗೆದುಕೊಳ್ಳುವಾಗ ಆ ವ್ಯಕ್ತಿಯ ನಾಲಗೆಯನ್ನು ಹಸುವಿನ ಗಂಜಳದಿಂದ (ಗೋಮೂತ್ರ) ತೊಳೆಯುತ್ತಾರೆ. ನಂತರ ಊಟ ಹೆಂಡವನ್ನು ಕೊಡುತ್ತಾರೆ. ಈಗ ಹೆಂಡದ ಬದಲಾಗಿ ಸಾರಾಯಿ ಬಂದಿದೆ.

೫.೨ ವರ್ತಮಾನದ ಸವಾಲುಗಳು

ಸಮಾಜದಲ್ಲಿ ಎಂದೂ ಹೆಣ್ಣು ಅಧೀನಳಾಗಿಯೇ ಉಳಿದು ಬಂದಿದ್ದಾಳೆಂಬ ಸಮಸ್ಯೆಯು ಒಂದು ಸವಾಲಾಗಿದೆ. ಈ ಸಮಸ್ಯೆ, ಪರಿಹಾರಗೊಳ್ಳಬೇಕೆಂಬ ಚಿಂತನೆಯನ್ನು ನಮ್ಮ ಸಮಾಜದಲ್ಲಿ ಚಿಂತಕರು ಪ್ರತಿಪಾದಿಸಲು ಹತ್ತೊಂಬತ್ತನೆಯ ಶತಮಾನದ ವೇಳೆಗೆ ತೊಡಗಿದರು. ಆ ಮುಂಚೆ ಈ ಸಮಸ್ಯೆಯನ್ನು ಗುರುತಿಸುವ ಪ್ರಯತ್ನ ಕೂಡ ನಡೆಯಲಿಲ್ಲ ನಮ್ಮ ಸಾಮಾಜಿಕ ಚಿಂತನೆಗಳಲ್ಲಿ ಹೆಣ್ಣಿನ ಸಮಸ್ಯೆ ಎಂಬುದು ಒಂದು ಆನುಷಂಗಿಕ ಸಂಗತಿಯಾಗಿ ಮಾತ್ರ ಪ್ರಸ್ತಾಪಗೊಳ್ಳುತ್ತಿದೆ. ಈ ಜಗತ್ತಿನಲ್ಲಿ ಸದಾ ಗಂಡನನ್ನು ಆಶ್ರಯಿಸಿಯೇ ಬದುಕಬೇಕಾದ ದಾರುಣ ಸ್ಥಿತಿಯು ಈ ಸಮುದಾಯದ ಮಹಿಳೆಯರಿಗಿದೆ. ಇವರ ಸಮಸ್ಯೆಯ ತೀವ್ರತೆಯನ್ನು ಗುರುತಿಸಿಯೂ ಅದಕ್ಕೊಂದು ಸೈದ್ಧಾಂತಿಕ ಪರಿಹಾರವನ್ನು ಸೂಚಿಸುವಲ್ಲಿ ಅಂತಹ ಪ್ರಯತ್ನಗಳನ್ನು ನಡೆಸಿದಂತೆ ತೋರುವುದಿಲ್ಲ. ಸರ್ಕಾರ ಪ್ರಯತ್ನಿಸಿದರೂ ಮಹಿಳೆಯರು ಮುಂದುವರಿಯುವಲ್ಲಿ ವಿಫಲವಾಗುತ್ತಿದ್ದಾರೆ ಎಂಬುದು ತಿಳಿದ ಸಂಗತಿಯಾಗಿದೆ.

ಸ್ತ್ರೀ ಸ್ವಾತಂತ್ರ್ಯದ ಬಗ್ಗೆ, ವಿಮೋಚನೆ, ಸಮಾನತೆ, ಅವಶ್ಯಕತೆಯನ್ನು ಗುರುತಿಸಿದೆ. ಆದರೆ

ಮುಂದೆ ಹೆಜ್ಜೆಯನ್ನಿಡದೆ ನಿಂತುಬಿಟ್ಟಿದೆ. ಅಂದರೆ ಅವಶ್ಯಕತೆಯನ್ನು ಪೂರೈಸುವ, ಕಾರ್ಯಗತ ಗೊಳಿಸುವ ಹೊಣೆಯನ್ನು ಯಾರೂ ಹೊರುತ್ತಿಲ್ಲ. ಕೆಲವು ಕಡೆ ಮಹಿಳೆಯರು ಸಂಘಗಳನ್ನು ಕಟ್ಟಿಕೊಂಡು ಅದರಿಂದ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡರು. ಇದನ್ನು ನಿಭಾಯಿಸುವವರು ೧೦ನೇ ತರಗತಿ ಮತ್ತು ೧೨ನೇ ತರಗತಿ ಓದಿದ ಮಹಿಳೆಯರು ತಮ್ಮ ಸಮುದಾಯದಲ್ಲಿರುವ ಹೆಣ್ಣು ಮಕ್ಕಳನ್ನು ೧೫-೨೦ ಜನರಾಗಿ ವಾರಕ್ಕೊಮ್ಮೆ ಹಣ ಸಂಗ್ರಹಿಸಿ (ಅದು ಹತ್ತು ರೂಪಾಯಿ) ಬ್ಯಾಂಕಿಗೆ ಹಾಕುತ್ತಾರೆ. ಅದರಿಂದ ಬಂದ ಹಣದಿಂದ ಕುಟುಂಬ ಜವಾಬ್ದಾರಿ ಪರಿಹಾರವಾಗುತ್ತದೆಯೇ ಹೊರತು ಯಾವುದೇ ಯೋಜನೆಗಳಿಗಲ್ಲ. ಹೆಣ್ಣು ಮಕ್ಕಳು ತಮ್ಮ ಮಕ್ಕಳ ಖರ್ಚಿಗೆ, ಓದುವುದಕ್ಕೆ ಸಹಾಯಕ ವಾದರೇ ಸಾಕು ಎಂದು ಹೇಳುತ್ತಾರೆ (ದೇವೇಂದ್ರಮ್ಮ ಕೊಟ್ಟೂರು).

ಆರ್ಥಿಕತೆ ಮತ್ತು ಸಂತಾನದ ಕಾರಣಗಳು ಹೆಣ್ಣಿನ ದೌರ್ಬಲ್ಯಗಳಾಗಿ ಅವಳನ್ನು ಕಾಡಿವೆ. ಇದರಿಂದ ಹೊರಬರಬೇಕಾದ ಮಾರ್ಗವನ್ನು ಶೋಧಿಸುವುದೇ ಹೆಣ್ಣಿನ ಸಮಸ್ಯೆಗೆ ಇರುವ ಪರಿಹಾರ ಎಂದೂ ಸೂಚಿಸಬಹುದು. ಆದರೆ ಅದು ಸ್ವಲ್ಪ ಮಟ್ಟಿಗೆ ಉಪಶಮನವಾಗಬಹುದೇ ಹೊರತು ಸಮಸ್ಯೆಯ ಪರಿಹಾರವಾಗಲಾರದು ಎನಿಸುತ್ತದೆ. ಹೆಣ್ಣನ್ನು ಇಂತಹ ದೌರ್ಬಲ್ಯಗಳಲ್ಲಿ ಸಿಲುಕಿಸಿದವರು ಪುರುಷರು. ಸಮಾಜದ ಆರ್ಥಿಕತೆ ಗಡಿಯನ್ನು ಮೀರಿ ದುಡಿಮೆಯ ಚಟುವಟಿಕೆಗಳು ನಡೆಯುತ್ತವೆ. ಸಮಾಜ ಮತ್ತು ಆರ್ಥಿಕತೆಗಳ ನಡುವಿನ ಭಿನ್ನತೆಯ ಮಹಿಳೆ ಲಿಂಗ ಸಂಬಂಧಿಗಳ ದೃಷ್ಟಿಯಿಂದ ಬಹಳ ಮುಖ್ಯವಾಗಿದೆ. ಆರ್ಥಿಕತೆಯ ಗಡಿಯ ಆಚೆಗೆ ಅನೇಕ ಬಗೆಯ ದುಡಿಮೆ ಚಟುವಟಿಕೆಗಳು ನಡೆಯುತ್ತಿರುತ್ತವೆ. ಹೀಗೆ ಆರ್ಥಿಕತೆಯ ಗಡಿಯ ಆಚೆ ನಡೆಯುವ ದುಡಿಮೆಯಲ್ಲಿ ಮುಕ್ಕಾಲು ಪಾಲು ಮಹಿಳೆಯರು ತೊಡಗಿ ಕೊಂಡಿರುತ್ತಾರೆ.

ಜನರ ವರ್ತನೆಗಳು ರೀತಿ ನೀತಿಗಳು ಪ್ರತಿಬಿಂಬವಾಗುವ ದೃಶ್ಯ ಮಾಧ್ಯಮ ಸಮಾಜದಲ್ಲಿ ರೂಢಿಗತವಾದ ಮಾದರಿಗಳನ್ನು ಯಥಾವತ್ತಾಗಿ ಅನುಕರಿಸುತ್ತದೆ. ಸಮಾಜದಲ್ಲಿ ಬೇರು ಬಿಟ್ಟಿರುವ ಲಿಂಗಾಧಾರಿತ ವಿಭಜನೆಯು ಅದರಲ್ಲೊಂದು ಹೆಣ್ಣು ಗಂಡು ಸ್ವಭಾವಗಳನ್ನು ಭಿನ್ನವೆಂದು ತಿಳಿಸಿ ಅವುಗಳ ವರ್ತನೆಯು ಹೀಗೆ ಇರಬೇಕೆಂಬ ನಿರ್ಬಂಧವನ್ನು ರೂಢಿಸಿಕೊಂಡು ಬಂದ ಸಮಾಜದ ಪ್ರತಿಬಿಂಬವನ್ನೇ ಸಮೂಹ ಮಾಧ್ಯಮದಲ್ಲೂ ಕಾಣುತ್ತೇವೆ. ಸಮಾಜದ ಈ ವಿಭಜನೆಯನ್ನು ಬದಲು ಮಾಡಲು ಮತ್ತು ಸರಿಪಡಿಸಲು ಹಲವು ರೀತಿಯಲ್ಲಿ ಸರ್ಕಾರ, ಸ್ತ್ರೀವಾದಿಗಳು ದುಡಿಯುತ್ತಿದ್ದಾರೆ. ಉದಾಹರಣೆಗೆ ಸ್ತ್ರೀ ಸಂಘಗಳು, ಮಹಿಳಾ ಸಂಬಂಧಿಸಿದ ಆಯೋಗಗಳು ಇತ್ಯಾದಿ. ಮಹಿಳೆಯನ್ನು ವಸ್ತುವಾಗಿ, ಬಂಡವಾಳವಾಗಿ ನೋಡುವ, ಚಿತ್ರಿಸುವ ಕ್ರಮ ಬದಲಾಯಿಸಬೇಕೆಂದು ಒತ್ತಾಯಿಸುತ್ತಿದ್ದಾರೆ.

ಆದರೆ ಸಂಸ್ಕೃತಿಯು ಎಲ್ಲಾ ರೀತಿಯಿಂದಲೂ ಲಿಂಗಾಧಾರಿತ ವಿಭಜನೆಯನ್ನು ಪೋಷಿಸಿಕೊಂಡು ಬಂದಿರುವುದರಿಂದ ಸಮಾಜದ ಪ್ರತಿಯೊಂದು ಚಟುವಟಿಕೆಯಲ್ಲಿ ಲಿಂಗತಾರತಮ್ಯದ ಬೀಜಗಳು ಕಂಡುಬರುತ್ತವೆ. ಸ್ತ್ರೀಯರ ಬದುಕು ದಿನೇ ದಿನೇ ಕಷ್ಟಕ್ಕೀಡಾಗುತ್ತಿದ್ದು, ಅವರ ಮೇಲೆ ದೌರ್ಜನ್ಯಗಳು ಕಂಡು ಬರುತ್ತವೆ. ಕೆಳವರ್ಗದ ಮಹಿಳೆಯರು ದುಡಿಮೆಗೆಂದು ಹೊರಗಡೆ ಹೋಗುತ್ತಿದ್ದಾರೆ. ಎಷ್ಟೋ

ಪ್ರತಿಭಾವಂತ ಸ್ತ್ರೀಯಾದರೂ ಕುಟುಂಬದಲ್ಲಿರುವ ಹಲವಾರು ಕಾರಣಗಳಿಂದ ಶೋಷಣೆಗೆ ಒಳಗಾಗಬೇಕಾಗುತ್ತದೆ. ಸಮಾನತೆ ಮೂಡಿಸಲು ಮಹಿಳೆಯರು ಎಷ್ಟೇ ಪ್ರಯತ್ನಿಸಿದರೂ ತಾರತಮ್ಯ ಹೋಗಲಾಡಿಸಲು ಸಾಧ್ಯವಾಗಿ ಅದರಿಂದಾಗಿ ಪುರುಷರೇ ಅರ್ಥ ಮಾಡಿಕೊಳ್ಳಬೇಕಾಗಿದೆ. ಮಹಿಳೆಗೆ ಶೋಷಣೆಯಾಗಿದೆ ಎಂಬುವುದರಲ್ಲಿ ಸಮಾಜ ಕಾರಣವಾಗುತ್ತದೆ. ಏಕೆಂದರೆ ಸಮಾಜದಲ್ಲಿನ ಸಾಂಪ್ರದಾಯಕ ರೀತಿ ನೀತಿಗಳು ಹೆಣ್ಣಿಗೆ ಬೆಟ್ಟು ಮಾಡಿ ತೋರಿಸಲಾಗುತ್ತದೆ. ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ಮಾತನ್ನು ಈ ರೀತಿ ಮಾಡಿದವರು ಪುರುಷರೇ ಎಂದು ತಿಳಿದುಕೊಳ್ಳಬೇಕಾಗಿದೆ. ಮಹಿಳೆಯರು ಕಲಿತವರು, ಸ್ವಚ್ಛತೆ, ನೀತಿ, ನ್ಯಾಯಕ್ಕೆ ಹಾಗೂ ವೈಚಾರಿಕತೆಗೆ ಬೆಲೆ ಕೊಡುವವರಾಗಿ, ಕುಟುಂಬ ದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವವರಾಗಿ, ಆಧುನಿಕ ಸಂಸ್ಕೃತಿಗೆ ಮಾರು ಹೋಗಿ ತಮ್ಮಿಷ್ಟದ ಜೀವನ ನಡೆಸುವವರಾಗಿ ಪುರುಷನಿಗೆ ಸಹಕಾರ ಮಾಡುವವರಾಗಿ, ಸಂತೋಷಪಡಿಸುವವರಾಗಿ, ಕೆಲವು ಕೌಟುಂಬಿಕ ಜವಾಬ್ದಾರಿಗಳನ್ನು ಕಡಿಮೆ ಮಾಡುವವರಾಗಿ, ಆತನ ವಂಶವನ್ನು ಮುಂದುವರೆಸು ವವರಾಗಿ ಮಾತ್ರ ತೋರಿಸಲಾಗುತ್ತಿದೆ.

ಮಹಿಳೆ ಅನುಭವಿಸುತ್ತಿರುವ ವಿಶಿಷ್ಟವಾದ ಸಮಸ್ಯೆಗಳು: ''ಮುದ್ದಿನ ಮಗಳಾಗಿ, ಮಾತೆಯಾಗಿ, ಮೆಚ್ಚಿನ ಮಡದಿಯಾಗಿ ಮಹಿಳೆಯನ್ನು ನೋಡುವ ಈ ಪುರುಷ ಸಮಾಜ, ಮಹಿಳೆಗೂ ಅವಳದೇ ಆದ ಯೋಚನೆಗಳು, ಬೇಕು ಬೇಡಗಳಿವೆ ಎಂದು ಗುರುತಿಸುವುದರಲ್ಲಿ ವಿಫಲವಾಗಿದೆ. ಪುರುಷನಷ್ಟೇ ಕಷ್ಟ ಪಟ್ಟು ದುಡಿಯುವ ಮಹಿಳೆ ಮದುವೆ ಆದ ಮೇಲೆ ಮಡದಿ, ತಾಯಿ, ಉದ್ಯೋಗಿ ಈ ಮೂರು ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸಿದರೂ ಮನೆಗೆಲಸದಲ್ಲಿ ಬರುವ ಅನೇಕ ಸಮಸ್ಯೆಗಳು ಉದ್ಯೋಗಕ್ಕೆ ಹೋಗುವಾಗ ನಂತರ ಕೆಲಸ ಮಾಡುವ ಸ್ಥಳದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ಅತ್ಯಂತ ಸಂಕೀರ್ಣವಾದವುಗಳು".[೧೧]

ಕುಟುಂಬ ನಿರ್ವಹಣೆ ಜವಾಬ್ದಾರಿಯನ್ನು ಹೆಗಲ ಮೇಲೆ ಹೊತ್ತಿರಬೇಕಾದ ಮಹಿಳೆ ಮನೆಯಿಂದಾಚೆ ತನ್ನ ಬಹುಪಾಲು ಸಮಯ ವ್ಯಯಸುತ್ತಿರುವುದು, ಸಂಪಾದಿಸುವುದೇ ತನ್ನ ಜವಾಬ್ದಾರಿ ಎಂದು, ಮಕ್ಕಳನ್ನು ಹೆಚ್ಚು ಓದಿಸಲು ದುಡಿಯುವುದೇ ಮುಖ್ಯವಾಗಿರುತ್ತದೆ. ಅವಳು ದುಡಿಯುತ್ತಿರುವುದರಿಂದ ಕುಟುಂಬದಲ್ಲಿನ ಮಕ್ಕಳು ಹಾದಿ ತಪ್ಪುವ ಸಾಧ್ಯತೆ ಕೂಡ ಹೆಚ್ಚಾಗುತ್ತದೆ. ಉನ್ನತ ಶಿಕ್ಷಣ ಕೊಡಿಸಿದರೂ ಸಹಾ ತಾಯಿ ಪ್ರೀತಿ ಮಾರ್ಗದರ್ಶನದ ಕೊರತೆ ಎದುರಿಸುತ್ತಿರುತ್ತಾರೆ. ಮಕ್ಕಳಿಗೆ ಬೇಕಾದಷ್ಟು ಹಣ ಕೊಟ್ಟರೂ, ನಾನಾ ತರಹದ ತಿಂಡಿ ತಿನಿಸುಗಳನ್ನು ಕೊಡಿಸಿದರೂ ಅದು ಅಮೃತಕ್ಕೆ ಸಮನಾದ ತಾಯಿಯ ಕೈತುತ್ತಿನ ಮುಂದೆ ಸಮನಾಗಲಾರದು. ಯಾವುದೇ ಸಿನಿಮಾ, ಗೇಮ್ ಆಡಿದರೂ, ತಾಯಿ ಅಜ್ಜಿ ಹೇಳುವ ಕಥೆಗಳು ಸ್ಥಾನ ತುಂಬುವುದಿಲ್ಲ, ಇಂದಿಗೂ ಮಕ್ಕಳಿಗೆ ಕಥೆ ಹೇಳುತ್ತಿದ್ದರೆ, ಗಮನವಿಟ್ಟು ಕೇಳುತ್ತಾರೆ.

ಮಹಿಳೆಗೆ ತಾಳ್ಮೆ ಸಹನೆ ಪ್ರೀತಿಸುವ ಗುಣ ದೈವದತ್ತ ಎಂಬುದು ಸಾಮಾನ್ಯ ಮಾತು. ಆದರೆ ಮಹಿಳೆಗೆ ತಾಳ್ಮೆಯಾಗಲಿ, ಸಹನೆಯಾಗಲಿ, ಪ್ರೀತಿಸುವ ಮತ್ತು ಸ್ಪಂದಿಸುವ ಗುಣ, ನಾಚಿಕೆ ಮತ್ತು

ಹೊಂದಿಕೊಳ್ಳುವ ಸ್ವಭಾವವಾಗಲಿ ಖಂಡಿತಾ ದೈವದತ್ತವಾದುದಲ್ಲ. ಇದನ್ನು ಮನೆಯಲ್ಲಿಯೇ ಪ್ರತ್ಯಕ್ಷ ಮತ್ತು ಪರೋಕ್ಷವಾಗಿಯೇ ಹೆತ್ತವರಿಂದ ಹೆಣ್ಣು ತನ್ನದಾಗಿಸಿಕೊಳ್ಳುತ್ತಾಳೆ. ಸಮಾಜವು ಅವಳಲ್ಲಿ ಈ ರೀತಿಯ ಎಲ್ಲಾ ಅಂಶಗಳನ್ನು ನಿರೀಕ್ಷಿಸುತ್ತದೆ. ಕೂಡಾ. ಒಂದು ವೇಳೆ ಹೆಣ್ಣು ಈ ಗುಣಗಳನ್ನು ಮತ್ತು ಅಂಶಗಳನ್ನು ಬೆಳೆಸಿಕೊಳ್ಳದಿದ್ದರೆ ಅವಳಿಗೆ ಗಂಡು ಬೀರಿ. ನಯ ನಾಜೂಕು ಇಲ್ಲದವಳು ನಾಚಿಗೆ ಇಲ್ಲದವಳು ಎಂದು ಬೈಯುವುದು ಸಹಜವಾಗಿದೆ. ಹೆಣ್ಣು ಮಕ್ಕಳನ್ನು ಬೆಳೆಸುವಾಗ ಶಿಕ್ಷಣದಲ್ಲಿ, ಆಹಾರದಲ್ಲಿ, ಬಟ್ಟೆ ಬರೆಯಲ್ಲಿನ ಅಸಮಾನತೆಗಳು ಕಂಡುಬರುತ್ತದೆ. ಅಲ್ಪ ಸ್ವಲ್ಪ ಬದಲಾವಣೆಗಳನ್ನು ನಗರ ಪಟ್ಟಣಗಳಲ್ಲಿ ಕಾಣಬಹುದು. ಗಂಡು ಮಕ್ಕಳನ್ನು ಧೈರ್ಯವಂತರನ್ನಾಗಿ ಮಾಡಿದರೇ ಹೆಣ್ಣು ಮಕ್ಕಳನ್ನು ಅಶಕ್ತರನ್ನಾಗಿ, ಅಂಜುಬುರುಕಿಯರನ್ನಾಗಿ ಮಾಡುತ್ತದೆ. ಅದಕ್ಕೆ ಉದಾಹರಣೆ, 'ಗಂಡು ಮಕ್ಕಳು ಅಳಬಾರದು, ಅತ್ತರೆ ಗಂಡಾಗಿ ನೀನು ಹೆಣ್ಣು ಮಕ್ಕಳಂತೆ ಅಳುತ್ತಿಯಲ್ಲ' ಎಂದು ಹೀಯಾಳಸುತ್ತಾರೆ. ಹೆಣ್ಣುಗಳ ಕೆಲಸವನ್ನು ಮಾಡಿದರೆ ಹೆಂಗಸಿನಂತೆ ಕೆಲಸ ಮಾಡುವೆಯಲ್ಲ ಎಂದು ಹೇಳುತ್ತಾರೆ. ಇನ್ನು ಗಂಡು ಮಕ್ಕಳಿಗೂ ಭಯ, ಅಂಜಿಕೆ ಇದ್ದೇ ಇರುತ್ತದೆ. ಒಂದು ವೇಳೆ ಗಂಡು ರಾತ್ರಿ ಹೊರ ಹೋಗಲು ಹೆದರಿದರೇ? ಗಂಡಾಗಿ ಹೆದರುವುದೇ ಎಂಬ ಪ್ರಶ್ನೆ ಹಾಕುತ್ತಾರೆ. ಅದೇ ಹೆಣ್ಣು ರಾತ್ರಿ ಹೊತ್ತು ಎಲ್ಲಿಗೂ ಹೋಗಬಾರದು ಎಂದು ಹೇಳುತ್ತಾರೆ. ಹೆಣ್ಣು ಮಕ್ಕಳು ಗಲಾಟೆ ಮಾಡಬಾರದು, ದನಿ ಎತ್ತರಿಸಿ ಮಾತನಾಡಬಾರದು, ಜೋರಾಗಿ ನಗಬಾರದು, ಎಲ್ಲದರಲ್ಲೂ ನಯ ನಾಜೂಕುನಲ್ಲಿ ಇರಬೇಕು ಎಂದು ಹೇಳುತ್ತಾರೆ.

ಹಿಂದೆ ಕುಟುಂಬದಲ್ಲಿ ಹಿರಿಯರು ತುಂಬ ಕಾಳಜಿಯಿಂದ ಮಕ್ಕಳಿಗೆ ಮನೆಯ ಜವಾಬ್ದಾರಿಗಳನ್ನು ವಹಿಸಿ ಕೂಡು ಕುಟುಂಬದಿಂದ ಸುಖವಾಗಿದ್ದರೂ, ಮಕ್ಕಳನ್ನು ಹಿಡಿತದಲ್ಲಿ ಇಟ್ಟುಕೊಂಡಿದ್ದರು. ಇದನ್ನು ಮಾಡಬೇಕು, ಅದನ್ನು ಮಾಡಬಾರದು ಎಂಬ ಬುದ್ಧಿವಾದ ಹೇಳುತ್ತಾರೆ. ಆದರೆ ಯಾವುದೇ ಪ್ರಭಾವಕ್ಕೆ ಬಲಿಯಾಗಿ, ಅನೇಕ ಒತ್ತಡಗಳಿಗೆ ಮಣಿದು ಇಂದು ಅವಳು ಪುರುಷರಿಗಿಂತ ತಾನೇನು ಕಡಿಮೆ ಎನ್ನುವಂತೆ ಹಣ ಸಂಪಾದನೆಗೆ ತನ್ನ ಹೆಚ್ಚಿನ ಸಮಯವನ್ನು ಮೀಸಲಿಡುತ್ತಿದ್ದಾಳೆ. ಗಂಡ ಹೆಂಡತಿ ಇಬ್ಬರೂ, ದುಡಿದಾಗಲೇ ಸಂಸಾರದ ನಿರ್ವಹಣೆ ಸಾಧ್ಯ ಎಂದು ಹಲವರು ಹೇಳುತ್ತಾರೆ. ಚಿಕ್ಕ ಸಂಪಾದನೆಯಾದರೂ ಕುಟುಂಬವನ್ನು ಅಚ್ಚುಕಟ್ಟಾಗಿ ನಿಭಾಯಿಸುವ ಶಕ್ತಿ ಅವಳಲ್ಲಿ ಮಾತ್ರ ಇದೆ.

ಮನೆಯ ಯಾವುದೇ ವಿಷಯದಲ್ಲಿ ಅವಳಿಗೆ ನಿರ್ಧಾರ ತೆಗೆದುಕೊಳ್ಳಲು ಪುರುಷರು ಬಿಟ್ಟಿಲ್ಲ. ಅನ್ಯಾಯವಾದಾಗ ಅದನ್ನು ಎದುರಿಸಲು ಕಲಿತಿಲ್ಲ. ಮದುವೆಯಾದ ಮೇಲಂತೂ, ಗಂಡ ಕುಡಿದು ಹಿಂಸೆ ಮಾಡುವವ, ದಿನ ಕಿರಿಕಿರಿ ಕೊಡುವವ ಆದರೂ ಸಹಿಸಿಕೊಂಡು ಸಂಸಾರ ಮಾಡಬೇಕು ಎಂದು ಹೇಳುತ್ತಾರೆ. ವಿನಃ ಅದನ್ನು ಎದುರಿಸಲು ಅವಳಿಗೆ ಸಾಧ್ಯವಾಗುವುದಿಲ್ಲ. ಗಂಡ ಬಿಟ್ಟು ಬಂದವಳಿಗೆ ಯಾವುದಾದರೂ ಒಂದು ರೀತಿಯಲ್ಲಿ ಬೈಯುತ್ತಿರುತ್ತಾರೆ. ಸಂಸಾರದಲ್ಲಿ ಎಷ್ಟೇ ಕಷ್ಟಗಳಿದ್ದರೂ ನನ್ನ ಹಣೆಬರಹದಲ್ಲಿ ಬರೆದಂತೆ ಆಗುತ್ತದೆ ಬಿಡು ಎಂಬ ನಿರಾಸೆ ಭಾವನೆ ಇವರಲ್ಲಿ ಎದ್ದುಕಾಣುತ್ತದೆ. ಇವುಗಳನ್ನು ಪ್ರಶ್ನಿಸದೆ ಬೆಳೆಯುತ್ತಾಳೆ. ಬದುಕುತ್ತಾಳೆ. ಅನ್ಯಾಯವಾದಾಗ,

ತೊಂದರೆಯಾದಾಗ ಅದನ್ನು ಪ್ರಶ್ನಿಸದೆ ಮತ್ತು ಪ್ರತಿಭಟಿಸಬೇಕು ಎನ್ನುವ ಗೋಜಿಗೆ ಹೋಗದೆ ಮೌನಕ್ಕೆ ಮೊರೆ ಹೋಗುತ್ತಾಳೆ. ಸಮಾಜದಲ್ಲಿ ಅರ್ಧದಷ್ಟು ಹೆಣ್ಣು ಮಕ್ಕಳು ಇದೇ ರೀತಿ ಬೆಳೆದರೆ ದಿಟ್ಟ ಸದೃಢ ಸಮಾಜ ನಿರ್ಮಾಣ ಮಾಡುವುದಾದರೂ ಹೇಗೆ? ಎಂಬ ಪ್ರಶ್ನೆ ನಮ್ಮ ಮುಂದೆ ಕಾಡುತ್ತದೆ.

''ಹೆಣ್ಣು ಮಗಳನ್ನು ಸಾಕುವುದು ನೆರಮನೆಯ ಗಿಡಕ್ಕೆ ನೀರೆರೆದಂತೆ'' ಎಂಬ ಗಾದೆಯಲ್ಲಿ ನಮ್ಮ ಸಮಾಜ ನೀಡಿರುವ ಪ್ರಾಶಸ್ತ್ಯಕ್ಕೆ ಒಂದು ನಿದರ್ಶನ ವಿದು. ಹೆಣ್ಣೆ ಆಗಲಿ, ಗಂಡೆ ಆಗಲಿ, ಆ ವ್ಯಕ್ತಿಯ ಜೀವನಾಭಿವೃದ್ಧಿಗೆ ಅತ್ಯಂತ ಪೂರಕವಾದುದು ಶಿಕ್ಷಣ, ಸ್ತ್ರೀ ಸ್ವಾತಂತ್ರ್ಯದ ಅತ್ಯಂತ ಪ್ರಬಲ ಸಾಧನವಾದ ಈ ಶಿಕ್ಷಣವನ್ನು ಪಡೆಯಲು ಯಾವ ಹೆಣ್ಣಿಗೂ ಒಂದು ಸೈದ್ಧಾಂತಿಕ ಮಟ್ಟದಲ್ಲಿ ಅಡ್ಡಿಯೇನಿಲ್ಲ. ಆದರೆ ವಾಸ್ತವದಲ್ಲಿ ಹೆಣ್ಣು ಶಾಲೆಗೆ ಹೋಗುತ್ತಾಳೆಯೇ ಇಲ್ಲವೋ, ಹೋದರೂ ಅಲ್ಲಿ ಎಷ್ಟು ದಿನಗಳು ಉಳಿಯುತ್ತಾಳೆ. ಉಳಿದರೂ ಯಾವ ವಿಷಯದಲ್ಲಿ, ಶಿಕ್ಷಣವನ್ನು ಪಡೆಯುತ್ತಾಳೆ ಇವೇ ಮೊದಲಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಆಕೆಯ ಕುಟುಂಬದ ಜವಾಬ್ದಾರಿಗಳಾಗಿರುತ್ತದೆ. ಶಿಕ್ಷಣ ಕೇವಲ ಜ್ಞಾನಾರ್ಜನೆಯ ಸಾಧನವಲ್ಲ. ಅತ್ಮ ವಿಶ್ವಾಸ ಮತ್ತು ಧೈರ್ಯಸಾಹಸ ಪ್ರವೃತ್ತಿಗಳನ್ನು ನೀಡಬಲ್ಲರೆಂಬ ಶಕ್ತಿಯೂ ಶಿಕ್ಷಣಕ್ಕಿದೆ.''[೧೨]

ಕೊರಮ ಸಮುದಾಯದಲ್ಲಿ ಮಹಿಳೆಯರಿಗೆ ಜೀವನದ ಪರಮ ಗುರಿ ವಿವಾಹ ಮತ್ತು ತಾಯ್ತನ ಎನ್ನುವ ಕೌಟುಂಬಿಕ ಧೋರಣೆಗಳು ಸ್ತ್ರೀ ಶಿಕ್ಷಣಕ್ಕೆ ಅಡ್ಡಿಯನ್ನು ಒಡ್ಡಿದೆ. ಸ್ವಾವಲಂಬನೆಯ ಬದುಕಿಗೆ ಅವರನ್ನು ತಯಾರಿ ಮಾಡಬಹುದಾಗಿದ್ದ ಶಿಕ್ಷಣದಿಂದ ಹೆಣ್ಣು ಮಕ್ಕಳನ್ನು ವಂಚಿಸಲಾಗಿದೆ. ಅವರ ಬದುಕಿಗೆ ಕೌಟುಂಬಿಕ ಜವಾಬ್ದಾರಿಗಳ ಸಂಕೋಲೆಗಳನ್ನು ಹಾಕುವುದರ ಮೂಲಕ ಕುಟುಂಬದ ಸ್ವತಃ ಅವರನ್ನು ಹಿಂಸೆಗೆ ಗುರಿಪಡಿಸುವುದೇ ಅಲ್ಲದೆ ಮುಂದೆ ಅವರ ಮೇಲೆ ನಡೆಯಬಹುದಾದ ಹಿಂಸೆಗಳಿಗೂ ನೇರವಾಗಿ ಜವಾಬ್ದಾರಿಯಾಗುತ್ತದೆ.

ಉನ್ನತ ಜ್ಞಾನ, ಉನ್ನತ ತರಬೇತಿ, ತಂತ್ರಜ್ಞಾನ ಪಡೆಯಲು ಶಿಕ್ಷಣದ ಸೌಲಭ್ಯಬೇಕು, ಶಿಕ್ಷಣದಿಂದ ಜ್ಞಾನಾರ್ಜನೆ ಸಾಧ್ಯ. ಸಾರಿಗೆ ಸಂಪರ್ಕ, ಬ್ಯಾಂಕಿಂಗ್, ವಿಮೆ, ವ್ಯಾಪಾರ ಮೊದಲಾದವುಗಳ ಸೌಲಭ್ಯದಿಂದ ಬದುಕನ್ನು ಉತ್ತಮಪಡಿಸಿಕೊಳ್ಳಲು ಸಾಧ್ಯ. ಇವುಗಳ ಅನುಭೋಗ ಕೊರತೆಯಾದರೆ ಬದುಕು ಉತ್ತಮವಾಗಿರಲು ಸಾಧ್ಯವಿಲ್ಲ ಉದಾಹರಣೆಗೆ ಮಹಿಳೆಯರ ಸಂಚಲನೆಯ ಮೇಲೆ ಅನೇಕ ಬಗೆಯ ನಿರ್ಬಂಧಗಳನ್ನು ನಿರ್ಮಿಸಲಾಗಿದೆ. ಮಹಿಳೆಯರ ಅಧಿನ ಸ್ಥಿತಿಗತಿಗೆ ಅವರ ಸಂಪ್ರದಾಯ, ಆಚಾರ ವಿಚಾರಗಳು ಶಿಕ್ಷಣಕ್ಕೆ ಅವಕಾಶ ಒದಗಿಸಿಕೊಡದಿರುವುದೇ ಈ ಸ್ಥಿತಿಗತಿಗೆ ಕಾರಣವಾಗಿದೆ.

ಜಗತ್ತಿನಲ್ಲಿ ಸಾಮಾಜಿಕ, ರಾಜಕೀಯ ಬದಲಾವಣೆಗಳೇನೆ ಇರಲಿ ಅದರ ಪರಿಣಾಮ ಮಹಿಳೆಯ ಮೇಲೆ ತೀವ್ರವಾಗಿ ಉಂಟಾಗಿದೆ. ಪರಕೀಯರ ದಾಳಿ, ಸಮಾಜದಲ್ಲಿ ಹಬ್ಬಿದ ಮೂಢನಂಬಿಕೆಗಳು ಸ್ತ್ರೀಯರ ಶಿಕ್ಷಣವನ್ನು ಕುಂಠಿತಗೊಳಿಸಿದವು. ಹುಡುಗಿಯರು, ಹುಡುಗರ ಹಾಗೆ ಶಾಲೆಗಳಿಗೆ ಹೋಗುವುದು ಕಷ್ಟವಾಯಿತು.

ಸರ್ಕಾರ ಶೈಕ್ಷಣಿಕ ರಂಗದಿಂದಲೇ ಕಾಲ್ತೆಗೆಯುತ್ತಿರುವುದು ಬಡತನದಲ್ಲಿರುವವರಿಗೆ ಶಿಕ್ಷಣ ಒದಗಿಸುವುದು ತನ್ನ ಕರ್ತವ್ಯ ಎನ್ನುವುದನ್ನು ಮರೆತು ಬಿಟ್ಟಿದೆ. ಇದರಿಂದಾಗಿ ಶಿಕ್ಷಣ ಖಾಸಗೀಕರಣಕ್ಕೆ ಮತ್ತು ವ್ಯಾಪಾರೀಕರಣಕ್ಕೆ ಕುಮ್ಮಕ್ಕು ಕೊಟ್ಟಂತಾಗಿದೆ. ಶಿಕ್ಷಣದ ವ್ಯಾಪಾರೀಕರಣದಿಂದಾಗಿ, ಖಾಸಗಿ ಸಂಸ್ಥೆಗಳು ವಿಧಿಸುವ ದುಬಾರಿ ಹಣವನ್ನು ನೀಡಲಾಗದೆ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಶಿಕ್ಷಣ ದುಬಾರಿಯಾಗುತ್ತಿದ್ದಂತೆ ಹುಡುಗರಿಗೆ ಮಾತ್ರ ಶಿಕ್ಷಣದಲ್ಲಿ ಅವಕಾಶ ದೊರೆತು, ಈಗಾಗಲೇ ಕಡೆಗಣಿಸುತ್ತಿರುವ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವುದಕ್ಕೆ ತಂದೆ ತಾಯಿಗಳು ಹಿಂಜರಿಯುತ್ತಿದ್ದಾರೆ.

ಇದರಿಂದಾಗಿ ಮಹಿಳೆಯರು ಆದಷ್ಟು ಮಟ್ಟಿಗೆ ಕೂಲಿ ಕಾರ್ಮಿಕರಾಗುತ್ತಾರೆ. ಇವರಲ್ಲಿ ಅಕ್ಷರಸ್ಥರು ಮಾತ್ರ ತುಂಬ ಕಡಿಮೆ. ಮಕ್ಕಳನ್ನು ಶಾಲೆ ಬಿಡಿಸಿ, ಕೂಲಿ ಕೆಲಸಕ್ಕೆ ಕಳಿಸುವುದು. ಇಲ್ಲಿ ಮಹಿಳೆಯರು ದುಡಿಮೆಯಲ್ಲಿ ಅವರದ್ದೇ ಸಿಂಹಪಾಲು. ಅವರಲ್ಲಿ ಅನೇಕರಿಗೆ ಮನೆ ಇಲ್ಲದಿರುವುದು. ಆರೋಗ್ಯದ ವಾತಾವರಣವು ಇರುವುದಿಲ್ಲ. ಮತ್ತೇ ಮುಖ್ಯವಾಗಿ ಮೇಲ್ಜಾತಿ ಗಂಡಸರಿಂದ ಕಿರುಕುಳ ಮತ್ತು ಹಲ್ಲೆಗೆ ಒಳಗಾಗುವುದು ಕಂಡುಬರುತ್ತದೆ. ಜಾಗತೀಕರಣದ ಪರಿಣಾಮದಿಂದಾಗಿ ಮಹಿಳೆಯರ ಆರೋಗ್ಯ, ಶಿಕ್ಷಣ, ಭದ್ರತೆ, ಅಭಿವೃದ್ಧಿ ಮತ್ತು ಬದುಕಿನಲ್ಲಿ ಸಂಕಷ್ಟಕ್ಕೆ ಸಿಲುಕುತ್ತದೆ.

ಹೊಸ ಆರ್ಥಿಕ ನೀತಿಯ ಹೊರೆ ಬಡಜನರ ಮೇಲೆ ಬಿದ್ದಿದೆ, ಇವರಲ್ಲಿ ಹೆಚ್ಚಾಗಿ ದಲಿತರೆ ಇದ್ದಾರೆ. ಜಾಗತೀಕರಣದಿಂದಾಗಿ ಬದಲಾಗುತ್ತಿರುವ ನೀತಿಗಳ ಪೆಟ್ಟನ್ನು ಮಹಿಳೆಯರು ಸಹಿಸ ಬೇಕಾಗಿದೆ. ಆದರೆ ಅವರಿಗೆ ಕಡಿಮೆ ದರ್ಜೆಯ ಜೀವನಮಟ್ಟ, ಆರೋಗ್ಯ ವ್ಯವಸ್ಥೆ, ವಿದ್ಯೆಯು ಒಂದು ಸವಾಲಾಗಿ ಪರಿಣಮಿಸಿದೆ. ಬದಲಾಗುತ್ತಿರುವ ಕೃಷಿ ನೀತಿಗಳು ಮತ್ತು ಸಮಾಜ ಸೇವೆಯಲ್ಲಿ ಕಡಿಮೆಯಾಗುತ್ತಿರುವ ಸರ್ಕಾರದ ವೆಚ್ಚವು ನೇರವಾಗಿ ಮಹಿಳೆಯರ ಆರೋಗ್ಯ ಶಿಕ್ಷಣ, ರಕ್ಷಣೆ, ಅಭಿವೃದ್ಧಿ ಮತ್ತು ಜೀವನಾಧಾರದ ಮೇಲೆ ಪ್ರಭಾವ ಬೀರುತ್ತಿದೆ.

ಕೊರವ ಮಹಿಳೆಯರ ವ್ಯಾಪಾರದಲ್ಲಿ ಆದಾಯವು ಕಡಿಮೆಯಾಗುತ್ತಿದೆ. ಗಗನಕ್ಕೇರುತ್ತಿರುವ ಬೆಲೆ ಇದಾಗಿ ಜೀವನ ನಡೆಸುವುದು ಕಷ್ಟಕರವಾಗುತ್ತಿದೆ. ಇವರ ವ್ಯಾಪಾರದಲ್ಲಿ ಒಂದು ಕಸಬರಿಗೆಗೆ ೫ ರೂ, ಬುಟ್ಟಿಗೆ ೩೦ ರೂ. ಇವರು ಬಟ್ಟೆಗಳನ್ನು ಹೊತ್ತುಕೊಂಡು ಊರೂರಿಗೆ ಹೋಗಿ ವ್ಯಾಪಾರ ಮಾಡುತ್ತಾರೆ. ಆದರೆ ಅವರಿಗೆ ದೊರೆಯುವ ಮೌಲ್ಯವು ಕಡಿಮೆಯಾಗಿರುತ್ತದೆ. ಜೀವನ ವ್ಯವಸ್ಥೆಯನ್ನು ಯಾವ ರೀತಿಯಲ್ಲಿ ಇವರು ನಡೆಸುತ್ತಾರೆ. ಜಾಗತೀಕರಣದಿಂದಾಗಿ ಇವರು ತಯಾರಿಸಿದ ಕಸಬರಿಗೆ ತೆಗೆದುಕೊಳ್ಳದೇ ೩೫ ರೂ.ನ ಕಂಪನಿಯ ಕಸಬರಿಗೆಗೆ ಮಾರುಹೋಗುತ್ತಿದ್ದಾರೆ. ಇಂದಿನ ಕಾಲದಲ್ಲಿ ಬುಟ್ಟಿಗಳು ಯಾರಿಗೆ ಬೇಕು? ಅವು ಬಡತನದಲ್ಲಿರುವವರಿಗೆ ಮಾತ್ರ ಬೇಕಾಗುತ್ತದೆ. ಇಂತಹ ಉದಾಹರಣೆಗಳು ಬಹಳ ಇವೆ.

ಪುರುಷರಿಗೆ ಹೋಲಿಸಿದರೆ ಮಹಿಳೆಯರು ಹೆಚ್ಚು ಅಪೌಷ್ಟಿಕತೆ, ರಕ್ತಹೀನತೆ, ಸೋಂಕು ರೋಗಗಳು ಹಾಗೂ ಅನಾರೋಗ್ಯದಿಂದ ನರಳುತ್ತಿದ್ದಾರೆ ಮತ್ತು ಅವರಿಗೆ ಸಕಾಲಿಕವಾಗಿ ವೈದ್ಯಕೀಯ ಉಪಾಚಾರವೂ ದೊರಕುತ್ತಿಲ್ಲ. ಇದಕ್ಕೆ ಕಾರಣ ಆರ್ಥಿಕ ಪರಿಸ್ಥಿತಿ. ಮಹಿಳೆಯರು ಅದರಲ್ಲೂ

ಬಡಮಹಿಳೆಯರು ಪ್ರಸೂತಿ ಹಾಗೂ ಕಠಿಣ ದೈಹಿಕ ಶ್ರಮದಿಂದ ಅನಾರೋಗ್ಯದ ಬಲೆಯಲ್ಲಿ ಸಿಲುಕಿರುತ್ತಾರೆ. ''ಮಹಿಳೆಯರ ಕೆಳಮಟ್ಟದ ಆರೋಗ್ಯ ಹಾಗೂ ಪೌಷ್ಟಿಕತೆಯ ಮಟ್ಟ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಕಾರಣಗಳೊಂದಿಗೆ ಹಾಸು ಹೊಕ್ಕಾಗಿದೆ. ಈ ಅಂಶಗಳು ಮಹಿಳೆಯರ ಮೇಲೆ ಮಾತ್ರ ಪರಿಣಾಮ ಬೀರಿದೆ, ಅವರ ಮಕ್ಕಳ ಮೇಲೆ ಕೌಟುಂಬಿಕ ಚಟುವಟಿಕೆಗಳ ಮೇಲೆ, ಸಂಪನ್ಮೂಲ ಹಂಚಿಕೆಯ ಮೇಲು ಪರಿಣಾಮ ಬೀರುತ್ತಿದೆ. ಆರೋಗ್ಯ ರಕ್ಷಣೆಯನ್ನೊಳಗೊಂಡಂತೆ ಇತರ ಸಂಪನ್ಮೂಲಗಳ ಲಭ್ಯತೆ, ಕಾರ್ಯಕ್ಷಮತೆ, ಜಾತಿ ಮತ್ತು ಧರ್ಮ, ಕೆಳಜೀವನಮಟ್ಟ, ಕೆಳ ಮಟ್ಟದ ಶಿಕ್ಷಣ, ಕಡಿಮೆ ವಯಸ್ಸಿನಲ್ಲಿ ವಿವಾಹ ಇತ್ಯಾದಿ, ಆದ್ದರಿಂದ ಜನಸಂಖ್ಯೆ ಕಾರ್ಯಕ್ರಮಗಳ ಪುನರ್ ಯೋಜನೆ ಮಾಡಿ ಮಹಿಳೆಯ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳಿಗೆ ಪ್ರಾಶಸ್ತ್ಯ ನೀಡುವುದು ಇಂದಿನ ತುರ್ತು ಅಗತ್ಯವಾಗಿದೆ. ಮಹಿಳೆಯರು ಆರೋಗ್ಯ ಸೇವೆಗಳನ್ನು ಪಡೆಯುವಲ್ಲಿ ಎದುರಿಸುವ ಸಾಮಾಜಿಕ ಸಾಂಸ್ಕೃತಿಕ ಅಂಶಗಳನ್ನು ಗಮನಿಸಿ ಅವುಗಳನ್ನು ಸೂಕ್ತವಾಗಿ ಪರಿಹರಿಸಬೇಕು.''[೧೩]

ಡಾ. ಶ್ರೀಮತಿ ನಿರ್ಮಲಾ ಏಣಗಿ ತಿಳಿಸುವಂತೆ ಆಹಾರ ನ್ಯೂನತೆಯು ಇತರೆ ಸಮುದಾಯ ಗಳಿಗಿಂತ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಜನರಲ್ಲಿ ಅಧಿಕವಾಗಿರುವುದು. ಆದರೆ ಸಣ್ಣಪುಟ್ಟ ವ್ಯಾಪಾರಗಳು ಮತ್ತು ಇತರೆ ಕೆಲಸಗಳಲ್ಲಿ ತೊಡಗಿದ್ದ ಇತರ ಗುಂಪುಗಳಲ್ಲಿ ಪೌಷ್ಟಿಕತೆಯ ನ್ಯೂನತೆ (ಶೇ, ೫೩) ಮತ್ತು ಕುಂಠಿತ ಬೆಳವಣಿಗೆ (ಶೇ ೬೭) ಕಡಿಮೆಯಾಗಿರುವವು, ಎಂದು ತಿಳಿಸಿದ್ದಾರೆ.

ಎಳೆಯ ವಯಸ್ಸಿನಲ್ಲಿಯೇ ವಿವಾಹ, ಕೂಡಲೇ ಪದೇ ಪದೇ ಗರ್ಭಧರಿಸುವುದು, ತಾಯಿ ಆರೋಗ್ಯಕ್ಕೆ ಅಪಾರ ಹಾನಿಯುಂಟುಮಾಡುತ್ತದೆ. ೧೮ ವರ್ಷಕ್ಕಿಂತ ಕಡಿಮೆ ವಯಸ್ಸಿನಲ್ಲಿ ಏಕೆಂದರೆ ಎಳೆಯ ವಯಸ್ಸಿನಲ್ಲಿ ವಿವಾಹ ಮಾಡುವುದರಿಂದ ಹೆಣ್ಣು ಮಾನಸಿಕವಾಗಿ ಮತ್ತು ದೈಹಿಕವಾಗಿ ನಿಶ್ಯಕ್ತಿ ಹೊಂದಿರುತ್ತಾಳೆ. ಆಗ ಆಕೆಗೆ ಜನಿಸಿದ ಮಕ್ಕಳು ಅರ್ಧದಷ್ಟಿರಲಿ ಮದುವೆಯಾಗಿ ಹಡೆದವರ ಮಕ್ಕಳು ಅರ್ಧಪೌಷ್ಟಿಕತೆ ಕೊರತೆ ಮತ್ತು ಅಧಿಕ ಕುಂಠಿತ ಬೆಳವಣಿಗೆ ಹೊಂದಿದವರಾಗಿರುವರು.

ಶಿಕ್ಷಣದಿಂದ ಆ ಕುಟುಂಬಕ್ಕೆ ಒಂದು ವಿಶೇಷವಾದ ಸಾಮಾಜಿಕ ಅಂತಸ್ತು, ಗೌರವ ಬರುತ್ತದೆ. ಆರ್ಥಿಕ ಸ್ಥಿತಿಯು ಸುಧಾರಿಸುತ್ತದೆ. ಜೀವನ ಮಟ್ಟವು ಹೆಚ್ಚಿಸುತ್ತದೆ. ಹೊಸ ಭದ್ರತೆ ಮತ್ತು ಭರವಸೆಗಳು ಹುಟ್ಟಿಕೊಳ್ಳುತ್ತವೆ. ವರ್ಷವರ್ಷವೂ ಹೆರಿಗೆ, ಕುಟುಂಬದಲ್ಲಿ ಹತ್ತೆಂಟು ಮಕ್ಕಳು, ಮೂರು ಹೊತ್ತಿನ ತುತ್ತಿಗೂ, ದಿನವಿಡೀ ಪರದಾಡಬೇಕಾಗುತ್ತದೆ. ಇದೇ ಸಂಸಾರವಾಗುತ್ತದೆ. ಬೇರೆ ಪ್ರಪಂಚದ ಬಗ್ಗೆ ಅರಿವೇ ಇಲ್ಲದೇ ತನ್ನ ಸಂಸಾರದ ಚಿಂತೆಯಲ್ಲಿಯೇ ಕೊನೆಯ ಉಸಿರು ಬಿಡಬೇಕಾಗುತ್ತದೆ. ಆಹಾರದ ಕೊರತೆಯಿಂದ ಅನಾರೋಗ್ಯ, ಹಸಿವು ಸಾವು ಬದುಕಿನ ಪ್ರಶ್ನೆಯಾಗಿವೆ. ಇಲ್ಲಿ ಇನ್ನು ಶಿಕ್ಷಣದ ಕುರಿತ ಯೋಚನೆ ಎಲ್ಲಿಯದು? ಇಂತಹ ಪರಿಸ್ಥಿತಿಯಲ್ಲಿ ಮಕ್ಕಳ ಶೈಕ್ಷಣಿಕ ಭವಿಷ್ಯ ಕಗ್ಗತ್ತಲೆಯಾಗುತ್ತದೆ. ಶಿಕ್ಷಣವಿಲ್ಲದಿರುವುದರಿಂದ ನೆಚ್ಚಿಕೊಳ್ಳುವ ಮೂಢನಂಬಿಕೆ, ನಡವಳಿಕೆಗಳು,

ದುಷ್ಪಟಗಳು ಕುಟುಂಬವನ್ನು ದುರಂತದ ಹಾದಿಗೆ ಕೊಂಡೊಯ್ಯುತ್ತವೆ. ಆದರೆ ಕುಟುಂಬದಲ್ಲಿ ಹೆಣ್ಣು ಕಲಿತವಳಾದರೆ ಎಂತಹ ಸಂಕಷ್ಟದಲ್ಲೂ ವೈಚಾರಿಕವಾಗಿ ಚಿಂತಿಸಿ ಪರಿಹಾರ ಕಂಡುಕೊಳ್ಳಬಲ್ಲಳು ಮತ್ತು ತನ್ನ ಮಕ್ಕಳನ್ನು ಬರಿಯ ಅಕ್ಷರಸ್ಥರನ್ನಾಗಿ ಅಷ್ಟೇ ಮಾಡುವುದಿಲ್ಲ. ವಿಚಾರವಂತರನ್ನಾಗಿ, ವಿದ್ಯಾವಂತರನ್ನಾಗಿ ಮಾಡುತ್ತಾಳೆ. ಹೀಗಾಗಿ ಒಂದು ಹೆಣ್ಣು ಕಲಿತರೇ ಆ ಒಂದು ಇಡೀ ಕುಟುಂಬ ಶಿಕ್ಷಣ ಪಡೆಯುವಂತಾಗುತ್ತದೆ, ಸುಶಿಕ್ಷಿತವಾಗುತ್ತದೆ. ಸಮುದಾಯದ ದೃಷ್ಟಿಯಲ್ಲಿ ಹಿರಿಮೆಗೆ ಪಾತ್ರಳಾಗುತ್ತಾಳೆ. ಆದ್ದರಿಂದ 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬ ಮಾತು ಸತ್ಯ ಸಂಗತಿಯಾಗಿದೆ.

ಶಿಕ್ಷಣವು ಒಂದು ಸಾಮಾಜಿಕ ಬದಲಾವಣೆಯಾಗಿದೆ. ಇದು ಸಾಮಾಜಿಕ ಚಲನೆಯ ವಾಹಕವಾಗಿದ್ದು. ಮೇಲ್ಮುಖ ಚಲನೆಗೆ ಅನುವು ಮಾಡಿ ಕೊಡುತ್ತದೆ. ಶಿಕ್ಷಣವು ವ್ಯಕ್ತಿಯ ಅಂತಸ್ತಿನ ನಿರ್ಧಾರದ ಅಂಶವಾಗಿದೆ. ಒಂದು ದೇಶದ ಜನಾಂಗದ ಸರ್ವತೋಮುಖ ಅಭಿವೃದ್ಧಿಯು ಶಿಕ್ಷಣವನ್ನು ಅವಲಂಬಿಸಿದೆ. ಶಿಕ್ಷಣವಿಲ್ಲದ ವ್ಯಕ್ತಿ ವೈಯಕ್ತಿಕವಾಗಿಯೇ ಆಗಲಿ, ಸಾಮಾಜಿಕವಾಗಿಯೇ ಆಗಲಿ, ಉನ್ನತಿಯಾಗಲು ಸಾಧ್ಯವಿಲ್ಲ. ವ್ಯಕ್ತಿಯ ಮತ್ತು ಸಮಾಜದ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯ ಹಿಂದುಳಿದಿರುವಿಕೆಗೆ ಶಿಕ್ಷಣದ ಕೊರತೆಯೇ ಕಾರಣವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ವ್ಯಕ್ತಿ ಸಮಾಜದಲ್ಲಿ ಮತ್ತು ಸಮಾಜದ ಮುಖ್ಯ ವಾಹಿನಿಯಲ್ಲಿ ಮಿಳಿತವಾಗಬೇಕಾದರೆ ಶಿಕ್ಷಣ ಅತ್ಯಂತ ಅಗತ್ಯವಾಗಿದೆ.

ಕೊರವ ಸಮುದಾಯದಲ್ಲಿ ಮಹಿಳೆಯರು ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಸಾಕ್ಷರತೆಯಲ್ಲಿ ಅತ್ಯಂತ ಹಿಂದುಳಿದಿರುವುದು ಕಾಣಬಹುದು. ಇವರ ಸಾಕ್ಷರತೆ ಶೇ. ೧೦ಕ್ಕಿಂತಲೂ ಕಡಿಮೆ ಮತ್ತು ರಾಜ್ಯದ ಸರಾಸರಿ ಸಾಕ್ಷರತೆಗಿಂತ ಅತ್ಯಂತ ಕಡಿಮೆ ಇದೆ. ಅಂದರೆ ಈ ಸಮುದಾಯದಲ್ಲಿ ಓದು ಬರಹ ಗೊತ್ತಿರುವವರು ಕಡಿಮೆ ಸಂಖ್ಯೆಯಲ್ಲಿ ಕಡಿಮೆ ಎಂದು ಹೇಳಬಹುದು. ಗ್ರಾಮೀಣ ಭಾಗದಲ್ಲಿ ವಾಸಿಸುವ ಈ ಜನಾಂಗದವರು ನೂರಕ್ಕೆ ೯೦ರಷ್ಟು ಅನಕ್ಷರಸ್ಥರು ಆಗಿದ್ದಾರೆ. ಇತ್ತೀಚೆಗೆ ರಾಜ್ಯ ಸಾಮೂಹಿಕ ಸಾಕ್ಷರತಾ ಆಂದೋಲನ ಜನಾಂಗಕ್ಕೆ ಅತ್ಯಂತ ಹೊಸದು ಇತ್ತೀಚಿನದು. ಹಿಂದೆ ಮಕ್ಕಳು ತಮ್ಮ ತಂದೆ ತಾಯಿ ಮತ್ತು ಕುಟುಂಬದ ಸದಸ್ಯರಿಂದ ಅನೌಪಚಾರಿಕ ಶಿಕ್ಷಣವನ್ನು ಕೆಲಸ ಕಾರ್ಯಗಳ ಮೂಲಕ ಪಡೆಯುತ್ತಿದ್ದರು. ಆಧುನಿಕ ಶಿಕ್ಷಣ ಜಾರಿಗೆ ಬಂದ ಮೇಲೆ, ರಾಜ್ಯದ ಬೇರೆ ಬೇರೆ ಸಮುದಾಯಗಳು ಅವರವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳಿಗೆ ತಕ್ಕಂತೆ ಶಿಕ್ಷಣವನ್ನು ಪಡೆದು ವಿದ್ಯಾವಂತರಾಗತೊಡಗಿದರು. ಆದರೆ ಕೊರವರ ಸಮುದಾಯದವರಿಗೆ ಶಿಕ್ಷಣದ ಅವಕಾಶವೇ ಸಿಗಲಿಲ್ಲ. ಅವರ ಅಜ್ಞಾನ ಅತಿ ಹಿಂದುಳಿದಿರುವಿಕೆ ಮತ್ತು ಗ್ರಾಮೀಣ ಭಾಗದಲ್ಲಿ ವಾಸಿಸುವುದರಿಂದ ಇವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಆಸಕ್ತಿಯನ್ನೇ ಕಡಿಮೆ ಮಾಡಿದೆ. ಈ ಜನಾಂಗದ ಬಹುತೇಕ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸದೆ ಮನೆ ಕೆಲಸಕ್ಕೆ, ಹಣ್ಣು ವ್ಯಾಪಾರ ಮತ್ತು ಕಸಬರಿಗೆ ವ್ಯಾಪಾರ ಮಾಡಲು ಕಳುಹಿಸುತ್ತಾರೆ.

ಪಿತೃಪ್ರಧಾನ ಕುಟುಂಬದಲ್ಲಿ ಮನೆಯ ಯಜಮಾನ ಗಂಡಸೇ ಹೊರತು ಹೆಂಗಸಲ್ಲ. ಆದ್ದರಿಂದ ಆಸ್ತಿಯ ಜವಾಬ್ದಾರಿ ಇನ್ನಿತರೆ ಎಲ್ಲವೂ ಅವನಿಗೆ ಸೇರುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸ್ತ್ರೀ ಅನಕ್ಷರಸ್ಥಳಾಗಿರುವುದು. ಹೆಣ್ಣು ಮಗುವಿಗೆ ಹುಟ್ಟಿನಿಂದಲೇ ಸಮಸ್ಯೆಗಳು ಪ್ರಾರಂಭವಾಗುತ್ತದೆ. ತಂದೆ ತಾಯಿಯರು ಕೆಲಸಕ್ಕೆ ಹೋದರೆ ತಮ್ಮ ಸಣ್ಣ ಮಕ್ಕಳನ್ನು ನೋಡಿಕೊಳ್ಳಲು ಮಗಳನ್ನು ಇರಿಸುತ್ತಾರೆ. ಗಂಡು ಮಗನನ್ನು ಶಾಲೆಗೆ ಕಳಿಸುತ್ತಾರೆ. ಅಡುಗೆ ಮಾಡುವುದು, ನೀರು ತರುವುದು, ಬಟ್ಟೆ ಹೊಗೆಯುವುದು, ಕುರಿ ಮೇಯಿಸುವುದು ಮುಂತಾದ, ಹಲವಾರು ಹೊಣೆಗಾರಿಕೆಯನ್ನು ಹೆಣ್ಣು ಮಗುವಿಗೆ ಹೇರಲಾಗುತ್ತದೆ. ಈ ಮಧ್ಯೆ ಶಿಕ್ಷಣ ಪಡೆಯಲು ಅವಳಿಗೆ ಸಮಯವಾದರೂ ಎಲ್ಲಿದೆ? ಮನೆಯಲ್ಲೇ ಉಳಿದು ಸಹಜವಾಗಿಯೇ ಅವರು ಅನಕ್ಷರಸ್ಥರಾಗುತ್ತಾರೆ. ಮನೆಯ ಆಗುಹೋಗುಗಳೇ ಅವಳ ಸಂಗಾತಿಗಳಾಗುತ್ತವೆ.

ಇನ್ನು ಗದ್ದೆಯ ಕೆಲಸಗಳಲ್ಲಿ ಹೆಂಗಸಿನ ಪಾತ್ರ ಅಪಾರ. ಗೊಬ್ಬರ ಹಾಕುವುದು, ತೆನೆ ಕೊಯ್ಯುವುದು, ತೆನೆ ಮುರಿಯುವುದು, ಬಡಿಯುವುದು, ಶೇಂಗಾ ಕೀಳುವುದು ಮೊದಲಾದ ಕೆಲಸಗಳನ್ನು ಮಾಡಲಾಗುತ್ತದೆ. ಅದಕ್ಕೆ ಪ್ರತಿಫಲವಾಗಿ ಸಿಗುವ ಕೂಲಿ ಕಡಿಮೆ. ಮನೆಯದೇ ಕೆಲಸವನ್ನು ಮಾಡಿದಾಗ ಆ ಕೂಲಿಯೂ ಇಲ್ಲ. ಕೆಲಸಕ್ಕೆ ತಕ್ಕ ಪ್ರತಿಫಲವಿಲ್ಲ. ಇವರದು ಶ್ರಮದಾಯಕವಲ್ಲದ ಕೆಲಸವೆನಿಸಿಕೊಂಡಿದೆ. ವರ್ಷ ಪೂರ್ತಿ ಯಾವುದಾದರೊಂದು ಕೆಲಸ ಇದ್ದೇ ಇರುತ್ತದೆ. ಮಹಿಳೆಯರು ಪುರುಷರಂತೆ ಸಕ್ರಿಯವಾಗಿ ದುಡಿಯುತ್ತಿದ್ದಾರೆ. ಮಹಿಳೆಯೇ ಕೃಷಿ ಕೂಲಿಕಾರಳಾಗಿ ದುಡಿಯುತ್ತಿದ್ದಾಳೆ.

ಮಹಿಳೆಯರು ನೇರವಾಗಿ ನೀಡಿದ ಮಾಹಿತಿಗಳಿಗೆ ಪ್ರಾಶಸ್ತ್ಯ ನೀಡುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಹಾಗಾಗಿ ಈ ಅಧ್ಯಯನದಲ್ಲಿ ಅಕ್ಷರಸ್ಥ ಮತ್ತು ಅನಕ್ಷರಸ್ಥ ಮಹಿಳೆಯರನ್ನು ಹೆಚ್ಚು ಕೇಂದ್ರೀಕರಿಸಲಾಗಿದೆ. ಸಹಜವಾಗಿ ಇಂಥ ಮಹಿಳೆಯ ಗುಂಪು ದೊಡ್ಡದೂ, ಮೇಲುಸ್ತರದ್ದೂ ಆಗಿದೆ. ಮೇಲುಸ್ತರ ಎಂಬುದನ್ನು ಅಕ್ಷರಸ್ಥರಾಗಲು ಹೋರಾಡುವವರು ಎಂಬ ಅರ್ಥದಲ್ಲಿ ಮೊದಲಿಗೆ ಬಳಸುತ್ತಿದ್ದರೆಂಬುದು ದುರದೃಷ್ಟಕರವಾಗಿದೆ. ಒಂಬತ್ತು ವರ್ಷಕ್ಕೆ ಮದುವೆ, ಅತ್ಯಂತ ಕಷ್ಟದ ಜೀವನ, ಸಮಾಜದ ನಿಂದನೆ, ಅಪಮಾನಗಳನ್ನು ಎದುರಿಸಿದ್ದೂ ಇವೆಲ್ಲಾ ಆಕೆಯ ಬದುಕಿನ ಒಂದು ಮುಖವಾದರೆ, ಅಕಸ್ಮಾತ್ ಆಗಿ ದೊರೆತ ನೆರವಿನಿಂದ ಉನ್ನತ ಶಿಕ್ಷಣ ಪಡೆಯುದು, ನೌಕರಿಯಲ್ಲಿ ರುವುದು ಬಹಳ ಕಡಿಮೆ. ಆದರೆ ಇವರಲ್ಲಿ ಸ್ವಲ್ಪ ಬದಲಾವಣೆಗಳು ಕಂಡುಬರುತ್ತವೆ.

‘ದೇಶ ಸುತ್ತು ಕೋಶ ಓದು’ ಎಂಬ ಮಾತು ಸತ್ಯ. ಹೊಸ ಅನುಭವಗಳನ್ನು ಪಡೆಯಬೇಕಾದರೆ ಅವರಲ್ಲಿ ತಿಳುವಳಿಕೆ, ಅನುಭವ ಅವಶ್ಯಕವಾಗುತ್ತದೆ. ಕೊರವ ಮಹಿಳೆಯರು ವ್ಯಾಪಾರ, ಮಾಡುವುದರಿಂದ ಅನುಭವ ಪಡೆಯುತ್ತಾರೆ. ಅವರಿಗೆ ಶಿಕ್ಷಣದ ಕೊರತೆ ಎದ್ದು ಕಾಣುತ್ತದೆ. ವ್ಯವಹಾರ ಗಳು ಮಾತ್ರ ತಿಳಿದಿರುತ್ತವೆ. ಮಹಿಳೆಯರು ಲೆಕ್ಕಾಚಾರದಲ್ಲಿ ನಿಷ್ಠಾವಂತರಾಗಿರುತ್ತಾರೆ. ಮೌಖಿಕ ರೂಪದಲ್ಲಿ ತಿಳಿಸಿ ಹೇಳುತ್ತಾರೆ. ಶಿಕ್ಷಣದ ಮಟ್ಟದಲ್ಲಿ ಮಹಿಳೆಯರು ಶೇ. ೬೦ರಷ್ಟು

ಮುಂದುವರಿಯಬೇಕಾಗಿದೆ. ಸಾಮಾಜಿಕ ಕಟ್ಟುಪಾಡುಗಳಿಂದಾಗಿ ಮಹಿಳೆಯರು ಯಾವುದೇ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಆಗುತ್ತಿಲ್ಲ. ಒಂದು ದಶಕದಿಂದ ಕೊರವರ ಮಹಿಳೆ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ, ಸಂಘಗಳಲ್ಲಿ ಭಾಗಿಯಾಗುವುದು. ಅಧಿಕಾರಿಗಳೊಂದಿಗೆ ಸಂವಾದ ಮಾಡುವುದು, ಅವರಿಗೆ ಅಗತ್ಯವಿರುವ ವಿಷಯಗಳಿಗೆ ಪರಿಹಾರ ಕಂಡುಕೊಳ್ಳುವುದು ಇಂದಿನ ದಿನಗಳಲ್ಲಿ ಕಂಡುಬರುತ್ತದೆ.

"ನಹಿ ಜ್ಞಾನೇನ ಸದೃಶಂ' ಎಂದು ಆರ್ಯೋಕ್ತಿ ಸಾರಿದರೆ, 'ಶಿಕ್ಷಣದ ಹಕ್ಕು ಸಚ್ಚಾರಿತ್ರಾ ಅಭಿವದ್ಧಿಯ ವ್ಯಕ್ತಿಯ ಉಪಯುಕ್ತತೆಯ ಸಾಧನ ಎಂದು ಯಾಜ್ಞವಲ್ಕ್ಯ ಸಾರುತ್ತಾನೆ.' ಪಾಶ್ಚಿಮಾತ್ಯ ರಾಜಕೀಯ ಚಿಂತಕರಾದ ಪ್ಲೇಟೊ 'ಶಿಕ್ಷಣದ ಹಕ್ಕು ನಿರಂತರವಾಗಿ ಸಾಗುವ ಒಂದು ಪಕ್ರಿಯೆ' ಎಂದೂ, ಅರಿಸ್ಟಾಟಲ್ 'ಸದೃಢ ದೇಹದ ಸಬಲ ಮನಸ್ಸನ್ನುಂಟುಮಾಡುವುದೇ ಶಿಕ್ಷಣ' ಎಂದೂ, ಜಾನ್ ಡ್ಯೂಮಿ 'ಮಗುವಿನ ಶಕ್ತಿ ಮತ್ತು ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸುವಲ್ಲಿ ಶಿಕ್ಷಣ ಮಹತ್ವಪೂರ್ಣ ವಹಿಸುತ್ತದೆ'. ಬರ್ಟ್ರಾಂಡ್ ರಸಲ್ 'ಶಿಕ್ಷಣದ ಹಕ್ಕಿಲ್ಲದೆ ಯಾವ ವ್ಯಕ್ತಿಯು ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ ಶಿಕ್ಷಣ ಹಕ್ಕಿನ ಪ್ರಮುಖ ಗುರಿ ಸೃಜನಾತ್ಮಕ ವ್ಯಕ್ತಿಗಳನ್ನು ಸೃಷ್ಟಿಸುವುದು ಹಾಗೂ ಸೃಜನಾತ್ಮಕ ಸಮಾಜದ ವಾಸ್ತವಿಕತೆಯ ಅರಿವು ಅವರಲ್ಲಿರಬೇಕು. ಅದೇ ನಿಜವಾದ ಶಿಕ್ಷಣದ ಹಕ್ಕು' ಎಂದೂ ಗಾಂಧೀಜಿಯವರು 'ಶಿಕ್ಷಣದ ನಿಜ ಜೀವನದ ಬೆಳಕು ಎಂದು ಪ್ರತಿಪಾದಿಸಿದ್ದಾರೆ. ಒಂದು ರಾಷ್ಟ್ರದ ಮತ್ತು ಸಮುದಾಯದ ಸಮಗ್ರತೆಯನ್ನು ಕಾಪಾಡುವುದರಲ್ಲಿ ಒಂದು ಮಹತ್ವಪೂರ್ಣ ಕಲ್ಪನೆಯಿರುವ ಶಿಕ್ಷಣದ ಸಾಮಾಜಿಕ ಅಭಿವೃದ್ಧಿ ಮತ್ತು ನಾಗರಿಕತೆಯ ಬೆಳವಣಿಗೆಗೆ ಬೆನ್ನೆಲುಬಾಗಿದೆ ಎಂಬ ಮಾತು ಸತ್ಯವಾಗಿದೆ".[೧೪]

ಹೆಣ್ಣು ಮಗುವಿಗೆ ಉತ್ತಮ ಆಹಾರ ಮತ್ತು ಪೋಷಣೆ ನೀಡದಿರುವುದು, ಆಕೆಗೆ ಆರೋಗ್ಯ ರಕ್ಷಣೆ ಮತ್ತು ಶಿಕ್ಷಣ ಒದಗಿಸುವುದು ಇವೇ ಮೊದಲಾದವುಗಳಾಗಿವೆ. ಆಕೆಯ ಸಮಾಜೀಕರಣ ಕೂಡಾ ಆಕೆಯಲ್ಲಿ ಯಾವುದೇ ತೆರನಾದ ಆತ್ಮವಿಶ್ವಾಸವನ್ನು ಬೆಳೆಸುವುದಿಲ್ಲ. ಇದರ ಪರಿಣಾಮವಾಗಿ, ಆಕೆಯು ಹೆಚ್ಚಾಗಿ ಪುರುಷ ಸಂಬಂಧಿಕರನ್ನು ಅವಲಂಬಿಸದೆ ಬೇರೆ ದಾರಿ ಇಲ್ಲವಾಗುತ್ತದೆ. ಇದಲ್ಲದೆ ಬಾಲ್ಯವಿವಾಹ, ಪ್ರಾಪ್ತವಯಸ್ಸಿಗೆ ಮೊದಲೇ ಮದುವೆ ಇತ್ಯಾದಿ ಸಮಸ್ಯೆಗಳು ಇವೆ. ಆಕೆಗೆ ಸಮಾನ ಆಸ್ತಿಹಕ್ಕುಗಳಿಲ್ಲ. ಹದಿಹರೆಯದಲ್ಲಿ ಮತ್ತು ಹರೆಯದಲ್ಲಿ ಆಕೆ ವರದಕ್ಷಿಣೆ ಸಮಸ್ಯೆ, ಕೌಟುಂಬಿಕ ದೌರ್ಜನ್ಯ, ಲೈಂಗಿಕ ಅತ್ಯಾಚಾರ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ಮೊದಲಾದ ಸಮಸ್ಯೆಗಳನ್ನು ಎದುರಿಸುತ್ತಾಳೆ. ಅಷ್ಟೆ ಏಕೆ, ಮಹಿಳೆಯರ ಮಾರಾಟ ಜಾಲವು ಕೂಡ ಒಂದು ಬೃಹತ್ ಸಮಸ್ಯೆಯಾಗಿದೆ. ಹೀಗೆ ಹೆಣ್ಣು ಮಕ್ಕಳು ಎದುರಿಸುತ್ತಿರುವ ಸವಾಲುಗಳು ಬಹುಮುಖವಾಗಿರುವುದನ್ನು ನಾವು ಗುರುತಿಸಬಹುದು.

ಉತ್ತಮ ಆಹಾರ ಮತ್ತು ಪೋಷಣೆ ನೀಡದಿರುವುದು

ಆಹಾರ ಎನ್ನುವುದು ಒಂದು ಮೂಲಭೂತವಾದ ಅಗತ್ಯವೇನೋ ಹೌದು. ಆದರೆ ಜೀವನದಲ್ಲಿ ಯಾವುದೇ ವ್ಯಕ್ತಿ ಮೇಲೆ ಬರಬೇಕಾದರೆ ಆರೋಗ್ಯ ರಕ್ಷಣೆ, ಶಿಕ್ಷಣ ಮತ್ತು ಅಭಿವೃದ್ಧಿಪರ ಅವಕಾಶಗಳ

ಲಭ್ಯತೆ ಕೂಡಾ ಅತ್ಯಗತ್ಯವಾಗಿದೆ. ವಿದ್ಯಾವಂತ ಕುಟುಂಬಗಳಲ್ಲಿ ಇಂದು ಹೆಣ್ಣುಮಕ್ಕಳ[illegible] ಆಹಾರ ದೊರೆಯುತ್ತಿರಬಹುದು. ಆದರೆ ಆಹಾರದ ಕೊರತೆ ಬಿದ್ದಾಗ, ಸಂಬಂಧಿತ ವ್ಯಕ್ತಿಯ ಅಂಗ[illegible] ಆಧರಿಸಿ ಕುಟುಂಬದೊಳಗಡೆ ಆಹಾರ ಕೊಡಲಾಗುತ್ತಿತ್ತು ಎಂಬ ಮಾತು ಕಡು ಸತ್ಯ. ಉದಾಹರಣೆಗೆ ಒಂದು ಕುಟಂಬದಲ್ಲಿ ಹೆಣ್ಣು ಮಗಳೇ ಅಧಿಕವಾಗಿದ್ದಾಗ, ಬಡ ಮಹಿಳೆಗೆ ನೆರೆಹೊರೆಯವರು ಕನಿಕರದಿಂದ ಆ ಮಹಿಳೆಗೆ ಆಹಾರವನ್ನು ನೀಡುತ್ತಾರೆ. ಆದ್ದರಿಂದ ಆ ಮಹಿಳೆಯು ಅದನ್ನು ತೆಗೆದುಕೊಂಡು ಬಂದು ಮನೆಯಲ್ಲಿಯ ಆಹಾರವನ್ನು ಮೊದಲು ಗಂಡನಿಗೆ ಮಕ್ಕಳಿಗೆ ಬಡಿಸಿ ಉಳಿದ ಆಹಾರವನ್ನು ತಾನು ತಿನ್ನಬೇಕಾಗುತ್ತದೆ.

ಸಾಕಷ್ಟು ಆಹಾರ ಇಲ್ಲದಿದ್ದ ಸಂದರ್ಭದಲ್ಲಿ ಕೆಲವೊಮ್ಮೆ ಕುಟುಂಬದ ಮಹಿಳೆ ಉಪವಾಸ ಇರುತ್ತಾಳೆ. ಈ ರೀತಿಯ ತಾರತಮ್ಯವನ್ನು ಉದ್ದೇಶಪೂರ್ವಕವಾಗಿ ಆಚರಿಸಲಾಗುತ್ತಿದೆ ಎಂದಲ್ಲ. ವಿಶೇಷವಾಗಿ ಕುಟುಂಬದಲ್ಲಿರುವವರ ಸಂಖ್ಯೆ ಹೆಚ್ಚು ಇರುವುದು, ಸಂಪನ್ಮೂಲ ಮಿತವಾಗಿದ್ದಾಗ ಯಾರು ಮೊದಲು ಉಣ್ಣಬೇಕು ಮತ್ತು ಯಾರು ಕೊನೆಗೆ ಉಣ್ಣಬೇಕು ಎಂಬುದನ್ನು ಸಾಮಾಜಿಕ ರೂಢಿಗಳಲ್ಲಿ ಸುಪ್ತವಾಗಿ ಬೇರೂರಿಸಲಾಗಿರುತ್ತದೆ. ರೂಢಿಗತವಾಗಿ ಬೆಳೆದು ಬಂದಿರುವುದರಿಂದ ಇಂದಿಗೆ ಆಹಾರವಿದ್ದರೂ ಇಲ್ಲದಿದ್ದರೂ ಮಹಿಳೆ ಗಂಡ ಮಕ್ಕಳಿಗೆ ನೀಡಿಯೇ ನಂತರ ತಾನು ಊಟ ಮಾಡುವುದನ್ನು ನೋಡಬಹುದು.

ಭವಿಷ್ಯದಲ್ಲಿ ತಮ್ಮನ್ನು ನೋಡಿಕೊಳ್ಳುವವನು ಮತ್ತು ವಂಶದ ಹೆಸರು ಮತ್ತು ಕೀರ್ತಿಯನ್ನು ತರುವವನು ಗಂಡು ಮಗ ಎಂದು ಭಾವಿಸಲಾಗುತ್ತದೆ. ಆದ್ದರಿಂದಲೇ, ಇರುವ ಆಹಾರದಲ್ಲಿ ಆಯ್ದು ಅತ್ಯಂತ ಪುಷ್ಟಿಕರವಾದ ಆಹಾರವನ್ನು ಗಂಡು ಮಗನಿಗೆ ನೀಡಲಾಗುತ್ತದೆ. ಆದರೆ ಹೆಣ್ಣು ಮಗುವಿಗೆ ಬೇರೆ ರೀತಿಯ ಆಹಾರವನ್ನು ನೀಡಲಾಗುತ್ತದೆ. ಆಕೆ ಹೆರವರ ಸೊತ್ತು ಎಂದೂ, ತವರಿಗೆ ಆಕೆ ಕೇವಲ ಆರ್ಥಿಕ ಹೊರೆ ಎಂದೂ ಭಾವಿಸುತ್ತಾರೆ. ಹಾಗೆಯೇ ಹೆಣ್ಣು ಮಕ್ಕಳನ್ನು ಸಮಾಜೀಕರಿಸುವಾಗ, ಸಹನೆ ಹಾಗೂ ತಾಳಿಕೊಳ್ಳುವಂತಹ ಮೌಲ್ಯಗಳನ್ನು ಬಲವಂತವಾಗಿ ಆಕೆಯ ಮೇಲೆ ಹಾಕಲಾಗುತ್ತದೆ. ಆದ್ದರಿಂದಲೇ ದಿನಗಟ್ಟಲೇ ಸ್ವ ಇಚ್ಛೆಯಿಂದಲೇ ಆಕೆ ಉಪವಾಸವಿರುತ್ತಾಳೆ. ಆದರೂ ಅದೇ ಪುರುಷರನ್ನು ಉಪವಾಸ ಆಗುವುದಿಲ್ಲ. ಏಕೆಂದರೆ ತಡೆದುಕೊಳ್ಳುವ ಶಕ್ತಿಯಿಲ್ಲ. ಇದ್ದವರು ಇಲ್ಲದವರು ಎನ್ನದೇ ಸೊಂಪಾಗಿ ಉಂಡು, ತಂಪಾಗಿ ಮಲಗುತ್ತಾನೆ ಮಹಾರಾಜನಂತೆ. ಅದೇ ಹೆಣ್ಣು ಗಂಡ, ಮಕ್ಕಳಿಗೆ ನೀಡಿ ಉಳಿದದ್ದನ್ನು ಉಂಡು ಆರೋಗ್ಯವನ್ನು ಕೆಡಸಿಕೊಳ್ಳುತ್ತಾಳೆ. ಮುಂದೆ ಬರುವ ಹೆಣ್ಣು ಮಕ್ಕಳಿಗೂ ಈ ರೀತಿ ಇರುವಂತೆ ಉಪದೇಶಿಸುತ್ತಾಳೆ. ಇದು ಬೆಳೆದು ಬಂದ ಸಂಪ್ರದಾಯ ಆಗಿದೆ.

ಆರೋಗ್ಯ

ಭಾರತೀಯ ಸಮಾಜದಲ್ಲಿ ಮಹಿಳೆಯರನ್ನು ಹೊರತುಪಡಿಸಿ ಆರೋಗ್ಯಕರ ಸಮಾಜವನ್ನು ನಿರ್ಮಿಸಲು ಸಾಧ್ಯವಿಲ್ಲ. ಮಹಿಳೆ ಆರೋಗ್ಯದಿಂದ ಇದ್ದರೆ ಇಡೀ ಸಮುದಾಯವೇ ಆರೋಗ್ಯದಿಂದ ಇರಲು ಸಾಧ್ಯ. ಪುರುಷಪ್ರಧಾನ ಮೌಲ್ಯಗಳಿಂದ ಆವೃತವಾಗಿರುವ ನಮ್ಮ ಇಂದಿನ ಸಾಮಾಜಿಕ

ವ್ಯವಸ್ಥೆಯಲ್ಲಿ ಪುರುಷರಷ್ಟೇ ಮಹಿಳೆರಿಗೂ ಸಮಾನ ಸ್ಥಾನಮಾನ, ಸಮಾನ ಅವಕಾಶ ನೀಡಬೇಕಾದುದು ಅಗತ್ಯ. ಪ್ರತಿಯೊಬ್ಬರೂ ತಮ್ಮ ಬದುಕನ್ನು ಆರೋಗ್ಯಕರವಾಗಿ, ಯಶಸ್ವಿಯಾಗಿ ಬಾಳಲು ಬಯಸುತ್ತಾರೆ. ಅದು ಸಹಜವೂ ಹೌದು. ಆದರೆ ಜೀವನದಲ್ಲಿ ಯಶಸ್ಸು ಸಾಧಿಸಬೇಕಾದರೆ ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯ ಮುಖ್ಯವಾಗಿರುತ್ತದೆ. ಪುರುಷ ತನ್ನ ಆರೋಗ್ಯದ ಬಗ್ಗೆ ಮಾತ್ರ ಬೆಲೆ ಕೊಡುತ್ತಾನೆ. ಮನೆಯಲ್ಲಿ ಒಬ್ಬ ಹೆಂಡತಿ ಇದ್ದಾಳೆ ಎಂಬ ಭಾವನೆ ಅವರಲ್ಲಿರುವುದಿಲ್ಲ. ಏಕೆಂದರೆ ಗಂಡು ಎಂಬ ಅಹಂಕಾರ ಎಂದು ಹೇಳಬಹುದು.

ಒಂದು ಸಮಾಜ ನಿರ್ಮಾಣವಾಗಬೇಕಾದರೆ ಮಹಿಳೆಯು ಆರೋಗ್ಯವಂತಳಾಗಿರುವುದು ಅಷ್ಟೇ ಅವಶ್ಯಕವಾಗಿದೆ. ಆದ್ದರಿಂದಲೇ ಹಿಂದಿನ ಕಾಲದಿಂದಲೇ ಮಹಿಳೆಗೆ ದೈವ ಸ್ವರೂಪವನ್ನು ನೀಡಿ, ಕುಟುಂಬದ ಕಣ್ಣು, ಸಮಾಜದ ಕಣ್ಣು ಎಂದು ಹಿರಿಯರು ಹೇಳುತ್ತಿದ್ದರು. ಆದರೆ ಯಾರು ಮಹಿಳೆಯರನ್ನು ದೈವತ್ವಕ್ಕೇರಿಸಿ ಆರಾಧಿಸಿದ್ದಾರೋ ಅವರೇ ಆಕೆಯನ್ನು ರಾಕ್ಷಸಿಯಾಗಿಯೂ ಕಾಡುತ್ತಾ ತಾರತಮ್ಯದ ಕಡೆಗೆ ಸಿಲುಕಿಸಿದ್ದಾರೆ. ಬದಲಾದ ಪರಿಸರದಲ್ಲಿ ಇನ್ನೂ ವಿಕೋಪಕ್ಕೆ ಹೋಗುತ್ತಿರುವುದನ್ನು ಇಲ್ಲಿ ಕಾಣಬಹುದು. ಸರ್ಕಾರದ ಸೌಲಭ್ಯಗಳಿಂದಲೂ ಮೂಢನಂಬಿಕೆಯ ಪ್ರಭಾವದಿಂದ ಕೆಲವರು ಸೌಲಭ್ಯವಂಚಿತರಾಗುತ್ತಿದ್ದಾರೆ. ವಿಜ್ಞಾನ ತಂತ್ರಜ್ಞಾನಗಳು ಆವಿಷ್ಕಾರಗಳಾದರೂ ಸಹ ಈ ಸಮುದಾಯದ ಮಹಿಳೆಯರಿಗೆ ತಲುಪುವುದರಲ್ಲಿ ವಿಫಲವಾಗಿವೆ. ಏಕೆಂದರೆ ಒಂದು ಆಸ್ಪತ್ರೆ ದೂರವಿದ್ದರೂ ಎಲ್ಲಿಗೆ ಹೋಗುವುದು? ಎಂದು ಪ್ರಶ್ನಿಸಿ ಉಳಿಯುತ್ತದೆ. ಅವರು ಮನೆ ಮದ್ದುಗಳನ್ನೇ ಉಪಯೋಗಿಸುವುದು ಕಂಡುಬರುತ್ತದೆ.

ಮಹಿಳೆಯು ಆರೋಗ್ಯದಿಂದ ಇರಲಿಲ್ಲವೆಂದರೆ ಕುಟುಂಬದ ಜವಾಬ್ದಾರಿಯನ್ನು ಪುರುಷರು ನೋಡಿಕೊಳ್ಳಲು ಆಗುವುದಿಲ್ಲ. ಆದರೆ ಮಹಿಳೆಯೇ ಎದ್ದು ಬಿದ್ದು ಮಾಡಿಕೊಂಡು ಹೋಗಬೇಕಾಗುತ್ತದೆ. ಇಂದಿಗೂ ನಮ್ಮ ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ತಂತ್ರಜ್ಞಾನದಿಂದ, ಸಲಕರಣೆಗಳಿಂದ, ನುರಿತ ವೈದ್ಯರಿಂದ ಕೂಡಿದ ಆಸ್ಪತ್ರೆಗಳಲ್ಲಿ, ಆಸ್ಪತ್ರೆ ಇದ್ದರೆ ಸರಿಯಾದ ರೀತಿಯ ಆರೈಕೆ ಇಲ್ಲದೆ ಇದ್ದರಿಂದ ಜನರು ಮೂಢನಂಬಿಕೆಗೆ ಒಳಗಾಗಿ ದೇವರ ಹೆಸರಿನಲ್ಲಿ ಚುಟಿಕೆ ಹಾಕಿಸಿಕೊಳ್ಳುತ್ತಿದ್ದರು. ನಂತರ ಕ್ರಮೇಣ ವಾಸಿಯಾಗುತ್ತದೆ ಎಂಬ ನಂಬಿಕೆ, ವಿಪರೀತವಾದಾಗಲೇ, ಅವರು ಆಸ್ಪತ್ರೆಯಂತಹ ಸೌಲಭ್ಯಗಳನ್ನು ಪಡೆಯುತ್ತಾರೆ. ಸೌಲಭ್ಯಗಳು ಇರುವಲ್ಲಿಗೆ ಹೋಗಿ ಔಷಧಿಗಳನ್ನು ಪಡೆಯುವವರು ಇದ್ದಾರೆ. ಉದಾಹರಣೆ ಒಂದೇ ಕುಟುಂಬದ ರಕ್ತ ಸಂಬಂಧಿಗಳಿಗೆ ಮದುವೆಯ ನಂತರ ಹುಟ್ಟುವ ಮಕ್ಕಳು ಪರಂಪರಾಗತವಾಗಿ ಬಂದಂತಹ ಮೂಢನಂಬಿಕೆಗೆ ಒಳಗಾಗಿ ಕಿವುಡಿಯಾಗಿ, ಮೂಗಳಾಗಿ ಹುಟ್ಟುವುದು ಕಾಣುತ್ತೇವೆ. ಇದಕ್ಕೆ ಈ ರೀತಿ ಮದುವೆ ಮಾಡಬಾರದು ಎಂದು ಹೇಳಿದರೆ ಪರಂಪರಾನುಗತವಾಗಿ ಬಂದ ಪೀಳಿಗೆ ಅದರಿಂದ ಈ ಮಗು ಈ ರೀತಿ ಹುಟ್ಟಿದೆ ಎಂಬುದನ್ನು ತಿಳಿಸುತ್ತಾರೆ. ಆದರೆ ಒಂದೇ ರಕ್ತ ಇರುವ ವ್ಯಕ್ತಿಗಳಲ್ಲಿ ಮದುವೆಯಾದರೆ ಯಾವುದಾದರೂ ಒಂದು ಅಂಶದ ಕೊರತೆಯಿಂದ ಮಕ್ಕಳು ಈ ರೀತಿ ಹುಟ್ಟುತ್ತಾರೆ. ಅದರಿಂದ ಪುನರ್ಜನ್ಮದ ಕಲ್ಪನೆಯನ್ನು ಬಿಡಬೇಕಾಗುತ್ತದೆ.

ಮಹಿಳೆಯರ ಕೌಟುಂಬಿಕ, ಸಾಮಾಜಿಕ ಹಾಗೂ ಸಾಮುದಾಯಿಕ ಬದುಕಿನ ಒಳಗೆ ಹೆಡೆ ಬಿಚ್ಚುತ್ತಿರುವ ಆರೋಗ್ಯ ಸಮಸ್ಯೆಗಳನ್ನು ಮತ್ತು ಅವುಗಳಿಗೆ ಕಾರಣವಾದ ಮೂಲಾಂಶಗಳನ್ನು ಇಲ್ಲಿ ವಿವರಿಸಲಾಗಿದೆ. ಆರೋಗ್ಯ ಎಂಬುದು ಮಹಿಳೆಗೆ ಮುಖ್ಯವಾದ ಅಂಶವಾಗಿದೆ. ಕುಟುಂಬದಲ್ಲಿ ಮಹಿಳೆಯು ತನ್ನ ಆರೋಗ್ಯದ ಬಗ್ಗೆ ಆಲೋಚನೆ ಮಾಡದೇ ತನ್ನ ಜವಾಬ್ದಾರಿ ಎಂಬ ಎಲ್ಲರ ಆರೋಗ್ಯದ ಬಗ್ಗೆ ಕಾಳಜಿ ವಹಿಸುತ್ತಾಳೆ. ಮಹಿಳೆಯ ಆರೋಗ್ಯವು ಇಡೀ ಸಮುದಾಯದ ಆರೋಗ್ಯದ ಅಡಿಗಲ್ಲು, ಸ್ತ್ರೀಯರು ಇಡೀ ಮನುಕುಲದ ಅರ್ಧಭಾಗವಾಗಿದ್ದು. ಮುಂದಿನ ಸಂತತಿಯು ಆರೋಗ್ಯದಿಂದ ಹುಟ್ಟುವುದು ಮತ್ತು ಹುಟ್ಟಿದ ಮಕ್ಕಳು ಬದುಕಿ ಉಳಿಯಲು ಆರೋಗ್ಯ ಬಹುಮಟ್ಟಿಗೆ ಮುಖ್ಯವಾಗುತ್ತದೆ. ಸಂಪೂರ್ಣ ಆರೋಗ್ಯ ಪರಿಸ್ಥಿತಿಯ ಮೇಲೆ ಅವಲಂಬಿತವಾಗಿದೆ.

ಉದಾಹರಣೆಗೆ ಒಬ್ಬ ಮಹಿಳೆ ಮನೆಗೆಲಸ ಮಾಡುವುದರಿಂದ ಜವಾಬ್ದಾರಿಗಳು ಹೆಚ್ಚಿರುತ್ತವೆ. ಅವಳಿಗೆ ಶೀತವಾದರೆ, ತಾಯಿಯ ಹಾಲು ಕುಡಿಯುವ ಮಗುವಿಗೂ ಸಹ ಶೀತವಾಗಿ ಆರೋಗ್ಯ ಹದಗೆಡುತ್ತದೆ. ಅದರಿಂದ ತಾಯಿಯು ಆರೋಗ್ಯದಿಂದ ಇದ್ದರೆ ಮಗುವು ಸಹ ಆರೋಗ್ಯದಿಂದ ಇರಲು ಸಾಧ್ಯವಾಗುತ್ತದೆ. ಮೂಢನಂಬಿಕೆ, ವರದಕ್ಷಿಣೆ, ಪೋಷಕಾಂಶಗಳ ಕೊರತೆಯಿಂದ ಇನ್ನೂ ಅನೇಕ ಕಾರಣಗಳಿಂದ ಮಹಿಳೆಯರ ಪ್ರಮಾಣ ಕಡಿಮೆಯಾಗುತ್ತಿದೆ. ಮಹಿಳೆಯರಿಗೆ ಮೊದಲು ಜಾನಪದ ವೈದ್ಯರ ಮೂಲಕವೇ ಪರಿಹಾರ ದೊರಕುತ್ತಿತ್ತು. ಆದರೆ ಆಧುನಿಕತೆಯಲ್ಲಿ ದೊರೆಯುವ ಸೌಲಭ್ಯಗಳಿಂದ ಬಡಜನರು ದೂರವಿದ್ದಾರೆ. ಗಗನಕ್ಕೇರಿರುವ ಬೆಲೆಗಳು, ದುಡಿಮೆಯಲ್ಲಿ ಬರುವ ಕಡಿಮೆ ಆದಾಯ ಅಲ್ಲದೇ ಕುಟುಂಬದ ಜವಾಬ್ದಾರಿಗೆ ಸೇರಿಹೋಗುತ್ತದೆ. ಮುಂದೆ ಅವಳ ಆರೋಗ್ಯದ ಬಗ್ಗೆ ಮಾತೆಲ್ಲದೆ? ಸರ್ಕಾರಿ ಆಸ್ಪತ್ರೆಗಳಲ್ಲಿ ದೊರೆಯುವ ಸೌಲಭ್ಯವು ಅಷ್ಟೇ ಕಡಿಮೆ. ಕೆಲವರ ಅಜಾಗೃತಾ ಕ್ರಮದಿಂದ ಸೌಲಭ್ಯಗಳು ದೊರೆಯುತ್ತಿಲ್ಲ.

ಮಹಿಳೆಯು ಗರ್ಭಿಣಿಯಾದ ಮೇಲೆ ಸರ್ಕಾರಿ ಆಸ್ಪತ್ರೆಯಿಂದ ಪಡೆದ ಮಾತ್ರೆಗಳನ್ನು ತೆಗೆದುಕೊಳ್ಳುವುದಿಲ್ಲ. ಮುಂದೆ ತೊಂದರೆಯಾಗುತ್ತದೆ ಎಂಬ ಮೂಢನಂಬಿಕೆಗಳಿಂದ ತಾನು ಯಾವ ರೀತಿಯಲ್ಲಿ ಆರೋಗ್ಯ ಜಾಗೃತಿ ತೆಗೆದುಕೊಳ್ಳಬೇಕು ಎಂಬ ಅರಿವು ಅವಳಿಗಿಲ್ಲ. ಮಹಿಳೆಯರು ತಮ್ಮ ಆರೋಗ್ಯ ಸಮಸ್ಯೆಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ತಮ್ಮ ಆರೋಗ್ಯದ ಅಗತ್ಯಗಳು, ಹಕ್ಕುಗಳನ್ನು ಬಲವಾಗಿ ಸಮಾಜದಲ್ಲಿ ಅಭಿವ್ಯಕ್ತಗೊಳಿಸುವಂತೆ ನೋಡಬೇಕಾಗುತ್ತದೆ. ಅನೇಕ ಕಾಲದಿಂದಲೂ ಬಂದ ಮೂಢನಂಬಿಕೆಗಳು ಬಹುಬೇಗನೇ ಮನದಿಂದ ಹೋಗುವುದಿಲ್ಲ. ಆದರೆ ಅದನ್ನು ಹಂತ ಹಂತವಾಗಿ ಪರಿಹರಿಸುತ್ತಾ ಹೋಗಬೇಕಾಗುತ್ತದೆ. ಇಲ್ಲವಾದರೆ ಮಹಿಳೆಯರೇ ತಮ್ಮ ಆರೋಗ್ಯವನ್ನು ಹದಗೆಡಸಿಕೊಳ್ಳುತ್ತಾರೆ. ಪುರುಷರು ಇದನ್ನು ತಿಳಿದುಕೊಳ್ಳಬೇಕಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರಿಗೆ ಸರಿಯಾದ ಶೌಚಾಲಯದ ವ್ಯವಸ್ಥೆಗಳಿದ್ದರೂ, ಅದರ ಸ್ವಚ್ಛತೆಯನ್ನು ನೋಡಿಕೊಳ್ಳುವವರಿಲ್ಲ. ಪರಿಶುದ್ಧವಾದ ಕುಡಿಯುವ ನೀರು ಸಿಗುವುದಿಲ್ಲ. ಪೌಷ್ಟಿಕ ಆಹಾರದ ಕೊರತೆಯಿಂದ ಅನೇಕ ರೋಗ ರುಜಿನಗಳಿಗೆ ಬಲಿಯಾಗುತ್ತಾರೆ. ಜನಪದದ ಅನುಭವದಿಂದ ಬಂದಂಥ ಗಿಡಮೂಲಿಕೆಗಳ ಔಷಧಿಗಳು ಪರಿಣಾಮಕಾರಿಯಾಗಿ ಬಳಸಲ್ಪಡುತ್ತಿಲ್ಲ. ಆಧುನಿಕತೆಗೆ

ಮಾರು ಹೋಗಿ ಸುಮ್ಮನಿರುತ್ತಾರೆ. ಯಾವುದೇ ಪರಿಹಾರ ನೀಡದಿರುವುದರಿಂದ ಮೂಲ ಜನಪದ ವೈದ್ಯರು ಅಪಚಾರಕ್ಕೆ ಒಳಗಾಗುತ್ತಿದೆ. ಅವುಗಳ ಜೊತೆಗೆ ಅನೇಕ ಮೂಢನಂಬಿಕೆಗಳು ತಳಕು ಹಾಕಿಕೊಂಡು ಅನಾರೋಗ್ಯದ ಕಡೆಗೆ ಕರೆದೊಯ್ಯುವುದು ಕಂಡುಬರುತ್ತದೆ. ದೇವರು ಭಕ್ತಿಗೆ ಸಂಬಂಧಿಸಿದಂತೆ ಆಚರಣೆಗಳೇ ಜನತೆಯ ಬದುಕಿನ ಜೊತೆಗೆ ಬಂದಿವೆ.

ಯಾರಿಗಾದರೂ ಮೈಯಲ್ಲಿ ಗುಳ್ಳೆ ಎದ್ದಿದರೆ ಅವರಿಗೆ ಅಮ್ಮ ಬಂದಿದೆ ಎಂದು ಚಿಕಿತ್ಸೆ ಕೊಡಿಸದೇ ಬೇವಿನಗಿಡ ಎಲೆಗಳಿಂದ ಉಪ್ಪು ಅರಿಶಿನ ಹಾಕಿ ನುಣ್ಣಗೆ (ಸಣ್ಣಗೆ) ಮಾಡಿ ಮೈಯೆಲ್ಲಾ ಹಚ್ಚಿ ಕೆಲ ನಿಮಿಷಗಳವರೆಗೆ ಬಿಟ್ಟು ಸ್ನಾನ ಮಾಡಿ ಜಾನಪದ ವೈದ್ಯ ಮಾಡುತ್ತಾರೆ ಹುಟ್ಟು ಸಾವಿನ ಮಧ್ಯೆ ಅನೇಕ ಆಚರಣೆಗಳ ವಿಷಯವಾಗಿ ಪುರುಷರಿಗಿಂತ ಮಹಿಳೆಗೆ ಹೆಚ್ಚಿನ ನಂಬಿಕೆ ಇರುತ್ತದೆ. ಆದರೆ ಬದಲಾದ ಸಮಾಜಕ್ಕೆ ತಕ್ಕಂತೆ ಆಚರಣೆಗಳ ಜೊತೆಗೆ ಮಹಿಳೆಯರ ಆರೋಗ್ಯವನ್ನು ಕಾಪಾಡುವಂತಿರಬೇಕು. ಸಂಪ್ರದಾಯ ಪದ್ಧತಿ, ನಂಬಿಕೆ, ಆಚರಣೆಗಳು ಮಾನಸಿಕವಾಗಿ ಧೈರ್ಯ ತುಂಬಬಹುದೇ ವಿನಃ ದೈಹಿಕ ನ್ಯೂನತೆಗಳನ್ನು, ರೋಗಗಳನ್ನು ನಿವಾರಿಸಲು ಸಾಧ್ಯವಿಲ್ಲ. ಅವರವರ ನಂಬಿಕೆಯ ಪ್ರಕಾರ ಅವರು ಆಚರಿಸುತ್ತಿರುತ್ತಾರೆ. ದೆವ್ವದ ಕಾಟವೆಂದು ಮಹಿಳೆಯರಿಗೆ ದೈಹಿಕ ಹಿಂಸೆ ನೀಡುವ, ಹಿಂಸಾತ್ಮಕ ಹರಕೆ ಹೊತ್ತು ತಿರುಗುವ ಮಹಿಳೆಯರ ಸಂಖ್ಯೆ ಕಂಡುಬರುತ್ತದೆ.

ಇಂತಹ ಮೂಢನಂಬಿಕೆಗಳು ತಂದೆ ತಾಯಿಗಳಲ್ಲಿ ಶಿಕ್ಷಣ ವ್ಯವಸ್ಥೆಯ ಕುರಿತು ತಿಳುವಳಿಕೆ ಇಲ್ಲದಿರುವುದು, ಶಿಕ್ಷಣದ ಮಹತ್ವ ತಿಳಿಯದೆ ಇರುವುದು, ಆರ್ಥಿಕ ಅಡಚಣೆಗಳು ಮಕ್ಕಳ ಶಿಕ್ಷಣಕ್ಕೆ ಪೂರಕವಾದ ಪಾತ್ರವನ್ನು ಗುರುತಿಸಿಕೊಳ್ಳಲು ಸಾಧ್ಯವಾಗದೆ ಇರುವುದು, ಕಲಿಕೆ ಹಾಕಬೇಕಾದ ಶ್ರಮದ ಕಲ್ಪನೆ ಇಲ್ಲದೆ ಕೆಲಸಗಳಲ್ಲಿಯೇ ನಿರಂತರರಾಗಿರುವುದು, ಮನೆಯಲ್ಲಿ ಶಿಕ್ಷಣಕ್ಕೆ ಬೇಕಾದ ಬೆಂಬಲ, ಪ್ರೋತ್ಸಾಹ ಇಲ್ಲದಿರುವ ಕಾರಣದಿಂದ ಉಳಿದಿವೆ.

ಮನೆಯ ವಾತಾವರಣದಲ್ಲಿ ಮಗು ತನ್ನ ಕೀಳರಿಮೆಯನ್ನು ಹೋಗಲಾಡಿಸಿಕೊಳ್ಳಲು ಶಿಕ್ಷಣ ಕೊಳ್ಳುವುದು ಆಗಬೇಕಾಗಿದೆ. ವಿದ್ಯಾಭ್ಯಾಸದಲ್ಲಿ ಲಿಂಗಭೇದ ಮಾಡುತ್ತಿರುವುದು. ಕಾನೂನು ಬಗ್ಗೆ ತಿಳುವಳಿಕೆ ಇಲ್ಲದಿರುವುದು. ಇವರು ಸರ್ಕಾರದಿಂದ ಸಿಗಬೇಕಾದ ಎಲ್ಲಾ ಸೌಲಭ್ಯಗಳಿಂದ ವಂಚಿತ ರಾಗುತ್ತಿದ್ದಾರೆ.

ಶಿಕ್ಷಣಕ್ಕೆ ಸರ್ಕಾರದ ಸಹಾಯಧನ, ಸಮಾಜ ಕಲ್ಯಾಣ ಇಲಾಖೆಯ ಸೌಲಭ್ಯಗಳ ತಿಳುವಳಿಕೆ ಇಲ್ಲದಿರುವುದು (ಕೆಲವರಿಗೆ ತಿಳಿದಿದ್ದರೂ ಸಹ ಅವರು ಹಿರಿಯರ, ಗಂಡನ ಒಪ್ಪಿಗೆ ಇಲ್ಲದೇ ಮುಂದಿನ ಹೆಜ್ಜೆ ಇಡುವಂತಿಲ್ಲ). ಆರೋಗ್ಯದ ಬಗ್ಗೆ ತಿಳುವಳಿಕೆ ಇಲ್ಲದಿರುವುದು.

ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಿರುವ ಮಹಿಳೆ

ವಿಶ್ವದ ಒಟ್ಟಾರೆ ಜನಸಂಖ್ಯೆಯಲ್ಲಿ (ಅರ್ಧದಷ್ಟು ಮಹಿಳೆಯರು ಇದ್ದರೂ ಕೂಡ ಮಹಿಳೆಗೆ ಅಭಿವೃದ್ಧಿಯ ಫಲ ಸಾಕಷ್ಟು ಗೊತ್ತಿಲ್ಲ. ಕುಟುಂಬದ ಆರ್ಥಿಕ ಸ್ಥಿತಿಗತಿಗೆ ಮತ್ತು ಸರ್ವತೋಮುಖ ಅಭಿವೃದ್ಧಿಗೆ ಮಹಿಳೆಯ ಕೊಡುಗೆ ಅಪಾರವಾದುದು. ಆದರೆ ದುಡಿಮೆಗೆ, ಕೌಶಲ್ಯಕ್ಕೆ ಸಾಕಷ್ಟು

ಮನ್ನಣೆ ಇಲ್ಲದಿರುವುದು ದುರದೃಷ್ಟಕರ ಸಂಗತಿ. ಮನೆಗೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಕಲೆ ಮಹಿಳೆಯರಿಗಿದೆ. ಈ ಕೌಶಲ್ಯಕ್ಕೆ ಮಾನ್ಯತೆ ಇಲ್ಲದಿರುವುದು ಒಂದು ದೊಡ್ಡ ದುರಂತ. ಅಂದರೆ ಈ ಕೌಶಲ್ಯಗಳ ಮೌಲ್ಯ ನಿರ್ಧರಿತವಾಗಿಲ್ಲ. ಅದಕ್ಕೆ ವಾಣಿಜ್ಯ ಬೆಲೆ ಸಹ ಬಂದಿಲ್ಲ. ಮಹಿಳೆಯರಿಗೆ ಹೆಚ್ಚು ವಿದ್ಯಾಭ್ಯಾಸದ ಸೌಕರ್ಯಗಳಿಲ್ಲದಿರುವುದೇ ಕೌಶಲ್ಯಕ್ಕೆ ಮಾನ್ಯತೆ ಸಿಗದಿರುವುದಕ್ಕೆ ಪ್ರಮುಖ ಕಾರಣವಾಗಿದೆ ಎಂದು ಹೇಳಬಹುದು.

ಸಾಮಾಜಿಕ ಚಟುವಟಿಕೆ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಹಾಗೂ ನೀತಿ ನಿರ್ಧಾರದಂತಹ ಕ್ಷೇತ್ರಗಳಲ್ಲಿ ಮಹಿಳೆಯ ಸ್ಥಾನ ಎರಡನೆಯದಾಗಿದೆ. ನಗರ ಪ್ರದೇಶದ ಮಹಿಳೆಯರಿಗಿಂತ ಗ್ರಾಮೀಣ ಪ್ರದೇಶದ ಮಹಿಳೆಯರು ಆರ್ಥಿಕ ಚಟುವಟಿಕೆಗಳಲ್ಲಿ ಹೆಚ್ಚಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ತಾತ್ವಿಕವಾಗಿ ಮಹಿಳಾ ಪುರುಷ ಸಮಾನತೆ ಇರುವುದಾದರೂ ನೀತಿ ನಿರ್ಧಾರಗಳ ಸಂದರ್ಭ ಬಂದಾಗ ಪುರುಷರು ಮಾತ್ರ ನಿರ್ಧಾರ ಕೈಗೊಳ್ಳುತ್ತಾರೆ. ಇದಕ್ಕೆಲ್ಲಾ ಮೂಲಕಾರಣ ಮಹಿಳೆಯರಲ್ಲಿ ಹೆಚ್ಚಿನವರಿಗೆ ಅಕ್ಷರ ಜ್ಞಾನ ಇಲ್ಲದಿರುವುದು. ತಾಯಿಯಾಗಿ, ಪತ್ನಿಯಾಗಿ, ಕುಟುಂಬದ ರಕ್ಷಣೆಯಾಗಿ ಮಹಿಳೆ ನಿರ್ವಹಿಸುವ ಪಾತ್ರ ಅದ್ವಿತೀಯ.

ಪುರುಷರು ಮಹಿಳೆಯರಿಗೆ ಸಮಾನ ಅವಕಾಶ ನೀಡುವುದರೊಂದಿಗೆ ಪ್ರಾತಿನಿಧ್ಯ ದೊರಕಿಸಿ ಕೊಡಬೇಕು. ಆಗ ಸಮಾನತೆಯನ್ನು ಕಾಯ್ದುಕೊಂಡು ಬಂದಂತಾಗುವುದಲ್ಲದೇ ಅಭಿವೃದ್ಧಿ ಪ್ರಕ್ರಿಯೆ ಯಲ್ಲಿ ಸಕ್ರಿಯವಾಗಿ ಪ್ರೇರೇಪಿಸಿದಂತಾಗುತ್ತದೆ. ಆಗ ಮಾತ್ರ ಮಹಿಳಾಭಿವೃದ್ಧಿ ಸಾಧ್ಯವಾಗುತ್ತದೆ.

ಗ್ರಾಮೀಣ ಪ್ರದೇಶದ ದಲಿತ ಜನರಿಗೆ ಮೂಲಭೂತ ಅವಶ್ಯಕತೆಗಳಿಗೆ ಬೇಕಾಗುವಷ್ಟು ಹಣಕಾಸನ್ನು ಕಡಿಮೆ ಬಡ್ಡಿದರದಲ್ಲಿ ಒದಗಿಸಲು ವಾಣಿಜ್ಯ ಬ್ಯಾಂಕುಗಳು ವಿಫಲವಾಗಿವೆ. ಆರ್ಥಿಕ ವ್ಯವಸ್ಥೆಯ ಹಿತದೃಷ್ಟಿಯಿಂದ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ೧೯೭೫ರಲ್ಲಿ ಸ್ಥಾಪಿಸಲಾಗಿದೆ. ಆದರೂ ಸಹ ಗ್ರಾಮೀಣ ಜನರು ಬ್ಯಾಂಕಿಂಗ್ ವ್ಯವಸ್ಥೆಯಿಂದ ಅಲ್ಲದೇ ಹೊರಗೆ ಹೆಚ್ಚಿನ ಸಾಲ ಪಡೆಯುತ್ತಿರುವುದು ಗಮನಾರ್ಹ.

೫.೩. ಬದಲಾವಣೆಯ ತವಕದಲ್ಲಿ ಕೊರವ ಮಹಿಳೆ

''ಇಂದಿಗೂ ಬಯಲುನಾಡಿನ ಕೊರವರು, ಕುರುಬರು ಮೊದಲಾದವರೂ ಕುಕ್ಕೆ ಮೊರ, ಬುಟ್ಟಿ, ಕಂಬಳಿಗಳನ್ನು ಹೊತ್ತು ಮಲೆನಾಡಿಗೆ ಹೋಗಿ ಬರುವುದು ನಡೆದು ಬಂದಿದೆ. ಅಲೆಮಾರಿ ಜನಾಂಗಗಳು ಸಂಚಾರಶೀಲರಾಗಿರುವುದರಿಂದ ಜನಪದ ಸಂಪ್ರದಾಯಗಳೂ, ಕಲೆಗಳೂ, ಸಾಹಿತ್ಯವೂ ಒಳನಾಡಿನಲ್ಲಿಯೇ ಸಾಕಷ್ಟು ವಿನಿಮಯಕ್ಕೆ ಒಳಗಾಗಿ, ಗಡಿಯನ್ನು ತಲುಪಿ ಅಲ್ಲಿಂದ ಹೊರನಾಡಿಗೆ ಹೋಗುತ್ತವೆ. ಅಲ್ಲಿನ ಜಾನಪದ ಪ್ರಕಾರಗಳು ನಮ್ಮ ನೆಲವನ್ನು ತುಳಿಯುತ್ತವೆ. ಶತಮಾನಗಳಿಂದ ಕರ್ನಾಟಕಕ್ಕೆ ಅನೇಕ ಜನಾಂಗಗಳು ವಲಸೆ ಬಂದು ಇಲ್ಲಿನ ನಿವಾಸಿಗಳೇ ಆಗಿದ್ದಾರೆ. ತೆಲುಗರು, ತಮಿಳರು, ಮಲೆಯಾಳಿಗಳು, ಮರಾಠಿಗಳು, ಮಹಮದೀಯರು ಮುಂತಾದ ಜನಾಂಗಗಳು ಇಲ್ಲಿನ ಸಾಂಸ್ಕೃತಿಕ ಪ್ರಭಾವಕ್ಕೆ ಒಳಗಾಗಿ ಜಾನಪದ ಕೊಡುಗೆಯ ಕ್ರಿಯೆಗೆ ಪಕ್ಕಾಗಿದ್ದಾರೆ".[೧೫]

'ಪತಿನಿಷ್ಠೆಗೆ ಪತಿಯೇ ಪರಮಗುರು ಪತಿಯೇ ದೇವತೆ
ಪತಿಯೇ ಸದ್ಗತಿ ಎಂದು ಪತಿಯ ಪಾದಾಂಬುಜದೊಳು'

ಭಕ್ತಿಗೈವುದು ಸತಿಯರ ಧರ್ಮದ ಸಾರ'ವೆಂಬ ಪತಿನಿಷ್ಠೆಯ ಪರಮಾವಧಿಯಲ್ಲಿ ಹೊನ್ನಮ್ಮ ಹದಿಬದೆಯ ಧರ್ಮವನ್ನು ಅರಹುತ್ತಾಳೆ. ಹೀಗೆ ಪತಿಯನೊಪ್ಪಿ ಬಾಳಬೇಕೆನ್ನುವ ಧನಿಯೊಂದಿಗೆ ಪತಿ ತಪ್ಪು ಮಾಡಿದಾಗ ವಿನಯ ಬೆರಸಿ ಪ್ರಶ್ನಿಸುವ ಮಟ್ಟದಲ್ಲಿ ಹೊನ್ನಮ್ಮ ಸತಿಯನ್ನು ಗ್ರಹಿಸಿದ್ದಾಳೆ ಎನ್ನುವುದನ್ನು ಮರೆಯಬಾರದು. ಹೊನ್ನಮ್ಮ ಇಂದು ನಮಗೆ ಮುಖ್ಯವಾಗುವುದು ಸತಿಧರ್ಮದ ಹಿತೈಷಿಣಿಯಾಗಿ ಅಲ್ಲ. ಲಿಂಗಸಮಾನತೆಯ ಮಾರ್ಗದರ್ಶಿಯಾಗಿ ಲಿಂಗಭೇದದ ಕುರಿತು ಅವಳೆತ್ತುವ ಮಾನವೀಯ ಕಾಳಜಿಯ ಪ್ರಶ್ನೆಗಳಲ್ಲಿ ಅವಳ ಸ್ತ್ರೀ ಪರತೆ ಅತ್ಯಂತ ಗಾಢವಾಗಿದೇ.

ಇಂದು ಮಹಿಳೆಗೆ ಉದ್ಯೋಗಕ್ಕೆ ಅನುಕೂಲವಾದ ವಾತಾವರಣ ಕಲ್ಪಿಸಿಕೊಡಲಾಗುತ್ತಿದೆ. ಮಹಿಳೆಯು ಸರಕಾರಿ ನೌಕರಿಯಲ್ಲಿ ಪಾಲ್ಗೊಳ್ಳುವುದನ್ನು ನೋಡಬಹುದು. ಆದರೆ ಅದರ ಹಿಂದೆ ಪುರುಷ ನಿರುವುದೇ ಅವಳ ಸಂಪಾದನೆಯನ್ನು ವೆಚ್ಚ ಮಾಡಲು. ಅಲ್ಲಿಂದಲೇ ಅವರಲ್ಲಿ ಮೇಲು ಕೀಳು ಎಂಬ ಭಾವನೆ ಮೂಡಿ ಬರುತ್ತದೆ. ಹೆಂಡತಿಯನ್ನು ನೀನು ದುಡಿಯುವವಳು, ನಿನ್ನ ಇಚ್ಛೆಯಂತೆ ಖರ್ಚು ಮಾಡು ಎಂಬ ವಿಚಾರಗಳು ಆಹಂ ತೋರಿಸುತ್ತಾಳೆ ಎಂಬ ತಪ್ಪುಕಲ್ಪನೆಯಿಂದ ಪುರುಷರು ಬದುಕುತ್ತಿದ್ದಾರೆ. ಆದರೂ ಹಿಂದಿನ ನಡವಳಿಕೆ, ನಂಬಿಕೆಗಳಿಂದ ಯಜಮಾನನಾದ ಪತಿ ಪತ್ನಿಯರ ಮನೆ ಕೆಲಸಗಳಲ್ಲಿ ಸಹಕಾರ ನೀಡಲು ಮುಂದಾಗುವುದಿಲ್ಲ. ಹಾಗೆ ಸಹಕಾರ ನೀಡುವುದೆಂದರೆ ಹೆಂಡತಿಯ ದಾಸರಾದಂತೆ ಎಂಬ ಮನೋಭಾವನೆ ಅವರಲ್ಲಿರುತ್ತದೆ. ಇಂತಹ ಮೂಢನಂಬಿಕೆ ಬದಲಾಗಬೇಕು. ಅವಳು ದುಡಿಯುವುದು ಮನೆಯ ಒಳಿತಿಗಾಗಿ. ಸಮಾಜದಲ್ಲಿ ಉತ್ತಮವಾಗಿ ಬದುಕಲು ಹವಣಿಸುತ್ತಿರುವ ಅವನ ಮನೋಭಿಲಾಸೆಯನ್ನು ಇವರು ತಿಳಿದುಕೊಳ್ಳುವುದಿಲ್ಲ, ಅರ್ಥ ಮಾಡಿಕೊಳ್ಳುವುದಿಲ್ಲ.

ಶಿಕ್ಷಣದಿಂದ ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸಿ ತನ್ನ ಕಾರ್ಯರಂಗವನ್ನು ವಿಶಾಲ ಮಾಡಿಕೊಳ್ಳಲು ಮಹಿಳೆಗೆ ಹೆಚ್ಚಿನ ಅವಕಾಶವಿದೆ. ಉದಾಹರಣೆಗೆ ಉನ್ನತ ವಿದ್ಯಾಭ್ಯಾಸ ಮಾಡಿದ ಹುಡುಗಿಯು ತಮ್ಮ ಸಮುದಾಯದ ಬಗ್ಗೆ ತಿಳಿದುಕೊಳ್ಳಲು ಸಭೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾಳೆ. ವಿದ್ಯಾವಂತರು ತಮ್ಮ ಮಕ್ಕಳನ್ನು ಮುಂದೆ ಓದಿಸಬೇಕು ಎಂಬ ಹಂಬಲ ಅವರಿಗೆ ಬರುವುದು ಸಹಜ. ಬದಲಾವಣೆ ಧೋರಣೆಯಿಂದ ಮಹಿಳೆಯರು ಸಂಘ ಸಂಸ್ಥೆಗಳನ್ನು ನಿರ್ಮಿಸಿಕೊಳ್ಳಲು ಅವಕಾಶ ಸಿಕ್ಕಿದಂತಾಗುತ್ತದೆ. ಆದ್ದರಿಂದ ಹೆಣ್ಣು ಆರ್ಥಿಕ, ಸಾಮಾಜಿಕ ಜೀವನದಲ್ಲಿ ಭಾಗವಹಿಸಿದರೆ ದೇಶದ ಪ್ರಗತಿಯನ್ನು, ಸಮುದಾಯದ ಪ್ರಗತಿಯನ್ನು ಸಾಧಿಸಲು ಸಹಾಯಕವಾಗುತ್ತದೆ. ವಿದ್ಯಾವಂತರು ತಮ್ಮ ಸೌಲಭ್ಯಗಳನ್ನು ಇನ್ನೊಬ್ಬ ಮಹಿಳೆಯರಿಗೆ ತಿಳಿಹೇಳುವುದರಿಂದ ಅವರ ಮನದಲ್ಲಿ 'ನಮಗೂ ಓದು ಬೇಕು ನಾವು ಸಮುದಾಯದಲ್ಲಿ ಮಹತ್ವವನ್ನು ಪಡೆದುಕೊಳ್ಳಬೇಕು' ಎಂಬ ಮನೋಭಾವನೆಯು ಅವರಲ್ಲಿ ಹುಟ್ಟುವುದು.

ನಮ್ಮ ದಿನನಿತ್ಯದ ಜೀವನ ನಿರ್ವಹಣೆಗೆ ಹಾಗೂ ಜೀವನಾಭಿವೃದ್ಧಿಗೆ ತೀರಾ ಅವಶ್ಯವಾದ ಆಹಾರ, ಶಿಕ್ಷಣ, ಆಸರೆ, ಆರೋಗ್ಯ, ರಕ್ಷಣಾ ಸೌಲಭ್ಯಗಳು ಮುಂತಾದವುಗಳನ್ನು ಒದಗಿಸುವಂಥ ಒಂದು ವ್ಯವಸ್ಥೆ ಬೇಕು. ಈ ಸೌಲಭ್ಯಗಳನ್ನು ಒದಗಿಸುವಲ್ಲಿ ಅನೇಕ ಕುಟುಂಬದಲ್ಲಿ ಅಂಗತಾರ ತಮ್ಯವಿದೆ. ಕುಟುಂಬದಲ್ಲಿ ಹೆಣ್ಣು ಮಕ್ಕಳನ್ನು ಹೊಡೆಯದೆ ಬಡಿಯದೆ ಇರಬಹುದು. ಆದರೆ ಮೇಲೆ ಹೆಸರಿಸಿದ ಸೌಲಭ್ಯಗಳನ್ನು ಒದಗಿಸುವಲ್ಲಿ ಹೆಣ್ಣಿಗೆ ಒಂದು ರೀತಿ, ಗಂಡಿಗೆ ಒಂದು ರೀತಿ ಎಂಬ ತಾರತಮ್ಯವನ್ನು ಆಚರಿಸುವುದು ಇದು ಕೌಟುಂಬಿಕ ಹಿಂಸೆ ಎಂದೇ ಹೇಳಬೇಕಾಗುತ್ತದೆ. ಮಹಿಳೆಯರು ಇದನ್ನು ತಿಳಿದುಕೊಳ್ಳುವ ಅವಶ್ಯಕತೆಗೂ ಹೋಗುವುದಿಲ್ಲ. ಏಕೆಂದರೆ ಅವರ ಬುದ್ಧಿಶಕ್ತಿ ಈ ವಿಷಯದಲ್ಲಿ ಕಡಿಮೆ.

ನಾಗರಿಕತೆಯು ಬೆಳೆದಂತೆಲ್ಲ ಅನೇಕ ಸಂಬಂಧಗಳು ಹೆಣೆದುಕೊಳ್ಳುತ್ತವೆ. ಬರುಬರುತ್ತಾ ಇಡೀ ಪ್ರಪಂಚದ ಆಗುಹೋಗುಗಳನ್ನು ನಮಗೆ ಸಂಬಂಧವಿಲ್ಲದಂತೆ ಎಂಬ ಪಕ್ಕಕ್ಕಿಡಲಾರದ ಸ್ಥಿತಿಯಲ್ಲಿ ನಾವೀಗ ಇದ್ದೇವೆ. ಈಗ ಜಾಗತೀಕರಣದಿಂದಾಗಿ ಮಹಿಳೆಯರ ಸ್ಥಿತಿಯು ಭಯಾನಕವಾಗು ತ್ತಿರುವಂತಿದೆ. ಆಧುನಿಕತೆಯೊಂದಿಗೆ ಬೆಸೆದುಕೊಂಡು ಬಂದ ಕೈಗಾರೀಕರಣ ಶಿಕ್ಷಣ ಉದ್ಯೋಗಗಳ ಹೊರ ಅವಕಾಶಗಳು ಒಟ್ಟು ಕುಟುಂಬಗಳನ್ನು ಒಡೆಯುವ ಮುಖ್ಯ ಸಾಧನಗಳಾದವು ಎಂದು ಹೇಳಬಹುದು. ಒಬ್ಬೊಬ್ಬರೇ ಹಳ್ಳಿಗಳನ್ನು ಬಿಟ್ಟು ನಗರಗಳನ್ನು ಸೇರುತ್ತಾ ಹೋದ ಪುರುಷರು ತಮ್ಮದೇ ಆದ ಪ್ರತ್ಯೇಕ ಆರ್ಥಿಕ ಮೂಲಗಳನ್ನು ಕಂಡುಕೊಳ್ಳುತ್ತಾ ಹೋದಂತೆ, ಹೊಸ ಪರಿಸ್ಥಿತಿಗೆ ಅನುಗುಣವಾಗಿ ತಾನು, ತನ್ನ ಹೆಂಡತಿ ಮಕ್ಕಳು ಮಾತ್ರವೇ ಇರುವ ಬಿಡಿ ಕುಟುಂಬಗಳನ್ನು ಕಟ್ಟಿಕೊಳ್ಳುತ್ತಾರೆ. ಹೊಸ ಪರಿಸರದೊಂದಿಗೆ ಹಳ್ಳಿಯನ್ನು ಮರೆತುಬಿಡುತ್ತಾರೆ. ಅಲ್ಲಿರುವ ತಂದೆ-ತಾಯಿಗಳ ಗತಿ ಏನು ಎಂಬ ಪ್ರಶ್ನೆ ಕಾಡುತ್ತದೆ. ಇದರಿಂದಾಗಿ ತಮ್ಮ ಮೂಲ ಕುಟುಂಬದೊಂದಿಗೆ ಸಂಪರ್ಕಗಳನ್ನು ಕಡಿಯುತ್ತಾ ಬಂದರು. ಭಾವನಾತ್ಮಕ ನೆಲೆಯಲ್ಲಷ್ಟೇ ಮೂಲ ಕುಟುಂಬದೊಂದಿಗೆ ಸಂಬಂಧಿತವಾಗಿರುವುದು. ಕಾಲಕಳೆದಂತೆ ಭಾವನಾತ್ಮಕ ಸಂಬಂಧ ದಟ್ಟವಾಗಿ ಉಳಿಯಲಾರವು. ಹೆಣ್ಣಾಗಿರುವ ಕಾರಣಕ್ಕಾಗಿಯೇ ಒದಗುತ್ತಿರುವ ಅಪಾಯಗಳನ್ನು ಸ್ವಲ್ಪ ಎಚ್ಚರಿಕೆಯಿಂದ ನಿರ್ವಹಿಸಿದರೆ ಬದುಕನ್ನು ಎದುರಿಸಲು ಸಜ್ಜಾಗುವುದು ಸಾಧ್ಯವಾಗುತ್ತದೆ. ಹೊಸ ಪರಿಸರದ ಹೊಸ ಸಂದರ್ಭಗಳಲ್ಲಿ ಇವುಗಳನ್ನು ವಿವೇಕದಿಂದ ಬಳಸುವ ಸಾಮರ್ಥ್ಯವನ್ನು ನಮ್ಮ ಹೆಣ್ಣು ಮಕ್ಕಳು ದಕ್ಕಿಸಿಕೊಳ್ಳದೇ ಹೋದರೆ ಅವಳ ಶಿಕ್ಷಣ ಉದ್ಯೋಗಗಳಿಗೆ ಅರ್ಥವೇ ಉಳಿಯುವುದಿಲ್ಲ.

ತನ್ನ ಮೂಲ ಕುಟುಂಬದ ಕಡೆಗೂ ಲಕ್ಷ್ಯ ವಹಿಸಿ, ಹೊಸ ಪರಿಸರದ ಸಂಬಂಧಗಳ ಜೊತೆ ಎಚ್ಚರಿಕೆಯಿಂದ ನಡೆದುಕೊಳ್ಳುವುದು ಅವಳಿಗೆ ಒಂದು ಪರೀಕ್ಷೆಯಾಗಿರುತ್ತದೆ. ಮಹಿಳೆಯರು ಇಂದಿನ ದಿನಗಳಲ್ಲಿ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳಲಾಗದ ದೌರ್ಬಲ್ಯವನ್ನು ಎದುರಿಸುತ್ತಿದ್ದಾರೆ. ಸಾಂಪ್ರದಾಯಿಕ ಮತ್ತು ಸಾಮಾಜಿಕ ಕಟ್ಟುಪಾಡುಗಳಿಂದಾಗಿ ಮನೆಯಲ್ಲಿ ಸ್ವಾಯತ್ತತೆಗೆ ಕೊಡಲಿ ಪೆಟ್ಟು ಬೀಳುತ್ತದೆ. ಮಹಿಳೆಯರಿಗೆ ಸಹಕಾರ ಇಲ್ಲವಾದರೆ ಸಮಸ್ಯೆಯನ್ನು ಎದುರಿಸುತ್ತಾಳೆ. ಭಾರತ

ದೇಶವು ಸ್ವಾತಂತ್ರ್ಯ ಪಡೆದು ೬೧ ವರ್ಷಗಳಾಗಿದ್ದರೂ ಮಹಿಳೆಯರ ಸ್ಥಿತಿಗತಿಗಳು, ಸ್ಥಾನಮಾನಗಳು ಮತ್ತು ಬೌದ್ಧಿಕ ಪ್ರಗತಿಯಲ್ಲಿ ಹೆಚ್ಚಿನ ಬೆಳವಣಿಗೆಯೇನೂ ಕಂಡುಬರುತ್ತಿಲ್ಲ. ಮಹಿಳೆ ಎಂದ ಕೂಡಲೆ ತಕ್ಷಣ ಯಾರಿಗಾದರೂ ಹೊಳೆಯುವುದು ಮದುವೆ, ಮಕ್ಕಳು ಮತ್ತು ವಂಶೋದ್ಧಾರಕನನ್ನು ರೂಪಿಸುವುದು. ಮಹಿಳೆಯರನ್ನು ಸಂಸಾರದಿಂದಾಚೆಯ ಬಗ್ಗೆ ಯೋಚಿಸುವುದು ಸಾಮಾನ್ಯವಾಗಿ ಯಾರಿಂದಲೂ ಸಾಧ್ಯವಾಗದು. ಕಾರಣ ಮಹಿಳೆಯನ್ನು ಅವಳದೇ ಆದ ವರ್ತುಲದಿಂದ ಹೊರಗೆ ಚಿಂತಿಸುವುದು ಅಸಾಧ್ಯ, ಅವಳನ್ನು ಮನೆಯ ವಾತಾವರಣದಲ್ಲೇ ಚಿವುಟಿ ಹಾಕುವ ಸಾಂಪ್ರದಾಯಿಕ ದೃಷ್ಟಿಯಲ್ಲಿ ನೋಡಲಾಗುತ್ತದೆ. ಶಿಕ್ಷಣ, ತಿಳುವಳಿಕೆ ಇಲ್ಲದಿರುವ ಕಾರಣದಿಂದಾಗಿ ಮಹಿಳೆಗೆ ಅಭಿವ್ಯಕ್ತಿ ಸ್ವಾತಂತ್ರ್ಯವೂ ಇಲ್ಲವಾಗಿದೆ. ಮಾತನಾಡಿದರೆ 'ಗಂಡಸರ ಮಧ್ಯ ಬಾಯಿ ತೂರಿಸುವುದು ಒಳ್ಳೆಯದಲ್ಲ. ನಾವಿದ್ದೇವಲ್ಲ' ಎಂದು ಪುರುಷರು ಹೇಳುತ್ತಾರೆ. ತಾಯಂದಿರು 'ಅವರಿಗೆ ಎದುರು ಮಾತನಾಡಬಾರದು' 'ಅವರು ದೊಡ್ಡವರು' ಎಂದು ತಿಳಿಹೇಳುತ್ತಾರೆ.

ಅವರ ಆಯ್ಕೆ ಮತ್ತು ಸಾಮರ್ಥ್ಯದ ಪ್ರಕಾರ ಉದ್ಯೋಗ ಪಡೆದುಕೊಳ್ಳುವ ಸ್ವಾತಂತ್ರ್ಯ ಇರುವುದಿಲ್ಲ.

ಈ ಸಮುದಾಯದಲ್ಲಿ ಪುರುಷನ ಒಪ್ಪಿಗೆ ತೆಗೆದುಕೊಂಡೇ ಮುಂದಿನ ಹೆಜ್ಜೆ ಇಡಬೇಕಾಗುತ್ತದೆ. ಇಲ್ಲವಾದರೆ ಅವರ ಕೋಪಕ್ಕೆ ತುತ್ತಾಗಬೇಕು. ಒಳ್ಳೆಯ ಬುದ್ಧಿಯಿಂದ ಅವರಿಗೆ ಅವಕಾಶ ಮಾಡಿಕೊಂಡರೆ ಹೆಣ್ಣು ಮುಂದೆ ಬರಲು ಸಾಧ್ಯವಾಗುತ್ತದೆ.

ರಾಷ್ಟ್ರೀಯ, ಅಂತಾರಾಷ್ಟ್ರೀಯ ಆಟಗಳಲ್ಲಿ, ಶೈಕ್ಷಣಿಕ, ಸಾಂಸ್ಕೃತಿಕ ಸಮಾವೇಶಗಳಲ್ಲಿ ಪಾಲುಗೊಳ್ಳುವಿಕೆಯ ಸ್ವಾತಂತ್ರ್ಯ (ಉನ್ನತ ಶಿಕ್ಷಣವನ್ನು ಪಡೆದರೆ ಸಾಕು) ಮಹಿಳೆಗೂ ಬಂದೇ ಬರುತ್ತವೆ. ನಂತರ ಮನೆಯಲ್ಲಿ ಒಪ್ಪಿಸಿ ಅವರೂ ಸಮಾವೇಶಗಳಲ್ಲಿ ಪಾಲ್ಗೊಳ್ಳಬಹುದಾಗಿದೆ.

ಸಾಂಪ್ರದಾಯಿಕವಾಗಿ ಮಹಿಳೆಯರು ಬಹುತೇಕ ಎಲ್ಲಾ ಸಮಾಜಗಳಲ್ಲೂ ದ್ವಿತೀಯ ಪ್ರಜೆ ಯಾಗಿಯೇ ಉಳಿದಿದ್ದಾರೆ. ಹುಟ್ಟಿನಿಂದ ಹಿಡಿದು ಜೀವನದ ಕೊನೆಯವರೆಗೂ ಎಲ್ಲಾ ಸ್ತರವಿನ್ಯಾಸ ಗಳಲ್ಲಿಯೂ ಮಹಿಳೆ ಪುರುಷನನ್ನೇ ಅವಲಂಬಿಸುವಂತೆ ಸಾಮಾಜಿಕ ಕ್ರಿಯೆ ಮಾಡಿದೆ. ನೈಜವಾಗಿ ಹೇಳುವುದಾದರೆ ಮಹಿಳೆಯರನ್ನು ಪುರುಷರ ಗುಲಾಮರನ್ನಾಗಿ ಮಾಡಲಾಗಿತ್ತು. ಮಹಿಳೆಯನ್ನು ಮಕ್ಕಳನ್ನು ಹೆರುವ ಮತ್ತು ಗಂಡಸರಿಗೆ ಸೇವೆ ಮಾಡುವ ಹಾಗೂ ಲೈಂಗಿಕ ಭೋಗದ ವಸ್ತುವನ್ನಾಗಿ ಬಳಸಲಾಗುತ್ತಿತ್ತು. ಇಂದಿಗೂ ಸಹ ಈ ರೀತಿಯಲ್ಲಿ ಈ ಸಮುದಾಯದಲ್ಲಿ ನಡೆಯುತ್ತಿದೆ. ಬೇಗನೆ ವಿವಾಹ ಮಾಡುವುದರೊಂದಿಗೆ ಅವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮತ್ತು ಅಂತಸ್ತನ್ನು ದಮನಗೊಳಿಸಿ ಅವರನ್ನು ಮನೆಯ ನಾಲ್ಕು ಗೋಡೆಗಳ ಮಧ್ಯೆ ಕೂಡಿ ಹಾಕಲಾಗುತ್ತಿತ್ತು. ಗಂಡಾಗಲಿ, ಹೆಣ್ಣಾಗಲಿ ಒಟ್ಟಾರೆ ಪ್ರಜೆಗಳು ಅಗತ್ಯ ಜೀವನಾವಶ್ಯಕಗಳನ್ನು ಹೊಂದಲು ಹಕ್ಕು ಉಳ್ಳವರು. ಪುರುಷ ಮತ್ತು ಮಹಿಳೆ ಇಬ್ಬರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಆದರೂ ಅವಳ ಶ್ರಮವನ್ನು ಕಡಿಮೆಮಟ್ಟದಲ್ಲಿ ಅಳೆಯುತ್ತಾರೆ. ಆದರೆ ಪುರುಷರು ಬಲಿಷ್ಠರು ಎಂಬ ಮಾತು ಕಂಡುಬರುತ್ತದೆ. ಇಂತಹ ಪರಿಸ್ಥಿತಿಗಳು ಸುಧಾರಿಸಲು ಎಷ್ಟು ವರ್ಷಗಳು ಬೇಕೋ ತಿಳಿಯದು.

"ಹೆಣ್ಣು ವೈಯಕ್ತೀಕರಣವೆನ್ನುವುದು ಅವಳನ್ನು ಸಾಂಪ್ರದಾಯಿಕ ಸಂಕೋಲೆಗಳಿಂದ ಬಿಡಿಸಿ ಅಧಿಕಾರಶಕ್ತಿಯ ಸುಂದರ ಸಂಕೋಲೆಗೆ ತಳ್ಳುತ್ತಿದೆ. ವೈಯಕ್ತಿಕ ಸ್ವಾತಂತ್ರ್ಯದ ಸಂಭ್ರಮದಲ್ಲಿ ಆಕೆ ತನಗಿದ್ದ ನೈಸರ್ಗಿಕ ಶಕ್ತಿ ಹಾಗೂ ಸಂರಕ್ಷಣೆಗಳನ್ನೆಲ್ಲ ಕಳೆದುಕೊಳ್ಳುತ್ತಿದ್ದಾಳೆ. ಅವಳಿಗೆ ಬರುವಂತಹ ಸುಖ ಸಂತೋಷ ಅನುಕೂಲವನ್ನು ಎಲ್ಲರ ಹೆಸರಿನಲ್ಲಿ ಅಧಿಕಾರ ಶಕ್ತಿಗೆ ತೆರೆದಿಡುವ ಕ್ರಮವಾಗಿದೆ. ನೈಸರ್ಗಿಕವಾಗಿ ಮಹತ್ವವಿರುವ ಎಲ್ಲವೂ ಈ ರೀತಿ ಬೀದಿಗೆ ಬಂದು ಬೀಳುವುದು ಅನಿವಾರ್ಯವಾಗಿದೆ. ಆ ಕೆಲಸವನ್ನು ಜನಪದರನ್ನು ಕೇಳದೆ ಬೇರೆ ಯಾರೇ ಮಾಡುತ್ತಿದ್ದರೂ ಹೆಣ್ಣು ಅವುಗಳಲ್ಲಿ ಬಹುಮುಖ್ಯವಾಗಿದ್ದಾಳೆ. ವರ್ಣ, ಜಾತಿ, ಧರ್ಮಗಳು, ಸಾಂಪ್ರದಾಯಿಕ ದೃಷ್ಟಿಗಳು ನಿಜ. ಅವುಗಳ ಶಕ್ತಿಯನ್ನು ಅರಿತವರು ಆಧುನಿಕ ಶಕ್ತಿಯನ್ನು ಅರಿಯಬೇಕು. ಸಾಂಪ್ರದಾಯಿಕ ಶಕ್ತಿಗಳನ್ನು ಪ್ರಶ್ನಿಸುವ ವಾತಾವರಣ ಈಗ ಸಿದ್ಧವಿದೆ. ಆ ಶಕ್ತಿ ಕುಂದುತ್ತಲೂ ಇದೆ" [೧೩] ಸಾಂಪ್ರದಾಯಿಕವಾಗಿರುವುದು ಆಧುನಿಕರಣವಾದರೆ ಮುಂದೆ ಹಿಂದಿನದನ್ನು ನೆನೆದು ಹಳೆಯ ಸಂಪ್ರದಾಯವನ್ನು ಮತ್ತೆ ಬಯಸುತ್ತಾರೆ, ಇದು ಸತ್ಯ.

ಬದುಕುವ ನಂಬಿಕೆಯಿಂದ ಸಮಾಜ ಆರಂಭವಾಗುತ್ತದೆ. ನಂಬಿಕೆಯಲ್ಲಿ ಒಳ್ಳೆಯದು, ಕೆಟ್ಟದು ಎನ್ನುವ ಆಲೋಚನೆ ಚಾರಿತ್ರಿಕ ಪರಿಣಾಮ. ಬಾಳಿಗೊಂದು ನಂಬಿಕೆ ಬೇಕು ಎನ್ನುವ ಅಂಶ ಯಾವಾಗಲೂ ಸ್ಪಷ್ಟ. ಸಮಾಜದಲ್ಲಿ ಮಹಿಳೆಯರ ಮೇಲೆ ನಂಬಿಕೆ ಇಲ್ಲದಿದ್ದರಿಂದಲೇ ಅನೇಕ ಶೋಷಣೆಗಳಿಗೆ ಕಾರಣವಾಗಿದೆ ಎಂದು ಹೇಳಬಹುದು. ಮನುಷ್ಯ ತನ್ನ ಬದುಕನ್ನು, ಇತರರ ಬದುಕನ್ನು ಅರಿಯದೇ ಇದ್ದರೆ ಅವನ ಬಾಳು ಗೋಳಾಗುತ್ತದೆ. ಇದಕ್ಕೆ ಬಾಳದವನು ತಾಳಯಾನು ಎಂಬ ಮಾತಿದೆ. ತಿಳುವಳಿಕೆಯಿಂದ ಸಂಸಾರವನ್ನು ನೋಡಿಕೊಂಡು ಹೋಗುವವರು ಉತ್ತಮ ಸ್ಥಿತಿಯಲ್ಲಿರುತ್ತಾರೆ.

ಇತ್ತೀಚಿನ ಆಧುನಿಕತೆಯಿಂದಾಗಿ ನಂಬಿಕೆಯನ್ನು ಸಕಾರಾತ್ಮಕ ಚಿಂತನೆಗೆ ಒಳಪಡಿಸುವುದಕ್ಕೆ ಬದಲಾಗಿ ನಕಾರಾತ್ಮಕ ಚಿಂತನೆಗೆ ಒಳಪಡಿಸಿದೆ. ಉದಾಹರಣೆಗೆ ದೇವರು, ದೆವ್ವ ಮೊದಲಾದವುಗಳಲ್ಲಿ ಮನುಷ್ಯನಿಗೆ ನಂಬಿಕೆ ಇವೆ. ಮನಸ್ಸಿರುವ ನೋವುಗಳು ಹೊರಬರಲಾಗದೇ ಸತ್ತ ಮೇಲೆ ದೆವ್ವಗಳಾಗಿ ಇನ್ನೊಬ್ಬರ ಮೂಲಕ ತಮ್ಮ ನೋವನ್ನು ತಿಳಿಯಪಡಿಸುತ್ತದೆ. ಉದಾಹರಣೆಗೆ ಗಂಡ ಸತ್ತ ಮೇಲೆ ಅವನು ಅತಿಯಾಗಿ ಯಾರ ಮೇಲೆ ಪ್ರೀತಿ ಇರುತ್ತದೆಯೋ ಅವರನ್ನು ಬೇಗ ಬಿಟ್ಟು ಹೋಗುವುದಿಲ್ಲ. ಬದುಕಲು ಒಂದು ನಂಬಿಕೆ ಬೇಕು ಎಂದು ತಿಳಿದ ಮಾನವನೇ ಅದನ್ನು ಗೇಲಿ ಮಾಡುವ ಅಥವಾ ವಿಧಿ ಛಿದ್ರಗೊಳಿಸುವ ವಿಪರ್ಯಾಸಕ್ಕೆ ಒಳಗಾಗಿದ್ದಾನೆ. ನಂಬಿಕೆಗಳು ಸಾಯುತ್ತವೆ, ಮತ್ತೆ ಹುಟ್ಟುತ್ತವೆ ಎಂಬುದು ಯಾವ ಕಾಲಕ್ಕೂ ನಿಜ. ನಂಬಿಕೆಗಳು ಹೆಚ್ಚಾಗಿ ಸ್ತ್ರೀಯರಲ್ಲಿ ಮನೆ ಮಾಡಿಕೊಂಡಿರುತ್ತವೆ.

ಕೆಲವು ಮಹಿಳೆಯರು ವಿದ್ಯಾವಂತರಾಗಿದ್ದರೂ ಸಹ ಬೇರೆಯವರಿಗೆ ತಿಳಿಸಿ ಹೇಳಲು ಅನುವಾಗು ವುದಿಲ್ಲ. ಮದುವೆಯಾದ ಮೇಲೆ ಗಂಡನ ಮನೆಯವರು ಹೇಳಿದಂತೆ ಕೇಳಬೇಕಾಗುತ್ತದೆ. ಇಲ್ಲವಾದರೆ ಶೋಷಣೆಗೆ ಒಳಗಾಗಬೇಕಾಗುತ್ತದೆ. ಶಿಕ್ಷಣಕ್ಕೆ ನೀಡುವ ಸೌಲಭ್ಯಗಳು ಹಲವು ಉತ್ತೇಜನಗಳಿಂದಾಗಿ

ಕೊರವ ಜನಾಂಗದ ಹೆಣ್ಣು ಮಕ್ಕಳು ಇತ್ತೀಚೆಗೆ ಶಾಲೆಗೆ ಹೋಗಲು ಪ್ರಾರಂಭಿಸಿದ್ದಾರೆ. ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳಗೆ ಪ್ರವೇಶಿಸಿದ್ದಾರೆ ಕೆಲವರು ಪದವಿ ಶಿಕ್ಷಣ ಪಡೆದಿದ್ದಾರೆ. ಆದರೆ ಈ ಜನಾಂಗದ ಬಹುತೇಕ ವಯಸ್ಕರು ಮತ್ತು ಯುವತಿಯರು ಅನಕ್ಷರಸ್ಥರು, ಶಿಕ್ಷಣದಿಂದ ವಂಚಿತ ರಾಗಿದ್ದಾರೆ. ಬಡತನದಿಂದ ಜನರು ಶಿಕ್ಷಣದ ಬಗ್ಗೆ ತಿಳುವಳಿಕೆ ಇಲ್ಲದಿರುವುದು. ತಂದೆ ತಾಯಿಗಳಿಗೆ ಶಿಕ್ಷಣ ಇಲ್ಲದೇ ಇರುವುದು. ಅವರ ದುಡಿಮೆ ಹಿನ್ನೆಲೆಯಲ್ಲಿ ಸಾಮಾಜಿಕ ಪರಿಸರ ತಮ್ಮ ಸುತ್ತಮುತ್ತಲೂ ದುಡಿಯುವ ಜನ ಇರುವುದು, ಮೂಢನಂಬಿಕೆ ಇವರು ಶಿಕ್ಷಣ ಪಡೆಯದೇ ಇರಲು ಕಾರಣಗಳಾಗಿವೆ.

ಹೆಣ್ಣು ಮಕ್ಕಳು ಋತುಮತಿಯಾದರೆ ಅವಳನ್ನು ಶಾಲೆ ಬಿಡಿಸಿ, ಅವಳಿಗೆ ಮದುವೆ ಮಾಡುವುದು. ಮುಂದೆ ಓದಲು ಅವರನ್ನು ಕಾಲೇಜುಗಳಿಗೆ ಕಳಿಸಲು ಹಿಂಜರಿಯುತ್ತಾರೆ. ಗಂಡು ಮಕ್ಕಳ ಕ್ರೂರ ದೃಷ್ಟಿಯಿಂದ ದೂರವಿರಿಸಲು ಈ ರೀತಿ ಮಾಡಲಾಗುತ್ತದೆ. ಅದರಲ್ಲಿಯೂ ವಿದ್ಯಾವಂತ ಮತ್ತು ತಿಳುವಳಿಕೆ ಇರುವ ತಂದೆ ತಾಯಂದಿರು ತಮ್ಮ ಹೆಣ್ಣು ಮಕ್ಕಳನ್ನು ಶಾಲಾ ಕಾಲೇಜು ಅಥವಾ ಉನ್ನತ ವ್ಯಾಸಂಗಕ್ಕೆ ಕಳುಹಿಸುವುದಕ್ಕೆ ಮುಂದಾಗುತ್ತಾರೆ ಮತ್ತು ಮುಂದಾಗಿದ್ದಾರೆ. ಅಂದರೆ ಅಂತಹವರು ಬೆರಳೆಣಿಕೆಯಷ್ಟು ಮಾತ್ರ ಎಂದು ಹೇಳಿದರೂ ತಪ್ಪಾಗಲಾರದು. ಇಂದು ದೇಶದಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣಕ್ಕೆ ಹೆಚ್ಚು ಪ್ರೋತ್ಸಾಹ ಕೊಡುತ್ತಿರುವ ಸಂದರ್ಭಗಳಲ್ಲಿ ಈ ಜನಾಂಗದ ಮಹಿಳೆಯರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಬಹಳ ಹಿಂದುಳಿದಿರುವುದು ಕಂಡುಬರುತ್ತದೆ. ಸವಲತ್ತುಗಳ ಸಮಾನ ಹಂಚಿಕೆಯ ಹಿಂದುಳಿದ ಬುಡಕಟ್ಟು ಜನಾಂಗ ಬಹಳ ದೂರದಲ್ಲಿರುವುದು ತಿಳಿದು ಬಂದಿದೆ.

ಸಾಮಾಜಿಕವಾಗಿ ಮನ್ನಣೆಯಿಲ್ಲದ, ಕೇವಲ ಉಪಯೋಗಿ ಮಹತ್ವವುಳ್ಳ ಚಟುವಟಿಕೆಗಳನ್ನಿಲ್ಲಿ ಮಹಿಳೆಯರಿಗೆ ಮುಡುಪಾಗಿಡಲಾಗಿದೆ. ಅತ್ಯಂತ ವಿಶಾಲವಾದ ಅರ್ಥದಲ್ಲಿ ಇಂತಹ ಚಟುವಟಿಕೆಗಳನ್ನು ಸಂತಾನೋತ್ಪತ್ತಿ ಚಟುವಟಿಕೆಗಳು ಎನ್ನಲಾಗಿದೆ. ಹೀಗೆ ಆರ್ಥಿಕತೆ ಎಂಬುದು ಪುರುಷ ಪ್ರಪಂಚವಾಗಿ ಪುರುಷ ಪ್ರಧಾನವಾಗಿ ರೂಪುಗೊಂಡುಬಿಟ್ಟಿದೆ. ಆರ್ಥಿಕ ಚೌಕಟ್ಟಿನಲ್ಲಿ, ಆರ್ಥಿಕೋತ್ಪಾದನೆಯಲ್ಲಿ ಮಹಿಳೆಯರೂ ಇರುತ್ತಾರೆ. ಆದರೆ ಅವರ ಆರ್ಥಿಕೋತ್ಪಾದನೆ ಚಟುವಟಿಕೆಗಳಿಗೆ ಸಾಮಾಜಿಕ ಮಹತ್ವವಿರುವುದಿಲ್ಲ. ಏಕೆಂದರೆ ಅವರು ಆರ್ಥಿಕೋತ್ಪಾದನೆಯಲ್ಲಿ ತೊಡಗಿದ್ದರೂ, ಅವರ ಚಟುವಟಿಕೆ ಗಳಿಗೆ, ಅವರು ಉತ್ಪಾದಿಸುವ ಸರಕು ಸೇವೆಗಳಿಗೆ ಉಪಯೋಗದ ಮಹತ್ವ ಇರುತ್ತದೆ ವಿನಃ ವಿನಿಮಯ ಮಹತ್ವ ಇರುವುದಿಲ್ಲ ಎಂಬ ಕಾರಣದಿಂದ ಆರ್ಥಿಕತೆಯ ಚೌಕಟ್ಟಿನಲ್ಲಿ ನಡೆಯುವ ಉತ್ಪಾದನಾ ಚಟುವಟಿಕೆಗಳಲ್ಲಿ ಪುರುಷರ ಪಾಲು ಅಧಿಕವಾಗಿರುತ್ತದೆ ಎಂದು ಹೇಳುತ್ತಾರೆ.

ಸಮಾಜದಲ್ಲಿ ನಡೆಯುತ್ತಿರುವ ಅತ್ಯಾಚಾರ, ಅನ್ಯಾಯ, ಪ್ರೇಮ ವಿವಾಹ ಮೊದಲಾದ ವಿಷಯಗಳಿಗೆ ತಾಯಿ ತಂದೆಯಲ್ಲಿ ಭಯಭೀತಿ ಮೂಡುವಂತೆ ಮಾಡಿರುವುದರಿಂದಾಗಿ ಮಕ್ಕಳನ್ನು ಶಾಲೆಗೆ ಕಳಿಸಲು ಹಿಂಜರಿಯುತ್ತಿದ್ದಾರೆ. ಉನ್ನತ ವ್ಯಾಸಂಗ ಮಾಡುವುದರಿಂದ ಪ್ರೇಮದಲ್ಲಿ ಬಿದ್ದು ಸಮುದಾಯಕ್ಕೆ ಕಳಂಕ ತರುವರೆಂಬ ಭಯವಿದೆ. ಇಂದು ದುಡಿಯುತ್ತಿರುವ ಹುಡುಗ ಹುಡುಗಿಯರೂ ಸಹ ಇಂತಹ ಬಲೆಗೆ ಬೀಳುತ್ತಾರೆ. ಇಂತಹ ಕೆಲವು ನಂಬಿಕೆಯಿಂದ ಈ ಜನರು ಶಿಕ್ಷಣದಲ್ಲಿ

ಮುಂದುವರೆಯಲು ಅವಕಾಶ ಕೊಡಲಿಲ್ಲ. ಯಾರನ್ನಾದರೂ ಹೆಣ್ಣು ಮಕ್ಕಳನ್ನು 'ಏಕೆ ಶಾಲೆಗೆ ಕಳುಹಿಸುವುದಿಲ್ಲ' ಎಂದು ಕೇಳಿದರೆ 'ಶಾಲೆಗೆ ಹೋಗಿ ಓದಿ ಏನೂ ಉದ್ಧಾರ ಮಾಡಬೇಕಾಗಿಲ್ಲ ಹೆಣ್ಣು ಮಕ್ಕಳು ಓದಿ ಏನು ಮಾಡೋದಿದೆ ಎಷ್ಟು ಓದಿದರೂ ಗಂಡನ ಮನೆಯಲ್ಲಿ ಮುಸರೆ ತಿಕ್ಕೋದು ತಪ್ಪುವುದಿಲ್ಲ' ಎಂದು ನಮಗೆ ತಿಳಿಹೇಳುತ್ತಾರೆ. 'ಬೇರೆ ಮನೆಗೆ ಹೋಗುವವಳು ಓದಿ ಯಾರನ್ನು ಉದ್ಧಾರ ಮಾಡಬೇಕು ಎಂಬ ಪ್ರಶ್ನೆಗಳು ಬರುತ್ತವೆ. ನಮ್ಮ ಅಜ್ಜಿ ಅಮ್ಮ ಓದಿಲ್ಲ, ಅವರೆಲ್ಲ ಜೀವನ ನಡೆಸಲಿಲ್ಲವೆ' ಎಂದು ಹೇಳುತ್ತಾರೆ.

ಇಂದಿನ ದಿನಗಳಲ್ಲಿ ಇಂದಿನ ಪೀಳಿಗೆಯ ಕೆಲವರು ತಮ್ಮ ಮಕ್ಕಳನ್ನು ಓದಿಸುವುದಕ್ಕೆ ಮುಂದೆ ಬರುತ್ತಿರುವುದು ಹಳ್ಳಿಗಳಲ್ಲಿಯೂ ಕಂಡುಬರುತ್ತದೆ. ಶಿಕ್ಷಣದ ಪ್ರಭಾವವು ಅವರಲ್ಲಿ ಅಭಿವೃದ್ಧಿ ಮೂಡಿಸುವಲ್ಲಿ ಪ್ರಯತ್ನಿಸುತ್ತಿದೆ. ಕೆಲವು ಪ್ರದೇಶದಲ್ಲಿ ವಾಸಿಸುವ ಸ್ಥಳಗಳಲ್ಲಿ ಶಿಕ್ಷಣದ ವ್ಯವಸ್ಥೆ ಇರುವುದಿಲ್ಲ, ಶಿಕ್ಷಣದ ಅರಿವು ಇರುವುದಿಲ್ಲ. ಸಾಮಾಜಿಕ ಪರಿಸರವನ್ನು ನೋಡಿದರೆ ಶಾಲೆ ಮತ್ತು ಶಿಕ್ಷಣದ ಬಗ್ಗೆ ಯೋಚಿಸುವ ಮನಸ್ಸು ಬರುವುದಿಲ್ಲ. ಇನ್ನು ಕಲಿಕೆಯ ಮಾತೆಲ್ಲಿ ಬಂತು. ಆ ಮಟ್ಟಿಗೆ ಸಾಮಾಜಿಕ ಪರಿಸರ ನಿರ್ಮಾಣವಾಗಿರುತ್ತದೆ. ಆಧುನಿಕತೆಯಲ್ಲಿ ಶಿಕ್ಷಣದ ಅನೇಕ ಸೌಲಭ್ಯಗಳಿವೆ. ಆದರೆ ಹಣದ ಅಡಚಣೆಯಿಂದಾಗಿ ಶಾಲೆಗೆ ಹೋಗಲು ಆಗುತ್ತಿಲ್ಲ. ಸರ್ಕಾರವು ಮಹಿಳೆಯರಿಗೆ ಅಥವಾ ಹೆಣ್ಣು ಮಕ್ಕಳಿಗೆ ಪ್ರಾಥಮಿಕ ಶಾಲೆಯಲ್ಲಿಯೇ ಶಿಷ್ಯವೇತನ ಕೊಡುವುದು ಕೂಡ ಓದಲು ಅನುಕೂಲ ಮಾಡಿಕೊಟ್ಟಿದೆ. ವಾಸಿಸುವುದಕ್ಕೆ ವಸತಿ ನಿಲಯಗಳಿವೆ. ಆದರೆ ಸಮುದಾಯದಲ್ಲಿ ಹೆಣ್ಣು ಮಕ್ಕಳನ್ನು ದೂರ ಕಳಿಸಲು ಆಗುವುದಿಲ್ಲ. ದುಡಿಯುವುದಕ್ಕೆ ಅವರನ್ನು ಕಳುಹಿಸುತ್ತಾರೆ. ಶಿಕ್ಷಣದಿಂದ ಅನೇಕ ಅನುಕೂಲಗಳಿವೆ ಎಂಬುದನ್ನು ಅವರಿಗೆ ತಿಳುವಳಿಕೆ ಮತ್ತು ಮನವರಿಕೆ ಮಾಡುವವರಿಲ್ಲ. ವಿದ್ಯಾವಂತರಾದವರೂ ನಗರಗಳಲ್ಲಿ ಹೋಗಿ ತಮ್ಮನ್ನು ತಾವು ನೋಡಿಕೊಳ್ಳುವುದರಿಂದ ಇವರಿಗೆ ತಮ್ಮವರೇ ತಿಳಿ ಹೇಳಿದರೆ ಅವರಲ್ಲಿ ಕೆಲವು ಬದಲಾವಣೆಗಳನ್ನು ತರಬಹುದು. ಉದಾಹರಣೆಗೆ ಶಿಕ್ಷಣದಲ್ಲಿ ಮುಂದೆ ಬರುತ್ತಿರುವ ಕುಟುಂಬ ಒಂದರಲ್ಲಿ (೫ ವರ್ಷಗಳ ಹಿಂದೆ ಅವಿಭಕ್ತ ಕುಟುಂಬವಾಗಿದ್ದು ಇಂದು ನೌಕರಿಯಲ್ಲಿ ಇರುವುದರಿಂದ ಬೇರೆ ಬೇರೆ ವಿಭಕ್ತ ಕುಟುಂಬಗಳಾಗಿವೆ.) ಅವಿದ್ಯಾವಂತ ಮಹಿಳೆಯು ೮೦೦ ರೂ. ನೌಕರಿಯಿಂದ ಹೆಣ್ಣು ಮಕ್ಕಳನ್ನು ಓದಿಸುತ್ತಾ ಉನ್ನತ ಶಿಕ್ಷಣದವರೆಗೆ ಓದಿಸಿದ್ದಳು. ಅದನ್ನು ನೋಡಿದ ಅವರ ತಮ್ಮನವರು ತಮ್ಮ ಮಕ್ಕಳನ್ನು ಅದರಲ್ಲೂ ಹೆಣ್ಣು ಮಕ್ಕಳನ್ನು ಓದಿಸಲು ಮುಂದೆ ಬಂದಿದ್ದಾರೆ. ಬಿಎಡ್ ಓದಿಸುತ್ತಿದ್ದಾರೆ. ಅಕ್ಕನ ಮಕ್ಕಳು ಒಬ್ಬಳು ಶಿಕ್ಷಕಿ, ಇನ್ನೊಬಳು ಎಂ.ಎ, ಓದಿದವಳು, ನೌಕರಿಗೆ ಕಾಯುತ್ತಿರುವವಳು. ಇದರಿಂದ ಒಂದು ಕುಟುಂಬವಲ್ಲದೇ ಅನೇಕ ಕುಟುಂಬಗಳು ತಮ್ಮ ಮಕ್ಕಳನ್ನು ಓದಿಸಲು ಪ್ರೇರೆಪಿಸುತ್ತವೆ.

ಕೌಟುಂಬಿಕ ಪರಿಸರದಲ್ಲಿ ಮನುಷ್ಯ ಸಂಬಂಧಿಗಳಿಗೆ ನೈತಿಕ ನೆಲೆಗಟ್ಟು ಆಧಾರವಾಗುತ್ತದೆ. ಅದು ಶಿಥಿಲವಾದಾಗ ಒಳಗಿನ ಜೀವಗಳು ಸತ್ತ ಬದುಕನ್ನು ಜೀವಿಸಬೇಕಾಗುತ್ತದೆ. ೨೦-೩೦ ವರ್ಷಗಳ ಹಿಂದೆ ಕುಟುಂಬವು ದೊಡ್ಡದಾಗಿತ್ತು ಹೆಣ್ಣು ಮಕ್ಕಳು, ಗಂಡು ಮಕ್ಕಳು ಬೇರೆಯಾದರೂ

ಸಹ ಹಬ್ಬಹರಿದಿನಗಳಲ್ಲಿ ಒಂದೇ ಕಡೆ ಸೇರಲಾಗುತ್ತಿತ್ತು ಆ ಸಂಭ್ರಮವೇ ಬೇರೆಯಾಗಿತ್ತು. ಪ್ರೀತಿ, ಮಮತೆ, ಸಹೋದರತೆ, ಹೊಂದಾಣಿಕೆ ಎಲ್ಲವೂ ಒಂದಾಗುತ್ತಿತ್ತು ದೊಡ್ಡವರು ಹೋದ ಮೇಲೆ ಛಿದ್ರವಾದ ಕುಟುಂಬಗಳಾದವು. ಅವರಲ್ಲಿ ಬೇಕಾಬಿಟ್ಟಿಯಾದ ಸಂಬಂಧಗಳೇ ಅಧಿಕ. ಕೆಲಸ ಇದ್ದಾಗ ಮಾತ್ರ ಬಂದು ಮಾತನಾಡಿಸುವುದು ಇಲ್ಲವಾದರೆ ನಾವ್ಯಾರೋ ಅವರ್ಯಾರೋ ಎಂಬ ರೀತಿಯಿರುತ್ತದೆ ಇಂದಿನ ಕುಟುಂಬಗಳ ಪರಿಸ್ಥಿತಿ.

ಸ್ವತಂತ್ರ ಅಸ್ತಿತ್ವವಿಲ್ಲದೆ ಅನ್ಯರಾಶ್ರಯದ ಹಂಗಿನರಮನೆಯ ಒಡೆಯನ ಸಂತತಿಯನ್ನು ಹೆತ್ತುಕೊಡುವ ತೊಗಲು ಚೀಲವಾದ ಹೆಣ್ಣನ್ನು ನಿರಂತರ ಕಾಲ್ಚೆಂಡಿನಂತೆ ಒದೆಯಲಾಗುತ್ತದೆ. ಹುಟ್ಟಿದ ಮನೆಯಿಂದ ಕೊಟ್ಟ ಮನೆಗೆ, ಕೊಟ್ಟ ಮನೆಯಿಂದ ಹುಟ್ಟಿದ ಮನೆಗೆ ನೂಕಲ್ಪಡುವ ಈ ಕಾಲ್ಚೆಂಡನ್ನು ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆಂದು ಕರೆಯಲಾಗಿದೆ. ಅಲ್ಲಿಯು ಸ್ವಾತಂತ್ರ್ಯವಿರುವುದಿಲ್ಲ. ಹುಟ್ಟಿದ ಮನೆಯಲ್ಲಿಯೂ ಸ್ವಾತಂತ್ರ್ಯವಿರುವುದಿಲ್ಲ. ನಡುವೆ ತೊಳಲಾಡಬೇಕಾಗುತ್ತದೆ. ಇದನ್ನು ಪುರುಷರು ಅರ್ಥ ಮಾಡಿಕೊಳ್ಳುತ್ತಿಲ್ಲ. ತಮಗೆ ಬುಟ್ಟಿ ಹೆಣೆಯಲು ಸಾಮಗ್ರಿ ಬೇಕಾದರೆ ಆಂಧ್ರದ ಕಡೆಗೆ ಹೋಗಬೇಕಾಗುತ್ತದೆ. ಅಲ್ಲಿಯೇ ೧೫ ದಿನ ಅಥವಾ ೧ ತಿಂಗಳ ಕಾಲ ಸಂಸಾರವನ್ನು ಹೂಡಬೇಕಾಗುತ್ತದೆ. ಮತ್ತೆ ತಮ್ಮ ಮನೆಗಳಿಗೆ ಬರುತ್ತಾರೆ.

ಹೆಣ್ಣು ಮನೆಗೆ ಹೊರೆ ಎಂದು ಹೆತ್ತಮಗಳನ್ನು ತಂದೆ ತಾಯಿಗಳು ಬಹಳ ದಿನಗಳವರೆಗೆ ಮನೆಯಲ್ಲಿಟ್ಟುಕೊಳ್ಳಲು ಸಿದ್ಧರಿಲ್ಲದೆ ಕನ್ಯಾದಾನಕ್ಕಾಗಿ ಹಂಬಲಿಸುವರು. ಋತುಮತಿಯಾಗಿ ೧ ತಿಂಗಳ ಒಳಗೆ ಮದುವೆ ಮಾಡಿ ಮುಗಿಸುತ್ತಾರೆ. 'ಬೆಳೆದ ಮಗಳನ್ನು ಮನೆಯಲ್ಲಿಟ್ಟುಕೊಳ್ಳುವುದೆಂದರೆ ಉಡಿಯಲ್ಲಿ ಬೆಂಕಿ ಕಟ್ಟಿಕೊಂಡಂತೆ' ಎಂದು ಹೇಳುತ್ತಾರೆ. ಮಗಳು ಮನೆಗೆ ಹೊರೆಯಾಗಿ ಕುಳಿತಿರುವುದಿಲ್ಲ. ಕೆಲಸ ಮಾಡುತ್ತಾ ಇರುತ್ತಾಳೆ. 'ಮದುವೆ ಮಾಡಿಬಿಟ್ಟರೆ ನನ್ನ ಕರ್ತವ್ಯ ಮುಗಿಯಿತು' ಎಂದು ಹೇಳುತ್ತಾರೆ. ಕೊಟ್ಟಮನೆಗೆ ಹೋದ ಹೆಣ್ಣು ತನ್ನ ಅಭಿಪ್ರಾಯಗಳನ್ನು ತೆರೆದುಕೊಳ್ಳುವುದಿಲ್ಲ. ಅಲ್ಲಿಯ ಪರಿಸ್ಥಿತಿಗಳನ್ನು ನೋಡಿಕೊಂಡು ನಡೆಯಬೇಕಾಗುತ್ತದೆ. ತವರು ಮನೆಯಲ್ಲಿ ಸ್ವಲ್ಪವಾದರೂ ಸ್ವಾತಂತ್ರ್ಯವಿದ್ದರೆ, ಕೊಟ್ಟ ಮನೆಯಲ್ಲಿ ಅವರು ಹೇಳಿದಂತೆ ನಡೆದುಕೊಳ್ಳಬೇಕು ಇಲ್ಲವಾದರೆ ವೇದನೆ, ನೋವು ಸಂಕಟ ಪಡಬೇಕಾಗುತ್ತದೆ. ಉಡಿಯಲ್ಲಿಯ ಬೆಂಕಿ ನಂದಿಸಲು ಅಗ್ನಿಶಾಮಕ ಕೇಂದ್ರಗಳೇ ಗಂಡನ ಮನೆ, ಅಗ್ನಿರಕ್ಷಕರಾಗಿ ಗಂಡ, ಗಂಡಸರು ಸಿದ್ಧರಾಗಿಯೇ ಇರುವರು. ಆದರೆ ಅದೇ ಬೆಂಕಿಯಿಂದ ಅವಳನ್ನು ಸುಡುವುದು ತಂದೆ ತಾಯಿಗಳಿಗೆ ತಿಳಿಯುವುದಿಲ್ಲ. ಏಕೆಂದರೆ ಮಗಳನ್ನು ಕಾಯುವ ಭಯದಿಂದ ಬಿಡುಗಡೆ ಹೊಂದಿದರೆ ಮಹಿಳೆಯರ ಬದುಕು ಬದಲಾಗಬೇಕೆಂದರೆ ಸ್ವತಃ ಮಹಿಳೆಯರೇ ತಮ್ಮ ತಮ್ಮ ವಿವೇಕವನ್ನೇ ಮಾನದಂಡ ಮಾಡಿಕೊಳ್ಳಬೇಕು. ಇಲ್ಲವಾದರೆ, ಹೆಣ್ಣಿಗೆ ಹೆಣ್ಣೇ ಶತ್ರು ಎಂಬುದನ್ನು ನಿಜ ಮಾಡಿದಂತಾಗುತ್ತದೆ. ಇದನ್ನು ಪರಿಹರಿಸಲು ಹೆಣ್ಣಿಗೆ ಆರ್ಥಿಕ ಸ್ವಾತಂತ್ರ್ಯ ಬೇಕಾಗಿದೆ.

ಮಹಿಳೆಯರ ವಾಸ್ತವ ಬದುಕಿನ ಮೇಲೆ ಬೆಳಕು ಚೆಲ್ಲುವ ದಾಖಲೆಗಳು ಅಪರೂಪವೆ. ಹೆಣ್ಣು

ಮಗುವಿನ ಬಾಲ್ಯವು ಸಂಪೂರ್ಣವಾಗಿ ವಿವಾಹಕ್ಕಾಗಿ ತರಬೇತಿ ಪಡೆಯುವುದರಲ್ಲೆ ಕಳೆಯುತ್ತಿತ್ತು. ತಮ್ಮ ಜಾತಿಯ, ತಮಗಿಂತಲೂ ಉತ್ತಮವಿರುವ ಸ್ಥಿತಿಗತಿಗಳನ್ನು ಹೊಂದಿದ ಸೂಕ್ತ ವರನೊಂದಿಗೆ ಅವಳ ವಿವಾಹವನ್ನು ತಾಯಿ ತಂದೆಗಳು ಮಾಡುತ್ತಿದ್ದರು. ಮದುವೆಯಾದ ಮೇಲೆ ಅವಳನ್ನು ಗಂಡನ ಮನೆಗೆ ಕಳಿಸಲಾಗುತ್ತಿತ್ತು. ಅಲ್ಲಿ ಆಕೆ ಅವರ ಸಂಪ್ರದಾಯ ಪದ್ಧತಿಗಳಿಗೆ ಹೊಂದಿಕೊಂಡು ಬಾಳಬೇಕಾಗುತ್ತಿತ್ತು. ಅವಳ ಪಾಲಿಗೆ ಗಂಡನು ದೇವಾನುದೇವತೆಗಳಿಗಿಂತಲೂ ಪರಮಶ್ರೇಷ್ಠ ದೇವನಾದ್ದರಿಂದ ಅವನನ್ನು ಆಕೆ ಹೇಗೆಯೇ ಇರಲಿ ಸಹಿಸಿಕೊಂಡು ಇರಬೇಕಾಗುತ್ತದೆ. ಅದೃಷ್ಟ ಶಾಲಿಯೆನಿಸಿದ ಹೆಣ್ಣು ಗಂಡು ಮಕ್ಕಳನ್ನು ಹೆತ್ತು ಪುನಿತಳೆನಿಸಿದರೆ, ಬಂಜೆಯಾದರೆ, ಅಧಿಕ ಹೆಣ್ಣು ಮಕ್ಕಳನ್ನು ಹೆತ್ತರೆ ಮನೆಯವರಿಂದ ನಿಂದನೆಗೆ ಒಳಗಾಗಬೇಕಾಗುತ್ತದೆ. ''ಹೆಣ್ಣು ಗಂಡಿನ ನಡುವಿನ ತಾರತಮ್ಯ ಮತ್ತು ಅಸಮಾನತೆಯೇ ಹೆಣ್ಣಿನ ಮುಂದಿರುವ ದೊಡ್ಡ ಸಮಸ್ಯೆ. ಸ್ತ್ರೀಯರು ಬಲಹೀನರು, ಬುದ್ಧಿಹೀನರು ಆದದ್ದರಿಂದ ಗಂಡು ಹೇಳಿದಂತೆ ಕೇಳಿಕೊಂಡಿರಬೇಕಾದವಳು ಎನ್ನುತ್ತಲೆ. ಪುರುಷರು ಆಕೆಯನ್ನು ಅಳಸ ತೊಡಗಿದರು. ಪುರುಷ ಪ್ರಧಾನ ಸಮಾಜದಲ್ಲಿ ವೈಜ್ಞಾನಿಕವಾಗಿಯೂ ಮಹಿಳೆಯರನ್ನು ಮೂಲೆಗುಂಪು ಮಾಡವ ಪ್ರಯತ್ನಗಳಾದವು.''[೧೭]

''ಎಲ್ಲ ಧರ್ಮಗಳಲ್ಲೂ ಪ್ರಗತಿಪರವಾದದಂಥ ಮೌಲ್ಯಗಳು ಹಾಗೂ ಆಚರಣೆಗಳು ಅಸ್ತಿತ್ವ ದಲ್ಲಿದ್ದರೂ ಅವುಗಳಿಗೆ ಹೆಚ್ಚು ಪ್ರಚಾರವಿಲ್ಲ. ಇದಕ್ಕೆ ವಿರುದ್ಧವಾಗಿ ಸ್ತ್ರೀಯನ್ನು ಎರಡನೆ ದರ್ಜೆಯ ಪ್ರಜೆಯಂತೆ ನಡೆಸಿಕೊಳ್ಳುವಂಥ ಪ್ರವೃತ್ತಿಗಳಿಗೆ ಚಾಲನೆ ಹೆಚ್ಚು. ಇಷ್ಟೇ ಅಲ್ಲ ಸ್ತ್ರೀಯರನ್ನು ಕುರಿತ ಧರ್ಮದ ಧೋರಣೆಗಳು ದ್ವಿಮುಖ ಮೌಲ್ಯಗಳನ್ನು ಪ್ರತಿಪಾದಿಸುತ್ತಿದೆ. ಒಂದೆಡೆ ಆಕೆಯನ್ನು ದೇವತೆ ಯೆಂದು ಘೋಷಿಸುವುದು ಮತ್ತೊಂದೆಡೆ ಆಕೆಯ ಮೇಲಿನ ದೌರ್ಜನ್ಯಕ್ಕೆ ಮಾನ್ಯತೆ ನೀಡುವುದು ಇದು ಧರ್ಮದಲ್ಲಿ ಅಡಗಿರುವ ವೈರುಧ್ಯಗಳಿಗೆ ಒಂದು ಉದಾಹರಣೆಯಷ್ಟೇ.''[೧೮]

ಮಹಿಳೆಯರಲ್ಲಿರುವ ಕೌಶಲ್ಯಗಳನ್ನು ವೃದ್ಧಿಸಿಕೊಳ್ಳುವ ಅವಕಾಶಗಳನ್ನು ಶಿಕ್ಷಣದಿಂದ ಪಡೆಯ ಬಹುದು. ಒಂದೆಡೆ ಆರ್ಥಿಕ ಸ್ವಾವಲಂಬನೆಗೆ ತಯಾರಿ, ಮತ್ತೊಂದೆಡೆ ಅನವಶ್ಯಕ ಅಪ್ರಯೋಜಕ ಆಚರಣೆಗಳನ್ನು ಪ್ರಶ್ನಿಸಿ ಪ್ರತಿಭಟಿಸುವ ಕಾರ್ಯಕ್ಕೆ ಮಹಿಳೆಯರನ್ನು ಸನ್ನದ್ಧರನ್ನಾಗಿಸುವುದು ಇವೆರಡು ಸಹ ಶಿಕ್ಷಣದಲ್ಲ ಏಕಕಾಲದಲ್ಲಿ ಮಾಡಬೇಕಾದಂಥ ಕಾರ್ಯಗಳು. ಪುಸ್ತಕದ ಜ್ಞಾನಭಂಡಾರ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಪ್ರಾಪಂಚಿಕ ಜ್ಞಾನಭಂಡಾರ ಎಂಬುದನ್ನು ಮಹಿಳೆಯರಿಗೆ ತಿಳಿಹೇಳಬೇಕು. 'ನಮಗೇನು ತಿಳಿಯುವುದಿಲ್ಲ' ಎಂಬ ನಕಾರಾತ್ಮಕ ತತ್ವದಿಂದ ಮಹಿಳೆಯರು ಹೊರಬಂದು 'ನಮಗೆ ಎಲ್ಲವೂ ತಿಳಿದಿದೆ' ಎನ್ನುವ ಮಾತನ್ನು ಆಡಬೇಕಾಗುತ್ತದೆ. ಅವಳಲ್ಲಿ ಆ ಭಾವನೆ ಬಂದು ಬಿಟ್ಟರೆ, ಮುಂದೆ ಭವಿಷ್ಯದ ಯೋಚನೆ ಬಗ್ಗೆ ಆಳವಾಗಿ ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಆಧುನಿಕತೆಯ ಪ್ರಭಾವದಿಂದ ಅಲ್ಪಸ್ವಲ್ಪ ಬದಲಾವಣೆಗಳಾದರೂ ಸಹ ಕೀಳರಿಮೆ ಎಂಬ ಭಾವನೆಯು ಅವರಿಂದ ಹೋಗಲು ಆಗುತ್ತಿಲ್ಲ. ವಿದ್ಯಾವಂತ ಮಹಿಳೆಯರು ತಮ್ಮ ಮುಂದಿನ ಜೀವನದ ಬಗ್ಗೆ ತೀರ್ಮಾನಿಸಲು ಮನೆಯವರ ಸಹಾಯ ಪಡೆಯಬೇಕಾಗಿದೆ. ಹಳೆಯ ರೀತಿನೀತಿಗಳಿಂದ ಹೊಸ ದಾರಿಯ ಕಡೆಗೆ

ನಡೆಯಲು ಕೆಲವರು ಮುಂದೆ ಬರುತ್ತಿದ್ದಾರೆ. ತಮ್ಮ ಹೆಣ್ಣು ಮಕ್ಕಳನ್ನು ಓದಿಸಬೇಕು. ವಿದ್ಯಾವಂತಳಾಗಿ ದೊಡ್ಡ ವೃತ್ತಿಯಲ್ಲಿ ಇರಬೇಕೆಂದು ಬಯಸುವ ಕೆಲವರಿಂದಲೇ ಹೆಣ್ಣು ಮಕ್ಕಳಲ್ಲಿಯೂ ನಗರ ಜೀವನದ ಕಡೆ ನೋಡಿ ನಾವು ಮುಂದೆ ಬರಬೇಕು ಎಂಬ ತವಕದಲ್ಲಿದ್ದಾರೆ. ತಮಗೆ ಕೈಲಾದ ಕೆಲಸಗಳನ್ನು ಮಾಡಿಕೊಂಡು ಬಂದಿದ್ದರೂ ಕಲಿತು ಮುಂದೆ ಬರಲು ಹವಣಿಸುತ್ತಿದ್ದಾರೆ. ಆದರೆ ಮನೆಯವರ ಒಪ್ಪಿಗೆ ಇಲ್ಲದೆ ಇವು ಯಾವುವೂ ನಡೆಯುವುದಿಲ್ಲ. ಬುದ್ಧಿವಂತರಾದವರು ಮುಂದೆ ಬರಲು ಸಹಕರಿಸುತ್ತಾರೆ. ಸ್ವಾವಲಂಬನೆಯ, ಸ್ವಾಭಿಮಾನದ ಬದುಕಿಗೆ ಶಿಕ್ಷಣ ಪಡೆಯಲು ಸ್ತ್ರೀಯರನ್ನು ತಯಾರು ಮಾಡಿದಾಗ ಮಾತ್ರ ಆ ಮಹಿಳೆ ಸಬಲಳಾಗಲು, ಮುಂದೆ ಬರಲು ಅನುಕೂಲವಾಗುತ್ತದೆ. ಪೂರ್ವಗ್ರಹ ಕಲ್ಪನೆಗಳನ್ನು ಬಿಡಬೇಕಾಗುತ್ತದೆ.

ಸ್ತ್ರೀಯರಿಗೂ ಸಮಾನ ಆಸ್ತಿ ಹಕ್ಕು ಬೇಕು ಎಂಬ ವಿಷಯದ ಬಗ್ಗೆ ಕೆಲವು ಮಹಿಳೆಯರು ಪರೋಕ್ಷವಾಗಿ ಕೇಳಿದ್ದಾರೆ. ಗಂಡನ ಮನೆಗೆ ಹೋದವಳು ಮತ್ತೆ ಯಾಕೆ ಆಸ್ತಿ ವಿಷಯ ಎಂದು ಗದರಿಸುತ್ತಾರೆ. ಆದರೆ ಆಸ್ತಿಯ ಹಕ್ಕಿಗಾಗಿ ನಡೆಸುವ ಹೋರಾಟ ವರದಕ್ಷಿಣೆಯ ವಿರುದ್ಧದ ಹೋರಾಟಕ್ಕೆ ಪರ್ಯಾಯ ಅಲ್ಲ. ಇದು ಗಂಡನ ಮನೆಯಲ್ಲಿ ಕಂಡುಬರುವ ಎಷ್ಟೋ ಅಸಹಜ ಸಾವುಗಳು ವರದಕ್ಷಿಣೆಯ ಸಾವುಗಳೆಂದು ಹೆಣ್ಣಿನ ಮನೆಯವರು ಆರೋಪಿಸುವುದು ಸತ್ಯ. ಆದರೆ ಗಂಡನ ಮನೆಯಲ್ಲಿ ಹೆಣ್ಣಿನ ಮೇಲೆ ನಡೆಸುವ ಯಾವುದೇ ರೀತಿಯ ದೌರ್ಜನ್ಯಗಳು ಆ ಕುಟುಂಬದಲ್ಲಿ ಗಂಡು ಹೆಣ್ಣಿನ ನಡುವೆಯಿರುವ ಆರ್ಥಿಕ ಅಸಮಾನತೆಯಿಂದಾಗಿಯೇ ಉಂಟಾಗುವಂತವು. ಇಂದು ಸಾವಿರಾರು ರೂಪಾಯಿ ದುಡಿಯುವ ಮಹಿಳೆಯು ಸಹ ಗಂಡನ ಮನೆಯ ದೌರ್ಜನ್ಯದಿಂದ ಮುಕ್ತವಾಗಿಲ್ಲ. ಹಾಗೆಯೇ ಅವರೇ ದುಡಿದು ಸ್ವಂತ ಹಣದಿಂದ ಖರ್ಚು ಮಾಡುವುದಕ್ಕೂ ಗಂಡನ ಅನುಮತಿ ಬೇಕಾಗುತ್ತದೆ. ವಿದ್ಯಾವಂತ ಮಹಿಳೆಯರು ಇದ್ದರೂ ಸಹ ಗಂಡನ ಅಧಿಕಾರದಂತೆ ನಡೆದುಕೊಳ್ಳುತ್ತಾ ಇರುವುದು ಕಾಣುತ್ತೇವೆ.

ಆರ್ಥಿಕ ಸಂಪನ್ಮೂಲಗಳು ಪುರುಷನ ಕೈವಶದಲ್ಲೆ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಮಹಿಳಾ ಅಭಿವೃದ್ಧಿ ಎಂಬುದು ಸಂಪೂರ್ಣವಾಗಿ ಹಗಲುಗನಸಾಗಿಯೇ ಉಳಿಯುತ್ತದೆ. ಬಹಳಷ್ಟು ಸಂದರ್ಭಗಳಲ್ಲಿ ಕುಟುಂಬದ ಆದಾಯವನ್ನು ಹೇಗೆ ಖರ್ಚು ಮಾಡಬೇಕೆನ್ನುವ ವಿಚಾರದಲ್ಲಿ ಪುರುಷರೇ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಕೆಲಸ ಮಾಡದೆ, ಗಳಿಕೆಯಿಲ್ಲದೆ ಮತ್ತು ಅವಲಂಬಿತವಾದ ಮಹಿಳೆಯು ಕುಟುಂಬದ ಆರ್ಥಿಕ ವಿಚಾರದಲ್ಲಿ ತಲೆ ಹಾಕಿದರೆ ದುಡಿಯುವವನು 'ನಾನು ನಿನಗೇಕೆ?' ಎಂದು ಪ್ರಶ್ನಿಸುತ್ತಾರೆ. 'ನೀನು ದುಡಿದು ಹಾಕುವೆಯಾ' ಎಂದು ಪ್ರಶ್ನಿಸುತ್ತಾನೆ. ಕೆಲವು ಮಹಿಳೆಯರು ಆರ್ಥಿಕ ವಿಚಾರದಲ್ಲಿ ಸಹಭಾಗಿಯಾಗಿರುತ್ತಾರೆ.

ನಿಜವಾಗಿ ಹೇಳಬೇಕಾದರೆ ಮಹಿಳೆಯರು ಪುರುಷರ ಗುಲಾಮರಾಗಿದ್ದಾರೆ. ಮಹಿಳೆಯನ್ನು ಮಕ್ಕಳನ್ನು ಹೆರುವ ಮತ್ತು ಗಂಡನಿಗೆ ಸೇವೆ ಮಾಡುವ ಹಾಗೂ ಲೈಂಗಿಕ ಭೋಗದ ವಸ್ತುವನ್ನಾಗಿ ಬಳಸಲಾಗುತ್ತದೆ. ಒಬ್ಬಳು ಹೆಣ್ಣು ಮಗಳು ದುಡಿದು ಬಂದ ಹಣದಿಂದ ಸಂಸಾರದ ಜವಾಬ್ದಾರಿಯನ್ನು

ತನ್ನ ಮೇಲರಿಸಿಕೊಳ್ಳುತ್ತಾಳೆ. ಗಂಡನಾದವನಿಗೆ ಸಂಸಾರದ ಜವಾಬ್ದಾರಿ ಇದ್ದರೂ ಸಹ ಕುಡಿತ, ಜೂಜಾಟಕ್ಕೆ ಶರಣಾಗುತ್ತಾನೆ. ಸೂಳೆಯರಿಗೆ ಇಡುತ್ತಾನೆ. ಕುಟುಂಬವನ್ನು ನಿರ್ಲಕ್ಷದಿಂದ ಕಾಣುತ್ತಾನೆ. ಮನಬಂದಂತೆ ಬಳಸುವುದು, ದುಂದುವೆಚ್ಚ ಮಾಡುವದರಿಂದ ಯಾವುದೇ ಹೆಣ್ಣಿಗೆ ಮನೆಖರ್ಚು ಯಾವ ರೀತಿ ಮಾಡಬೇಕು ಎಂಬ ಪ್ರಶ್ನೆ ಕಾಡುತ್ತಿರುತ್ತದೆ. ಭವಿಷ್ಯದ ಚಿಂತೆಯೇ ಇಲ್ಲದೇ ಬದುಕುತ್ತಿರುವುದು, ಇನ್ನು ಕೆಲವರು ಮಾತ್ರ ಜವಾಬ್ದಾರಿಯುತವಾಗಿ ಸಂಸಾರವನ್ನು ಸುಗಮವಾಗಿ ನಡೆಸಿಕೊಂಡು ಹೋಗುವುದು ಕಾಣಬಹುದು.

ಮಹಿಳೆಯರೇ ಸಮೃದ್ಧ ಜನಪದ ಸ್ಹಾಹಿತ್ಯವನ್ನು ಉಳಸಿಕೊಂಡು ಬಂದವರು. ಜನಪದ ಕಥೆ, ಕಥನಗೀತೆ, ಒಗಟು, ಒಡಪು, ಗಾದೆ ಹಬ್ಬಗಳು, ಆಚರಣೆ ಹಾಡುಗಳು ಇವೆಲ್ಲ ಮಹಿಳೆಯರ ನೆನಪಿನ ಉಗ್ರಾಣದಲ್ಲಿ ಸುರಕ್ಷಿತವಾಗಿ ಉಳದುಬಂದಿದೆ. ಬೆಳಗಿನಿಂದ ಸಂಜೆಯವರೆಗೆ ಜನಪದ ಸಾಹಿತ್ಯವನ್ನು ಬಳಸುತ್ತಿರುತ್ತಾರೆ. ಜೀವಂತವಾಗಿಸಿದವರು ಬಹಳ ಮಟ್ಟಿಗೆ ಮಹಿಳೆಯರೆ ಎಂದು ಹೇಳಬೆಕಾಗುತ್ತದೆ. ಸಂಸ್ಕೃತಿಯ ಬಲೆಯಲ್ಲಿ ಮಹಿಳೆಯು ಬಲಿಯಾಗುತ್ತಿರುವುದು ಉದಾಹರಣೆಗೆ ಮಹಿಳೆಯು ಆಧುನಿಕತೆಯಲ್ಲಿ ಕಾಲಿಟ್ಟರೂ ಸಹ ಎದುರು ಮಾತನಾಡದೆ ಸುಮ್ಮನೆ ಇರಬೇಕೆಂದು ನಿರ್ಬಂಧವನ್ನು ಪುರುಷ ಸಮಾಜಕ್ಕೆ ಹಾಕಲಾಗಿದೆ.

ಮಹಿಳೆ ಎಲ್ಲಿರಬೇಕು, ಎಲ್ಲಿರಬಾರದು, ಹೇಗಿರಬೇಕು ಹೇಗಿರಬಾರದು, ಯಾರೊಡನೆ ಮಾತಾಡಬೇಕು ಮಾತನಾಡಬಾರದು, ಯಾವ ಕೆಲಸ ಮಾಡಬೇಕು ಮಾಡಬಾರದು, ಯಾವ ಬಟ್ಟೆ ತೊಡಬೇಕು ತೊಡಬಾರದು ಎನ್ನುವಲ್ಲಿಂದ ಹಿಡಿದು ಯಾವ ಮಗುವನ್ನು ಹೆರಬೇಕು, ಎಷ್ಟು ಮಕ್ಕಳನ್ನು ಹೆರಬೇಕು ಎನ್ನುವ ಆಯ್ಕೆರಹಿತ ಸ್ಥಿತಿಗೆ ತಳ್ಳಿದ್ದಾರೆ. ಕುಟುಂಬದಲ್ಲಿ ಹೆಣ್ಣಾಗಲು ಆಕೆಗೆ ತರಬೇತಿ ನೀಡಲಾಗುತ್ತದೆ ಹೊರತು ಅವಳಲ್ಲಿ ಆತ್ಮ ವಿಶ್ವಾಸವನ್ನು ಹುಟ್ಟಿಸುವ ಮತ್ತು ಹಕ್ಕುಗಳ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ನಡೆಯುತ್ತಿಲ್ಲ. ತನ್ನ ಬದುಕಿನ ಹಾಗೂ ಹಕ್ಕುಗಳ ಬಗೆಗೆ ಪೂರ್ಣ ಕುರುಡಾಗಿರುವ ಮಹಿಳೆ ಪ್ರಶ್ನಿಸುವ ಪ್ರಜ್ಞೆ ಹಾಗೂ ಪ್ರತಿಭಟಿಸುವ ಧೈರ್ಯ ಎರಡನ್ನು ಕಳೆದುಕೊಂಡಿರುತ್ತಾಳೆ. ಏಕೆಂದರೆ ಶಿಕ್ಷಣದ ಕೊರತೆಯಿಂದ ಅವಳಿಗೆ ಇವುಗಳ ಬಗ್ಗೆ ತಿಳುವಳಿಕೆ ಇಲ್ಲದಿರುವುದು ಇದಕ್ಕೆಲ್ಲ ಕಾರಣ ಎಂದು ಹೇಳಬಹುದು. ಮಹಿಳೆಯು ತನ್ನ ಜೀವನವೆಲ್ಲಾ ಗಂಡನ ಆದರ್ಶದ ನೆಲೆಯಲ್ಲಿಯೇ ಇರಬೇಕಾಗುವ ಪರಿಸ್ಥಿತಿ ಉಂಟಾಗಿದೆ. ಈ ರೀತಿಯಿಂದ ಮಹಿಳೆಯರ ದೌರ್ಜನ್ಯ ಮತ್ತು ದಮನಗಳು ನಿರಂತರ ನಡೆಯುತ್ತಲಿರುತ್ತವೆ. ಮಹಿಳೆಯು ಕುಟುಂಬದೊಳಗಿನ ಎಲ್ಲಾ ದುಡಿಮೆ ಜವಾಬ್ದಾರಿಗಳನ್ನು ನಿರ್ವಹಿಸುತ್ತಲೇ ದುಡಿಮೆಯನ್ನು ಮಾಡಬೇಕಾದ ಅನಿವಾರ್ಯಕ್ಕೆ ಸಿಲುಕಿದ್ದಾಳೆ. ಇದರಿಂದ ಅವಳಿಗೆ ದುಪ್ಪಟ್ಟು ಕೆಲಸ, ಒತ್ತಡ ಹೊರೆ ಬೀಳುತ್ತದೆ.

''ಸಮಾಜ ರಚನೆಯಲ್ಲಿ ಕುಟುಂಬವು ಒಂದು ಪ್ರಭಾವಶಾಲಿ ಸಂಸ್ಥೆಯಾಗಿತ್ತು. ಆರ್ಥಿಕ, ರಾಜಕೀಯ, ಸಾಮಾಜಿಕ, ನೆಲೆಗಳಲ್ಲಿ ಕುಟುಂಬದ ಪಾತ್ರ ಮಹತ್ವದ್ದಾಗಿತ್ತು. ಉತ್ಪಾದನೆ, ಉದ್ಯೋಗ, ಶಿಕ್ಷಣ, ವೃತ್ತಿ ಮೊದಲಾದ ಎಲ್ಲಾ ಪ್ರಮುಖ ನೆಲೆಗಳಲ್ಲೂ ಕುಟುಂಬದ ಅಸ್ತಿತ್ವವು ಇಂದು ಕ್ಷೀಣವಾಗಿ

ಬಿಟ್ಟಿದೆ. ಇಂದಿನ ಉತ್ಪಾದನಾ ಮಾದರಿಯ ಕುಟುಂಬವನ್ನು ಪ್ರತ್ಯೇಕ ಚಿಕ್ಕ ಚಿಕ್ಕ ಘಟಕಗಳನ್ನಾಗಿ ಒಡೆದು ಬಿಟ್ಟಿದೆ. ಇದರ ಪರಿಣಾಮವೆಂದರೆ ಕುಟುಂಬವು ಈಗ ಒಂದು ಸಾಮಾಜಿಕ ಶಕ್ತಿಯಾಗಿ ಉಳಿದಿಲ್ಲ. ಇದರ ನೇರ ಪರಿಣಾಮ ಬಹುಮಟ್ಟಿಗೆ ಹೆಣ್ಣಿನ ಮೇಲೆ ಬಿದ್ದಿದೆ. ಅವಳ ಮುಖ್ಯ ನೆಲೆಯ ಮೇಲೆ ಆದ ಈ ಆಕ್ರಮಣದಿಂದಾಗಿ ಅವಳು ಒಂಟಿತನ, ಅರಕ್ಷೆ, ಬೇಸರ ಮೊದಲಾದ ಆತಂಕಗಳಿಗೆ ಸಿಲುಕುತ್ತಿದ್ದಾಳೆ."[೧೯]

ಮಹಿಳೆಯರು ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದಕ್ಕಾಗಿ ಕೆಲಸ ಮಾಡುವಂತಹ ಸ್ಥಳಗಳಲ್ಲಿ ತಮ್ಮ ಮಕ್ಕಳನ್ನು ಪೋಷಣೆ ಮಾಡಲು. ಶಿಶುವಿಹಾರಗಳು ಮತ್ತು ವಿಶ್ರಾಂತಿಗಾಗಿ ವಸತಿನಿಲಯ ಇಲ್ಲದೆ ಇರುವುದರಿಂದ ತನ್ನ ದುಡಿಮೆಯ ಸಮಯದಲ್ಲಿ ಸಹ ಶಿಶುವಿನ ಕಡೆ ಅತಿ ಹೆಚ್ಚಿನ ಗಮನವಿರಬೇಕಾಗುತ್ತದೆ. ಪಿತೃಪ್ರಧಾನ ಕುಟುಂಬ ವ್ಯವಸ್ಥೆಯು ಸ್ಥಾಪನೆಯಾಗಿ ಕುಟುಂಬದಲ್ಲಿ ಹೆಣ್ಣು ಗಂಡಿಗೆ ತಾರತಮ್ಯ ಮಾಡಲು ಪ್ರಾರಂಭಿಸುತ್ತದೆ. ಕುಟಂಬದಲ್ಲಿ ತಂದೆಗೆ ಹೆಣ್ಣು ಗಂಡುಗಳಿಬ್ಬರೂ ಮಕ್ಕಳಾದರೂ ಸಹ ಅವನು ಮಗನಿಗೆ ಮಾತ್ರ ತಾನು ಸಂಪಾದಿಸಿದಂತಹ ಚರ ಮತ್ತು ಸ್ಥಿರಾಸ್ತಿಯು ಸೇರಿದ್ದೆಂದು ಮತ್ತು ಇವನು ತಮ್ಮ ವಂಶವನ್ನು ಅಭಿವೃದ್ಧಿಪಡಿಸುವವನು, ನಮ್ಮ ವಂಶದ ಕುಡಿಯೆಂದು ಗೌರವದಿಂದ ಕಾಣಲು ಪ್ರಾರಂಭಿಸುತ್ತಾನೆ. ಆದರೆ ಅದೇ ಹೆಣ್ಣು ಮಗುವಿಗೆ ಇವಳು ಪರರ ಮನೆಯ ಸೊತ್ತು, ಇವಳಿಗೇಕೆ ಜವಾಬ್ದಾರಿಯುತವಾದ ಕೆಲಸಗಳು ಇವಳೇನಿದ್ದರೂ ತನ್ನ ಅಧಿಕಾರವನ್ನು ತನ್ನ ಗಂಡನ ಮನೆಯಲ್ಲಿ ಚಲಾಯಿಸಬೇಕು ಎನ್ನುವ ಪಿತೃಪ್ರಧಾನತೆಯ ಚಿಂತನೆಯಿಂದ ಅವಳಿಗೆ ಆಸ್ತಿಯಲ್ಲಾಗಲಿ, ಅಧಿಕಾರದಲ್ಲಾಗಲಿ ಭಾಗವಹಿಸಲು ಅವಕಾಶವನ್ನು ಕೊಡುವುದಿಲ್ಲ. ಆದರೆ ಅವನು ಪುರುಷನಾಗಿರುವುದರಿಂದ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಿರುತ್ತಾರೆ. ದುಡಿಯುವವರಲ್ಲಿ ಮಹಿಳೆಯರ ಪ್ರಮಾಣವು ಬಹಳಷ್ಟು ಕಂಡುಬರುತ್ತದೆ.

ಕೊರವ ಸಮುದಾಯದಲ್ಲಿ ಮಹಿಳೆಯರು ಎದುರಿಸುತ್ತಿದ್ದ ಜ್ಞಾನ, ಅನಕ್ಷರತೆ ಪರಿಹರಿಸಬಹುದಾದ ರೋಗರುಜಿನಗಳು, ನಿರ್ಮೂಲನ ಮಾಡಬಹುದಾದ ಬಡತನ, ಮತ್ತೆ ಮತ್ತೆ ಬಸಿರಾಗುವ ಒತ್ತಡ, ಅಪ್ರಾಪ್ತ ವಯಸ್ಸಿನ ಸಾವುಗಳು ಹಾಗೂ ಅವಕಾಶಗಳು ಧಾರಣಶಕ್ತಿಗಳಿಗೆ ಸಂಬಂಧಿಸಿದ ಅಸಮಾನತೆಗಳು ಒಂದಲ್ಲ ಒಂದು ರೂಪದಲ್ಲಿ ಇಂದಿಗೂ ಮುಂದುವರಿಯುತ್ತಿವೆ. ಮಹಿಳೆಯರು ಎದುರಿಸುತ್ತಿರುವ ಎಲ್ಲಾ ಬಗೆಯ ಸಾಮಾಜಿಕ, ಆರ್ಥಿಕ ರಾಜಕೀಯ ಹಾಗೂ ಸಾಂಸ್ಕೃತಿಕ ದುಸ್ಥಿತಿ, ತಾರತಮ್ಯ, ಅನನುಕೂಲ ಹಾಗೂ ಸಂಕೋಲೆಗಳಿಗೆ ಪ್ರಧಾನವಾದ ಪರಿಹಾರ ಸಾಧಾರಣವೆಂದರೆ ಮಹಿಳೆಯರ ಸಬಲೀಕರಣ ಎಂಬುದು ತಿಳಿದುಬರುತ್ತದೆ.

ಸಮಾಜದಲ್ಲಿ ಪುರುಷರಂತೆಯೇ ಮಹಿಳೆಯರು ಕಾರ್ಯಸಾಧನೆ ಮಾಡಬಲ್ಲರು. IAWS (Indian association For women's studies, silver Jubile conference) ಲಕ್ನೋದಲ್ಲಿ ನಡೆದ ಕಾರ್ಯಕ್ರಮವು ಬಹಳ ಮಟ್ಟಿಗೆ ಮಹತ್ವವಾಗಿ ಕಂಡುಬಂದಿತು. ಈ ಕಾರ್ಯಕ್ರಮದಲ್ಲಿ ಒಟ್ಟು ಭಾರತದ ಮಹಿಳೆಯರನ್ನು ಒಟ್ಟುಗೂಡಿಸುವುದು, ಅವರ ಸಮಸ್ಯೆಗಳು, ವಿದ್ಯಾಭ್ಯಾಸ, ಉನ್ನತ

ಶಿಕ್ಷಣ, ಸಾಮಾಜಿಕ ರಂಗ, ರಾಜಕೀಯ ರಂಗದಲ್ಲಿ ಬದುಕುವ ಸ್ಥಿತಿಗತಿಗಳನ್ನು ತಿಳಿಸುವುದರ ಜೊತೆಗೆ ಮನವರಿಕೆ ಮೂಡಿಸಿದರು. ಧೈರ್ಯದಿಂದ ಮಹಿಳೆಯರು ಮುಂದಿನ ಹೆಜ್ಜೆ ಇಡುವುದಕ್ಕೆ ಪ್ರೇರೇಪಿಸಿದರು.

ಅನುಕರಣ ಭಾವವು ಮಾನವನಿಗೆ ಜನ್ಮದ ಆರಂಭದಿಂದಲೇ ಒದಗಿ ಬರುವ ವಿಶಿಷ್ಟ ಗುಣವಾಗಿದೆ. ತಂದೆಯಂತೆ ಮಗ, ತಾಯಿಯಂತೆ ಮಗಳು, ಗುರುವಿನಂತೆ ಶಿಷ್ಯ ಎಂಬ ಮಾತುಗಳು ಕೇಳುತ್ತೇವೆ. ದೊಡ್ಡವರಿಂದ ಚಿಕ್ಕವರು ಅನೇಕ ಅಭ್ಯಾಸಗಳನ್ನು ಕಲಿಯುವುದು ರೂಢಿ. ತಾಯಿ ಮಾಡುವಂತೆ ಬುಟ್ಟಿ ಹೆಣೆಯುವುದು, ಬುಟ್ಟಿ ವ್ಯಾಪಾರ, ಪಾತ್ರೆ ವ್ಯಾಪಾರ, ಹಣ್ಣು ವ್ಯಾಪಾರ, ಕೂದಲ ಪಿನ್ನು ವ್ಯಾಪಾರ ಮಾಡುವುದನ್ನು ಹೆಣ್ಣು ಮಕ್ಕಳು ಕಲಿಯುತ್ತಾರೆ. ಅದೇ ವಿದ್ಯಾವಂತರಾದ, ಬುದ್ಧಿವಂತ, ತಿಳುವಳಿಕೆ ಇರುವ ಕುಟುಂಬದಲ್ಲಿ ಮಕ್ಕಳನ್ನು ಶಾಲೆ ಕಾಲೇಜಿಗೆ, ಉನ್ನತ ವ್ಯಾಸಂಗಕ್ಕೆ ಕಳುಹಿಸುತ್ತಾರೆ. ತಾಯಿ ಅನಕ್ಷರಸ್ಥಳಾದರೂ ಬುದ್ಧಿವಂತಿಕೆಯಿಂದ, ಪರಿಸರದ ಪ್ರಭಾವದಿಂದ ಮಕ್ಕಳನ್ನು ವಿದ್ಯಾವಂತರಾಗಿ ಮಾಡಲು ಪ್ರಯತ್ನಿಸುತ್ತಾರೆ. ಪ್ರಯತ್ನಿಸಿ ಫಲವನ್ನು ಪಡೆದಿದ್ದಾರೆ. ಇಂತವರು ಕೆಲವರು ಮಾತ್ರ ಕಂಡುಬರುತ್ತಾರೆ.

ತಂದೆಯಂತೆ ಮಕ್ಕಳು ವಾಲಗ ಊದುವುದು, ಪಾತ್ರೆ ವ್ಯಾಪಾರ ಮಾಡುವುದು ಕೆಲಸವಿಲ್ಲವೆಂದರೆ ಮನೆಯಲ್ಲಿ ಹರಟೆ ಹೊಡೆಯುವುದು, ಇಲ್ಲವೇ ನಿದ್ದೆ ಮಾಡುವುದು, ಊರೂರು ಸುತ್ತಾಡುವುದು ಕಂಡುಬರುತ್ತದೆ. ಮಹಿಳೆಯರನ್ನು ತಪ್ಪು ಒಪ್ಪು ನೋಡದೇ ಹೊಡೆಯುವುದು, ನಿಂದಿಸುವುದು ಕಂಡುಬರುತ್ತದೆ. ಇದೇ ಬುದ್ಧಿಯನ್ನು ನೋಡಿ ಮಕ್ಕಳು ಸಹ ಅದೇ ಹಾದಿ ಹಿಡಿಯುತ್ತಾರೆ. ಎಷ್ಟೋ ವಿದ್ಯಾವಂತರಾದರೂ ಮಹಿಳೆಯನ್ನು ಹಿಂಸಿಸುವುದು ಬಿಟ್ಟಿಲ್ಲ.

ಗಂಡು ಹೆಣ್ಣುಗಳು ಪರಸ್ಪರ ಮೆಚ್ಚಿಕೊಂಡು ಮದುವೆಯಾಗುವ ಪದ್ಧತಿ ಇತ್ತೀಚಿನದು. ಹಳ್ಳಿಯ ಹೆಣ್ಣುಮಗಳು ಹಿಂದಿನಂತೆಯೇ ತನ್ನ ತಾಯಿ, ತವರನ್ನು ಅತಿಯಾಗಿ ಹಚ್ಚಿಕೊಳ್ಳದಿದ್ದರೆ ಆಶ್ಚರ್ಯವೇನಲ್ಲ. ಆದರೆ ಹಿಂದಿನ ವಾತಾವರಣವೇ ಬೇರೆ. ಹಿಂದೆಲ್ಲಾ ಕುಟುಂಬಗಳ ಹಿರಿಯ ಮನೆತನದ ಗುಣ ಹಾಗೂ ಕೊನೆಯದಾಗಿ ಹಣವಂತಿಕೆಯನ್ನು ಪರಿಗಣಿಸಿ ಮನೆಗೆ ಹೆಣ್ಣು ಕೊಡುತ್ತಿದ್ದರು. ಅಲ್ಲಿಂದ ಹೆಣ್ಣು ತರುತ್ತಿದ್ದರು. ಗಂಡಿಗೆ ಹೆಣ್ಣು ನೋಡುವ, ಲಗ್ನ ನಿಶ್ಚಯ ಮಾಡುವ, ಓಡಾಡಿಕೊಂಡು ಮದುವೆ ಮಾಡುವ ಜವಾಬ್ದಾರಿಯಲ್ಲ ಮನೆಯ ಯಾಜಮಾನಿಯರದಾಗಿತ್ತು. ಹೆಣ್ಣು ಮೊದಲು ಗಂಡನನ್ನು, ಅತ್ತೆಯ ಮನೆಯಲ್ಲಿ ನೋಡಿರುವುದಿಲ್ಲ. ಸಹಜವಾಗಿಯೇ ಅಪರಿಚಿತ ಮನೆಯಲ್ಲಿ ತುಂಬ ಭಯಭೀತಿ, ಸಂಕೋಚಗಳಿಂದ ಗಂಡನ ಮನೆಯಲ್ಲಿ ಬಾಳಬೇಕಾಗಿತ್ತು. ಅತ್ತೆ ಮಾವ, ಗಂಡನ ಬಗೆಗೆ ತುಂಬಾ ಸಲಹೆಯಿಂದ ಮಾತನಾಡುವಂತಿಲ್ಲ. ಇಂಥ ವಾತಾವರಣವು ಇತ್ತಿಗೂ ಇರುವುದು ಕಾಣುತ್ತೇವೆ.

ಮಹಿಳೆಯರಿಗೆ ತವರಿನ ವ್ಯಾಮೋಹ ವಿಪರೀತ, ಹಬ್ಬ ಹುಣ್ಣಿಮೆಗಳಿಗೆ ತಮ್ಮ ತವರುಮನೆಯವರು ಬಂದು ಕರೆದುಕೊಂಡು ಹೋಗುತ್ತಾರೆ ಎಂಬ ಆಸೆ ಸಾಯುವವರೆಗೂ ಇರುತ್ತದೆ. ಸ್ವರ್ಗಕ್ಕೆ

ಹೋಗುತ್ತಿರುವವರ ಸ್ಥಿತಿಗೆ ಅವರ ಸ್ಥಿತಿಯನ್ನು ಹೋಲಿಸಬಹುದು. ಏಕೆಂದರೆ ಗಂಡನ ಮನೆಯಲ್ಲಿ ಲಾಭವಾಗದ ಸೌಲಭ್ಯ ತಾಯಿಮನೆಯಲ್ಲಿ ಸುಲಭವಾಗುತ್ತದೆ. ಅಲ್ಲಿ ಅಪರೂಪವಾದುದು ಇಲ್ಲಿ ಧಾರಾಳವಾಗುತ್ತದೆ. ನಿರ್ಭಯವಾಗಿ ನಕ್ಕು ನಲಿಯುತ್ತಾ, ಗೆಳತಿಯರೊಡನೆ ಸುಖದುಃಖಗಳನ್ನು ತೋಡಿಕೊಳ್ಳುತ್ತ, ತನ್ನ ತಾಯಿಯ ಕಡೆಯಿಂದ ಬೇಕಾದದ್ದನ್ನು ಪಡೆದು, ಬೇಡವಾದನ್ನು ನಿವಾರಿಸಿ ಕೊಳ್ಳುತ್ತಾ ನಾಲ್ಕು ದಿನಗಳ ಕಾಲ ಸ್ವತಂತ್ರವಾದ ಹಕ್ಕಿಯಂತೆ ಕಾಲ ಕಳೆಯುವ ಅವಕಾಶವಿರುತ್ತದೆ. ತಾಯಿಯನ್ನು ಕಂಡರೆ ಎಲ್ಲಿಲ್ಲದ ಪ್ರೇಮ, ಒಲವು ವಿಶ್ವಾಸ ಹೆಣ್ಣು ಮಕ್ಕಳಲ್ಲಿರುತ್ತದೆ.

ಸಂಪ್ರದಾಯ ಮತ್ತು ಮೂಢನಂಬಿಕೆಗಳು ನಮ್ಮ ಜನಜೀವನದಲ್ಲಿ ಹಾಸುಹೊಕ್ಕಾಗಿರುವಷ್ಟು ಬೇರೆ ಯಾವುದೂ ಇರಲಾರದು. ಮೂಢನಂಬಿಕೆಗಳಿಗೆ ಮುಖ್ಯ ಕಾರಣ ವಿಚಾರಶೂನ್ಯತೆ. ವಿವೇಚನಾ ಶಕ್ತಿ ಇದ್ದರೂ ಸಹ ಸಂಪ್ರದಾಯ ಅವರನ್ನು ಬೆಂಬಿಡದ ಭೂತದಂತೆ ಕಾಡುತ್ತಿರುತ್ತದೆ. ರೂಢಮೂಲ ವಾಗಿ ಬೆಳೆದುಬಂದಿರುವ ಸಂಪ್ರದಾಯಗಳಿಂದ ದೂರ ಸರಿಯುವುದು ಅವುಗಳನ್ನು ಪ್ರಶ್ನಿಸುವುದೂ ಅವರಿಗೆ ವ್ಯಂಗ್ಯಪ್ರಶ್ನೆಯಾಗುತ್ತದೆ. ಅದರಿಂದ ದೂರ ಬರಲು ಅನೇಕ ವರ್ಷಗಳೇ ಬೇಕಾಗುತ್ತದೆ.

ಕೌಟುಂಬಿಕ ಸುಖ ದುಃಖಗಳಿಗೆ ಮಹಿಳೆಯೇ ಕಾರಣ ಎಂದು ಹೇಳುತ್ತಾರೆ. ಆದರೆ ಅವರ ಹಿಂದಿನ ಮರ್ಮವನ್ನು ತಿಳಿದವರ್‍ಯಾರು. ಕುಟುಂಬದ ಒಡೆತನ ಪುರುಷರೇ ಆಗಿರದೇ ಮಹಿಳೆಯು ಅವನು ಹೇಳಿದ ಹಾಗೆ ನಡೆದುಕೊಳ್ಳಬೇಕಾಗುತ್ತದೆ. ಪುರುಷ ತಪ್ಪು ಮಾಡಿದರೆ ಹೆಂಡತಿಯು ಎದುರು ಹೇಳದೇ ಸಹಿಸಿಕೊಂಡು ಹೋಗಬೇಕಾಗುತ್ತದೆ. ಅದೇ ಹೆಣ್ಣು ತಪ್ಪು ಮಾಡಿದರೆ ಊರಿಗೆಲ್ಲ ತಿಳಿಯುವಂತೆ ಮಾಡಿಬಿಡುತ್ತಾರೆ. ಪುರುಷ ಪ್ರಧಾನ ಸಮಾಜದಲ್ಲಿ ಪುರುಷರು ಧೋರಣೆಗಳೇ ಅಧಿಕವಾಗಿ ಕಂಡುಬರುತ್ತದೆ.

ಹೆಂಗಸು ಹುಟ್ಟಿದ ಮನೆಯಲ್ಲಿ ಮಗಳಾಗಿ, ಸೋದರಿಯಾಗಿ, ಬಾಲ್ಯ ಹರೆಯದ ದಿನಗಳನ್ನು ಕಳೆಯುತ್ತಿರುವಾಗಲೂ ಸೇರುವ ಮನೆಯಲ್ಲಿ ಹೇಗೆ ಇರಬೇಕೆಂಬ ತರಬೇತಿಯಲ್ಲಿಯೇ ಬೆಳೆಯುತ್ತಾಳೆ. ತಾಯಿಮನೆಯಲ್ಲೂ, ಅತ್ತೆ ಮನೆಯಲ್ಲೂ ಅಲ್ಲಿನ ಪುರುಷ, ಸದಸ್ಯರ ಜೊತೆಗಿನ ಸಂಬಂಧಗಳ ನೆರಳನ್ನು ಅವಲಂಬಿಸಿರುವುದು ಅವಳ ಬದುಕಾಗುತ್ತದೆ. ತನ್ನ ಹಕ್ಕುಗಳ ಬಗ್ಗೆ ಎಂದೂ ಕೂಡ ಆಲೋಚನೆ ಮಾಡುವುದಿಲ್ಲ. ಮಹಿಳೆಯು ತಾನು ನಿರ್ವಹಿಸಬೇಕಾದ ಬಾಧ್ಯತೆ, ಕರ್ತವ್ಯಗಳನ್ನು ಕುರಿತು ಮಾತ್ರವೇ ಚಿಂತಿಸುತ್ತಿರುತ್ತಾಳೆ. ಸಮಾಜವೇ ಆಗಲಿ, ಕುಟುಂಬವೇ ಆಗಲಿ ಅವಳು ಈ ದಾರಿಯಲ್ಲಿ ನಡೆದರೆ ಅವಳನ್ನು ಸಮಾಜದಿಂದ ಬಹಿಷ್ಕಾರ ಮಾಡುತ್ತಾರೆ ಇಲ್ಲವೇ ಹೀನಾಯವಾಗಿ ನೋಡಲಾಗುತ್ತದೆ. ಮಹಿಳೆಯನ್ನು ಕುಟುಂಬದ ಕಣ್ಣು ಎಂದು ಹೇಳಲಾಗುತ್ತದೆ. ಆದರೆ ಆ ಕಣ್ಣಿಗೆ ನೋವು ಆದರೆ ಸಹಿಸುವವಳು ಹೆಣ್ಣು ತಾನೇ, ಆದ್ದರಿಂದ ಹೆಣ್ಣಿನ ಕಣ್ಣಿಗೆ ನೋವು ಆಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ, ಜವಾಬ್ದಾರಿ ಆಗಿರುತ್ತದೆ.

ಮಹಿಳೆಯು ತನ್ನೆಲ್ಲಾ ಸಂಸಾರದ ಭಾರ ಹೊತ್ತು, ಮುಂಜಾನೆಯಿಂದ ಸಂಜೆಯವರೆಗೆ ದುಡಿದು, ದಿನನಿತ್ಯದ ಮನೆಯ ಕೆಲಸಗಳನ್ನು ಪೂರೈಸಿ, ಮಕ್ಕಳು ಮರಿಗಳನ್ನು ಸಂತೈಸುವ ಸೌಮ್ಯತೆಯ

ಸಾಕಾರಮೂರ್ತಿಯಾಗಿದ್ದಾಳೆ. ಹೆಣ್ಣು ಸಂಸಾರದ ಸುಖದ ಸಾಧನವಾಗಿ, ಅದರ ಕೇಂದ್ರ ಬಿಂದುವಾಗಿ ನಿಲ್ಲುತ್ತಾಳೆ. ಅವಳ ಸುತ್ತ ಬಾಂಧವ್ಯದ ಬಲೆ ಹೆಣೆದುಕೊಳ್ಳುತ್ತವೆ. ಸಂಸಾರ, ಸಂತಾನ, ಸಂಮೃದ್ಧಿ, ನಲಿವು ದುಃಖ ಎಲ್ಲವೂ ಮಹಿಳೆಯಿಂದಲೇ. ಅವಳು ತನ್ನ ಅಕ್ಕ ಪಕ್ಕದ ಓರಗಿತ್ತಿಯ ಜೊತೆ, ಅತ್ತಿಗೆ ನಾದಿನಿಯರ ಜೊತೆಯಲ್ಲಿ ದುಡಿಯುತ್ತಾ ಸಹಕಾರ ಭಾವನೆಯಿಂದ ತನಗರಿವಿಲ್ಲದಂತೆಯೇ ಅಳವಡಿಸಿಕೊಂಡು ಬಂದ ಕೆಲಸವನ್ನು ಸಂತೋಷದಿಂದ ನಿಭಾಯಿಸುತ್ತಾಳೆ. ಜೊತೆ ಜೊತೆಯಾಗಿ ಕೆಲಸ ಮಾಡಿದರೆ ಅದರ ದಣಿವೇ ತಿಳಿಯುವುದಿಲ್ಲ. ಮಹಿಳೆಯರು ತಮ್ಮ ಮನೆಯ ಮುಂದೆ ಮತ್ತು ಮರದ ಕೆಳಗೆ ಕುಳಿತು ಬುಟ್ಟಿ ಹೆಣೆಯುವ, ಕಸಬರಿಗೆ ಕಟ್ಟುವ, ಕೈತೋಟದಲ್ಲಿ ತರಕಾರಿ ಬೆಳೆಸುವ, ಕೋಳಿ ಕುರಿ ಸಾಕುವ ಮೊದಲಾದ ಕೆಲಸಗಳನ್ನು ಮಾಡುವುದರಲ್ಲಿಯೇ ಸಮಯ ಕಳೆಯುತ್ತಿದ್ದಳು. ಆದರೆ ಇಂದಿನ ದಿನಗಳಲ್ಲಿ ಮನೆಯಲ್ಲಿ ಒಬ್ಬಳೇ ಇರುವುದರಿಂದ ಸಮಯ ಹೋಗುವುದಿಲ್ಲ. ಕೆಲಸ ಕಾರ್ಯಗಳು ನಿಧಾನವಾಗಿ ನಡೆಯುತ್ತವೆ. ಅದೇ ಭಾರವಾಗುತ್ತದೆ. ತಮ್ಮ ಮುಖ್ಯಕಸುಬು ಕಡಿಮೆ ಯಾಗುತ್ತಿರುವುದು ಕಾಣುತ್ತೇವೆ.

''ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮಪಡಿಸುವ ಬಗ್ಗೆ ಲಕ್ಷ್ಯ ವಹಿಸಿದ ಸುಧಾರಣಾವಾದಿಗಳ ಪಟ್ಟಿಯಲ್ಲಿ ರಾಜಾಮೋಹನ್‌ರಾಯ್(೧೭೭೨-೧೮೩೩)ರ ಹೆಸರು ಮೊದಲಿಗೆ ಬರುತ್ತದೆ. ಚರಿತ್ರೆಕಾರರು ಆತನನ್ನು ಆಧುನಿಕ ಇಂಡಿಯಾದ ಪಿತಾಮಹನೆಂದೂ ಮಹಿಳೆಯರ ಹಕ್ಕುಗಳ ನೇತಾರರೆಂದೂ ಸ್ತ್ರೀವಾದಿಯೆಂದೂ ಕರೆದಿದ್ದಾರೆ. ಆದರೆ ವಾಸ್ತವದ ಬದುಕಿನಲ್ಲಿ ಮಹಿಳೆಯರೊಂದಿಗೆ ಆತನು ಹೊಂದಿದ್ದ ಸಂಬಂಧಗಳು ಮಾತ್ರ ಈ ಆದರ್ಶದಿಂದ ಬಹುದೂರವೆನಿಸುವಂಥವು. ಆತನನ್ನು ಒಂಬತ್ತನೆಯ ಮಯಸ್ಸಿನಲ್ಲಿ ಒಮ್ಮೆ, ಹತ್ತನೆಯ ವಯಸ್ಸಿನಲ್ಲಿ ಇನ್ನೊಮ್ಮೆ ಮತ್ತು ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಮತ್ತೊಮ್ಮೆ ಹೀಗೆ ಮೂರು ಬಾರಿ ಮದುವೆಯಾದವರು. ಅವರ ಮೊದಲ ಪತ್ನಿ ಮದುವೆಯಾದ ಹೊಸದರಲ್ಲಿ ಸಾವಿಗೀಡಾದರು. ಎರಡನೆಯವರು ೧೮೨೪ರಲ್ಲಿ ತೀರಿಹೋದರು. ಮೂರನೆಯಾಕೆ ಇವರ ನಂತರವೂ ಜೀವಿಸಿದ್ದರು. ತನ್ನ ಪತ್ನಿಯರನ್ನು ಸಂಗಾತಿಗಳೆಂದು ಆತ ಭಾವಿಸಿದ್ದನೆಂಬುದಕ್ಕೆ ಆಧಾರಗಳೇನಿಲ್ಲ. ಆತನ ದತ್ತುಪುತ್ರ ರಾಜಾರಾಮನು ವಿವಾಹೇತರವಾಗಿ ಸಂಬಂಧವಿಟ್ಟುಕೊಂಡಿದ್ದ ಒಬ್ಬ ಮುಸ್ಲಿಂ ಮಹಿಳೆಯ ಮಗನೇ ಎಂಬ ವದಂತಿಗಳು ಕಂಡುಬಂದವು.''[೨೦]

ಭಾರತವು ಮತ್ತು ಇನ್ನಿತರ ರಾಷ್ಟ್ರಗಳು ಮಹಿಳೆಯರ ಸ್ಥಿತಿಗತಿಗಳ ಅಧ್ಯಯನವನ್ನು ಕೈಗೊಳ್ಳುವ ಸಲುವಾಗಿ ಆಯೋಗಗಳನ್ನು ರಚಿಸಿದವು. ವಿಶ್ವಸಂಸ್ಥೆಯ ೧೯೭೫ನ್ನು ಅಂತಾರಾಷ್ಟ್ರೀಯ ಮಹಿಳಾ ವರ್ಷವೆಂದೂ, ೧೯೭೫-೮೫ನ್ನು ಮಹಿಳಾ ದಶಕವೆಂದೂ ಘೋಷಿಸಿತು. ಆದರೆ ಈ ಸಮುದಾಯದಲ್ಲಿ ಇವು ಇನ್ನೂ ಏನೆಂದು ತಿಳಿದುಕೊಳ್ಳಲೂ ಆಗುತ್ತಿಲ್ಲ. ಓದಿದವರು ಸಹ ಇದರ ಬಗ್ಗೆ ತಿಳಿದುಕೊಳ್ಳುವ ಗೋಜಿಗೂ ಹೋಗುತ್ತಿಲ್ಲ. ಆ ರೀತಿ ಸಮುದಾಯದಲ್ಲಿ ಪುರುಷರ ಅಧೀನದಲ್ಲಿ ಒಳಗಾಗಿರುವುದು ಕಂಡುಬರುತ್ತದೆ. ಪಿತೃಪ್ರಧಾನ ವ್ಯವಸ್ಥೆಗಳಿರುವಲ್ಲಿ ಸ್ವತಃ ಪುರುಷರು ಬದಲಾವಣೆಯ ಆಗಮನವನ್ನು ಬಯಸಿ ಪ್ರಯತ್ನಿಸಿದ ಹೊರತು ಮಹಿಳೆಯರಿಗೆ ಯಾವುದೇ ಅವಕಾಶಗಳ ಬಾಗಿಲು ತೆರೆಯುವುದು ಕಷ್ಟ ಸಾಧ್ಯ ಎಂದು ಹೇಳಬಹುದು.

ಅಡಿ ಟಿಪ್ಪಣಿಗಳು

೧. ಗೋಸಂಗಿ ಸಮುದಾಯ ಒಂದು ಅಧ್ಯಯನ, ಮಾರುತಿ ವಿ.ಎಸ್. ಪು. ೨೮

೨. ಅದೇ. ಪು. ೨೦೬

೩. ಭಾರತೀಯ ಸಾಮಾಜಿಕ ಸಂಸ್ಥೆಗಳು, ಎಂ. ನಂಜಮ್ಮಣ್ಣಿ, ಪು. ೨೮೪

೪. ದಲಿತರ ಬದುಕು ಮತ್ತು ಸಂಸ್ಕೃತಿ, ಡಾ. ಅರ್ಜುನ ಗೊಳಸಂಗಿ, ಪು. ೨೦೪

೫. ಅದೇ. ಪು. ೨೦೫

೬. ಅದೇ. ಪು. ೨೦೮

೭ ಅದೇ. ಪು. ೨೦೯

೮. ಮಾಹಿತಿದಾರರು: ಹನುಮಂತಪ್ಪ (೮೦) ವೃಧ್ಯಾಪ, ಕಂಪ್ಲಿ

೯. ಮಾಹಿತಿದಾರರು: ಹುಲಿಗೆಮ್ಮ (೫೮) ಪಾತ್ರೆ ವ್ಯಾಪಾರ, ಕೂಡ್ಲಿಗಿ

೧೦. ಮಾಹಿತಿದಾರರು: ಭೀಮಪ್ಪ (೮೦) ಕೃಷಿಕೂಲಿ, ಕಮಲಾಪುರ

೧೧. ಹೆಣ್ಣಿನ ಸ್ಥಾನಮಾನ ಪುನರಾವಲೋಕನ, ಎಚ್. ಜಯಮ್ಮ ಕರಿಯಣ್ಣ, ಪು. ೧೮

೧೨. ಮಾಹಿತಿದಾರರು: ಪದ್ಮ (೩೯) ಸಣ್ಣ ವ್ಯಾಪಾರ, ಬಳ್ಳಾರಿ

೧೩. ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಆರ್. ಇಂದಿರಾ, ಪು. ೧೨

೧೪ ಹೊನ್ನೂರು, ಮಾಸ ಪತ್ರಿಕೆ, ಪ್ರೋ. ಹಿ.ಚಿ. ರಾಮಚಂದ್ರೇಗೌಡ, ಜುಲೈ ೨೦೦೭, ಪು. ೩೩

೧೫. ದಕ್ಷಿಣ ಕರ್ನಾಟಕದ ಜಾನಪದ ಕಾವ್ಯ ಪ್ರಕಾರಗಳು, ಜಿ.ಶಂ. ಪರಮಶಿವಯ್ಯ ಪು. ೭೦

೧೬. ಹೊನ್ನೂರು ಮಾಸಪತ್ರಿಕೆ, ನಾಲ್ಕನೇ ಸಂಪುಟ. ಪ್ರೋ. ಹಿ.ಚಿ ರಾಮಚಂದ್ರೇಗೌಡ ಪು. ೩೪

೧೭. ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ, ಸಾರಾ ಅಬೂಬಕ್ಕರ್, ಪು. ೬೮

೧೮. ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಆರ್. ಇಂದಿರಾ, ಪು. ೯೯

೧೯. ಚಹರೆ, ಎಚ್.ಎಂ. ಶ್ರೀಮತಿ, ಪು. ೪೪

೨೦. ಆಧುನಿಕ ಭಾರತದಲ್ಲಿ ಮಹಿಳೆಯರು, ಡಾ. ಎಚ್.ಎಚ್. ಶ್ರೀಮತಿ, ಪು. ೧೬

ಅಧ್ಯಾಯ – ೬

ಉಪಸಂಹಾರ

ಅಧ್ಯಾಯ ಆರು

ಉಪಸಂಹಾರ

ಕೊರವರ ಸಮುದಾಯದ ಮಹಿಳೆ ಎಂಬ ಈ ಪ್ರಬಂಧವು ಒಟ್ಟು ಆರು ಅಧ್ಯಾಯಗಳನ್ನೊಳಗೊಂಡಿದೆ.

ಮೊದಲನೆ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವವನ್ನು ತಿಳಿಸಲಾಗಿದೆ. ಭಾರತದ ಅನೇಕ ಬುಡಕಟ್ಟು ಸಮುದಾಯದಲ್ಲಿ ಒಂದಾದ ಕೊರವ ಸಮುದಾಯ ತಮ್ಮ ಬದುಕಿನ ವೈವಿಧ್ಯತೆಯಿಂದಾಗಿ ಅತೀ ಪ್ರಾಚೀನ ಕಾಲದಿಂದಲೂ ಜನಮನ ಸೆಳೆಯುತ್ತಾ ತಮ್ಮದೇ ಆದ ಕಟ್ಟುಪಾಡುಗಳೊಂದಿಗೆ ಬದುಕುತ್ತಾ ಬಂದಿದ್ದಾರೆ. ಇವರ ಮೂಲ ಸ್ವರೂಪ ಮತ್ತು ಜಾನಪದದ ಅಂಶಗಳು ಕಾಲಾಂತರದ ಸಾಮಾಜಿಕ ಬದಲಾವಣೆಗಳಿಂದಾಗಿ ದಿನದಿಂದ ದಿನಕ್ಕೆ ಮರೆಯಾಗುತ್ತಾ ಹೋಗುತ್ತದೆ. ಆದ್ದರಿಂದ ಪ್ರತಿಯೊಂದು ಬುಡಕಟ್ಟಿನ ಮಾನವಶಾಸ್ತ್ರ ಮತ್ತು ಸಂಸ್ಕೃತಿಯ, ಮಹಿಳೆಯರ ಅಧ್ಯಯನಗಳು ಇಂದು ಅಗತ್ಯವಾಗಿ ಬೇಕಾಗುತ್ತದೆ ಎಂದು ಹೇಳಬೇಕಾಗುತ್ತದೆ. ಈ ದೃಷ್ಟಿಯಿಂದ ಸಮುದಾಯದ ಮಹಿಳೆಯ ಜೀವನ ಕ್ರಮದ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಅವಲೋಕಿಸಿ ಅವರ ಬದುಕಿನ ಬಗ್ಗೆ ಅಭ್ಯಸಿಸಲಾಗಿದೆ. ಕಾರಣ ಇಂದು ಹೊಸ ಸಮಾಜವೊಂದನ್ನು ರೂಪಿಸುವ ಹಿನ್ನೆಲೆಯಲ್ಲಿ ಅದಕ್ಕೆ ಬೇಕಾದ ಮೌಲ್ಯವನ್ನು ಇಂದಿನ ಸಮಾಜ ಅಧ್ಯಯನದಿಂದ ರೂಢಿಸಿಕೊಳ್ಳಬೇಕಾಗಿದೆ.

ಈ ಹಿಂದೆ ನಡೆದ ಅಧ್ಯಯನದ ಪ್ರಕಾರ ಇದುವರೆಗೆ ಸಮುದಾಯದ ಮೇಲೆ ಕಡಿಮೆ ಅಧ್ಯಯನಗಳು ಮಾತ್ರ ನಡೆದಿದೆ. ಈ ಹಿಂದಿನ ಅಧ್ಯಯನಗಳ ದೃಷ್ಟಿಕೋನ ಪುರುಷಪ್ರಧಾನತೆಗೆ ಬೆಲೆ ಕೊಟ್ಟು, ಪ್ರತಿಯೊಂದು ಹಂತದಲ್ಲಿ ಸಂಶೋಧನೆ ನಡೆದು ಅಲಂಕರಿಸುತ್ತದೆ. ಆದರೆ ಈ ಸಮುದಾಯದ ಮಹಿಳೆಯ ಸ್ಥಿತಿಗತಿಗಳ ಬಗ್ಗೆ ಅವಳ ಸ್ಥಾನಮಾನಗಳ ಬಗ್ಗೆ ಸಂಶೋಧನೆ ಇನ್ನೂ

ನಡೆದಿಲ್ಲ. ಈ ಸಮುದಾಯದ ಮಹಿಳೆಯರು ಶೈಕ್ಷಣಿಕವಾಗಿ ಹಿಂದೆ ಉಳಿದಿದ್ದಾರೆ ಎಂಬುದನ್ನು ತಿಳಿಸಲಾಗಿದೆ. ಮಾನವ ಸಮಾಜದ ಮಾನವ ನಿರ್ಮಾಣದ ಕಾರ್ಯದಲ್ಲಿ ಮಹಿಳೆಯ ಪಾತ್ರ ಮುಖ್ಯವಾದದ್ದು.

ಪ್ರಾಥಮಿಕ ಆಕರವಾಗಿ, ಅವಶ್ಯಕತೆಗಾಗಿ ನನ್ನ ಅಧ್ಯಯನದ ವ್ಯಾಪ್ತಿಯನ್ನು ಕರ್ನಾಟಕದ ಬಳ್ಳಾರಿ ಜಿಲ್ಲೆಗೆ ಸೀಮಿತ ಮಾಡಿಕೊಂಡಿದ್ದೇನೆ. ಕೊರವ ಮಹಿಳೆಯರ ಕುರಿತು ಇದುವರೆಗೂ ಯಾವುದೇ ಅಧ್ಯಯನಗಳು ನಡೆದಿಲ್ಲ. ಆದ್ದರಿಂದ ಮಹಿಳೆಯರ ಬಗೆಗೆ ಹಲವು ದೃಷ್ಟಿಕೋನಗಳಿಂದ ಇಂತಹ ಒಂದು ಅಧ್ಯಯನವು ಅನಿವಾರ್ಯವಾಗುತ್ತದೆ. ನನಗೆ ದೊರೆತ ಕ್ಷೇತ್ರಕಾರ್ಯದ ಮಾಹಿತಿಯಿಂದ ಕೊರವ ಸಮಾಜದ ಭಾಷಿಕ, ಸಾಹಿತ್ಯಿಕ, ಶೈಕ್ಷಣಿಕ ಇತ್ಯಾದಿಯಾಗಿ ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಅಧ್ಯಾಯವು ಮಹಿಳೆಯರ ಆರ್ಥಿಕ, ಸಾಮಾಜಿಕ, ಸ್ಥಿತಿಗತಿಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಕೊರವರ ಸ್ಥೂಲ ಪರಿಚಯವನ್ನು ನೀಡಲಾಗಿದೆ. ಯಾವ ಯಾವ ವಿದ್ವಾಂಸರು ಇವರ ಬಗೆಗೆ ಮಾಹಿತಿಯನ್ನು ನೀಡಲಾಗಿದೆ ಎಂಬುದನ್ನು ತಿಳಿಸಲಾಗಿದೆ. ಜೊತೆಗೆ ಪೌರಾಣಿಕವಾಗಿ ದೊರೆಯುವ ಕಥೆಗಳು ಮತ್ತು ಐತಿಹ್ಯಗಳನ್ನು ಇಲ್ಲಿ ನೋಡಬಹುದು. ಈ ಸಮುದಾಯದವರು ಇತರ ಜನಾಂಗದ ಜೊತೆಗೆ ಬೆರೆಯದೇ ತಮ್ಮ ಪ್ರತ್ಯೇಕತೆಯನ್ನು ಕಾಪಾಡಿ ಕೊಂಡಿದ್ದಾರೆ. ಇವರಲ್ಲಿ ಅನುಸರಿಸಿದ ಜೀವನ ವಿಧಾನ, ಆಡುತ್ತಿರುವ ಭಾಷೆ ಮತ್ತು ಜಾನಪದ ಸಂಸ್ಕೃತಿಗೆ ಕೊಟ್ಟ ಕೊಡುಗೆ ಆಗಿದೆ.

ಮಹಿಳೆಯರ ಸ್ಥಾನಮಾನ, ಸಂಸ್ಕೃತಿ, ಧರ್ಮಗಳಲ್ಲಿ ಯಾವ ರೀತಿಯಲ್ಲಿ ಆಚರಣೆಯಲ್ಲಿವೆ ಎಂದು ತಿಳಿಸಲಾಗಿದೆ. ಸಮುದಾಯದವರು ತಮ್ಮ ಪೂರ್ವಜರ ಆಚಾರ, ವಿಚಾರ, ಸಂಪ್ರದಾಯ, ನಂಬಿಕೆ, ರೂಢಿಗಳಿಂದ ಸ್ವಲ್ಪ ಬದಲಾವಣೆಯನ್ನು ಕಾಣಬಹುದು. ಎಲ್ಲವೂ ಬದಲಾವಣೆಯಾಗಿಲ್ಲ. ಸ್ತ್ರೀಯರು ಪುರುಷರಂತೆ ಕೆಲಸ ಕಾರ್ಯಗಳಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ.

ಮೂರನೇ ಅಧ್ಯಾಯದಲ್ಲಿ ಕೊರವರ ಆಚರಣೆಗಳು, ರೂಢಿ, ಸಂಪ್ರದಾಯಗಳು, ಬೆಡಗುಗಳು ಮುಖ್ಯವಾಗುತ್ತದೆ. ಈ ಸಮುದಾಯದಲ್ಲಿ ಬಾಲ್ಯ ವಿವಾಹಗಳೇ ಅಧಿಕವೆಂದು ಹೇಳಬೇಕಾಗುತ್ತದೆ. ಇಲ್ಲಿಂದಲೇ ಅವಳಿಗೆ ಆಚಾರ-ವಿಚಾರಗಳ ಬಗೆಗೆ ತಿಳುವಳಿಕೆ ಮೂಡುತ್ತಾ ಹೋಗುತ್ತದೆ. ಮಹಿಳೆಯರ ಆಚರಣೆ ಸಂಪ್ರದಾಯಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಹಬ್ಬ ಹರಿದಿನಗಳು, ನಿಷೇಧಗಳು, ನಂಬಿಕೆಗಳು ಇಲ್ಲಿ ಮುಖ್ಯವಾಗುತ್ತವೆ.

ನಾಲ್ಕನೇ ಅಧ್ಯಾಯದಲ್ಲಿ ಸಮುದಾಯದ ಆರ್ಥಿಕ ವ್ಯವಸ್ಥೆಯ ಬಗೆಗೆ ತಿಳಿಸಲಾಗಿದೆ. ಮಹಿಳೆಯರು ಎಷ್ಟೇ ದುಡಿದರೂ ಸಹ ಅವರ ಹಣ ಗಂಡನ ಕೈಗೆ ಹೋಗಬೇಕಾಗುತ್ತದೆ. ಆದರೆ ಜೀವನದ ಬದುಕಿಗೆ ಯಾವ ರೀತಿ ನಿರ್ವಹಣೆ ಮಾಡಬೇಕೆಂಬುದು ಚಿಂತೆಯ ವಿಚಾರವಾಗಿದೆ. ಹಚ್ಚೆ, ಕೊರವಂಜಿ, ಪಾತ್ರೆ ವ್ಯಾಪಾರ, ಬಟ್ಟೆ ವ್ಯಾಪಾರ, ಹಣ್ಣಿನ ವ್ಯಾಪಾರ, ಸೂಜಿ ಪಿನ್, ಕೂದಲ

ವ್ಯಾಪಾರ ಮೊದಲಾದವುಗಳನ್ನು ಮಾಡಲಾಗುತ್ತದೆ. ವರ್ಷ ಪೂರ್ತಿ ಒಂದಲ್ಲ ಒಂದು ಕೆಲಸದಲ್ಲಿ ತೊಡಗಿರುತ್ತಾಳೆ. ಸಂಸಾರವನ್ನು ಮುನ್ನಡೆಸುವ ದೃಷ್ಟಿಯಿಂದ ಗಂಡ-ಹೆಂಡಿರು ಇಬ್ಬರು ದುಡಿದರೂ ಇಂದಿನ ದಿನಗಳಲ್ಲಿ ಕೊರವ ಮಹಿಳೆಯು ಸಂಸಾರದ ಜವಾಬ್ದಾರಿಯನ್ನು ನಿರ್ವಹಿಸಲು ಹರ ಸಾಹಸ ಮಾಡಬೇಕಾಗುತ್ತದೆ. ಗಂಡಸರು ಸಂಪಾದಿಸಿದ ಹಣದಲ್ಲಿ ಅರ್ಧಭಾಗವನ್ನು ತನ್ನ ಖರ್ಚುಗಳಿಗೆ ಇಟ್ಟುಕೊಳ್ಳುತ್ತಾರೆ. ವ್ಯಾಪಾರ ಮಾಡಿ ಬಂದ ಹಣದಿಂದ ಕುಡಿತಕ್ಕೆ ಖರ್ಚುಮಾಡುತ್ತಾರೆ. ವಿದ್ಯಾವಂತರೂ ಸಹ ತಮ್ಮ ಕುಟುಂಬದ ಜವಾಬ್ದಾರಿಗಳನ್ನು ಸ್ವಲ್ಪಮಟ್ಟಿಗೆ ನೋಡಿಕೊಂಡು ಹೋಗುವುದುಂಟು. ಇವರು ಇತ್ತ ಸಂಪೂರ್ಣವಾಗಿ ನಾಗರಿಕತೆಯ ತುದಿಯಲ್ಲಿ ಗ್ರಾಮೀಣ ಸಂಸ್ಕೃತಿ ಯನ್ನು ಹೊಂದಿದ್ದು, ಬಾಹ್ಯದಲ್ಲಿ ನಾಗರಿಕತೆಯನ್ನು ಮೈಗೂಡಿಸಿಕೊಂಡಿದ್ದಾರೆ. ಅವರು ಪರಂಪರಾಗತ ವಾಗಿ ಒಂದು ಆಚರಣೆ, ನಂಬಿಕೆ, ಸಂಪ್ರದಾಯ, ಕಲೆಗಳನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಎಷ್ಟೇ ಪ್ರಭಾವ ಬೀರಿದರೂ ಸಹ ಆಚರಣೆಗಳು ನಿಂತಿಲ್ಲ. ವಾಸ್ತವ ಜಗತ್ತಿನಲ್ಲಿ ತಮ್ಮದೇ ಆದ ಸಂಸ್ಕೃತಿಯನ್ನು, ಜಾನಪದವನ್ನು ಸಂಪೂರ್ಣವಾಗಿ ಜೀವಂತವಾಗಿರಿಸಿಕೊಂಡಿದೆ ಎಂದು ಹೇಳಲಿಕ್ಕಾಗುವುದಿಲ್ಲ. ಹೆಣ್ಣನ್ನು ಶಿಕ್ಷಣ ಕ್ಷೇತ್ರದಿಂದ ಹೊರಗಿಟ್ಟುದು ಅವಳನ್ನು ಪುರುಷ ಅಧೀನವಾಗಿಸುವ ಕಾರ್ಯತಂತ್ರವೇ ಆಗಿದೆ ಎಂದು ಹೇಳಬಹುದು.

ಐದನೇ ಅಧ್ಯಾಯದಲ್ಲಿ ಆಧುನಿಕತೆಯೊಂದಿಗೆ ಕೊರವರು ಹೇಗೆ ಮುಖಾಮುಖಿಯಾಗುತ್ತಿದ್ದಾರೆ ಎಂಬುದನ್ನು ತಿಳಿಸಲಾಗಿದೆ. ಮಹಿಳೆಯರ ವರ್ತಮಾನದ ಸವಾಲುಗಳು ಮತ್ತು ಬದಲಾವಣೆಯ ತವಕದಲ್ಲಿ ಮಹಿಳೆ ಯಾವ ರೀತಿಯಲ್ಲಿದ್ದಾಳೆ ಎಂಬುದರ ಬಗೆಗೆ ಚರ್ಚಿಸಲಾಗಿದೆ.

ಕೊರವ ಸಮುದಾಯದಲ್ಲಿ ಮಹಿಳೆಯನ್ನು ನಿರ್ಲಕ್ಷದಿಂದ ನೋಡಲಾಗುತ್ತದೆ. ಎಷ್ಟೇ ವಿದ್ಯಾವಂತ ಳಾದರೂ ಸಹ ಅವಳಿಗೆ ಬೆಲೆ ಇಲ್ಲದಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಪುರುಷಪ್ರಧಾನ ಸಮಾಜವಾಗಿರುವುದರಿಂದ ಕೊರವರಲ್ಲಿಯೂ ಪುರುಷರು ೨೫% ರಷ್ಟು ವಿದ್ಯಾಭ್ಯಾಸ ಪಡೆಯಲು ಅವಕಾಶವಾಗಿದೆ ಎಂದು ಹೇಳಬೇಕಾಗುತ್ತದೆ. ಮಹಿಳೆಯರು ಮಾತ್ರ ೫% ರಷ್ಟು ಕಂಡುಬರುತ್ತಾರೆ. ಬಹಳಷ್ಟು ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಮಹಿಳೆಗೆ ಆರ್ಥಿಕ ಪ್ರಾಬಲ್ಯವಿದ್ದರೂ ಸಹ ಪುರುಷರ ವಶವಾಗುವುದು ಇಂದಿಗೂ ಕಂಡುಬರುತ್ತದೆ. ಮದುವೆ, ಶಿಕ್ಷಣ ಮೊದಲಾದವುಗಳ ಆಯ್ಕೆ ಪ್ರಶ್ನೆಯು ಮಾತ್ರ ಪುರುಷನದಾಗಿತ್ತು. ಆದರೆ ಎಲ್ಲೋ ಕೆಲವು ಮಹಿಳೆಯರು ಆರ್ಥಿಕ ಪ್ರಾಬಲ್ಯ ಇರುವುದು ಈ ಸಮುದಾಯದಲ್ಲಿ ಕಾಣಬಹುದಾಗಿದೆ. ಆದರೂ ಅದೇ ಪುರಾತನವಾದ ನಂಬಿಕೆ ಮತ್ತು ಸಂಪ್ರದಾಯಗಳಿವೆ. ಬಾಲ್ಯವಿವಾಹ ಪದ್ಧತಿಯು ಜಾರಿಯಲ್ಲಿದೆ. ಕುಲದಿಂದ ಹೊರಹಾಕುವ ಮತ್ತು ದಂಡ ವಿಧಿಸುವ ಪದ್ಧತಿಯು ಜಾರಿಯಲ್ಲಿದೆ. ಆಧುನಿಕತೆಗೆ ಹೊಂದಿಕೊಂಡು ಹೋಗುವುದಕ್ಕೆ ಅನೇಕ ವರ್ಷಗಳೇ ಬೇಕಾಗುತ್ತದೆ. ಆಧುನಿಕತೆಯ ಪ್ರಭಾವವಾಗಿರುವುದರಿಂದ ಅವರ ಕಸುಬಿನ ಮೇಲೆ ತುಂಬಾ ಪೆಟ್ಟುಬಿದ್ದಿದೆ. ಕೊರವ ಸಮುದಾಯದ ಇಂದಿನ ಮಕ್ಕಳಿಗೆ ಶಿಕ್ಷಣ ಕೊಡಲು ಮುಂದಾಗಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಮಹಿಳೆಯರು ಮತ್ತು ಕೆಲವು ಪುರುಷರು

ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಕೊಡಲು ಮುಂದಾಗುತ್ತಿದ್ದಾರೆ. ಆದರೆ ಬಡತನದ ಕಾರಣದಿಂದ ಮಕ್ಕಳಿಗೆ ವಿದ್ಯಾಭ್ಯಾಸ ಕಲಿಸಲು ಆಗುತ್ತಿಲ್ಲ ಎಂದು ಕೆಲವರು ನೋವು ತೋಡಿಕೊಳ್ಳುತ್ತಾರೆ.

ಸ್ವಸಹಾಯ ಸಂಘಗಳನ್ನು ಕಟ್ಟಿಕೊಂಡು ಹಣದ ಸಂರಕ್ಷಣೆ ಮಾಡಿಕೊಳ್ಳುತ್ತಿದ್ದಾರೆ. ಮಹಿಳೆಯರಿಂದ ಕೆಲವು ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಕೆಲವರು ಪುರುಷ ಈ ಸಮುದಾಯದಲ್ಲಿ ಮಹಿಳೆಯರಿಗೆ ಸ್ವಸಹಾಯ ಸಂಘದಲ್ಲಿ ಭಾಗವಹಿಸಲು ಅನುವು ಮಾಡಿಕೊಂಡಿದ್ದಾರೆ. ಇಲ್ಲಿ ಮುಖ್ಯವಾಗಿ ಶಿಕ್ಷಣ, ಆರ್ಥಿಕ ಅಸಹಾಯಕತೆ ಎದ್ದು ಕಾಣುತ್ತದೆ. ಸರ್ಕಾರದಿಂದ ಬರುವಂತಹ ಸೌಲಭ್ಯಗಳ ಬಗ್ಗೆ ಇವರಿಗೆ ತಿಳುವಳಿಕೆ ಅಥವಾ ಅರಿವು ಇಲ್ಲದಿರುವುದು ಕೊರವ ಮಹಿಳೆಯರಲ್ಲಿ ಎದ್ದು ಕಾಣುತ್ತದೆ.

ಇಂದಿನ ಸಮಾಜದಲ್ಲಿ ಸ್ತ್ರೀ-ಪುರುಷರಿಬ್ಬರೂ ಸರಿಸಮಾನರು ಎಂದು ಹೇಳುತ್ತಾರೆ. ಆದರೆ ಕೊರವ ಮಹಿಳೆಯರಿಗೆ ಸಮಾನತೆ ಬಗೆಗೆ ತಿಳಿಯದಿರುವುದು ಒಂದು ವಿಪರ್ಯಾಸವಾಗಿದೆ. ಅನಕ್ಷರತೆಯ ಕಾರಣದಿಂದಲೇ ಇವರು ಈ ರೀತಿಯಲ್ಲಿದ್ದಾರೆ. ವ್ಯವಹಾರ ಮಾಡುವ ತಿಳುವಳಿಕೆ ಮಾತ್ರ ಇವರಲ್ಲಿದೆ. ಕುಟುಂಬದಲ್ಲಿ ಕಲಹವಾದರೆ ಇಡೀ ಸಮುದಾಯವನ್ನೇ ಕೂಡಿಸುತ್ತಾರೆ. ಆದ್ದರಿಂದಲೇ ಹೆಣ್ಣಿನಲ್ಲಿ ಪ್ರೀತಿಯುಂಟು, ತಾಯ್ತನದ ವಾತ್ಸಲ್ಯವುಂಟು, ಸವತಿಯ ಮಾತ್ಸರ್ಯವುಂಟು, ಮೇಲಾಗಿ ಕಾಯಕವೇ ಕೈಲಾಸ ಎಂಬ ಉದಾರ ಗುಣವು ಹೆಣ್ಣಿನಲ್ಲಿದೆ. ಆದರೆ ಗಂಡನ ಅಟ್ಟಹಾಸದಿಂದ ಹೆಣ್ಣು ತನ್ನ ತಾಳ್ಮೆಯನ್ನು ಕಳೆದುಕೊಳ್ಳದೆ ಭೂಮಿ ತಾಯಿಯಂತಿದ್ದಾಳೆ. ಹೆಣ್ಣು ತಾಳ್ಮೆ ಕಳೆದುಕೊಂಡರೆ ಅಥವಾ ದುರ್ಗೆಯಾದರೆ ಭೂಕಂಪವನ್ನು ತರುವಂತಹ ಹೆಣ್ಣಿನ ಕಿಡಿಯು ಇಡೀ ಮನೆಯನ್ನೆ ಸುಟ್ಟು ಹಾಕುತ್ತದೆ. ಒಂದು ಹೆಣ್ಣಿನಿಂದ ಉದಾರವುಂಟು, ನಷ್ಟವು ಉಂಟು, ತ್ಯಾಗಕ್ಕೆ ಹೆಣ್ಣಿನಷ್ಟು ಸರಿಸಾಟಿಯಿಲ್ಲ ಎಂದು ಹೇಳಬಹುದು.

ಜಾನಪದ ಸಾಹಿತ್ಯದಲ್ಲಿ ಹೆಣ್ಣಿನ ಜೀವನವನ್ನು ಆಕೆಯ ಬಾಳಿನ ಸುಖ ದುಃಖಗಳನ್ನು ಆಸರಿಕೆ ಬೇಸರಿಕೆ ಬಯಕೆಗಳನ್ನು ಚಿತ್ರಿಸುತ್ತದೆ. ''ಶಿವನ ದೀಪಕ್ಕೆ ಎಣ್ಣೆಯಾಗಿ ಜ್ಯೋತಿ ಬೆಳಗುವಂತೆ'' ಗಂಡನ ಮನೆಯಲ್ಲಿ ಬಾಳಬೇಕೆಂದು ತಾಯಂದಿರು ಹೆಣ್ಣು ಮಕ್ಕಳಿಗೆ ಹೇಳಿ ಕಳಿಸುತ್ತಾರೆ. ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎಂಬ ಮಾತು ಪ್ರಾಣಕ್ಕಿಂತ ಮಿಗಿಲಾಗಿ ಪ್ರೀತಿಸಿದ ಮಗಳನ್ನು ಗಂಡನ ಮನೆಗೆ ಕಳಿಸುವುದಕ್ಕೆ ತಾಯಿ ಮನಸ್ಸಿಗೆ ನೋವಾಗುತ್ತದೆ. ಇನ್ನೊಂದು ಸ್ಥಿತಿಯು ಮಗಳನ್ನು ಮದುವೆ ಮಾಡಿ ಕಳುಹಿಸಿದರೆ ನಮ್ಮ ಜವಾಬ್ದಾರಿಯು ಮುಗಿಯಿತು ಎಂಬ ನೆಮ್ಮದಿಯು ತಂದೆ-ತಾಯಿಗಳಿಗಿರುತ್ತದೆ. ಇಲ್ಲವಾದರೆ ಹೆಣ್ಣು ಮಕ್ಕಳು ಮನೆಯಲ್ಲಿರುವುದು 'ಸೆರಗಿನಲ್ಲಿ ಕೆಂಡ ಇದ್ದಾಂಗೆ' ಎಂಬ ಮಾತು ಇವರಲ್ಲಿ ಇರುವುದು ಕಂಡುಬರುತ್ತದೆ. ಸಾಂಸಾರಿಕ ಜೀವನದಲ್ಲಿ ಗಂಡು ಗೆದ್ದು ಸೋಲುತ್ತಾನೆ. ಆದರೆ ಹೆಣ್ಣು ಸೋತು ಗೆಲ್ಲುತ್ತಾಳೆ. ಕೊರವರ ಮಹಿಳೆಯರು ಹಿಂದಿನಿಂದ ಇಂದಿನವರೆಗೂ ಅಸಹಾಯಕತೆಯಿಂದಲೇ ಬಾಳುತ್ತಾ ಬಂದಿರುವುದು ಕಾಣುತ್ತೇವೆ.

ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ಎಷ್ಟೋ ಸುಧಾರಿಸಿದರೂ ಸಹ ಪುರುಷರು ಮಾತ್ರ ಅಧಿಕಾರ ಚಲಾಯಿಸುತ್ತಿರುತ್ತಾರೆ. ಕುಟುಂಬದ ಜವಾಬ್ದಾರಿಯು ನಮ್ಮದು ಎಂದು ಹೇಳಲಾಗುತ್ತದೆ.

ಆದರೆ ಕುಟುಂಬದಲ್ಲಿ ಆಗುಹೋಗುಗಳಿಗೆ ಮಹಿಳೆಯೇ ಜವಾಬ್ದಾರಿಯಾಗಿರುತ್ತಾಳೆ. ಕೊರವರ ಸಮಾಜದಲ್ಲಿ ಅಧಿಕವಾಗಿ ದುಡಿಯುವವರು ಮಹಿಳೆಯರೇ ಆಗಿದ್ದಾರೆ. ಹಣ್ಣಿನ ವ್ಯಾಪಾರ, ಬಟ್ಟೆ ವ್ಯಾಪಾರ, ಕೂದಲು ವ್ಯಾಪಾರ, ಪಾತ್ರೆ ವ್ಯಾಪಾರ, ಕೃಷಿಯಲ್ಲಿ ತೊಡಗುವುದು, ಮನೆಯನ್ನು ನೋಡಿಕೊಳ್ಳುವುದು. ಇತರೆ ಬೇರೆ ಬೇರೆ ಕೆಲಸಗಳಲ್ಲಿಯೂ ಇವರನ್ನು ನೋಡಬಹುದು. ಗಂಡ ಒಂದು ಕೆಲಸಮಾಡಿದರೆ. ಹೆಂಡತಿಯು ಹಲವಾರು ಕೆಲಸಗಳಲ್ಲಿ ತೊಡಗಿಕೊಳ್ಳುವುದುಂಟು ಎಂದು ಹೇಳಬಹುದು. ಸಮಾಜದಲ್ಲಿ ಮಹಿಳೆ ದುಡಿಮೆಗೆ ಬೆಲೆ ಇಲ್ಲವಾಗಿದೆ. ದುಡಿಯುವ ಗಂಡಸು ಕೆಲಸ ಮುಗಿಸಿಕೊಂಡು ಮನೆಗೆ ಬಂದ ಮೇಲೆ ಹೆಂಡತಿಯು ಏನನ್ನಾದರೂ ಕೇಳಿದರೆ 'ಮನೆಯಲ್ಲಿರುವ ನಿನಗೇನು ಗೊತ್ತು, ನೀನು ದುಡಿದರೆ ಗೊತ್ತಾಗುತ್ತದೆ' ಎಂದು ಹೇಳುತ್ತಾರೆ. ಆದರೆ ಹೊರಗೆ ದುಡಿಯುವುದಕ್ಕೆ ಅವಕಾಶ ಕೊಡುವುದಿಲ್ಲ. ಎಲ್ಲಾ ಗಂಡಸರೂ ಇದೇ ರೀತಿಯಲ್ಲಿ ಹೇಳುವುದು ಕಾಣಬಹುದು. ಆದರೆ ಮುಂಜಾನೆಯಿಂದ ರಾತ್ರಿಯವರೆಗೆ ಇತರೆ ಕೆಲಸಗಳ ಜೊತೆಗೆ ಮನೆಯ ಜವಾಬ್ದಾರಿಯು ಮುಖ್ಯವಾಗಿರುತ್ತದೆ.

ಕುಟುಂಬದ ಜವಾಬ್ದಾರಿಯನ್ನು ಹೆಂಡತಿಯು ಹೊಂದಾಣಿಕೆ ಮಾಡಿಕೊಂಡು ಹೋಗುವುದು ಒಂದು ವರವಾಗಿದೆ. ಕುಟುಂಬವು ಶಾಂತಿಯುತವಾಗಿ ಇರಬೇಕಾದರೆ ಗಂಡ ಹೆಂಡರಲ್ಲಿ ಹೊಂದಾಣಿಕೆಯು ಮುಖ್ಯವಾಗುತ್ತದೆ. ಇಲ್ಲವಾದರೆ ಕುಂಟುಬದಲ್ಲಿ ಕಲಹಗಳು ಉದ್ಭವಿಸುವುದು ಸಹಜವಾಗಿರುತ್ತವೆ. ಒಂದು ಸಮಾಜದ ಸರ್ವಾಂಗೀಣ ಪ್ರಗತಿ ಪ್ರಕ್ರಿಯೆಯಲ್ಲಿ ಪುರುಷ ಮತ್ತು ಮಹಿಳೆಯರು ತಮ್ಮ ತಮ್ಮ ಜವಾಬ್ದಾರಿಗಳನ್ನು ಅರಿತು ಕಾರ್ಯ ನಿರ್ವಹಿಸುವುದು. ಇಂದಿನ ಆಧುನಿಕ ಜಗತ್ತಿನಲ್ಲಿ ಅನಿವಾರ್ಯವಾಗಿ ಕಂಡುಬರುವುದುಂಟು. ಒಬ್ಬರಿಗೊಬ್ಬರು ಪರಸ್ಪರ ಪೂರಕವಾಗಿ ಕಾರ್ಯ ನಿರ್ವಹಿಸಬೇಕಾಗಿದೆ. ಆಧುನಿಕ ಯುಗದಲ್ಲಿ ಪ್ರಗತಿಪರ, ಚೈತನ್ಯಶೀಲ ಬದಲಾವಣೆ ಹೊಂದುತ್ತಿರುವ ಜಗತ್ತಿನಲ್ಲಿ ಕೊರವ ಸಮಾಜದಲ್ಲಿ ಮಹಿಳೆಗೆ ಜವಾಬ್ದಾರಿಯು ಸಹಭಾಗಿತ್ವ ನೀಡಿ ಅವರಲ್ಲಿಯ ಶಕ್ತಿ ಸಾಮರ್ಥ್ಯ ಗುರುತಿಸುವ ಕಾರ್ಯ ಇವರಲ್ಲಿ ಅಷ್ಟೊಂದು ನಡೆದಿಲ್ಲ. ಮಹಿಳೆಯರು ಸಾಧಿಸಿದ ಅಲ್ಪಸ್ವಲ್ಪ ಪ್ರಗತಿಯ ಸಾಧನೆ ಗುರುತಿಸಿ ಉತ್ತೇಜನ ನೀಡುವುದು ಮತ್ತು ಪ್ರೋತ್ಸಾಹ ನೀಡುವುದು ತೀರಾ ಕಡಿಮೆ ಎಂದು ಹೇಳಬೇಕಾಗುತ್ತದೆ.

ಕರ್ನಾಟಕದಲ್ಲಿರುವ ಅನೇಕ ಜನಾಂಗಗಳಲ್ಲಿ ಕೊರವ ಜನಾಂಗವು ಒಂದು. ಪ್ರತಿಯೊಂದು ಜನಾಂಗಕ್ಕೆ ಇತಿಹಾಸ ಇರುವಂತೆ ಕೊರವ ಜನಾಂಗಕ್ಕೂ ತನ್ನದೇ ಆದ ಇತಿಹಾಸವಿದೆ. ಇಂದು ಜನಪದ ಕಲೆ, ಸಾಹಿತ್ಯ ಆಧುನಿಕ ಬದುಕಿಗೆ ಸಿಕ್ಕು ನಾಶವಾಗುತ್ತಿವೆ. ಹಾಗೆ ನಾಶವಾಗುವುದನ್ನು ತಡೆಗಟ್ಟುವ ಪ್ರಯತ್ನ ನಮ್ಮ ಮೇಲಿದೆ. ಮಹಿಳಾ ಜನಪದ ಸಾಹಿತ್ಯವನ್ನು ಸಂಗ್ರಹಿಸುವ ಅಗತ್ಯವು ಮುಖ್ಯವಾಗಿದೆ. ಇಂದು ಕೊರವರ ಕೆಲವು ವೃತ್ತಿಗಳನ್ನು ಬೇರೆಯವರು ಮಾಡುತ್ತಿದ್ದಾರೆ. ಕೊರವರ ಮಹಿಳೆಯರು ಶೇ. ೨೦%ರಷ್ಟು ಜನ ತಮ್ಮ ಕಸುಬಿನಲ್ಲಿಯೇ ಬದುಕುತ್ತಿದ್ದಾರೆ. ಇವರ ಪ್ರಗತಿಗಾಗಿ ಸರಕಾರದಿಂದ ಬಹಳಷ್ಟು ಕೆಲಸಗಳು ಆಗಬೇಕಾಗಿದೆ. ಈ ಜನಾಂಗ ಸೌಕರ್ಯಗಳಿಲ್ಲದೆ ಶೋಚನೀಯ

ಸ್ಥಿತಿಯಲ್ಲಿದೆ. ಇವರು ಕಸುಬುಗಳನ್ನು ಅವಲಂಬಿಸಿ ಬದುಕುವುದರಿಂದ ಇವುಗಳ ಪೂರಕ ಸಾಮಗ್ರಿಗಳಿಗೆ ಅರಣ್ಯದಿಂದಲೇ ತರಬೇಕಾಗುತ್ತದೆ. ಇವರಲ್ಲಿರುವ ಕೆಲವು ಕಲಾವಿದರಿಗೆ ಪ್ರೋತ್ಸಾಹ ನೀಡಬೇಕು. ಕೊರವರ ಮಕ್ಕಳು ಶಾಲೆಯ ದಾಖಲಾತಿಯಲ್ಲಿ ಕಡಿಮೆ ಇರುವುದನ್ನು ನೋಡಬಹುದು. ಅವರಿಗಾಗಿ ಅಕ್ಷರ ಆಂದೋಲನದ ವಿಶೇಷ ಯೋಜನೆ ರೂಪಿಸಬೇಕು. ಯೋಜನೆಗಳನ್ನು ರೂಪಿಸಿ ಈ ಜನರಿಗೆ ಶಿಕ್ಷಣದ ಬಗ್ಗೆ ಅರಿವು ಮೂಡಿಸಿದರೆ ಅವರು ಬದುಕಿನಿಂದ ಸ್ವಲ್ಪ ಚೇತರಿಸಿಕೊಳ್ಳಲು ಸಹಾಯಕವಾಗುತ್ತದೆ.

ಇವರಲ್ಲಿ ಬಹಳಷ್ಟು ಕೊರವರು ಹೊಲ, ಆಸ್ತಿಯನ್ನು ಹೊಂದಿರುವುದು ಅಷ್ಟಾಗಿ ಕಂಡು ಬರುವುದಿಲ್ಲ. ಕೆಲವರು ಮಾತ್ರ ಆಸ್ತಿ, ಹೊಲ ಹೊಂದಿರುವುದು ಕಾಣಬಹುದಾಗಿದೆ. ಇವರಲ್ಲಿ ರಾಜಕೀಯ ಪ್ರಜ್ಞೆ ಇನ್ನೂ ಬೆಳೆಯಬೇಕಾಗಿದೆ. ಇದನ್ನು ಅವರ ಸಂಸ್ಕೃತಿ ಜೀವನವಿಧಾನದಿಂದ ಕಂಡುಕೊಳ್ಳಬಹುದಾಗಿದೆ. ಅತಿ ಕೆಳಮಟ್ಟದ ಜೀವನ ನಡೆಸುತ್ತಿದ್ದು, ಮುಂದುವರೆದ ಜನಾಂಗಗಳ ಬೆರಳು ತೋರಿಕೆಗೆ ಗುರಿಯಾಗಿದ್ದ ಈ ಕೊರವರು ಇಂದು ಒಳ್ಳೆಯ ಅನುಕೂಲ ಹಾಗೂ ನಾಗರಿಕ ಸಮಾಜದ ಪ್ರಭಾವದಿಂದ ಜೀವನ ಮಟ್ಟದಲ್ಲಿ ಸುಧಾರಣೆಗೊಳ್ಳುತ್ತಾ ಸಮಾಜದ ಬದಲಾವಣೆಗೆ ತಕ್ಕಂತೆ ತಮ್ಮ ಜೀವನದ ವ್ಯವಸ್ಥೆಯನ್ನು ಬದಲಾಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಜೀವನದ ನಿರ್ವಹಣೆಗೆ ಅನೇಕ ವೃತ್ತಿಗಳನ್ನು ಅವಲಂಬಿಸಬೇಕಾಗುತ್ತದೆ. ಸಾಂಪ್ರದಾಯಿಕ, ಸಾಮಾಜಿಕ ಕಟ್ಟುಪಾಡು ಮತ್ತು ಕುಟುಂಬದಲ್ಲಿನ ನಿರ್ಬಂಧನೆಗಳನ್ನು ಪಾಲಿಸಬೇಕಾಗುತ್ತದೆ. ಕಷ್ಟ ಸಹಿಷ್ಣುತೆ, ನಂಬಿಕೆ ಉಳ್ಳವರು, ಅಲ್ಪ ತೃಪ್ತಿ ಬದಲಾವಣೆಗೆ ಹೊಂದಿಕೊಳ್ಳುವ ಮನೋವೃತ್ತಿಯು ಬೆಳೆಯುತ್ತಿದೆ. ಸಾಂಸ್ಕೃತಿಕ ವೈಶಿಷ್ಟ್ಯಗಳಾದ ಕಣಿ, ಹಚ್ಚೆ ಮತ್ತು ಹಗ್ಗ ಹಾಗೂ ಬುಟ್ಟಿ, ಕಸಬಾರಿಗೆ ಮಾಡುವಲ್ಲಿ ನೈಪುಣ್ಯತೆ ಉಳ್ಳವರು ಹಕ್ಕಿ, ಪ್ರಾಣಿಗಳ ಬೇಟೆಯನ್ನಾಡಲು ನೈಪುಣ್ಯತೆ ಉಳ್ಳವರು, ನಿಸರ್ಗ ಪ್ರೀಯತೆ, ಇವರಲ್ಲಿದ್ದ ವೈದ್ಯ ಪದ್ಧತಿ, ಇಂದಿಗೂ ಅಸ್ಪ ೃಶ್ಯರಾಗಿ ಬಾಳುತ್ತಿರುವುದನ್ನು ಗಮನಿಸಬಹುದು. ಸಮುದಾಯ ಆಧುನೀಕರಣದ ಮಧ್ಯದಲ್ಲಿಯೂ ತಮ್ಮ ಮೂಲದ ಈ ಅಂಶಗಳನ್ನು ಇನ್ನೂ ಉಳಿಸಿಕೊಂಡಿರುವುದು ಗಮನಾರ್ಹ. ಅನಕ್ಷರಸ್ಥರಾಗಿ ಬದುಕುತ್ತಿರುವವರಿಗೆ ಸರ್ಕಾರ ಜಮೀನು ಒದಗಿಸುವುದಲ್ಲದೆ ನೆಲೆ ನಿಲ್ಲಲು ಸರಿಯಾದ ಶಾಶ್ವತವಾದ ಪರಿಹಾರ ನೀಡುವ ಯೋಜನೆಗಳನ್ನು ರೂಪಿಸಬೇಕು. ಸಾರ್ವಜನಿಕ ಕ್ಷೇತ್ರದಲ್ಲಿ ಎಲ್ಲರೊಳಗೊಂದಾಗಿ ಬದುಕುವ ಅವಕಾಶಗಳನ್ನು ಇವರಿಗೆ ಒದಗಿಸಬೇಕಾಗಿದೆ. ಕಷ್ಟ ಸಹಿಷ್ಣುಗಳಾಗಿ ಬೆಳೆದು ಬಂದ ಕೊರಮ ಮಹಿಳೆಯರು ಮುಖ್ಯವಾಗಿ ಇತರ ಮಹಿಳೆಯರೊಂದಿಗೆ ಪ್ರಗತಿಯತ್ತ ಮುನ್ನಡೆಯಲು ವಿಶೇಷವಾದ ಶಿಕ್ಷಣ ವ್ಯವಸ್ಥೆ ಸಮಾಜೀಕರಣ ವ್ಯವಸ್ಥೆ ಆಗಬೇಕಾಗಿದೆ. ಕೈ ಕಸುಬುಗಳ ಪ್ರಾವೀಣ್ಯತೆಯ ವಿಕಾಸಕ್ಕೆ ವಿವಿಧ ಮಾರ್ಗಗಳನ್ನು ರೂಪಿಸಬೇಕು. ಅವರಿಗಾಗಿ ಸಹಕಾರಿ ಸಂಘಗಳ ವ್ಯವಸ್ಥೆ ಸರ್ಕಾರ ಇವರಿಗೆ ಮುಂದೆ ಬರಲು ಅವಕಾಶಗಳನ್ನು ಕಲ್ಪಿಸಬೇಕು. ಭಾರತದ ಸಮ್ಮಿಶ್ರ ಸಂಸ್ಕೃತಿಗೆ ಕೊರವ ಸಮುದಾಯದ ಮಹಿಳೆಯ ಕೊಡುಗೆ ಒಂದು ಅಳಲು ಸೇವೆಯಾಗುತ್ತದೆ.

* ಕೊರವ ಸಮುದಾಯದಲ್ಲಿ ಪುರುಷರು ಹೆಣ್ಣು ಮಕ್ಕಳಿಗೆ ಯಾವುದೇ ಸ್ವಾತಂತ್ರ್ಯ ನೀಡದೆ ಅವರು ತಮ್ಮ ಚಿಂತನೆಯನ್ನು ಹಾಳು ಮಾಡಿದ್ದಾರೆ.
* ಇವರು ಸಾಮಾನ್ಯವಾಗಿ ಬದುಕುವ ಹಕ್ಕುಗಳನ್ನು ಪಡೆಯಲು ನಿರಾಕರಿಸಿದೆ. (ವಾಕ್ ಸ್ವಾತಂತ್ರ್ಯ, ಶಿಕ್ಷಣ, ಸಮಾನತೆ ಇತ್ಯಾದಿ.)
* ನಗರ ಕೇಂದ್ರಿತ ಅಭಿವೃದ್ಧಿ ಮೂಲಕ ನಮ್ಮ ನೆಲೆಗಳು ಪತನಗೊಳತ್ತಾ ಹೋಗುತ್ತಿವೆ ಎಂದು ಹೇಳಬಹುದು.
* ಜನಗಳ ಅರ್ಥ ವ್ಯವಸ್ಥೆಯನ್ನು ನಾಶ ಮಾಡಿ ಕೂಲಿ ಉಳಿಸುವ ಕಂಪ್ಯೂಟರ್ ಏಕಸ್ವಾಮ್ಯದ ಅರ್ಥವ್ಯವಸ್ಥೆಯನ್ನು ಪ್ರತಿಪಾದಿಸಿದೆ.
* ಮಾನವನ ನೆಲೆಗೆ ನಂಬಿಕೆಯಾದ ನೈತಿಕತೆಯನ್ನು ಹಿಂದೆ ತಳ್ಳಿ ಶುಷ್ಕ ಸಾಮಗ್ರಿ ಜ್ಞಾನವನ್ನು ಪ್ರಧಾನ ಮಾಡುತ್ತಿದೆ.
* ಮಾತೃ ಮತ್ತು ಪಿತೃ ಸಮಾನತಾ ಸಂಸ್ಕೃತಿಯನ್ನು ಅಳಿಸಿ ಹಾಕುತ್ತ ಪಿತೃ ನಿರ್ದೇಶಿತ ಸಂಸ್ಕೃತಿಯನ್ನು ಸ್ಥಾಪಿಸುತ್ತಿದೆ.
* ಅನಾಗರಿಕ ಯುದ್ಧಗಳನ್ನು ಸೌಮ್ಯವಾಗಿ ನಾಗರಿಕಗೊಳಿಸುತ್ತಿದೆ.
* ಹಸಿರುಕ್ರಾಂತಿ, ಬಿಳಿಕ್ರಾಂತಿ ಮತ್ತು ನೀಲಿಕ್ರಾಂತಿಗಳೆಂಬ ಪರಿಸರ ನಾಶದ ಕ್ರಿಯೆಗಳ ಮೂಲಕ ಸಾಮಾನ್ಯ ಜನರು ಬದುಕುವ ನೆಲ-ನೆಲೆಯನ್ನು ಹೊಲಸು ಮಾಡುತ್ತಿದೆ.
* ಹೊಸ ಔಷಧಿಗಳ ಶೋಧನೆಗೆ ಸಮಾನವಾಗಿ ಹೊಸ ರೋಗಗಳನ್ನು ಹುಟ್ಟುಹಾಕುತ್ತಿದೆ.
* ಯಾಂತ್ರಿಕ ಮೂಲವಲ್ಲದ ಎಲ್ಲ ನೈಪುಣ್ಯಗಳು ಮಾದರಿಗಳನ್ನು ಇಲ್ಲವಾಗಿಸುತ್ತಿದೆ.
* ಬಹುಸಂಸ್ಕೃತಿಗಳ ಅಸ್ತಿತ್ವವನ್ನು ನಾಶ ಮಾಡಿ ಏಕ ಸಂಸ್ಕೃತಿಯ ಆಧಿಪತ್ಯವನ್ನು ಅನುಸರಣೆಗೆ ತರುತ್ತಿದೆ.
* ನಿಸರ್ಗ ನಮ್ಮ ನೆಲೆ ಎಂದಾಗದೆ ಕೇವಲ ಒಂದು ಸಂಪನ್ಮೂಲವಾಗಿ ಪರಿಗಣಿಸಲ್ಪಟ್ಟು ಸಂಸ್ಕೃತಿ ಮತ್ತು ನಿಸರ್ಗದ ಮಧ್ಯೆ ದೊಡ್ಡ ಯುದ್ಧವೇರ್ಪಟ್ಟಿದೆ.
* ನಾಗರಿಕತೆ ಅಥವಾ ಅಭಿವೃದ್ಧಿ ಎಂಬುದು ಅನಂತರ ಕಾಲದ ಲೂಟಿ ಮತ್ತು ಮೋಸವಾಗಿ ಪರಿಣಮಿಸಿದೆ. ಹಿ.ಶಿ. ರಾಮಚಂದ್ರೇಗೌಡ ಅವರು ಹೇಳುವುದು ನಿಜ ಸ್ಥಿತಿಯಾಗಿದೆ. (ಜಾನಪದ ವಿವಿಧ ಮುಖಗಳು ಪು. ೫೫)

ಅನುಬಂಧಗಳು

೧. ಒಗಟುಗಳು

೨. ಗಾದೆಗಳು

೩. ಹಾಡುಗಳು

೪. ಪದಕೋಶ

೫. ಪರಾಮರ್ಶನ ಗ್ರಂಥಗಳು

೬. ಬಳ್ಳಾರಿ ಜಿಲ್ಲಾವಾರು ಸಮೀಕ್ಷೆ ಮಾಡಿದ ನೆಲೆಗಳು

೭. ಮಾಹಿತಿದಾರರ ವಿವರ

೮. ಛಾಯಾಚಿತ್ರಗಳು

ಅನುಬಂಧಗಳು

೧. ಒಗಟುಗಳು

ಯಾಪಾರ - ಸಾಪಾರ ಯಾವಾಗ?
ಎದುರು ಬದರಿಗೆ ಕೂತಾಗ
ಅಳೋದು ಕರೆಯೋದು ಯಾವಾಗ?
ಅರ್ಧ ಒಳಕ್ಕೆ ಹೋದಾಗ
ನಗೋದು ನಲಿಯೋದು ಯಾವಾಗ?
ಪೂರ್ತಿ ಒಳಕ್ಕೆ ಹೋದಾಗ — ಉತ್ತರ: **ಕೈಗೆ ಬಳೆ ತೊಡಿಸುವುದು**

ಅವಳ ತರುವುದಕೆ ಹೋಗಿ
ಅವಳು ಬರುವುದ ಕಂಡು
ಮರೆಯಾಗಿ ನಿಂದು
ಅವಳು ಹೋದ ಮೇಲೆ
ಅವಳನ್ನೆ ತಂದ — ಉತ್ತರ: **ನೀರಿನ ಬಿಂದಿಗೆ**

ಅತ್ತಿ ಹೂವು ಕಂಡೆ
ಅತ್ತೆ ಹೂವು ಕಂಡೆ
ಅಮ್ಮಿ ತೂತು ಕಂಡು
ಅಲ್ಲೆ ಕೂತು ಕಂಡೆ — ಉತ್ತರ: **ಕಿವಿಯ ಬೆಂಡೋಲೆ**

ಒಂದು ಬಿದಿರು ಹೊಡೆದು ಒಂಬತ್ತು
ಸಾವಿರ ಮನೆ ಕಟ್ಟಿದನ್ನು ನೋಡಕ್ಕೆ
ಬಂದವರೆಲ್ಲ ಬೇಡಿ ಬಿದ್ರು — ಉತ್ತರ: **ಮೀನು ಹಿಡಿವ ಕೊಡವೆ**

ಕಪ್ಪು ಉಂಟು ಕಸ್ತೂರಿಯಲ್ಲ
ರೆಕ್ಕೆಯುಂಟು ಪಕ್ಷಿಯಲ್ಲ ನೀರುಂಟು ಕೆರೆಯಲ್ಲ
ಹಾಗಾದರೆ ನಾನು ಯಾರು? — ಉತ್ತರ: **ಕಣ್ಣು**

ಕಾಲುಂಟು ಕೈವುಂಟು ಮನುಷ್ಯನಲ್ಲ
ಕಣ್ಣುಂಟು ತಲೆಯುಂಟು ಬುದ್ಧಿ ಇಲ್ಲ
ಬಾಯಿಯುಂಟು ಹಲ್ಲು ಉಂಟು ತಿನ್ನುವುದಿಲ್ಲ
ಹಾಗಾದರೆ ನಾನು ಯಾರು? — ಉತ್ತರ: **ಬೊಂಬೆ**

ನಾಲ್ಕು ಪಾದಗಳುಂಟು ಗೋವು
ಮೃಗಗಳಲ್ಲ, ಎರಡು ಪದಗಳುಂಟು
ಹಕ್ಕಿ ಪಕ್ಷಿಗಳಲ್ಲ, ಮೂರು ಕಾಲಲಿ
ನಡೆದಾಗ ನನ್ನನ್ನು ಎಲ್ಲಾರು ತೆಗಳುವವರು
ಹಾಗಾದರೆ ನಾನು ಯಾರು? ಉತ್ತರ: **ವಯಸ್ಸಾದ ಮನುಷ್ಯ**

ಮಣಿಯ ಮಾಡುವವನೊಬ್ಬ
ಹೆಣೆದು ಕಟ್ಟುವವನೊಬ್ಬ
ಮಣಿಯ ಕರೆದವನೊಬ್ಬ ಸತ್ತವನೊಬ್ಬ
ಸತ್ತವನ ಹೊತ್ತು ಮಾರುವವನೊಬ್ಬ
ಹಾಗಾದರೆ ಅದು ಯಾವುದು? ಉತ್ತರ: **ಮೀನು**

ಗುಡಿಹಿಂದೆ ಗಂಡಗಲ್ಲು ಬಿದ್ದಿದೆ ಉತ್ತರ: **ಮಹಿಳೆಯ ತುರುಬು**

ಕಾಡಲ್ಲೆ ಹುಟ್ಟೋದು
ಕಾಡಲ್ಲೆ ಬೆಳಯೋದು
ಊರ ನಾರಿರಾ ಮುಂದೆ ತಕ ತಕನೆ ಕುಣಿಯೋದು
ನಾರಿ ಕಂಡಿದ್ದರೆ ಒಡಚ್ಚೇಳೆ ಗಂಗೆ
ನೀನು ಕಂಡಿದ್ದರೆ ಮಗುಚ್ಚೇಳೆ ತಂಗೆ? ಉತ್ತರ: **ಒನಕೆ**

ಎರಡು ಚಕ್ರವುಂಟು ಬಂಡಿಯಲ್ಲ
ಎರಡು ಕಣ್ಣುಂಟು ಮನುಷ್ಯನಲ್ಲ
ಎರಡು ಕೊಂಬುಂಟು ಎತ್ತಲ್ಲ
ಇದ ಹೇಳದವನಿಗೆ ಒಂದುಂಟೆ ಬೆಲ್ಲ ಉತ್ತರ: **ರಾಗಿಯ ಕಲ್ಲು**

ಬುಡ್ಡು ಹುಡುಗಿ ಗುದ್ದಿದರೆ
ಮನೆಯ ತುಂಬ ಮಕ್ಕಳು ಉತ್ತರ: **ಬೆಳ್ಳುಳ್ಳಿ**

ಹುತ್ತದ ಹೂವಾ ಕಂಡ
ಮುತ್ತಿನ ಭರಣಿ ಕಂಡ
ಅಲ್ಲೊಂದು ರಂಧ ಕಂಡ
ಅಲ್ಲೇ ಕೂತ್ಕೂಂಡ ಉತ್ತರ: **ಬುಗುಡಿ**

ಉತ್ತ್ರಾಸದ ಮೇಲೆ

ಉತ್ರಾಣಿ ಗಿಡ ಹುಟ್ಟಿದೆ
ಕಿತ್ತರೂ ಬರಲ್ಲ, ಕೀರಾಡಿದರೂ ಬರಲ್ಲ — ಉತ್ತರ: **ಹಚ್ಚೆ**

ಸೀಮಿ ನ್ಯೂಗಿನ ಹೆಂಗಸಿಗಿ
ಸೀರಿ ಇಲ್ಲ ಕುಬಸ ಇಲ್ಲ
ಕೊರಳಾಗ ಒಂದು ಗುಳ್ಳ ಕಟ್ಯಾರ — ಉತ್ತರ: **ಈಚಲು ಮರ**

ಅಂತರಿಕ್ಷದಲ್ಲಿ ಹಾರಾಡ್ತಾಳೆ
ಹುಟ್ಟಿದ ಜಾಗ ಬೆಟ್ಟದ ವಾರೆ
ಒಡೆಸಿದವನಿಗೆ ಒಂದು ಹಿಡಿ ಹೊನ್ನಾ — ಉತ್ತರ: **ಬಿದಿರು**

ಅಂಕ್ಕನ ಮಗಳು
ಅಂತರವೇ ಜೋತಾಡ್ತಾಳೆ — ಉತ್ತರ: **ಕಿವಿಯ ಲೋಲಕು**

ಚಿಕ್ಕ ಮನೀಗಿ ಚಿನ್ನದ ಬೀಗ — ಉತ್ತರ: **ಮೂಗುತಿ**

ಬಗ್ಗಿದರ ಬಾಯಿಗಿ ಬರತೈತಿ,
ಎದ್ದಾರ ಎದಿಗಿ ಬಡೀ ತೈತಿ — ಉತ್ತರ: **ಮಾಂಗಲ್ಯಸರ**

ಕಾಲಲ್ಲಿ ಖಣಾಖಣಾ,
ಸೊಂಟದಲ್ಲಿ ಝುಣಾಝುಣಾ — ಉತ್ತರ: **ಚೈನಾ, ಒಡ್ಯಾಣ.**

ಅಕ್ಕನ ಕೈಗೆ ಪಚ್ಚೆಯ ಕಡಗ.
ಹಾಕುವರುಂಟು ತೆಗೆವವರಿಲ್ಲ — ಉತ್ತರ: **ಹಚ್ಚೆ**

ಅಕ್ಕನ ಮನೆಯ ಬೆಳಕು
ತಂಗಿಯ ಮನೆಯಲ್ಲ ಕಾಣುತ್ತೇ — ಉತ್ತರ: **ಒಲೆ**

ಅಕ್ಕರಿಗೆ ಆರು ಕಣ್ಣು
ಮಕ್ಕಳಗೆ ಮೂರು ಕಣ್ಣು
ತೋಟದ ಅಜ್ಜನಿಗೆ ಒಂದೇ ಕಣ್ಣು — ಉತ್ತರ: **ಕೊರಳು, ತೆಂಗು, ಅಡಿಕೆ**

ಹೊಟ್ಟೆ ಪಿಟ್ಟಗೆ ಬುಟ್ಟು ನೆಟ್ಟಗೆ — ಉತ್ತರ: **ತೆಂಗಿನಕಾಯಿ**

ಹಳದಿ ಕೋಟೆ ದಾಟಿದರೆ ಕೆಂಪು ಕೋಟೆ,
ಕೆಂಪು ಕೋಟೆ ದಾಟಿದರೆ ಕರಿ ಸಿಪಾಯಿಗಳು
ನಾನ್ಯಾರು? — ಉತ್ತರ: **ಪಸ್ವಾಮಿ**

ಹಂಗಾರು ಕಟ್ಟಿ, ಮಲ್ಲಿಗೆ ಮಿಟ್ಟಿ.
ಇದರೊಳಗೈವರ ನೃತ್ಯವು ನಿತ್ಯ — ಉತ್ತರ: **ಕೈ ಅನ್ನ, ಊಟ ಮಾಡುವುದು.**

ಅಪ್ಪನ ದುಡ್ಡು ಎಣಿಸುವವರಿಲ್ಲ
ಅಮ್ಮನ ಸೀರೆ ಮಡಿಸೋರಿಲ್ಲ — ಉತ್ತರ: **ನಕ್ಷತ್ರ ಆಕಾಶ**

ಹಾಸಿದ ಚಾಪೆ ಮಡಿಸುವವರಿಲ್ಲ
ಚೆಲ್ಲಿದ ಹಣವನ್ನು ಮಣಿ ಸೋರಿಲ್ಲ — ಉತ್ತರ: **ನಕ್ಷತ್ರ, ಆಕಾಶ.**

ಸಾವಿರ ಕಣ್ಣುಗಳುಂಟು ರಾಕ್ಷಸರಲ್ಲ,
ತಲೆಯಲ್ಲಿ ಕಿರೀಟವುಂಟು ಅಧಿಪತಿಯಲ್ಲ
ನರ್ತನ ಮಾಡುವುದು ನರ್ತಕಿಯಲ್ಲ ನಾನ್ಯಾರು — ಉತ್ತರ: **ನವಿಲು**

ರೂಪ ಇಲ್ಲ ಬಣ್ಣ ಇಲ್ಲ, ರುಚಿಯಿಲ್ಲ
ಇದನ್ನು ಬಿಟ್ಟರೆ ಗತಿಯಿಲ್ಲ — ಉತ್ತರ: **ಗಾಳಿ**

ಮೂರುದಾರಿಗೆ ಮೂರು ಕಣ್ಣು,
ನೀರು ಸುರಿಯುವ ಒಂದೇ ಕಣ್ಣು,
ನಾರುಸುತ್ತಿದ ಕುರುಡು ಕಣ್ಣು
ಊರದೇವರಿಗೆ ಹೇಳದ ಹಣ್ಣು — ಉತ್ತರ: **ಎಳನೀರು**

ಮೂರು ಕಾಲಿನ ಮೂರು ಮುಖದ ನೀರು
ಕುಡಿದು ಕಟ್ಟಿಗೆ ತಿನ್ನುತ್ತಾಳೆ — ಉತ್ತರ: **ಒಲೆ**

ಆಕಳು ಹುಟ್ಟೋದು ಆಕಾಶದಲ್ಲಿ
ಕರುಹುಟ್ಟುವುದು ಭೂಲೋಕದಲ್ಲಿ
ಮಲ್ಲಮ್ಮ ಹುಟ್ಟುವುದು ಕಲ್ಪಟಿಕೆಯಲ್ಲಿ
ಹೆಸರು ಹೇಳುವುದು ಚಿಕ್ಕವಯಸ್ಸಿನಲ್ಲಿ (ಗಂಡನ ಹೆಸರು ಹೇಳುವುದಿಲ್ಲ ಎಂಬುದು.)

ಆಕಾಡೆ ಇಕಾಡೆ ಕೆಟ್ಟ ಕಂಬಳ ಮೇಲೆ
ದುಂಡಿನ ಸೀರೆ ದುಬಾರಿ ಕುಬುಸ
ದಾರಿ ಬಿಡು ಅಂದರೆ ಮಾರಿ ನೋಡುತ್ತಾನೆ.

ಹೊಸ ಅಂಡೆದಾಗ ಬಿಸಿ ನೀರು ಕಾದು
ಜಳಕ ಮಾಡು ಅಂದ್ರೆ ಜಗಳ ಆದ್ತಾನಾ
ಯಾಲಕ್ಕಿ ಅಂಗಡ್ಯಾಗ್ ಯಾಪಾರ ಮಾಡ್ತಾನಾ

ನೀಲಿ ಅಂಗಡ್ಯಾಗ್ ನಿದ್ದಿ ಮಾಡ್ತಾನಾ
ಸಿಕ್ಸ್ ಒಡೆಯಕ್ ಕೂಟಾ ನಕ್ಕಂತಾ ನಿಂತಾನಾ

ರಾಡಿಕೆ ರಾಡೆ ಹುಣಿಸೇ ರಾಡೆ
ವಾಸೆತ್ತಿನ ಮೆಲ್ಗತ್ತಿ ರಾಯರ ಹೊಗ್ತಾರ ವಕೀಲ ಕಡಿ
ಉತ್ತತೀ ವಲ ಓಡಿ ಊದಿನ ಕಡ್ಡಿ ಉರಿಮಾಡಿ
ಅವಲಕ್ಕಿ ಅನ್ನಮಾಡಿ ಕಲ್ಸಕ್ಕರೆ ಸಾರ್ ಮಾಡಿ
ಊಟಕ್ಕೆ ಬಾ ಅಂದರೆ ನಾಗ್ತಾ ಹೋಗ್ತಾನಾ

ಮೂಗಿಗೆ ಮುಗ್ಯುತ್ತಿ ಚೆಂದ
ಹಾವಿಗೆ ಹುತ್ತು ಚೆಂದ
ಕೊರಳಿಗೆ ಮಾಂಗಲ್ಯ ಚೆಂದ
ನಮ್ಮ ರಾಯರು ನಮಗೆ ಚೆಂದ

ಕಂಚಿನ ಬಟ್ಲಾ
ಕಮಲದ ಹೂವು
ಮಂಚದ ಮೇಲೆ ಕೂತುಕೊಂಡು
ಮಂಗ್‌ನಾಡ್‌ಸುತ್ತಿದ್ದ

ತೆಳ್ಳನ ರೊಟ್ಟಿ
ಬೆಳ್ಳನೆ ಹಾಲು
ಬೆಳದಿಂಗಳಾಗ ಕುಂತುಕೊಂಡು
ಮೇಲುಕು ಹಾಕ್ತಾನಾ|

ಬಂಗಾರದ ಬದನೆಕಾಯಿ
ಸಿಂಗಾರದ ಶಿಳೇಕಾಯಿ
ನಮ್ಮತ್ತಿ ಮಾಡಾಕೀ
ನಾನ್ ನೀಡಾಕೀ
ಹಾದಿ ಬೀಡು ಅಂದರೆ ಮಾರಿ ನೋಡ್ತಾನ?

ಅಕ್ಕ-ಪಕ್ಕ ತೇರು ನೋಡು
ತೇರ್ ಮೇಲೆ ಗೊಂಬೆ ನೋಡು
ಗೊಂಬೆ ಮೇಲೆ ಸಿಂಬೆ ನೋಡು
ಗೊಂಬೆ ಮೇಲೆ ಸಿಂಬೆ ನೋಡು
ಸಿಂಬೆ ಮೇಲೆ ಕೂಡ ನೋಡು

ಕೂಡದ ಮೇಲೆ ಕೈನೋಡು
ಕೈ ಮೇಲೆ ಅಚ್ಚೆ ನೋಡು
ಅಚ್ಚೆ ನೋಡಿ ಮೆಚ್ಚಿ ಬರುತಾನಾ|

ಕಡುಬು ತಿಂತಾನಾ
ಕಣ್ಣ್ ಬಿಡ್ತಾನಾ
ಯಾಕೆ ನನ್ ಗಂಡಾ ಮ್ಯಾಕ್ ನೋಡ್ತಾನ|

ಗಾಜಿನ ಕಪ್ಪು, ಮೋಜಿನ ಟೀ
ಕುಡಿ ಕುಡಿ ಎಂದರೆ, ತಡಿ ತಡಿ ಎಂತಾನಾ|

ಪಟ್ಟ್ ಪಟ್ಟ ಅಂಗಿ
ವಜ್ರಾದಾಗ ಗೆಜ್ಜೆ ಟಿರೆ
ಗಲ್ಲಕ್ಕೆ ಬೊಟ್ಟು ನೋಡಿ ನಗ್ತಾ
ಏನತವರ ಮಗಳು ಸಂತೋಷ ಬಳುತಾನಾ|

ಇಂದ್ರ ಲೋಕದವರು ದೇವೇಂದ್ರ ಸದಾಟ
ಸಾಲ ಮುತ್ತಿದಾಗಾ ಸೆರಗು ಹಿಡಿದು ಕೇಳುವಾಗ
ಅತ್ತೆ ಈರಮ್ಮ ಮಾಮ ಹುಲುಗಪ್ಪ
ಹಡೆದ ತಿಪ್ಪಮ್ಮ ಹುಟ್ಟೂರಿಗೆ ತೊಟ್ಟು
ಕುಬುಸುದಾಗ ಬ್ರಹ್ಮದೇವರು ಬಂದು
ಮಡಿಕೆಯನ್ನು ಊಡಿಸಿ ಮಾಂಗಲ್ಯ ಕಟ್ಟವಾಗ
ಮಾತು ಮಂತ್ರಕ್ಷ್ಯ, ಗುಣ ರುದ್ರಾಕ್ಷ ತಕ್ಕಂತಾ ಕೊಟ್ಟಿ
ನಕ್ಕಂತಾ ಬರ್ತಾತಾ|

ಕಕ್ಕನವರು ಕೊಡಿಸಿದ ಕಂಚಿನ ಹಾರತಿ
ನನ್ನು ಬೆಳಗೊಂದು ಮಂಗಳಾರತಿ
ಕಷ್ಟ ಕೈಯಾಗ ತಳತಳ
ಮಳೆ ಬರೋದು ಪಳಪಳ
ನಮ್ಮರಾಯರ ಹೆಸರು ಜಳಜಳ,

ಅಕ್ಕಿ ನುಚ್ಚು
ರುಬ್ಬಿಸಿಕೊಂಡು
ಗೋಪುರ ಮೇಲೆ ಕುತುಕೊಂಡು
ಗೋಟಯಾ ಮಾಡ್ತಾನಾ - (ಈರಮ್ಮ (೮೦) ಕುರುಗೋಡು)

ಕಂಚಿನ ಕ್ವಾಟೆ
ಕುಸುಮೆ ರಾಶಿ
ಐದು ಮಂದಿ
ಹೋಗ್ತಾರಾ ಇಬ್ಬರು ನೋಡ್ತಾರ ಊಟ.

ಮಳೆಯಿಲ್ಲ ಬೆಳೆಯಿಲ್ಲ
ಹೊಲ ಮಾತ್ರ ಹಚ್ಚಾಗಿದೆ ಉತ್ತರ: **ಗಿಳಿ**

ಒಂದು ಮುಳುಗುತ್ತೆ
ಇನ್ನೊಂದು ತೇಲುತ್ತೆ
ಮತ್ತೊಂದು ಕರಗುತ್ತೆ ಉತ್ತರ: **ಅಡಿಕೆ, ಎಲೆ, ಸುಣ್ಣ.**

೨. ಗಾದೆಗಳು

ಹೆಣ್ಣು ಮಕ್ಕಳು ಇದ್ದ ಮನೆ ಕನ್ನಡಿಯಂತೆ

ರಟ್ಟೆ ಮುರಿದು ರೊಟ್ಟಿ ತಿನ್ನು

ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿ ಇಲ್ಲ

ದುಡಿತವೇ ದುಡ್ಡಿನ ತಾಯಿ

ಆರೋಗ್ಯವೇ ಭಾಗ್ಯ

ಅಜ್ಞಾನಕ್ಕಿಂತ ಅಲ್ಪಜ್ಞಾನವೇ ಭೀಕರ

ಅಳಿಯಾ ಮನೆ ತೊಳೆಯಾ

ಅರಗಿಳಿ ಸಾಕಿ, ಬೆಕ್ಕಿನ ಬಾಯಿಗೆ ಕೊಟ್ಟ ಹಾಗೆ

ಅತ್ತೆಯ ಮನಯಾಗ ಮುತ್ತಾಗಿ ಇರಬೇಕು.

ಗಂಡ ಹೆಂಡತಿ ಜಗಳ ಉಂಡು ಮಲಗುವ ತನಕ

ಗಂಡ ಹೆಂಡರ ಜಗಳದಲ್ಲಿ ಕೂಸು ಬಡಗಾಗಿತು

ಗಂಡ ಹೆಂಡರ ಜಗಳದಲ್ಲಿ ಮಕ್ಕಳು ಜಗಳ ಕಲಿತವು

ಅತಿ ಆಸೆ ಗತಿಗೆಡಿಸಿತು

ಅತಿಯಾದರೆ ಅಮೃತವೂ ವಿಷ

ಅತ್ತೆ ಒಡೆದ ಪಾತ್ರೆಗೆ ಬೆಲೆಯಿಲ್ಲ

ಅತ್ತೆಗೊಂದು ಕಾಲ ಸೊಸ್ಯೊಂದು ಕಾಲ

ಅತ್ತೆ ಮಾಡಿದ್ದು ಅಡಕಲಿಗೆ (ಗುಪ್ತ) ಸೊಸೆ ಮಾಡಿದ್ದು ಬೀದಿಗೆ (ಬೆಳಕಿಗೆ)

ಹೆಣ್ಣು ಹುಟ್ಟಿದರೊಂದು ಹುಣ್ಣು ಹುಟ್ಟಿದ ಹಾಗೆ

ಹೆಂಡತಿಯಿಲ್ಲದ ಮನೆ, ತಂತಿಯಿಲ್ಲದ ವೀಣೆ, ದೇವರಿಲ್ಲದ ಗುಡಿ

ಆರು ಹೆತ್ತವಳ ಮುಂದೆ ಮೂರು ಹೆತ್ತವಳು ಮುರುಕ ಮಾಡಿದಳು

ಅಕ್ಕ ಇದ್ದರೆ ಭಾವ, ರೊಕ್ಕಾವಿದ್ದರೆ ಸೂಳೆ

ಹಾಸಿಗೆ ಇದ್ದಷ್ಟು ಕಾಲ ಚಾಚು

ತವರು ಇದ್ದರೆ ಭೋಗ ಎರಡು ದಿನ ಸವಿ

ತಾಯಿ ಇದ್ದರೆ ತವರು, ತಂದೆ ಇದ್ದರೆ ಬಳಗ, ನೀರು ಇದ್ದರೆ ಕೆರೆ ಬಾವಿ.

ತಾಯಿ ತೀರಿದ ಮೇಲೆ ತವರು ಮನೆಸಲ್ಲ

ಹೆಣ್ಣು ಹಡೆದವನ ಮನೆ ನುಣ್ಣಗೆ, ಗಂಡು ಹಡೆದವನ ಮನೆ ತಣ್ಣಗೆ.

''ಹಸುರುಯ್ಯುವಗ ಅಳಬಾರ್ದು
ಹಸೆ ಮ್ಯಾಲ್ ಕುಂತಾಗ ನಗಬಾರ್ದು

ಅವರಪ್ಪನ ಅರಮನೆಗಿಂತ, ನಮ್ಮಪ್ಪನ ಗುಡಿಸಲೇ ಲೇಸು

ಕೊಸದವನ್ಗೆ, ಗೊತ್ತಿಲ್ದು
ಬರಿಕಿಸದವನ್ಗೇನ್ ಗೊತ್ತು

ಒಲಿದ ಹೆಣ್ಣೆ ಹೋಲ್ಸಾದ್ರೂ ಹೆಚ್ಚು,
ಒಲಿಯ್ಯಾಗಲ ಗಂಜಿಗೆ ಅಕ್ಕಿಯಾದ್ರೂ ನುಚ್ಚು,

ಗೆಯ್ದೆ ಉಣ್ಣೋದ್ ತರವಲ್ಲ
ಉಣ್ದೆ, ಮಲಗೋದು ಒಳ್ತಲ್ಲ

ಕೊಟ್ಟ ಸಾಲ ಕೇಳ್ದೆ ಹೋಯ್ತು
ನೆಟ್ಟ ಆಲ ನೋಡ್ದೆ ಒಣಗ್ತು

ನಗ ಬಂದಾಗ ನಗ್ದೆ
ಆಳು ಬಂದಾಗ ನಗಕಾಗ್ತದ

ಅಟ್ಟುಪ್ಪು ಸಾರಿಗಲ್ಲ
ಗುಟ್ಟೆನ್ಮಾತು ಬಜಾರಿಗಲ್ಲ

ಗಂಡ ಇಲ್ದ ಮುಂಡೆ
ಊರೋಟಿನ ಬಂಡೆ

ಆದಿರು ಹೆಚ್ಚಿದ್ರೆ ನಾಡು
ಬದಿರು ಹೆಚ್ಚಿದ್ರೆ ಕಾಡು

ನನ್ನೆಡ್ತಿ ಬಿದ್ರಮೆಳ ಚಂದ್ರ

ಸಂತೆಲವಳನ್ಯಾರಾದ್ರು ಕಂಡ್ರ
ಅಗ್ಸೆ ಮರದ ಹೂ ಚಂದ
ಬೊಗ್ಸೆಗಣ್ಣಿನ ಹೆಣ್ ಚೆಂದ

ಹಾವಿನ್ಹೊತೇನೇ ಅಡ್ಡಾಡ್ ಬಂದೋಳು
ಹಗ್ಗಕಂಡ್ ಬೊಬ್ಬಿಟ್ಟಳಂತೆ

ತುಂಬಿದ ಕೆರೆಗೆ ಕೋಡಿ ಮದ್ದು
ಬೆಳ್ದ ಬದಿರ್ಗೆ ಗಾಳ ಮದ್ದು.

ನಿಂತ್ ಹುಚ್ಚ ಉಯ್ಯೊಳ್ಗೆ
ನಿದ್ರೆಗೆಟ್ ಮಂತ್ರ ಹೇಳ್ಕೊಟ್ರಂತೆ

ತರಿ ತಿಕ್ಕೆ ನೊಣ ಮುತ್ತೋದು
ಕಿತ್ತೋದೊಳಗೆ ಮತ್ತೊಂದು ಬೀದಿ.

ಹೆಸರಾದವನ್ ಕೊಸದ್ರೆ
ಬಸರಾದವ ಹಡೀದಿರ್ತಾಳ

ಆರ್ಯ ಬೇಡ ಕೆಟ್ಟ
ತಿಕ್ಕ ಕೂತ್ ಕೆಟ್ಟ
ಮೂಗೆ ಹರಿದ ಮೊಂಡ್ ಚೂರಿ
ಮರ ಸೀಳೀತಾ
ಕೊಕ್ಕರೆಗೊಂದು ಕೆರೆಯೇ ಕೊರವನಿಗೊಂದು ಊರೆ
ಕೊರಮಕೂಡಿ ಕೆಟ್ಟ
ದೊಂಬ ಅಗಲಿ ಕೆಟ್ಟ.

ಕೋತಿಯ ಸ್ಮಶಾನವನ್ನ
ಕೊರವರ ಸ್ಮಶಾನವನ್ನು ಕಂಡವರುಂಟೆ (ತಮಿಳು ಗಾದೆ)

ಪಂಡಿತನಿಗೆ ಆನೆ ಕೊಡು
ಕೊರಮನಿಗೆ ಬೆಕ್ಕುಕೊಡು

ಕೊರಮರ ಮತ್ತು ಇದಿಯನ್‌ಗಳ ಜಗಳ
ಸುಲಭವಾಗಿ ಬಗೆಹರಿಯುತ್ತೆ

ಕೊರವ ಹೆಂಗ್ಸು ಹೆತ್ರೆ
ಕೊರವ ಗಂಡ್ಸು ಇಂಗ್ ತಿಂದ

ಕೊರವಂಜಿಗೆ ಬುಟ್ಟಿ ತಪ್ಪೋಲ್ಲ
ಜಂಗಮನಿಗೆ ಜೋಳಿಗೆ ತಪ್ಪೋಲ್ಲ

ಕೊರಮನಿಗೊಂದು ಹೆಸರಿಲ್ಲ
ಕೊಕ್ಕರೆಗೊಂದು ಕೆರೆಯಿಲ್ಲ

ಸಾಲದ ರಾಗಿ ಸಣ್ಗೆ ಬೀಸು
ಚಂದದ ಬಾಲೆಗೆ ಒಡವ್ಯಾಕೆ
ಹೊಸರಾಗಿ ಹಿಟ್ಟಿಗೆ ಮೊಸರ್ಯಾಕೆ

ಅಕ್ಕರ್ ಚಿಕ್ಕಪ್ಪಟ್ಟು ಕರ್ಮೀನ
ತಣ್ಣಗೆ ಬಿಟ್ಟು ಮ್ಯಾಗಳ್ ತಿಳ್ನೀರ

ಹೇಳ್ಕೆ ಮಾತ್ ಕೇಳ ಹೆಂಡ್ತಿ ತಲೆ ಬೋಳ್ಸೆ
ಯಾಕೋನನ್ ಹೆಂಡ್ತಿ ಗಡುಗತ್ತಾ ಅಂದ

ಕೋಳಿ ಕೇಳ ಮೆಣ್ಸರ್ದಾರ
ಕೋಕ್ರೆ ಕೇಳ ಬಲೆ ಬೀಸ್ಯಾರ" - (*ಕೊರವ ಸಂಸ್ಕೃತಿ ಪುಟ.೧೯೫, ೧೯೮*)

ಸೂಳಿಗೋದ ರೊಕ್ಕ, ಸುಡುಗಾಡಿಗೋದ ಹೆಣ ತಿರುಗಿ ಬರೋದಿಲ್ಲ.

ಪುಂಡಿಪಲ್ಲೆ ಸೆಂಡು ಸೆಂಡು ಹರಿಯಬಾರದು, ರಂಡಿ ಮುಂಡೆ ಸಹವಾಸ ಮಾಡಬಾರದು.

ಎತ್ತು ಎರೆಗೆ ಎಳದ್ರೆ, ಕ್ವಾಣ ಕೆರೆಗೆ ಎಳತಿತ್ತಂತೆ

ತಾಯಿ ತಂದೆ ಸತ್ತ ಮ್ಯಾಲೆ, ಸೋದರ ಮಾವ ನೋಡಂದ್ಯೆತಿ ಶಾಸ್ತ್ರ

ಆರು ಅಡುದೋಕೆ ಆರು ಮಂದಿನೋದ್ರೆ, ಆಕೆ ಹೋಗ್ತಿದ್ಲಂತೆ ಹಿರೇಕುಂಬಾರನ್ನ

ಅಯ ಇಲ್ಲದ ಮನ್ಯಾಗ, ನಾಯಿ ಕೂಡ ಹೊಕ್ಕೋದಿಲ್ಲ.

ಶಿವರಾತ್ರಿಗೆಲ್ಲಾ ಶಿವ ಸಿವ ಅನ್ನೋ ಬಿಸಲು

ಆರು ಹಡದಾಕೆ ಮುಂದೆ, ಮೂರು ಹಡದಾಕೆ ಹೇಳ್‌ತಿದ್ಲಂತೆ

೩. ಹಾಡುಗಳು

ಹುಲಿಗೆಮ್ಮ ದೇವಿ

ಬಾಳನ ದಿಂಡಿಗೆ
ಬಾಳೆದಿಂಡಿಗೆ ಬಿಸಿಲೇರಿ
ಬಾಲಜೋಗಿಯರು ಹಸುದಾರ|
ಬಾಲೆ ಜೋಗಿಯರು ಹಸುದಾರ
ಏಳೇಳು ಹುಲಿಗೆಮ್ಮ
ಯಾಳ್ಯಾವು ಆದಾವು

ನಿಂಬೆ ದಿಂಡಿಗೆ ಬಿಸಿಲೇರಿ
ನಿಂತು ಜೋಗಿಯರು ಹಸುದಾರ
ಹಾಡು ಬಾಳೆದಾಲೆ ಎತ್ತೆರಡು ನೂಲೆಳೆ
ಜೋಡಿ ಎರಡು ಬಾಕು ಬಲಗೈಲಿ
ಜೋಡೆರಡು ಬಾಕು ಬಲಗೈಲಿ ಇಡುಕೊಂಡು
ತಾಯಿಪವಾಡ ಗೆಲಿತಾಳ
ಆರು ಬಾಳೆ ಎಲೆ ಜೋಡೆಡಿ ನೂಲೇಳು
ಜೋಡು ಎರಡು ಬಾಕು ಬಲಗೈಲಿ
ಜೋಡಿ ಬಾಕು ಬಲಗೈಲಿ ಇಡುಕೊಂಡು
ತಾಯಿ ಪವಾಡ ಗೆಲಿತಾಳ
ಆಕಾಯಿ ಈಕಾಯಿ ನಾಕು ತೆಂಗಿನಕಾಯಿ
ಬಡವಾರ ತಂದ ಎಳಗಾಯಿ| ಪೂಜಾರಿ
ಬಾಗೀಲೆ ಮೇಲೆಡಿ ಒಡಕೊಂಡ ನಾಕು ತೆಂಗಿನಕಾಯಿ
ಬಡವಾರ ತಂದ ಎಳಗಾಯಿ ಪೂಜಾರಿ
ಒಡೆಯು ಮೇಲೆಡಿ ಒಡಕೊಂಡು
ಆರು ಮಣದ ಅಕ್ಕಿ ಓರಿ ಮೇಲೆ ಏರಿಕೊಂಡು
ಒಪ್ಪಳ್ಳದ ಓತು ಇಡುಕೊಡು
ಒಪ್ಪಿಸಿ ಬಂದೇವು ಮನದರಿಕೆ
ಹತ್ತು ಮಣದ ಅಕ್ಕಿ ಎತ್ತಿನ ಮೇಲೆ ಏರಿಕೊಂಡು
ಮಾವುಳ್ಳದ ಓತು ಇಡುಕೊಂಡು
ಮಾವುಳ್ಳದ ಓತು ಇಡುಕೊಂಡು
ಹುಲಿಗೆಮ್ಮ ಮಾಡಿ ಬಂದೆವು ಮನದರಿಕೆ.

(ಹಾಡಿದವರು: ಹುಲಿಗೆಮ್ಮ ಮತ್ತು ಸಂಗಡಿಗರು .ಕುರುಗೋಡು)

ಹನುಮಂತರಾಯ

ಹನುಮಂತ ರಾಯಾಗ ಯಾವಲ್ಲಿ ಜಳಕ
ಕ್ಷೇಕ್ಸಾವಲಿಗೆ ಯಾವಲಿ ಜಳಕ
ತಾಯಿ ಊರಮ್ಮಗೆ ಯಾವಲ ಜಳಕ
ಹನುಮಂತರಾಯಾಗ ಕಾಲುವೆ ಜಳಕ
ಕ್ಷೇಕ್ಸಾವಲಿಗೆ ಬಾವಿಯಲ್ಲಿ ಜಳಕ
ತಾಯಿ ಊರಮ್ಮಗೆ ಹೊಳೆಯಲ್ಲಿ ಜಳಕ

ಹನುಮಂತ ರಾಯಾಗ ಯಾವಾದ ಹೂವಾ
ಕ್ಷೇಕ್ಸಾವಲಿಗೆ ಯಾವಾದ ಹೂವಾ
ತಾಯಿ ಊರಮ್ಮಗಾ ಯಾವಾದ ಹೂವಾ
ಹನುಮಂತ ರಾಯಾಗ ಕಣಗಿನ ಹೂವಾ
ಕ್ಷೇಕ್ಸಾವಲಿಗೆ ಮಲ್ಲಿಗೆ ಹೂವಾ
ತಾಯಿ ಊರಮ್ಮಗೆ ಸಾವಂತಿಗೆ ಹೂವಾ

ಹನುಮಂತರಾಯಾಗ ಯಾವುದು ಎಡೆ
ಕ್ಷೇಕ್ಸಾವಲಿಗೆ ಯಾವಾದು ಎಡಿ
ತಾಯಿ ಊರಮ್ಮಗೆ ಯಾವಾದು ಎಡಿ
ಹನುಮಂತರಾಯಾಗ ಉಗ್ಗಿ ಎಡಿ
ಕ್ಷೇಕ್ಸಾವಲಿಗೆ ಬೇಟೆ ಎಡಿ
ತಾಯಿ ಊರಮ್ಮಗೆ ಹೋಳಿಗೆ ಎಡೆ
ಹನುಮಂತ ರಾಯಾಗ ಯಾವ ಗಮನ
ಕ್ಷೇಕ್ಸ್‌ವಲಿಗೆ ಯಾವ ಗಮನ
ತಾಯಿ ಊರಮ್ಮಗಾ ಯಾವ ಗಮನ
ಹನುಮಂತ ರಾಯನಿಗೆ ಊರಿನ ಗಡಿಗ ಮನ
ಕ್ಷೇಕ್ಸ್‌ವಲಿಗೆ, ಲೋಬಾನ ಗಮನ
ತಾಯಿ ಊರಮ್ಮನಿಗೆ ಕರ್ಪೂರ ಗಮನ

(ಹಾಡಿದವರು: ಈರಮ್ಮ ಮತ್ತು ಸಂಗಡಿಗರು, ಕಂಪ್ಲಿ)

ಸಾಮರಸ್ಯವಿಲ್ಲದ ಪತಿಯನ್ನು ಕೈಹಿಡಿದ ಹೆಣ್ಣಿನ ಅಳಲು

ಹಂತವಿಲ್ಲದ ಬಾವಿ ಜಂತವಿಲ್ಲದ ಸೀರ
ಸಂತೋಷಿಲ್ಲಾದ ಪತಿಯೋರು
ಸಂತೋಷಿಲ್ಲಾದ ಪತಿಯೋರು ಇದ್ದಾರ
ಸುಚೇಲಿ ಕಣ್ಣೀರು ಹರಿದಾವ ||

ಅಕ್ಷಾಯ ಮರ ಹಾಸೀ ಬೆಳೆದರೇನು
ಅಸಿಲ್ಲದೋರ ಕೈಹಿಡಿದು
ಅಸಿಲ್ಲದೋರ ಕೈಹಿಡಿದು ಶಿವಗುರುವೆ
ಹಾಸಿಗೇಲಿ ಕಣ್ಣೀರು ಹರಿದಾವೊ |

ನುಗ್ಗಾಯ ಮರ ಬಗ್ಗಿ ಬೆಳೆದಾರೇನು
ಬುದ್ದಿಲ್ಲದವರ ಕೈಹಿಡಿದು
ಬುದ್ದಿಲ್ಲದವರ ಕೈಹಿಡಿದು ಶಿವಗುರುವೆ
ಮಗ್ಗಲಲಿ ಕಣ್ಣೀರು ಹರಿದಾವೋ ||

ಓಲೆ ಒಳ್ಳೆಯ ಓಲೊಳಗ ಚಿನ್ನಾವಿಲ್ಲ
ಸರ ಒಳ್ಳೇದು ಸೆರಗಿಲ್ಲ
ಸೀರ ಒಳ್ಳೆದು ಸೆರಗಿಲ್ಲ ಶಿವಗುರುವೆ
ರಾಮರೊಳ್ಳೇರು ಗುಣವಿಲ್ಲ.|

ಗಂಡನಲ್ಲಿ ಗುಣವಿಲ್ಲ ಕೆಂಡದಲ್ಲಿ ತನುವಿಲ್ಲ
ಕೊಂಡ ಮಜ್ಜಿಗೆ ರುಚಿಯಿಲ್ಲ
ಕೊಂಡ ಮಜ್ಜಿಗೆ ರುಚಿಯಿಲ್ಲ ಶಿವಗುರುವೆ
ಗಂಡಾನ ಬೋಗ ತರಲಿಲ್ಲ ||

ಈರುಳ್ಳಿ ಖಾರ ಹ್ಯಾಗ ತಿಂದರು ಖಾರ
ನನ್ನ ಪತಿಯೋರಿಗೆ ಉಪಕಾರ
ನನ್ನ ಪತಿಯೋರಿಗೋಪಕಾರ ಮಾಡಿದರ
ಅವರ ಮುರ್ಖಾದ ಬುದ್ದಿ ಬಿಡರಲ್ಲೊ ||

ಹಲಸೀನ ಕಾಯಾಗಿ ಹಾಕಿದ್ದಿ ಹೆಣಗಂಟ
ಅಸಮಾನಕಾರ ಪತಿಯೋರು
ಅಸಮಾನಕಾರ ಪತಿಯೋರು ಒತ್ತಾರಂತ
ಹಡಿದ ಹೆಣಗಂಟ ವದ್ದರೇನು ||

ಅತ್ತಿಗೆ ನಾದಿನಿಯವರ ಜರಿಯುವಿಕೆ

ಎಲ್ಕೊಟ್ಬೊಂದ್ ಜಾವನ್ನುಂಗ್ಯ ಎಲೆಗಿಲೆ ಬೇಕೇನೆ
ಅಂತ ಪಿಂತ ಮಾಡ್ಸಿಕೋ
ಇಂತ ಪಿಂತ ಮಾಡ್ಸಿಕೋ
ಪಂತಿ ಮೇಲ್ ಬರಜನ
ನಿನ್ನನೋಡಿ ನಗ್ತರ
ಸೈ ಸಬಾಸ್ ಗಿರತ್ತಿಗ
ಸೋಬಾನ್ ಬೇಕೇನೆ ||

ಅತ್ತಿಗೊಳ್ಳೇಳಂತ ಇತ್ತಾಲ ಮನೆಕೊಟ್ಟ
ಅತ್ತಿಗ ಮಾಡೀದ ಇಪರೀತ
ಅತ್ತಿಗ ಮಾಡೀದ ಇಪರೀತ ಗಿಪರೀತ
ಕತ್ತೆ ಕಾಯೋನ ಕರ್‍ಕೊಂಡ್ಲು ||

ನಾದಿನೋಳ್ಳೇಳಂತ ಬೀದೀಯ ಮನೆಕೊಟ್ಟೆ
ನಾದಿನಿ ಮಾಡೀದ ಇಪರೀತ
ನಾದೀನಿ ಮಾಡೀದ ಇಪರೀತ ಗಿಪರೀತ
ನಾಯೆ ಕಾಯೋನ ಕರ್‍ಕೊಂಡ್ಲು ||

ಕ್ವಾಣೇಲ ಕೂತಕೊಂಡು ತಾನೇನ ಮಾಡ್ತಾಳು
ಮೂಗಾಳ ಬೂದಿವಲ ಮುಂಡ
ಮೂಗಾಳ ಬೂದಿವಲ ಮುಂಡ ಮಾಡಿಕೊಂಡು
ಕೊತ್ತೀಯ ಕರಕೊಂಡು ಮಲಗವಳೆತ್ತೀಗ
ಉಬ್ಬ ಊದಾಳೊ ಬಲ ಮುಂದೆ
ಉಬ್ಬ ಊದಾಳೋ ಬಲ ಮುಂದೆ
ಅವಳ ಕೊಬ್ಬಲ ಮೀನಂತ ಎಳತನ್ನಿ ||

ಇದ್ದೋಳ್ ನೋಡಮ್ಮ ಇಜ್ಜಾಲ ಮಸಿಯಾಗಿ
ತಿದ್ದಿದ ಬೈರುವ ತಿಕದಾಗಿ
ತಿದ್ದಿದ ಬೈರುವ ತಿಕದಾಗಿ ಅತ್ತಿಗೆ
ಅವಳೋದಲ್ ನೋಡಮ್ಮ ದರಬೇಸಿ ||

ಹೋದೋಳ್ ನೋಡಮ್ಮ ವಾಗಾಲ ಮಸಿಯಾಗಿ
ವಾಜರ ಮನಿಯ ತಿದಿಯಾಗಿ
ವಾಜರ ಮನಿಯ ತಿದಿಯಾಗಿ ಅತ್ತಿಗ
ಅವಳೆದ್ದೋಳ್ ನೋಡಮ್ಮ ಬಿಕನಾಸಿ ||

ಕುಕ್ಕ ತಕ್ಕಂಡು ಕೊಕ್ಕೊರಿಗೋದಾಳು
ಕೊಕ್ಕೊರು ನಾಯಿ ತಗಲೀವೊ
ಕೊಕ್ಕೊರು ನಾಯಿ ತಗಲೀವೊ ಅತ್ತಿಗ
ನೀ ಕುಕ್ಕೆಯ ಮಡಗಿ ಶರಣೆನ್ನು

ಮೊರ ತಕ್ಕೊಂಡು ಪಕ್ಕದೂರಿಗೋದಾಳು
ಪಕ್ಕದೂರು ನಾಯಿ ತಗಲೀವೊ
ಪಕ್ಕದೂರು ನಾಯಿ ತಗಲೀವೋ ನಾದೀನಿ
ಮೊರಾಯ ಮಡಿಗಿ ಶರಣೆನ್ನು ||
ಕೋಳ ಮುರ್ಕಂಡು ಮುಳಾಯ ಕವರೋಳೆ
ಕೋಳಯವರು ಬಂದು ಲಗಲೆದ್ದು
ಕೋಳಯವರು ಬಂದು ಲಗಲೆದ್ದು ಕುಣಿವಾಗ
ಕೇಳೆ ಅತ್ತೀಗ ಕಿವಿಕೊಟ್ಟು
ಅಟ್ಟಿದ ಬಾಡಾ ಅಗಲಲ್ಲಿ ಸುಟ್ಟಿದ ಬಾಡ್ ಸೂರಲ್ಲಿ
ರಕ್ತಾದ ತೊಳ್ಳ ಬದಿಯಲ್ಲಿ
ರಕ್ತಾದ ತೊಳ್ಳ ಬದಿಯಲ್ಲಿ ಅತ್ತಿಗ
ನಿನ್ನ ತಲವುದ್ರೊ ಒಲಿಯ ಬಿಡಲಿಲ್ಲೊ ||

ಕಣ್ಣಿನ ಜೀಬ್ರೆ ಕಳ್ಳೆಕಾಯ್ನ ಗಾತ್ರ
ಮೂಗೀನ ಗೊಣ್ಣ ಮೊಳವುದ್ದ
ಮೂಗೀನ ಗೊಣ್ಣ ಮೊಳವುದ್ದ ನಾದಾನಿ
ನಿಮ್ಮಣ್ಣನ್ಗ ಮುತ್ತು ಕೊಡು ಹೋಗು ||

ನಮ್ಮಣ್ಣ ಬಂದ ನನಗ ಬಣ್ಣ ತಂದ
ನಿಮ್ಮಣ್ಣ ಬಂದ ನಿನಗೇನೇ
ನಿಮ್ಮಣ್ಣ ಬಂದ ನಿನಗೇನೇ ಅತ್ತಿಗ
ಕೆಮ್ಮಣ್ಣ ತಂದ ಎಡರಲ್ಲಿ

ಕರಮೀನ ಕಡಿಗೀಕ್ಕಿ ಸೀಗಡಿ ದಂಡಕಟ್ಟಿ
ಅರ್ದ ಕೂಪಾಲ ತಲಗಿಕ್ಕಿ
ಅರ್ದ ಕೂಪಾಲ ತಲಗಿಕ್ಕಿ ನಾದಾನಿ
ರಾಜ ನೋಡಂತ ಕಳಗಿವ್ನಿ

ಕಾಸಿನ ತಲೆಯೊಳೆ ಸೀಸದ ಬಂದಿಯೋಳೆ
ದ್ವಾಸ ಕಲ್ಲಿನ ಮೊಕದೋಳೆ

ದ್ವಾಸ ಕಲ್ಲಿನ ಮೊಕದೋಳೆ ಅತ್ತಿಗ
ನಿನ್ನ ಸಾಸಾದ ಮಾತ್ಯಾಕೆ ಸಭೆಯಲ್ಲಿ ||

ಹೆಣ್ಣು ಕರೆದುಕೊಂಡು ಹೋಗುವಾಗ

ತಲೆಯ ಬಾಚ್ವಾಗ ತಾಯಮ್ಮಗ ನಗುಬಂತು
ತಲೆಯ ಬಾಚೆಣ್ಣ ಕರಕೊಂಡು
ತಲೆಯ ಬಾಚೆಣ್ಣ ಕರಕೊಂಡು ಹೋಗ್ವಾಗ
ತಾಯಮ್ಮಗ ದುಃಖ ಎರಗೀತು ||

ಕಪ್ಪು ಇಕ್ವಾಗ ಅವರಪ್ಪಾಜಿಗ ನಗುಬಂತು
ಕಪ್ಪಿಕ್ಕಿ ಹೆಣ್ಣು ಕರಕೊಂಡು
ಕಪ್ಪಿಕ್ಕಿ ಹೆಣ್ಣು ಕರಕೊಂಡು ಹೋಗ್ವಾಗ
ಅವರಪ್ಪಾಜಿಗ ದುಃಖ ಎರಗೀತು||
ಬಣ್ಣ ಉಡುವಾಗ ಅವರಣ್ಣ ಮಗ ನಗು ಬಂತು
ಬಣ್ಣ ಉಡ್ಸಿ ಹೆಣ್ಣ ಕರಕೊಂಡು
ಬಣ್ಣ ಉಡ್ಸಿ ಹೆಣ್ಣು ಕರಕೊಂಡು ಹೋಗ್ವಾಗ
ಅವರಣ್ಣಯ್ಯಗೆ ದುಃಖ ಎರಗೀತು |

ಮುತ್ತೀನ ಮಣಿಯ ಎತ್ತಿ ಬೀದಿಗ ಬಂದೊ
ಮುತ್ತಿನ ಮಣಿಯೆ ಅಳಬೇಡ
ಮುತ್ತಿನ ಮಣಿಯೇ ಅಳಬೇಡ ನಿನ್ನ ಒಡೆಯೋ
ನಿಸ್ತ್ರದೈವಾರು ಕಳಸೀವೊ ||

ಧಾರೆ ಪದಗಳು

ಧಾರೆ ಹೊತ್ತೀಗ ಯಾರ್‍ಯಾರು ಬರಬೇಕು
ಧಾರಾದ ಕೊರಳ ಹಿರಿಯಣ್ಣ
ಧಾರಾದ ಕೊರಳ ಹಿರಿಯಣ್ಣ ಸೋದರಮಾವ
ಧಾರಿಯ ಹೊತ್ತಿಗೆ ನೀಬೇಕು

ಹಾಲಿನ ಗಿಂಡಿ ತಾಯಮ್ಮ ಹಿಡಕಂಡು
ಹಾಲ ಎರದಾಳು ಕೈತುಂಬ
ಹಾಲ ಎರದಾಳು ಕೈತುಂಬ ಅವರ ತಾಯಮ್ಮ

ಇಂದು ಕಂದಮ್ಮ ರುಣ ಮೂಲ
ತುಪ್ಪಾದ ಗಿಂಡಿ ಅವರಪ್ಪಾಜಿ ಹಿಡಕಂಡು
ತುಪ್ಪಾ ಎರದಾರೋ ಕೈತುಂಬ
ತುಪ್ಪಾ ಎರದಾರೋ ಕೈತುಂಬ ಅವರಪ್ಪಾಜಿ
ಇಂದು ಕಂದಮ ರುಣಮೂಲ

ಎಣ್ಣಾಯ ಗಿಂಡೀಯ ಅವರಣ್ಣಾಯ ಹಿಡಿಕೊಂಡು
ಎಣ್ಣೆ ಎರೆದಾರೋ ಕೈತುಂಬ
ಎಣ್ಣೆ ಎರೆದಾರೋ ಕೈತುಂಬ ಅವರಣ್ಣಯ್ಯ
ಇಂದು ತಂಗ ಮಗ ರುಣ ಮೂಲ

ಒಂದು ತಿಂಗಗಳ ಮಗು ಎತ್ತು ಮುದ್ದಾಡಿ ಸಾಕಿ
ಗಂಧ ಕರಂಗಡಿಯ ವಣಬಜ ಎದೆಹಾಲು
ಗಂಧ ಕರಂಗಡಿಯ ಎಣಬಜ ಎದೆಹಾಲು
ಇಂದು ಕಂದಮಗ ರುಣ ಮೂಲ
ಚಪ್ಪರದ ಹಟ್ಟೀಗ ಹೋಗಿ ಬೀಸೋಗಾಳ
ಮತ್ತೊಂದು ಘಳಿಗ ತಡಮಾಡು
ಮತ್ತೊಂದು ಘಳಿಗ ತಡಮಾಡು ಅವರ ತಾಯಮ್ಮ
ತಾಯಿಯ ಬಳಗ ಶತಕೋಟಿ ||

ಅನೆಯ ಮೇಲೆ ಭಾರೀ ಜಂಗಮ ಬಂದ
ಇಂದ್ರನ ನಾಡಿಂದ ಶಿವಬಂದ
ಇಂದ್ರನ ನಾಡಿಂದ ಶಿವ ಬಂದು ಏನೆಂದ
ಸಣ್ಣೆಣ್ಣಿಗ ಧಾರೆ ಎರಿರೆಯಂದ ||

ಹೆಣ್ಣಿಗೆ ಸಂಬಂಧಪಟ್ಟ ಕಷ್ಟದ ಪದ

ಹೆಣ್ಣಾಗುಟ್ಟೋದಕ್ಕೆ ಮಣ್ಣಾಗುಟ್ಟೋದು ಲೇಸು
ಮಣ್ಣಿನ ಮೇಲೆ ಮರಹುಟ್ಟಿ
ಮಣ್ಣಿನ ಮೇಲೆ ಮರಹುಟ್ಟಿ ಬೆಳೆದಾರ
ಹೋಗಿ ಬರೋ ಜಂಗಮರ ನೆರಳಾದೋ ||

ಪಾಪಿಯಾದ ಮೇಲೆ ಕ್ವಪ್ಯಾಕೋ ಜನಮಾಕ
ನಾಕು ಜನ ಕುಂತಾಗ ನಗುವ್ಯಾಕೋ
ನಾಕು ಜನ ಕುಂತಾಗ ನಗುವ್ಯಾಕೋ ಜನುಮಾಕ
ಈ ಪಾಪೆಣ್ಣ ಯಾಕೋ ಧರೆಯಲ್ಲಿ ||

ಅಲ್ಲಿ ತರಲಿಲ್ಲ ಇಲ್ಲಿ ಬೇಡಿದರಿಲ್ಲ
ನಾ ಎಲ್ಲಾರ ಸಮಕ ಇರಲಿಲ್ಲ
ನಾ ಎಲ್ಲಾರ ಸಮಕ ಇರಲಿಲ್ಲ ಶಿವಗುರುವೆ
ಈ ಪಾಪೆಣ್ಣು ಯಾಕೋ ಧರೆಯಲ್ಲಿ ||

ಬಿದಿರುನ ಹಾಡು

ನಾನ್ಯಾರಿಗಲ್ಲಾದಳು ನಾನ್ಯಾರಿಗಲ್ಲಾದವಳು
ನಾನ್ಯಾರಿಗಲ್ಲಾದವಳು | ಬಿದಿರೂ
ನಾನ್ಯಾರಿಗಲ್ಲದವಳು ?
ಹುಟ್ಟೂತ ಹುಲ್ಲಾದೆ ಬೆಳೆಯುತ ಬಿದುರಾದೆ
ಚಿಕ್ಕನು ಜಂಗಮ್ಮಯ್ಯಗೆ | ಬಿದಿರೂ
ಭಿಕ್ಷಾಕೆ ಬೆತ್ತವಾದೆ |

ಅಪ್ಪಾಗಿ ಬುಟ್ಟಿಯಾದೆ ಅಮ್ಮಾಗೆ ಪೆಡ್ಲಿಗಾದೆ
ಚೆಂದುಳ್ಳ ನಾರಿಯರಿಗೆ | ಬಿದಿರೂ
ಕೋರುವ ಮೊರನಾದೆ

ಹೆಣ್ಣೀಗೆ ಬುಟ್ಟಿಯಾದೆ ಎಣ್ಣೀಗ ಲಳಗಾದೆ
ಕಣ್ಣು ಮೂರುಳ್ಳ ಶಿವಗೆ | ಬಿದಿರೂ
ಪಾಲಿಕೆ ಕೊಂಬಾದೆ

ಗುಡ್ಡದಲ್ಲಿ ಹುಟ್ಟೂತಿನಿ ಗುಡ್ಡಾದಲ್ಲಿ ಬೆಳೆಯಾತಿನಿ
ಗಡ್ಡಾ ಬಂದ ಮುದುಕಾರಿಗೆ | ಬಿದಿರೂ
ಊರುವ ಕೋಲಾದೆ.

ಹಚ್ಚೆಯ ಪದಗಳು – ೧

ಅತ್ತೆ ಬೈದರೆ ಒಪ್ಪು
ಮಾವ ಬೈದರೆ ಒಪ್ಪು
ಹಚ್ಚೀಯ ಬೊಟ್ಟು ಹಣೆಗೊಪ್ಪು
ಹಚ್ಚೀಯ ಬೊಟ್ಟು ಹಣೆಗೊಪ್ಪು ತಂಗ್ಗವ್ವ
ಬೊಚ್ಚಲು ಬಸಿರು ನಿನಗೊಪ್ಪಿ || ಎಂದು ಸೋದರ ಅಕ್ಕ ತಂಗಿಗೆ ತಿಳ ಹೇಳುವುದು

ಬಾ ನನ್ನ ನಾದುನೆ, ಹಾಲ ಮ್ಯಾಲಿನ ಕೆನೆಯೇ
ಯಾಲಕ್ಕಿ ಗೊನೆಯೆ, ಸಂಪಿಗೆ ತೆನೆಯೆ ||
ಹಚ್ಚೆ ಬೊಟ್ಟಿನ ಕೈಯಿ ಒತ್ತಿ
ಹಿಡಿಯಲ ಬ್ಯಾಡ

ನೆತ್ತರ ಇಳದಾವು ಕಿರಿಬಳ್ಳು
ಸತ್ತರೆ ನಮಕೋಟೆ ಮತ್ತೆಯ ಬರಬಹುದು
ಹಚ್ಚೆಯ ಬೊಟ್ಟು ಸುಲಿಹಲ್ಲು
ಕಟ್ಟಿರೋ ತುರಬು ||

ಅಕ್ಕ ಹೋಗೋನು ಬಾರೆ ಇಕ್ಕೆರಿ ಸಂತೀಗೆ
ಕೊಳ್ಳಾನು ಬಾರೆ ಚವುಲೀಯ
ಕೊಳ್ಳನು ಬಾರೆ ಚಿನ್ನಾದ ಬೊಟ್ಟು
ಒಪ್ಪಾವ್ರ ನನ್ನ ತುರುಬೀಗೆ
ಹಾವುರಾಣಿ ಕಂಡಿತಲ್ಲೆ ಹರಬಿದ್ದೆ
ಬೇಲ್ಯಾಗೆ

ನೀಏನು ದೊಡ್ಡ ಎದಿಗಾರ
ಕರ್‍ರಾನ ಹೆಣ್ಣಿಗೆ ತರಕಾರಿ
ಮಾಡಬ್ಯಾಡ

ಹರಕೋಳ ನಿನ್ನ ಗುಳದಾಳ
ಹರುಕೋಳು ನಿನ್ನ ಗುಳದಾಳ ಎಲೆರಾಮ, ಸರಕಾರದ ಮಗಳಾಗಿ ಇರುತೀನಿ|

೨
ಹಚ್ಚೆ ಉಯ್ದೆನು ಬಾರೆ ನಿನ
ಚಿತ್ತರಿ ತೋಳನ ಮೇಲೆ
ಹಚ್ಚೆಯ ಮೇಲೆ ಗಿಣಿರಾಮ ಸುವ್ವಯ್ಯ
ಹಚ್ಚೆಯ ಮೇಲೆ ಗಿಣಿರಾಮ ಬರೆದೇನು
ಚುಚ್ಚಿಸಿ ಕೊಂಬೋದೆ ನಿನ ಭಾರ ಸುವ್ವಯ್ಯ
ಚುಚ್ಚಿಸಿ ಕೊಂಬೋದೆ ನಿನ ಭಾರ ತಾಯವ್ವ
ಕೂಲಿ ಕೊಡುವಾಗ ನಿ ಕದನ ಸುವ್ಯಯ್ಯ
ಹಚ್ಚೇನ ಕೆಟ್ಯಾರೆ ಒಡ್ಡೆರಡ ಉಮ್ಮಿನಿ
ಕೊಯ್ ಅಂದ್ರೂ ಕೂಲಿ ಬಿಡೋದಿಲ್ಲ
ಸುವ್ವಯ್ಯ |

- *ಜಾನಪದ ಜಗತ್ತು ಹೆಚ್ಚೆ ಲೋಂದ ಒಳಗೆ*

೩

ಅಮ್ಮೀ ನಿನಗಂಡ ಎಂತೋನೇ ದಮ್ಮಯ್ಯ
ವತ್ಕಾರ ಕಾಣೇವಲ ಮುರುವ ಸುವ್ವಯ್ಯ
ವಂತ್ಕಾರ ಕಾಣೆವಲಿ ಮುರುವಮ್ಮಿಗಂಡ
ಸಂತೇಲಿ ಕದ್ದ ಕರಿಮೀನ ಸುವ್ವಯ್ಯ
ಸಂತೇಲಿ ಕದ್ದ ಕರಿಮೀನ ಮ್ಮಿಗಂಡ
ಸಂದೀಲಿ ತಿಂದಿ ಮೂರಗುಡ್ಡ ಸುವ್ವಯ್ಯ

೪

ಹಚ್ಚೆ ಉಯ್ಯದಮನ ಎಲ್ಲಮ್ಮ ನೆನೆಯೋದು
ಕಲಬಾವಿತಾವ ಕಯ ತೊಳೆದು ಸುವ್ವಯ್ಯ
ಕಲಬಾವಿ ತಾವ ಕೈಯ ತೊಳೆದು ಬರುವಾಗ
ಹಚ್ಚೆ ಉಯಸ್ನಮಗೆ ಸುಖ ಬಾಳಸುವ್ವಯ್ಯ
ಹಚ್ಚೆ ಉಯಿಸ್ದಮ್ಮ ಹಾಡು ಕಲಸೀದಮ್ಮ
ಸುವ್ವಯ್ಯ

ಹಸು ಮಕ್ಕಾಳಗಾಲ ನೆರೆದಮ್ಮ
ಕುಸುವ ಸತ್ತರಿಗೆ ನೆರಳಾಗೆ ಸುವ್ವಯ್ಯ
ಹೆಚ್ಚೆ ಉಯಿಸ್ದಮಗೆ ಎಲ್ಲ ಭಾಗ್ಯವುಬರಲಿ
ಪಲ್ಲಕ್ಕಿ ಮೇಲೆ ಮಗ ಬರಲಿ ಸುವ್ವಯ್ಯ
ಪಲ್ಲಕ್ಕಿ ಮೇಲೆ ಮಗ ಬರಲಿ ಅವ್ವಯ್ಯ
ಮಲ್ಲಿಗೆ ಮುಡಿಯೋ, ಸೊಸೆ ಬರಲಿ ಸುವ್ವಯ್ಯ

೫

ಯಾರು ಉಯ್ಸಿದಾರಮಗ್ಯಾ ದೇವಲೋಕಾರ ಹಚ್ಚೆ
ಹಡೆದವ್ವ ಬಂದು ಕೈಯ ನೋಡಿ ಸುವ್ವಯ್ಯ
ಹಡೇದವ್ವ ಬಂದು ಕೈಯ ನೋಡೇನಂದಾಳೆ
ಮುತ್ತೈದೆ ತನಕ ಇವ ಮೇಲು ಸುವ್ವಯ್ಯ |

ಏ ಸಂಪನ್ನ ಸಿರುಗರತಿ ಬಳ್ಳೆ ನಾಕೂ ಮುದ್ದೆಯ ನುಂಡು
ಗಂಡನ ಹಂತಿಲ್ಲಸಮ ಮುದ್ದೆ ಬಾ ನನ್ನ ನಾದೂನಿಯೇ
ಗಂಡನ ಹಂತಿಲ್ಲಸಮ ಮುದ್ದೆನಿಕ್ಕೊಂಡು
ಯಾಕಲ ಶಿವನೆ ಈ ಒಲದು... ಬಾ ನನ್ನ ನಾದುನಿಯೇ

ಹಣಚಿ ಬಟ್ಟಿನ ಮ್ಯಾಲ ಹಚ್ಯಾಳ ಕುಂಕುಮ
ಮೆಚ್ಯಾಳ ಬಾಳ ಚೆಲುವನ | ನೋಡಯ್ಯ
ಮಚ್ಚೀಯ ಕಾಲ ಹಿಡಿದಾಳ
ಹಂಚಿ ಬಟ್ಟಿನ ಮ್ಯಾಲ ಹರಿದಾಡು ಕುಂಕುಮ
ಇಚ್ಚುಳ್ಳರಾಯ ಇದರೀಗೆ | ಬಂದರ
ಹೆಚ್ಚುಳ್ಯ ತವರ ಮರತಾಳ

ಹಣಚಿ ಬಟ್ಟಿನ ಗೆಳತಿ ಬಾ ನನ್ನ ಓಣಿಗಿ
ನನಕಿಂತ ಚೆಲುವಿ ನನ ಮಗಳ | ಕೈಮ್ಯಾಲ
ಚೆಂದಾಗಿ ಬರಿಯೆ ಚಂದ್ರಾಮ

ಹಲ್ಲಿಗಿ ಹಲ್ಲಟ್ಟು ಗಲ್ಲಕ್ಕ ಹಂಚಿ ಬಟ್ಟ
ಗೊಲ್ಲರ ಓಣ್ಯಾಗ ಬರತಾಳ | ನನ ಹುಡುಗಿ
ನಿಲ್ಲಂತ ಸೆರಗ ಹಿಡದೇನ
ಹಚ್ಚಿನ ಹಚ್ಚಿಬಟ್ಟು ಉದ್ದನ ಮಲಕಟ್ಟು
ಸಿಗದಂತ ಸಣ್ಣ ನಡುವಿನ | ಎಲೆಬಾಲಿ
ಮುರಕ ಮಾಡಬ್ಯಾಡ ಮುರದೀತು.

ಹಂಚಿ ಬಟ್ಟಿನ ಕೈಯ ಒತ್ತೊತ್ತಿ ಹಿಡಿಬ್ಯಾಡೊ
ನೆತ್ತರಿಳದಾವು ಬೆರಳೀಗಿ | ನನರಾಯ
ಅತ್ತಿ ಬೈದಾಳು ಕೈಬಿಡೊ

ಹಚ್ಚೆಯ ಪದಗಳು

ಬಾ ನನ್ನ ನಾದುನಿಯೇ ||ಪಲ್ಲವಿ||
ಹಚ್ಚೆ ಹೋದೇನು ಬಾರೆ ಬಿತ್ತರಿ ತೋಳಿನ ಮ್ಯಾಲೆ
ನಿನ್ನ ಹಚ್ಚೆಯ ಮ್ಯಾಲೆ ಗಿಣಿರಾಮ -ಬಾ ನನ್ನ ನಾದುನಿಯೇ
ನಿನ್ನ ಹಚ್ಚೆಯ ಮ್ಯಾಲೆ ಗಿಣಿರಾಮ -ಬರದೇನು
ಚುಚ್ಚುಸಿಕೊಂಡು ನಿಮ ಭಾರ ಬಾ -ನನ್ನ ನಾದುನಿಯೇ

ಹಚ್ಚೆ ಹುಯ್ಸೀದಮ್ಮ ಹಾಡು ಕಲಸೀದಮ್ಮ
ಹಸು ಮಕ್ಕಳಿಗ್ಹಾಲು ಎಂದಮ್ಮ ಬರುತಾಳೆ
ಕುಸಲಾದ ಸತ್ತಿಗೆಯ ನೆರಳಾಗೆ

ಹಚ್ಚೆ ಹುಯ್ಸೀದಮ್ಮ ಎಲ್ಲೆಲ್ಲಿ ನೆನೆವೋದು
ಕಲ್ಲು ಬಾವಿತಾವ ಕೈಯ ತೊಳದು

ಕಲ್ಲು ಬಾವಿತಾವ ಕೈಕಾಲು ಮಕವೇ ತೊಳದು
ಹಚ್ಚೆ ಹುಯ್ಸಿದಮ್ಮ ಸುಖಬಾಳು

ಸಣ್ಣ ಸೀರೆಯ ಉಟ್ಟು
ಜಂಬೂರಿಗೆ ಠಾಯ ಕಳವಿದೊ.....
ಬಾ ನನ್ನ ನಾದುನಿಯೇ
ಬೆಂದು ಬೆಟ್ಟದ ಕೆಳಗೆ ಒಳ್ಳೆಬೇವಿನ ಚಿಗುರುಂಟೆ
ಕೆಂಡವರೆ ಉಂಟೆ ಕಾಡರವಲ್ಲಿ ಬಾ ನನ್ನ ನಾದುನಿಯೇ
ಕೆಂದಗುದುರೆಯ ಜಾಣ ಒಳ್ಳೆ ಚಂದದ ಕಡುವಾಣ
ಎಂದೀಗೆ ಬರುತೀಯೊ ಹಿರಿಯಣ್ಣ
ಬಾ ನನ್ನ ನಾದೂನಿಯೇ

ಎಂದಿಗೆ ಬರುತೀಯೇ ಹಿರಿಯಣ್ಣ ಕೈಯೊಳಗಲ
ನಿನ್ನ ಉಂಗುರ ಬರಲೊ ಬೆರಳೀಗೆ ಬಾ ನನ್ನ ನಾದುನಿಯೇ

ಸೊಳೆ ಅನಿಗ್ಹೋಗೋರಿಗೆ ಒಳ್ಳೆ ಸುಡುಗಾಡ ಬಡಿಯಾಲ
ಮನೆಯ ಹೆಂಡರಿಗೆ ಮಾರಮಾಚಿ ಬಾ ನನ್ನ ನಾದುನಿಯೇ
ಮನೆ ಮನೇ ಹೆಂಡತಿಗೆ ಮಾರ ಮಾಚಿ ಹೋಗೋನ
ಆಯ್ಯೋ ಮಂಡಲದಾವೆ ಕಡಿಯಾಲ -ಬಾ ನನ್ನ ನಾದುನಿಯೋ

ಸೂಳೆ ನಿ ಸುಪ್ಪಳ್ಳಿ ಒಳ್ಳೆ ದೇವರಿಗೆ ಒಲ್ದಾಡಿ
ದ್ಯಾವಕ್ಕನ ಗಂಡ ನೀರವಾಣಿ -ಬಾ ನನ್ನ ನಾದುನಿಯೇ
ಬಳ್ಳಾರಿ ಸಂತಿಂದ ಒಳ್ಳೆ ಬಳಯ ಪಟ್ಟಣದಿಂದ
ಐಭೋಗದಿಂದ ಐದಾ ಮಂದಿ -ಬಾ ನನ್ನ ನಾದುನಿಯೇ

೪. ಪದಕೋಶ

ಕ್ರ.ಸಂ	ಕನ್ನಡ	ತಮಿಳು	ತೆಲುಗು	ಕುಳುವ
೧.	ಅನ್ನ	ಚೋರು	ಅನಂ	ಸೋರು
೨.	ಅಮ್ಮ	ತಾಯ್	ಅಮ್ಮ	ಅಮ್ಮ
೩.	ಅಜ್ಜಿ	ಆಯಾ	ಅಮ್ಮಮ್ಮ	ಅಪ್ಪ
೪.	ಮುತ್ತಜ್ಜಿ	ಪಾಟಿ	ಜೇಜಮ್ಮ	ಜೇಜಿ
೫.	ಮೊಮ್ಮಗಳು	ಪೇತಿ	ಮನಮರಾಲು	ಪ್ಯಾತಿ
೬.	ಮಗಳು	ಮಗೋ	ಕೂತುರು	ಮಗಳು
೭.	ಅಕ್ಕ	ಅಕ್ಕ	ಅಕ್ಕಯ್ಯ	ಅಕ್ಕ
೮.	ನಾದಿನಿ	ಅನ್ನಿ	ವದಿನ	ಮೆಚ್ಚಿನಿಸಿ
೯.	ಅತ್ತೆ	ಅತ್ತೇ	ಅತ್ತಮ್ಮ	ಅತ್ತಮ್ಮ
೧೦.	ಮಹಿಳೆ	ಪೆಣ್ಣ್	ಸ್ತ್ರೀ	ಒರತಿ
೧೧.	ತಂಗಿ	ತಂಗೀಚ್ಚಿ	ಚೆಲ್ಲಲು	ತಂಗಸಿ
೧೨.	ದೊಡ್ಡಮ್ಮ	ಪೆರಿಮ್ಮ	ಪೆದ್ದಮ್ಮ	ಬೆದ್ದಮ್ಮ
೧೩.	ಚಿಕ್ಕಮ್ಮ	ಚಿತ್ತೀ	ಪಿನ್ನಿ	ಸಣ್ಣಮ್ಮ
೧೪.	ಅವಳು	ಅವಳ್	ಆಮೆ	ಅವ
೧೫.	ಬುಟ್ಟಿ	ಪೆಂಡೆ	ಬುಟ್ಟಿ	ತೆಟ್ಟಂಗ (ಕುಕ್ಕು)
೧೬.	ಮೋರ	ಮೊರಂ	ಛಾಟ	ಸೊಟು
೧೭.	ಹಚ್ಚೆ	ಪಚ್ಚೆ	ಪಚ್ಚೆಬೊಟ್ಟು	ಮಚ್ಚಂಗ (ಪಚ್ಛೆ)
೧೮.	ಬಟಲು	ಕಿನ್ನೋ	ಗಿನ್ನಿ	ಗಿನಿ
೧೯.	ಸೂಜಿ	ಊಸಿ	ಸೂದಿ	ಸೂಜಿಗೆ
೨೦.	ತೊಟ್ಟಿಲು	ತೋಟಲ್	ಉಯಾಲ	ತೊಟ್ಟಲು
೨೧.	ಕುಡುಗೋಲು	ಅರುವಾ	ಕೊಡುವಿಲೀ	ಕೊಡ್ಲಿ
೨೨.	ಕಸಬರಿಗೆ	ಸಿಮರ್	ಚಿಪಿರಿಕಟ್ಟು	ಪರಕಡಿ (ಪರಕ್ಕಂಗ)
೨೩.	ಜನರು	ಜನಂಗೋ	ಜನಮು	ಜನಂ
೨೪.	ಸೀರೆ	ಸೀರ	ಚೀರ	ಸೀರ
೨೫	ಬಳೆ	ವಲೆಯಲ್	ಗಾಜುಲು	ಬಳೆ (ಗಾಜುಲು)

ಕ್ರ.ಸಂ	ಕನ್ನಡ	ತಮಿಳು	ತೆಲುಗು	ಕುಲುವ
೨೬.	ಕುಪ್ಪಸ	ಜಾಕೀಟ	ಜಾಕೀಟು	ಸಟಂಗ
೨೭.	ಕುಂಕುಮ	ಕುಂಗುಮಾಂ	ಕುಂಕುಮಮು	ಕುಂಕುಮ
೨೮.	ಜಡ	ಜಡ	ಜಡ	ಜಡ
೨೯.	ಅತ್ತಿಗೆ	ಮಾಮಿಯಾರ್	ಅತ್ತ	ನಂಗ
೩೦.	ಸೊಸೆ	ಮರ್‌ಮೊಗಳ್	ಕೊಡಲು	ಮೆರ್‌ಮಗಳ್
೩೧.	ಮದುವೆ	ಕಲ್ಯಾಣೋ	ಪೆಳ್ಳಿ	ಕಣ್ಯಾಳುಮು
೩೨.	ಹೆಂಡತಿ	ಪೊಂಡಾಟೀ	ಪೆಳ್ಳಾಂ	ಕುಳಸಿ
೩೩.	ಹೂವು	ಪೋ	ಪೂಲು	ಪುವಾಂಗ
೩೪.	ಕಾಯಿ	ಕಾಯ್	ಕಾಯಿ	ಕಾಯ
೩೫.	ಗಡಿಗೆ	ಪಾನೇ	ಕುಂಡ	ಸೆಟ್ಟು
೩೬.	ಓಲೆ	ಅಡುಪು	ಪೂಯೀ	ಅಡುಪು
೩೭.	ಸಾಮಾನು	ಸಾಮಾನು(ಪೂಝ್)	ಸಾಮನ್ಲು	ಸಾಮಾನಂಗ
೩೮.	ಹಣ	ಕಾಸು(ಫಣೇ)	ಡಬ್ಬುಲು	ಪೊನ್ನು
೩೯.	ಒಡವೆ	ನಗೆ	ನಗಲು	ಎರಿಗೆಲ್ಲು (ಬಂಗಾರ)
೪೦.	ಬಂಗಾರ	ತಂಗೋ	ಬಂಗಾರಮು	ಬಂಗಾರ
೪೧.	ಬೆಳ್ಳಿ	ವೆಳ್ಳಿ	ವೆಂಡಿ	ಬಳ್ಳಿ
೪೨.	ದೇವರು	ಕಡವಲ್	ದೇವುಳ್ಳು	ದೇವರಂಗ
೪೩.	ಮನೆ	ವೀಡು	ಇಲ್ಲು	ವೂಡು
೪೪.	ಮಕ್ಕಳು	ಪಸಂಗಳು	ಪಿಲ್ಲಲು	ಗುಂಟೆಂಗ
೪೫.	ಹಾವು	ಪಾಂಬು	ಪಾಮು	ಪಾಮು
೪೬.	ಹೆಣ್ಣುಮಕ್ಕಳು	ಪೊಣ್ಣು	ಆಡಪಿಲ್ಲಲು	ಪೆಂಗರ್ಗುಂಟೆ (ಪಾಪಂಗ)
೪೭.	ಹಣೆ	ನೆತ್ತಿ	ಪನ	ಪಣ
೪೮.	ಬೆಳಗೆ	ಕಾಲೀಲೇ	ಪೊದ್ದುನ	ಹೊಳೆಗಿದ್ದು ಹುಡುಗಾಲ್ಲಿ
೪೯.	ಬೆಲೆ	ವೆಲ್ಯಾ	ವಿಲುವ	ಬೆರುಪು

ಕ್ರ.ಸಂ	ಕನ್ನಡ	ತಮಿಳು	ತೆಲುಗು	ಕುಳುವ
೫೦.	ಮೆಣಸು	ಮೆಲಗ್	ಮೆರಿಯಾಲು	ಮೊಳಗು
೫೧.	ಬ್ರಾಹ್ಮಣ	ಐಯ್ಯರ್	ಬ್ರಾಹ್ಮಣುಡು	ಪೆಣಮಾಮಿ
೫೨.	ನಾಯಕ್	ತಲೈವರ್	ನಾಯಕುಡು	ಓಡವಿ. (ಕೆಲ್ಲಲಾವಿ)
೫೩.	ಮುಸ್ಲಿಂ	ತುಲಗನ್(ಮುಸ್ಲಿಂ)	ಮುಸ್ಲಿಂ	ಹುಲ್ಲುಗಾವಿ
೫೪.	ಹಜಾಮರು	ಸೌರಮ್	ಮಂಗಲೋಲ್ಲು	ನಶಸಾವಿ
೫೫.	ಹರಿಜನ	ಸಕ್ಲಿಯರ್	ಮಾದಿಗ	ಪರ್ರಾವಿ
೫೬.	ರಾಗಿ	ರಾಯಿ	ರಾಗುಲು	ಕೊರ್ರ್ಗ
೫೭.	ಸಾರು	ಕೊಳಂಬು	ಚಾರು	ಕಟ್ಟು (ಸಾರು)
೫೮.	ಪಕ್ಕ	ಪಕ್ಕತ್‌ಲೇ	ಪಕ್ಕನ	ಪಕ್ಕಳ್ಳಿ
೫೯.	ಕೆಳಗೆ	ಕೀಲೇ	ಕಿಂದ	ದೀಗಿಲು
೬೦.	ಮೇಲೆ	ಮ್ಯಾಲೇ	ಪೈನಾ	ಮೇನಿ
೬೧.	ಗಿಡ	ಚೆಡಿ	ಚೆಟ್ರು	ಸೆಡಿ
೬೨.	ಹಾಲು	ಪಾಲ್	ಪಾಲು	ಪಾಲು
೬೩.	ಬೆಂಕಿ	ನೆರಪು	ಅಗ್ಗಿ(ನಿಪ್ಪು)	ನೆರುಪು
೬೪.	'ಬಾ'	'ವಾ'	'ರಾ'	'ವಾ'
೬೫.	ಬೇಡ	ವ್ಯಾಂಡಾ	ವದ್ದು	ಮಾನ (ಮಾಟಿ)
೬೬.	ಸಾಕು	ಪೊದುಂ	ಚಾಲು	ಸಾನ
೬೭.	ಪಲ್ಲೆ	ಕೀರೊಂ	ಕೂರ	ನಕ್ಲಿ
೬೮.	ಮುದ್ದೆ	ಕಳ	ಮುದ್ದಾ	ಕಳ
೬೯.	ನೀರು	ತಣ್ಣಿ	ನೀಳ್ಳು	ತೆನ್ನಿ
೭೦.	ಬಟ್ಟೆ	ತುನಿಯೋ	ಬಟ್ಟಲು	ಬಟ್ಟಿಂಗ
೭೧.	ದೀಪ	ವಿಳಕ್ಕು	ದೀಪ(ವೆಲುಗು)	ವಳಕು
೭೨.	ಅಕ್ಕಿ	ಅರಸಿ	ಬಿಯಮು	ಎರಸಿ
೭೩.	ಆಡು	ಜರಿಯೇ	ಗೋವು	ಆಕಳು
೭೪.	ಎಮ್ಮೆ	ಎರುಮು	ಎನುಮು	ಎನುಮಗೊಡ್ಡು
೭೫.	ಕಾಲುಂಗರ	ಮೆಟ್ರುವಲಿ	ಕಾಲುಮೆಟ್ಲು	ಕಾಲುಮೆಟ್ಲ

ಕ್ರ.ಸಂ	ಕನ್ನಡ	ತಮಿಳು	ತೆಲುಗು	ಕುಳುವ
೭೬.	ಕೋಳಿ	ಕೋಲಿ	ಕೋಡಿ	ಕೋಯಿ
೭೭.	ಚಂದ್ರ	ನಿಲಾ	ಚಂದುಡು	ಚಂದ್ರಮಾಮ
೭೮.	ಜೇನು	ತೇನ್	ತೇನ್	ತೇನಿ
೭೯.	ತಾಳಿ	ತಾಳಿ	ತಾಳಿ(ಮಾಂಗಲ್ಯ)	ತಾಳಿ
೮೦.	ಜಿರಿಗಿ	ಜಿರಗು	ಜಿಲ್ಲಕರ್ರ	ಜಿರಿಗೆ
೮೧.	ತೆಂಗಿನಕಾಯಿ	ತೆಂಗಾಯ್	ತೆಂಕಾಯ್	ತೆಂಕಾಯಿ
೮೨.	ನರಿ	ನರಿ	ನಕ್ಕ	ನಕ್ಕ
೮೩.	ನವಿಲು	ಮೈಲ್	ನೆಮಲಿ	ನೆಮಲಿ
೮೪.	ನಾಯಿ	ನಾಯಿ	ಕುಕ್ಕ	ನಾಯಿ
೮೫.	ಮರಿ	ಕುಟ್ಟಿ	ಪಿಲ್ಲ	ಗುಂಟ
೮೬.	ಹಾರೆ	ಗಡಿಪಾರೆ	ಗಡಾರ	ಗಡಾರ
೮೭.	ಹೊಲ	ವಯಲ್	ಪೊಲಂ	ಕುಲ್ಲು
೮೮.	ಹಂದಿ	ಪಣ್ಣಿ	ಪಂದಿ	ಪೆಂಡ್ರಿ
೮೯.	ಮೊಲ	ಮೊಸಲು	ಕುಂದೇಲು	ಕುಂಗೇಲು
೯೦.	ಹಸು	ಮಾಡು	ಪಸುವುಲು	ಮಾಡ್
೯೧.	ಮಾವಿನಕಾಯಿ	ಮಾಂಗಾಯಿ	ಮಾಮಿಡಿಕಾಯಿ	ಮಾವಿಡಿ ಕಾಯಿ
೯೨.	ಹುಲಿ	ಪುಲಿ	ಪುಲಿ	ಪುಲಿ
೯೩.	ಮೆಣಸಿನಕಾಯಿ	ಮೊಳಗಾಯಿ	ಮಿರಪ್ಪ ಕಾಯಿ	ಮಳಕ್ಕಾಯಿ
೯೪.	ಮಂಗ	ಕೊರಂಗು	ಕೋತಿ	ಕೋತಿ
೯೫.	ಮರ	ಮರಂ	ಮಾನ(ಚೆಟ್ಟು)	ಮರಮು
೯೬.	ಬೆಟ್ಟ	ಮಲೈ	ಕೊಂಡ	ಕೊಂಡ
೯೭.	ಬಾಳೆಹಣ್ಣು	ವಾಳಕಾಯಿ	ಅರಟಿಪಂಡು	ಅರಟಿಪಂಗು
೯೮.	ಬಿದಿರು	ಮುಳ್ಞಂಗಲೆ	ಬೊಂಗು	ಬಿದರಂಗ
೯೯.	ಮಚ್ಚು	ಅರುವಾ	ಮಚ್ಚು	ಮಚ್ಚು
೧೦೦.	ಬೆನ್ನು	ಮಂದುವು	ವೀಪು	ನಡ್ಡೀಪು
೧೦೧.	ಕೂದಲು	ಮುಡಿ	ವೆಂಟ್ರುಕಲು	ಮೊಗುರು
೧೦೨.	ಬೆಲ್ಲ	ವೆಲ್ಲೂಂ	ಬೆಲ್ಲಂ	ಬೆಲ್ಲಮು

ಕ್ರ.ಸಂ	ಕನ್ನಡ	ತಮಿಳು	ತೆಲುಗು	ತುಳುವ
೧೦೩.	ಗಂಗಾಳ	ತಟ್ಟೆ	ತಟ್ಟ	ಕಳಯು
೧೦೪.	ರತ್ನಪಕ್ಷಿ	ಸೆಂಬೂತ್	ಸಾಂಬಾರ್ ಕಾಕಿ	ಸಾಂಬಾರ ಪೋತು
೧೦೫.	ಮಾವು	ಮಾವು	ಪಿಂಡಿ	ಮಾವು
೧೦೬.	ಬೆಳ್ಳುಳ್ಳಿ	ಪೊಂಡು	ವೆಲ್ಲಪಾಯಿಲು	ಬೊಳ್ಳಳ್ಳಿ
೧೦೭.	ಈರುಳ್ಳಿ	ವ್ಯಾಂಗಾಯೆ	ಉಲ್ಲಗಡ್ಡಿ	ಉಲಗಡ್ಡಿ
೧೦೮.	ಮೊಸರು	ತೈರು	ಪೆರುಗು	ಪೆರುಗು
೧೦೯.	ಎಲೆ	ಎಲ	ಆಕು	ಯಲ
೧೧೦.	ಅಡಿಕೆ	ಪಾಕ್	ವಕ್ಕ	ಪಾಕು
೧೧೧.	ಹಗ್ಗ	ಕೌರು	ತಾಡು(ಪಗ್ಗಂ)	ಕರಗು
೧೧೨.	ಸಾರಾಯಿ	ಸರಾಯಿ	ಸರಾಯಿ	ಕರ್ತನ್ನಿ
೧೧೩.	ಮೊರ	ಮೊರಂ	ಚಾಟ	ಸೊಟು
೧೧೪.	ಭೂಜ	ತೂಳ್	ಭೂಜಂ	ಬುಜಮು
೧೧೫.	ಬೆವರು	ವೇರ್‌ವೇ	ಚಮಟ	ಸರತ
೧೧೬.	ಬಾಯಿ	ವಾಯ್	ನೋರು	ವಾಯಿ
೧೧೭.	ನೆತ್ತಿ	ನೆತ್ತಿ	ನೆತ್ತಿ	ಸುಳ
೧೧೮.	ನಾಲುಗೆ	ನಾಕ್	ನಾಲುಕಾ	ನಾಲಿಕಿ
೧೧೯.	ನರ	ನರಂ	ನರಮು	ನರಮು
೧೨೦.	ದವಡಿ	ಕಡವಾಯ್	ದವಡ	ದವಡ
೧೨೧.	ತೋಳು	ತೇಳ್	ಚೇತುಲು	ಕೈಲು
೧೨೨.	ತುಟಿ	ಓದಡು	ಪೆದವುಲು	ತುವಂಗ
೧೨೩.	ತಲೆ	ಮಂಡೆ(ತಲೆ)	ತಲಕಾಯಿ	ತಲಕಾಯ
೧೨೪.	ಚರ್ಮ	ತೂಲ್	ಚಮ್ಮಮು	ತೊಲು
೧೨೫.	ಗಲ್ಲ	ಕನ್ನೋ	ಬುಗ್ಗಲು	ದೌಡ್ಲು
೧೨೬.	ಕೈ	ಕೈ	ಚೈ	ಕೈ
೧೨೭.	ಕಿವಿ	ಕಾದ್	ಚೋವು	ಚೋವು
೧೨೮.	ಕರುಳು	ಕೋಡಲ್	ಪೆಲುಗು	ಕೊಡ್ಲು

ಕ್ರ.ಸಂ	ಕನ್ನಡ	ತಮಿಳು	ತೆಲುಗು	ಕುಳುವ
೧೨೯.	ಕತ್ತು	ಕೆಳಲ್	ಗೊಂತು	ಗೊಂತು
೧೩೦.	ಕಣ್ಣುಗುಡ್ಡೆ	ಕನ್‌ಮೊಟ್ಟೆ	ಕನ್‌ಗುಡ್ಡಾ	ಕನ್‌ಗುಡ್ಡಾ
೧೩೧.	ಹುಬ್ಬು	-	ಕನುಬೊಮ್ಮ	ಹುಬ್ಬುಲು
೧೩೨.	ಅಂಗಾಲು	ಪಾದೊಂ	ಪಾದಂ	ಪಾದಂ
೧೩೩.	ಉಗುರು	ನೆಗೋ	ಗೊರುಲು	ಗೊರುಲು
೧೩೪.	ಹೊಕ್ಕಳು	ತೊಪ್ಪಲ್	ಬೊಡ್ಡು	ಬೊಡ್ಡು
೧೩೫.	ಎದೆ	ನೆಂಜಿ	ದಮ್ಮುಲು	ದಮ್ಮುಲು, ನೊಂಜಿ
೧೩೬.	ಕಣ್ಣೀರು	ಕಣ್ಣೀರ್	ಕನ್ನೀಳ್ಳು	ಕಣ್ಣುತೆನ್ನಿ
೧೩೭.	ಕಣ್ಣು	ಕಣ್	ಕಳ್ಳು	ಕಂಡ್ಲು
೧೩೮.	ಮೇಲೆ	ಮ್ಯಾಲೆ	ಪೈನಾ	ಮೇಸಾ
೧೩೯.	ಋತುಮತಿ	-	ಪುಷ್ಪವತಿ (ಪೆದ್ದಮನಿಶ)	ಕೈಕುವಂದೀರ ಬೆರುಮಣಿಸಿ ಅಯ್ಯಿರ
೧೪೦.	ಮಗು	ಕೇಳಂದ	ಪಿಲ್ಲ	ಗುಂಟಾಂಗ
೧೪೧.	ಎಬ್ಬಿಸು	ಎಲುಪು	ಲೇಪು	ಎದ್ದಿಡಿ
೧೪೨.	ಅಂಗಿ	ಅಂಗಿ	ಚೊಕ್ಕ	ಅಂಗಿ
೧೪೩.	ಮಂಡಿ	ಮುಟ್ರ	ಮೊಕಾಂಳ್ಳು	ಮೊಕಾಂಳು
೧೪೪.	ಮೂಗು	ಮೂಕು	ಮುಕ್ಕು	ಮುಕ್ಕು
೧೪೫.	ಮೆದುಳು	ಮೂಳೇ	ಮೆದುಡು	ಮೆದುಡು
೧೪೬.	ಹಣೆ	ಹಣೆ	ಪನ	ಹಣೆ
೧೪೭.	ರಕ್ತ	ರತ್ನಂ	ರಕ್ತಂ	ರೆಗುಮು
೧೪೮.	ರೆಪ್ಪೆ	ರೆಪ್ಪಂ	ರೆಪ್ಪೆ	ರೆಪ್ಪಲು
೧೪೯.	ಹಲ್ಲು	ಪಲ್ಲು	ಪೊಂಡ್ಲು	ಪೆಲ್ಲಂಗ
೧೫೦.	ಹೊಟ್ಟೆ	ವೈರು	ಕಡುಪು	ವರಗ
೧೫೧.	ಹೃದಯ	ಇದಯಂ	ಹೃದಯಮು	ಕಾಯಗುಂಡೆ
೧೫೨.	ನಡು	ಇಡುಪು	ನಡುಮು	ನಡುಮು

ಕ್ರ.ಸಂ	ಕನ್ನಡ	ತಮಿಳು	ತೆಲುಗು	ತುಳುವ
೧೫೩.	ನೋಡುವುದು	ಪಾಕ್‌ರದ್	ಚೂಸೆದಿ	ಪಾಕ್‌ರದ್
೧೫೪.	ಕೇಳುವುದು	ಕೇಕರದ್	ಅಡಿಗೇದಿ	ಕೇಕ್‌ರದು
೧೫೫.	ಊಟಮಾಡು	ಸೂರ್‌ಸಾಪುಡು	ಭೂಜನಂಚ್ಯೈ	ಉಂಗುರುದು
೧೫೬.	ಊಟ	ಸಾಪಾಡು	ಬೋಜನಂ	ಉಂಗು
೧೫೭.	ಮಲ	ತೂಂಗು(ಪಡಿತಿಕೋ)	ಪಂಡುಕೋ	ಬುದುಗೋ
೧೫೮.	ಕರೆಯುವುದು	ಕೂಪುಡುದು	ಪಿಲಚೇದಿ	ಅಕ್ಕುರುದು
೧೫೯.	ಹೆಣ್ಣುನೋಡುವುದು	ಪೊಣ್ಣು ಪಾಕ್‌ರದು	ಪಿಲ್ಲನಿ ಚೂಸೇದಿ	ಗುಂಟನ ಪಾಕ್ರುದು
೧೬೦.	ತರುವುದು	ಎಡ್‌ತ್‌ಕಿಟ್‌ವರಂದು	ತಿಸ್‌ಕುನೀ ರಾ	ಅಡಿತೆರುದು
೧೬೧.	ಮಾರುವುದು	ವಿಕಿರದು	ಅಮ್ಮೇದಿ	ಇಕೀರುದು
೧೬೨.	ತಿಳಿದುಕೋ	ತೆರಿಂಚಿಕೋ	ತೆಲಿಸುಕೋ	ತೆಳುಜುಗೋ
೧೬೩.	ಪೂಜೆ	ಪೂಜ	ಪೂಜೆ	ಪೂಜಿ
೧೬೪.	ಹೋಗೋಣ ಬಾ	ಪೊಲಾಮ ವಾ	ಪೊದಾಂರಾ	ಓಗಾಂವಾ
೧೬೫.	ಮಾತನಾಡಬೇಕು	ಪೆಸುವೇಣೋ	ಮಾಟ್ಲಾಡಾಲಿ	ವಾಸೆತ್ತರದು
೧೬೬.	ಉಳಿಸಿಕೊಳ್ಳು	ಮಿಚಂಕುಡು	ನಿಲ್‌ಪೆಟ್ಟುಕೋ	ಉಳಿಪಿಚ್ಚುಕೋ
೧೬೭.	ಕಥೆಗಳು	ಕಥೇ	ಕಥಲು	(ಕಥಲು) ಕಥೆಂಗ
೧೬೮.	ಕಟ್ಟುಪಾಡು	-	ಕಟ್ಟುಬಡಿ	ಕಟ್ಟುಬುಗು
೧೬೯.	ಬೇರೆ ಬೇರೆ	ವ್ಯಾರೆ-ವ್ಯಾರೆ	ವೇರೆ-ವೇರೆ	ಬೇರೆ ಬೇರೆ
೧೭೦.	ಬರೆಯುವುದು	ಎಲ್‌ದ್‌ರದು	ರಾಸೇದಿ	ವಂಕಿರುದು (ದಾಸಿಂಗುದು)
೧೭೧.	ಊಟಮಾಡಬೇಕು	ಸೋರ್‌ಸಾಪಡು ವೇಣೆ	ಭೋಜನಂ ಚೆಯಾಲಿ	ಉಂಗುರುದು
೧೭೨.	ತರುವುದಿಲ್ಲ	ಎಡತ್‌ಟ್‌ವರ್‌ದಿಲ್ಲ	ತಿಸಕುನಿರಾನು	ತರ್‌ಮಾಟೆ
೧೭೩.	ಬರುವುದಿಲ್ಲ	ವರ್‌ದಿಲ್ಲೇ	ರಾನು	ವರಮಾಟೇ
೧೭೪.	ಹೇಳು	ಸೋಲ್ಲು	ಚೆಪ್ಪು	ಸೋನು
೧೭೫.	ಕೈ ತೊಳೆದುಕೋ	ಕೈಕಲುವಿಕೋ	ಚೆಯ್‌ಕಡುಕೋ	ಕೈ ಪೆಚ್ಚು
೧೭೬.	ಮಲಗಿಕೋ	ಪೆಡ್‌ತ್‌ಕೋ	ಪಂಡುಕೋ	ಬುದೂಗೋ

ಕ್ರ.ಸಂ	ಕನ್ನಡ	ತಮಿಳು	ತೆಲುಗು	ಕುಳುವ
೧೭೭.	ಹುಡುಗ	ಪಂಯೋ	ಪಿಲ್ಲೋಡು	ಗಾವಲಿ
೧೭೮.	ಮಗುಅಳುತ್ತಿದೆ	ಪೈಯ ಅಲ್‌ವುರಾ	ಪಿಲ್ಲೊಡು ಎಡ್‌ಸತುನ್ನಾಡು	ಗುಂಟುಕೋನು ಅಗ್ಗೈರು
೧೭೯.	ನಗುತ್ತಿದೆ	ಪೈಯ ಸಿರಿಕರಾಂ	ಪಿಲ್ಲೊಡು ನವ್‌ತುನ್ನಾಡು	ಸಿರಿಕ್ಕೈರು
೧೮೦.	ಊಟ ಮಾಡುವುದಿಲ್ಲ	ಸೇರ್ ಸಾಪಡರ್‌ದಿಲ್ಲೆ	ಬೋಜನಂ ಉಂಗಮಾಟೇ	ಸೋರು ಚೆಯ್ಯನ್ನು
೧೮೧.	ಮಾಡು	ಸೆಯ್ಯಿ	ಚೇಯಿ	ಸೆಯ್ಯಿ
೧೮೨.	ಕರೆ	ಕೂಪೂಡು	ಪಿಲುವು	ಅಗಿ
೧೮೩.	ಕೂಡಿಸಿ	ಕೂಡಿಕ್ಕೈ	ತಾಪು	ಕುಡಿಪಿ

೫. ಪರಾಮರ್ಶನ ಗ್ರಂಥಗಳು

೧. ಕನ್ನಡ ಜಾನಪದ ಕೋಶ, ಎಚ್.ಎಲ್. ನಾಗೇಗೌಡ, ಟಿ.ಆರ್. ಮಹಾದೇವಯ್ಯ, ಕರ್ನಾಟಕ ಜಾನಪದ ಪರಿಷತ್ತು, ೭, ೫ನೇ ಅಡ್ಡರಸ್ತೆ, ೪ ನೇ ಬ್ಲಾಕ್, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು, ೧೯೯೮

೨. ಕರ್ನಾಟಕ ರಾಜ್ಯಕೋಶ–೪, ಜನ ಸಮುದಾಯ ಸಂಪುಟ–೪, ಸಂ. ಎಚ್.ಡಿ. ಪ್ರಶಾಂತ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦.

೩. ಕನ್ನಡ ವಿಶ್ವವಿದ್ಯಾಲಯ, ವಿಶ್ವಕೋಶ–೨, ಕರಕುಶಲ ಕಲೆಗಳು, (ಸಂ). ಕರೀಗೌಡ ಬೀಚನಹಳ್ಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ, ೨೦೦೦.

೪. ಕರ್ನಾಟಕ ಜನಪದ ಕಲೆಗಳ ಕೋಶ, (ಸಂ) ಹಿ.ಚಿ. ಬೋರಲಿಂಗಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೬.

೫. ಜಾನಪದ ಜಗತ್ತು, ಪ್ರಧಾನ ಸಂಪಾದಕ: ಎಚ್.ಎಲ್. ನಾಗೇಗೌಡ, ಜಾನಪದ ಲೋಕ, ರಾಮನಗರ, ಬೆಂಗಳೂರು, (ಜನವರಿ-ಫೆಬ್ರವರಿ ೧೯೮೫ -೧೯೯೨)

೬ ಜಾನಪದ ಸಂಚಿಕೆ-೯, ಜುಲೈ ೧೯೬೯, ಲೇಖನ - ಜಾನಪದ ಸಾಹಿತ್ಯದಲ್ಲಿ ಕೊರವಂಜಿಯ ಪಾತ್ರ ಕಲ್ಪನೆ.

೭ ಕೊರಮರ ಗಾದೆ ಕತೆಗಳು, ಡಾ. ಬಿ.ಸಿ. ರಾಮಯ್ಯ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು. ೨೦೦೪.

೮. ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ಜೀ.ಶಂ. ಪರಮಶಿವಯ್ಯ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯.

೯. ದಕ್ಷಿಣ ಕರ್ನಾಟಕದ ಕೊರಮರು, ಡಾ.ಬಿ.ಪಿ. ರಾಮಯ್ಯ, ಮಾನಸ ಪ್ರಕಾಶನ, ಶ್ರೀ ಸಿದ್ಧಿವಿನಾಯಕ ಪೋಸ್ಟಲ್ ಕಾಲೋನಿ, ಹೆರವಟ್ಟಾ, ಕುಮಟಾ (ಉ.ಕ), ೨೦೦೨.

೧೦. ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ತೀ.ನಂ. ಶಂಕರನಾರಾಯಣ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨

೧೧. ಸ್ತ್ರೀ ಸಂಸ್ಕೃತಿ ಶಿಕ್ಷಣ, ಬಿ.ಎಂ. ರೋಹಿಣಿ, ಹೇಮಾಂಶು, ಪ್ರಕಾಶನ ಮಂಗಳೂರು, ೨೦೦೦.

೧೨. ಕೊರವರ ಸಂಸ್ಕೃತಿ, ಮಾನಸ, ಉಪಸಂಸ್ಕೃತಿ ಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ೧೯೯೩.

೧೩. ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಡಾ. ಅಂಬಳಿಕೆ ಹಿರಿಯಣ್ಣ ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯

೧೪. ಕನ್ನಡ ನಿಘಂಟು.

೧೫. ಸಾಲು ಸಂಪಿಗೆ ನೆರಳು, ಸಂಪಾದಕರು. ಪ್ರೋ. ಕಾಳೇಗೌಡ ನಾಗವಾರ, ಜಿ.ವಿ. ಆನಂದಮೂರ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು, ಪು ೧೨೭, ಕೊರವಂಜಿ, ೨೦೦೦.

೧೬. ಜನಾಂಗದ ಜೀವಾಳ, ಸಿಂಪಿ ಲಿಂಗಣ್ಣ, ಶ್ರೀ ಅರವಿಂದ ಗ್ರಂಥಾಲಯ, ಚಡಚಣ, ಜಿಲ್ಲೆ ಬಿಜಾಪುರ, ೧೯೯೨.

೧೩. ಜಾನಪದ ೧೯೯೨. (ಸಂ) ವೀರಣ್ಣ ದಂಡೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು, ೧೯೯೫.

೧೮. ಕನ್ನಡ ಜಾನಪದ ವಿಶ್ವಕೋಶ, ಸಂಪುಟ-೧, ಡಾ. ಚಂದ್ರಶೇಖರ ಕಂಬಾರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

೧೯. ಶ್ರೀ ಕೃಷ್ಣ ಪಾರಿಜಾತ, (ಸಂ) ಡಾ. ಕೃಷ್ಣಕಟ್ಟಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೭.

೨೦. ಬೊಗಸೆ (ಮಹಿಳೆ ಸುತ್ತ-ಮುತ್ತ), ಡಾ. ಕಮಲಾ ಹಂಪನಾ, ಸಿ.ವಿ.ಜಿ ಪಬ್ಲಿಕೇಷನ್ಸ್, ಬೆಂಗಳೂರು. ೨೦೦೩.

೨೧. ಜಾನಪದ ಸ್ವರೂಪ ಮತ್ತು ಸಾಹಿತ್ಯ, ಪ್ರೋ. ಡಿ. ಲಿಂಗಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೨. ಹಚ್ಚೆ ಒಂದು ಜನಪದ ಕಲೆ, ಎಚ್.ಎಂ. ಮಹೇಶ್ವರಯ್ಯ, ಐ.ಬಿ.ಹೆಚ್ ಪ್ರಕಾಶನ, ಬೆಂಗಳೂರು.

೨೩. ಜಾನಪದ ನೆಲೆಯಲ್ಲಿ ಮಹಿಳೆ, ಶಾರದಾ ಶಾಮಣ್ಣ, ಕಳಸ ಪ್ರಕಾಶನ, ಬೆಂಗಳೂರು, ೧೯೯೩

೨೪. ಭಾರತೀಯ ಸ್ತ್ರೀವಾದ : ಒಂದು ಸಂಕಥನ, ಡಾ. ಗಾಯತ್ರಿ ನಾವಡ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೩.

೨೫. ಹೆಣ್ಣಿನ ಸ್ಥಾನಮಾನ ಒಂದು ಪುನರಾವಲೋಕನ, ಎಚ್. ಜಯಮ್ಮ ಕರಿಯಣ್ಣ, ಜಯಾ ಪ್ರಕಾಶನ ಬೆಂಗಳೂರು, ೨೦೦೦.

೨೬. ಮಹಿಳೆ ಮುಖಗಳು, ಮಾ.ಭ. ಪೆರ್ಲ, ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು, (ದಕ್ಷಿಣ ಕನ್ನಡ) ೨೦೦೧.

೨೭. ಕರಾವಳಿ ಜಾನಪದ, ಡಾ. ಪುರುಷೋತ್ತಮ ಬಿಳಿಮಲೆ, ಮಂಗಳೂರು ವಿಶ್ವವಿದ್ಯಾಲಯ, ಮಂಗಳಗಂಗೋತ್ರಿ, ದಕ್ಷಿಣ ಕನ್ನಡ ಜಿಲ್ಲೆ, ೧೯೯೦.

೨೮. ಐದು ಜಾನಪದ ಪ್ರಬಂಧಗಳು, ಜಯಲಕ್ಷ್ಮೀ ಸೀತಾಪುರ, ಪ್ರತಿಭಾ ಪ್ರಕಾಶನ, ಮೈಸೂರು, ೧೯೮೭.

೨೯. ಜಾನಪದ ಸಾಹಿತ್ಯ ದರ್ಶನ - ೧೩, ಸೋಮಶೇಖರ ಇಮ್ರಾಪುರ.

೩೦. ಕೃಷಿ ಕೂಲಿಕಾರರ ಬದುಕು : ಬವಣೆ, ಡಾ. ಯು.ಬಿ. ಅಶೋಕ್ ಕುಮಾರ್, ಪ್ರಕಾಶಕರು ಚೇತನ ಬುಕ್ ಹೌಸ್, ಮೈಸೂರು, ೨೦೦೧.

೩೧. ಮಹಿಳೆ ಒಂದು ಅಧ್ಯಯನ, ಡಾ. ಜ್ಯೋತ್ಸ್ನಾ ಕಾಮತ್, ಪ್ರಕಾಶಕರು, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

೩೨. ಮಹಿಳೆ ಮತ್ತು ಜಾತಿ, ಎಂ. ಉಷಾ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೫.

೩೩. ಜಾನಪದ ಆಂತರ್ಯ, ಡಾ.ಮೈ.ಸಿ. ಭಾನುಮತಿ, ತಳಗವಾದಿ ಪ್ರಕಾಶನ, ೨೨, 'ವಿಜಯಶ್ರೀ' ಕುವೆಂಪು ನಗರ, ಮೈಸೂರು.

೩೪. ಜಾನಪದ ವೀಕ್ಷಣೆ, ಡಾ. ಅಂಬಳಿಕೆ ಹಿರಿಯಣ್ಣ, (ಲೇ) ಕೊರವರ ಮರಣ ಸಂಪ್ರದಾಯಗಳು, ಪ್ರಜ್ವಲ ಪ್ರಕಾಶನ, ಮೈಸೂರು, ೧೯೮೭.

೩೫. ಮಹಿಳೆ ಬಿಡುಗಡೆಯ ಹಾದಿಯಲ್ಲಿ, ಎನ್. ಗಾಯತ್ರಿ, ೧೯೯೬, ಪ್ರಕಾಶಕರು, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

೩೭. ಕನ್ನಡ ವಿಶ್ವವಿದ್ಯಾಲಯದ ವಿಶ್ವಕೋಶ ೩. ಧರ್ಮ. ಸಂ. ರಹಮತ್ ತರೀಕೆರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ, ವಿದ್ಯಾರಣ್ಯ. ೨೦೦೦.

೩೭. ಮಹಿಳೆ ಮತ್ತು ಅಭಿವೃದ್ಧಿ. ಕೆ. ಶಿವಚಿತ್ತಪ್ಪ, ಎಂ. ಚೌಡೇಗೌಡ, ಚಿನ್ಮಯ ಪ್ರಕಾಶನ, ಮೈಸೂರು, ೨೦೦೫.

೩೮. ಶ್ರೀ ಕೃಷ್ಣ ಪಾರಿಜಾತ, ಸಂ. ಡಾ. ಕೃಷ್ಣಕಟ್ಟಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೧೯೯೭

೩೯. ಸ್ತ್ರೀ ಸಂವೇದನೆ, ಬಿ.ಎಂ. ರೋಹಿಣಿ, ಹೇಮಾಂಶು ಪ್ರಕಾಶನ, ದೊರೆ ಬೈಲು, ಮಂಗಳೂರು, ೧೯೯೫.

೪೦. ಕರ್ನಾಟಕ ಬುಡಕಟ್ಟುಗಳು, ಸಂಪುಟ-೧, ಎಚ್.ಜೆ. ಲಕ್ಕಪ್ಪಗೌಡ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೪.

೪೧. ಮಹಿಳೆ ಮತ್ತು ಆರೋಗ್ಯ : ಮಹಿಳಾ ಅಧ್ಯಯನಗಳ ದೃಷ್ಟಿಯಲ್ಲಿ ಡಾ. ಕೆ. ಸರೋಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧.

೪೨. ಮಹಿಳಾ ಸಂವೇದನೆ, ಡಾ. ಗಾಯತ್ರಿ ನಾವಡ, ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ, ಬೆಂಗಳೂರು, ೨೦೦೩.

೪೩. ಭಾರತೀಯ ನಾರಿ ಮತ್ತು ಸಮಾನತೆ, ಎಸ್. ಕೃಷ್ಣಮೂರ್ತಿ, ಐ.ಬಿ.ಎಚ್. ಪ್ರಕಾಶನ, ಗಾಂಧೀನಗರ, ಬೆಂಗಳೂರು, ೧೯೮೪.

೪೪. ದಲಿತರ ಬದುಕು ಮತ್ತು ಸಂಸ್ಕೃತಿ, ಜಾನಪದೀಯ ಅಧ್ಯಯನ, ಡಾ. ಅರ್ಜುನ ಗೊಳಸಂಗಿ, ವಿಮೋಚನಾ ಪ್ರಕಾಶನ, ವಿಮೋಚನಾ ದೇವದಾಸಿ ಪುನರ್ವಸತಿ ಸಂಘ, ಅಥಣಿ, ೨೦೦೦.

೪೫. ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತಿನ, ಎರಡನೇಯ ಸಂಪುಟ, ಬೆಂಗಳೂರು ೧೯೭೩.

೪೬. ಕನ್ನಡ ಜಾನಪದ ಗೀತೆಗಳು, ಡಾ.ಬಿ.ಎಸ್. ಗದ್ದಗಿಮಠ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೬೩

೪೭. ಜಾನಪದ ಸಾಹಿತ್ಯ ದರ್ಶನ ಡಾ. ಎಸ್.ಎಸ್. ಸುಂಕಾಪುರ, ಸಂ-೩, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೮. ಮುದ್ದೆ ಕಂಬಾರರು, ಡಾ. ಆರ್.ಬಿ. ಕುಮಾರ್, ಪ್ರಕಾಶಕರು, ಸಾರಾ ಎಂಟರ್ ಪ್ರೈಸಸ್, ಮೈಸೂರು.

೪೯. ಹೆಣ್ಣು-ಹೆಂಗಸು, ಡಾ. ಎಚ್.ಎಸ್. ಶ್ರೀಮತಿ, ಬಾಲ್ಯದಕೆರೆ ಪ್ರಕಾಶನ, ಬಾಲ್ಯದಕೆರೆ ಮಂಡ್ಯ ಜಿಲ್ಲೆ ೨೦೦೪

೫೦. ಆಧುನಿಕ ಭಾರತದಲ್ಲಿ ಮಹಿಳೆ, ಅನುವಾದ: ಡಾ. ಎಚ್.ಎಸ್. ಶ್ರೀಮತಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧

೫೧. ಭಾರತೀಯ ಸಮಾಜ, ಎಸ್. ರಾಜಶೇಖರ್, ಭ್ರಮರ ಪ್ರಕಾಶನ, ಶಿವಮೊಗ್ಗ, ೨೦೦೧

೫೨. ಹಚ್ಚೆ ಚಿತ್ರಕಲೆ ಡಾ. ಎಸ್.ಸಿ. ಪಾಟೀಲ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು. ೨೦೦೪

೫೩. ಬುಡಕಟ್ಟು ಅಭಿವೃದ್ಧಿ : ಒಂದು ಪರಿಕಲ್ಪನೆ, ಎ.ಎಸ್. ಪ್ರಭಾಕರ್, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೪.

೫೪. ಬಳ್ಳಾರಿಯ ಕೌಲ್ ಬಜಾರಿನ ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ ಪ್ರಬಂಧ) ಕೆ. ಬಸಪ್ಪ .ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧.

೫೫. ಮುಂಗೇರರು, ಜನಾಂಗ ಜಾನಪದ, ಡಾ. ಅಭಯ ಕೌಕ್ರಾಡಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಮತ್ತು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು ೧೯೯೭.

೫೬. ಚಹರೆ, ಡಾ. ಎಚ್.ಎಸ್. ಶ್ರೀಮತಿ, ಇಳಾ ಪ್ರಕಾಶನ, ಬೆಂಗಳೂರು. ೨೦೦೦.

೫೭. ಸ್ತ್ರೀ ಕಥನ, ಡಾ. ಶೈಲಜಾ ಹಿರೇಮಠ, ಭುವನ ಪ್ರಕಾಶನ ಹೊಸಪೇಟೆ, ೨೦೦೩.

೫೮. ಗಿರಿಜನ ಸಂಸ್ಕೃತಿ, ಸಂ. ಪ್ರೋ. ಕಾಳೇಗೌಡ ನಾಗವಾರ, ಸಹಸ್ರಮಾನ ಜಾನಪದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು. ೨೦೦೦

೫೯. ಅಲೆಮಾರಿಗಳ ಸ್ಥಿತಿಗತಿ, ಸಂ. ಡಾ. ಸ.ಚಿ. ರಮೇಶ, ಪ್ರಕಾಶಕರು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ. ೨೦೦೫.

೬೦. ಭಾರತದ ಆರ್ಥಿಕ ವ್ಯವಸ್ಥೆ, ಎಚ್ಚಾರ್ಕೆ, ಸಪ್ನ ಬುಕ್ ಹೌಸ್, ಬೆಂಗಳೂರು. ೨೦೦೬.

೬೧. ಭಾರತೀಯ ಸಾಮಾಜಿಕ ಸಂಸ್ಥೆಗಳು, ಎಂ. ನಂಜಮ್ಮಣ್ಣಿ, ಪ್ರಸಾರಾಂಗ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೩.

೬೨. ಜನಪದ ಸಮಾಜ ಸಂಸ್ಕೃತಿ, ಎಸ್.ಎಸ್. ಹಿರೇಮಠ, ಸೂರ್ಯ ಪ್ರಕಾಶನ, ಮಲ್ಲಾಡಿ ಹಳ್ಳಿ, ಹೊಳಲ್ಕೆರೆ ತಾ, ಚಿತ್ರದುರ್ಗ ಜಿಲ್ಲೆ, ೨೦೦೫.

೬೩. ಕೊರವ ಸಂಸ್ಕೃತಿ, ಉಪಸಂಸ್ಕೃತಿ ಅಧ್ಯಯನ ಮಾನಸ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೬೪. ದಲಿತರ ಬದುಕು ಮತ್ತು ಸಂಸ್ಕೃತಿ, ಜಾನಪದೀಯ ಅಧ್ಯಯನ, ಡಾ. ಅರ್ಜುನ ಗೊಳಸಂಗಿ, ವಿಮೋಚನಾ ಪ್ರಕಾಶನ, ಅಥಣಿ, ಜಿ. ಬೆಳಗಾಂ, ೨೦೦೦.

೬೫. ಕನ್ನಡ ಜಾನಪದ ಕೋಶ, ಪ್ರ.ಸಂ. ಎಚ್.ಎಲ್. ನಾಗೇಗೌಡ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ೧೯೯೮,

೬೬. ಆಂಧ್ರ ಪ್ರದೇಶದ ಜಾನಪದ, ಬಿ.ರಾಮರಾಜು, ಅನು: ಆರ್.ವಿ. ಸುಂದರಂ, ನ್ಯಾಷನಲ್ ಬುಕ್ ಟ್ರಸ್ಟ್, ಇಡಿಯಾ, ಹೊಸ ದೆಹಲಿ.

೬೭. ಜಾನಪದ ಸಾಹಿತ್ಯ ದರ್ಶನ ೩, ಡಾ. ಎಂ.ಎಸ್. ಸುಂಕಪುರ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮.

೬೮. ಕೊರವರು, ಈರಣ್ಣ ಎನ್. ಕೋಸಗಿ, ಕೋಸಗಿ ಪ್ರಕಾಶಕರು, ರಾಯಚೂರು, ೧೯೯೧.

೬೯. ಮಹಿಳಾ ಅಧ್ಯಯನ ೨, ಡಾ.ಎಚ್.ಎಂ. ಹೇಮಲತಾ, ಪ್ರಕಾಶಕರು ಡಿ.ವಿ.ಕೆ. ಮೂರ್ತಿ, ಮೈಸೂರು, ೨೦೦೪

೭೦. ಗ್ರಾಮೀಣ ಮಹಿಳಾಭಿವೃದ್ಧಿಯಲ್ಲಿ ಸ್ವ-ಸಹಾಯ ಗುಂಪುಗಳ ಪಾತ್ರ, ಡಾ. ವೆಂಕಟಯ್ಯ ಅಪ್ಪಗೆರೆ, (ಅಪ್ರಕಟಿತ ಪ್ರಬಂಧ) ೨೦೦೨.

೭೧. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಹಿಳಾಪರ ಕಾಳಜಿಗಳು, ಸಂ. ಎಂ.ಎಸ್. ಶೇಖರ್, ಪ್ರಕಾಶನ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೭.

೭೨. ಜಾನಪದ ವ್ಯಕ್ತಿ ಮತ್ತು ವಿಚಾರ. ಡಾ. ಹಿ.ಶಿ. ರಾಮಚಂದ್ರೇಗೌಡ. ಮಾನವಿ ಪ್ರಕಾಶನ. ಮಾನಸ ಗಂಗೋತ್ರಿ ಮೈಸೂರು. ೧೯೮೨.

೭೩. ಹೊನ್ನೂರು ಮಾಸಪತ್ರಿಕೆ. ಹಿ.ಶಿ. ರಾಮಚಂದ್ರೇಗೌಡ.

೭೪. ವಿಜಯ ಕರ್ನಾಟಕ. ೬ ಜನವರಿ ೨೦೦೮.

೭೫. ಮಹಿಳೆ ಮತ್ತು ದುಡಿಮೆ. ಡಾ. ಆಂಜನಪ್ಪ ಬಿ.ಹೆಚ್ ಸೃಷ್ಟಿ ಪಬ್ಲಿಕೇಷನ್. ೨೦೦೬. ಬೆಂಗಳೂರು.

೭೬. ಸಾವು ಒಂದು ಚಿಂತನೆ ಡಾ. ಬಿ.ಎಂ. ಪುಟ್ಟಯ್ಯ. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ. ಹಂಪಿ ವಿದ್ಯಾರಣ್ಯ. ೨೦೦೧.

೭೭. ಜಾನಪದ ಸಾಹಿತ್ಯ ದರ್ಶನ ೧೭. ಜನಾಂಗೀಕ ಅಧ್ಯಯನ. ಡಾ. ಸೋಮಶೇಖರ ಇಮ್ರಾಪೂರ. ಕನ್ನಡ ಅಧ್ಯಯನ ಪೀಠ. ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ. ೧೯೯೩.

೭೮. ಬೋಗಸೆ ಮಹಿಳೆ ಸುತ್ತ-ಮುತ್ತ. ಡಾ. ಕಮಲಾ ಹಂಪನಾ. ಸಿವಿಜಿ ಪಬ್ಲಿಕೇಷನ್ಸ್ ಬೆಂಗಳೂರು. ೨೦೦೩

೭೯. ಇರುಳಿಗರು. ಜಾನಪದ ಅಧ್ಯಯನ. ಡಾ.ಎಂ. ಬೈರೇಗೌಡ. ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು. ೨೦೦೦.

೮೦. ಕೊರಗರ ಸಂಸ್ಕೃತಿ. ಡಾ. ಪುರುಷೋತ್ತಮ ಬಿಳಿಮಲೆ. ಉಪ ಸಂಸ್ಕೃತಿ ಮಾಲೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ೧೯೯೩.

೮೧. ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ. ಎಂ.ಎಚ್. ನಾಗರಾಜು. ಅನಿಕೇತನ ಪ್ರಕಾಶನ. ತುಮಕೂರು. ೨೦೦೩

೮೨. ಕರ್ನಾಟಕದ ಗೊಲ್ಲ ಸಮುದಾಯ. ಸಮಾಜೋ ಸಾಂಸ್ಕೃತಿಕ ಅಧ್ಯಯನ. ಡಾ.ಎಂ. ಗುರುಲಿಂಗಯ್ಯ. ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್. ಬೆಂಗಳೂರು. ೨೦೦೫.

೮೩. ಭಾರತ ಆರ್ಥಿಕ ವ್ಯವಸ್ಥೆ. ಎಚ್ಚಾರ್ಕೆ. ಸಪ್ನ ಬುಕ್ ಹೌಸ್. ಬೆಂಗಳೂರು ೧೯೯೬

೮೪. ಬುಡಕಟ್ಟು ಅಭಿವೃದ್ಧಿ ಮೀಮಾಂಸೆ ಸಂಪಾದಕ ಎ.ಎಸ್. ಪ್ರಭಾಕರ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ಹಂಪಿ. ೨೦೦೪

೮೫. ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು. ಡಾ. ಗಾಯತ್ರಿ ನಾವಡ. ರಾಷ್ಟ್ರಕವಿ ಗೋವಿಂದ ಪೈ. ಸಂಶೋಧನ ಕೇಂದ್ರ. ಉಡುಪಿ. ಸಿರಿ ಪ್ರಕಾಶನ ಹೊಸಪೇಟೆ. ೧೯೯೯.

೮೬. ಮಹಿಳೆ ಸಾಹಿತ್ಯ ಸಂಸ್ಕೃತಿ. ಡಾ. ಶಾಂತಾ ಇಮ್ರಾಪುರ. ಚೇತನ ಪ್ರಕಾಶನ. ಧಾರವಾಡ. ೨೦೦೧.

೮೭. ಸುವರ್ಣ ಜಾನಪದ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಸಂಪುಟ-೨. ಹಚ್ಚೆ ಒಂದು ಜಾನಪದ ಕಲೆ. ಎಚ್. ಎಂ. ಮಹೇಶ್ವರಯ್ಯ. ಬೆಂಗಳೂರು.

೮೮. ಸುವರ್ಣ ಜಾನಪದ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಸಂಪುಟ-೧. ಕರ್ನಾಟಕ ಸಂಸ್ಕೃತಿ. ದೇವುಡು. ಬೆಂಗಳೂರು.

೮೯. ಜಾನಪದ ವಿವಿಧ ಮುಖಗಳು. ಸಂಪಾದಕ ಪ್ರೋ. ಶ್ರೀಕಂಠ ಕೂಡಿಗೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಬೆಂಗಳೂರು.

೯೦. ಗೊಳಸಂಗಿ ಸಮುದಾಯ. ಒಂದು ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ವಿ.ಎಸ್. ಮಾರುತಿ ೨೦೦೦.

ಇಂಗ್ಲೀಷ ಪುಸ್ತಕಗಳು

೧. Encylopaedia of Indian Tribes and Castes, volume 12, Editor S.M. Channa, Cosmo publications, New Delhi 2004


೨. Castes and tribes of Southern India, volume III, Thurston, K Rangachari, Asian Educational services, New Delhi, Madras, 1987.

೩. The tribes and castes or Bombay, vol II, R.E. Enthoven Asian Educational Services, madras, New Delhi, 1990.

೪. The mysore tribes and castes, vol III, H.V. Najundayya and Bahadur. L.K. Anantha Krishna iyer, mysore university mysore, 1930.

೫. The mysore tribes and castes, vol I, H.V. Diwan Bahadur. L.K. Anantha Krishna iyer, mysore university mysore, 1935.

ನಕ್ಷೆ: ಬಳ್ಳಾರಿ ಜಿಲ್ಲಾವಾರು ಕೊರಮರ ಸಮೀಕ್ಷೆ ಮಾಡಿದ ನೆಲೆಗಳು





೭. ಮಾಹಿತಿದಾರರ ವಿವರ

ಕ್ರ.ಸಂ.	ಹೆಸರು ಮತ್ತು ವಿಳಾಸ	ವಯಸ್ಸು	ಶೈಕ್ಷಣಿಕ ಮಟ್ಟ	ವೃತ್ತಿ
೧.	ಹನುಮಕ್ಕ ಕಮಲಾಪುರ	೩೫	೫ನೇ ತರಗತಿ	ದಿನಗೂಲಿ
೨.	ಗಂಗಮ್ಮ ಕಮಲಾಪುರ	೫೫	-	ಕೂಲಿ ಕಸಬಾರಿಕೆ
೩.	ತಿಪ್ಪಮ್ಮ ಕಮಲಾಪುರ	೨೫	-	ಕೂಲಿ ಹಣ್ಣುವ್ಯಾಪಾರ
೪.	ಮಾರಕ್ಕ ಕಮಲಾಪುರ	೨೫	-	ಕೂಲಿ
೫	ಜಯಲಕ್ಷ್ಮಿ ಕಮಲಾಪುರ	೨೮	೯ನೇ ತರಗತಿ	ಹೊಲಿಗೆ
೬.	ತಿಪ್ಪಮ್ಮ ಕಮಲಾಪುರ	೫೨	-	ಕೂಲಿ
೭	ಗಂಗಮ್ಮ ಕಮಲಾಪುರ	೩೦	೫ನೇ ತರಗತಿ	ಕೂಲಿ
೮.	ದೊಡ್ಡ ಹುಲಿಗೆಮ್ಮ ಕಮಲಾಪುರ	೩೫	-	ಕೂಲಿ
೯.	ಲಕ್ಷ್ಮಿ ಕಾಕಬಾಳು	೨೩	-	ಕೂಲಿ
೧೦.	ದುರಗಮ್ಮ ಕಾಕಬಾಳು	೪೦	-	ಕೂಲಿ
೧೧.	ಹಾಲಮ್ಮ ಕಾಕಬಾಳು	೨೦	-	ಬುಟ್ಟಿ ವ್ಯಾಪಾರ
೧೨.	ತಿಪ್ಪವ್ವ ಕಾಕಬಾಳು	೪೫	-	ಹಣ್ಣು ವ್ಯಾಪಾರ
೧೩.	ಗೋವಿಂದಮ್ಮ ಕಾಕಬಾಳು	೨೮	-	ಹೊಲಿಗೆ
೧೪.	ಅಯ್ಯಮ್ಮ ಕಾಕಬಾಳು	೪೫	-	ಬುಟ್ಟಿ ವ್ಯಾಪಾರ
೧೫.	ಜಯಲಕ್ಷ್ಮಿ ಹೊಸಪೇಟೆ	೨೫	೯ನೇ ತರಗತಿ	ಬಟ್ಟೆವ್ಯಾಪಾರ
೧೬.	ಅಂಕಲಮ್ಮ ಹೊಸಪೇಟೆ	೫೦	-	ಹಣ್ಣುವ್ಯಾಪಾರ
೧೭.	ಈರಮ್ಮ ಹೊಸಪೇಟೆ	೩೮	-	ಹಣ್ಣುವ್ಯಾಪಾರ

ಕ್ರ.ಸಂ.	ಹೆಸರು ಮತ್ತು ವಿಳಾಸ	ವಯಸ್ಸು	ಶೈಕ್ಷಣಿಕ ಮಟ್ಟ	ವೃತ್ತಿ
೧೮.	ಹುಲಿಗೆಮ್ಮ ಹೊಸಪೇಟೆ	೩೦	-	ಕೂಲಿ, ಹಣ್ಣುವ್ಯಾಪಾರ
೧೯.	ಗಂಗಮ್ಮ ಹೊಸಪೇಟೆ	೪೮	-	ಹೊಲಿಗೆ
೨೦.	ಹುಲಿಗೆಮ್ಮ ಕಮಲಾಪುರ	೨೫	-	ಕೂಲಿ, ವ್ಯಾಪಾರ
೨೧.	ದೊಡ್ಡ ಅಂಕಲಮ್ಮ ಬಳ್ಳಾರಿ	೫೦	-	ವ್ಯವಸಾಯ
೨೨.	ಸಣ್ಣ ಅಂಕಲಮ್ಮ ಬಂಡಿ ಮೋಟ್, ಬಳ್ಳಾರಿ	೪೫	-	ಕೂಲಿ
೨೩.	ಅಂಕಲಮ್ಮ ಕೌಲ್ ಬಜಾರ್, ಬಳ್ಳಾರಿ	೩೦	೧೦ನೇ ತರಗತಿ	ಗೃಹಿಣಿ
೨೪.	ನಾಗಲತಾ ಬದನಹಟ್ಟಿ	೩೫	೯ನೇ ತರಗತಿ	ಗೃಹಿಣಿ
೨೫.	ಸಂಧ್ಯಾ ಬಳ್ಳಾರಿ	೨೩	೭ನೇ ತರಗತಿ	ಹೊಲಿಗೆ
೨೬.	ಹುಲಿಗಮ್ಮ ಕುರುಗೋಡು	೩೦	-	ಬುಟ್ಟಿ ಹೆಣೆಯುವುದು
೨೭.	ಮಲ್ಲಮ್ಮ ಕುರುಗೋಡು	೪೮	-	ಕಸಬಾರಿಗೆ
೨೮.	ಹುಲಿಗಮ್ಮ ಕುರುಗೋಡು	೫೫	-	ಕಸಬಾರಿಗೆ
೨೯.	ಸುಜಾತ ಕುರುಗೋಡು	೩೦	೮ನೇ ತರಗತಿ	ಕಸಬಾರಿಗೆ
೩೦.	ಕೊಟ್ರಮ್ಮ ಕುರುಗೋಡು	೨೫	-	ಕಸಬಾರಿಗೆ
೩೧.	ಲಕ್ಷ್ಮಿ ಕುರುಗೋಡು	೩೦	-	ಕಸಬಾರಿಗೆ
೩೨.	ಈರಮ್ಮ ಕಂಪ್ಲಿ	೫೦	-	ಕಸಬಾರಿಕೆ
೩೩.	ಹುಲಿಗೆಮ್ಮ ಕಂಪ್ಲಿ	೩೫	-	ಕಸಬಾರಿಕೆ
೩೪.	ಹನುಮಕ್ಕ ಕಂಪ್ಲಿ	೬೫	-	ಬಾರಿಕೆ
೩೫.	ಗಂಗಮ್ಮ ಕಂಪ್ಲಿ	೫೦	-	ಬಾರಿಕೆ

ಕ್ರ.ಸಂ.	ಹೆಸರು ಮತ್ತು ವಿಳಾಸ	ವಯಸ್ಸು	ಶೈಕ್ಷಣಿಕ ಮಟ್ಟ	ವೃತ್ತಿ
೩೬.	ತಿಪ್ಪಮ್ಮ ಕಂಪ್ಲಿ	೩೬	-	ಬಾರಿಕೆ
೩೭.	ಶಾಂತಮ್ಮ ಕೊಟ್ಟೂರು	೬೦	-	ಬಾರಿಕೆ
೩೮.	ಒಡರಮ್ಮ ಕೊಟ್ಟೂರು	೮೦	-	ಬಾರಿಗೆ
೩೯.	ಹಂಪಮ್ಮ ತೋರಣಗಲ್ಲು	೮೫	-	ಬುಟ್ಟಿ, ಬಾರಿಕೆ
೪೦.	ಪಾರ್ವತಮ್ಮ ತೋರಣಗಲ್ಲು	೪೦	-	ಬಾರಿಕೆ
೪೧.	ಗಂಗಮ್ಮ ತೋರಣಗಲ್ಲು	೫೦	-	ಬಾರಿಕೆ
೪೨.	ಪಾರ್ವತಮ್ಮ ತೋರಣಗಲ್ಲು	೫೦	-	ಬಾರಿಕೆ
೪೩.	ಗಂಗಮ್ಮ ತೋರಣಗಲ್ಲು	೫೦	-	ಬಾರಿಕೆ
೪೪.	ಹನುಮಕ್ಕ ತೋರಣಗಲ್ಲು	೩೨	-	ಬಾರಿಕೆ
೪೫.	ಹುಲಿಗೆಮ್ಮ ತೋರಣಗಲ್ಲು	೪೮	-	ಬಾರಿಕೆ
೪೬.	ಅಂಜಿನಮ್ಮ ಕುಡುತಿನಿ	೫೦	-	ಬುಟ್ಟಿ
೪೭.	ನೀಲಮ್ಮ ಕುಡುತಿನಿ	೨೫	-	ಬಾರಿಕೆ
೪೮.	ರಾಮಲಿಂಗಮ್ಮ ಕುಡುತಿನಿ	೪೫	-	ಕೂಲಿ
೪೯.	ಲಕ್ಷ್ಮಿ ಕುಡುತಿನಿ	೨೨	-	ಕೂಲಿ
೫೦.	ಹುಲಿಗೆಮ್ಮ ಕುಡುತಿನಿ	೪೫	-	ಬಾರಿಗೆ, ಬುಟ್ಟಿ
೫೧.	ಸರಸಮ್ಮ ಕುಡುತಿನಿ	೫೦	-	ಬಾರಿಗೆ
೫೨.	ಪದ್ಮಾವತಿ ಸಿರುಗುಪ್ಪ	೩೩	BED	ಅರೆಕಾಲಿಕ ಶಿಕ್ಷಕಿ
೫೩.	ರೇಣುಕಾ ಬಳ್ಳಾರಿ	೨೫	TCH	ಶಿಕ್ಷಕಿ

ಕ್ರ.ಸಂ.	ಹೆಸರು ಮತ್ತು ವಿಳಾಸ	ವಯಸ್ಸು	ಶೈಕ್ಷಣಿಕ ಮಟ್ಟ	ವೃತ್ತಿ
೫೪.	ಕೆ. ಹನುಮಕ್ಕ ಬಳ್ಳಾರಿ	೪೫	-	ಪುಟ್ಟಿ
೫೫.	ಶ್ವೇತ ಹೊಸ ದರೋಜಿ	೧೯	-	ಬುಟ್ಟಿ
೫೬.	ರತ್ನಮ್ಮ ಹೊಸ ದರೋಜಿ	೪೩	-	ಬುಟ್ಟಿ
೫೭.	ಎರ್ರಿಯಮ್ಮ ಹೊಸ ದರೋಜಿ	೧೬	-	ಬಾರಿಕೆ
೫೮.	ಶಿವಮ್ಮ ಹೊಸ ದರೋಜಿ	೨೪	-	ಪುಟ್ಟಿ
೫೯.	ಕೆ. ಲಕ್ಷ್ಮಿ ಕಾಕುಬಾಳು	೩೧	-	ಪುಟ್ಟಿ
೬೦.	ರಾಧ ಹೊಸ ದರೋಜಿ	೪೦	-	ಬಾರಿಕೆ
೬೧.	ದ್ಯಾಮಮ್ಮ ಹೊಸ ದರೋಜಿ	೮೦	-	ಪುಟ್ಟಿ, ಬಾರಿಕೆ
೬೨.	ವಿಜಯಲಕ್ಷ್ಮಿ ಹೊಸ ದರೋಜಿ	೩೫	-	ಪುಟ್ಟಿ
೬೩.	ಹನುಮಕ್ಕ ಹೊಸ ದರೋಜಿ	೬೦	-	ಪುಟ್ಟಿ
೬೪.	ಭಾಗ್ಯ ಹೊಸ ದರೋಜಿ	೩೦	-	ಬಾರಿಕೆ
೬೫.	ಹುಲಿಗೆಮ್ಮ ಹೊಸ ದರೋಜಿ	೨೪	-	ಪುಟ್ಟಿ
೬೬.	ಭಾಗ್ಯಮ್ಮ ಕಂಪ್ಲಿ	೩೫	೧೦ನೇ ತರಗತಿ	ಹಣ್ಣು ವ್ಯಾಪಾರ
೬೭.	ಪ್ರಮಿಳ ಕಮಲಾಪುರ	೨೩	BED	ಓದುವುದು
೬೮.	ವಸಂತ ಸಿರುಗುಪ್ಪ	೨೦	-	ಪುಟ್ಟಿ
೬೯.	ಲಕ್ಷ್ಮಿ ಸಿರುಗುಪ್ಪ	೨೦	-	ಪುಟ್ಟಿ
೭೦.	ಜ್ಯೋತಿ ಸಿರುಗುಪ್ಪ	೨೮	-	ಬಾರಿಕೆ
೭೧.	ರುಕ್ಕಮ್ಮ ಸಿರುಗುಪ್ಪ	೫೦	-	ಬಾರಿಕೆ

ಕ್ರ.ಸಂ.	ಹೆಸರು ಮತ್ತು ವಿಳಾಸ	ವಯಸ್ಸು	ಶೈಕ್ಷಣಿಕ ಮಟ್ಟ	ವೃತ್ತಿ
೭೨.	ಹನುಮಕ್ಕ ಕುಡಿತಿನಿ	೫೨	-	ಬುಟ್ಟಿ
೭೩.	ಮಾರಕ್ಕ ಕುಡಿತಿನಿ	೪೬	-	ಪುಟ್ಟಿ, ಬಾರಿಕೆ
೭೪.	ಭೀಮಕ್ಕ ಕುಡಿತಿನಿ	೭೦	-	ಪುಟ್ಟಿ, ಬಾರಿಕೆ
೭೫.	ಬಸಮ್ಮ ಕುಡಿತಿನಿ	೭೦	-	ಪುಟ್ಟಿ, ಬಾರಿಕೆ
೭೬.	ಗಾಳೆಮ್ಮ ಕುಡಿತಿನಿ	೫೫	-	ಪುಟ್ಟಿ, ಬಾರಿಕೆ
೭೭.	ಸಾಂತಮ್ಮ ಕಾಕುಬಾಳು	೫೦	-	ಪುಟ್ಟಿ, ಬಾರಿಕೆ
೭೮.	ದೊಡ್ಡ ಅಂಜಮ್ಮ ಬಳ್ಳಾರಿ	೪೦	-	ಮನೆ ಕೆಲಸ
೭೯.	ಕೋಲಮ್ಮ ಬಳ್ಳಾರಿ	೪೮	೭ನೇ ತರಗತಿ	ಅಂಗಡಿ ವ್ಯಾಪಾರ
೮೦.	ಪದ್ಮ ಬಳ್ಳಾರಿ	೪೦	೮ನೇ ತರಗತಿ	ಹಣ್ಣು ವ್ಯಾಪಾರ
೮೧.	ಪದ್ಮಾವತಿ ಬಳ್ಳಾರಿ	೪೫	೮ನೇ ತರಗತಿ	ಹೊಲಿಗೆ
೮೨.	ಗೋವಿಂದಮ್ಮ ಬಳ್ಳಾರಿ	೩೪	೯ನೇ ತರಗತಿ	ಹೊಲಿಗೆ
೮೩.	ಜಯಲಕ್ಷ್ಮಿ ಕಾಕಬಾಳು	೩೦	೧೨ನೇ ತರಗತಿ	ಹೊಲಿಗೆ
೮೪.	ಕೊಲ್ಲಮ್ಮ ಗಾದಿಗನೂರು	೨೧	-	ಪುಟ್ಟಿ
೮೫.	ಸುಂಕಮ್ಮ ಗಾದಿಗನೂರು	೩೨	-	ಪುಟ್ಟಿ
೮೬.	ಈರಮ್ಮ ಗಾದಿಗನೂರು	೬೦	-	ಪುಟ್ಟಿ, ಬಾರಿಕೆ
೮೭.	ಗೋವಿಂದಮ್ಮ ಗಾದಿಗನೂರು	೩೬	೭ನೇ ತರಗತಿ	ಬಾರಿಕೆ ವ್ಯಾಪಾರ
೮೮.	ಉಷಾರಾಣಿ ಗಾದಿಗನೂರು	೨೨	೮ನೇ ತರಗತಿ	ಬಾರಿಕೆ ವ್ಯಾಪಾರ
೮೯.	ಶಂಕಮ್ಮ ಗಾದಿಗನೂರು	೩೦	೬ನೇ ತರಗತಿ	ಬುಟ್ಟಿ, ಬಾರಿಕೆ

ಕ್ರ.ಸಂ.	ಹೆಸರು ಮತ್ತು ವಿಳಾಸ	ವಯಸ್ಸು	ಶೈಕ್ಷಣಿಕ ಮಟ್ಟ	ವೃತ್ತಿ
೯೦.	ಶಂಕರಮ್ಮ ಗಾದಿಗನೂರು	೬೨	-	ಪುಟ್ಟಿ, ಹಣ್ಣು, ಬಾರಿಕೆ
೯೧.	ಮಹಾಕಾಳಿ ಗಾದಿಗನೂರು	೨೦	-	ಬುಟ್ಟಿ ವ್ಯಾಪಾರ
೯೨.	ಕೆ. ಲಕ್ಷ್ಮಿ ಗಾದಿಗನೂರು	೫೦	-	ಬಾರಿಕೆ ವ್ಯಾಪಾರ
೯೩.	ಗಂಗಮ್ಮ ಸಂಡೂರು	೩೬	-	ಪುಟ್ಟಿ ವ್ಯಾಪಾರ
೯೪.	ಲಲಿತ ಸಂಡೂರು	೨೪	-	ಪುಟ್ಟಿ ವ್ಯಾಪಾರ
೯೫.	ಕೊಲ್ಲಮ್ಮ ಸಂಡೂರು	೨೦	-	ಪುಟ್ಟಿ ವ್ಯಾಪಾರ
೯೬.	ಕೆ. ಸುಂಕಮ್ಮ ಸಂಡೂರು	೫೫	-	ಬಾರಿಗೆ ವ್ಯಾಪಾರ
೯೭.	ರೇಣುಕಮ್ಮ ಸಂಡೂರು	೩೬	-	ಬಾರಿಗೆ ವ್ಯಾಪಾರ
೯೮.	ಹನುಮಕ್ಕ ಸಂಡೂರು	೩೦	-	ಬಾರಿಗೆ ವ್ಯಾಪಾರ
೯೯.	ಯಲ್ಲಮ್ಮ ಸಂಡೂರು	೫೮	-	ಬುಟ್ಟಿ ವ್ಯಾಪಾರ
೧೦೦.	ಕಾಳಮ್ಮ ಉಜ್ಜಿನಿ	೩೮	-	ಬುಟ್ಟಿ ವ್ಯಾಪಾರ
೧೦೧.	ಈರಮ್ಮ ಉಜ್ಜಿನಿ	೫೮	PUC II	ಮನೆಗೆಲಸ
೧೦೨.	ಆದಿಲಕ್ಷ್ಮಿ ಉಜ್ಜಿನಿ	೨೮	೮ನೇ ತರಗತಿ	ಬುಟ್ಟಿ ವ್ಯಾಪಾರ
೧೦೩.	ಲಕ್ಷ್ಮಿದೇವಿ ಉಜ್ಜಿನಿ	೩೦	೫ನೇ ತರಗತಿ	ಬುಟ್ಟಿ ವ್ಯಾಪಾರ
೧೦೪.	ಕೆ. ಅಂಜಮ್ಮ ಉಜ್ಜಿನಿ	೨೫	೯ನೇ ತರಗತಿ	ಬುಟ್ಟಿ ವ್ಯಾಪಾರ
೧೦೫.	ದುರುಗಮ್ಮ ಗುಗ್ರಿಹಟ್ಟಿ, ಬಳ್ಳಾರಿ	೩೫	-	ಬಾರಿಗೆ ವ್ಯಾಪಾರ
೧೦೬.	ಕೆ. ಈರಮ್ಮ ಗುಗ್ರಿಹಟ್ಟಿ, ಬಳ್ಳಾರಿ	೩೫	-	ಬಾರಿಗೆ ವ್ಯಾಪಾರ
೧೦೭.	ರತ್ನ ಗುಗ್ರಿಹಟ್ಟಿ, ಬಳ್ಳಾರಿ	೨೮	-	ಬಾರಿಗೆ ವ್ಯಾಪಾರ

ಕ್ರ.ಸಂ.	ಹೆಸರು ಮತ್ತು ವಿಳಾಸ	ವಯಸ್ಸು	ಶೈಕ್ಷಣಿಕ ಮಟ್ಟ	ವೃತ್ತಿ
೧೦೮.	ತಿಪ್ಪಮ್ಮ ಗುಗ್ರಿಹಟ್ಟಿ, ಬಳ್ಳಾರಿ	೨೭	-	ಬಾರಿಗೆ, ಪುಟ್ಟಿ
೧೦೯.	ಶಾಂತಮ್ಮ ಗುಗ್ರಿಹಟ್ಟಿ, ಬಳ್ಳಾರಿ	೩೬	-	ಬಾರಿಗೆ, ಪುಟ್ಟಿ
೧೧೦.	ಚನ್ನಮ್ಮ ಗುಗ್ರಿಹಟ್ಟಿ, ಬಳ್ಳಾರಿ	೩೫	-	ಮನೆಗೆಲಸ
೧೧೧.	ಸರಸ್ವತಿ ಎಚ್. ಹೀರಪುರ	೪೦	-	ಮನೆಗೆಲಸ
೧೧೨.	ಕೆ. ತಿಪ್ಪಮ್ಮ ಎಚ್. ಹೀರಪುರ	೫೮	-	ಪುಟ್ಟಿ ಬಾರಿಗೆ
೧೧೩.	ಅಕ್ಕಮ್ಮ ಎಚ್. ಹೀರಪುರ	೨೬	-	ಪುಟ್ಟಿ ಬಾರಿಗೆ
೧೧೪.	ವನ್ನಮ್ಮ ಎಚ್. ಹೀರಪುರ	೩೬	-	ಬಾರಿಗೆ
೧೧೫.	ಲಲಿತ ಎಚ್. ಹೀರಪುರ	೨೫	-	ಬಾರಿಗೆ
೧೧೬.	ನೀಲಮ್ಮ ಕೊಳೂರು	೨೮	೯ನೇ ತರಗತಿ	ಬಾರಿಗೆ
೧೧೬.	ಸುಂಕಮ್ಮ ಕೊಳೂರು	೨೨	೯ನೇ ತರಗತಿ	
೧೧೮.	ನಾಗರತ್ನ ಕೊಳೂರು	೩೦	೧೦ನೇ ತರಗತಿ	
೧೧೯.	ನಾಗಮ್ಮ ಕೊಳೂರು	೪೬	-	ಬಾರಿಗೆ
೧೨೦.	ಮುತ್ತಮ್ಮ ಕೊಳೂರು	೨೩	-	ಪುಟ್ಟಿ
೧೨೧.	ಮರಿಯಮ್ಮ ಕೊಳೂರು	೨೪	೩ನೇ ತರಗತಿ	ಪುಟ್ಟಿ
೧೨೨.	ಜಡೆಯಮ್ಮ ಕೊಳೂರು	೩೦	-	ಪುಟ್ಟಿ, ಬಾರಿಗೆ
೧೨೩.	ಸರಸ್ವತಿ ಸೋಮಸಂದ್ರ	೩೫	-	ಪುಟ್ಟಿ, ಬಾರಿಗೆ
೧೨೪.	ದುರಗಮ್ಮ ಸೋಮಸಂದ್ರ	೩೦	-	ಪುಟ್ಟಿ, ಬಾರಿಗೆ
೧೨೫.	ಕೆ. ಮಾಧವಿ ಸೋಮಸಂದ್ರ	೨೫	-	ಪುಟ್ಟಿ

ಕ್ರ.ಸಂ.	ಹೆಸರು ಮತ್ತು ವಿಳಾಸ	ವಯಸ್ಸು	ಶೈಕ್ಷಣಿಕ ಮಟ್ಟ	ವೃತ್ತಿ
೧೨೭.	ಮೇಘನ ಸೋಮಸಂಧ್ರ	೩೫	೧೨ನೇ ತರಗತಿ	ಪುಟ್ಟಿ. ಬಾರಿಗೆ
೧೨೭.	ರೇಣುಕ ಸೋಮಸಂಧ್ರ	೨೦	-	ಪುಟ್ಟಿ. ಬಾರಿಗೆ
೧೨೮.	ಗಾಳೆಮ್ಮ ಸೋಮಸಂಧ್ರ	೨೩	-	ಪುಟ್ಟಿ. ಬಾರಿಗೆ
೧೨೯.	ಹೇಮಗಿರಿಯಮ್ಮ ಬಳ್ಳಾರಿ	೫೫	-	A.S.I – ಮನ್ವೇಂಟ್ ಅಡೆಂಟರ್
೧೩೦.	ನಾಗಲತಾ ಬಳ್ಳಾರಿ	೩೯	೯ನೇ ತರಗತಿ	ಹೊಲಿಗೆ
೧೩೧.	ಹುಲಿಗೆಮ್ಮ ಬಳ್ಳಾರಿ	೩೮	೧೦ನೇ ತರಗತಿ	ಹೊಲಿಗೆ
೧೩೨.	ಲತಾ ಬಳ್ಳಾರಿ	೪೦	೯ನೇ ತರಗತಿ	ಹೊಲಿಗೆ
೧೩೩.	ಗಂಗಮ್ಮ ಬಳ್ಳಾರಿ	೫೨	-	ಕಣಿ ಹೇಳುವುದು
೧೩೪.	ಶಂಕರಮ್ಮ ಕಂಪ್ಲಿ	೫೫	-	ಕಣಿ ಹೇಳುವುದು
೧೩೫.	ದುರಗಮ್ಮ ಕಮಲಾಪುರ	೪೮	-	ಕಣಿ ಹೇಳುವುದು
೧೩೬.	ಕೋಲಾರಮ್ಮ ಸಂಡೂರು	೫೭	-	ಕಣಿ ಹೇಳುವುದು
೧೩೭.	ಈರಮ್ಮ ಸಂಡೂರು	೬೨	-	ಕಣಿ ಹೇಳುವುದು
೧೩೮.	ಸುಂಕಮ್ಮ ಬಳ್ಳಾರಿ	೫೬	-	ಕಣಿ ಹೇಳುವುದು
೧೩೯.	ಲಕ್ಷ್ಮಮ್ಮ ಉಜ್ಜನಿ	೬೧	-	ಕೂಲಿ.
೧೪೦.	ಹುಲಿಗೆಮ್ಮ ಕೊಟ್ಟೂರು	೬೮	-	ಕಸಬಾರಿಕೆ
೧೪೧.	ರಾಧಮ್ಮ ಕಮಲಾಪುರ (HPC)	೨೮	-	-

ಛಾಯಾಚಿತ್ರಗಳು



ತೊಟ್ಟಿಲು ಶಾಸ್ತ್ರ



ಜವಳ ಶಾಸ್ತ್ರ



ಬ್ಯಾಂಡ್ ಬಾರಿಸುತ್ತಿರುವ ಕೊರವರು



ಬಾಲ್ಯ ವಿವಾಹ ಪದ್ಧತಿ



ವಿವಾಹ ಪದ್ಧತಿ



ಋತುಮತಿ ಶಾಸ್ತ್ರ



ನಿಶ್ಚಿತಾರ್ಥ ಶಾಸ್ತ್ರ



ಸೆಟ್ ಒಡೆಯುವ ಶಾಸ್ತ್ರ



ಹಾಲಗಂಬಕ್ಕೆ ಪೂಜೆ ಸಲ್ಲಿಸುತ್ತಿರುವ ಶಾಸ್ತ್ರ



ಮದುಮಕ್ಕಳಿಗೆ ನೀರೆರೆಯುವ ಶಾಸ್ತ್ರ



ಬಳೆ ತೊಡಿಸುವ ಶಾಸ್ತ್ರ



ಆಧುನಿಕ ವಿವಾಹ ಪದ್ಧತಿ



ಹುಲಿಗೆಮ್ಮ ದೇವಾಲಯ, ಕುರುಗೋಡು



ದೀಡ್ ನಮಸ್ಕಾರ ಹಾಕುತ್ತಿರುವ ಮಹಿಳೆ



ದೀಡ್ ನಮಸ್ಕಾರದ ನಂತರ ಮುಯ್ಯಿ ಮಾಡುತ್ತಿರುವ ಪದ್ಧತಿ



ದಾಸಯ್ಯ (ತಿರುಪತಿಗೆ ಹೋಗಿ ಬಂದ ಮೇಲೆ ದೇವರನ್ನು ಹಿಂದಕ್ಕೆ ಕಳಿರುವ ಪದ್ಧತಿ)



ಹನುಮಂತನಿಗೆ (ಎಲೆ) ಪೂಜೆ ಶಾಸ್ತ್ರ



ಗಣಪತಿ ಹಬ್ಬ



ಕ್ರಿಸ್‌ಮಸ್ ಆಚರಿಸುವ ಪದ್ಧತಿ




ದೇವರಿಗೆ ಎಡೆ ಬಿಡುತ್ತಿರುವ ಜೋಗಮ್ಮ ನವರು



ಬಾಲ್ಯ ವಿವಾಹ



ಕೊರವಂಜ ಮಹಿಳೆ



ಕಸಬರಿಗೆ ತಯಾರಿಸಲು ಬೇಕಾದ ಈಚಲ ಗರಿಗಳು



ಕಸಬರಿಗೆ ತಯಾರಿಸುತ್ತಿರುವ ಮಹಿಳೆ



ಹಣ್ಣು ವ್ಯಾಪಾರ ಮಾಡುತ್ತಿರುವ ಮಹಿಳೆ



ಕಸಬರಿಗೆ ತಯಾರಿಸುತ್ತಿರುವ ಮಹಿಳೆ



ಬುಟ್ಟಿ ಹೆಣೆಯುತ್ತಿರುವ ಮಹಿಳೆ



ಹಾಡು ಹೇಳುತ್ತಿರುವ ಮಹಿಳೆಯರು



ಹಚ್ಚೆ



ವೃದ್ಧ-ವೃದ್ಧೆ



ಮಾನ್ಯುಮೆಂಟ್ ಅಟೆಂಡರ್ (A.S.I.)